ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ-೧೭



ಸಂಪಾದಕರು

ಡಾ. ಆರ್. ಗೋಪಾಲ್
ಟಿ.ಎಸ್. ಗಂಗಾಧರ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು
೨೦೧೩

ವಿಜಯನಗರ ಅಧ್ಯಯನ

ಸಂಪುಟ – 17

ಸಂಪಾದಕರು

ಡಾ|| ಆರ್. ಗೋಪಾಲ್
ಶ್ರೀ ಟಿ. ಎಸ್. ಗಂಗಾಧರ್

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ವಸ್ತುಪ್ರದರ್ಶನ ಆವರಣ, ಮೈಸೂರು – ೫೭೦ ೦೧೦
೨೦೧೩

ವಿಜಯನಗರ ಅಧ್ಯಯನ

ಸಂಪುಟ - ೧೭

ಪ್ರಕಾಶಕರು

ಆಯಕ್ತರು

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ವಸ್ತುಪ್ರದರ್ಶನ ಆವರಣ, ಮೈಸೂರು - ೫೭೦ ೦೧೦
ದೂರವಾಣಿ : ೦೮೨೧- ೨೪೨೪೬೭೩ / ೨೪೨೪೬೭೪

ಮೊದಲ ಮುದ್ರಣ : ೨೦೧೩

ಪುಟಗಳು : viii+೨೪೪

ಪ್ರತಿಗಳು : ೫೦೦

ಬೆಲೆ : ರೂ. ೨೦೦-೦೦

ಮುಖಪುಟ ವಿನ್ಯಾಸ: ಶ್ರೀ ಮುರಳೀಧರ್, ಸುಹಾಸ್ ಗ್ರಾಫಿಕ್ಸ್, ಬೆಂಗಳೂರು
ಅಕ್ಷರ ಜೋಡಣೆ: ಹೇಮಲತ, ಗೋಕುಲಂ, ಮೈಸೂರು
ಮುದ್ರಣ: ಸುಹಾಸ್ ಗ್ರಾಫಿಕ್ಸ್, ಬೆಂಗಳೂರು

VIJAYANAGARA ADHYAYANA
Vol - 17

Publisher
Commissioner
Department of Archaeology, Museums and Heritage
Exhibition Complex, Mysore - 570 010
Ph: 0821-2424673, 2424674

First Edition : 2013

Copies : 500
Pages : viii+244

Price : ₹ 200-00

Cover Page : Sri Muralidhar, Suhas Graphics, Bangalore
DTP : Hemalatha, Gokulam, Mysore
Printed at : Suhas Graphics, Bangalore

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ, ಕನ್ನಡ ಮತ್ತು
ಸಂಸ್ಕೃತಿ ಸಚಿವರು ಹಾಗೂ ಬಾಗಲಕೋಟೆ
ಜಿಲ್ಲಾ ಉಸ್ತುವಾರಿ ಸಚಿವರು

ಕರ್ನಾಟಕ ಸರ್ಕಾರ

ದೂರವಾಣಿ ಸಂಖ್ಯೆ : 22033167
ದೂರವಾಣಿ ಫ್ಯಾಕ್ಸ್ : 22253578
ಕೊಠಡಿ ಸಂಖ್ಯೆ : 339, 3ನೇ ಮಹಡಿ
ವಿಧಾನ ಸೌಧ, ಬೆಂಗಳೂರು – 560 001

ದಿನಾಂಕ : ೧೯-೧-೨೦೧೩

ಸಂದೇಶ

ವಿಜಯನಗರ ಸಾಮ್ರಾಜ್ಯ ಭಾರತೀಯ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಘಟ್ಟವಾಗಿ, ಇತಿಹಾಸ ಆಸಕ್ತರ ಗಮನ ಸೆಳೆದ ಹಾಗೂ ಬಹುಮುಖಿ ಅಧ್ಯಯನಕ್ಕೆ ಈಡಾದ ಪ್ರಮುಖ ಸಾಮ್ರಾಜ್ಯವಾಗಿದೆ. ಈ ಸಾಮ್ರಾಜ್ಯದ ಬಗೆಗೆ ನಡೆಯುತ್ತಿರುವ ಹಾಗೂ ನಡೆದಿರುವಷ್ಟು ಅಧ್ಯಯನಗಳು ಮತ್ತಾವ ಕರ್ನಾಟಕ ಸಾಮ್ರಾಜ್ಯದ ಬಗ್ಗೆ ನಡೆದಿಲ್ಲ. ಅಲ್ಲದೆ, ಪ್ರಕಟಗೊಂಡಿರುವಷ್ಟು ಹಾಗೂ ಪ್ರಕಟನೆಗೊಳ್ಳುತ್ತಿರುವಷ್ಟು ಸಂಶೋಧನಾ ಫಲಿತಗಳು ಮತ್ತು ಲೇಖನಗಳು ಮತ್ತಾವ ಭಾರತೀಯ ಸಾಮ್ರಾಜ್ಯದ ಬಗೆಗೂ ನಡೆಯುತ್ತಿಲ್ಲವೆನ್ನುವುದು ವಿದ್ವಾಂಸರ ಭಾವನೆ.

ನಮ್ಮ ಘನ ಸರ್ಕಾರ ಸಹ ಇಂತಹ ಸಂಶೋಧನಾ ಕಾರ್ಯಕ್ರಮಕ್ಕೆ ಒತ್ತು ನೀಡುತ್ತಾ ಇಂತಹ ಕಾರ್ಯ ನಿರಂತರವಾಗಿ ಮುಂದುವರಿಯುವಂತೆ ಪ್ರೋತ್ಸಾಹವನ್ನು ನೀಡುತ್ತಲೇ ಬಂದಿದೆ. ಸಂಶೋಧನಾ ಸಾಹಿತ್ಯಕ್ಕೆ ಪ್ರೋತ್ಸಾಹ ಕೊಡುವುದರ ಜೊತೆಗೆ ಸಾಮ್ರಾಜ್ಯದ ಜನ ಸಂಸ್ಕೃತಿಯನ್ನು ಜನರಲ್ಲಿ ಪ್ರಚಾರಮಾಡಲು ಹಂಪಿ ಉತ್ಸವವನ್ನು ಆಚರಿಸಿಕೊಂಡು ಬಂದಿದ್ದೇವೆ. ಅದರ ಆಯೋಜನೆಯ ಜೊತೆಯಲ್ಲಿ ಪ್ರತಿ ವರ್ಷ ಪ್ರಾಚ್ಯವಸ್ತು, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ವಿಜಯನಗರ ಅಧ್ಯಯನ ವಿಚಾರ ಸಂಕಿರಣವನ್ನು ಆಯೋಜಿಸಿ ಅವುಗಳ ಅಧ್ಯಯನವನ್ನು ಪ್ರಕಟಿಸುತ್ತಾ ಬಂದಿದೆ.

ಈ ಮಾಲಿಕೆಯ 17ನೆಯ ಸಂಪುಟ ಈ ಹಿಂದಿನ ಸಂಪುಟಗಳಷ್ಟೇ ವಿಷಯಸಂವೃದ್ಧವಾಗಿ ಮೂಡಿಬಂದಿದೆ. ಹಲವು ಉತ್ತಮ ವಿಷಯಗಳ ಗಣಿಯಾಗಿರುವ ಈ ಗ್ರಂಥವನ್ನು ಕರ್ನಾಟಕದ ಓದುಗರು ತೆರೆದಮನಸ್ಸಿನಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಗೋವಿಂದ ಎಂ. ಕಾರಜೋಳ)

ಮುನ್ನುಡಿ

ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಅನೇಕ ವರ್ಷಗಳಿಂದ 'ವಿಜಯನಗರ ಅಧ್ಯಯನ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರತಿವರ್ಷವೂ ವಿಚಾರ ಸಂಕಿರಣವನ್ನು ಏರ್ಪಡಿಸುತ್ತಿರುವುದು ಸ್ತುತ್ಯರ್ಹ ವಿಷಯವೇ ಸರಿ. ವಿಜಯನಗರ ಸಾಮ್ರಾಜ್ಯದ ಸಂಸ್ಕೃತಿಯ ಆಳ, ವಿಸ್ತಾರ ಮತ್ತು ವೈವಿಧ್ಯತೆಗಳು ಅಗಾಧವಾದುವು. ಅವುಗಳನ್ನು ಒಂದು ವಿಚಾರಸಂಕಿರಣದಲ್ಲಿ ಮುಗಿಸುವಂತಹುದಲ್ಲ. ಈ ವಿಷಯದಲ್ಲಿ ಸಂಶೋಧನೆ ನಡೆಸುತ್ತಿರುವ ವಿದ್ವಾಂಸರ ಸಂಖ್ಯೆಯೂ ಹೆಚ್ಚಾಗಿದೆ. ಪ್ರತಿ ವರ್ಷವೂ ಕ್ಷೇತ್ರ ಕಾರ್ಯದಿಂದಾಗಿ ಹೊಸ ಶಾಸನಗಳು, ನಾಣ್ಯಗಳು, ಶಿಲ್ಪಗಳು ಮುಂತಾದವು ಪತ್ತೆಯಾಗುತ್ತಲಿವೆ. ಈ ಸಂಶೋಧನೆಗಳು ರಾಜಕೀಯ ಇತಿಹಾಸದ ನಾನಾ ಸಮಸ್ಯೆಗಳ ಮೇಲೂ ಹೊಸ ಬೆಳಕು ಬೀರುತ್ತಿವೆ. ಇಂತಹ ಹೊಸ ವಿಷಯಗಳನ್ನು ವಿದ್ವಾಂಸರ ಹಾಗೂ ಆಸಕ್ತ ಓದುಗರ ಗಮನಕ್ಕೆ ತರುವುದನ್ನು ಈ ವಿಜಯನಗರ ವಿಚಾರ ಸಂಕಿರಣಗಳು ಸಮರ್ಥವಾಗಿ ಮಾಡುತ್ತಿವೆ.

ಈ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಲೇಖನಗಳನ್ನು ಸಂಗ್ರಹಿಸಿ, ಸಂಪಾದಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿರುವುದು ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಇಲಾಖೆಯ ಮತ್ತೊಂದು ವೈಶಿಷ್ಟ್ಯ ಹಾಗೂ ಹೆಚ್ಚಳ. ವಾಸ್ತವವಾಗಿ ಕರ್ನಾಟಕದ ಇತಿಹಾಸ ಮತ್ತು ಪುರಾತತ್ವ ವಿದ್ವಾಂಸರು ಈ ಪುಸ್ತಕದ ಪ್ರಕಟಣೆಯನ್ನು ಆಸಕ್ತಿಯಿಂದ ನಿರೀಕ್ಷಿಸುತ್ತಿರುತ್ತಾರೆ. ಇದೊಂದು ಗಮನಾರ್ಹ ಅಂಶ. ಈ ಮಾಲಿಕೆಯಲ್ಲಿ ಈಗ ಪ್ರಕಟವಾಗುತ್ತಿರುವ ಹದಿನೇಳನೆಯ ಸಂಪುಟವನ್ನು ಈ ಇಲಾಖೆಯ ನಿರ್ದೇಶಕರಾದ ಡಾ. ಆರ್. ಗೋಪಾಲ್ ಮತ್ತು ಅವರ ಸಹೋದ್ಯೋಗಿ ಶ್ರೀ ಟಿ. ಎಸ್. ಗಂಗಾಧರ್ ಸಂಪಾದಿಸಿದ್ದಾರೆ. ವಿಜಯನಗರ ಸಂಸ್ಕೃತಿ ಪ್ರಿಯರ ಪರವಾಗಿ ಈ ಇಬ್ಬರು ಅಧಿಕಾರಿಗಳನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ,

ಈಗ ಪ್ರಸ್ತುತ ಹದಿನೇಳನೆಯ ಸಂಪುಟವನ್ನು ಗಮನಿಸಬಹುದು. ಇದರಲ್ಲಿ ಶಾಸನಗಳಿಗೆ ನೇರವಾಗಿ ಸಂಬಂಧಿಸಿದ ಎಂಟು ಲೇಖನಗಳಿವೆ. ಕಕ್ಕೆ ಹಳ್ಳಿಯ ಶಾಸನ, ಹಾಲ್ಕುರಿಕೆಯ ಶಾಸನ, ಕೊಪ್ಪಳ ಜಿಲ್ಲೆಯ ಶಾಸನಗಳು, ಅರಸೀಕೆರೆಯ ಶಾಸನಗಳು, ಹೊಸನಗರದ ಶಾಸನಗಳು, ವಿಜಯನಗರ ಶಾಸನಾಧ್ಯಯನಕ್ಕೆ ಉತ್ತಮ ಕೊಡುಗೆಗಳಾಗಿವೆ. ಕೃಷ್ಣದೇವರಾಯನು ತಿರುಪತಿಗೆ ಅಮೂಲ್ಯ ಕೊಡುಗೆಗಳನ್ನು ನೀಡಿರುವುದನ್ನು ಶಾಸನಗಳ ಮೂಲಕ ಇನ್ನೊಂದು ಲೇಖನದಲ್ಲಿ ಪರಿಶೀಲಿಸಲಾಗಿದೆ. ಇನ್ನೊಂದು ಆಸಕ್ತಿಕರವಾದ ಲೇಖನವೆಂದರೆ ಹಂಪಿ ಪರಿಸರದಲ್ಲಿರುವ ಮತ್ತಷ್ಟು ಕೆರೆಗಳನ್ನು ನಮ್ಮ ಗಮನಕ್ಕೆ ತಂದಿರುವ ಲೇಖನ. ಕೃಷ್ಣದೇವರಾಯನ ಆಳ್ವಿಕೆಯ ಕಾಲ ಮತ್ತು ಜೀವಿತಾವಧಿಯ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಅದಕ್ಕೆ ಶಾಸನ ನೀಡುವ ವಿವಿಧ ಮಾಹಿತಿಗಳೇ ಕಾರಣ. ಈ ಸಮಸ್ಯೆಯನ್ನು ಪುನಃ ಪರಿಶೀಲಿಸಿ ಇದನ್ನು ನಮ್ಮ ಗಮನಕ್ಕೆ ತಂದಿರುವ ಲೇಖನ ಇಲ್ಲಿದೆ.

ವಿಜಯನಗರದ ರಾಮರಾಯನನ್ನು ಕೊಂದವರು ಯಾರು ಎನ್ನುವ ವಿಷಯ ಸುಮಾರು ೫೦ ವರ್ಷಗಳಿಂದಲೂ ಚಾಲ್ತಿಯಲ್ಲಿರುವ ಪ್ರಶ್ನೆ. ಇಂದಿಗೂ ಈ ಪ್ರಶ್ನೆ ಜೀವಂತವಾಗಿದೆ ಎನ್ನುವುದು ಇಲ್ಲಿ ಕಾಣಬರುವ ಲೇಖನದಿಂದ ಗೊತ್ತಾಗುತ್ತದೆ. ಹೊಸ ಆಕರಗಳ ಹಾಗೂ ಹೊಸ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ಇತಿಹಾಸವನ್ನು ಆಗಾಗ್ಗೆ ಪುನಾರಚಿಸಬೇಕಾಗುತ್ತದೆ ಎನ್ನುವ ಸಿದ್ಧಾಂತ ನಿಜವೆನಿಸುತ್ತದೆ. ತಿರುಮಲರಾಯ ಮತ್ತು ರಾಜ ಒಡೆಯರ ಸಂಬಂಧವೂ ಪುನರ್ಪರಿಶೀಲನೆಗೆ ಉಪಯುಕ್ತ ವಿಷಯ.

ವಿಜಯನಗರ ಕಾಲದ ನೀರಾವರಿಯನ್ನು ಕುರಿತಾದ ಕೆಲವು ಲೇಖನಗಳು ಇಲ್ಲಿರುವುದು ಗಮನಿಸಬೇಕಾದ ಸಂಗತಿ. ಇಲ್ಲಿ ಕೆರೆಗಳ ಪಾತ್ರ ಮತ್ತು ಮಹತ್ವವನ್ನು ಗಮನಿಸಲಾಗಿದೆ. ವಾಸ್ತು ಶಿಲ್ಪಗಳನ್ನು ಕುರಿತಾದ ಲೇಖನಗಳೂ

ಇದರಲ್ಲಿ ಅಡಕವಾಗಿವೆ. ಮೂಡಬಿದರೆಯ ಸಾವಿರ ಕಂಬದ ಬಸದಿ, ವಿರೂಪಾಕ್ಷ ದೇವಾಲಯದ ರಾಯಗೋಪುರ, ನಾಗಲಾಪುರ ಹೊಸಪೇಟೆ, ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಬಾವಿಗಳು ಮುಂತಾದ ಲೇಖನಗಳಲ್ಲಿ ಹೊಸ ವಿಶ್ಲೇಷಣೆಯನ್ನು ಗಮನಿಸಬಹುದು. ಹಂಪಿ ಪ್ರದೇಶದ ಲೋಹಶಾಸ್ತ್ರ ಕಲೆಯನ್ನು ಕುರಿತಾದ ಲೇಖನ ವಿಶೇಷ ಮಾಹಿತಿಗಳಿಂದ ಕೂಡಿದ್ದು, ಇನ್ನೂ ಹೆಚ್ಚಿನ ಕ್ಷೇತ್ರ ಕಾರ್ಯ ಮಾಡುವವರಿಗೆ ಉಪಯುಕ್ತವೆನಿಸುತ್ತದೆ. ಆನುಷಂಗಿಕವಾಗಿ ನಮ್ಮ ಶಾಸನಗಳಲ್ಲಿ ಪರಿಸರ ಪ್ರಜ್ಞೆಯ ಬಗೆ ಮಾಹಿತಿ ದೊರಕುತ್ತದೆ ಎಂಬುದು ಪ್ರಾಚೀನ ಇತಿಹಾಸಕಾರರಿಗೆ ತಿಳಿದಿರುವ ವಿಷಯವೇ ಆಗಿದೆ. ಇದನ್ನು ಹಂಪಿ ಪರಿಸರದಲ್ಲಿ ಯಾವ ರೀತಿ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ ಎಂದು ಇನ್ನೊಂದು ಲೇಖನ ತೋರಿಸುತ್ತದೆ. ಹಂಪಿ ವಿಠಲ ದೇವಾಲಯದಲ್ಲಿ ಕಾಣಬರುವ ಅಳತೆ ಪಟ್ಟಿಯನ್ನು ನಮ್ಮ ಗಮನಕ್ಕೆ ತಂದಿರುವುದು ಮೆಚ್ಚಿಗೆಯ ವಿಷಯವೇ ಸರಿ. ಡಾ. ಪಿ. ಬಿ. ದೇಸಾಯಿಯವರು ನಮ್ಮ ಹಿಂದಿನ ತಲೆಮಾರಿನ ಇತಿಹಾಸ ವಿದ್ವಾಂಸರಲ್ಲಿ ಪ್ರಮುಖರು. ಅವರು ವಿಜಯನಗರವನ್ನು ಕುರಿತು ಸಾಕಷ್ಟು ಬರೆದಿದ್ದಾರೆ. ಅವೆಲ್ಲವನ್ನೂ ಇಲ್ಲಿ ಒಂದು ಲೇಖನದಲ್ಲಿ ಅವರ ಕೊಡುಗೆಯಾಗಿ ಗಮನಿಸಲಾಗಿದೆ.

ಹೀಗೆ ಈ ಸಂಪುಟದಲ್ಲಿ ವೈವಿಧ್ಯಮಯವಾದ ಆದರೆ ವಿಜಯನಗರಕ್ಕೆ ಸಂಬಂಧಿಸಿದ ವಿಷಯಗಳನ್ನು ಕಲೆಹಾಕಿ ವಿಷಯಗಳಿಗನುಗುಣವಾಗಿ ಸಂಪಾದಿಸಲಾಗಿದೆ. ಆದುದರಿಂದಲೇ ಈ ಸಂಕಲನಕ್ಕೆ ಮಹತ್ವ. ಇಂತಹ ಉತ್ತಮ ಲೇಖನಗಳನ್ನು ಬರೆದ ವಿದ್ವಾಂಸರನ್ನೂ ನಾನು ಅಭಿನಂದಿಸುತ್ತೇನೆ. ಕೊನೆಯದಾಗಿ ಕ್ರಿಯಾಶೀಲ ವ್ಯಕ್ತಿತ್ವದ ಡಾ. ಆರ್. ಗೋಪಾಲ್ ಮತ್ತು ಶ್ರೀ ಟಿ. ಎಸ್. ಗಂಗಾಧರ್ ಅವರನ್ನೂ ನಾನು ಮತ್ತೊಮ್ಮೆ ಅಭಿನಂದಿಸುತ್ತೇನೆ. ಈ ಸಂಪುಟವನ್ನು ವಿಜಯನಗರದ ಅಧ್ಯಯನ ಮಾಡುವ ವಿದ್ಯಾರ್ಥಿಗಳು, ವಿದ್ವಾಂಸರು ಮತ್ತು ಜನಸಾಮಾನ್ಯರೂ ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾನು ಆಶಿಸುತ್ತೇನೆ.

೫-೩-೨೦೧೩

– ಡಾ. ಎ. ವಿ. ನರಸಿಂಹಮೂರ್ತಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ವಿಭಾಗದ ನಿವೃತ್ತ ಪ್ರಾಧ್ಯಾಪಕ ಮತ್ತು ಅಧ್ಯಕ್ಷ
ಮಾನಸಗಂಗೋತ್ರಿ, ಮೈಸೂರು

ಪ್ರಸ್ತಾವನೆ

ವಿಜಯನಗರ ಅಧ್ಯಯನ ಇಲಾಖೆಯು ಪ್ರಕಟಿಸುತ್ತಿರುವ ವಿಜಯನಗರ ಸಾಮ್ರಾಜ್ಯದ ಬಗೆಗಿನ ಅಧ್ಯಯನಗಳ ಸಂಶೋಧನಾ ಸಾರಾಂಶಗಳನ್ನು ಒಳಗೊಂಡ ಪ್ರತಿವರ್ಷದ ಅಚ್ಚರಿ ಎಂದೂ ಕರೆಯಬಹುದು.

ವಿಜಯನಗರ ಹೆಸರು ಸಾಮ್ರಾಜ್ಯದ ರಾಜಧಾನಿಯ ಹೆಸರಾಗಿದ್ದರೂ ಸಾಮ್ರಾಜ್ಯದ ಬಗೆಗಿನ ಅಧ್ಯಯನದ ಪ್ರಾರಂಭದ ದಿನಗಳಲ್ಲಿ ಇದು ಸಾಮ್ರಾಜ್ಯದ ಹೆಸರಿನೊಂದಿಗೆ ತಳುಕುಹಾಕಿಕೊಂಡ ಕಾರಣದಿಂದಾಗಿ ಇದುವರೆವಿಗೂ ಅದನ್ನೇ ಸಾಮ್ರಾಜ್ಯದ ನಿಜನಾಮಧೇಯವೆಂದು ಭಾವಿಸಿ ಬಳಸುವಷ್ಟರ ಮಟ್ಟಿಗೆ ಎಲ್ಲರಿಗೂ ಪರಿಚಿತವಾಗಿದೆ. ವಿಜಯನಗರ ಸಾಮ್ರಾಜ್ಯದ ಶಾಸನಗಳನ್ನು ಸಂಪಾದಿಸಿರುವ ಮಾನ್ಯ ಶ್ರೀನಿವಾಸರಿತ್ತಿಯವರು, ವಿಜಯನಗರ ಸಾಮ್ರಾಜ್ಯದ ಹೆಸರಿನ ಬಗೆಗೆ ಬರೆಯುತ್ತಾ, *"ಈ ಅರಸರು ತಮ್ಮ ಸಾಮ್ರಾಜ್ಯವನ್ನು 'ಕರ್ನಾಟಕ ಸಾಮ್ರಾಜ್ಯವೆಂದು ಕರೆದರು. ಎರಡನೆ ಹರಿಹರನು ಕರ್ನಾಟಕ ವಿದ್ಯಾವಿಲಾಸ ಎಂಬ ಬಿರುದನ್ನು ಹೊಂದಿದ್ದನು. ಈ ಸಾಮ್ರಾಜ್ಯವನ್ನು ಚಾರು ಕರ್ನಾಟಕ ದೇಶವೆಂದು ಕರೆಯಲಾಗಿದೆ. ರಾಮರಾಯನು ಪ್ರಾಚ್ಯ ಕರ್ನಾಟಕ ರಾಜ್ಯ ಸ್ಥಾಪನಾಚಾರ್ಯ ಎಂದು ಕರೆಯಲ್ಪಟ್ಟಿದ್ದಾನೆ. ಕೃಷ್ಣರಾಯನ ಶಾಸನ ಸಹ ಆತನನ್ನು ಕರ್ನಾಟ ವಿಜಯನಗರಾದೀಶ್ವರ ಎಂದು ಬಣ್ಣಿಸಿದೆ' ... ಹಾಗೆ ನೋಡಿದರೆ ವಿಜಯನಗರವು 'ಸಾಮ್ರಾಜ್ಯ' ಎಂಬ ಅರ್ಥದಲ್ಲಿ ಬಳಸಲ್ಪಟ್ಟಿಲ್ಲ. ಅದು ಎಲ್ಲಾ ಶಾಸನಗಳಲ್ಲಿ ಮತ್ತು ಸಾಹಿತ್ಯಗಳಲ್ಲಿ ರಾಜಧಾನಿ ಎಂದು ಮಾತ್ರ ಬಳಸಿದೆ. ಹಾಗಾಗಿ ವಿಜಯನಗರ ಬದಲಿಗೆ ಕರ್ನಾಟಕ ಸಾಮ್ರಾಜ್ಯ ಎಂಬ ಹೆಸರನ್ನು ಬಳಸುವುದೇ ಸೂಕ್ತ"* ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ.

ವಿಶಾಲ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಕರ್ನಾಟಕ ಸಾಮ್ರಾಜ್ಯದ ಹೆಸರಿನ ಬಳಕೆಯ ಬಗೆಗೆ ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕಿದೆ. ಆ ಕಾರ್ಯ ಎಲ್ಲರಿಂದ ನೆರವೇರಲಿ ಎಂದು ಆಶಿಸುತ್ತೇನೆ.

ವಿಜಯನಗರ ಅಧ್ಯಯನ ಮಾಲಿಕೆಯ 17ನೆಯ ವಿಚಾರ ಸಂಕಿರಣವನ್ನು 2012ನೇ ಸಾಲಿನಲ್ಲಿ ಕರ್ನಾಟಕದಲ್ಲಿ ಕಂಡುಬಂದ ಮಾನ್‌ಸೂನ್ ವೈಫಲ್ಯದ ಹಿನ್ನೆಲೆಯಲ್ಲಿ ಆಯೋಜಿಸುವಲ್ಲಿ ಹಲವಾರು ಆಡಳಿತಾತ್ಮಕ ತೊಂದರೆಗಳು ಎದುರಾದವು. ಅದರಿಂದಾಗಿ ಮಾಲಿಕೆಯನ್ನು ಮುಂದುವರಿಸುವ ಉದ್ದೇಶದಿಂದ ವಿಚಾರ ಸಂಕಿರಣವನ್ನು ಆಯೋಜಿಸದಿದ್ದರೂ, ವಿದ್ವಾಂಸರುಗಳಿಂದ ಲೇಖನಗಳನ್ನು ಬರಮಾಡಿಕೊಂಡು ಅವುಗಳನ್ನು ಸಂಪಾದಿಸಿ, ಮಾಲಿಕೆಯನ್ನು ಮುಂದುವರಿಸಿಕೊಂಡು ಹೋಗುವ ಪ್ರಯತ್ನ ಮಾಡಲಾಯಿತು. ನಮ್ಮ ಈ ಪ್ರಯತ್ನಕ್ಕೆ ಎಂದಿನಂತೆ ವಿದ್ವಾಂಸರು ಉತ್ಸಾಹದಿಂದ ಪ್ರತಿಕ್ರಿಯಿಸಿ, ಸಂಪಾದನ ಕಾರ್ಯದ ಭಾರವನ್ನು ಹೆಚ್ಚಿಸಿದ್ದಾರೆ.

ಈ ಹಿಂದಿನ ವರ್ಷಗಳಲ್ಲಿ ಸಂಪುಟವು ಮೂಡಿಬಂದಿರುವಂತೆ ಈ ಸಾಲಿನಲ್ಲಿಯೂ ಸಂಪುಟವು, ವಿಷಯ ವ್ಯಾಪ್ತಿಯಲ್ಲಿ ವೈವಿಧ್ಯತೆಯಲ್ಲಿ, ಉತ್ತಮವಾಗಿ ರೂಪುಗೊಂಡಿದೆ. ವಿದ್ವಾಂಸರೆಲ್ಲರ ಸಂಶೋಧನೆಯ ಮತ್ತು ಸಹಕಾರದಿಂದಾಗಿ ವಿಜಯನಗರ ಅಧ್ಯಯನ 17ನೆ ಸಂಪುಟವು ಅತ್ಯಂತ ಉತ್ತಮವಾಗಿ ಮೂಡಿಬಂದಿದೆ.

ಪ್ರಸ್ತುತ ಸಂಪುಟವು ಹೊಸ ಶಾಸನಗಳು, ಸ್ಮಾರಕಗಳ ವಿಶ್ಲೇಷಣೆಗಳು, ರಾಜಕೀಯ ಇತಿಹಾಸ, ಕರ್ನಾಟಕ ಸಾಮ್ರಾಜ್ಯದ ಚಕ್ರವರ್ತಿಗಳು ಮತ್ತು ಇತರ ಆಡಳಿತ ಮನೆತನಗಳ ನಡುವಿನ ಸಂಬಂಧಗಳ ವಿಶ್ಲೇಷಣೆ ಇತ್ಯಾದಿ ಆಯಾಮಗಳ ಹೊಸ ಬಗೆಯ ಲೇಖನಗಳನ್ನು ಒಳಗೊಂಡಿದೆ.

ಪ್ರಸ್ತುತ ಸಂಪುಟವನ್ನು ಸಂಪಾದಿಸಿ ಹೊರತರುವಲ್ಲಿ ಇಲಾಖೆಯ ಅಧಿಕಾರಿಗಳು ಹಾಗೂ ಹಲವಾರು ವಿದ್ವಾಂಸರು ಸಹಕರಿಸಿರುತ್ತಾರೆ. ಅವರೆಲ್ಲರ ಸಹಕಾರ ಮತ್ತು ಸಹಾಯದಿಂದಾಗಿ ಈ ಸಂಪುಟ ಅತ್ಯಂತ ಆಕರ್ಶಕವಾಗಿ ರೂಪುಗೊಂಡಿದೆ. ಈ ಗ್ರಂಥವನ್ನು ಹೊರತರಲು ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜ್, ಐ.ಎ.ಎಸ್.ರವರು ಪ್ರೋತ್ಸಾಹಿಸಿರುತ್ತಾರೆ. ಅವರಿಗೆ ಈ ಸಂದರ್ಭದಲ್ಲಿ ಮನಃಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಇಲಾಖೆಯ ಹಿಂದಿನ ಆಯುಕ್ತರಾಗಿದ್ದ ಶ್ರೀಯುತ ಕೆ.ಆರ್. ರಾಮಕೃಷ್ಣ ಹಾಗೂ ಇಂದಿನ ಆಯುಕ್ತರಾಗಿರುವ ಶ್ರೀಯುತ ವಸ್ತ್ರದ್‌ರವರು ಅಪಾರವಾದ ಸಹಕಾರ ನೀಡಿರುತ್ತಾರೆ. ಅವರುಗಳು ನೀಡಿರುವ ಸಹಕಾರಕ್ಕೆ ಮತ್ತು ಮಾರ್ಗದರ್ಶನಕ್ಕೆ ಋಣಿಯಾಗಿದ್ದೇನೆ.

ಗ್ರಂಥ ಸಂಪಾದನೆಯಲ್ಲಿ ಮತ್ತು ಮುದ್ರಣದ ಹಲವು ಹಂತಗಳಲ್ಲಿ ಇಲಾಖೆಯ ಉಪ-ನಿರ್ದೇಶಕರಾದ ಶ್ರೀ ಗಂಗಾಧರ ಅವರು ಸಹಕರಿಸಿರುತ್ತಾರೆ, ಅವರನ್ನು ಈ ಸಂದರ್ಭದಲ್ಲಿ ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತೇನೆ. ಮೈಸೂರಿನ ಮಹಾಜನ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆಯಲ್ಲಿ ಸಹಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಲ.ನ. ಸ್ವಾಮಿಯವರು ಸಹ ಗ್ರಂಥ ಸಂಪಾದನೆ ಮತ್ತು ಕರಡು ತಿದ್ದುವ ಕಾರ್ಯದಲ್ಲಿ ನಮ್ಮೊಂದಿಗೆ ಸಹಕರಿಸಿರುತ್ತಾರೆ. ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭಾಷಾಂತರಕಾರರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಶ್ರೀಯುತ ಎಸ್.ಎನ್. ಶಾರದಾ ಪ್ರಸಾದ್‌ರವರು ಪ್ರಸ್ತುತ ಗ್ರಂಥದ ಕರಡು ತಿದ್ದಿಕೊಟ್ಟಿರುತ್ತಾರೆ. ಇವರುಗಳೆಲ್ಲರಿಗೆ ಇಲಾಖೆಯು ಆಭಾರಿಯಾಗಿದೆ.

ಈ ಗ್ರಂಥದ ಅಕ್ಷರ ಜೋಡಣೆಯಲ್ಲಿ ಡಿ.ಟಿ.ಪಿ.ಯನ್ನು ಕಾಂಪ್ಟೆಕ್ ಕಂಪ್ಯೂಟರ್ ಸಿಸ್ಟಂಮ್ಸ್‌ನ ಶ್ರೀಮತಿ ಹೇಮಲತಾ ಹೆಚ್.ಎಸ್. ಮತ್ತು ಮುದ್ರಣ ಹಾಗೂ ಮುಖಪುಟ ವಿನ್ಯಾಸವನ್ನು ಬೆಂಗಳೂರಿನ ಸುಹಾಸ್ ಗ್ರಾಫಿಕ್ಸ್‌ನ ಶ್ರೀ ಮುರಳೀಧರ್ ಹಾಗೂ ಸಿಬ್ಬಂದಿ ಇವರುಗಳು ಕೈಗೊಂಡು ಅಚ್ಚುಕಟ್ಟಾಗಿ ಮುದ್ರಿಸಿರುತ್ತಾರೆ. ಇವರೆಲ್ಲರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಗ್ರಂಥವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸುತ್ತೇನೆ.

ಡಾ. ಆರ್. ಗೋಪಾಲ್
ಟಿ.ಎಸ್. ಗಂಗಾಧರ

ಪರಿವಿಡಿ

1

ವಿಜಯನಗರ ಆಡಳಿತಕ್ಕೆ ಸಂಬಂಧಿಸಿದ ಕಕ್ಕೆಹಳ್ಳಿಯ ಶಾಸನ

ಡಾ॥ ಪಿ. ಎನ್. ನರಸಿಂಹಮೂರ್ತಿ

ಇತ್ತೀಚೆಗೆ ಉಡುಪಿ ಜಿಲ್ಲೆಯಲ್ಲಿ (ಕಾರ್ಕಳ, ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳಲ್ಲಿ ನಾನು ಕೈಗೊಂಡ ಶೋಧ ಕಾರ್ಯದಲ್ಲಿ ಹಲವು ಹೊಸ ಶಾಸನಗಳು ಪತ್ತೆಯಾದವು. ವಿವಿಧ ಕಾಲಮಾನಕ್ಕೆ ಸೇರುವ ಇವು ಕರಾವಳಿಯ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳ ಮೇಲೆ ತಮ್ಮದೇ ಆದ ಪ್ರಭಾವ ಬೀರಬಲ್ಲ ಮಹತ್ವಪೂರ್ಣ ದಾಖಲೆಗಳಾಗಿವೆ. ಇವುಗಳಲ್ಲಿ ಒಂದನ್ನು ಪ್ರಶಕ್ತ ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ.

ಈ ಶಾಸನ ಉಡುಪಿ ತಾಲ್ಲೂಕಿನ ಬೆಳ್ಳಂಪಳ್ಳಿ ಗ್ರಾಮದ ಕಕ್ಕೆಹಳ್ಳಿ ಉಪಗ್ರಾಮದ ಗದ್ದೆಯೊಂದರಲ್ಲಿ ದೊರೆತಿದ್ದು, ಸ್ಥಳೀಯವಾಗಿ ಈ ಗದ್ದೆಯನ್ನು "ಕಲ್ಲಕಂಡ" ಎಂದು ಕರೆಯುತ್ತಾರೆ. ತುಳುವಿನ "ಕಲ್ಲಕಂಡ" ಕನ್ನಡವಲ್ಲಿ "ಕಲ್ಲಿನ ಗದ್ದೆ" ಆಗುತ್ತದೆ. ಈ ಗದ್ದೆಯಲ್ಲಿ ನೆಟ್ಟಿರುವ ಈ ಶಾಸನಕಲ್ಲೊಂದನ್ನು ಹೊರತುಪಡಿಸಿ ಬೇರಾವ ಕಲ್ಲೂ ಇಲ್ಲ. ಹಾಗಾಗಿ ಈ ಗದ್ದೆಗೆ "ಕಲ್ಲಕಂಡ" ಎಂಬ ಹೆಸರು ಬರಲು ಶಾಸನ ಕಲ್ಲೇ ಕಾರಣವಾಗಿದೆ. ಮಿತ್ರರಾದ ಅಧ್ಯಾಪಕ ಶ್ರೀಧರಭಟ್ ಇವರ ನೆರವಿನಿಂದ ಪತ್ತೆಯಾದ ಶಾಸನ ಇದು.

ಶಾಸನದಲ್ಲಿ ಬರಹ ಬಹಳ ಸ್ಫುಟವಾಗಿದೆ. ಗದ್ದೆಯಲ್ಲಿ ಉಳುಮೆಕಾರ್ಯ ನಿರಂತರವಾಗಿ ನಡೆದಿರುವ ಕಾರಣ ಕೊನೆಯ 2–3 ಸಾಲುಗಳು ಮಾಸಿಹೋಗಿವೆ. ಆದರೆ ಇದರಿಂದ ಮುಖ್ಯ ವಿಷಯಕ್ಕೇನೂ ಧಕ್ಕೆಯಾಗಿಲ್ಲ. ರಾಜಕೀಯ ಸ್ಥಿತ್ಯಂತರದ ಸಮಯದಲ್ಲಿ ಉಂಟಾದ ಧಾರ್ಮಿಕ ಲೋಪವೊಂದರ ಬಗ್ಗೆ ರಾಜ್ಯಾಡಳಿತವು ತನ್ನ ಅಧಿಕಾರಯುತ ಆದರೆ ಅಷ್ಟೇ ನ್ಯಾಯಸಮ್ಮತ ಕ್ರಮ ಕೈಗೊಂಡ ವಿಚಾರವೊಂದನ್ನು ಈ ಶಾಸನ ದಾಖಲಿಸಿದೆ.

ಶಾಸನದ ಲಿಪಿ, ಭಾಷೆ ಮತ್ತು ಕಾಲ

ಶಾಸನದಲ್ಲಿ ಸುಮಾರು 22 ಸಾಲುಗಳ ಬರಹ ಇದೆ. ಪ್ರಸಕ್ತ 19 ಸಾಲುಗಳಲ್ಲಿ ಮಾತ್ರ ಬರಹ ಸ್ಪಷ್ಟವಾಗಿದೆ. ಇದರ ಲಿಪಿ ಮತ್ತು ಭಾಷೆ ಕನ್ನಡ ಗದ್ಯ. ಲಿಪಿ ಮತ್ತು ಭಾಷಾ ಪ್ರಯೋಗಗಳಲ್ಲಿ ದೋಷಗಳೇನೂ ಕಂಡುಬರುವುದಿಲ್ಲ. ಶಕಟರೇಫದ ಬಳಕೆಯೂ ಇಲ್ಲಿ ಒಂದು ಕಡೆ ಮಾತ್ರ ಆಗಿದೆ.

ಶಾಸನದ ಕಾಲ ಶಕವರ್ಷ 1321ನೆ ಪ್ರಮಾಥಿ ಸಂವತ್ಸರ, ಶ್ರಾವಣ, ಶುದ್ಧ 5 ಮಂಗಳವಾರ. ಇದು ಕ್ರಿ.ಶ. 1399 ಜುಲೈ 8ಕ್ಕೆ ಸರಿಹೊಂದುತ್ತದೆ. ಚಕ್ರವರ್ತಿ ಇಮ್ಮಡಿ ಹರಿಹರ ಮಹಾರಾಯನ ಸಮಯೋಚಿತ ಆಡಳಿತ ಕ್ಷಮತೆ ಮತ್ತು ನಿರ್ಧಾರದಿಂದ ಹುಟ್ಟಿಕೊಂಡ ಶಾಸನ ಇದಾಗಿದೆ.

ಮುಖ್ಯ ವಿಷಯ

ಚಕ್ರವರ್ತಿಯ ಆಜ್ಞೆಯ ಮೇರೆಗೆ ಮೆದ್ದೂರ (ಮದ್ದೂರ) ನಾಗರ್ಸನು ಬಾರಕೂರು ರಾಜ್ಯದ ರಾಜ್ಯಪಾಲನಾಗಿ ಆಗ ಕಾರ್ಯನಿರ್ವಹಿಸಿದ್ದ.[1] ಇವನ ಆಳ್ವಿಕೆ ಕಾಲದಲ್ಲಿ ಉಡುಪಿಯಲ್ಲಿ ನಡೆದ ಘಟನೆಯೊಂದು ಚಕ್ರವರ್ತಿಯ ಗಮನ ಸೆಳೆದು ನೇರಕ್ರಮಕ್ಕೆ ಕೂಡಲೆ ಎಡೆಮಾಡಿತು. ಆ ಘಟನೆ ಮತ್ತು ನಂತರದ ನೇರಕ್ರಮ ಎರಡೂ ಈ ಶಾಸನದ ಮುಖ್ಯ ವಿಷಯಗಳಾಗಿವೆ.

ಘಟನೆಯನ್ನು ಶಾಸನ ಬಹಳ ಸೂಚ್ಯವಾಗಿ "ಉಡುಪಿನ ಶ್ರೀಮಹಾದೇವರ ಸ್ಥಾನವಳಿದಾ ಸಂಬಂಧ" ಎಂದು ತಿಳಿಸಿದೆ.[2] ಶಾಸನದ ಕಾಲ ಕ್ರಿ.ಶ. 1399 ಜುಲೈ 8ಕ್ಕೆ ಸ್ವಲ್ಪ ಮುಂಚೆ ಉಡುಪಿಯ ಎರಡು ಮಹಾದೇವ ದೇವಸ್ಥಾನಗಳನ್ನು ಹಾನಿಗೊಳಿಸಲಾಗಿದ್ದಂತೆ ಶಾಸನದಿಂದ ತಿಳಿದುಬರುತ್ತದೆ. ಇವುಗಳನ್ನು 'ಪಡುದೇವ' ಮತ್ತು 'ಮೂಡುದೇವ' ಎಂದು ಗುರುತಿಸಿದೆ.[3] ಇವು ಕ್ರಮವಾಗಿ ಈಗಿನ ಅನಂತೇಶ್ವರ ಮತ್ತು ಚಂದ್ರಮೌಳೇಶ್ವರ ದೇವಾಲಯಗಳು. ಉಡುಪಿಯ ರಥ ಬೀದಿಯಲ್ಲಿ ಒಂದರ ಮುಂದೆ ಒಂದರಂತೆ ಇರುವ ಈ ಎರಡೂ ದೇವಾಲಯಗಳು ಕ್ರಿ.ಶ. 7–8ನೆಯ ಶತಮಾನಕ್ಕೆ ಸೇರುವಷ್ಟು ಪ್ರಾಚೀನವಾದುವು.[4] ಅನಂತೇಶ್ವರ ದೇವಾಲಯವು ಪ್ರಾಚೀನ ಶಿವಳ್ಳಿ ಗ್ರಾಮದ ವಿದ್ಯಾಕೇಂದ್ರವಾಗಿ ಕಾರ್ಯನಿರ್ವಹಿಸಿತ್ತು. ದ್ವೈತ ಮತಸ್ಥಾಪಕರಾದ ಶ್ರೀ ಮಧ್ವಾಚಾರ್ಯರು ವೇದಾಧ್ಯಯನ ಮಾಡಿದ ಸ್ಥಳ ಇದು.[5]

ಈ ಪವಿತ್ರ ದೇವಾಲಯಗಳನ್ನು ಯಾರು ಮತ್ತು ಏಕೆ ಹಾಳುಮಾಡಿದರು ಎಂಬ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತದೆ. ಆದರೆ ಅವುಗಳಿಗೆ ಶಾಸನದಲ್ಲಿ ಉತ್ತರವಿಲ್ಲ. ಆದರೂ ಇದೊಂದು ಗಂಭೀರ ಘಟನೆ ಎಂದೇ ಕಾಣುತ್ತದೆ. ಇದರಿಂದ ಉದ್ಭವಿಸಿದ ಪರಿಸ್ಥಿತಿಯನ್ನು ನಿಭಾಯಿಸಲು ಚಕ್ರವರ್ತಿ ಹರಿಹರ ಮಹಾರಾಯನು ತನ್ನ ವಿಶೇಷ ಪ್ರತಿನಿಧಿಯನ್ನು ರಾಜಧಾನಿಯಿಂದಲೇ ಕಳುಹಿಸುತ್ತಾನೆ. "ತುಳುನಾಡು ರಾಜ ಕಾರ್ಯ ನಿಮಿತ್ತ ಮಂಗಪ್ಪ ದಂಡಾಯಕರು ಸರ್ವದಳ ಸಹಿತ ಬಂದಲ್ಲಿ" ಎಂದು ಶಾಸನ ತಿಳಿಸುತ್ತದೆ.[6] 'ರಾಜಕಾರ್ಯ'ದ ಗಂಭೀರತೆ ಎಷ್ಟೆಂದು ಊಹಿಸಲು ಸಾಧ್ಯವಿಲ್ಲ. ಆದರೆ ಆಲೋಚಿಸಬೇಕಾದ ಸಂಗತಿ. ಬಾರಕೂರಿನಲ್ಲಿ ಆ ರಾಜ್ಯದ ಆಡಳಿತದ ಜವಾಬ್ದಾರಿ ಹೊತ್ತ ರಾಜ್ಯಪಾಲನಿದ್ದರೂ ಅದಕ್ಕೆ ಸಮೀಪದ ಉಡುಪಿಯ ಘಟನೆಯಿಂದುಂಟಾದ ಪರಿಸ್ಥಿತಿಯನ್ನು ನಿಭಾಯಿಸಿ ತತ್‌ಕ್ಷಣದ ನ್ಯಾಯೋಚಿತ ಪರಿಹಾರ ಕಾರ್ಯಕ್ಕಾಗಿ ಸರ್ವಸನ್ನದ್ಧ ತಯಾರಿಯೊಂದಿಗೆ ತನ್ನ ವಿಶೇಷಾಧಿಕಾರಿಯನ್ನು ಉಡುಪಿಗೆ ಕಳುಹಿಸಿದ ಕ್ರಮ ವಿಜಯನಗರದ ಆಡಳಿತದಲ್ಲಿ ಆಗ ಇದ್ದ ಚುರುಕುತನವನ್ನು ಸೂಚಿಸುತ್ತದೆ.

"ತುಳು ನಾಡು ರಾಜಕಾರ್ಯ ನಿಮಿತ್ತ ಮಂಗಪ್ಪ ದಂಣಾಯಕರು ಸರ್ವದಳ ಸಹಿತ ಬಂದಲ್ಲಿ" ಎಂಬುದನ್ನು ಸ್ವಲ್ಪ ವಿಶೇಷವಾಗಿ ಅವಲೋಕಿಸುವುದು ಸೂಕ್ತ. ಈ ನಿಟ್ಟಿನಲ್ಲಿ ಇದಕ್ಕೆ ಪೂರಕವಾಗಬಲ್ಲ ಎರಡು ವೀರಗಲ್ಲು ಶಾಸನಗಳನ್ನು ಇಲ್ಲಿ ಪರಿಶೀಲಿಸುವುದು ಸೂಕ್ತ.[7] ಈ ವೀರಗಲ್ಲುಗಳು ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಕಾಯ್ಕಿಣಿಯಲ್ಲಿ ದೊರೆತಿವೆ. ಎರಡೂ ಶಾಸನಗಳ ಕಾಲ ಕ್ರಿ.ಶ. 1398 ಡಿಸೆಂಬರ್ 10 (ಗುರುವಾರ). ವಿಜಯನಗರದ ಪ್ರಭುತ್ವದ ವಿರುದ್ಧ ತುಳುನಾಡಿನಲ್ಲಿ ಪ್ರಾಯಶಃ ಪ್ರಪ್ರಥಮವೆನ್ನಬಹುದಾದ ದಂಗೆಯ ಚಿತ್ರಣವನ್ನು ಇವು ನೀಡುತ್ತವೆ.[7] ದಂಗೆ ಎದ್ದವ ಒಬ್ಬ ಸಾಮಾನ್ಯರಾಜ – ಜೈನ ಚೌಟ ಅರಸು ಮನೆತನಕ್ಕೆ ಸೇರಿದವ. ಈತ ಯಾವ ಶಕ್ತಿ ಪ್ರಚೋದನೆಯಿಂದ ಪ್ರಭಾವಿತನಾಗಿ ಬಲಿಷ್ಠ ಪ್ರಭುತ್ವದ ವಿರುದ್ಧ ದಂಗೆ ಎದ್ದ ಎಂಬ ಪ್ರಶ್ನೆಗೆ ಇತಿಹಾಸ ಇನ್ನೂ ಉತ್ತರಿಸಬೇಕಾಗಿದೆ.

ಈ ದಂಗೆಯನ್ನು ಅಡಗಿಸಲು ಚಕ್ರವರ್ತಿ ಇಮ್ಮಡಿ ಹರಿಹರ ಮಹಾರಾಯನು ತನ್ನ ಮಹಾಪ್ರಧಾನಿ ಮಂಗಪ್ಪ ದಂಣಾಯಕನನ್ನು ಕಳುಹಿಸುತ್ತಾನೆ. ನಗಿರೆಯ ರಾಜ ಮಹಾಮಂಡಲೇಶ್ವರ ಹಯಿವಣ್ಣರಸನ ಸಹಕಾರದೊಂದಿಗೆ ಮಂಗಪ್ಪ ದಂಣಾಯಕನು ತುಳು ರಾಜ್ಯಕ್ಕೆ ಬಂದು ದಂಗೆಯೆದ್ದಿದ್ದ ಚೌಟ ಅರಸನನ್ನು ಸದೆಬಡಿದು ಇಲ್ಲಿಯ ಶಾಂತಿ ಕಾಪಾಡಿ ಚಕ್ರವರ್ತಿಯ ಅಧಿಕಾರಕ್ಕೆ ಚ್ಯುತಿ ಇಲ್ಲದಂತೆ ಮಾಡಿದ. ತನಗೆ ಸೈನಿಕ ಸಹಾಯವಿತ್ತ ನಗಿರೆ ರಾಜನ ಸೈನ್ಯವನ್ನು ಕ್ಷೇಮವಾಗಿ ಊರಿಗೆ ಹಿಂದಿರುಗಿಸುತ್ತಿದ್ದಾಗ ಚೌಟ ಅರಸನ ಸೈನ್ಯ ಹಿಂದಿನಿಂದ ಬಂದು ಇವರ ಮೇಲೆರಗಿದಾಗ ಭೀಕರ

ಕಾಳಗ ನಡೆಯುತ್ತದೆ. ಆಗ ನಗಿರೆ ಅರಸನ ಕಡೆಯ ಸೈನಿಕರು ವೀರಾವೇಶದಿಂದ ಹೋರಾಡಿ ಚೌಟರ ಸೈನ್ಯವನ್ನು ಹಿಮ್ಮೆಟ್ಟಿಸಿದರು. ವಿಜಯಶಾಲಿಗಳಾದರು. ಇದರಲ್ಲಿ ಪ್ರಮುಖ ಪಾತ್ರವಹಿಸಿದ್ದ ತಂದೆ ಮತ್ತು ಮಗ – ಜಕ್ಕನಾಯಕ ಮತ್ತು ತಮ್ಮನಾಯಕ ಮತ್ತು ನಗಿರೆ ರಾಜನ ರಾಜಗುರುವಾದ ಬೊಮ್ಮಣ್ಣ ನಾಯಕನ ಮಗನಾದ ಜಕ್ಕನಾಯಕ ವೀರಮರಣವನ್ನಪ್ಪಿದರು. ರಾಜ ಇವರಿಗಾಗಿ ಸ್ಮಾರಕಶಿಲೆಗಳನ್ನು ಸ್ಥಾಪಿಸಿದ. ಇದರಲ್ಲಿ ಒಂದು ತಂದೆಮಗನ ಸ್ಮಾರಕ[9]ವಾದರೆ ಇನ್ನೊಂದು ರಾಜಗುರುವಿನ ಮಗನ ಸ್ಮಾರಕ.[10] ದುರದೃಷ್ಟಕರ ಸಂಗತಿ ಎಂದರೆ ಈ ಎರಡೂ ಶಾಸನಗಳು ದಂಗೆಗೆ ಕಾರಣ ಮತ್ತು ದಂಗೆ ಎದ್ದ ಚೌಟರಾಜನ ಹೆಸರನ್ನು ತಿಳಿಸುವುದಿಲ್ಲ. ಹಾಗಾಗಿ ಇಲ್ಲಿ ಚೌಟರಾಜನೇ ಏಕಾಂಗಿಯಾಗಿ ದಂಗೆ ಎದ್ದನೇ ಅಥವಾ ಪ್ರಬಲ ಶಕ್ತಿಯೊಂದರ ಪರವಾಗಿ ಹೋರಾಡಿದನೇ ಎಂಬುದು ತಿಳಿಯುವುದಿಲ್ಲ.

ಚೌಟರು ಆಳಿದ್ದು ಒಂದು ಅತ್ಯಂತ ಪುಟ್ಟರಾಜ್ಯವನ್ನು. ಮೂಡಬಿದರೆಯ ಸಮೀಪ ಇರುವ ಪುತ್ತಿಗೆ ಇವರ ರಾಜಧಾನಿ. ಆರ್ಥಿಕವಾಗಿ ಇವರು ಸಬಲರಾಗಿರಲಿಲ್ಲ. ಆದರೂ ಬಲಿಷ್ಠ ಪ್ರಭುತ್ವದ ವಿರುದ್ಧ ದಂಗೆ ಎದ್ದರೆನ್ನುವುದೇ ಒಂದು ವಿಶೇಷ ಸಂಗತಿ. ಯುದ್ಧ ಮಾಡಲು ಭಟ್ಕಳದ ಭೂಪ್ರದೇಶ ಇವರಿಗೆ ಎಷ್ಟು ಪರಿಚಿತವಾಗಿತ್ತು ಎಂಬುದು ತಿಳಿಯುವುದಿಲ್ಲ. ಆದರೂ ಅದರ ಸಮೀಪ ಇವರೊಂದು ಸೈನಿಕ ಠಾಣ್ಯ ಇತ್ತು ಎಂಬುದು ಕುರುಹಾಗಿ ಬೈಂದೂರಿನ ಸಮೀಪ "ಚೌಟರ ಹಕ್ಕಲು" ಎಂಬ ಸ್ಥಳವಿರುವುದನ್ನು ಈಗಲೂ ಕಾಣಬಹುದು. ಅತ್ಯಂತ ಬಲಿಷ್ಠನಾದ ಚಕ್ರವರ್ತಿ ಇಮ್ಮಡಿ ಹರಿಹರನ ಅಧಿಕಾರವನ್ನು ತುಳುನಾಡಿನ ಒಬ್ಬ ತುಂಡರಸನು ಪ್ರಶ್ನಿಸಿದುದು ಆಶ್ಚರ್ಯದ ಸಂಗತಿ ಎಂದು ಡಾ. ಕೆ.ವಿ. ರಮೇಶ ಅಭಿಪ್ರಾಯಪಟ್ಟಿದ್ದಾರೆ.[12]

ಪ್ರಸ್ತುತ ಅವಲೋಕನದಲ್ಲಿರುವ 'ಕಲ್ಲಕಂಡ' ಶಾಸನದಲ್ಲಿನ "ತುಳುನಾಡು ರಾಜಕಾರ್ಯ ನಿಮಿತ್ತ ಮಂಗಪ ದಂಣಾಯಕರು ಸರ್ವದಳ ಸಹಿತ ಬಂದಲ್ಲಿ" ಎಂಬ ಮಾತು ಮೇಲಿನ ಘಟನೆಯನ್ನೇ ಆಧರಿಸಿ ಹೇಳಿರುವ ಮಾತಿರಬಹುದು. ಗಲಭೆಯನ್ನು ಸಂಪೂರ್ಣವಾಗಿ ಅಡಗಿಸಿದ ನಂತರವೂ ಸ್ವಲ್ಪಕಾಲ ಮಹಾಪ್ರಧಾನ ಮಂಗಪ್ಪದಂಣಾಯಕನು ಪರಿಸ್ಥಿತಿಯ ಮೇಲೆ ನಿಗವಹಿಸುವ ಸಲುವಾಗಿ ಬಿದಿರೆಯಲ್ಲಿ (ಮೂಡಬಿದುರೆ) ಬಿಡಾರ ಹೂಡಿದ್ದನೆಂದು ಕಾಣುತ್ತದೆ.[13]

ಕಾಯ್ಕಿಣಿ ವೀರಗಲ್ಲುಗಳ ಕಾಲಕ್ಕೂ (ಕ್ರಿ.ಶ. 1398 ಡಿಸೆಂಬರ್ 10), ಪ್ರಸ್ತುತದ ಕಕ್ಕೆಹಳ್ಳಿ ಶಾಸನದ ಕಾಲಕ್ಕೂ (ಕ್ರಿ.ಶ. 1399 ಜುಲೈ 8) ಇರುವ ಸಮಯ ವ್ಯತ್ಯಾಸ ಕೇವಲ ಏಳು ತಿಂಗಳುಗಳು. ಈ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಪ್ರಾಯಶಃ ಗಲಭೆ ಸಮಯದಲ್ಲಿ ಉಡುಪಿಯ ಎರಡು ಮಹಾದೇವ ದೇವಾಲಯಗಳು ಹಾನಿಗೀಡಾಗಿರುವುದು ಅಥವಾ ಪರಿಸ್ಥಿತಿಯ ಲಾಭವನ್ನು ಪಡೆದು ಅನ್ಯರಾರೋ ಈ ಕೃತ್ಯ ಎಸಗಿರಬಹುದು. ಆದರೆ ವಿಶಸನೀಯ ಸಮರ್ಥನೆಗೆ ಆಧಾರದ ಕೊರತೆ ಅಡ್ಡಿಯಾಗಿದೆ.

ಮುಂದೆ ಶಾಸನದಲ್ಲಿ ಹರಿಹರ ಮಹಾರಾಯರು ಆ ಶ್ರೀ ಮಹಾದೇವರ ಎರಡು ಸ್ಥಾನವನ್ನೂ ಪ್ರತಿಷ್ಠೆ ಮಾಡಿಸಿ[14] ಎಂದಿದೆ. ಹಾಳಾದ ಎರಡೂ ದೇವಾಲಯಗಳನ್ನು ಸರಿಪಡಿಸಿ ಅಲ್ಲಿ ದೇವರ ಪುನರ್ ಪ್ರತಿಷ್ಠೆ ಕಾರ್ಯ ನೆರವೇರಿಸಿ ದೇವರ ಪೂಜಾಕಾರ್ಯ ನಿರಂತರ ನಡೆಯುವಂತೆ ಮಾಡಿದ. ಅದಕ್ಕಾಗಿ "ಆ ದೇವರಿಗೆ ದಿನಂಪ್ರತಿ ಪಡುವದೇವರಿಗೆ 'ಯಿಪಾನೆ' ಅಕ್ಕಿ, ಮೂಡದೇವರಿಗೆ ವೊಪಾನೆ ಅಕ್ಕಿ ಅಂತೂ ಮೂವಾನೆ ಅಕ್ಕಿಯ ಅಮೃತಪಡಿಗೆ ಆ ಚಂದ್ರಾರ್ಕ ಸ್ಥಾಯಿಯಾಗಿ ನಡವಂತಾಗಿ ಮಾಡಿದ ಕಟ್ಟಳೆ",[15] ಪಡುವದೇವ ಅನಂತೇಶ್ವರನಿಗೆ ಎರಡು ಹಾನೆ ಮತ್ತು ಮೂಡದೇವ ಚಂದ್ರಮೌಳೇಶ್ವರನಿಗೆ ಒಂದು ಹಾಗೆ ಅಕ್ಕಿ ದೇವರದಿನಂಪ್ರತಿ ಅಮೃತಪಡಿ ವೆಚ್ಚಕ್ಕಾಗಿ ದೊರೆಯುವಂತೆ ಮಾಡಿದ ಕಟ್ಟಳೆಯನ್ನು ಈ ಶಾಸನ ದಾಖಲಿಸಿದೆ. ಇದಕ್ಕಾಗಿ ವಿಶಾಲವಾದ ಭೂಮಿಯನ್ನು ಬೆಳ್ಳಂಪಳ್ಳಿ ಗ್ರಾಮದಲ್ಲಿ ಶ್ರೀಮಹಾದೇವರ ಹೆಸರಿನಲ್ಲಿ ದಾನ ಮಾಡಲಾಯಿತು. ಭೂದಾನದ ವಿವರವನ್ನು ಶಾಸನ ನೀಡುತ್ತದೆ.[16] ದಾನ ಕೊಟ್ಟ ಸ್ಥಳ ನದಿಬಯಲಿನ ಅತ್ಯಂತ ಫಲವತ್ತಾದ ಪ್ರದೇಶ. ಅಂದಿನಿಂದ ಕರ್ನಾಟಕದಲ್ಲಿ ಭೂಮಸೂದೆ ಬಂದ ಇತ್ತೀಚಿನ ವರ್ಷಗಳವರೆಗೆ ನಿರಂತರವಾಗಿ ಈ ಭೂಮಿಯಿಂದ ಉತ್ಪತ್ತಿ ಅನಂತೇಶ್ವರನಿಗೆ ಸಲ್ಲುತ್ತಿತ್ತು.[17]

ಸ್ಮಾರಕ

ಉಡುಪಿಯ ದೇವಾಲಯಗಳಲ್ಲಿ ಈ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಆದರೆ ಈ ಸಂದರ್ಭದಲ್ಲಿ ನಿರ್ಮಾಣಗೊಂಡ ಒಂದು ಸ್ಮಾರಕ ಅನಂತೇಶ್ವರ ದೇವಾಲಯದ ಮುಂದೆ ಇದೆ. ಅದುವೇ ಬೃಹತ್ ಶಿಲಾಧ್ವಜಸ್ತಂಭ. ಪ್ರಾಚೀನವಾದ ಪ್ರಧಾನ ಬಲಿಪೀಠದ ತೀರಸಮೀಪದಲ್ಲಿ (ಪೂರ್ವಭಾಗಕ್ಕೆ) ಇದ್ದರೂ ಜನರ ಗೋಚರಕ್ಕೆ ಬರುವುದು ಕಷ್ಟವಾಗಿದೆ. ಕಾರಣ ಇದರ ಸುತ್ತಮುತ್ತೆಲ್ಲಾ ಬೆಳೆದಿರುವ ಅಂಗಡಿಗಳು ಹಾಗೂ ಅವುಗಳ ಸಾಮಾನು, ಕಸದ ಕಟ್ಟುಗಳು ಕೆಲವೊಮ್ಮೆ ಸೋಮಾರಿಗಳ ವಿಶ್ರಾಂತಿ ಕಟ್ಟೆಯೂ ಇದಾಗಿರುತ್ತದೆ.

ದೇವಾಲಯಕ್ಕೆ ಎದುರಾಗಿರುವ ಈ ಬೃಹತ್ ಧ್ವಜಸ್ತಂಭದ ಮುಖದಲ್ಲಿ ರಾಜನೋರ್ವ ಕೈಮುಗಿದುಕೊಂಡು ನಿಂತಿರುವ ಶಿಲ್ಪ ಇದೆ. ವಿಜಯನಗರ ಕಾಲದಲ್ಲಿ ಚಕ್ರವರ್ತಿಗಳು ಮಾಡಿದ ದಾನಧರ್ಮ ಕಾರ್ಯಗಳ ಜೊತೆ ಶಿಲೆ ಅಥವಾ ಲೋಹದಲ್ಲಿ ಮಾಡಿದ ಅವರ ಪ್ರತಿಮೆಗಳನ್ನು ಇಡುವ ರೂಢಿ ಬೆಳೆದಿತ್ತು. ತಿರುಪತಿ ದೇವಾಲಯದಲ್ಲಿರುವ ಕೃಷ್ಣದೇವರಾಯ ಹಾಗೂ ಆತನ ರಾಣಿಯರ ಲೋಹದ ಶಿಲ್ಪಗಳು ಇದಕ್ಕೊಂದು ಸುಂದರ ಉದಾಹರಣೆ. ಈ ದೃಷ್ಟಿಯಲ್ಲಿ ನೋಡಿದಾಗ ಅನಂತೇಶ್ವರ ದೇವಾಲಯದ ಧ್ವಜಸ್ತಂಭದ ಪಶ್ಚಿಮ ಮುಖದಲ್ಲಿರುವ ರಾಜನ ಶಿಲ್ಪ ಚಕ್ರವರ್ತಿ ಇಮ್ಮಡಿ ಹರಿಹರನನ್ನು ಸಂಕೇತಿಸುತ್ತದೆ.

ಮೂಲ ಬಸದಿಗಳೇ?

ಹದಿನಾಲ್ಕನೆಯ ಶತಮಾನದ ಕೊನೆಗಾಲದ ಈ ಸ್ತಂಭಶಿಲ್ಪವನ್ನು ಸರಿಯಾಗಿ ಅಭ್ಯಸಿಸದೆ ಇದು ಮಾನಸ್ತಂಭ ಇದರ ಸನಿಹದಲ್ಲಿರುವ ಎರಡೂ ದೇವಾಲಯಗಳು ಬಸದಿಗಳು, ಇವುಗಳನ್ನು ಶಂಕರಾಚಾರ್ಯರು ದೇವಾಲಯಗಳನ್ನಾಗಿ ಪರಿವರ್ತಿಸಿದರು ಎಂದು ಗಣಪತಿರಾವ್ ಐಗಳು ತರ್ಕಿಸಿದ್ದಾರೆ.[18] ಇದರ ಪ್ರಕಾರ ಅನಂತನಾಥ ಬಸದಿ ಅನಂತೇಶ್ವರ ದೇವಸ್ಥಾನವಾಯಿತು ಮತ್ತು ಚಂದ್ರನಾಥ ಬಸದಿ ಚಂದ್ರಮೌಳೇಶ್ವರ ದೇವಸ್ಥಾನವಾಯಿತು.[19]

ಆದರೆ ಶಂಕರಾಚಾರ್ಯರ ಕಾಲಕ್ಕೂ ಮುಂಚಿನಿಂದಲೇ ಶಿವಳ್ಳಿ ಒಂದು ಬ್ರಹ್ಮಪುರಿಯಾಗಿ[20] ಕಾಶಿಯಷ್ಟೇ ಪವಿತ್ರ ಕ್ಷೇತ್ರವಾಗಿ[21] ಮೆರೆದಿತ್ತು. ಆಳುಪರಾಜ ರಣಸಾಗರನ ಉದಿಯಾವರ ಶಾಸನವು "ಶಿವಳ್ಳಿಯ ಬ್ರಹ್ಮಪುರ ಮುಮಱಿದ ಮಹಾಪಾತಕನಕ್ಕು" ಎಂದು ತಿಳಿಸುತ್ತದೆ.[22] ಎರಡನೆಯ ಆಳುವರಸನ ಬೆಳ್ಮಣ್ಣು ತಾಮ್ರಶಾಸನವು

> ಇದನಱಿವೋರುಂ ಬಕ್ರಬರ್ಪ್ಪೊರುಂ ಪಞ್ಚಮಹಾ
> ಪಾತಕರಪ್ಪೋರ್ ಇಪ್ಪತ್ತೊಂದು ನರಖದುಳಿರ್ಪ್ಪಾರ್
> ವಾರಣಾಶಿಯುಂ ಶಿವಳ್ಳಿಯುಮನಱಿದ ಪಾಪಮಕ್ಕುಂ"

ಎಂದು ಹೇಳುತ್ತದೆ.[23]

ಇಂತಹ ಪವಿತ್ರ ಶಿವಳ್ಳಿಯ ಚಟುವಟಿಕೆಗಳ ಮುಖ್ಯಕೇಂದ್ರವಾಗಿದ್ದ ಸ್ಥಳ ಅನಂತೇಶ್ವರ ದೇವಾಲಯ. ಇದರ ಮುಂದಿರುವುದು ಧ್ವಜಸ್ತಂಭವೇ ಹೊರತು ಮಾನಸ್ತಂಭವಲ್ಲ. ಇದು ಈ ಪ್ರಾಚೀನ ದೇವಾಲಯಕ್ಕೆ ವಿಜಯನಗರ ಚಕ್ರವರ್ತಿ ಇಮ್ಮಡಿ ಹರಿಹರ ಮಹಾರಾಯನ ಕೊಡುಗೆ. ಅಂತೆಯೇ ಈ ಎರಡೂ ಬಸದಿಗಳಾಗಿರದೆ ಮೂಲದಿಂದಲೂ (ಶಿವಾಲಯ) ದೇವಾಲಯಗಳಾಗೇ ರೂಪುಗೊಂಡಿದ್ದವು.

ಹಿಂದಿನ ದಾನಧರ್ಮ ಕಾರ್ಯಗಳು

ಬೆಳ್ಳಂಪಳ್ಳಿ 'ಕಲ್ಲಕಂಡ' ಗದ್ದೆ ಶಾಸನ ಹೊಸದಾಗಿ ಪತ್ತೆಯಾದುದು. ಇದಕ್ಕೆ ಐದುವರ್ಷ ಮೊದಲು ಇದೇ ಚಕ್ರವರ್ತಿ ಇಮ್ಮಡಿ ಹರಿಹರ ಮಹಾರಾಯನು ಉಡುಪಿಯ ಶ್ರೀಕೃಷ್ಣ ದೇವರಿಗೆ ಅಮೃತಪಡಿ, ನಂದಾದೀಪ ಇತ್ಯಾದಿಗಳಾಗಿ

ಮೂಡನಿಡಂಬೂರು ಗ್ರಾಮದಲ್ಲಿ ವಿಸ್ತಾರವಾದ ಭೂಮಿಗಳನ್ನು ದಾನಮಾಡಿದ ಎಂದು ಕೃಷ್ಣ ಮಠದ ಒಂದು ಶಾಸನ ತಿಳಿಸುತ್ತದೆ.[24]

ಇಮ್ಮಡಿ ಹರಿಹರನು ಶ್ರೀಕೃಷ್ಣಮಠ ಹಾಗೂ ಇಲ್ಲಿಯ ದೇವಾಲಯಗಳಿಗೆ ಮಾಡಿದ ಭೂ ಮತ್ತು ಹೊನ್ನಿನ ದಾನಗಳ ವಿವರಗಳಿರುವ ಇನ್ನೂ ಕೆಲವು ಶಾಸನಗಳು ಶ್ರೀಕೃಷ್ಣ ಮಠದಲ್ಲಿವೆ.[25] ಇದರಲ್ಲಿ ಎರಡು ಶಾಸನಗಳಲ್ಲಿ[26] ಶ್ರೀಕೃಷ್ಣನಿಗೆ ಮಾಡಿದ ದಾನಗಳ ಜೊತೆ "ಉಡುಪಿನ ಮಹಾದೇವರಿಗೊಂದು ನಂದಾದೀಪ ಮತ್ತು ಉಡುಪಿನ ಮಹಾದೇವರ ನಂದಾದೀವಿಗೆ .... ಆ ಹೊಂನನು ನಡೆಸಿಬಹುದು" ಎಂದು ಪ್ರತ್ಯೇಕವಾಗಿ ಅನಂತೇಶ್ವರನಿಗೆ ಮಾಡಿದ ಧರ್ಮವನ್ನು ತಿಳಿಸಿದೆ. ಅನಂತೇಶ್ವರ ದೇವಸ್ಥಾನದಲ್ಲೇ ಇರುವ ಒಂದು ಶಾಸನದಲ್ಲಿ[27] ಮೂಡುದೇವರ ನೈವೇದ್ಯಕ್ಕೆ ಚಕ್ರವರ್ತಿ ಶ್ರೀಬುಕ್ಕರಾಯನು ಕ್ರಿ.ಶ. 1366ರಲ್ಲಿ ಮಾಡಿದ ದಾನ ದಾಖಲಾಗಿದೆ. (ಇಲ್ಲಿ ಮೂಡುದೇವ ಅಂದರೆ ಚಂದ್ರಮೌಳೇಶ್ವರ).

ಈ ದಾಖಲೆಗಳೆಲ್ಲವು ಸಂಗಮವಂಶದ ಆಳ್ವಿಕೆಯ ಪೂರ್ವಾರ್ಧಕಾಲದಲ್ಲಿ ಉಡುಪಿಯಲ್ಲಿ ಸುವ್ಯವಸ್ಥೆ ಇದ್ದುದನ್ನು ಪರೋಕ್ಷವಾಗಿ ಸೂಚಿಸುತ್ತದೆ. ಆದರೂ ಈಗ ದೊರೆತಿರುವ ಬೆಳ್ಳಂಪಳ್ಳಿಯ ಶಾಸನದ ಘಟನೆ ಆಶ್ಚರ್ಯಕರವಾದುದಷ್ಟೇ ಅಲ್ಲದೆ ದುರದೃಷ್ಟಕರವಾದುದು.

ಶಾಸನದಲ್ಲಿ ಘಟನೆಯ ವಿಷಯವನ್ನು ಸೂಚ್ಯವಾಗಿ ಹೇಳಿರುವುದನ್ನು ಒಂದು ದೃಷ್ಟಿಯಲ್ಲಿ ಮೆಚ್ಚಲೇಬೇಕು. ಅದೇನೆಂದರೆ ಸಮಸ್ಯೆಯನ್ನು ಸೂಕ್ತವಾಗಿ ಪರಿಹರಿಸಿದ ಮೇಲೆ ಶಾಸನದಲ್ಲಿ ಅದರ ವಿವರಣೆ ಮಾಡದೆ ಘಟನೆಯ ನಂಜು ಉಳಿಯದಂತೆ ಮಾಡಿರುವುದು. ಇದು ಸಾಮಾಜಿಕ ಸ್ವಾಸ್ಥ್ಯ ರಕ್ಷಣೆಗೆ ಆಗ ಇದ್ದ ಪ್ರಾಯಶಃ ಸರ್ವಾದರಣೀಯ ಮಾರ್ಗ. ಇದು ವಿಜಯನಗರ ಚಕ್ರವರ್ತಿಗಳು ಆಗ ಅನುಸಿರಸುತ್ತಿದ್ದ ದಕ್ಷ ಆಡಳಿತ ನೀತಿಯನ್ನು ಪ್ರತಿಬಿಂಬಿಸುತ್ತದೆ.[28]

ಶಾಸನಪಾಠ

1 ಶ್ರೀ ಗಣಾಧಿಪತಯೇಂ ನಮಃ (॥*) ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರಚಾರವೇ [।*]
2 ತ್ರೈಲೋಕ್ಯನಗರಾಂಭ ಮೂಲಸ್ತಂಭಾಯಶಂಭವೇ [॥*] ಸ್ವಸ್ತಿ ಶ್ರೀ ಜಯಾಭ್ಯುದಯ
3 ಶಕವರುಷ 13 (2) 1ನೆಯ ಪ್ರಮಾದಿ ಸಂವತ್ಸರದ ಸ್ರಾವಣ ಸುದ 5 ಮಂ ಶ್ರೀ ಮಂ
4 ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀವೀರ ಪ್ರತಾಪ ಹರಿಹರ ಮ ಮಹಾರಾಯ
5 ಯರು ವಿಜೆಯನಗರಿಯಾ ರಾಜಧಾನಿಯಲು ಸುಖಸಂಕಥಾ ವಿನೋದದಿಂ
6 ಸಕಲ ರಾಜ್ಯವನೂ ಪ್ರತಿಪಾಲಿಸುತ್ತಯಿಹಲ್ಲಿ ಮೆದ್ದೂರ ನಾಗರ್ಸರು ಬಾ
7 ರ ಕೂರ ರಾಜ್ಯವನೂ ಆಳುವ ಕಾಲದಲು ತುಳುನಾಡು ರಾಜಕಾರ್ಯ ನಿಮಿತ್ತ ಮಂ
8 ಗಪ್ಪದಂಣಾಯಕರು ಸರ್ವ್ವದಳ ಸಹಿತ ಬಂದಲ್ಲಿ ಉಡುಪಿನ ಶ್ರೀ ಮಹಾ
9 ದೇವರ ಸ್ಥಾನವಳಿದ ಸಂಮಂದ ಆ ಹರಿಹರ ಮಹಾರಾಯರು ಆ ಶ್ರೀ ಮ
10 ಹಾ ದೇವರ ಯೆರಡು ಸ್ಥಾನವನೂ ಪುನಃ ಪ್ರತಿಷ್ಟೆಯ ಮಾಡಿಸಿ ಆ ದೇವರಿ
11 ಗೆ ದಿನಂಪ್ರತಿ ಪಡುವ ದೇವರಿಗೆ ಯಿಪಾನೆ ಅಕ್ಕಿ ಮೂಡದೇವರಿಗೆ ವೊಪಾನೆ
12 ಅಕ್ಕಿ ಅಂತು ಮೂವಾನೆ ಅಕ್ಕಿಯ ಅಮ್ರುತಪಡಿಗೆ ಆಚಂದ್ರಾರ್ಕ್ಕಸ್ಥಾಯಿಯಾ
13 ಗಿ ನಡೆವಂತಾಗಿ ಮಾಡಿದ ಕಟ್ಟಳೆ ಕೊಟ್ಟ ಬಾಳಿನ ವಿವರ ಬೆಳ್ಳಂಪಳ್ಳಿಯ ಹರ
14 ವರಿಯವೊಳಗೆ ಬಿದಿರ ಗದ್ದೆ ಹಂಗರ ಗೆದ್ದೆ ಬಂಕನಗದೆ ಬೆಟು ಬಳಿಗಳು

15 ಯೇಕತ್ರ (ಜಾ)ಳದ ಗದೆ ಕಾಡದೂರು ಬ್ರಂಹರ ಬೆಟ್ಟು । (ದಾಸ)ವಂತರ ಬೆಟ್ಟಿಂ

16 ಂದಲೂ ಪಡುವಲೂ ತೆರಕಲು ಪಾಂಡಿರಾ (ಸಾ)ವಂತನ ಬೆಟ್ಟಿಂದಲೂ ಬ–ಪಡು

17 ವಲೂ ಯಕ್ಕಿ ತಿವಜೆ ಚತುಸ್ಸೀಮೆಯವೊಳಗೆ (ವೊ)ಳಂತಾಕ್ಕೆ ಮಕ್ಕಿ ಮಡ ನೆಕ್ಕಿ ನಿಡಿ

18 ಲು ನಿಧಿ ನಿಕ್ಷೇಪ ಜಲ ಪಾಷಾಣ ಸಿದ್ದ ಸಾಧ್ಯ ಅಕ್ಷೀಣಿ ಹಂಗಾಮಿ ಸಹಿತಾ ವಾ

19 (ಗಿ) ಯೇನು ಉಳಂತಾದನೂ ದಾರಾ ಪೂರ್ವಕವಾಗಿ ಆ ಶ್ರೀ ಮಹಾದೇವರು

20–22 (ಬರಹ ಅಳಿಸಿ ಹೋಗಿದೆ)

ಅಡಿಟಿಪ್ಪಣಿಗಳು

1. *SII.*, Vol. VII, No. 350. ಶಾಸನ ಪಾಠ ಸಾಲು 4–7, ಈತನಿಗೆ ಸೇರಿದ ಒಂದು ಶಾಸನ ಬಾರಕೂರಿನಲ್ಲಿದೆ.
2. ಶಾಸನಪಾಠ ಸಾಲು 8–9.
3. ಅದೇ, ಸಾಲು 11.
4. Dr. P. Gururaja Bhatt; *Studies in Tuluva History and Culture* (1975), Pp. 282-83; ಪಿ.ಎನ್. ನರಸಿಂಹಮೂರ್ತಿ (ಸಂ) *ದಕ್ಷಿಣ ಕನ್ನಡದ ದೇವಾಲಯಗಳು* (2000), ಪು. 280–81.
5. *ದಕ್ಷಿಣ ಕನ್ನಡದ ದೇವಾಲಯಗಳು*, ಪು. 261
6. ಶಾಸನಪಾಠ ಸಾಲು 8–9.
7. *Karnataka Inscriptions,* Vol. I, Nos. 35 and 36.
8. K.V. Ramesh, *A History of South Kanara (AHSK),* 1970, pp. 160, 194.
9. *Karnataka Inscriptions,* Vol. I, No. 35.
10. *Ibid.,* No. 36.
11. ಪಿ.ಎನ್. ನರಸಿಂಹಮೂರ್ತಿ, *ಕಾರ್ಕಳ ಒಂದು ಪ್ರಾದೇಶಿಕ ಅಧ್ಯಯನ* (1985), ಪು. 7–11.
12. *AHSK,* p. 160
13. *Ibid,* p. 160.
14. ಶಾಸನಪಾಠ ಸಾಲು 9–10.
15. ಅದೇ, ಸಾಲು 10–13.
16. ಅದೇ, ಸಾಲು 13–17
17. ಈ ಭೂಮಿಯ ಒಡೆಯರು ಈಗಲೂ ಇದನ್ನು ನೆನೆಯುತ್ತಾರೆ.
18. ಗಣಪತಿರಾವ್ ಐಗಳ್, *ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ*. ಎರಡನೆಯ ಆವೃತ್ತಿ 2004, ಪು. 61.
19. ಅದೇ, ಪು. 61; ಕೆ. ವೆಂಕಟರಾಯಚಾರ್ಯ, *ಸಾಹಿತ್ಯ ದೀಪಿಕ* (1982), ಪು. 65–66.
20. *S.I.I.*, Vol. VII, No. 284.
21. ಕೆ.ವಿ. ರಮೇಶ ಮತ್ತು ಎಂ.ಜೆ. ಶರ್ಮ, *ತುಳುನಾಡಿನ ಶಾಸನಗಳು* (1978), ಸಂಪುಟ 1 *(ತುನಾಶಾ)*, ಸಂ. 3.
22. *S.I.I.,* Vol. VII, No. 284.
23. *ತುಳು ನಾಡಿನ ಶಾಸನಗಳು*, ಸಂ. 3, ಶಾಸನಪಾಠ ಸಾಲು 16–19.
24. *S.I.I.,* Vol. VII, No. 299; *ತುಳು ನಾಡಿನ ಶಾಸನಗಳು*, ಸಂ. 59.
25. *S.I.I.* Vol. VII, No. 298, 300 and 303.
26. *Ibid.,* Nos. 298 and 303.
27. *Ibid.,* No. 306.
28. ಶಾಸನ ಪತ್ತೆ ಕಾರ್ಯದಲ್ಲಿ ನೆರವಾದ ಶ್ರೀ ಶ್ರೀಧರಭಟ್ ಮತ್ತು ಶಾಸನದ ಪ್ರತಿ ತೆಗೆಯಲು ಅನುಮತಿ ಇತ್ತು ಸಹಕರಿಸಿದ ಶ್ರೀ ರಾಜೀವ ಮಡಿವಾಳ ಇವರಿಗೆ ನನ್ನ ಕೃತಜ್ಞತೆಗಳು.

2

ಹಾಲ್ಕುರಿಕೆಯ ಸದಾಶಿವರಾಯನ ಶಿಲಾಶಾಸನ

ಎಸ್. ಕಾರ್ತಿಕ್

ಪ್ರಸ್ತುತ ಶಾಸನವು ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಹಾಲ್ಕುರಿಕೆ ಗ್ರಾಮದ ವೀರೇಶ್ವರ ದೇವಾಲಯದ ಮುಂದಿದೆ. ಈ ಶಿಲಾಶಾಸನವು ನಾಲ್ಕು ಅಡಿ ಉದ್ದ, ಮೂರು ಅಡಿ ಅಗಲವಾಗಿದ್ದು ನಮ್ಮ ಗಮನಕ್ಕೆ ಬಂದಂತೆ ಇದುವರೆಗೂ ಪ್ರಕಟವಾಗಿಲ್ಲ. ಈಗ ಪ್ರಕಟವಾಗುತ್ತಿರುವ ಶಾಸನಪಾಠವು ಶ್ರೀಯುತ ಎಂ. ಹನುಮಂತರಾಯರು ಕ್ರಿ.ಶ. 1945ರ ಸುಮಾರಿನಲ್ಲಿ ಕ್ಷೇತ್ರಕಾರ್ಯಕ್ಕೆ ತೆರಳಿದಾಗ ಸಿದ್ಧಪಡಿಸಿಟ್ಟುಕೊಂಡಿದ್ದ ಶಾಸನಪಾಠ ಇದಾಗಿದೆ. ಇದರೊಂದಿಗೆ ಶಾಸನಪಾಠದ ರೋಮನ್ ಲಿಪ್ಯಂತರ, ಕಿರಿದಾದ ಆಂಗ್ಲ ಅನುವಾದ ಹಾಗೂ ಕಿರು ವಿಶ್ಲೇಷಣೆಯೂ ಇದೆ. ಎಂ. ಹನುಮಂತರಾಯರು ಮೈಸೂರು ಪುರಾತತ್ತ್ವ ಇಲಾಖೆಯಲ್ಲಿ ಶಾಸನ ತಜ್ಞರಾಗಿ ನಂತರ ಉಪನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿದರು. ನಿವೃತ್ತಿಯ ನಂತರ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಷ್ಠಿತ ಎಪಿಗ್ರಾಫಿಯ ಕರ್ನಾಟಿಕ ಪರಿಷ್ಕರಣ ಯೋಜನೆಯ ಒಂದರಿಂದ ಏಳನೆಯ ಸಂಪುಟದವರೆಗೆ ಉಪಶಾಸನತಜ್ಞರಾಗಿ ಸೇವೆಸಲ್ಲಿಸಿದರು. ಹನುಮಂತರಾಯರು ನಿಧನರಾಗುವ ಮೊದಲು ತಮ್ಮಲ್ಲಿದ್ದ ಕೆಲವು ಶಾಸನಗಳ ಪಾಠಗಳನ್ನು ಎಪಿಗ್ರಾಫಿಯ ಕರ್ನಾಟಿಕ ಪರಿಷ್ಕೃತ ಸಂಪುಟಗಳ ಯೋಜನೆಯಲ್ಲಿಯೇ ಶಾಸನ ತಜ್ಞರಾಗಿ ಕಾರ್ಯನಿರ್ವಹಿಸಿ ಈಗ ನಿವೃತ್ತರಾಗಿರುವ ಎಚ್.ಎಂ. ನಾಗರಾಜರಾಯರಿಗೆ ಕೊಟ್ಟರು. ಅವರ ಈ ಸಂಗ್ರಹದಲ್ಲಿದ್ದ ಪ್ರಕೃತ ಶಾಸನ ಪಾಠವನ್ನೊಳಕೊಂಡ ಎಂ. ಹನುಮಂತರಾಯರ ಸ್ವಹಸ್ತಾಕ್ಷರ ಪ್ರತಿಯನ್ನು ಎಚ್. ಎಂ. ನಾಗರಾಜರಾಯರು ಪ್ರಕೃತ ಲೇಖಕನಿಗೆ ಪ್ರಕಟನೆಗಾಗಿ ವಿಶ್ವಾಸದಿಂದ ಕೊಟ್ಟಿರುತ್ತಾರೆ. ಶಾಸನ ಪಾಠವನ್ನು ಹಸ್ತಪ್ರತಿಯಲ್ಲಿರುವಂತೆಯೇ ದಾಖಲಿಸಲಾಗಿದ್ದು ಹನುಮಂತರಾಯರು ಬರೆದಿರುವ ವಿವರಣೆಗಳನ್ನು ಅಗತ್ಯವಿರುವೆಡೆ ಮಾತ್ರ ಯಥೋಚಿತವಾಗಿ ಬಳಸಿಕೊಳ್ಳಲಾಗಿದೆ. ಶಾಸನಪಾಠದೊಳಗಿನ ಚಿಹ್ನೆಗಳು ಹಾಗೂ ಕೆಲವು ಅಪಲಿಖಿತ ಶಬ್ದಗಳ ಶುದ್ಧರೂಪಗಳನ್ನು ಮತ್ತು ಕೆಲವು ಶಬ್ದಗಳ ಅರ್ಥಗಳನ್ನು, ವಿವರಣೆಯನ್ನು ಶಾಸನಪಾಠದ ಕೊನೆಯಲ್ಲಿ ನೀಡಿರುತ್ತೇವೆ. ಈ ವಿವರಗಳು ಮಾತ್ರ ಪ್ರಕೃತ ಲೇಖಕನ ಸೇರ್ಪಡೆಯಾಗಿವೆ. ಪ್ರಕೃತ ಶಾಸನೋಕ್ತ ವಿಷಯದ ಬಗೆಗೆ ಬೇರೆಡೆ ಮಾಹಿತಿ ದೊರೆಯುತ್ತಿರುವ ಕಾರಣ ಪ್ರಕೃತ ಲೇಖನದಲ್ಲಿ ಹೆಚ್ಚಿನ ವಿಶ್ಲೇಷಣೆಗೆ ಕೈಹಾಕದೆ ಅಗತ್ಯವಿರುವ ವಿವರಗಳನ್ನು ಮಾತ್ರವೇ ನೀಡಲಾಗಿದೆ.

ಶಾಸನದ ಕಾಲ: ಈ ಶಾಸನದಲ್ಲಿ ಕಾಲವನ್ನು ಶಕ 1468 ವಿಶ್ವಾವಸು ಸಂವತ್ಸರ ಆಷಾಢ ಶುದ್ಧ 1 ಎಂದು ಹೇಳಿದ್ದು ವಿಜಯನಗರ ಸಾಮ್ರಾಜ್ಯದ [=ಇದರ ಹೆಸರನ್ನು ಕರ್ಣಾಟಕ ಸಾಮ್ರಾಜ್ಯ ಎಂದು ಬಳಸುವುದೇ ಸೂಕ್ತ] ದೊರೆ ಸದಾಶಿವರಾಯನ (ಕ್ರಿ.ಶ. 1542–1570) ಆಳ್ವಿಕೆಯ ಕಾಲಕ್ಕೆ ಸೇರಿದ್ದಾಗಿದೆ. ಆದರೆ ಶಕ 1468ರಲ್ಲಿ ವಿಶ್ವಾವಸು ಸಂವತ್ಸರ ಬರುವುದಿಲ್ಲ. ಶಕ 1467ರಲ್ಲಿ ವಿಶ್ವಾವಸು ಸಂವತ್ಸರವಿರುತ್ತದೆ. ಆದ ಕಾರಣ ಶಕವರ್ಷ 1468ನ್ನು

ವರ್ತಮಾನವರ್ಷವೆಂದು ತಿಳಿದರೆ ಈ ಶಾಸನೋಕ್ತ ಕಾಲವು ಶಕ 1467 ವಿಶ್ವಾವಸು ಸಂವತ್ಸರ ಆಷಾಢ ಶುದ್ಧ 1 ಆಗುತ್ತದೆ. ಇದು ಗ್ರೆಗೋರಿಯನ್ ಕಾಲಮಾನದಂತೆ ಕ್ರಿ.ಶ. 20 ಜೂನ್ 1545 ಬುಧವಾರಕ್ಕೆ ಸರಿಹೊಂದುತ್ತದೆ. {ಜೂಲಿಯನ್ ಕಾಲಮಾನದಂತೆ ಕ್ರಿ.ಶ. 10 ಜೂನ್ 1545 ಬುಧವಾರಕ್ಕೆ ಸರಿಹೊಂದುತ್ತದೆ}. ಹನುಮಂತರಾಯರು ವಿಶ್ವಾವಸು ಸಂವತ್ಸರವನ್ನು ಗತವರ್ಷವೆಂದು ಪರಿಗಣಿಸಿ ಶಾಸನದ ಕಾಲವನ್ನು ಶಕ 1468 ಪರಾಭವ ಸಂವತ್ಸರ, ಆಷಾಢ ಶುದ್ಧ ಪಾಡ್ಯ ಎಂದು ಹೇಳಿರುತ್ತಾರೆ. ಇದು ಗ್ರೆಗೋರಿಯನ್ ಕಾಲಮಾನದಂತೆ ಕ್ರಿ.ಶ. 9 ಜುಲೈ 1546 ಮಂಗಳವಾರಕ್ಕೆ ಸರಿಹೊಂದುತ್ತದೆ {ಜೂಲಿಯನ್ ಕಾಲಮಾನದಂತೆ ಕ್ರಿ.ಶ. 29 ಜೂನ್ 1546 ಮಂಗಳವಾರಕ್ಕೆ ಸರಿಹೊಂದುತ್ತದೆ}.

ಈ ಶಾಸನವು ವಿಜಯನಗರದ ದೊರೆ ಸದಾಶಿವರಾಯನ ಕಾರ್ಯಕರ್ತನಾದ ರಾಮರಾಜ ಒಡೆಯನು [=ಅಳಿಯ ರಾಮರಾಯ] ಸ್ವಾಮಿಯ ಕೆಲಸಿಯಾದ [=ಬಹುಶಃ ಸದಾಶಿವರಾಯನ ಕೆಲಸಿಯಾದ (?)] ಕೊಂಡೋಜಿಯನ್ನು ಮೆಚ್ಚಿಕೊಂಡು ಮಾನ್ಯವನ್ನು ಕೊಟ್ಟಿರುವ ಸಂಗತಿಯನ್ನು ಹೇಳುತ್ತದೆ. ಸದಾಶಿವರಾಯನು ಆಳುವ ರಾಜ್ಯದಲ್ಲಿ ನಾಯಿಂದರಿಗೆ ಕುಳದೆರೆ, ಮನೆದೆರಿಗೆ, ಸುಂಕ, ಸಾರಿಗೆಗಳನ್ನು ಸರ್ವಮಾನ್ಯವಾಗಿ ನೀಡಲಾಗಿದೆ {ಬಹುಶಃ ಈ ಎಲ್ಲಾ ತೆರಿಗೆಗಳಿಂದ ವಿನಾಯಿತಿ ನೀಡಲಾಗಿದೆ}. ಇದನ್ನು ಹಾಳುಮಾಡಬಾರದೆಂಬ ಆಶಯದಿಂದ ಕೊನೆಯಲ್ಲಿ ಶಾಪಾಶಯಗಳನ್ನು ಹೇಳಲಾಗಿದೆ.

ಸದಾಶಿವರಾಯನು ನಾಯಿಂದ (ನಾವಿದ) ವರ್ಗದವರಿಗೆ ಹೇರಳವಾಗಿ ಮಾನ್ಯಗಳನ್ನು ನೀಡಿರುವ ಸಂಗತಿಯನ್ನು ದಾಖಲಿಸಿರುವ ಶಾಸನಗಳು ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಬಹಳವಾಗಿ ದೊರಕಿವೆ. ಈ ಶಾಸನಗಳು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಇದರಿಂದ ವಿಜಯನಗರ ಸಾಮ್ರಾಜ್ಯದಲ್ಲಿ ನಾಯಿಂದರಿಗಿದ್ದ ಸ್ಥಾನಮಾನಗಳ ವಿವರ ತಿಳಿಯುತ್ತದೆ. ಇದು ಆ ಕಾಲದ ಸಾಮಾಜಿಕ ಚಿತ್ರಣವನ್ನು ಅರಿಯಲು ಉತ್ತಮವಾದ ಆಕರಗಳಾಗಿವೆ.

ಶಾಸನಪಾಠ

1 ಶುಭಮಸ್ತು
2 ಸ್ವಸ್ತಿಶ್ರೀ ವಿಜೆಯಾದ್ಯುದಯ[1] ಶಾಲಿವಾ
3 ಹನ ಶಕವರುಷ 1468 ನೆಯ ವಿ
4 ಶ್ವಾವಸು ಸಂವತ್ಸರದ ಆಷಾಡ[2] ಶು 1 ಲು
5 ಶ್ರೀಮ{೦}ನ್ಮಹಾರಾಜಾಧಿರಾಜ ರಾಜ (ರಾಜ) ಪರಮೇಶ್ವ
6 ರ ಶ್ರೀ ವೀರಪ್ರತಾಪ ಶ್ರೀ ವೀರ ಸದಾಶಿವ ದೇವರಾಯ
7 ಮಹಾರಾಯರಿಗೆ[3] ಕಾರ್ಯ್ಯಕ್ಕೆ ಕರ್ತರಾದ ರಾಮರಾಜ
8 ವೊಡೆಯರೂ ಸ್ವಾಮಿಯ ಕೆಲಸಿ ಕೊಂದೋಜಿಗೆ[4] ಮೆಚಿ ಹರಿಸಿ
9 ಬಿಟ[5] ಮಾ{೦}ನ್ಯ [।] ತಾಉ[6] ಆಳುವ ರಾಜ್ಯ ದೇಶದೊ
10 ಳಗಣ ನಾಯಿಂದ ಕೆಲಸಿಗಳಿಗೆ ಕುಳದೆ
11 ರೆ[7] ಮನೆದೆರಿಗೆ[8] ಸರ್ವಮಾ{೦}ನ್ಯ ಸುಂಕ ಸಾಜೆಗೆ[9] ಸರ್ವ್ವ
12 ಮಾ{೦}ನ್ಯ [।] ಯಿದಕೆ[10] ಆರೊಬ್ಬರ ಆಳುಪಿ
13 ತಾರ[11] ಹುರಿಸವ[12] ತಿಂದವರು ತಂಮ

14 ತಂದ[13] ತಾಯ ವಾರಣಾಸಿಯಲಿ ಕೊಂ
15 ದ ಪಾಪಕೆ ಹೋಹರು [।] ಉಳಿಗಿತಿಯ[14]
16 ನರಕಪಾಲದಲಿ[15] ಸುರೆಯನು[16] ಸೇವಿಸುತ
17 ತೆಂಕಮೊಖವಾಗಿ[17] ಹೋಹರು [।]

ಅಡಿಟಿಪ್ಪಣಿಗಳು

1. ವಿಜಯಾಭ್ಯುದಯ
2. ಆಷಾಢ
3. ಮಹಾರಾಯರ
4. ಕೊಂಡೋಜಿಗೆ [ಇದು ಹನುಮಂತರಾಯರ ಹಸ್ತಪ್ರತಿಯಲ್ಲಿ ಕೊಂದೋಜಿಗೆ ಎಂದೇ ಇದ್ದರೂ ಕೊಂಡೋಜಿಗೆ ಎಂದಿರಬೇಕೆಂದು ಎಚ್.ಎಂ. ನಾಗರಾಜರಾಯರು ತಿದ್ದುಪಡಿ ಸೂಚಿಸಿದ್ದಾರೆ]
5. ಮೆಚ್ಚಿ ಹರಸಿ ಬಿಟ್ಟ
6. ತಾವು
7. ಕುಳದೆರೆ = ಕುಲದ ವೃತ್ತಿಗೆ ಸಂಬಂಧಿಸಿದ ತೆರಿಗೆ [ಹನುಮಂತರಾಯರು Community Tax ಎಂದು ಹೇಳಿದ್ದಾರೆ. ಈ ಅರ್ಥವನ್ನು ಅಂಗೀಕರಿಸಿದರೆ ಈ ಶಬ್ದ ಕುಲದೆರೆ ಎಂದು ಇರಬೇಕು]
8. ಮನೆದೆರಿಗೆ= ಮನೆಯ ಮೇಲೆ ಹಾಕುವ ತೆರಿಗೆ [ಹನುಮಂತರಾಯರು House Tax ಎಂದು ಹೇಳಿದ್ದಾರೆ].
9. ಸಾರಿಗೆ [ಶಾಸನದಲ್ಲಿನ ಸಾಱಿಗೆ ಎಂಬ ಶಬ್ದರೂಪ ವಿಚಾರಾರ್ಹ. ಹನುಮಂತರಾಯರು ಸಾರಿಗೆ= Land Tax ಎಂದು ಹೇಳಿದ್ದಾರೆ]
10. ಇದಕೆ [=ಇದನ್ನು (?)]
11. ಯಾರೊಬ್ಬರು ಅಳಿಸಿದರೂ : ಯಾರೊಬ್ಬರು ಅಳಿಪಿದರು [=ಯಾರೊಬ್ಬರು ನಾಶಮಾಡಿದರೂ]
12. ಪುರೀಷ (ಸಂ) > ಪುರಿಸ > ಹುರಿಸ (ತದ್ಭವ) = ಅಮೇಧ್ಯ, ಮಲ
13. ತಮ್ಮ ತಂದೆ
14. ಉಳಿಗಿತಿ=ಚಾಂಡಾಲಿ (?) [ಈ ಶಬ್ದರೂಪ ವಿಚಾರಾರ್ಹ. ಹನುಮಂತರಾಯರು Maid Servent ಎಂದು ಬರೆದಿದ್ದಾರೆ. ಆದರೆ ಸಂದರ್ಭದ ಬಲದಿಂದ ಚಾಂಡಾಲಿ ಎಂಬ ಅರ್ಥವೇ ಸಮರ್ಥನೀಯ. ಇದಕ್ಕೆ ಪೋಷಕವಾಗಿ ಕಥೆಯೊಂದಿದೆ. ಇದರ ಬಗೆಗೆ ನೋಡಿ : ಶಾಸನ ಸಾಹಿತ್ಯ ಸಂಚಯ–(ಸಂ) ಎ. ಎಂ. ಅಣ್ಣೀಗೇರಿ, ಮೇವುಂಡಿ ಮಲ್ಲಾರಿ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ–1961, ಪುಟ 23].
15. ನರಕಪಾಲ = ಮನುಷ್ಯನ ತಲೆಬುರುಡೆ
16. ಸುರೆ= ಮದ್ಯ
17. ತೆಂಕಮೊಖವಾಗಿ = ದಕ್ಷಿಣ ದಿಕ್ಕಿಗೆ ಮುಖಮಾಡಿಕೊಂಡು.

3

ಕೊಪ್ಪಳ ಜಿಲ್ಲೆಯಲ್ಲಿರುವ ಕೃಷ್ಣದೇವರಾಯನ ಶಾಸನಗಳ ವೈಶಿಷ್ಟ್ಯತೆಗಳು

ಶ್ರೀಮತಿ ಪದ್ಮಜಾ ದೇಸಾಯಿ

ಕರ್ನಾಟಕವನ್ನು ಆಳಿದ ಅನೇಕ ರಾಜಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯವು ಒಂದು ರಾಜಮನೆತನವಾಗಿದೆ. ಈ ಮನೆತನ ತನ್ನದೇ ಆದ ಕೀರ್ತಿಪತಾಕೆಯನ್ನು ಹಾರಿಸಿ ಇತಿಹಾಸದ ಪುಟಗಳಲ್ಲಿ ಪ್ರಜ್ವಲಿಸುವಂತೆ ಮಾಡಿತು.[1] ದಕ್ಷಿಣ ಭಾರತದಲ್ಲಿ ಹೊಯ್ಸಳರ ಅಧಿಪತ್ಯ ಕೊನೆಗೊಂಡ ನಂತರ ಇಸ್ಲಾಂ ದಾಳಿಯನ್ನು ತಡೆಗಟ್ಟಿ ಹಿಂದೂ ಧರ್ಮವನ್ನು ರಕ್ಷಿಸುವ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯವು ಕ್ರಿ.ಶ. 1336ರಲ್ಲಿ ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಸಂಗಮ ವಂಶದ ಹರಿಹರ ಬುಕ್ಕರಿಂದ ಈ ಸಾಮ್ರಾಜ್ಯ ಸ್ಥಾಪನೆಯಾಯಿತು.[2] ಈ ಶ್ರೇಷ್ಠ ಆದರ್ಶವನ್ನಿಟ್ಟುಕೊಂಡು ಉದಯಿಸಿದ ಈ ಸಾಮ್ರಾಜ್ಯವು ಹದಿನಾಲ್ಕನೆಯ ಶತಮಾನದಲ್ಲಿ ಪ್ರಖ್ಯಾತ ಹಾಗೂ ವಿಶಾಲ ಸಾಮ್ರಾಜ್ಯವೆನಿಸಿ ಬೆಳೆಯಲಾರಂಭಿಸಿತು. ವಿಜಯನಗರ ಸಾಮ್ರಾಜ್ಯವು ಕರ್ನಾಟಕದ ಭವ್ಯ ಪರಂಪರೆಯನ್ನು ಸಾರಿತು. ಅದು ಕನ್ನಡಿಗರ ಸಾಹಿತ್ಯ, ಸಂಸ್ಕೃತಿ, ಸಂಗೀತ ಹಾಗೂ ಶಿಲ್ಪ ಕಲೆಗಳ ಮಹೋನ್ನತಿಯನ್ನು ಸಾರಿದ ಸುವರ್ಣ ಕಾಲ.[3] ವಿಜಯನಗರದ ಅರಸರು ಸಾಮ್ರಾಜ್ಯದ ಸರ್ವೋತೋಮುಖ ಪ್ರಗತಿಗೆ ಕಾರಣರಾದರು. ಅನೇಕ ವಿದೇಶಿ ಪ್ರವಾಸಿಗರು ಇವುಗಳನ್ನೆಲ್ಲಾ ನೋಡಿ ಹೊಗಳಿದ್ದಾರೆ.[4] ಸುಮಾರು ಎರಡು ಶತಮಾನಗಳಿಗೂ ಹೆಚ್ಚು ಕಾಲ ರಾಜಕೀಯ ಅಸ್ಥಿರತೆಯನ್ನು ತೊಡೆದುಹಾಕಿ ವಿಜಯನಗರವು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ.[5] ವಿಜಯನಗರ ಸಾಮ್ರಾಜ್ಯದ ಧ್ರುವತಾರೆ ಎನಿಸಿರುವ ಕೃಷ್ಣದೇವರಾಯ ಆ ವಂಶದ ಮೇಲೆ ತನ್ಮೂಲಕ ಆ ಕಾಲದ ಇತಿಹಾಸದ ಮೇಲೆ ತನ್ನದೇ ಆದ ಪ್ರಭಾವ ಬೀರಿದ ಅರಸನಾಗಿದ್ದಾನೆ. ಕೃಷ್ಣದೇವರಾಯ ದಕ್ಷಿಣ ಭಾರತದ ಅರಸರಲ್ಲೇ ಅತ್ಯಂತ ಶ್ರೇಷ್ಠ ದೊರೆ ಎಂದರೆ ತಪ್ಪಾಗಲಾರದು. ಪರಮಸಹಿಷ್ಣುವಾದ ಕೃಷ್ಣದೇವರಾಯನು ಎಲ್ಲಾ ಧರ್ಮಗಳನ್ನು ಗೌರವಿಸುತ್ತಿದ್ದನು. ಪಾಳುಬಿದ್ದ ಶೈವ, ವೈಷ್ಣವ ದೇವಾಲಯಗಳನ್ನು ದುರಸ್ತಿಗೊಳಿಸಿದ್ದನ್ನು ಮತ್ತು ಅವುಗಳಿಗೆ ನೀಡಿದ ದಾನದತ್ತಿಗಳನ್ನು ಶಾಸನಗಳು ಉಲ್ಲೇಖಿಸುತ್ತವೆ.[6]

ಅಶೋಕನ ಕಾಲದಿಂದ ಶಾಸನಗಳನ್ನು ಕಾಣಬಹುದು. ಅದೇ ರೀತಿ ವಿವಿಧ ರಾಜಮನೆತನಗಳಿಗೆ ಸೇರಿದ ಹಲವಾರು ಶಾಸನಗಳು ದೊರೆತಿವೆ. ಕೊಪ್ಪಳ ಜಿಲ್ಲೆಯಲ್ಲಿ ಅಶೋಕನ ಶಾಸನ ದೊರೆತಿರುವುದು ಹೆಮ್ಮೆಯ ವಿಷಯ. ಈ ಶಾಸನಗಳು ಅಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಸಿಕೊಡುವುದರಲ್ಲಿ ಸಹಕಾರಿಯಾಗಿವೆ.[7] ಪ್ರಸ್ತುತ ಲೇಖನದಲ್ಲಿ 'ಕೊಪ್ಪಳ ಜಿಲ್ಲೆಯಲ್ಲಿರುವ ಕೃಷ್ಣದೇವರಾಯನ ಶಾಸನಗಳು ವೈಶಿಷ್ಟ್ಯಗಳು' ಎಂಬ ವಿಷಯದ ಬಗ್ಗೆ ಚರ್ಚಿಸಲಾಗುವುದು. ಕ್ರಿ.ಶ.1512–1527ರ ವರೆಗಿನ ಅವಧಿಯ ಶಾಸನಗಳನ್ನು ಗಮನಿಸಲಾಗುವುದು.

ಕೊಪ್ಪಳ ಜಿಲ್ಲೆಯಲ್ಲಿ ಕೃಷ್ಣದೇವರಾಯನ ಎಂಟು ಶಾಸನಗಳು ದೊರೆತಿವೆ. ಅವುಗಳಲ್ಲಿ ಏಳು ಶಿಲಾಶಾಸನಗಳು ಒಂದು ಮಾತ್ರ ತಾಮ್ರಪಟಶಾಸನವಾಗಿದೆ. ಆ ಎಂಟು ಶಾಸನಗಳ ಪೈಕಿ ಕೊಪ್ಪಳದಲ್ಲಿ ಆರು ಶಾಸನಗಳು, ಗಂಗಾವತಿ ತಾಲೂಕಿನಲ್ಲಿ ಎರಡು ಶಾಸನಗಳು ದೊರೆತಿವೆ. ಈ ಎಂಟು ಶಾಸನಗಳು ಕುತೂಹಲಕಾರಿಯಾದ ಮಾಹಿತಿ ಒದಗಿಸುತ್ತವೆ.[8]

ಮೊದಲನೆಯದಾಗಿ ಕೊಪ್ಪಳ ತಾಲೂಕಿನ ಗೊಂಡಬಾಳು ಗ್ರಾಮದ ಕೋಟೆಯಲ್ಲಿರುವ ಶ್ರೀಕಂಠಯ್ಯ ಬನ್ನಿಮಠ ಅವರ ಮನೆ ಬಳಿಯಿರುವ ಶಾಸನ. ಆಂಗೀರಸ ಸಂವತ್ಸರದ ಭಾದ್ರಪದ ಶು.5 ಎಂದಿದ್ದು ಕೃಷ್ಣದೇವರಾಯನ ಆಳ್ವಿಕೆಯನ್ನು ತಿಳಿಸುತ್ತದೆ. ಹೀಗಾಗಿ ಇದರ ಕಾಲ 4-9-1512 ಆಗಿರುತ್ತದೆ. ಕೃಷ್ಣದೇವರಾಯನು ಗೊಂಡಬಾಳು ಅಗ್ರಹಾರವನ್ನು ಪ್ರಭಾಕರ ಎಂಬುವವನಿಗೆ ದಾನ ನೀಡಿದಂತೆ ಹೇಳಿದೆ. ಈ ಗ್ರಾಮದ ಎಲ್ಲೆಯನ್ನು ವಿಸ್ತಾರವಾಗಿ ಹೇಳಿದೆ. ಈ ಶಾಸನವನ್ನು ಬರೆದವನು ಕೂಪಣದ ಕಮ್ಮಾರೋಜನ ಮಗ ರಾಮೋಜ ಎಂದಿದೆ.

ಈ ಶಾಸನದ ವಿಶೇಷತೆ ಎಂದರೆ ಗೊಂಡಬಾಳು ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ ಪ್ರಭಾಕರ ಎಂಬುವವನಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ನಂತರ ಈ ಗ್ರಾಮದ ಗಡಿಪ್ರದೇಶಗಳನ್ನು ವಿವರಿಸುತ್ತದೆ. ಯಾವುದೇ ಒಂದು ಶಾಸನವು ಕವಿಯಿಂದ ಶಬ್ದರೂಪ ಪಡೆದು ಲಿಪಿಕಾರನಿಂದ ಮೂರ್ತರೂಪ ಪಡೆಯುತ್ತದೆ. ವಿಜಯನಗರದ ಪ್ರಸಿದ್ಧ ಅರಸು ಕೃಷ್ಣದೇವರಾಯನ ಶಾಸನಗಳಲ್ಲಿ ಕವಿ, ಬರಹಗಾರ ಶಿಲ್ಪ ಎಂಬ ಹೆಸರುಗಳು ದೊರೆಯುತ್ತವೆ. ಗೊಂಡಬಾಳು ಗ್ರಾಮದ ಶಾಸನವನ್ನು ಬರೆದವನು ಕೂಪಣದ ಕಂಮರ ಓಜನ ಮಗ ರಾಮೋಜ ಶ್ರೀ ಎಂಬುವವನಾಗಿದ್ದಾನೆ. ಓಜ ಎಂಬುವುದು ಕಲ್ಲುಕುಟಿಗ ವಂಶದವರು ಎಂದು ತಿಳಿಯಬಹುದಾಗಿದೆ. ಉದಾ: ವಿರೋಜ, ದಾಸೋಜ, ರಾಮೋಜ ಈ ರೀತಿಯ ಹೆಸರುಗಳನ್ನು ಶಾಸನಗಳಲ್ಲಿ ಕಾಣುತ್ತೇವೆ. ಈ ಶಾಸನದಲ್ಲಿ ಸ್ಥಳೀಯ ಲಿಪಿಕಾರರು ಮತ್ತು ಬರಹಗಾರರು ಇರುವ ವಿವರಗಳು ದೊರಕಿರುವುದು ಈ ಶಾಸನದ ಗಮನಾರ್ಹವಾದ ಅಂಶವಾಗಿದೆ.[9]

ಬಂಡಿ ಹರ್ಲಾಪುರದಲ್ಲಿ ದೊರೆತಿರುವ ಶಾಸನವು ಆಂಜನೇಯ ದೇವಾಲಯದ ಬಳಿ ಗದ್ದೆಯಲ್ಲಿ ದೊಡ್ಡಗುಂಡಿನ ಮೇಲಿರುವ ಶಾಸನ. ಈ ಶಾಸನದಲ್ಲಿ ಶಾಲಿವಾಹನ ಶಕ. 1435ನೆಯ ಶ್ರೀಮುಖ ಸಂವತ್ಸರದ ಚುತ್ರ ಶು.5 ಎಂದಿದ್ದು ಕ್ರಿ.ಶ. 12.03.1513ಕ್ಕೆ ಸರಿಹೊಂದುತ್ತದೆ. ಕೃಷ್ಣರಾಯ ಮಹಾರಾಯನು ಶ್ರೀ ವಿಠಲ ದೇವರ ಅಮೃತಪಡಿ, ನೈವಿಧ್ಯ, ಅಂಗಭೋಗ, ರಂಗಭೋಗ, ಫಾಲ್ಗುಣ ಮಾಸ, ವೈಶಾಖದ ರಥೋತ್ಸವ, ನಿತ್ಯಪಕ್ಷಮಾಸ ಮತ್ತು ಸಂವತ್ಸರದ ಉತ್ಸವಗಳಿಗೆ ನಿತ್ಯ ನೈಮಿತ್ತಿಕ ದೀಪಾರಾಧನೆ ಮುಂತಾದ ಪುಣ್ಯ ತಿಥಿಗಳಲ್ಲಿ ಮಾಡುವ ಮಹಾಪೂಜೆ, ಮಹಾನೈವಿಧ್ಯತೆಯ ಹುಲಿಗೆಯ ಮಾಗಣಿಗೆ ಸಲುವ ಹರಿಹರಪುರವನ್ನು ಸಮರ್ಪಿಸುತ್ತಾನೆ.

ಈ ಶಾಸನದ ವಿಶೇಷತೆಯೆಂದರೆ ವಿಠಲ ದೇವಾಲಯದಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳನ್ನು ವಿವರಿಸುತ್ತದೆ. ಶ್ರೀವೈಷ್ಣವ ಪ್ರಭಾವಕ್ಕೆ ಒಳಗಾಗಿದ್ದ ಈ ದೇವಾಲಯದಲ್ಲಿ ನಿತ್ಯ ಪೂಜೆಯು, ದೀಪ ಹಚ್ಚುವುದು, ಅಭಿಷೇಕ ಪುಷ್ಪ ಸಮರ್ಪಣೆ, ಅಂಗಭೋಗ, ರಂಗಭೋಗ, ನೈವೇದ್ಯ, ಆರತಿ ಬೆಳಗಿಸುವುದು ಮತ್ತು ಇತರೆ ಕಾರ್ಯಗಳನ್ನು ನೆರವೇರಿಸಿ ಸಾಂಗವಾಗಿ ನಡೆಯಿಸಲಾಗುತ್ತಿತ್ತು. ಎಣ್ಣೆ ಮತ್ತು ತುಪ್ಪದ ದೀಪಗಳನ್ನು ದೇವರಿಗೆ ಹಚ್ಚಿ ಅಭಿಷೇಕದ ನಂತರ ಸುಗಂಧ ದ್ರವ್ಯ, ಕರ್ಪೂರ, ಕುಂಕುಮ, ಕೇಸರಿ ಮುಂತಾದವುಗಳಿಂದ ಉಪಚರಿಸಿ ನೃತ್ಯ ಮತ್ತು ಸಂಗೀತದ ಮೂಲಕ ದೇವರಿಗೆ ನಿತ್ಯಸೇವೆಯನ್ನು ಸಲ್ಲಿಸಲಾಗುತ್ತಿತ್ತು. ಇವುಗಳೊಂದಿಗೆ ಆಗಮಶಾಸ್ತ್ರದ ಉತ್ಸವಗಳನ್ನು ಆಚರಿಸುತ್ತಿದ್ದರು. ಹುಲಿಗಿ ಮಾಗಣಿಗೆ ಸಲ್ಲುವ ಹರಿಹರಪುರವನ್ನು ಕೃಷ್ಣದೇವರಾಯನು ದಾನವಾಗಿ ನೀಡುತ್ತಾನೆ.[10]

ಕಿಡಿದಾಳು ಗ್ರಾಮದಲ್ಲಿ ಶಾಸನ ದೊರೆತಿರುವ ಸ್ಥಳ ಆಂಜನೇಯ ದೇವಾಲಯದ ಮುಂದಿನ ಕಟ್ಟೆಯಲ್ಲಿರುವ ಶಾಸನ. ಶಾಸನೋಕ್ತ ಕಾಲವು ಶಾಲಿವಾಹನ ಶಕೆ 1436ನೆಯ ಭಾವ ಸಂವತ್ಸರದ ಆಶ್ವೀಜ ಶು. 3 ಗುರುವಾರವಾಗಿದ್ದು, ಇದು ಕ್ರಿ.ಶ. 1514ಕ್ಕೆ ಸರಿಹೊಂದುತ್ತದೆ. ಅಂಗ, ವಂಗ, ಕಲಿಂಗ, ಗುರ್ಜರ, ಮಗಧ, ಲಾಟ, ಕರ್ನಾಟಕ, ಗೌಳ, ಮಾಳವ,

ರೇವಣ, ಕೊಂಕಣ, ಬಡಗಣ, ಮೂಡಣ, ಪಾಂಚಾಳ, ಕೇರಳ, ಹಮ್ಮೀರ ಮತ್ತು ಸಿಂಹಳ ಈ ದೇಶಗಳಲ್ಲದೆ ಗಿರಿದುರ್ಗ, ವನದುರ್ಗ, ಜಲದುರ್ಗಗಳ ಗದ್ದೆಗಳನ್ನು ಗೆದ್ದಯಿಶ್ವರ ನಾರಸಿಂಹನ ಮಗನಾದ ಶ್ರೀಕೃಷ್ಣದೇವರಾಯನು ಹೊಸವೂರು ಮಹಮಯಿಯ ಅಮೃತಪಡಿ ನೈವೇದ್ಯಕ್ಕೆ ಪಡುವ ನಾಡೊಳಗಣ ಕೂಪಣ ಪಿಂತಯಕೆ ಸೇರಿದ ಕಿಡಿದಾಳು ಗ್ರಾಮವನ್ನು ನೀಡಿರುವ ವಿಷಯವನ್ನು ಉಲ್ಲೇಖಿಸುತ್ತವೆ.[11]

ಈ ಗ್ರಾಮದ ಶಾಸನದ ವಿಶೇಷತೆಯೆಂದರೆ ಗಣರಾಜ್ಯಗಳ ಉಲ್ಲೇಖವಿದೆ. ಉದಾ: ಅಂಗ, ವಂಗ, ಕಳಿಂಗ, ಮಗಧ ಮತ್ತು ಮೂರು ವಿಧದಲ್ಲಿರುವ ದುರ್ಗಗಳನ್ನು ಹೆಸರಿಸಲಾಗಿದೆ. ಅವುಗಳು ಗಿರಿದುರ್ಗ, ಜಲದುರ್ಗ ಮತ್ತು ವನದುರ್ಗ. ಹೊಸವೂರು ಮಹಮಾಯಿ ಅಮೃತಪಡಿ ನೈವೀಧ್ಯಕ್ಕೆ ಕೂಪಣದ ಪಿಂತಯಕೆ ಸೇರಿದ ಈ ಒಂದು ಕಿಡಿದಾಳು ಗ್ರಾಮವನ್ನು ದಾನ ನೀಡಿರುವುದನ್ನು ಈ ಶಾಸನವು ಉಲ್ಲೇಖಿಸುತ್ತದೆ.[12]

ಹತೋಟಿ ಗ್ರಾಮದ ಹಾಳೂರಿನ ದಾರಿಯ ಪಕ್ಕದ ಮಂಟಪದಲ್ಲಿರುವ ಗುಂಡಿನ ಮೇಲಿರುವ ಶಾಸನ, ಶಾಸನದ ಕಾಲವು ಶಾಲಿವಾಹನ ಶಕೆ 1436ನೆಯ ಭಾವ ಸಂವತ್ಸರದ ಫಾಲ್ಗುಣ ಶು.3 ಶನಿವಾರವೆಂದಿದ್ದು ಇದು ಕ್ರಿ.ಶ. 16–2–1515ರ ಶುಕ್ರವಾರಕ್ಕೆ (ಶನಿವಾರವಲ್ಲ) ಸರಿಹೊಂದುತ್ತದೆ. ಕೃಷ್ಣರಾಯ ಮಹಾರಾಯನು ಬಾಲಕೃಷ್ಣ ದೇವರ ಪ್ರತಿಷ್ಠಾ ಕಾಲದಲ್ಲಿ ದೇವರ ಅಮೃತಪಡಿ, ಅಂಗಭೋಗ, ರಂಗಭೋಗ, ಚೈತ್ರಮಾಸದ ರಥೋತ್ಸವ ನಿತ್ಯ ನೈಮಿತ್ತಿಕ, ದೀಪೋತ್ಸವ, ಪುಣ್ಯ ದಿನಗಳು, ದಿನ, ಪಕ್ಷ ಮಾಸಗಳಲ್ಲಿ ನಡೆಯುವ ಉತ್ಸವಗಳ ವೆಚ್ಚಕ್ಕಾಗಿ ಹುಲಿಗಿಯ ಮಾಗಣಿಯಲ್ಲಿನ ಅತ್ತಿವಟ್ಟಿಯ ಗ್ರಾಮವನ್ನು ಸಮರ್ಪಿಸುತ್ತಾನೆ.

ಈ ಗ್ರಾಮಕ್ಕೆ ಸಲ್ಲುವ ನೀರಾಡಂಭ, ಕಾಡಾರಂಭ, ಅಲ್ಲದೆ ಕಾಣುವ ಖಾಲಾಹೊಸಳ್ಳಿ, ಸೆಣಬಿನ ಕಟಿಗೆಪೇಟೆ ಮುಂತಾದವುಗಳಿಂದ ಉತ್ಪನ್ನವಾದ ಸುಂಕ, ತಳವಾರಿಕೆ, ಸುವರ್ಣಾದಾಯ, ಭತ್ತದಾಯ ಮುಂತಾದವನ್ನು ರಾಯನ ತಂದೆ ನರಸನಾಯಕನಿಗೂ ಅವನ ತಾಯಿ ನಾಗಲಾಂಬಿಕೆ ಅಂಮನವರಿಗೂ ಧರ್ಮವಾಗಬೇಕೆಂದು ಮೇಲೆ ಉಲ್ಲೇಖಿಸಿದೆ. ಕಾಲದಲ್ಲಿ ಬಾಲಕೃಷ್ಣದೇವರು ಪ್ರತಿಷ್ಠೆಯ ಕಾಲದಲ್ಲಿ ದೇವರಿಗೆ ಸಮರ್ಪಿಸಿದಂತೆ ಉಲ್ಲೇಖಿಸಿದೆ.[13]

ಹತೋಟಿ ಗ್ರಾಮದ ಶಾಸನವು ಹಲವು ದೃಷ್ಟಿಗಳಿಂದ ಬಹಳ ಮುಖ್ಯವಾಗಿದೆ. ಮೊದಲನೆಯದಾಗಿ ಅತ್ತಿವಟ್ಟಿ ಗ್ರಾಮವು ಅಲ್ಲಿತ್ತು ಎಂಬುದು ಈವರೆಗೆ ತಿಳಿದಿರಲಿಲ್ಲ. ಈ ಶಾಸನವು ದೊರಕಿದ ಸ್ಥಳವಾದ ಹಾಳೂರು ಹತೋಟಿಯೇ ಶಾಸನಸ್ಥ ಅತ್ತಿವಟ್ಟಿ ಗ್ರಾಮವಾಗಿದ್ದು, ಇದು ತುಂಗಭದ್ರೆಯ ಉತ್ತರ ದಡದಲ್ಲಿರುವ ನರಗಡ್ಡಿ ಮಠದ ದಾರಿಯಲ್ಲಿದೆ. ಇಂದಿಗೂ ಈ ಸ್ಥಳದಲ್ಲಿ ಮನೆಗಳ ಅವಶೇಷಗಳಿದ್ದು, ಸಮೀಪದ ಗುಡ್ಡದ ಮೇಲೆ ಕಾವಲುಗೋಪುರಗಳು ಮಂಟಪಗಳು ಇಂದಿಗೂ ಉಳಿದಿವೆ.

ಎರಡನೆಯದಾಗಿ ಹಂಪಿಯ ಬಾಲಕೃಷ್ಣನ ಮೂಲ ಮೂರ್ತಿಯ ಬಗೆಗೆ ಇದ್ದ ಗೊಂದಲವನ್ನು ನಿವಾರಿಸಲು ಈ ಶಾಸನ ನೆರವಾಗುತ್ತದೆ. ಸಿ. ಶಿವರಾಮಮೂರ್ತಿಯವರ ಹೇಳಿಕೆಯ ಪ್ರಕಾರ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದ ಮೂರ್ತಿಯು ಪೀಠದಲ್ಲಿ ಕುಳಿತ ಕೃಷ್ಣನ ಮೂರ್ತಿಯು ಪೀಠದಲ್ಲಿ ಕುಳಿತ ಕೃಷ್ಣನ ಮೂರ್ತಿಯೆಂದು ತಿಳಿದುಬರುತ್ತದೆ.

ಎಸ್. ರಾಜಶೇಖರವರ ಹೇಳಿಕೆಯ ಪ್ರಕಾರ ಬಾಲಕೃಷ್ಣನ ದೇವಾಲಯದ ಮುಖಮಂಟಪದಲ್ಲಿರುವ ಕಂಬದಲ್ಲಿ ಅಂಬೆಗಾಲ ಬಾಲಕೃಷ್ಣಮೂರ್ತಿಯನ್ನು ಮತ್ತು ಅದರ ಮುಂದೆ ತ್ರಿಭಂಗಿಯಲ್ಲಿ ನಿಂತಿರುವ ಕೃಷ್ಣದೇವರಾಯನ ಮೂರ್ತಿಯನ್ನು ಗುರುತಿಸಿರುವರು. ಈ ಕಾಲ್ಪನಿಕ ಆಧಾರಗಳನ್ನು ಹೊರತುಪಡಿಸಿದರೆ ಬಾಲಕೃಷ್ಣನ ಮೂರ್ತಿಯ ಬಗ್ಗೆ ಯಾವುದೇ ಸ್ಪಷ್ಟವಾದ ಆಧಾರಗಳಿಲ್ಲ. ಅತ್ತಿವಟ್ಟಿ ಶಾಸನದ ಮೇಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ಬಲಗೈಯಲ್ಲಿ ಬೆಣ್ಣೆ ಹಿಡಿದ ಅಂಬೆಗಾಲಿನ ಕೃಷ್ಣನ ಮೂರ್ತಿಯನ್ನು ಕೆತ್ತಲಾಗಿದೆ. ಈ ಶಾಸನವನ್ನು ಬಾಲಕೃಷ್ಣನ ಪ್ರತಿಷ್ಠೆಯಾದ ದಿನವೇ ಹಾಕಿಸಿರುವಂತೆ ಈ ಶಾಸನದ ಮೇಲೆ ಮತ್ತು ಕೆತ್ತಲಾಗಿರುವ ಮೂರ್ತಿಯು ಹಂಪಿಯ ಬಾಲಕೃಷ್ಣನ ಪ್ರತಿರೂಪವಾಗಿದೆ. ಶಿವರಾಮಮೂರ್ತಿಯವರು

ಹೇಳುವಂತೆ ಮದ್ರಾಸ್ ಮ್ಯೂಸಿಯಂನಲ್ಲಿರುವ ಮೂರ್ತಿಯು ಮೂಲಮೂರ್ತಿಯಲ್ಲ. ಯಾವುದೋ ಕಾರಣದಿಂದ ಮೂಲಮೂರ್ತಿಯು ಭಗ್ನವಾಗಿರಬಹುದು. ಆಗ ಅದರ ಸ್ಥಳದಲ್ಲಿ ಕುಳಿತ ಭಂಗಿಯ ಕೃಷ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.[14]

ಮೂರನೆಯದಾಗಿ, ಬಾಲಕೃಷ್ಣನ ದೇವಾಲಯದಲ್ಲಿ ನಡೆಯುತ್ತಿದ್ದ ಆಚರಣೆಗಳ ಬಗೆಗೂ ಈ ಶಾಸನ ಮಾಹಿತಿಯನ್ನು ನೀಡುತ್ತದೆ. ಅಮೃತಪಡಿಯ, ಅಂಗರಂಗ, ವೈಭವ, ಚೈತ್ರಮಾಸದ ರಥೋತ್ಸವ ನಿತ್ಯ ನೈಮಿತ್ತಿಕ ದೀಪಾರಾಧನೆಗಳು ಪಂಚಪರ್ವಿಯುಗಾದಿಮನಾದಿ ಆಯನ ಗಜಛಾಯಾಪಥವೆಂಬ ಪದ ಇದುವರೆಗೂ ಯಾವ ಶಾಸನದಲ್ಲೂ ಬಳಕೆಯಾಗಿಲ್ಲ. ಹಬ್ಬ-ಉತ್ಸವ ಮತ್ತು ಜಾತ್ರೆಗಳ ಸಂದರ್ಭದಲ್ಲಿ ದೇವರ ಮೆರವಣಿಗೆ ಅಥವಾ ಪಥಸಂಚಲನವೆಂದು ಹೇಳಬಹುದು. ದೇವರ ಉತ್ಸವ ಮೂರ್ತಿಯನ್ನು ಬೆನ್ನ ಮೇಲೆ ಹೊತ್ತು ಸಾಗುವುದನ್ನು ಈ ಶಬ್ದ ಸೂಚಿಸುತ್ತದೆ. ಈ ರೀತಿಯ ಆನೆಗಳ ನಿರ್ವಹಣೆಗೆ ಮಾವುತರ ಜೀವನಕ್ಕೆ ದಾನದತ್ತಿಗಳನ್ನು ನೀಡುವ ಪದ್ಧತಿಯನ್ನು ಈ ಶಬ್ದ ಸೂಚಿಸುತ್ತದೆ.

ನಾಲ್ಕನೆಯದಾಗಿ ಮತ್ತು ಮುಖ್ಯವಾಗಿ ಈ ಶಾಸನದ ಮಹತ್ವವೇನೆಂದರೆ ಆ ಕಾಲದ ಕೃಷಿ ವ್ಯವಸ್ಥೆಯ ಬಗ್ಗೆ ಈ ಶಾಸನವು ಬೆಳಕು ಚೆಲ್ಲಿರುವುದನ್ನು ಕಾಣಬಹುದಾಗಿದೆ. ಶಾಸನಗಳು ನಮ್ಮ ನಾಡಿನ ಮೂಲ ಕಸುಬಾದ ಕೃಷಿಯ ಬಗ್ಗೆ ಹೆಚ್ಚು ಮಾಹಿತಿಯನ್ನೇ ನೀಡುತ್ತಿಲ್ಲ. ಶಾಸನ ಪಾಠದಲ್ಲಿ ದಾನದ ವಿವರವನ್ನು ನೀಡುವಾಗ ಹುಲಿಗಿಯ ಮಾಗಣಿಯವೊಳಗಣ ಅತ್ತಿವಟ್ಟಿ ಎಂಬ ಗ್ರಾಮಕ್ಕೆ ಸಲ್ಲುವ ನೀರಾಡಂಭ, ಕಾಡಾರಂಭ, ಗಂಗಾಗವಿದೊಳಗಣಾಕಾರವ ಖಾಲಾ ಹೊಸಳ್ಳಿ ಸೆಣಬಿನ ಕಟಿಗೆಪೇಟೆವೊಳಗಾದ ಎಂದು ಉಲ್ಲೇಖಿಸುತ್ತದೆ. ಇಲ್ಲಿನ ಖಾಲಾಹೊಸಳ್ಳಿ ಬಹುಶಃ ಹುಲಿಗಿ ಬಳಿ ಇರುವ ಹೊಸಳ್ಳಿ ಆಗಿರಬಹುದು. ಈ ಸೆಣಬಿನಕಟಿಗೆಪೇಟೆಯೂ ಅದರದ್ದೇ ಎಂದು ಊಹಿಸಬೇಕಷ್ಟೇ. ಅದು ಎಲ್ಲಾದರೂ ಇರಲಿ ಈ ಸೆಣಬಿನಕಟಿಗೆಪೇಟೆಯು ಎಂಬ ಪದವೇ ಬಹಳ ಅಪರೂಪದ್ದು ವಿಜಯನಗರದ ಅರಸರ ಕಾಲದ ಸೆಣಬಿನ ಕಟಿಗೆಯನ್ನು ಮಾರುವ ಪೇಟೆಗಳು ಇದ್ದವೆಂಬುದನ್ನು ಈ ಪದ ಸೂಚಿಸುತ್ತದೆ. ಸೆಣಬು ಇಂದು ಗೋಣಿಚೀಲಗಳ ಮತ್ತು ತಾಡಪಾಟುಗಳ ತಯಾರಿಕೆಯಲ್ಲಿ ಮುಖ್ಯಪಾತ್ರ ವಹಿಸುತ್ತದೆ. ಹಾಗೆಯೇ ಕೃಷಿ ವ್ಯವಸ್ಥೆಯಲ್ಲಿಯೂ ಸೆಣಬಿಗೆ ಮಹತ್ವವಿದೆ.[15]

ಸೆಣಬು ನೀರಿನಲ್ಲಿ ಕೊಳೆತರೆ ಬಹಳ ಉತ್ತಮವಾದ ಸಾವಯವ ಗೊಬ್ಬರವಾಗುತ್ತದೆ. ಇಂದಿಗೂ ಹಂಪಿ-ಕಮಲಾಪುರ ಮತ್ತು ಕಂಪ್ಲಿ ಪರಿಸರದಲ್ಲಿ ಸೆಣಬನ್ನು ಗೊಬ್ಬರವನ್ನಾಗಿ ಬಳಸುತ್ತಿದ್ದಾರೆ. ಈ ಪದ್ಧತಿಗೆ ಸುಮಾರು ಐದುನೂರು ವರ್ಷಗಳ ಇತಿಹಾಸವೇ ಇದೆಯೆಂದು ಈ ಶಾಸನದಿಂದ ತಿಳಿದುಬರುತ್ತದೆ. ಇದು ರೈತರಿಗೆ ಅವಶ್ಯಕವಾದ್ದರಿಂದ ಪ್ರಾಚೀನ ಕಾಲದಲ್ಲಿ ವಾಣಿಜ್ಯ ಬೆಳೆಯಾಗಿಯೂ ರೂಢಿಯಲ್ಲಿತ್ತು. ಇವರ ಮಾರಾಟವು ಒಂದು ಲಾಭದಾಯಕ ಬೆಳೆಯಾಗಿರಬೇಕು. ಇದರಿಂದ ರಾಜ್ಯದ ಬೊಕ್ಕಸಕ್ಕೂ ಸಾಕಷ್ಟು ಆದಾಯವಿದ್ದಿರಬೇಕು. ಇಂದು ಕೃತಕ ರಸಗೊಬ್ಬರಗಳ ಬಳಕೆ ಹೆಚ್ಚಾಗಿದ್ದರೂ ಜನಮನದಲ್ಲಿ ಪಾರಂಪರಿಕ ಬೇಸಾಯದ ಅಂಶಗಳು ಇಂದಿಗೂ ಉಳಿದುಕೊಂಡು ಬಂದಿವೆಯೆಂಬುದನ್ನು ಸೆಣಬಿನ ಉದಾಹರಣೆಗಳೊಂದಿಗೆ ಹೇಳಬಹುದು.

ಜಾಗತೀಕರಣ ಮತ್ತು ಆಧುನೀಕರಣದ ನೆಪದಲ್ಲಿ ಇಂದಿನ ರೈತರು ಕೃತಕ ಗೊಬ್ಬರಗಳನ್ನು ಬಳಸಿ ತಮ್ಮ ನೆಲೆ ಮತ್ತು ಹಣ ಎರಡೂ ಹಾಳು ಮಾಡುತ್ತಿರುವ ಇವತ್ತಿನ ಪರಿಸ್ಥಿತಿಯಲ್ಲಿ. ಪರಿಸರದಲ್ಲಿ ದೊರೆಯುವ ಸಸ್ಯಗಳಿಂದಲೇ ಉತ್ತಮ ಗೊಬ್ಬರ ತಯಾರಿಸಿ ಅಧಿಕ ಇಳುವರಿ ಪಡೆಯುತ್ತಿದ್ದ ಪುರಾತನ ಬೇಸಾಯ ಪದ್ಧತಿ ನಮಗಿಂದು ಮಾದರಿಯಾಗಬೇಕಾಗಿದೆ. ಈ ನೆಲವು ಮುಂದಿನ ತಲೆಮಾರಿಗೆ ಫಲವತ್ತತೆಯನ್ನು ಉಳಿಸಿಕೊಳ್ಳಬೇಕಾಗಿದೆ. ಹಂಪಿ ಪರಿಸರದಲ್ಲಿ ಇಂದಿಗೂ ಬಳಕೆಯಲ್ಲಿರುವ ಸೆಣಬಿನ ಬಳಕೆಗೆ ಐದುನೂರು ವರ್ಷಗಳಿಗಿಂತಲೂ ಹೆಚ್ಚು ಇತಿಹಾಸವಿದೆಯೆಂದು ಈ ಶಾಸನವು ವಿವರವಾಗಿ ತಿಳಿಸುತ್ತದೆ.[16]

ಗಿಣಗೇರಾ ಗ್ರಾಮದ ಆನೆಗೊಂದಿ ವಿಶ್ವಕರ್ಮ ಮಠದ ತಾಮ್ರಶಾಸನ (ಜಯಬೇರಿ), ಶಾಸನೋಕ್ತ ಕಾಲವು ಶಾಲಿವಾಹನ ಶಕೆ 1442ನೆಯ ವಿಕ್ರಮ ಶ್ರಾವಣ, ಶು. 10 ಎಂದಿದ್ದು, ಇದು ಕ್ರಿ.ಶ.ಸು. 25-7-1520 ಆಗಿರುತ್ತದೆ.

ಶಾಸನದಲ್ಲಿ ವಿದ್ಯಾನಗರ ಸಿಂಹಾಸನ ಕಾಳಹಸ್ತಚಾರ್ಯ ಹೆಸರಿನ ಸದ್ಯೋಜಾತ ಸ್ವಾಮಿಗೆ ವಿಜಯನಗರದ ರಾಜನಾದ ಶ್ರೀಕೃಷ್ಣದೇವರಾಯನು ತ್ರಿಮತಸ್ಥ ಬ್ರಾಹ್ಮಣರು. ಮಹಾಮಂಡಳೇಶ್ವರ ಬಂಗಾರು ತಿಮ್ಮರಾಜು ದಳವಾಯಿ ಜಯರೇಖೆಯನ್ನು ಬರೆಯಿಸಿ ಕೊಟ್ಟ ವಿಷಯವನ್ನು ತಿಳಿಸುತ್ತದೆ.

ಜಯರೇಖೆ ಬರೆಯಿಸಿಕೊಡಲು ಕಾರಣವನ್ನು ಹೀಗೆ ಹೇಳಿದೆ. ಆನೆಗೊಂದಿ ಸಂಸ್ಥಾನದಲ್ಲಿ ರೂಢಾಚಾರ್ಯರ ಮಠವಿತ್ತು. ಒಮ್ಮೆ ವಿರೂಪಾಕ್ಷ ರಥೋತ್ಸವಕ್ಕೆ ಅಂತರವಳ್ಳಿಯ ನಿರಂಜನಯ್ಯ ಮೂರು ಜಾವದಯ್ಯ ಎಂಬುವವರು ಬಂದು ಆನೆಗೊಂದಿ ಪೀಠ ತಮ್ಮದೆಂದು ವಾದಿಸುತ್ತಾರೆ. ಈ ಬಗ್ಗೆ ತಮ್ಮ ಬಳಿ ಇದಕ್ಕೆ ಸಂಬಂಧಿಸಿದಂತೆ ದಾಖಲೆಗಳು ಇವೆಯೆಂದು ಇವನ್ನು ತೋರಿಸದೆ ಹೋದಲ್ಲಿ ಸರ್ಕಾರಕ್ಕೆ 300 ಗದ್ಯಾಣ ಜುಲ್ಮಾನೆ ಕೊಡುತ್ತೇವೆಂದು ಹೇಳಿಕೆ ಕೊಡುತ್ತಾರೆ. ಮುಂದೆ ಕೆಲವು ಪತ್ರಗಳನ್ನು ಅಂತರವಳ್ಳಿಯವರು ತೋರಿಸುತ್ತಾರೆ. ಆದರೆ ಈ ಪತ್ರಗಳನ್ನು ಸಭಾಸದರು ಒಪ್ಪುವುದಿಲ್ಲ. ಹೀಗಾಗಿ ಸಭಾಸದರು ಹೀಗೆ ಸರಿಯಾದ ಪ್ರಶ್ನೆಗಳಿಲ್ಲದೆ ವ್ಯಾಜ್ಯವನ್ನು ಮಾಡಿದ್ದು ಏಕೆ? ಎಂದು ಪ್ರಶ್ನಿಸಿದಾಗ ತಿಳಿಯದೆ ಹಾಗೆ ಮಾಡಿದೆವೆಂದು ಅವರ ಹಿರಿಯರು ರೂಢಾಚಾರ್ಯರಿಗೆ ತಪ್ಪು ಕಾಣಿಕೆ ಕೊಡುತ್ತಿದ್ದರೆಂದು ಒಪ್ಪಿಕೊಳ್ಳುತ್ತಾರೆ. ಸಭೆಯಲ್ಲಿ ಕಾಗದ ಪತ್ರಗಳನ್ನು ಒಪ್ಪಿಸಲು ವಿಫಲವಾದ್ದರಿಂದ ಸದ್ಯೋಜಾತ ಸ್ವಾಮಿಗಳಿಗೆ ಅಂತರವಳ್ಳಿಯ ನಿರಂಜನಯ್ಯ ಹಾಗೂ ಮೂರು ಜಾತಸ್ವಾಮಿಗಳಿಗೆ ಅಂತರವಳ್ಳಿಯ ನಿರಂಜನಯ್ಯ ಹಾಗೂ ಮೂರು ಜಾವದಯ್ಯನ ಜಯಪತ್ರ ಬರೆದುಕೊಡಬೇಕೆಂದು ಆನೆಗೊಂದಿಯ ಮಠವನ್ನು ಮೂಲಪೀಠವೆಂದು ಒಪ್ಪಿಕೊಳ್ಳಬೇಕೆಂದು ನಿಯಮಿಸುತ್ತಾರೆ.

ಆ ರೂಡಾಚಾರ್ಯರೇ ಮೂಲಪೀಠಸ್ಥರು ಹಾಗೂ ಅವರ ವಂಶಸ್ಥರೇ ಆಹಾರ, ವ್ಯವಹಾರ, ಪಾಪ ಪ್ರಾಯಶ್ಚಿತ್ತವನ್ನು ಮಾಡುವುದಕ್ಕೆ ಬಾಧ್ಯರು ಎಂಬುದಾಗಿ ತಿಳಿಸುತ್ತಾರೆ. ಹಾಗೂ ಸರಕಾರಕ್ಕೆ ತಪ್ಪುಕಾಣಿಕೆಯಾಗಿ 300 ಗದ್ಯಾಣವನ್ನು ಅಂತರವಳ್ಳಿಯವರು ನೀಡುತ್ತಾರೆ. ಮುಂದೆ ಶಾಸನದಲ್ಲಿ ಕೆಲವು ವ್ಯಕ್ತಿಗಳ ಸಹಿಗಳಿವೆ. ಶಾಸನದಲ್ಲಿ ಕೃಷ್ಣದೇವರಾಯನ ಕಾಲದ್ದೆಂದು ಹೇಳಿದ್ದರೂ ಲಿಪಿಯ ಆಧಾರದಿಂದ ಇದು ಹದಿನೆಂಟನೆಯ ಶತಮಾನಕ್ಕೆ ಸೇರುತ್ತದೆ.[17]

ಕೊಪ್ಪಳದ ವೆಂಕಟರಮಣಸ್ವಾಮಿ ದೇವಾಲಯದದಲ್ಲಿರುವ ಶಾಸನ, ಶಾಲಿವಾಹನಶಕೆ 1443, ಉರುಶ (ವೃಷ) ವಯಿಶಾಖ ಸು.1ರಲ್ಲಿ ಅಂದರೆ ಕ್ರಿ.ಶ. 8–4–1521ರಂದು ಕೃಷ್ಣದೇವರಾಯನು ರಾಜ್ಯಭಾರ ಮಾಡುತ್ತಿದ್ದಾಗ ಭಂಡಾರದ ಅಪ್ಪರಸಯ್ಯನ ಮಗ ಭಂಡಾರದ ತಿಮ್ಮಪ್ಪಯ್ಯನು ಕೂಪಣದ ಚೆನ್ನಕೇಶವ ದೇವರಿಗೆ ಹಿರಿಯಸಿಂಧೋಗಿ ಗ್ರಾಮವನ್ನು ಸಮರ್ಪಿಸುತ್ತಾನೆ. ಈ ಗ್ರಾಮವು ಕೃಷ್ಣದೇವರಾಯನು ಇವರಿಗೆ ಪಾಲಿಸಿದ ಕೂಪಣದ ಸೀಮೆಯನ್ನು ಈ ಗ್ರಾಮದ ಆದಾಯವನ್ನು ದೇವರ ಅಮೃತಪಡಿ, ಅಂಗರಂಗಭೋಗ ಮಾಸೋತ್ಸವ ಮುಂತಾದವುಗಳಿಗೆ ವ್ಯಯಿಸಬೇಕೆಂದಿದೆ.

ಈ ಶಾಸನವು ಮಹತ್ವವಾದ ಮಾಹಿತಿಯನ್ನು ಒದಗಿಸುತ್ತದೆ. ಕೃಷ್ಣದೇವರಾಯನು ರಾಜ್ಯಭಾರ ಮಾಡುತ್ತಿದ್ದಾಗ ಭಂಡಾರದ ಅಪ್ಪರಸನ ಮಗನು ಭಂಡಾರದ ತಿಮ್ಮಪ್ಪಯ್ಯನು ಕೂಪಣದ ಚೆನ್ನಕೇಶವ ದೇವರಿಗೆ ಹಿರಿಯ ಸಿಂಧೋಗಿ ಗ್ರಾಮವನ್ನು ಸಮರ್ಪಿಸಿದ್ದನ್ನು ತಿಳಿಸುತ್ತದೆ. ಈ ಗ್ರಾಮದ ಆದಾಯವನ್ನು ದೇವಾಲಯದ ಸೇವೆಗಳಿಗೆ ವ್ಯಯಿಸಲಾಗುವುದು ಎಂದು ಉಲ್ಲೇಖಿಸುತ್ತದೆ.

ಈ ಶಾಸನದಲ್ಲಿ ಭಂಡಾರದ ಉಲ್ಲೇಖವಿದೆ. ಭಂಡಾರವೆಂದರೆ ಖಜಾನೆ ಎಂದು ತಿಳಿಯಬಹುದು. ವಿಜಯನಗರ ಸಾಮ್ರಾಜ್ಯದಲ್ಲಿ ಆರ್ಥಿಕ ವ್ಯವಸ್ಥೆಯು ಸುಭದ್ರತೆಯಿಂದ ಕೂಡಿತ್ತು ಎಂಬುದು ಈ ಶಾಸನದಿಂದ ನಿಖರವಾಗಿ ತಿಳಿದುಬರುತ್ತದೆ. ಭಂಡಾರ, ಖಜಾನೆ, ಬೊಕ್ಕಸದಿಂದ ಬರುವ ಹಣದಿಂದ ದೇವಾಲಯಗಳ ನಿರ್ವಹಣೆಯು ಸುಸೂತ್ರವಾಗಿ ನಡೆಯುತ್ತಿದ್ದವು. ದೇವಾಲಯಗಳಲ್ಲಿ ನಡೆಯುವ ಕಾರ್ಯಗಳಲ್ಲಿ ಅಮೃತಪಡಿ, ಅಂಗಭೋಗ, ರಂಗಭೋಗ, ಮಾಸೋತ್ಸವಗಳಿಗೆ ಬೊಕ್ಕಸದ ಹಣವನ್ನು ಮತ್ತು ದಾನ ನೀಡಿದ ಗ್ರಾಮದಿಂದ ಬಂದ ಆದಾಯವನ್ನು ಉಪಯೋಗಿಸಲಾಗುತ್ತಿತ್ತು. ಈ ಬೊಕ್ಕಸದ ನಿರ್ವಹಣೆಗಾಗಿ ಒಬ್ಬ ದಕ್ಷ ಅಧಿಕಾರಿಯನ್ನು ನೇಮಿಸಿದ್ದನು. ಅವನೇ ಅಪ್ಪರಸಯನಯ್ಯನ ಮಗ ತಿಮ್ಮಪ್ಪಯ್ಯ. ಇವನು ತನ್ನ ಅಧಿಕಾರಾವಧಿಯಲ್ಲಿ ಬೊಕ್ಕಸದ ಹಣವನ್ನು ಕೂಪಣದ ಚೆನ್ನಕೇಶವ ದೇವರಿಗೆ ಸಮರ್ಪಿಸಿದನು. ಅಂದರೆ

ಕೃಷ್ಣದೇವರಾಯನ ಆಡಳಿತಾವಧಿಯಲ್ಲಿ ರಾಜ್ಯವು ಅಪಾರ ಸಂಪತ್ತಿನಿಂದ ಕೂಡಿತ್ತು. ಭಂಡಾರದ ವೈಭವವನ್ನು ಶಾಸನಗಳು ಉಲ್ಲೇಖಿಸುತ್ತವೆ. ಕೃಷ್ಣದೇವರಾಯನು ತನ್ನ ಪೂರ್ವದ ರಾಜರುಗಳ ಭಂಡಾರವನ್ನು ಕಾಪಾಡಿಕೊಂಡು ಬಂದದ್ದಲ್ಲದೆ ಅದಕ್ಕೆ ತಾನು ತನ್ನ ಸಂಪತ್ತನ್ನು ಸೇರಿಸುತ್ತಲೇ ಇದ್ದನು. ತೀರಾ ಅಗತ್ಯವಾದ ಪ್ರಸಂಗಗಳಲ್ಲಿ ಅದರ ವಿನಿಯೋಗವಾಗುತ್ತಿತ್ತು. ಕೃಷ್ಣದೇವರಾಯನು ಬೊಕ್ಕಸಕ್ಕೆ ಪ್ರತಿವರ್ಷವು ಒಂದು ಕೋಟಿ ವರಹಗಳನ್ನು ಸೇರಿಸುತ್ತಿದ್ದನು.[18]

ಕನಕಗಿರಿಯ ಗ್ರಾಮದ ಲಕ್ಷ್ಮೀನರಸಿಂಹ ದೇವಾಲಯದ ಪ್ರಾಕಾರದಲ್ಲಿರುವ ಶಾಸನ ಶಾಲಿವಾಹನ ಶಕೆ ಆಂಗೀರಸ ಸಂವತ್ಸರದ ಆಷಾಢ ಶು.12ರಲ್ಲಿ ಅಂದರೆ ಕ್ರಿ.ಶ. 26.06.1525ಕ್ಕೆ ಸರಿಹೊಂದುತ್ತದೆ. ಕೃಷ್ಣದೇವರಾಯನು ರಾಜ್ಯಭಾರ ಮಾಡುತ್ತಿದ್ದಾಗ ಕನಕಗಿರಿಯನಾಥ ದೇವರ ಅಮೃತಪಡಿಗೆ ಕನಕಗಿರಿಯ ಪೇಟೆಯ ಸ್ಥಳದ ಸುಂಕದ ತಳವಾರಿಕೆ, ಸುಂಕ ಚಂನ್ನಪುರ ತೋರಗಲ್ಲು ಸೀಮೆಯ ಅಡಿಗಲ್ಲು, ಕಳಸಗ್ರಾಮ, ನವಿಲೆಂಗು ಸೀಮೆಯಲ್ಲಿ ಬಾರಾಪುರ ಒಟ್ಟು ಮೂರು ಗ್ರಾಮಗಳನ್ನು ನೀಡುತ್ತಾನೆ.[19]

ಕೆಸರಟ್ಟಿ ಗ್ರಾಮದ ಬಸವಣ್ಣ ದೇವಾಲಯದ ಸಮೀಪದಲ್ಲಿ ದೊರೆತ ಶಾಲಿವಾಹನ ಶತವರುಷ 1442ನೆಯ ಸರ್ವಜಿತು ಸಂವತ್ಸರದ ಶ್ರಾವಣ ಬ. 8ರಲ್ಲಿ ಎಂದಿದ್ದು ಇದು ಶಕ 1449 ಆದಲ್ಲಿ ಕ್ರಿ.ಶ. 19–8–1527ಕ್ಕೆ ಸರಿಹೊಂದುತ್ತದೆ. ಕೃಷ್ಣದೇವರಾಯನು ರಾಜ್ಯಭಾರ ಮಾಡುತ್ತಿದ್ದಾಗ ಶಾಂಡಿಲ್ಯ ಗೋತ್ರದ ಕೊಂಡಜಟಿಯ ಮಗ ಕೃಷ್ಣಯ್ಯನು ಕೆಸರಟ್ಟಿಯಲ್ಲಿ ಕೃಷ್ಣದೇವರನ್ನು ಪ್ರತಿಷ್ಠೆ ಮಾಡಿಸಿ ಕೋಮಾರಪೆರುಮಾಳೆ ಮತ್ತು ಆತನ ತಮ್ಮ ರಾಮಂಜಯ್ಯನಿಗೆ ಸ್ಥಾನಿಕ ಪದವಿ ನೀಡುತ್ತಾನೆ. ಈ ಸ್ಥಾನಿಕರು ಕೃಷ್ಣಯ್ಯನ ಮಾತಿನಂತೆ ನಡೆಯಬೇಕೆಂದು ವಿಧಿಸುತ್ತಾನೆ. ಇದಲ್ಲದೆ ಭಾರದ್ವಾಜ ಗೋತ್ರದ ಜೆಟಿಯ ಮಗ ತಿಂಮಯ್ಯ ಗೌತಮ ಗೋತ್ರದ ಕೋಕತಿ ಜಟಿಯ ಮಗ ಹಜಪಯ್ಯ ಇವರಿಬ್ಬರು ಕೃಷ್ಣದೇವರ ಅಮೃತಪಡಿಗೆ ಇಕ್ಕುಳದ ಹೊಲ ನಾಗಳದ ಗದ್ದೆ ಹಾಗೂ ತೋಟವೊಂದನ್ನು ನೀಡುತ್ತಾರೆ.[20]

ಅಡಿಟಿಪ್ಪಣಿಗಳು

1. ಪಿ.ಬಿ.ದೇಸಾಯಿ, *ಹಿಸ್ಟರಿ ಆಫ್ ಕರ್ನಾಟಕ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1970, ಪು. 75.
2. ಸೂರ್ಯನಾಥ ಕಾಮತ ಯು, ಹಿಸ್ಟ್ರೀ ಆಫ್ ಕರ್ನಾಟಕ, ಪು. 156.
3. ಸೀವೆಲ್ ರಾಬರ್ಟ್, *ಎ ಫರ್‌ಗಾಟನ್ ಎಂಪೈರ್*, ಪು. 122.
4. ಅದೇ, ಪು. 130.
5. ಅದೇ, ಪು. 122.
6. ನೀಲಕಂಠಶಾಸ್ತ್ರೀ ಕೆ.ಎ., *ಎ ಹಿಸ್ಟ್ರೀ ಆಫ್ ಸೌತ್ ಇಂಡಿಯಾ*, ಪು. 278.
7. ಸೀವೆಲ್ ರಾಬರ್ಟ್, *ಪೂರ್ವೋಕ್ತ*, ಪು. 132–133.
8. ಪಿ.ಬಿ.ದೇಸಾಯಿ, *ಕರ್ನಾಟಕ ಪರಂಪರೆ*, ಸಂ. 3, ಮೈಸೂರು ರಾಜ್ಯ ಸರಕಾರ, 1970, ಪು. 34.
9. ಬಾ.ರಾ.ಗೋಪಾಲ, ವಿಜಯನಗರದ ಇತಿಹಾಸ, ಕರ್ನಾಟಕ ಚರಿತ್ರೆ (ಕ್ರಿ.ಶ. 1336–1760), ಸಂ: ಕೆ.ಎಸ್.ಶಿವಣ್ಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997, ಪು. 41
10. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ*, ಕೊಪ್ಪಳ ಜಿಲ್ಲೆ–3, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999, ಪು. 132
11. ಅದೇ, ಪು. 74.
12. ಅದೇ, ಪು. 80.
13. ಅದೇ, ಪು. 82.
14. ಡಿ.ಪಿ.ಪರಮಶಿವಮೂರ್ತಿ, *ಅತ್ತಿವಟ್ಟಿಯ ಶಾಸನ ಮತ್ತು ಸ್ಥಳೀಯ ಕೃಷಿವ್ಯವಸ್ಥೆ*, ವಿಜಯನಗರ ಅಧ್ಯಯನ, ಸಂ.8, 2003, ಪು. 126.

15. ಡಿ.ಪಿ.ಪರಮಶಿವಮೂರ್ತಿ, ಅತ್ತಿವಟ್ಟಿಯ ಶಾಸನ ಹಂಪೆಯ ಬಾಲಕೃಷ್ಣ, ಪು. 37–47.
16. ದೇವರಕೊಂಡಾರೆಡ್ಡಿ (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ಕೊಪ್ಪಳ ಜಿಲ್ಲೆ–3, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 135.
17. ಕೊಪ್ಪಳ ಶಾಸನ ಸಂಖ್ಯೆ, 139, ಗಿಣಗೇರಾ, ಕ್ರಿ.ಶ. 1520.
18. ಕೊಪ್ಪಳ ಶಾಸನ ಸಂಖ್ಯೆ, 39, ಗಿಣಗೇರಾ, ಕ್ರಿ.ಶ. 1521.
19. ಗಂಗಾವತಿ ಶಾಸನ ಸಂಖ್ಯೆ, 80, ಗಿಣಗೇರಾ, ಕ್ರಿ.ಶ. 1524.
20. ಗಂಗಾವತಿ ಶಾಸನ ಸಂಖ್ಯೆ, 73, ಗಿಣಗೇರಾ, ಕ್ರಿ.ಶ. 1527.

4

ಮಲ್ಲಿಕಾರ್ಜುನನ ಧಾರ್ಮಿಕ ಶಾಸನಗಳು

ಡಾ॥ ಡಿ.ಎಂ. ನಾಗರಾಜು

ಕ್ರಿ.ಶ. ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದಲ್ಲಿ ಜನ್ಮ ತಾಳಿದ ವಿಜಯನಗರ ಸಾಮ್ರಾಜ್ಯ ಕೇವಲ ಆಕಸ್ಮಿಕವೆನ್ನಲಾಗದು. ಅದು ಐತಿಹಾಸಿಕ ಆವಶ್ಯಕತೆ ಎಂಬುದನ್ನು ಸುಮಾರು ಅರ್ಧಶತಮಾನದ ವ್ಯಾಪ್ತಿಯ ರಾಜಕೀಯ ಘಟನೆಗಳು ಸಮರ್ಥಿಸುತ್ತವೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಶ್ರೇಯಸ್ಸು ಯಾದವವಂಶದ ಸಂಗಮ ಎಂಬ ಸಣ್ಣ ಸಾಮಂತ ಅಥವಾ ಪಾಳೇಗಾರನ ಐವರ ಪುತ್ರರಾದ ಹರಿಹರ, ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಎಂಬುವವರಿಗೆ ಸಲ್ಲಬೇಕು. ಆದರೆ ವಿಜಯನಗರದ ಸ್ಥಾಪನೆಯ ಬಗ್ಗೆ ಹಲವಾರು ಸಿದ್ಧಾಂತಗಳು ತಲೆದೋರಿವೆ. ಸಂಗಮ ಸಂತತಿಯ ಹರಿಹರ ಮತ್ತು ಅವನ ಸೋದರರು ಅಪ್ಪಟ ಕನ್ನಡಿಗರು. ಹಂಪೆಯ ವಿರೂಪಾಕ್ಷ ಮತ್ತು ಬೇಲೂರು ಚನ್ನಕೇಶವ ದೇವರುಗಳು ಸಂಗಮವಂಶದ ಅರಸರ ಭಕ್ತಿಗೆ ಪಾತ್ರರಾಗಿದ್ದರು. ಧಾರ್ಮಿಕ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು.

ವಿಜಯನಗರ ಸಾಮ್ರಾಜ್ಯವನ್ನು ಅನುಕ್ರಮವಾಗಿ ಸಂಗಮವಂಶ, ಸಾಳುವವಂಶ, ತುಳುವವಂಶ ಮತ್ತು ಅರವೀಡು ವಂಶಗಳು ಆಳಿದವು.

ಸಂಗಮನ ಮಗನಾದ ಹರಿಹರನು ಮೊದಲನೆಯ ಅರಸನಾದುದರಿಂದ ಸಂಗಮ ವಂಶವೇ ಮೊದಲನೆಯದು.

ಶೃಂಗೇರಿಯ ಮಲ್ಲಿಕಾರ್ಜುನ ದೇವರ ಅನುಗ್ರಹದಿಂದ ಜನಿಸಿದನೆಂದು ಹೇಳಲಾದ ಮಲ್ಲಿಕಾರ್ಜುನನು ಇಮ್ಮಡಿ ದೇವರಾಯನ ನಂತರ ವಿಜಯನಗರದ ಸಿಂಹಾಸನದ ಮೇಲೆ ಮಂಡಿಸಿದನು. ದೇವರಾಯನ ತಮ್ಮನಾದ ಇಮ್ಮಡಿ ವಿಜಯ ಅಥವಾ ಪ್ರತಾಪ ದೇವರಾಯನೂ, ಮಲ್ಲಿಕಾರ್ಜುನನೂ ಸ್ವಲ್ಪಕಾಲ ಒಟ್ಟಿಗೆ ಆಳಿದರೆಂಬ ಅಭಿಪ್ರಾಯವಿದೆ.

ಮಲ್ಲಿಕಾರ್ಜುನನಿಗೆ ಮುಮ್ಮಡಿ ದೇವರಾಯ, ಮುಮ್ಮಡಿ ಪ್ರೌಢದೇವರಾಯ, ದೇವರಾಯ ಮಹಾರಾಯ ಎಂಬ ಹೆಸರುಗಳು ಇದ್ದವು. 'ಗಜಬೇಂಟೆಕಾರ' ಎಂಬುದು ಅವನ ಮತ್ತೊಂದು ಬಿರುದು.

ಇನ್ನು ಕೆಲವು ಮುಖ್ಯ ಶಾಸನಗಳನ್ನು ಗಮನಿಸಿದಾಗ ಕ್ರಿ.ಶ. 1447ರ ಶ್ರೀರಂಗಪಟ್ಟಣದ ತಾಮ್ರಶಾಸನದಲ್ಲಿ ವಿರೂಪಾಕ್ಷದೇವರ ಮುಂದೆ ಹೊಸಣದೇಶದಲ್ಲಿ ಕನ್ನಂಬಾಡಿ ಸ್ಥಳದ ಮಾದನಾಡಿನಲ್ಲಿ ಹಗಲಹಳ್ಳಿ ಗ್ರಾಮವನ್ನು ರಾಜನು ನಾಗಯ್ಯಭಟ್ಟನ ಮಗನಾದ ದೇವರುಭಟ್ಟನಿಗೆ ದಾನ ನೀಡಿದ ಶಾಸನವಾಗಿದೆ.

ಕ್ರಿ.ಶ. 1448ರ ಧಾರವಾಡ ಶಾಸನದಲ್ಲಿ ವೀರಪ್ರತಾಪ ಮಲ್ಲಿಕಾರ್ಜುನ ಮಹಾರಾಯ ಪಟ್ಟಬಂದೋತ್ಸವ ಸಂದರ್ಭದಲ್ಲಿ ನಂದಿ ಕಂಬವನ್ನು ನಿಲ್ಲಿಸಿ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. 1450ರ ದೊಡ್ಡಕೆರೆಕಟ್ಟೆ ಶಾಸನದಲ್ಲಿ ರಾಜನ ಅನುಮತಿಯಿಂದ ಲಿಂಗಪ್ಪ ಒಡೆಯ ಬಾರಕೂರು ರಾಜ್ಯ ಆಳುತ್ತಿರುವಾಗ ಕೋಟೆಯನಾಯಕನ ಹೆಂಡತಿ ಕೋಟೆಯ ನಾಯಕತೀ ಮತ್ತು ಅವಳ ಮಗ ಮತವಣ್ಣಸೆಟ್ಟಿ ದೇವರುಗಳಿಗೆ, ಭೂಮಿ ದಾನ ನೀಡಿದ ವಿವರವಿದೆ. ಇದೇ ಕಾಲದ ನಿಂಬಪುರ ಶಾಸನದಲ್ಲಿ ರಾಜನು ದೇವಾಲಯ ಕಟ್ಟಿಸಿ ಒಂದು ಕಂಬ, ಸಂಧ್ಯಾಮಂಟಪ ಮಾಡಿಸಿ ಸ್ವಯಂಭು ಸೋಮೇಶ್ವರ ದೇವರನ್ನು ಪ್ರತಿಷ್ಠಾಪನೆ ಮಾಡಿಸಿ ದೇವರ ಸೇವೆಗೋಸ್ಕರ ದಾನ ನೀಡಿದ ವಿವರವಿದೆ. ಇದೇ ಕಾಲದ ಬಂಟವಾಳ ಶಾಸನದಲ್ಲಿ ದೀಪಾವಳಿ ಹಬ್ಬಕ್ಕೆ ದೇವರಿಗೆ ನೈವೇದ್ಯಕ್ಕೆ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. 1451ರ ಬಸರೂರು ಶಾಸನದಲ್ಲಿ ದೇವರಾಯ ಮಹಾರಾಯ ಬಾಣಪ್ಪ ಒಡೆಯ ಬಾರಕೂರ ರಾಜ್ಯ ಆಳುತ್ತಿರುವಾಗ ನಖರೇಶ್ವರದೇವರ ಸೇವೆಗೋಸ್ಕರ ಸಿದ್ಧಾಯ ತೆರಿಗೆಗಳಿಂದ 21 ಕಾಟಿ ಗದ್ಯಾಣಗಳು ದೇವರಿಗೆ ದಾನ ನೀಡಿದ ವಿವರವಿದೆ.

ಕ್ರಿ.ಶ. 1453ರ ಕೊರಗಲ್ಲು ಶಾಸನದಲ್ಲಿ ಕಡಕೂರು ಶ್ರೀಗಿರಿಮಲ್ಲಿಕಾರ್ಜುನ ಅನ್ನದಾನಿ ದೇವರ ಪೂಜೆ ದೀಪಾಲಂಕಾರಕ್ಕೆ ದೇವರಾಯಪುರ, ಮಲ್ಲಿನಾಥಪುರ, ಚಿಕ್ಕಪುರ, ಹರಿಯಪುರ ನಾಲ್ಕು ಗ್ರಾಮಗಳಿಂದ ಮಗ್ಗದ ತೆರಿಗೆಯ ಸುಂಕ ಆದಾಯದಿಂದ ದಾನ ನೀಡಿ ಸುಂಕಾಧಿಕಾರಿ ಹಂಪರಸನು ರಾಜನ ಅರ್ಹತೆ ಉದ್ದೇಶ ಒದಗಿ ಬರುವುದನ್ನು ಕಾಣಬಹುದು.

ಕ್ರಿ.ಶ. 1455ರ ಬಸರೂರು ಶಾಸನದಲ್ಲಿ ದೇವರಾಯಮಹಾರಾಯ ವಿಜಯನಗರದಿಂದ ಆಳುತ್ತಿರುವಾಗ ದೇವಾಲಯದ ದೇವರಿಗೆ ಹಬ್ಬಗಳ ಸಂದರ್ಭದಲ್ಲಿ ಕುರಿ ಮತ್ತು ಅಡಿಕೆ ಮರಗಳು ಪ್ರತಿಯೊಂದು ಸ್ಥಳದಿಂದ ದಾನ ಕೊಟ್ಟ ವಿವರವಿದೆ.

ಕ್ರಿ.ಶ. 1457ರ ಮಾದಿಹಳ್ಳಿ ಶಾಸನದಲ್ಲಿ ಮಲುನಾಯಕನಹಳ್ಳಿಯ ತಿರುಮಲದೇವರ ಅಂಗರಂಗಭೋಗಕ್ಕೋಸ್ಕರ ದೇವಲಾಪುರದ ಕಾಲುವಳಿ ಮಾದಿಹಳ್ಳಿಯಲ್ಲಿರುವ ಭೂಮಿಯನ್ನು ಮಾದೆಯನಾಯಕರು ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. 1458ರ ಶ್ರೀಶೈಲಂ ಶಾಸನದಲ್ಲಿ ಹೊನ್ನಮ್ಮವ ಎಂಬ ಹೆಸರಿನ ಪಠಣ ಮಾಡುವ ಸ್ತ್ರೀಯು ಮಲ್ಲಿಕಾರ್ಜುನ ದೇವರ ನೈವೇದ್ಯಗೋಸ್ಕರ ಮತ್ತು ಐದು ಜನ ದೇವಾಲಯದ ಜಂಗಮರಿಗೆ ಅನ್ನದಾನಕ್ಕೆ ಭೂಮಿಯನ್ನು ಕೊಂಡು ದಾನ ನೀಡಿದ ವಿವರವಿದೆ. ಇದೇ ಕಾಲದ ಮೇಲುಕೋಟೆ ಶಾಸನದಲ್ಲಿ ಮೇಲುಕೋಟೆ ನಾರಾಯಣದೇವರಿಗೆ ತಿಂಮಣದಂಣ್ಣಾಯಕನ ಹೆಂಡತಿ ರಂಗಾಂಬಿಕೆಯು ರಂಗಮಂಟಪ ಕಟ್ಟಲು ದಾನ ನೀಡಿ ಹಾಗೂ ಒಡವೆ, ಹಿತ್ತಾಳೆ, ಕಂಚು, ಪಲ್ಲಕ್ಕಿ ಮಂಟಪ ಮತ್ತು ಕೆರೆಯನ್ನು ದಾನ ನೀಡಿದ್ದಾಳೆ. ಇದೇ ಕಾಲದ ನೆಲಮನೆ ಶಾಸನದಲ್ಲಿ ಯದುಗಿರಿ ಶಿಖರದ ಯಾದವ ನಾರಾಯಣ ಲಕ್ಷ್ಮೀ ದೇವಸ್ಥಾನದ ಪೂಜೆಗೋಸ್ಕರ ಕುರ್ವ್ವಂಕನಾಡವೆಂಟಿಯ ಶೇಖರಮಣಿ ಮೇಲುಕೋಟೆ ರಾಜ್ಯದ ಬಲೇನಪಲ್ಲಿ, ಯನವದಪಲ್ಲೀತಿ ಎರಡು ಗ್ರಾಮಗಳನ್ನು ಲೋಹಿತವಂಶದ ತಿಂಮಣ್ಣದಂಡನಾಥನ ಹೆಂಡತಿ ರಂಗಾಂಬಿಕೆಯ ಕೋರಿಕೆಯ ಮೇರೆಗೆ ಚಂದ್ರಮೌಳಿ ದೇವರ ಮುಂದೆ ರಾಜನು ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. 1459ರ ದಣ್ಣಾಯಕನಪುರ ಶಾಸನದಲ್ಲಿ ಬೆಳತೂರು ಶ್ರೀರಾಮೆಯದೇವರ ಅಮೃತಪಡಿ ಅಂಗರಂಗಭೋಗಕ್ಕೆ ಮಳಲಿಯ ಲಕಪ್ಪನವರ ಮಗ ತಿಪ್ಪಯ್ಯದಂಣ್ಣಾಯಕನು ಶ್ರೀಮಂನ್ ಮಹಾಪ್ರಧಾನ ತಿಂಮಣದಂಣ್ಣಾಯಕರ ಅನುಮತಿ ಪಡೆದು ಮದ್ದೂರು ಸ್ಥಳದ ಕಳಲೆಯಲ್ಲಿ ಬಸವಪ್ಪಣ್ಣನು ಭೂಮಿಯನ್ನು ನೀಡಿದ್ದಾನೆ. ಇದೇ ಕಾಲದ ರಾಂಪುರ ಶಾಸನದಲ್ಲಿ ಬೆಳತೂರ ಶ್ರೀರಾಮಯ್ಯದೇವರ ಅಮೃತಪಡಿ ಅಂಗರಂಗಭೋಗಕ್ಕೋಸ್ಕರ ಮಹಾಪ್ರಧಾನ ತಿಂಮಂಣದಂಣ್ಣಾಯಕರ ಅನುಮತಿ ಮೇರೆಗೆ ಲಕಪ್ಪನವರ ಮಗ ತಿಪ್ಪಯ್ಯನು ಬಸವಪಟ್ಟಣ ಗ್ರಾಮವನ್ನು ದಾನ ನೀಡಿದ ವಿವರವಿದೆ.

ಕ್ರಿ.ಶ. 1463ರ ತೀರ್ಥಹಳ್ಳಿ ತಾಮ್ರಶಾಸನದಲ್ಲಿ ವಿಜಯನಗರ ವಂಶಾವಳಿಯನ್ನು ಮಲ್ಲಿಕಾರ್ಜುನನವರೆಗೆ ತಿಳಿಸುತ್ತದೆ. ತುಂಗಭದ್ರಾ ದಂಡೆಯಲ್ಲಿ ಚಂದ್ರಮೌಳಿದೇವರ ಸಮ್ಮುಖದಲ್ಲಿ ಹಾಗೂ ವಿರೂಪಾಕ್ಷದೇವರ ಮುಂದೆ ಅರಗರಾಜ್ಯದ

ಸಾಂತಳಿಗೆ ಮಾಗಣಿ ನೀಡುವಲ್ಲಿ ನಾಡಿನಲ್ಲಿ ಸರಬಳಿಗೆ ಗಜಬೇಟೆದೇವರಾಯಪುರ ಗ್ರಾಮವನ್ನು ತನ್ನ ಮಗನಿಗೆ ದೇವಯ ಎಂದು ಹೆಸರಿಡುವ ಕಾಲದಲ್ಲಿ ರಾಜನು ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. 1465ರ ಬಸರೂರು ಶಾಸನದಲ್ಲಿ ಪಂಡರಿದೇವ ಒಡೆಯ ಬಾರಕೂರು ರಾಜ್ಯ ಆಳುತ್ತಿರುವಾಗ ಮಹಾಪ್ರಧಾನ ರಾಮಚಂದ್ರ ದಂಣಾಯಕ ಪಡುವಕೇರಿ ಮಹಾದೇವ ದೇವರಸೇವೆಗೆ ಮತ್ತು ಹಂಜಮಾನ ಸಮುದಾಯದವರಿಗೆ ದಾನ ನೀಡಿದ ವಿವರವಿದೆ. ಇದೇ ಕಾಲದ ಪೊಲಲಿ ಅಮುಂಜೆ ಶಾಸನದಲ್ಲಿ ರಾಮಚಂದ್ರ ದಂಣ್ಣಾಯಕನ ಆಳ್ವಿಕೆಯಲ್ಲಿ ವಿಟ್ಟರಸ ಮಂಗಳೂರು ರಾಜ್ಯ ಆಳುತ್ತಿರುವಾಗ ಪೊಲಿಲಿದೇವ ದೇವರಿಗೆ ನೈವೇದ್ಯಕ್ಕೋಸ್ಕರ ಆಲಪ್ಪ ಶೇಖರಚೌತ ಮತ್ತು ಮೂರು ಜನ ತಮ್ಮಂದಿರು, ಮಂಜಶೇಖರ ಮತ್ತು ಅವನ ತಂಗಿಯರಿಗೆ ದಾನ ನೀಡಿದ ದಾಖಲೆಯಿದೆ.

ವಿಜಯನಗರ ಅರಸರು ವೈಯಕ್ತಿಕವಾಗಿ ಶೈವಧರ್ಮಕ್ಕೂ, ವೈಷ್ಣವಧರ್ಮಕ್ಕೂ ಸೇರಿದವರಾಗಿದ್ದರು. ಅವರೆಲ್ಲರೂ ಪರಮಧರ್ಮಸಹಿಷ್ಣುಗಳಾಗಿದ್ದರು. ಸಂಗಮವಂಶದ ರಾಜರು ಶೈವಧರ್ಮಕ್ಕೆ ಹೆಚ್ಚಿನ ಉತ್ತೇಜನವನ್ನಿತ್ತರು. ವಿಜಯನಗರದ ಅರಸರು ಧಾರ್ಮಿಕ ಸಹಿಷ್ಣುತೆಯುಳ್ಳವರಾಗಿದ್ದರು.

ಗ್ರಂಥಋಣ

1. ಎ.ಆರ್.ಐ.ಇ. (ರಿಪೋರ್ಟುಗಳು)
2. ಎಸ್.ಐ.ಐ. ಸಂಪುಟ 9, ಭಾಗ 2.
3. ಎ.ಕ., ಸಂಪುಟ 4, 6, 7, 13.
4. ಕೆ.ಆರ್.ಐ., ಸಂಪುಟ 6.

5

ತಿರುಪತಿಗೆ ಶ್ರೀಕೃಷ್ಣದೇವರಾಯನು ಮಾಡಿದ ಧಾರ್ಮಿಕ ಸೇವೆ ಹಾಗೂ ತೀರ್ಥಯಾತ್ರೆಗಳು

ಡಾ॥ ವಿರೂಪಾಕ್ಷಿ ಪೂಜಾರಹಳ್ಳಿ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಮೂಲ ಉದ್ದೇಶಗಳಲ್ಲಿ ಧರ್ಮರಕ್ಷಣೆಯ ವಿಚಾರ ಬರುತ್ತದೆ. ಅದು ಹಿಂದೂಧರ್ಮದ ರಕ್ಷಣೆ ಕುರಿತು. ಅಂದರೆ ಆ ಹೊತ್ತಿಗೆ ಅನ್ಯಧರ್ಮಗಳ ದಾಳಿಯಿಂದ ಸ್ಥಳೀಯ ಧರ್ಮ, ಸಂಸ್ಕೃತಿ, ಜನಸಮುದಾಯಗಳು ಪಲ್ಲಟಗೊಂಡಿದ್ದವು, ಜೊತೆಗೆ ತತ್ತರಿಸಿಹೋಗಿದ್ದವು. ಒಟ್ಟಾರೆ ಪ್ರಭುತ್ವದಲ್ಲಿ ಸಹ ಸ್ಥಳೀಯ ಅರಸರ ಮೇಲೆ ಅನ್ಯರು ಆಕ್ರಮಣಕಾರಿ ಮನೋಭಾವ ತಾಳಿದ್ದರು. ಹಾಗಿದ್ದರೂ ಸ್ಥಳೀಯ ಅರಸರು ಪ್ರಬಲವಾಗಿ ವಿದೇಶಿಯರನ್ನು, ವಿರೋಧಿಗಳನ್ನು ಮೆಟ್ಟಿಹಾಕಿದ್ದರು. ವೀರೋಚಿತ, ಧೈರ್ಯ ಹಾಗೂ ಪರಾಕ್ರಮಶಾಲಿಗಳಾಗಿದ್ದು, ಕ್ಷತ್ರಿಯರು, ಯೋಧ ಜನಾಂಗಕ್ಕೆ ಸೇರಿದ ಸಂಗಮನಿಂದ ಮತ್ತು ಆತನ ಮಕ್ಕಳಾದ ಹರಿಹರ, ಬುಕ್ಕರಾಯ, ಕಂಪಣ್ಣ, ಮಾರಪ್ಪ ಮತ್ತು ಮುದ್ದಪ್ಪ ಎಂಬವರಿಂದ ವಿಜಯನಗರ 1336ರಲ್ಲಿ ಸ್ಥಾಪನೆ ಆಯಿತು. ಹೀಗೆ ಸಂಗಮವಂಶ, ಸಾಳುವ, ತುಳುವ ಮತ್ತು ಅರವೀಡು ಎಂಬ ನಾಲ್ಕು ವಂಶಗಳು ಆಳ್ವಿಕೆ ನಡೆಸಿವೆ. ಅವುಗಳಲ್ಲಿ ತುಳುವ ಸಂತತಿ ಬಹು ಪ್ರಖ್ಯಾತಿಯನ್ನು ಪಡೆದಿದೆ.

ತುಳುವ ವಂಶದ ಮೂಲಪುರುಷ ತಿಮ್ಮಭೂಪ, ಈಶ್ವರನಾಯಕ (ಬುಕ್ಕಾಜಿ ಅಮ್ಮ), ನರಸನಾಯಕ ಇತರರು ಕಂಡು ಬರುತ್ತಾರೆ. ಚಾರಿತ್ರಿಕವಾಗಿ ಈಶ್ವರನಾಯಕನ ನಂತರ ನರಸನಾಯಕ ಅನಂತರ ವೀರನರಸಿಂಹ ಅವನ ಸಹೋದರ ಕೃಷ್ಣದೇವರಾಯ ಆಳ್ವಿಕೆ ನಡೆಸುತ್ತಾರೆ. ಹೀಗೆ ಕೃಷ್ಣರಾಯ ಆಳ್ವಿಕೆ ನಡೆಸುವಾಗ ಒಂದೆಡೆ ಜೈತ್ರಜಾತ್ರೆ (ಪೂರ್ವ ದಿಗ್ವಿಜಯಗಳು) ಮತ್ತೊಂದೆಡೆ ತೀರ್ಥಯಾತ್ರೆಯನ್ನು ಕೈಗೊಂಡಿದ್ದನು. ನೂರಾರು ಯುದ್ಧಗಳನ್ನು ಮಾಡುತ್ತಲೇ ದೇವಾಲಯ, ಪುಣ್ಯಕ್ಷೇತ್ರ, ತೀರ್ಥಕ್ಷೇತ್ರಗಳಿಗೆ ತಾನು ಮತ್ತು ತನ್ನ ರಾಣಿಯರು ಹೋಗಿಬರುತ್ತಿದ್ದರು. ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದ ತಿರುಪತಿ, ಶ್ರೀಶೈಲಂ, ಕಾಳಹಸ್ತಿ, ಅಹೋಬಲಂ, ಅಮರಾವತಿ, ಶ್ರೀಕಾಕುಳಂ, ಸಿಂಹಾಚಲಂ ಮೊದಲಾದ ಕ್ಷೇತ್ರಗಳ ದರ್ಶನ ಮಾಡಿ ಅಪಾರ ದಾನ ಧರ್ಮಗಳನ್ನು ಮಾಡಿದ್ದಾನೆ. ಹಾಗೆಯೇ ತಮಿಳುನಾಡಿನಲ್ಲಿ ಕಾಂಚೀಪುರಂ, ಶ್ರೀರಂಗಂ, ಕುಂಭಕೋಣಂ, ಸೇತುರಾಮೇಶ್ವರಂ, ಧನುಷ್ಕೋಟಿ, ತಿರುಕೊಯಿಲೂರು ಮೊದಲಾದ ಕ್ಷೇತ್ರಗಳನ್ನು ದರ್ಶನ ಮಾಡುತ್ತಾನೆ. ಇಲ್ಲಿ ತಿರುಪತಿಗೆ ಮಾತ್ರ ವಿಶೇಷವಾಗಿ ಏಳುಬಾರಿ ತೀರ್ಥಯಾತ್ರೆ ಮಾಡಿದ ಬಗ್ಗೆ ವಿಶ್ಲೇಷಿಸಲಾಗುವುದು.

ತಿರುಪತಿ–ತಿರುಮಲೆಯ ಪರಿಚಯ

ತಿರುಪತಿ–ತಿರುಮಲೆಯು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಚಂದ್ರಗಿರಿ ತಾಲ್ಲೂಕಿನಲ್ಲಿದೆ. 'ತಿರುಪತಿ' ಜಗತ್ಪ್ರಸಿದ್ಧವಾದ ವೈಷ್ಣವಕ್ಷೇತ್ರ. ಇಲ್ಲಿ ಏಳು (ಕೆಲವು ವಿದ್ವಾಂಸರು ಒಂಬತ್ತು ಬೆಟ್ಟಗಳಿರುವ ಕಾರಣ ನವಕೋಟಿನಾರಾಯಣ ಎನ್ನುತ್ತಾರೆ)

ಪರ್ವತ-ಏಳು ಶಿಖರಗಳಿರುವುದರಿಂದ ಏಳುಹೆಡೆಗಳ ಆದಿಶೇಷವೆಂಬ ಭಾವನೆಯಿದೆ. ಪ್ರಾಚೀನ ಕಾಲದಿಂದಲೂ ಇದಕ್ಕೆ 'ಶೇಷಾಚಲ ಪರ್ವತ' ಎಂದು ಕರೆಯಲಾಗಿದೆ. ಏಳು ಬೆಟ್ಟಗಳ ದೇವರಿಗೆ ವೆಂಕಟೇಶನೆಂದು, ಪರ್ವತವನ್ನು ವೆಂಕಟಾಚಲ ಎನ್ನುವರು. ಧಾರ್ಮಿಕವಾಗಿ ತಿರುಮಲೈ, ತಿರುಮಲಕ್ಷೇತ್ರ, ತಿರುಪತಿ ಎಂದು ದಕ್ಷಿಣ ಭಾರತೀಯರು ಕರೆದುಕೊಂಡಿದ್ದಾರೆ. 'ತಿರು' ಎಂಬುದಕ್ಕೆ 'ಶ್ರೀ' ಎಂಬ ಅರ್ಥವಿದ್ದು, ತಿರುಪತಿಗೆ 'ಶ್ರೀಪತಿ' ಅಥವಾ 'ವಿಷ್ಣು' ಎಂಬ ಅರ್ಥದಲ್ಲಿ ವಿಶ್ಲೇಷಿಸಲಾಗಿದೆ. 'ಹರಿ' ಎಂದು, 'ಬಾಲಾಜಿ' ಎಂದು ವಿಷ್ಣುವನ್ನು ಕರೆಯುತ್ತಾರೆ. ಈ ಬಗ್ಗೆ ವೇದ, ಪುರಾಣ, ಕಾವ್ಯಗಳಿಂದಲೂ ದಂತಕಥೆ ಐತಿಹ್ಯ, ಪುರಾಣಗಳಿವೆ. ಇಲ್ಲಿನ ಪ್ರಧಾನ ದೇವತೆ ವೆಂಕಟೇಶ್ವರ. ಕಪ್ಪು ಶಿಲೆಯಿಂದ ಈ ಮೂರ್ತಿಯನ್ನು ಕೆತ್ತಲಾಗಿದೆ. ತಿರುಪತಿಯಲ್ಲಿನ ವೆಂಕಟೇಶ್ವರನ ಬಳಿ ಲಕ್ಷ್ಮಿ ಶಿಲ್ಪ ಇಲ್ಲ. ಇದು ಇಲ್ಲಿಗೆ ಸಮೀಪ ಇರುವ ತಿರುಚಾನೂರ ಬಳಿಯಿದೆ. ಸ್ಥಳೀಯರು ಇದನ್ನು ಪದ್ಮಾವತಿ, ಅಲಮೇಲು ಮಂಗಮ್ಮ ಎನ್ನುವರು. ಕ್ರಿ.ಶ. 8ನೇ ಶತಮಾನದ (790) ಶಾಸನದಲ್ಲಿ ತಿಳಿದುಬರುವಂತೆ ಚೋಳ, ಪಾಂಡ್ಯ, ಪಲ್ಲವ, ತುಳುವ ಮೊದಲಾದ ರಾಜವಂಶಗಳವರು ಶ್ರೀನಿವಾಸನ ಭಕ್ತರಾಗಿದ್ದರು.

ಕ್ರಿ.ಶ. 1262ರಲ್ಲಿ ಸುಂದಂ ಪಾಂಡ್ಯ ಎಂಬುವನು ಇಲ್ಲಿನ ದೇವಮಂದಿರದ ಕಲಶಕ್ಕೆ ಚಿನ್ನದ ಲೇಪನ ಮಾಡಿಸಿದ್ದ. ಕರ್ನಾಟಕದ ಹೊಯ್ಸಳ ಅರಸರಾದ ಮುಮ್ಮಡಿ ನರಸಿಂಹನ ಮಂತ್ರಿ ಮಾಚಪ್ಪ ದಂಡನಾಯಕನ ಮಗ ಸಿಂಗಯ್ಯ ದಂಡನಾಯಕ ಇಲ್ಲಿನ ಶ್ರೀನಿವಾಸ ದೇವರಿಗೆ ಬ್ರಹ್ಮೋತ್ಸವದ ವ್ಯವಸ್ಥೆ ಮಾಡಿಸಿದನಂತೆ.

ವಿಜಯನಗರ ಅರಸರ ಕಾಲದಲ್ಲಿ ತಿರುಪತಿ ಬಹುಖ್ಯಾತಿ ಪಡೆಯಿತು. ಗೋಪುರ, ಮಂಟಪ ಮೊದಲಾದವುಗಳನ್ನು ತುಳುವ ಅರಸರು ನಿರ್ಮಿಸಿದ್ದಾರೆ. ವಿಜಯನಗರದ ಬುಕ್ಕರಾಯ, ಸಾಳ್ವ ನರಸಿಂಹ, ಇಮ್ಮಡಿ ನರಸಿಂಹ, ನರಸನಾಯಕ ಮೊದಲಾದವರು ತಿರುಪತಿ ದೇವಾಲಯಕ್ಕೆ ಗೋಪುರ, ಸಂಪಂಗಿ, ಪ್ರದಕ್ಷಿಣೆ ಪ್ರಾಕಾರಗಳನ್ನು ನಿರ್ಮಿಸಿದ್ದಾರೆ. ಕೃಷ್ಣದೇವರಾಯ 1518ರಲ್ಲಿ ದೇವಾಲಯದ ಗೋಪುರ, ವಿಮಾನವನ್ನು ಜೀರ್ಣೋದ್ಧಾರ ಮಾಡಿಸಿದ್ದ. ಆತನು ಏಳು ಬಾರಿ ತೀರ್ಥಯಾತ್ರೆಗಳನ್ನು ಕೈಗೊಂಡು ತಾನು ಮತ್ತು ತನ್ನ ರಾಣಿಯರು ನೀಡಿದ ದಾನ, ಕಾಣಿಕೆ, ಕೊಡುಗೆಗಳನ್ನು ಮುಂದೆ ವಿವರಿಸಲಾಗಿದೆ. ವಿಜಯನಗರ ಕಾಲದಲ್ಲಿ ತಿರುಪತಿ ಬಹು ಶ್ರೇಷ್ಠ ಧಾರ್ಮಿಕ ಕ್ಷೇತ್ರವಾಗಿ ಬೆಳೆಯಿತು. ಅನಂತರ ಮುಸ್ಲಿಮರ ಆಕ್ರಮಣಕ್ಕೆ ತುತ್ತಾಯಿತೆಂದು ತಿಳಿಯುತ್ತದೆ. 1843ರಲ್ಲಿ ತಿರುಪತಿ ದೇವಾಲಯ ಆಡಳಿತ ಜವಾಬ್ದಾರಿಯನ್ನು ಶ್ರೀಯೂರು ಹಾಥೀರಾಮ ಮಹಂತರ ಮಠಕ್ಕೆ ವಹಿಸಿದ್ದರು. ಈ ಮಠದ ಗೊಂದಲ, ಅಸಮರ್ಥತೆಯನ್ನು ಅರಿತ ಮದ್ರಾಸ್ ಸರ್ಕಾರ ಒಂದು ಸಮಿತಿ ರಚಿಸಿ ಅದಕ್ಕೆ ಸರ್ಕಾರದ ಕಮಿಷನರ್ ಇರುವಂತೆ ಮಾಡಿದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ 1951ರಲ್ಲಿ 'ತಿರುಮಲ ತಿರುಪತಿ ದೇವಸ್ಥಾನಮ್' ಎಂಬ ವಿಶ್ವಸ್ತ ಸಮಿತಿ ದೇವಾಲಯದ ಸಂಪೂರ್ಣ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದೆ. ದೇವಾಲಯದಲ್ಲಿ ಮಂಟಪ, ಪ್ರದಕ್ಷಿಣಾಪಥ ಇತರ ಪ್ರಾಕಾರಗಳಲ್ಲಿ ಗರ್ಭಗುಡಿ ಮೇಲಿನ ವಿಮಾನ ಗೋಪುರ ಬಂಗಾರ ಲೇಪನದಿಂದ ಕೂಡಿದ್ದು 'ಆನಂದ ನಿಲಯಂ' ಎಂದು ಅದಕ್ಕೆ ಹೆಸರು. ಮಹಾದ್ವಾರದಲ್ಲಿ ಭವ್ಯವಾದ ಗೋಪುರ ಇದ್ದು ಇಲ್ಲಿ ಕೃಷ್ಣದೇವರಾಯ, ವೆಂಕಟಪತಿರಾಯ ಮತ್ತು ಅಚ್ಯುತರಾಯರ (ತುಳು ಅರಸರು) ಮೂರ್ತಿಗಳಿವೆ. ಹಾಗೆಯೇ ಅಕ್ಬರನ ಮಂತ್ರಿ ತೋಡರ್‌ಮಲ್ (ತೋದರಮಲ್ಲ) ಮತ್ತು ಅವನ ಪತ್ನಿಯ ಮೂರ್ತಿಗಳಿವೆ. ವಿಶಿಷ್ಟ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತವೆ. ಆಳ್ವಾರ ಸಂತರು ಹಾಗೂ ವೈಷ್ಣವ ಆಚಾರ್ಯರು ತಿರುಪತಿಯ ಮಹತ್ವವನ್ನು ತಿಳಿಸಿದ್ದಾರೆ. ಹಾಗೆಯೇ ಶ್ರೀವೈಷ್ಣವ ಸಂಪ್ರದಾಯದ ಪ್ರಮುಖ ನೆಲೆ-ಕ್ಷೇತ್ರವಾಗಿದೆ ತಿರುಪತಿ. ಇಲ್ಲಿ ಶ್ರೀರಾಮಾನುಜರು ಮಾರ್ಗದರ್ಶನ ನೀಡಿದಂತೆ ಪೂಜಾಕಾರ್ಯಗಳು ನಡೆಯುತ್ತವೆ. ಸಾವಿರಾರು ಭಕ್ತರು ದಿನನಿತ್ಯ ದೇವರ ದರ್ಶನಕ್ಕೆ ಬರುತ್ತಾರೆ.

ತಿರುಪತಿ ದೇವಾಲಯಕ್ಕೆ ಕೋಟ್ಯಂತರ ರೂ ಹಣ ಸಂಪತ್ತು ಹರಿದುಬರುತ್ತದೆ. ಅದನ್ನು ಆಸ್ಪತ್ರೆ, ಶಾಲೆ, ಫಲಾಹಾರಮಂದಿರ, ಸಂಸ್ಕೃತ ವಿದ್ಯಾಲಯ, ಪ್ರಾಚ್ಯಸಂಶೋಧನ ಮಂದಿರ, ಪ್ರಕಾಶನ ಸಂಸ್ಥೆ, ಮುದ್ರಣಾಲಯ, ಗೋಶಾಲೆ

ಇತರ ಸ್ವತಂತ್ರ ನಿರ್ವಹಣೆಯ ಸಾರ್ವಜನಿಕ ಸೇವೆಗೆ ಬಳಸಲಾಗುತ್ತದೆ.[1] ತಿರುಪತಿಯನ್ನು ರೋಮನ್ ವ್ಯಾಟಿಕನ್‌ಗೆ ಹೋಲಿಸಲಾಗಿದೆ.

ತಿರುಪತಿಗೆ ಕೃಷ್ಣದೇವರಾಯನ ಧಾರ್ಮಿಕ ಸೇವೆ ಮತ್ತು ತೀರ್ಥಯಾತ್ರೆಗಳು

ಬೆಟ್ಟದ ಮೇಲಿರುವುದು ತಿರುಮಲ. ತಿರುಮಲೆ ಬೆಟ್ಟಗಳ ತಪ್ಪಲಿನಲ್ಲಿರುವ ನಗರವಾಗಿದೆ. ಕೆಳಗಿನಿಂದ ಬೆಟ್ಟದ ಮೇಲೆ ವೆಂಕಟೇಶ್ವರ ದೇವಾಲಯಕ್ಕೆ ಕಾಲದಾರಿಯಲ್ಲಿ ಏಳು ಮೈಲಿ ಹಾಗೂ ವಾಹನಗಳ ಮೂಲಕ ಸುಮಾರು ಹದಿನಾಲ್ಕು ಮೈಲಿ ದೂರದಲ್ಲಿದೆ. ಇಲ್ಲಿ ಗೋವಿಂದರಾಜ ಮಂದಿರ, ಕೋದಂಡರಾಮ ದೇವಾಲಯ, ಕಪಿಲೇಶ್ವರ, ಬೆಟ್ಟದ ಮೇಲೆ ಸ್ವಾಮಿ ಪುಷ್ಕರಣಿ, ಆಕಾಶಗಂಗಾ, ಪಾಪವಿನಾಶನಂ, ವೈಕುಂಠತೀರ್ಥ, ಪಾಂಡವತೀರ್ಥ, ಜಾಬಾಲಿತೀರ್ಥ, ಗೋಗರ್ಭತೀರ್ಥ, ವರಾಹಸ್ವಾಮಿ, ಗೋವಿಂದರಾಜ ಮತ್ತು ಪದ್ಮಾವತಿ ಮಂದಿರ ಮೊದಲಾದ ದೇವಾಲಯ–ಮಂದಿರಗಳನ್ನು ನೋಡಬಹುದಾಗಿದೆ.[2]

ತಿರುಪತಿ ವೆಂಕಟೇಶ ಬೇಟೆಗಾರರ ದೇವರು ಎಂದು ಎಸ್.ಕೆ. ರಾಮಚಂದ್ರರಾವ್ ತಿಳಿಸುತ್ತಾರೆ.[3]

ಕೃಷ್ಣದೇವರಾಯ ತಿರುಪತಿಗೆ ಹಲವಾರು ಸಲ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಯಾತ್ರೆಗಳನ್ನು ಕೈಗೊಳ್ಳುತ್ತಾನೆ. ಅವುಗಳಲ್ಲಿ ಆತ ಏಳುಬಾರಿ ಮಾತ್ರ ಈ ಕ್ಷೇತ್ರಕ್ಕೆ ಭೇಟಿ ನೀಡಿದ ಬಗ್ಗೆ ಆಧಾರಗಳಿವೆ.

ಕ್ರಿ.ಶ. 1512 ಆಗಸ್ಟ್ 7 ಶನಿವಾರ ಕೃಷ್ಣದೇವರಾಯನ ಬಾಗಿಲ ಅವಸರದ ನರಸಯ್ಯನು, ಅವನ ತಮ್ಮ ಅವಸರದ ತಿಮ್ಮಯ್ಯನು ಮತ್ತು ಅವನ ತಮ್ಮ ನರಸಯ್ಯರು ತಿರುವೆಂಗಳನಾಥದೇವರ ಸನ್ನಿಧಿಯಲ್ಲಿ ಸದಾಕಾಲ ನಮಸ್ಕಾರವನ್ನು ಮಾಡುತ್ತಿರುವ ಬಗ್ಗೆ ಶಾಸನವಿದೆ.[4] ಕೃಷ್ಣದೇವರಾಯ ಅಧಿಕಾರ ವಹಿಸಿಕೊಂಡ ಮೊದಲ ನಾಲ್ಕು ವರ್ಷಗಳಲ್ಲಿ ಆತನ ಅಧಿಕಾರಿಗಳು (ಬಾಗಿಲುಕಾಯುವವರು) ಇಂಥ ಸೇವೆಯನ್ನು ಮಾಡಿರುವುದು ಶ್ಲಾಘನೀಯ. ರಾಯನು ತಿರುಪತಿಗೆ ಹೋಗದೆ ದೇವರ ಸೇವೆ ತನ್ನ ಸಹಚರರ ಮೂಲಕ ಧಾರ್ಮಿಕ ಸೇವೆ ಮಾಡಿಸಿದ್ದಾನೆ.

ತಿರುಪತಿಗೆ ಕೃಷ್ಣದೇವರಾಯನ ಸೇವೆ ಅಮೋಘವಾದುದು. ಒಂದೆಡೆ ಜೈತ್ರಯಾತ್ರೆ ಮತ್ತೊಂದೆಡೆ ತೀರ್ಥಯಾತ್ರೆಗಳನ್ನು ಮಾಡುವಾಗ ತಿರುಪತಿಗೆ ಏಳುಬಾರಿ ಯಾತ್ರೆ ಕೈಗೊಳ್ಳುತ್ತಾರೆ. ಪಟ್ಟಾಭಿಷೇಕವಾದ ನಾಲ್ಕು ವರ್ಷಗಳಲ್ಲಿ ರಾಯ ತಿರುಪತಿಯ ಬೆಟ್ಟ ಹತ್ತಿ ದೇವರ ಸೇವೆ ಮಾಡಿದ. ತನ್ನ ಜೊತೆಗೆ ರಾಣಿಯರು, ಅಧಿಕಾರಿಗಳು, ಊಳಿಗದವರು, ವ್ಯಾಪಾರಿಗಳು, ಪುರೋಹಿತರು, ಸಂಬಂಧಿಸಿದ ಇತರರು ಯಾತ್ರೆ ಸಂದರ್ಭದಲ್ಲಿ ಜೊತೆಗಿರುತ್ತಿದ್ದರು.

(1) ಶ್ರೀಕೃಷ್ಣದೇವರಾಯನು ತಿರುಪತಿಗೆ ಮೊದಲ ಯಾತ್ರೆಯನ್ನು ಕೈಗೊಂಡದ್ದು 1513ರ ಫೆಬ್ರವರಿ (ಗುರುವಾರ) 10 ರಂದು. ಇದು ಉಮ್ಮತ್ತೂರಿನ ಮೇಲೆ ರಾಯ ಜಯಗಳಿಸಿದ್ದುದರಿಂದ ತನ್ನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲಾದೇವಿಯರೊಂದಿಗೆ (ಇದೇ ದಿನಾಂಕದ 13 ಶಾಸನಗಳು ಇಲ್ಲಿವೆ) ರಾಯ ತಿರುಪತಿಗೆ ಭೇಟಿಕೊಡುತ್ತಾನೆ.[4] ರಾಯನು ದೇವರಿಗೆ ಸಮರ್ಪಿಸಿದ ಆಭರಣ ಮತ್ತು ಇತರ ದಾನಗಳೆಂದರೆ: 'ನವರತ್ನಖಚಿತವಾದ ಕಿರೀಟ, ಮೂರೆಳೆ ಮುತ್ತಿನ ಸರ, ಮುತ್ತಿನ ಪದಕ, ಇಪ್ಪತ್ತೈದು ಬೆಳ್ಳಿ ಆರತಿ ತಟ್ಟೆಗಳು, ಕಿರೀಟದಲ್ಲಿ 1555 ತೂಕದ ಬಂಗಾರದ ಕಟ್ಟಡ, 1076 ತೂಕದ ಕುಂದಣಬಂಗಾರ, 2822 ಕೆಂಪುಗಳು, 160 ಪಚ್ಚೆ, 423 ಹಳೆಯ ವಜ್ರ, ಮೂರು ಮಾಣಿಕ್ಯಗಳು, 10 ನೀಲಗಳು, 17 ವೈಡೂರ್ಯ, ಗೋಮೇಧಿಕ ಎಲ್ಲವೂ ಸೇರಿ 3130 ತೂಕ; 163 ರತಿ (ಕ್ಯಾರೆಟ್) ತೂಗುವ ಮುತ್ತುಗಳನ್ನು ಕಟ್ಟಿದ ಬಂಗಾರದ ಸರಿಗೆ–ಸರ; ಕಿರೀಟದ ಒಟ್ಟು ತೂಕ 3308. ಮುತ್ತಿನ ಮೂರೆಳೆ ಸರದಲ್ಲಿ 1370 ಜರಿಮುತ್ತುಗಳಿದ್ದವು; ಒಂದು ಮಾಣಿಕ್ಯವಿದ್ದಿತು, ಎರಡು ನೀಲಮಣಿಗಳಿದ್ದವು, 15 ಅಡ್ಡಿಗೆಗಳಿದ್ದವು. ಇದರ ಒಟ್ಟು ತೂಕ 225 ರತಿಗಳು. ಪದಕದಲ್ಲಿ ಆರು ಮುತ್ತುಗಳೂ 60 ವಜ್ರಗಳೂ 11 ಪಚ್ಚೆಗಳೂ ಮೂರು ಮಾಣಿಕ್ಯಗಳೂ ಐದು ಕೆಂಪುಗಳೂ ಇದ್ದು

ಇದರ ಒಟ್ಟು ತೂಕ 91ರಷ್ಟು ಇದ್ದಿತು.[6] ಇದೇ ಸಂದರ್ಭದಲ್ಲಿ (1513 ಫೆಬ್ರವರಿ 10, ಗುರುವಾರ) ಪಟ್ಟದ ರಾಣಿ ತಿರುಮಲದೇವಿ ಅಮ್ಮನವರು ತಿರುವೇಂಗಳನಾಥ ದೇವರ ಜಿಲುಪಾಲ (ಹಾಲುನೈವೇದ್ಯವನ್ನು ಇರಿಸಲು) ನೈವೇದ್ಯ ಅವಸರಕೆ 374 ತೂಕ ಚಿನ್ನದ ಬಟ್ಟಲನ್ನು ಸಮರ್ಪಿಸುತ್ತಾರೆ. ಕೃಷ್ಣದೇವರಾಯನ ಪ್ರೀತಿಯ ರಾಣಿ ಚಿನ್ನಾದೇವಿ ಅಮ್ಮನವರು 1513 ಫೆಬ್ರವರಿ 10 ಗುರುವಾರದಂದು ತಿರುವವೇಂಗಳನಾಥ ದೇವರ ಜಿಲಿಪಾಲ ನೈವೇದ್ಯ ಅವಸರಕೆ 374 ತೂಕದ ಚಿನ್ನದ ಬಟ್ಟಲನ್ನು ಸಮರ್ಪಿಸುತ್ತಾರೆ.[7] ಒಂದು ಶಾಸನದಲ್ಲಿ 324 ತೂಕ ಎಂದಿದ್ದು ಒಟ್ಟಾರೆ ಹೋಲಿಸಿದರೆ 374 ತೂಕ ಆಗಿರಬೇಕು. ಇದೇ ಸಂದರ್ಭದಲ್ಲಿ ಹಾಕಿಸಿರುವ ಇತರೆ ಶಾಸನಗಳಲ್ಲಿ ಕೃಷ್ಣರಾಯ ನೀಡಿದ ಕಾಣಿಕೆಗಳ ವಿವರವಿದೆ.

ಕರ್ನಾಟಕದ ದಕ್ಷಿಣಭಾಗವನ್ನು ಗೆದ್ದನಂತರ ಕೃಷ್ಣದೇವರಾಯ ಪೂರ್ವ ಮತ್ತು ಈಶಾನ್ಯದ ಕಡೆ ದಂಡೆಯಾತ್ರೆ ಮಾಡುವ ಸಂದರ್ಭದಲ್ಲಿ ತಿರುಪತಿಯನ್ನು ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ಶಕ್ತಿ ನೆಲೆಯಾಗಿ ಮಾಡಿಕೊಂಡಿದ್ದನು. ಹಾಗಾಗಿ ಆಂಧ್ರಪ್ರದೇಶದಲ್ಲಿ ಕೆಲವು ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಈ ಮಾರ್ಗ ಉತ್ತಮವಾಗಿತ್ತು. ರಾಜನ ಪಟ್ಟಾಭಿಷೇಕ, ಯುದ್ಧಗಳಲ್ಲಿ ಗೆಲುವು ಆದ ನಂತರ ತಿರುಪತಿಯ ವೆಂಕಟೇಶ್ವರನ ದರ್ಶನವನ್ನು ಮಾಡುವ ಸಂದರ್ಭದಲ್ಲಿ ಅಪಾರ ಪ್ರಮಾಣದ ಆಭರಣ, ವಸ್ತು, ಗ್ರಾಮಗಳನ್ನು ದಾನ ಮಾಡಿದ ಬಗ್ಗೆ ಅನೇಕ ಶಾಸನಗಳು ಬೆಳಕುಚೆಲ್ಲುತ್ತವೆ.

(2) ಕೃಷ್ಣದೇವರಾಯ ಎರಡನೇ ತೀರ್ಥಯಾತ್ರೆಯನ್ನು 1513 ಮೇ 2ರಂದು ತಿರುಪತಿಗೆ ಕೈಗೊಳ್ಳುತ್ತಾನೆ. ಈ ಯಾತ್ರೆಯಲ್ಲಿ ರಾಣಿಯರು ಹೋಗಿರಲಿಲ್ಲ. ರಾಯನು ಮಾತ್ರ ಹೋಗಿದ್ದನು. ತಿರುವೆಂಗಳನಾಥ ದೇವರಿಗೆ ರಾಯನು ಈ ಭೇಟಿಯಲ್ಲಿ ಸಮರ್ಪಿಸಿದ ವಿವರ: ಉಡುದಾರಗಳು, ಅಡ್ಡಿಗೆಗಳು, ಒರೆಯುಳ್ಳ ಕಠಾರಿಗಳು, ಕತ್ತಿಗಳು, ಪದಕ, ಭುಜಕೀರ್ತಿಗಳು, ಉತ್ಸವದೇವರ ಮೂರು ಕಿರೀಟಗಳನ್ನು ಸಮರ್ಪಿಸುತ್ತಾನೆ. ಕೃಷ್ಣದೇವರಾಯ ಇದೇ ಸಂದರ್ಭದಲ್ಲಿ ವೆಂಕಟೇಶ್ವರ, ಶ್ರೀದೇವಿ ಮತ್ತು ಭೂದೇವಿಯರಿಗೆ ಚಿಕ್ಕ ಗಾತ್ರ ಕಿರೀಟಗಳನ್ನು ಕೊಡುಗೆಯಾಗಿ ನೀಡುತ್ತಾನೆ. ಇವುಗಳಲ್ಲದೆ, ಪಚ್ಚೆ, ಮಾಣಿಕ್ಯ, ವಜ್ರ, ಕೆಂಪು, ಚಿನ್ನದ ದಾರ, ಉಡಿದಾರ, ಮುತ್ತು, ವೈಡೂರಿಯ, ನೀಲ ಮೊದಲಾದ ವಸ್ತುಗಳನ್ನು ಅವುಗಳ ತೂಕ, ಸಂಖ್ಯೆ ಮತ್ತು ವಿವರಗಳನ್ನು ಶಾಸನದಲ್ಲಿ ತಿಳಿಸಲಾಗಿದೆ.[8]

ಮೊದಲ ಯಾತ್ರೆ ಕೈಗೊಂಡ ಮೂರು ತಿಂಗಳಲ್ಲಿ ರಾಯ ಎರಡನೇ ಯಾತ್ರೆ ಮಹತ್ವ ಏನೆಂಬುದು ವಿಚಾರಣೀಯವಾದುದು. ಉದಯಗಿರಿಯ ಮೇಲೆ ಯುದ್ಧ ಹೊರಡುವಾಗ ರಾಯ ದೇವರದರ್ಶನ ಪಡೆದಿರಬೇಕು. ಯುದ್ಧಭೂಮಿಗೆ ಹೋಗುವ ಮುನ್ನ ರಾಣಿಯರನ್ನು ಕರೆತರಲಿಲ್ಲ ಎಂದಾಗ ಅವರು ರಾಜಧಾನಿಯ ಅರಮನೆಯಲ್ಲಿದ್ದರೆಂದು ಭಾವಿಸಬಹುದು. ರಾಜನೊಂದಿಗೆ ಅಧಿಕಾರಿಗಳು, ಇತರ ಭಕ್ತರು ದೇವರಿಗೆ ಹಲವಾರು ಬಗೆಯ ದಾನಗಳನ್ನು ಮಾಡಿದ್ದಾರೆ. ಯುದ್ಧಗಳಲ್ಲಿ ಜಯಶಾಲಿಯಾದ ಕೃಷ್ಣದೇವರಾಯ ತಾನು ವಶಪಡಿಸಿಕೊಂಡಿದ್ದ ಅಪಾರ ಸಂಪತ್ತನ್ನು ದೇವಾಲಯ, ಕ್ಷೇತ್ರಗಳಿಗೆ ದಾನಮಾಡಿದ್ದು ಗಮನಾರ್ಹ. ಹಾಗಾಗಿ ಎರಡನೆ ತೀರ್ಥಯಾತ್ರೆಯ ಸಂದರ್ಭದಲ್ಲಿ ರಾಯ ವಿಪುಲವಾದ ದಾನ ಕಾರ್ಯಗಳನ್ನು ಮಾಡುತ್ತಾರೆ.

(3) ತಿರುಪತಿಗೆ ಮೂರನೇ ಯಾತ್ರೆಯನ್ನು 1513 ಜೂನ್ 13 ಸೋಮವಾರ ಕೈಗೊಳ್ಳುತ್ತಾನೆ. ಎರಡನೇ ಯಾತ್ರೆ ಮಾಡಿದ ಒಂದುವರೆ ತಿಂಗಳಲ್ಲೇ ರಾಯನ ಈ ಭೇಟಿಯ ಉದ್ದೇಶವೇನು? ತಿರುಪತಿ ಕ್ಷೇತ್ರ ಮತ್ತು ವೆಂಕಟೇಶ ರಾಯನ ಮೇಲೆ ಸಾಕಷ್ಟು ಪ್ರಭಾವ ಬೀರಿರಬೇಕು. ಈ ಯಾತ್ರೆಯಲ್ಲಿ ತಂದೆ ನರಸನಾಯಕ ಒಡೆಯ ಮತ್ತು ತಾಯಿ ನಾಗಾಜಿ ಅಮ್ಮನವರಿಗೆ ಧರ್ಮವಾಗಲೆಂದು ತಿರುವೇಂಗಳನಾಥ ದೇವರಿಗೆ ನವರತ್ನಖಚಿತವಾದ ಆಭರಣಗಳನ್ನು ದಾನಮಾಡುತ್ತಾನೆ.[9] ತಿರುಮಲೆ ದೇವಾಲಯದ ಎರಡನೆ ಪ್ರಾಕಾರದ ದಕ್ಷಿಣ ಗೋಡೆ ಮೇಲಿರುವ 1513 ಜೂನ್ 13 ಸೋಮವಾರ ಶಾಸನವು ಕೃಷ್ಣದೇವರಾಜ ಮಹಾರಾಯನು ತಿರುವೇಂಗಳ ದೇವರಿಗೆ ಹರಿವಾಣಗಳು, ಗಂಧಹಳ, ಕರ್ಪೂರಕಣ, ಕಸ್ತೂರಿ ಕಣ, ಶುದ್ಧ ಕುಂಕುಮ, ಅಡಕೆ 300, ಎಲೆ 600ಗಳನ್ನು ಮತ್ತು ಚಂದ್ರಗಿರಿ ರಾಜ್ಯದ–

ನಾರಣವರದ ಅಂತಾಡಿ ಚಿತ್ತಾಡಿ ಚಿತ್ತಾವಾಟಿ ಗ್ರಾಮವನ್ನು, ದಾರಧಗ್ರಾಮ, ಕರಕಂಪೇವಾಟಿ ಗ್ರಾಮಗಳನ್ನು ಸಮರ್ಪಿಸುತ್ತಾನೆ.[10] ರಾಯ ಐದು ಗ್ರಾಮಗಳನ್ನು ದಾನ ಮಾಡುವುದರೊಂದಿಗೆ ಅವುಗಳಿಂದ ಬರುವ ಆದಾಯವನ್ನು ತಂದೆ–ತಾಯಿಯವರ ಹೆಸರಿನಲ್ಲಿ ತ್ರೈಮಾಸ–ವತ್ಸರೋತ್ಸವ ನಡೆಸಲು ತಿಳಿಸುತ್ತಾನೆ. ಕೃಷ್ಣದೇವರಾಯ ಒರಿಸ್ಸಾದ ಗಜಪತಿಯನ್ನು ಸೋಲಿಸಿದ ನೆನಪಿಗಾಗಿ ದೇವರಿಗೆ ಕೃತಜ್ಞತೆ ಅರ್ಪಿಸುವ ಸಲುವಾಗಿ ಬಂದಿರಬೇಕು. ಇದೇ ದಿನ ಕೃಷ್ಣದೇವರಾಯ ಕಾಳಹಸ್ತಿಗೂ ಭೇಟಿ ನೀಡಿದನು. ಆದರೆ ತಿರುಮಲೆ–ತಿರುಪತಿಯಲ್ಲಿ ರಾಯನಿಗೆ ಆಕರ್ಷಣೀಯವೇ ಬೇರೆ ಆಗಿತ್ತು.

(4) ಕೃಷ್ಣದೇವರಾಯ ನಾಲ್ಕನೇ ಯಾತ್ರೆಯನ್ನು 1514 ಜುಲೈ 6 ಗುರುವಾರದಂದು ಕೈಗೊಳ್ಳುತ್ತಾನೆ. ಕೃಷ್ಣದೇವರಾಯನು ಉದಯಗಿರಿಯ ಮೇಲೆ ದಂಡೆತ್ತಿ ಪ್ರತಾಪರುದ್ರ ಗಜಪತಿಯನ್ನು ಕೊಂಡವೀಡುವರೆಗೆ ಓಡಿಸಿ ದಿಗ್ವಿಜಯ ಸಾಧಿಸಿ ವಿಜಯನಗರಕ್ಕೆ ಹಿಂತಿರುಗುವಾಗ ಪಟ್ಟಮಹಿಷಿ ತಿರುಮಲಾದೇವಿ ಮತ್ತು ಹೃದಯೇಶ್ವರಿ ಚಿನ್ನಾದೇವಿಯರೊಂದಿಗೆ ತಿರುಪತಿಗೆ ಯಾತ್ರೆ ಹೋಗಿದ್ದ ಸಂದರ್ಭದಲ್ಲಿ ತಿರುವೇಂಗಳನಾಥ ದೇವರಿಗೆ ಕನಕಾಭಿಷೇಕ ಮಾಡಿಸುತ್ತಾನೆ. ಈ ಅಭಿಷೇಕಕ್ಕೆ 30,000 (ಮುವತ್ತು ಸಾವಿರ) ಚಿನ್ನದ ನಾಣ್ಯ (ವರಹ)ಗಳನ್ನು ರಾಯ ಕೊಡುತ್ತಾನೆ. ಮುತ್ತು ರತ್ನಗಳಿಂದ ಮಾಡಿದ ಮೂರು ಎಳೆಯ ಸರವನ್ನು, ದೇವರ ಸೇವೆಗಾಗಿ ತಾಳಪಾಕ ಗ್ರಾಮದ ಆದಾಯವನ್ನು ದಾನವಾಗಿ ನೀಡುತ್ತಾನೆ.[11] ರಾಯ ದೇವರಿಗೆ ಅರ್ಪಿಸಿದ್ದು 483 ಮುತ್ತುಗಳು, 119 ಮಾಣಿಕ್ಯಗಳು, 121 ನೀಲಮಣಿಗಳೂ, 480 ಚಿನ್ನದ ಕುಸುರಿ (ಸಣ್ಣ ಎಳೆ ಸರ), 160 ಅಡಕಟ್ಟು ಇದ್ದು ಒಟ್ಟು 250 ತೂಗುವ ತ್ರಿಸರವನ್ನೂ (ಮೂರಳೆ ಸರ) ಸಲ್ಲಿಸಿದನು; 322 ವಜ್ರಗಳನ್ನೂ ನೂರು ಮಾಣಿಕ್ಯಗಳನ್ನೂ ಕಟ್ಟಿದ್ದು 275 ತೂಗುವ ಕಡಗಗಳ ಜೋಡಿಯನ್ನೂ (ಬಾಹುವಲಯಗಳನ್ನು) ಒಪ್ಪಿಸಿದನು. ಪೊತಪಿನಾಡೊಳಗಿದ್ದ ತಾಳ್ಳಪಾಕ್‌ಪೆಂಬ ಗ್ರಾಮವನ್ನು ದೇವರಿಗೆ ಬಿಟ್ಟುಕೊಡುವ ಮೂಲಕ ದೇವರಿಗೆ ಪ್ರತಿದಿನ ಹತ್ತು ಹರಿವಾಣಗಳು, ಎರಡು ಅಕಾಳಿ ಮರಡೆ ಮತ್ತು ಅಪ್ಪುಪಡಿಗಳನ್ನು ಸಲ್ಲಬೇಕೆಂದು, ಹೀಗೆ ಸಲ್ಲಿಸಿದ ನೈವೇದ್ಯದಲ್ಲಿ ಒಂದು ಭಾಗವು ತನ್ನ ಪುರೋಹಿತ ರಂಗಾದೀಕ್ಷಿತನಿಗೂ, ಒಂದು ಭಾಗವು ಶಿವದೀಕ್ಷಿತನಿಗೂ, ಬ್ರಾಹ್ಮಣ ಭೋಜನದ ಛತ್ರಕ್ಕಾಗಿ ಕಟ್ಟಳೆಮಾಡಿ ಸೇರಬೇಕೆಂದು ರಾಯ ತಿಳಿಸಿದ್ದನು.[12]

ಕ್ರಿ.ಶ. 1514 ಜುಲೈ 6, ಗುರುವಾರ ಕೃಷ್ಣದೇವರಾಯರ ರಾಣಿ ಚಿನ್ನದೇವಿಯರು ತಿರುವೇಂಗಳನಾಥ ದೇವರ ಸೇವೆಗಾಗಿ ಮುತ್ತು ರತ್ನ, ವಜ್ರಗಳಿಂದ ಕೂಡಿದ ಪದಕ ಕಂಠಮಾಲೆಯನ್ನು ದೇವರ ಪೂಜೆ–ಪುನಸ್ಕಾರ ಅಮೃತಪಡಿ ನೈವೇದ್ಯಕ್ಕಾಗಿ ತೊಂಡಮಂಡಲ ನಾಡಿನ ಮುಡಿಯೂರು ಗ್ರಾಮವನ್ನು ದಾನವಾಗಿ ನೀಡುತ್ತಾಳೆ. ಇವಳು ಮುತ್ತು, ರತ್ನಗಳನ್ನು ಬ್ರಾಹ್ಮಣರ ಭೋಜನ ಛತ್ರದ ಸೇವೆಗೂ ದಾನ ನೀಡುತ್ತಾಳೆ.

ಇದೇ ದಿನ ರಾಯನೊಂದಿಗಿದ್ದ ರಾಣಿ ತಿರುಮಲಾದೇವಿ ದೇವರ ಸೇವೆಗಾಗಿ ವಜ್ರ, ಪಚ್ಚೆ, ಮಾಣಿಕ್ಯ, ಮುತ್ತುಗಳಿಂದ ಕೂಡಿದ ಪದಕ ಸರವನ್ನು ದಾನವಾಗಿ ನೀಡುತ್ತಾಳೆ. ಅಲ್ಲದೆ ದೇವರ ನಾನಾ ಪೂಜೆ–ನೈವೇದ್ಯಗಳಿಗಾಗಿ ಚೋಳಿಂಗವರಪಟಿ ನಾಡಿನ ಪಿರಾಟಿ ಕೊಳತೂರು ಗ್ರಾಮವನ್ನು ಸಮರ್ಪಿಸುತ್ತಾಳೆ. ಪದಕದ ಸರದಲ್ಲಿದ್ದ ಮುತ್ತು–ರತ್ನಗಳ ಸಂಖ್ಯೆಯನ್ನು ನೀಡಿದ್ದು, ಛತ್ರದ ಬ್ರಾಹ್ಮಣರ ಭೋಜನಕ್ಕೂ ಸೇರಿಸಿ ದಾನ ನೀಡಲಾಗಿದೆ.[13]

ಈ ಯಾತ್ರೆಯ ಪೂರ್ವದಲ್ಲಿ ರಾಯ ಉದಯಗಿರಿಯನ್ನು ಗೆದ್ದ ಮೇಲೆ ಅಲ್ಲಿಂದ ತಂದಿದ್ದ ಬಾಲಕೃಷ್ಣನ ಸುಂದರ ವಿಗ್ರಹವನ್ನು ವಿಜಯನಗರದಲ್ಲಿ ಪುನಃ ಪ್ರತಿಷ್ಠಾಪಿಸುತ್ತಾನೆ. ಆ ಮೂಲಕ ತನ್ನ ಅದಮ್ಯವಾದ ದೈವಶಕ್ತಿಯನ್ನು ಪ್ರಜೆಗಳಿಗೆ ತೋರಿಸಿಕೊಟ್ಟನು. ಹೀಗೆ ಒಂದಿಲ್ಲೊಂದು ಬಗೆಯಲ್ಲಿ ಕೃಷ್ಣದೇವರಾಯನ ಯುದ್ಧಗಳು, ಒಪ್ಪಂದಗಳು, ಹಾಗೆಯೇ ಧಾರ್ಮಿಕ ಕ್ಷೇತ್ರಗಳಿಗೆ ಉದಾರದಾನ, ಭೇಟಿ ಇತರ ಸಂಗತಿಗಳನ್ನು ಗಮನಿಸಿದರೆ ರಾಯನ ವ್ಯಕ್ತಿತ್ವ ಮತ್ತು ಪ್ರಭುತ್ವದಲ್ಲಿ ಆತನಿಗಿದ್ದ ಶಕ್ತಿಯನ್ನು ಅರ್ಥೈಸಿಕೊಂಡಂತಾಗುತ್ತದೆ.

(5) ಐದನೆಯ ಯಾತ್ರೆಯನ್ನು ಕೃಷ್ಣದೇವರಾಯ 1515 ಅಕ್ಟೋಬರ್ 25ರಂದು (ಗುರುವಾರ) ಕೈಗೊಳ್ಳುತ್ತಾನೆ. ಕೃಷ್ಣದೇವರಾಯನು ಪೂರ್ವಭಾಗದ ದಿಗ್ವಿಜಯಯಾತ್ರೆ ಮಾಡಿ ಉದಯಗಿರಿ ದುರ್ಗವನ್ನು ಗೆದ್ದು, ತಿರುಮಲಕಾಂತರಾಯನನ್ನು

ಸೆರೆಹಿಡಿದು ಬರುವಾಗ ಅದ್ದಂಕಿ, ವಿನುಕೊಂಡ, ಬೆಲ್ಲಂಕೊಂಡ, ನಾಗಾರ್ಜುನಕೊಂಡ, ತಂಗೇಡ, ಕೇತವರಂ ಮೊದಲಾದ ಗಿರಿದುರ್ಗಗಳನ್ನು ಗೆದ್ದುಕೊಂಡು ಕೊಂಡವೀಡುವಿನ ಮೇಲೆ ಧಾಳಿಯಿಡುತ್ತಾನೆ. ಈ ಸಮಯದಲ್ಲಿ ಅಲ್ಲಿದ್ದ ಪ್ರತಾಪರುದ್ರ ಗಜಪತಿರಾಯನ ಮಗ ವೀರಭದ್ರರಾಯ, ಹಂಬೀರಪಾತ್ರನ ಮಗ ನರಹರಿದೇವು, ರಾಯಚೂರಿನ ಮಲ್ಲೂಖಾನ, ಉದ್ದಂಡಖಾನ, ಜನ್ಯಾಲಕ ಸವಾಪಾತ್ರ, ಪೊಸಪಾಟಿ ರಾಜಿರಾಜ, ಶ್ರೀನಾಥ ರಾಜ, ಲಕ್ಷ್ಮೀಪತಿರಾಜ, ಬಾಲಚಂದ್ರ ಮಹಾಪಾತ್ರ, ಮೊದಲಾದವರನ್ನು ಗೆದ್ದು, ಸೆರೆಹಿಡಿದು, ಅವರನ್ನು ಕ್ಷಮಿಸಿ ಜೀವದಾನಮಾಡುತ್ತಾನೆ. ಹಿಂತಿರುಗುವಾಗ ಕೃಷ್ಣಾನದೀ ತೀರದ ಅಮರೇಶ್ವರಕ್ಕೆ ಬಂದು ಅಮರೇಶ್ವರ ದೇವರಿಗೆ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿಯರು ಮಹಾದಾನಗಳನ್ನು ಮಾಡಿದರು.[14] ಇದೇ ಸಂದರ್ಭದಲ್ಲಿ ತಿರುಮಲೆಯ ತಿರುವೇಂಗಳನಾಥನಿಗೆ ನವರತ್ನಖಚಿತವಾದ ಪ್ರಭಾವಳಿಯನ್ನು ಮಾಡಿಸಿ ದಾನವಾಗಿ ನೀಡಿ, ನವರತ್ನಗಳನ್ನು ಇದರೊಂದಿಗೆ ಕೊಟ್ಟಿರುವುದಾಗಿ ತಿಳಿಯುತ್ತದೆ. ಆದರೆ ರಾಯನು ತಿರುಪತಿಗೆ ಹೋಗಿರಲಿಲ್ಲ ಎನ್ನಲಾಗಿದೆ.

ಐದನೆಯ ಯಾತ್ರೆಯ ಬಗ್ಗೆ ಹಾಗೂ ಕಾಲಮಾನದ ಬಗ್ಗೆ ಚರ್ಚೆಗಳಿವೆ. ಕ್ರಿ.ಶ. 1515 ಜೂನ್‌ನಲ್ಲಿ ಎಂದು, ಡಾ. ಎ.ವಿ. ವೆಂಕಟರತ್ನಂ ಅವರು 1517 ಎಂದು ತಿಳಿಸುತ್ತಾರೆ. ಎಸ್.ಕೆ. ರಾಮಚಂದ್ರರಾಯರು ತಮ್ಮ 'ತಿರುಪತಿ ತಿಮ್ಮಪ್ಪ' ಕೃತಿಯಲ್ಲಿ 1517 ಜನವರಿ 2 ಎಂದು ತಿಳಿಸಿದ್ದಾರೆ. ಕೃಷ್ಣದೇವರಾಯನ ತಿರುಮಲೆ ಶಾಸನದಲ್ಲಿ 1515 ಅಕ್ಟೋಬರ್ 25 ಎಂದು ತಿಳಿದುಬರುತ್ತದೆ. ಇದನ್ನೇ ಖಚಿತವೆಂದು ನಂಬಲಾಗಿದೆ. ಜೈತ್ರಯಾತ್ರೆಯ ಸಂದರ್ಭದಲ್ಲಿ, ತನಗೆ ಸಂಕಷ್ಟ ಬಂದಾಗ, ಸಂತೋಷ ಆದಾಗ ರಾಯ ಕ್ಷೇತ್ರಗಳ ದರ್ಶನದಂತೆ ತಿರುಪತಿಗೆ ಮಾಡಿದ್ದ. ಒಂದು ಉದಾಹರಣೆ ಇದಕ್ಕೆ ನೀಡಬಹುದು. ಈ ಪ್ರಬಲ ದುರ್ಗವು (ಉದಯಗಿರಿ?) 1515 ಜೂನ್ 23ರಂದು ಶರಣಾಯಿತು. ಕೋಟೆಯ ಮತ್ತು ಅದಕ್ಕೆ ಸೇರಿದಂತಿದ್ದ ಪ್ರದೇಶದ ಆಡಳಿತವನ್ನು ಮಹಾಪ್ರಧಾನಿ ತಿಮ್ಮರಸುವಿಗೆ ವಹಿಸಲಾಯಿತು. ಆತ ತನ್ನ ಸೋದರಳಿಯ ನಂದಿಡ್ಲಗೋಪನ ವಶಕ್ಕೆ ಅವೆಲ್ಲದರ ಆಡಳಿತವನ್ನೊಪ್ಪಿಸಿ ತಾನು ಸಹ ದಂಡೆಯಾತ್ರೆಯನ್ನು ಸೇರಿಕೊಂಡನು. ತಿರುಮಲೆಯು ಸೇರಿದಂತೆ ಹಲವಾರು ಯಾತ್ರಾ ಸ್ಥಳಗಳನ್ನು ಸಂದರ್ಶಿಸಿದ ತರುವಾಯ ಸ್ವಲ್ಪ ಕಾಲದ ಮೊಕಾಮಿಗಾಗಿ, ರಾಯನು ರಾಜಧಾನಿಗೆ ಮರಳಿದನು.[15] ಹೀಗೆ ಯುದ್ಧ ಹೋರಾಟದ ಜತೆ ಜತೆಗೆ ರಾಯ ದೇವರ ದರ್ಶನ ಪಡೆದದ್ದು ವಿಸ್ಮಯಕಾರಿ ಸಂಗತಿಯಾಗಿದೆ.

ವಿಜಯದಿಂದ ಪೂರ್ವ ದಿಗ್ವಿಜಯದಲ್ಲಿ ಜಯಶೀಲನಾದ ಕೃಷ್ಣದೇವರಾಯ ಹಲವಾರು ಅರಸರನ್ನು ಗೆದ್ದು ಗಿರಿ-ದುರ್ಗ, ಸ್ಥಳಗಳನ್ನು ವಶಪಡಿಸಿಕೊಂಡನು. ಕ್ರಿ.ಶ. 1515ರ ಅಕ್ಟೋಬರ್ 25ರಂದು ತಿರುವೆಂಗಳನಾಥನಿಗೆ ನವರತ್ನ ಪ್ರಭಾವಳಿ (ಮಕರ ತೋರಣ) ಕಳುಹಿಸಿದ್ದ. ಈ ಪ್ರಭಾವಳಿಯಲ್ಲಿ 81 ಮಾಣಿಕ್ಯಗಳೂ, 10,694 ಕೆಂಪುಗಳು, 754 ಪಚ್ಚೆಗಳು, 530 ನೀಲಮಣಿಗಳು, 40 ವೈಡೂರ್ಯಗಳು, 45 ಗೋಮೇಧಿಕಗಳು, 74 ಪುಷ್ಯರಾಗಗಳು, 920 ಹಳೆ ವಜ್ರಗಳು, 3933 ಮುತ್ತುಗಳು, ನಾಲ್ಕು ಗರಣಿ ನೀಲಗಳು, ಆರು ಹರಳುಗಳು, 30 ಶಂಖಗಳು ಸೇರಿದಂತೆ ಒಟ್ಟು ಪ್ರಭಾವಳಿಯ ತೂಕ 31124 ಎನ್ನಲಾಗಿದ್ದು, ರಾಯ ಇದನ್ನು ಸಮರ್ಪಿಸಲು ತಿರುಮಲೆಗೆ ಬರಲಿಲ್ಲ.[16]

ಕಳಿಂಗ ದಿಗ್ವಿಜಯದಲ್ಲಿ ಜಯಶೀಲನಾದ ಕೃಷ್ಣದೇವರಾಯ ಜನವರಿ 2, 1517ರಂದು ತಿರುಪತಿಗೆ ಭೇಟಿ ಕೊಡುತ್ತಾನೆ. ಇದನ್ನು ಸಹ ಐದನೆಯ ಯಾತ್ರೆ ಎಂದು ಎಸ್.ಕೆ. ರಾಮಚಂದ್ರರಾವ್ ಮೊದಲಾದವರು ಕರೆದಿದ್ದಾರೆ. ಈ ಬಾರಿ ಬಂದಾಗ ದೇವರಿಗೆ ಕಂಠಮಾಲೆ, ಪದಕಗಳನ್ನು ಸಮರ್ಪಿಸಿದುದಲ್ಲದೆ, ಗರ್ಭಗುಡಿಯ ಮೇಲಿರುವ ವಿಮಾನಕ್ಕೆ ಬಂಗಾರದ ಮೆರುಗು ಹಾಕಿಸಲೆಂದು ಮೂವತ್ತು ಸಾವಿರ ಗಟ್ಟಿ ಬಂಗಾರದ ವರಹಾಗಳನ್ನು ಸಲ್ಲಿಸಿ, ತಿರುವೇಂಗಳನಾಥನಿಗೆ ಪ್ರತಿ ಶುಕ್ರವಾರವೂ ನಡೆಯುವ ಪುಳುಕಾಪು ವಿಧಿಗೆಂದು ತಿರುಪತಿಯ ಸುತ್ತ ಮುತ್ತ ಇದ್ದ ಹಳ್ಳಿಗಳಿಂದ ಸುಂಕವಾಗಿ ಒಂದು ಸಾವಿರ ಬಂಗಾರದ ವರಹಗಳನ್ನು ಗುಡಿಯ ಸ್ಥಾನತ್ತಾರರು ಪಡೆಯಬಹುದೆಂದು ತಿಳಿಸಿದನು.[17]

ಈ ಹೊತ್ತಿಗಾಗಲೇ ಕೃಷ್ಣದೇವರಾಯ ತಿರುಪತಿ ದೇವಾಲಯದ ಪ್ರವೇಶ ದ್ವಾರದ ಎಡಭಾಗದಲ್ಲಿ ಹೊರ ಬಾಗಿಲಪಕ್ಕದಲ್ಲಿ ತನ್ನ ಹಾಗೂ ತನ್ನಿಬ್ಬರ ರಾಣಿಯರ ತಾಮ್ರದ ಪುತ್ಥಳಿಗಳನ್ನು ಅಂಜಲಿಬದ್ಧ ಮುದ್ರೆಯಲ್ಲಿ ಮಾಡಿಸಿ ನಿಲ್ಲಿಸಿದನೆಂದು

ತಿಳಿಯುವುದು.[18] ನಡುವೆ ಕೃಷ್ಣದೇವರಾಯ ಬಲಗಡೆ ಚಿನ್ನಾದೇವಿ, ಎಡಗಡೆ ತಿರುಮಲದೇವಿಯರು ನಿಂತಿದ್ದು ಕನ್ನಡ ಅಕ್ಷರಗಳಿಂದ ಕೆತ್ತಲಾಗಿದೆ. ಕೃಷ್ಣದೇವರಾಯ ಸದಾ ದಿಗ್ವಿಜಯಗಳಲ್ಲಿ ಕಾಲಕಳೆದು, ರಾಜಧಾನಿಯಲ್ಲಿ ಕೆಲಸಕಾರ್ಯಗಳ ಒತ್ತಡದಿಂದ ತಿರುಪತಿಗೆ ಹೋಗುವುದು ಕಡಿಮೆ ಮಾಡಿದ ಕಾರಣಕ್ಕೋ ಏನೋ ದೇವರ ಎದುರೇ ಕೈಮುಗಿದು ನಿಂತಿರುವ ಈ ಕಂಚಿನವಿಗ್ರಹಗಳು ಅಂದಿನ ಧಾರ್ಮಿಕ ಆಸಕ್ತಿ, ಭಕ್ತಿಗಳನ್ನು ಸಾಕ್ಷೀಕರಿಸುತ್ತವೆ.[19]

(6) ಕ್ರಿ.ಶ. 1518 ಅಕ್ಟೋಬರ್ 16ರಂದು ತನ್ನ ಪಟ್ಟಮಹಿಷಿ ತಿರುಮಲಾದೇವಿಯೊಂದಿಗೆ ರಾಯನು ಆರನೇ ಯಾತ್ರೆಯನ್ನು ಕೈಗೊಂಡನು. ರಾಣಿ ಗಂಡುಮಗುವಿಗೆ ಜನ್ಮವಿತ್ತ ಕಾರಣ ಯಾತ್ರೆ ಕೈಗೊಳ್ಳುವನು. ರಾಯನು ತನ್ನ ಮನೆದೇವರಾದ ಶ್ರೀವೆಂಕಟೇಶ್ವರನ ಆವಾಸಸ್ಥಾನದ ಹೆಸರಿನ ಮೇಲೆ ಆ ಮಗುವಿಗೆ 'ತಿರುಮಲ' ಎಂದು ನಾಮಕರಣ ಮಾಡಿದನು.[20] ಈ ಯಾತ್ರೆಯ ಸ್ಮರಣೀಯವಾದ ಮತ್ತೊಂದು ಕಾರ್ಯವೆಂದರೆ ತಿರುಮಲೆಯ ಶ್ರೀ ವೆಂಕಟೇಶ್ವರನ ದೇವಾಲಯದ ಗರ್ಭಗುಡಿಯ ಮೇಲ್ಭಾಗದಲ್ಲಿ ಗೋಪುರ ಕಟ್ಟಿಸಿ ಸುಂದರವಾಗಿ ಚಿನ್ನದ ಲೇಪನ ಮಾಡಿಸಿದನು. ಇದೇ ಸಂದರ್ಭದಲ್ಲಿಯೇ ತನ್ನ ಹಾಗೂ ರಾಣಿಯರ ಕಂಚಿನ (ಪುತ್ಥಳಿ) ಪ್ರತಿಮೆಗಳನ್ನು ದೇವಾಲಯದಲ್ಲಿ ಇರಿಸಿದ್ದನೆಂದು ತಿಳಿಯುವುದು. ಆದರೆ ಈ ಕಾರ್ಯ ಈ ಮೊದಲೇ ಜರುಗಿದಂತಿದೆ. (1518 ಸೆಪ್ಟೆಂಬರ್ 9 ರಂದು ವಿಮಾನಕಾರ್ಯ ಮುಗಿಯಿತು.)

ಆರನೇ ಯಾತ್ರೆ ಕೈಗೊಂಡ ಮೂರು ವರ್ಷಗಳಲ್ಲಿ ರಾಯನಿಗೆ 1521ರ ಜನವರಿ 30 ಅಮಾವಾಸ್ಯೆಯಂದು ಕುಹೂಯೋಗ ಒದಗಿ ಬಂದಾಗಿ ಆಪತ್ತು ನಿವಾರಿಸಿದ ವ್ಯಾಸತೀರ್ಥರು, ಸಿಂಹಾಸನದ ಮೇಲೆ ಕುಳಿತು ರಾಯನಿಗೆ ಬಂದ ಕಷ್ಟವನ್ನು ಪರಿಹರಿಸಿದರೆಂದು ತಿಳಿಯುತ್ತದೆ.

(7) ಇದಾದನಂತರ ಕ್ರಿ.ಶ. 1521 ಫೆಬ್ರವರಿ 17ರಂದು (ಭಾನುವಾರ) ಏಳನೆಯ ಬಾರಿ ಕೃಷ್ಣದೇವರಾಯ ತಿರುಮಲೆಗೆ ಬಂದನು. ರಾಯ ತಿರುವೇಂಗಳನಾಥ ದೇವರಿಗೆ ನವರತ್ನಖಚಿತವಾದ ಪೀತಾಂಬರ, ನವರತ್ನಖಚಿತವಾದ ಎರಡು ಚಾಮರಗಳನ್ನು, ಒಂದು ಪದಕವನ್ನು ಮತ್ತು 10,000 ವರಹಗಳನ್ನು ತನ್ನ ರಾಣಿ ತಿರುಮಲದೇವಿ ಕೈಯಿಂದ ಸಮರ್ಪಿಸುತ್ತಾನೆ. ರಾಯ ದೇವರ ತಲೆಯ ಆಭರಣವಾಗಿ 'ಕುಲ್ಲಾಯ', ಕುಲಾವಿಯೆಂದು ತಲೆಗೆ ನೀಳವಾಗಿ ಹಾಕಿಕೊಳ್ಳುವ ಟೋಪಿಯಂತಿರುವ ಆಭರಣವನ್ನು ಕೊಡುತ್ತಾನೆ.

ತಿರುಪತಿಗೆ ರಾಯನ ಕೊನೆಯ ಭೇಟಿ 1521 ಆಗಿರುತ್ತದೆ. ಅಷ್ಟು ಹೊತ್ತಿಗಾಗಲೇ ಆರುವರ್ಷದ ಮಗ ತೀರಿದ ಸುದ್ದಿ ರಾಯನನ್ನು ನೋವಿನಿಂದ ಮೇಲೇಳಿಸಲಿಲ್ಲ. ರಾಯನ ಆರೋಗ್ಯವು ಕ್ಷೀಣಿಸಿತು. ಹೆಸರಿಗೆ ರಾಜನಾಗಿದ್ದ, ಜವಾಬ್ದಾರಿಯನ್ನು ತಮ್ಮ ಅಚ್ಯುತರಾಯನಿಗೆ ಬಿಟ್ಟುಕೊಟ್ಟಿದ್ದ. ಹೊಣೆಗಾರಿಕೆಯಿಂದ ರಾಯ ತಪ್ಪಿಸಿಕೊಳ್ಳಲಿಲ್ಲ. ಕೊನೆಗೆ 1530ರಲ್ಲಿ (1529) ತೀರಿದ ಬಳಿಕ ಅಚ್ಯುತನೇ ರಾಜನಾಗುತ್ತಾನೆ.

ಕೃಷ್ಣದೇವರಾಯನು ಕಳಿಂಗದ ದಂಡೆಯಾತ್ರೆಯ ವಿಜಯದಿಂದ ಹಿಂದುರುಗಿದ ಮೇಲೆ ಸಾಹಿತ್ಯಾತ್ಮಕ ಹವ್ಯಾಸದಲ್ಲಿ ಹೆಚ್ಚಿನ ಕಾಲವನ್ನು ಸವೆಸಿದನು. ರಾಮರಾಯರು ತಿಳಿಸಿರುವಂತೆ ಹೀಗೆ ಸಾಳುವ ನರಸಿಂಹನ ಅಪೇಕ್ಷೆಯನ್ನು ಪೂರ್ಣಗೊಳಿಸಿದ ರಾಯನು 1521 ಫೆಬ್ರವರಿ 17ರಂದು ತಿರುಮಲೆಗೆ ಯಾತ್ರೆ ಹೋಗಿ ಅಲ್ಲಿಯ ದೈವವಾದ ಶ್ರೀ ವೆಂಕಟೇಶ್ವರನನ್ನು ಪೂಜೆ ಪುನಸ್ಕಾರಗಳಿಂದ ಸಂಪ್ರೀತಗೊಳಿಸುವುದರ ಮೂಲಕ ಈ ಮಹಾವಿಜಯವನ್ನು ವಿಜೃಂಭಣೆಯಿಂದ ಆಚರಿಸಿದನು.

ಈ ಯಾತ್ರೆಗೂ ಮುನ್ನ ರಾಯ ಗಬ್ಬೂರು ಕದನದಲ್ಲಿ ಆದಿಲ್‌ಶಾಹಿ ಸುಲ್ತಾನನನ್ನು ಸೋಲಿಸಿ, ರಾಯಚೂರು ಕೋಟೆ, ಬಿಜಾಪುರ, ಫಿರೋಜಾಬಾದ ಮತ್ತು ಹಸನಾಬಾದ್ ಕೋಟೆಗಳನ್ನು ವಶಪಡಿಸಿಕೊಂಡ ಪ್ರತೀಕವಾಗಿ ರಾಯ ತಿರುಪತಿಗೆ ಹೋಗಿದ್ದನು. ಈ ಬಗ್ಗೆ ಇಪ್ಪತ್ತೈದಕ್ಕೂ ಹೆಚ್ಚು ಶಾಸನಗಳು ಬೆಳಕು ಚೆಲ್ಲುತ್ತವೆ.

ಕೃಷ್ಣದೇವರಾಯ ವೆಂಕಟೇಶ್ವರನ (ಶ್ರೀ ವೈಷ್ಣವ) ಬಗ್ಗೆ ಸಾಕಷ್ಟು ಭಕ್ತಿ, ಗೌರವ ಹೊಂದಿರುವ ಬಗ್ಗೆ ನಿದರ್ಶನಗಳಿವೆ. ರಾಯನು ಒಂದು ದಿನ ಶ್ರೀಕಾಕುಳ ಕ್ಷೇತ್ರಕ್ಕೆ ಹೋಗಿ ಆಂಧ್ರ ವಿಷ್ಣುವೆಂದು ಪ್ರಸಿದ್ಧನಾದ ಮಧುನಾಥನನ್ನು ಸಂದರ್ಶನ ಮಾಡಿದನು. ಅಲ್ಲಿ ಹರಿವಾಸರದ ಉಪವಾಸವನ್ನಾಚರಿಸಿ ರಾತ್ರಿ ನಿದ್ರಿಸುತ್ತಿದ್ದಾಗ ಮಹಾವಿಷ್ಣುವು ಸ್ವಪ್ನದಲ್ಲಿ ಕಾಣಿಸಿಕೊಂಡು ಹೀಗೆ ಹೇಳಿದನು. "ರಾಯನೇ ನೀನು ಗೀರ್ವಾಣ ಭಾಷೆಯಲ್ಲಿ ರಚಿಸಿದ ಮದಲಸಾ ಚರಿತ್ರೆ ಸತ್ಯಾವಧೂ ಪ್ರೀಣನಂ, ಸಕಲ ಕಥಾಸಾರ ಸಂಗ್ರಹಂ, ಜ್ಞಾನ ಚಿಂತಾಮಣಿ, ರಸಮಂಜರಿ ಎಂಬ ಕಾವ್ಯಗಳು ನನಗೆ ಬಹಳ ಪ್ರಿಯವಾಗಿವೆ. ನಾನು ಅವುಗಳನ್ನು ಬಹಳ ಮೆಚ್ಚಿಕೊಂಡಿದ್ದೇನೆ. ಇನ್ನು ನೀನು ನನಗಾಗಿ ಆಂಧ್ರ ಭಾಷೆಯಲ್ಲಿ ಒಂದು ಕೃತಿಯನ್ನು ರಚಿಸು. ಶ್ರೀರಂಗದಲ್ಲಿ ಗೋದಾದೇವಿ ತಾನು ಧರಿಸಿದ್ದ ಹೂಮಾಲೆಯನ್ನೇ ನನಗೆ ಸಮರ್ಪಿಸಿದ ಕಥೆಯನ್ನೂ ಅವಳು ನನ್ನ ಒಲವಿಗೆ ಪಾತ್ರಳಾದ ವೃತ್ತಾಂತವನ್ನೂ ಬರೆ. ಕನ್ನಡ ರಾಯ ! ತೆಲುಗೇ ಏಕಾಗಬೇಕೆಂದು ಪ್ರಶ್ನಿಸಬೇಡ; ನಾನು ತೆಲುಗುವಲ್ಲಭ. ಇದು ತೆಲುಗು ದೇಶ. ಅಲ್ಲದೆ ಹಲವು ಭಾಷೆಗಳನ್ನು ಬಲ್ಲ ನಿನಗೆ ತಿಳಿಯದೆ? ದೇಶಭಾಷೆಗಳಲ್ಲಿ ತೆಲುಗು ಚೆನ್ನ. ಆದ್ದರಿಂದ ನನಗೆ ಪ್ರಿಯವಾದ ಈ ಕಥೆಯನ್ನು ತೆಲುಗು ಕಾವ್ಯವಾಗಿ ರಚಿಸು. ಆ ಕಾವ್ಯವನ್ನು ನಿನ್ನ ಇಷ್ಟದೈವವಾದ ಶ್ರೀ ವೆಂಕಟೇಶ್ವರನಿಗೆ ಅಂಕಿತಮಾಡು" ಇಷ್ಟು ಹೇಳಿ ಸ್ವಾಮಿ ಅದೃಶ್ಯನಾದನು. ಅದರಂತೆ ರಾಯ ಆಂಧ್ರ ವಿಷ್ಣುವಿನ ಮೂಲಕ ತಿಳಿದುಕೊಂಡಂತೆ 'ಆಮುಕ್ತಮಾಲ್ಯದ' ಕಾವ್ಯ (ಕೃತಿಯನ್ನು) ರಚಿಸಿದನು.[22]

ಒಟ್ಟಾರೆ ಹೇಳುವುದಾದರೆ, ಶ್ರೀಕೃಷ್ಣದೇವರಾಯ ತನ್ನ ಸಾಮ್ರಾಜ್ಯದಲ್ಲಿ ವಿವಿಧ ಧರ್ಮ, ದೇವರು, ಕ್ಷೇತ್ರಗಳಿದ್ದರೂ ಶ್ರೀವೈಷ್ಣವದ ಬಗ್ಗೆ ವಿಶೇಷ ಆಸಕ್ತಿ ಇತ್ತು. ಈತನಿಗೆ ತಿರುಪತಿ ವೆಂಕಟೇಶ್ವರ ಇಷ್ಟ ದೈವ.

ತನ್ನ ರಾಜ್ಯಾಳ್ವಿಕೆಯಲ್ಲಿ ಏಳು ಬಾರಿ ತಿರುಪತಿ ಯಾತ್ರೆ ಮಾಡಿದ್ದಾನೆ. ತಿರುಪತಿ ದೇವಾಲಯದಲ್ಲಿ ರಾಯ ಮತ್ತು ಆತನ ರಾಣಿಯರ ವಿಗ್ರಹಗಳಿವೆ. ಆತನ ಮಗನಿಗೆ ತಿರುಮಲನೆಂದು, ಮಗಳಿಗೆ ವೆಂಗಳಾಂಬೆ, ಇನ್ನೊಬ್ಬಳಿಗೆ ತಿರುಮಲಾಂಬೆ ಎಂದು ಹೆಸರಿಟ್ಟಿದ್ದ. ತಾನು ಬರೆದ ಗ್ರಂಥವನ್ನು ಶ್ರೀ ವೆಂಕಟೇಶ್ವರನಿಗೆ ಅಂಕಿತ-ಅರ್ಪಣೆ ಮಾಡಿರುವುದು ನೋಡಿದರೆ ಆತನಿಗಿದ್ದ ಭಕ್ತಿ ವೇದ್ಯವಾಗುತ್ತದೆ. ರಾಜಪ್ರಭುತ್ವದಲ್ಲಿ ಬಹುಸಂಖ್ಯಾತ ಭಕ್ತಿಯನ್ನು ಕೃಷ್ಣದೇವರಾಯ ತಿರುಪತಿಯ ಭೇಟಿಯ ಮೂಲಕ ತನ್ನತ್ತ ಸೆಳೆದುಕೊಂಡನು. ಅವನ ಯಾತ್ರೆಗಳು ರಾಜ್ಯದ ಸಮಗ್ರ ಅಭಿವೃದ್ಧಿ, ಅಭ್ಯುದಯ, ಶಾಂತಿ, ಸುಭಿಕ್ಷೆ ನೆಲೆಸಲು ಕಾರಣವಾಗಿದ್ದವು.

ರಾಯ ತಿರುಪತಿಗೆ ಮಾತ್ರ ಹೆಚ್ಚಿನ ಒಲವು ತೋರಿಸಿರುವುದು ಧಾರ್ಮಿಕವಾಗಿ ಅನುಮಾನಕ್ಕೆಡೆಮಾಡಿಕೊಟ್ಟಿದೆ. ಇವನ ಮತ್ತೊಂದು ಸಾಧನೆಯ ಕಾರ್ಯವೆಂದರೆ ತೀರ್ಥಯಾತ್ರೆಗಳನ್ನು ಕೈಗೊಳ್ಳುವಾಗ ಏಕಾಂಗಿಯಾಗಿ ಹೋಗದೆ ತನ್ನ ರಾಣಿಯರು, ಅಧಿಕಾರಿಗಳು, ಊಳಿಗದವರು, ವ್ಯಾಪಾರಿಗಳು, ಮಂತ್ರಿ, ಪ್ರಧಾನಿ, ದಂಡನಾಯಕ ಇತರರನ್ನು ಕರೆದುಕೊಂಡು ಹೋಗಿದ್ದು ಸ್ಮರಣೀಯ.

ಕೃಷ್ಣದೇವರಾಯನ ಪ್ರಧಾನಿ ಸಾಳುವ ತಿಮ್ಮಣ್ಣ ದಂಡನಾಥ ಮೂವತ್ತು ವರ್ಷಗಳ ಮಂತ್ರಿಯಾಗಿದ್ದನು. ವೆಂಕಟೇಶ್ವರನಿಗೆ ಇವನು ಸಾಕಷ್ಟು ಧರ್ಮ-ದಾನಗಳನ್ನು ಮಾಡಿದನು. ತಿಮ್ಮಮಂತ್ರಿ, ತಿರುಮಲೆಯ ದೇವರಿಗೆ ಹಲವು ಗ್ರಾಮಗಳನ್ನು ದಾನ ಮಾಡಿದನು. 1512ರಲ್ಲಿ ತಿಮ್ಮ ಮಂತ್ರಿ ಪೊತ್ತಪಿ ನಾಡಿನಲ್ಲಿದ್ದ ಪರಾಂದಲೂರು ಗ್ರಾಮವನ್ನು, 1522 ಗಂಡಿಕೋಟ ಸೀಮೆಯ ಮೇಲ್‌ಪಾಡಿ ಗ್ರಾಮವನ್ನು ಗುಡಿಗೆ ಕೊಟ್ಟನು. ತಿಮ್ಮ ಮಂತ್ರಿಯ ಪತ್ನಿ ಲಕ್ಷ್ಮಿ ಅಮ್ಮನು ಸಹಾ ವೆಂಕಟೇಶ್ವರ ದೇವರಿಗೆ ಅಪಾರ ದಾನ ಕಾರ್ಯಗಳನ್ನು ಮಾಡುತ್ತಾಳೆ.

ಕೃಷ್ಣದೇವರಾಯನ ಸೇನಾಧಿಪತಿಯಾಗಿದ್ದ ಪೆರಿಯ ಓಬಳ ನಾಯಕ್ಕರ್ (ರಾಮನಾಯಕ್ಕರ್) ತಿಮ್ಮ ಮಂತ್ರಿ• ಹಾಗೆ ಸಮರ್ಥನಾಗಿದ್ದ. ಇವನಿಗೆ ಮಹಾನಾಯಕಾಚಾರ್ಯ (ಬೇಡ-ನಾಯಕ ಅರಸ-ರಾಜ ಇತರರಿಗಿದ್ದ ಬಿರುದು) ಎಂಬ ಬಿರುದಿತ್ತು. ಇವನು ಸಾಳುವ ನರಸಿಂಹನ ಮಗ ಇಮ್ಮಡಿ ನರಸಿಂಹ, ತುಳುವ ವಂಶದ ವೀರನರಸಿಂಹ ಮತ್ತು ಕೃಷ್ಣದೇವರಾಯ – ಈ ಮೂರು ಜನ ಅರಸರಿಗೆ ನಾಯಕ ಸೇನಾನಿಯಾಗಿದ್ದ.[23] ಇವನು ಕ್ರಿ.ಶ. 1514ರ ಸುಮಾರಿಗೆ

ವೆಂಕಟೇಶ್ವರನಿಗೆ ತುಪ್ಪದ ದೀಪಗಳನ್ನು ಉರಿಸುವ ಸಲುವಾಗಿ ಒಮ್ಮೆ ಇನ್ನೂರು ಹಸುಗಳನ್ನು, ಮತ್ತೊಮ್ಮೆ ಐವತ್ತು ಹಸುಗಳನ್ನು ತಿರುಮಲೆಬೆಟ್ಟದ ದೇವರಿಗೆ ದಾನ ಮಾಡುತ್ತಾನೆ. ದೇವರ ಶ್ರೀ ಭಂಡಾರಕ್ಕೆ ತಿರುಕ್ಕುಡವೂರು ಜಿಲ್ಲೆಯಲ್ಲಿರುವ ಕಡಲೂರು ಗ್ರಾಮವನ್ನು ದಾನ ಬಿಟ್ಟಿದ್ದ. ತಿರುವೇಂಗಳನಾಥನ ನಿತ್ಯದೀಪವನ್ನು ತನ್ನ ಹೆಸರಿನಲ್ಲಿ ಹಚ್ಚಬೇಕೆನ್ನುವ ಉದ್ದೇಶದಿಂದ ಗ್ರಾಮದಾನ ಮಾಡುತ್ತಾನೆ. ರಾಯಸಂ ಕೊಂಡಮರಸಯ್ಯ ಎಂಬುವರು ರಾಯನ ಅಚ್ಚುಮೆಚ್ಚಿನ ಅಧಿಕಾರಿಯೊಬ್ಬರಿದ್ದರು. ಇವನ ತಂದೆ ತಿಮ್ಮರಸ ಮಂತ್ರಿ, ಪ್ರೊದ್ದಟೂರು ಪೆನುಗೊಂಡೆ ಪ್ರದೇಶಗಳಿಗೆ ಇವರು ಒಡೆಯರಾಗಿದ್ದರು. ರಾಯನ ಸಿಂಹಾಸನದ ಕಾರ್ಯಕರ್ತ ರಾಯಸಂ ಕೊಂಡಮರಸಯ್ಯನಾಗಿದ್ದ. ಪೆನುಗೊಂಡೆಗೆ ಅಧಿಪತಿಯಾಗಿ, ಕೃಷ್ಣದೇವರಾಯನಿಗೆ ಕಾರ್ಯದರ್ಶಿಯಾಗಿದ್ದ. ಸಿಂಹಾದ್ರಿಯಲ್ಲಿ ಕೃಷ್ಣದೇವರಾಯನ ವಿಜಯಸ್ತಂಭವನ್ನು ನೆಟ್ಟವನು ಇವನು. ಅನೇಕ ಯುದ್ಧಗಳಲ್ಲಿ ಪಾಲ್ಗೊಂಡು ರಾಯನಿಗೆ ಜಯ ತಂದುಕೊಟ್ಟಿದ್ದ. ಉದಯಗಿರಿ ರಾಜ್ಯ, ನೆಲ್ಲೂರು ಸೀಮೆಯ, ಮುಲುಂಬುಂಡಿ ಗ್ರಾಮವನ್ನು ವೆಂಕಟದೇವರಿಗೆ ಬಿಟ್ಟುಕೊಟ್ಟಿದ್ದ.

ರಾಯನ ಬಾಗಿಲು ಕಾಯುವವರು ತಿರುಮಲೆ ದೇವಾಲಯದಲ್ಲಿನ ಶಾಸನದಲ್ಲಿ ಕೃಷ್ಣದೇವರಾಯನ ಬಾಗಿಲ ಅವಸರದ ನರಸಯ್ಯ, ತಿಮ್ಮಯ್ಯ ಹಾಗೂ ಬಸವಮ್ಮರು ತಿರುವೇಂಗಳನಾಥ ದೇವರಿಗೆ 1512ರಲ್ಲಿ ತಿರುವೇಂಗಳನಾಥ ದೇವರ ಸನ್ನಿಧಿಯಲ್ಲಿ ಸದಾ ನಮಸ್ಕಾರ ಮಾಡುವ ಬಗ್ಗೆ ಶಾಸನವಿದೆ. ಇವನ ತಾಯಿ ಬಸಮ್ಮ ನಮಸ್ಕಾರ ಮಾಡುವ ವಿವರವಿದೆ. ತಮ್ಮ ನಾಯಕ್ಕರ್, ದಳವಾಯಿ ತಿಮ್ಮಯ್ಯ, ಜಿಲೇಳ್ಲ ಬಸವನಾಯ್ಕರ ಮಗನಾದ ಇವನು ಗುಡಿಯ ಭಂಡಾರಕ್ಕೆ 1513ರಲ್ಲಿ 1200 ಪಣಗಳನ್ನು ಕೊಡುತ್ತಾನೆ.

ರಾಯ ಸದಾ ಎಲೆ ಅಡಿಕೆ ಜಗಿಯುತ್ತಿದ್ದ. ಇದಕ್ಕಾಗಿಯೊ ತಾಂಬೂಲ ಚರ್ವಣಕ್ಕೆ ಸಿದ್ಧಮಾಡಿಕೊಡುವ ಅಡೈಯಪ್ಪಂ ಇದ್ದ. ತಿಮ್ಮಪ್ಪನಾಯಕನ ಮಗ ಅಡೈಯಪ್ಪಂ, ಬೈಯಪ್ಪ ನಾಯಕ್ಕನ್ 1516ರಲ್ಲಿ ಕೃಷ್ಣದೇವರಾಯನಿಗೆ ಧರ್ಮವಾಗಲೆಂದು ವೆಂಕಟದೇವರಿಗೆ ಆರು ತಿರುಪ್ಪೋನಕಗಳನ್ನು ಸಮರ್ಪಿಸುವ ಸೇವೆ ನಡೆಸಿದ್ದಾನೆ. ಕೃಷ್ಣದೇವರಾಯನ ಊಳಿಗದವನಾದ ಊಡಿಯಂ ಎಲ್ಲಪ್ಪನಾಯಕ ಎಡಬಲ ಸೇವಕನಾಗಿದ್ದ. 1516ರಲ್ಲಿ ಕರ್‍ರಾಳೈಪಟ್ಟು, ನೆಲ್ವಾಯ್ ಮತ್ತು ಕೊಳ್ಳಿಡುಂಬೈ ಎಂಬ ಮೂರು ಹಳ್ಳಿಗಳನ್ನು ದೇವರಿಗೆ ಬಿಟ್ಟುಕೊಟ್ಟ. ತಿರುಮಲೆ ಬೆಟ್ಟಕ್ಕೆ ಬರುವ ಯಾತ್ರಿಕರ ಸಲುವಾಗಿ ಬೆಟ್ಟದ ಮೇಲೆ 1527ರಲ್ಲಿ 'ಕಲ್‌ತೇರು' ಛತ್ರ (ಸತ್ರ)ವನ್ನು ಕಟ್ಟಿಸಿದ. ಗುಡಿಯ ಭಂಡಾರಕ್ಕೆ 4600 ಪಣಗಳನ್ನು ಸಲ್ಲಿಸಿದನು. ಇನ್ನು ಸಹಸ್ರಾರು ಜನ ಅಭಿಮಾನಿಗಳು, ಅಧಿಕಾರಿಗಳು, ರಾಜನ ಹೆಸರಿನಲ್ಲಿ ದಾನಧರ್ಮಗಳನ್ನು ಮಾಡಿದ್ದಾನೆ. ಕರ್ನಾಟಕ ಸರ್ಕಾರ 2010ರ ಜನವರಿಯಲ್ಲಿ ರಾಯನ 500ನೇ ಪಟ್ಟಾಭಿಷೇಕ ಮಹೋತ್ಸವ ನಡೆಸಿತ್ತು. ತಿರುಪತಿ ಕ್ಷೇತ್ರಕ್ಕೆ (ಶೇಷಾಚಲ ಪರ್ವತ) ಕೃಷ್ಣದೇವರಾಯನ ಕೊಡುಗೆಯನ್ನು ಲೆಕ್ಕ ಹಾಕುವುದು ಅಸಾಧ್ಯ. ಭೂವೈಕುಂಠ ಎನಿಸಿರುವ ತಿರುಪತಿಯಲ್ಲಿನ ಗುಡಿಗಳು, ಮಂಟಪಗಳು, ಗೋಪುರಗಳು ಹೊಸ ರೂಪ ಪಡೆದವು. ಗೋವಿಂದರಾಜ ಪಟ್ಟಣದಲ್ಲಿ ಶ್ರೀರಾಮಾನುಜಾಚಾರ್ಯರು ಒಂದು ಮಂದಿರವನ್ನು ಕಟ್ಟಿಸಿದರು. ಇವರ ಧಾರ್ಮಿಕ ಪೂಜಾವಿಧಾನಗಳನ್ನು ತಿರುಪತಿಯಲ್ಲಿ ಇಂದಿಗೂ ಪಾಲಿಸಿಕೊಂಡು ಬಂದಿದ್ದಾರೆ. ತಿರುಪತಿಗೆ ಹತ್ತಿರ ಇರುವ ತಿರುಚಾನೂರು ಎಂಬಲ್ಲಿ ವೆಂಕಟೇಶ್ವರನ ಅರ್ಧಾಂಗಿ ಪದ್ಮಾವತಿ ದೇವಾಲಯವಿದೆ.[24] ಇದಕ್ಕೆ ಪದ್ಮ ಸರೋವರ ಎಂದು ಸಹ ಕರೆಯುವರು. ಇಂಥ ಪ್ರಾಚೀನ ಅವಶೇಷಗಳಿಂದ ಕೂಡಿದ ಚಂದ್ರಗಿರಿಯು ತಿರುಪತಿ ಪಕ್ಕದಲ್ಲಿದ್ದು, ವಿಜಯನಗರ ಅವನತಿ ನಂತರ ಅದೇ ಅರಸರ ರಾಜಧಾನಿಯೂ ಆಗಿತ್ತು. ಇದು ತಿರುಪತಿಯ ಪ್ರಧಾನವೇ ಇರಬೇಕು.[25]

ಶ್ರೀಕೃಷ್ಣದೇವರಾಯ ಈ ರೀತಿ ಮಾಡಿದ ಧಾರ್ಮಿಕ ಸೇವೆ ಹಾಗೂ ತೀರ್ಥಯಾತ್ರೆಗಳನ್ನು ಭಾರತೀಯ ಇತಿಹಾಸದಲ್ಲಿ ಇನ್ನೊಬ್ಬ ಅರಸ ಮಾಡಿದ ಉದಾಹರಣೆಗಳಿಲ್ಲ. ವೈಷ್ಣವ, ಶೈವ, ಶಾಕ್ತೇಯ ಮೊದಲಾದ ಧಾರ್ಮಿಕ ಕ್ಷೇತ್ರಗಳಿಗೂ ಸಮಾನ ಗೌರವ, ಪ್ರೀತಿ, ಅಭಿಮಾನದ ಮೂಲಕ ದಾನಕಾರ್ಯಗಳನ್ನು ಮಾಡುತ್ತಾನೆ. ದೇವರ ದರ್ಶನದ ಮೂಲಕ ತನ್ನ ಪ್ರಭುತ್ವ ಆಡಳಿತದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಂಡಿದ್ದ ರಾಯನಿಗೆ ಸಾಹಿತ್ಯದಲ್ಲಿ ವಿಷ್ಣುವಿನ ಆರಾಧಕನಾಗಿ

ಕಂಡುಬರುತ್ತಾನೆ. ತನ್ನ ಮಕ್ಕಳಿಗೆ ತಿರುಮಲ, ತಿರುಮಲಾಂಬೆ, ತಿರುಬೆಂಗಳಾಂಬೆ ಎಂದು, ತಾನು ಬರೆದ 'ಆಮುಕ್ತ ಮಾಲ್ಯದ' ಕೃತಿಯನ್ನು ತಿರುಪತಿ ವೆಂಕಟೇಶ್ವರನಿಗೆ ಅರ್ಪಿಸಿದ್ದಾನೆ. ತಾನು ಶಾಶ್ವತವಾಗಿ ವೆಂಕಟೇಶ್ವರನ ಭಕ್ತನಾಗಬೇಕೆಂಬ ಆಸೆ ಮತ್ತು ಭಕ್ತಿಯಿಂದ ತಾನು ತನ್ನ ರಾಣಿಯರ ಕಂಚಿನ ವಿಗ್ರಹಗಳನ್ನು ದೇವಾಲಯದ ಮುಂದೆ ನಿಲ್ಲಿಸುತ್ತಾನೆ. ಇಂದಿಗೂ ಅವುಗಳನ್ನು ನೋಡಬಹುದು. ಹಾಗಾಗಿ ಕರ್ನಾಟಕ ಚರಿತ್ರೆಯಲ್ಲಿ ಕೃಷ್ಣದೇವರಾಯನ ಧಾರ್ಮಿಕ ಸೇವೆ, ತೀರ್ಥಯಾತ್ರೆಗಳು ಹೊಸ ಅಧ್ಯಾಯವಾಗಿದೆ.

ಅಡಿಟಿಪ್ಪಣಿಗಳು

1. ಹೆಚ್ಚಿನ ವಿವರಕ್ಕೆ ನೋಡಿ: ಎಸ್.ಕೆ. ರಾಮಚಂದ್ರರಾವ್, *ತಿರುಪತಿ ತಿಮ್ಮಪ್ಪ.*
2. ಬಿ.ವಿ. ವಿದ್ಯಾನಂದ ಶೆಣೈ, *ಭಾರತ ದರ್ಶನ*
3. ತಿರುಪತಿ ತಿರುಮಲ ದೇವಾಲಯ ಆಧರಿಸಿದ ಕೃತಿಗಳಾದ *ಶ್ರೀ ವೆಂಕಟೇಶ್ವರ ಪುರಾಣ* ಮತ್ತು *ಶ್ರೀ ವೆಂಕಟೇಶ್ವರ ಲೀಲೆಗಳು.*
4. *ಕೃಷ್ಣದೇವರಾಯನ ಶಾಸನಗಳು,* ಪು. 572.
5. *ತಿರುಪತಿ ತಿಮ್ಮಪ್ಪ,* ಪು. 150.
6. ಅಲ್ಲೇ.
7. *ಕೃಷ್ಣದೇವರಾಯನ ಶಾಸನಗಳು,* ಪು. 575–585.
8. ಅದೇ, ಪು. 588.
9. *ತಿರುಪತಿ ತಿಮ್ಮಪ್ಪ,* ಪು. 152.
10. *ಕೃಷ್ಣದೇವರಾಯನ ಶಾಸನಗಳು,* ಪು. 592.
11. ಅದೇ, ಪು. 608.
12. *ತಿರುಪತಿ ತಿಮ್ಮಪ್ಪ,* ಪು. 152, 153.
13. *ಕೃಷ್ಣದೇವರಾಯನ ಶಾಸನಗಳು,* ಪು. 610–12.
14. ಅದೇ, ಪು. 616.
15. ಎಂ. ರಾಮರಾವ್ (ಅನು.), ಚದುರಂಗ, *ಕೃಷ್ಣದೇವರಾಯ,* 1971, ಪು. 124–25.
16. *ತಿರುಪತಿ ತಿಮ್ಮಪ್ಪ,* ಪು. 153.
17. ಅಲ್ಲೇ.
18. ರಾಯವಾಚಕಮು ಎಂಬ ತೆಲುಗು ಗ್ರಂಥದಿಂದ ತಿಳಿಯುತ್ತೇವೆ.
19. 1521 ಮತ್ತು 1524ರಲ್ಲಿ ಈ ಪ್ರತಿಮೆಗಳನ್ನು ನೆಟ್ಟಿರಬೇಕೆಂದು ಅಭಿಪ್ರಾಯಪಡಲಾಗಿದೆ.
20. ಎಂ. ರಾಮರಾವ್ (ಅನು.), *ಪೂರ್ವೋಕ್ತ,* ಪು. 33.
21. *ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್,* ಸಂ 9, ಪು. 499, 514–515.
22. *ಶ್ರೀ ಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ,* ಪು. 14–15
23. *ತಿರುಪತಿ ತಿಮ್ಮಪ್ಪ,* ಪು. 157.
24. ಹ.ರಾ. ಪುರೋಹಿತ, *ರಾಮೇಶ್ವರ ಕನ್ಯಾಕುಮಾರಿ ದರ್ಶನ,* ಹುಬ್ಬಳ್ಳಿ, 1963, ಪು. 16, 17.
25. 'ತಿರುಪತಿಯಲ್ಲಿರುವ ಕೃಷ್ಣದೇವರಾಯ ಮತ್ತು ಅವನ ರಾಣಿಯರ ಕಂಚಿನ ವಿಗ್ರಹಗಳು – ಒಂದು ಟಿಪ್ಪಣಿ' ಎಂಬ ಲೇಖನವನ್ನು ಪ್ರೊ. ಸಿಂದಗಿ ರಾಜಶೇಖರ ಅವರು ವಿಜಯನಗರ ಅಧ್ಯಯನ ಸಂಪುಟ–1ರಲ್ಲಿ ಪ್ರಕಟಿಸಿದ್ದಾರೆ. (1996, ಪು. 30–31).

6

ತಾಳೆಗರಿಯಲ್ಲಿ ಕಂಡಂತೆ ವಿಜಯನಗರ ಕಾಲದ ಮಧುರೆ ಇತಿಹಾಸ - ಪುರಾತತ್ವ

ಕೆಳದಿ ಗುಂಡಾಜೋಯಿಸ್

ಮಧ್ಯಕಾಲೀನ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದ ಸಮಗ್ರ ಪ್ರಾಂತ್ಯಗಳನ್ನೂ ಒಳಗೊಂಡಿದ್ದು ಸರ್ವವಿದಿತ. ಅವುಗಳಲ್ಲಿ ತಮಿಳುನಾಡಿನ ಮಧುರೆಯೂ ಒಳಗೊಂಡಿದೆ. ನನ್ನ ಓಲೆಗರಿಗಳ ಸರ್ವೇಕ್ಷಣೆಯಲ್ಲಿ ಮಧುರೆ ಇತಿಹಾಸ ಮತ್ತು ಪುರಾತತ್ವ ಕುರಿತ ಹಸ್ತಪ್ರತಿಯೊಂದು ತಾಳೆಯೋಲೆ ಕಟ್ಟಿನಲ್ಲಿ ಗೋಚರಿಸಿತು. ಮೈಸೂರಿನ ಇತಿಹಾಸದಲ್ಲಿ ಹಯವದನರಾಯರು -

The Maharaja's was situated near the temple of Sri Ranganatha, where there are yet a few mud walls and a sunken granary, which are the sole relics of the seven storeys building that stood here in ancient day from the days anterior to the Vijayanagar Viceroys at this place and later of the Mysore Maharajas. It is of this building that Wilks says that Tipu, in removing the Royal family from it, had intended to destroy altogether, and gave orders for that purpose, which were afterwards changed. It was with reference to the valuable contents of the Library at this Palace that Tipu gave the direction that those contents may be sent over to his stables. It was reported to him that several large apartments in it were full of books, chiefly of *palm-leaf* and *Kadatams,* and he was asked how they were to be disposed of. "Transfer them" said he "to the royal stables as fuel to boil the cattle (grain on which horses are fed)" and this was accordingly done. A miscellaneous collection was, however preserved from this destruction by the pious artifice of a Brahman, which, in the confusion, fell into the hands of a British Officer. Among the historical tracts which this collection contained was the record of a curious inquiry into the state of the Royal Family and its relations conducted in 1715 (*History of Mysore,* Vol. III, C. Hayavadana Rao, pp. 1152-53).

ಹೀಗೆ ಉಲ್ಲೇಖಿಸಿದ್ದಾರೆ. ಈ ಉಲ್ಲೇಖನದಲ್ಲಿ ಕಂಡುಬಂದಂತೆ ಶ್ರೀರಂಗಪಟ್ಟಣದಲ್ಲಿಯೇ 'ಅಳಿದುಳಿದ ಸಂಗ್ರಹದಲ್ಲಿ ನನಗೆ ಲಭಿಸಿದ ಓಲೆಗರಿ ಹಸ್ತಪ್ರತಿಯು ಸಹಜವಾಗಿಯೇ ಕುತೂಹಲಾಸಕ್ತಿಯುಂಟು ಮಾಡಿತು. ಇದಕ್ಕೆ ಸಹಾಯ ಮಾಡಿದ ನನ್ನ ವಿದ್ಯಾಗುರು ಕರ್ನಾಟಕ ಕಲಾತಿಲಕ ಡಾ. ಸಂಪತ್ಕುಮಾರಾಚಾರ್ಯರನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸುವೆನು.

ಹಸ್ತಪ್ರತಿ ವಿವರ

ಸಾಮಗ್ರಿ : ತಾಳೆಯೋಲೆ ಹಸ್ತಪ್ರತಿ

1. ಪ್ರಮಾಣ : ಉ: 21 ಸೆಂ.ಮೀ, ಅ: 4.5 ಸೆಂ.ಮೀ; ಓಲೆ ಪುಟ 13; ಸಾಲು 8; ಅಕ್ಷರ 44; ಲಿಪಿ: ಕನ್ನಡ; ಭಾಷೆ: ಕನ್ನಡ
   ಈ ಕೆಳಗಿನಂತೆ ಓಲೆಗರಿ ಕಟ್ಟಿನಲ್ಲಿ ಕೃತಿಗಳು ಕಂಡುಬರುತ್ತವೆ.
   ತಂಜಾವೂರ ಸಿಮೆ ಚೋಳ ದೇಶದ ವಿಸ್ತಾರಾ– ಉದ್ದ 8½", ಅಗಲ 1–8"; 23 ಪತ್ರಗಳು.
   ಇದು ನನ್ನ ಸಂಪಾದನೆಯಲ್ಲಿ ಮದರಾಸಿನ ಇನ್ಸ್‌ಟಿಟ್ಯೂಟ್ ಆಫ್ ಏಷಿಯನ್ ಸ್ಟಡೀಸ್‌ನಲ್ಲಿ (ಇಂಗ್ಲಿಷಿನಲ್ಲಿ) ಪ್ರಕಟವಾಗಿದೆ. ಡಾ. ಗೋಪಾಲಕೃಷ್ಣರವರು ಪ್ರಕಟಣೆಗೆ ನೀಡಿದ ಸಹಾಯಕ್ಕೆ ಕೃತಜ್ಞತೆಗಳು.
2. (ನವಪಿರುವಾನ ಪಾದ್ಬಾವನ ಕಥೆ)
   8½" ಉದ್ದ, 1–8" ಅಗಲ; 18 ಹಾಳೆಗಳು, ಅನುಪಲಬ್ಧ.
3. ಕಾಸಿಪಟ್ಟಣ ಆದಿಯಾಗಿ ಚುತಸಿಮೆಯ ವಿವರ
   8½" ಉದ್ದ, 1–8" ಅಗಲ; 18 ಹಾಳೆಗಳು. ಅನುಪಲಬ್ಧ
4. ಗೋಲ್ಕೊಂಡ ಇತಿಹಾಸ – ನನ್ನ ಸಂಪಾದನೆಯಲ್ಲಿ ಮೈಸೂರು ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಪ್ರಕಟವಾಗಿದೆ.
5. ಇಕ್ಕೇರಿ (ಕೆಳದಿ) ಸಿಮೆ ವಿವರಾ
   8½" ಉದ್ದ, 1–8" ಅಗಲ; 22 ಪತ್ರಗಳು. ಇತಿಹಾಸ ದರ್ಶನದಲ್ಲಿ ಪ್ರಕಟವಾಗಿದೆ.
6. ಮಧುರೆ ಸಿಮೆ ವಿಸ್ತಾರಾ – ಇದನ್ನು ಈಗ ಲಿಪ್ಯಂತರಗೊಳಿಸಲಾಗಿದೆ.

ಓಲೆಗರಿ ಹಸ್ತಪ್ರತಿ ಪಠ್ಯಭಾಗ

ಪತ್ರ 1 : ಮುಂಭಾಗ

1 ಮದುರೆ ಸಿಮೆ ವಿಸ್ತಾರಾ ॥ ಮದುರೆ ಪಟ್ಟಣ । ಬಹುವಿಸ್ತಾರವಾದ ಚಚ್ಚೌಕದ ಯರಡು ಸುತ್ತಿನ ಕಲ್ಲಕೊ
2 ಟೆ । ಬಡಗಬಾಗಿಲು ವಂ 1 ಮೂಡುಬಾಗಿಲು 1 ತೆಂಕಲಬಾಗಿಲು 1 ಪಡುವ ಬಾಗಿಲು 1 ಕೊಟೆವಳಗೆ ಚೊಕನಾ
3 ಥಸ್ವಾಮಿಯವರ ದೆವಸ್ಥಾನ । ಪ್ರಾಕಾರ 4 ಗೋಪುರ 4 ಮೂ[1] ಮೂಡಲ ಸಂನಿಧಿ । ವಾಮಭಾಗದಲ್ಲು । ಮಿನಾಕ್ಷ
4 ಂಮ್ಮನವರ ದೆವಸ್ಥಾನ । ಯಿದಕ್ಕೆ ಮೂಡಲು ಪತ್ರಮರ್ರೆಯಂಬ ತಿರ್ಥ ಮಹಾಪ್ರಸಿದ್ದವಾದ ಪುಂಣ್ಯ
5 ತಿರ್ಥದ ಕೊಳಾ । ಚೊಕನಾಥಸ್ವಾಮಿಯವರ ಸಂನಿಧಿಗೆ । ಯಿದಿರಿನಲ್ಲು ತಿರುಮಲಭೂ
6 ಪಾಲ ವಸಂತಮಂಟಪ । ಮಹಾವಿಚಿತ್ರವಾದ ಕೆಲಸ । ಭಾರತ ರಾಮಾಯಣ । ಮುಂತಾ
7 ದ ಕಥೆ ಕಲ್ಲಿನಲ್ಲು । ಪ್ರತುಮೆ ರೂಪಿನಲ್ಲಿ । ತಿಥಿಯಿಧಿತು । ಯಿ ದೆವಸ್ಥಾನಕ್ಕೆ । ಬಡಗ ಪಾರಿಶದಲ್ಲು । ತಿರು
8 ಮಲನಾಯಕನ ಅರಮನೆ ಮಹಾವಿಸ್ತಾರ ನೂತನವಾದ ಕೆಲಸ । ಚೊಕ್ಕನಾಥ ಸ್ವಾಮಿಯ ದೆವಸ್ಥಾನಕ್ಕೆ

ಹಿಂಭಾಗ

1 (ತೆಂಕಲು) 1 ಕುಡಲಳಗರ ಸ್ವಾಮಿಯವರ ದೇವಸ್ಥಾನ ಪ್ರಾಕಾರ 1 ಗೊಪುರ 1 ಯಿಾ ಕೊಟೆವಳ

2 ಗೆ ರಾಜಬಿದಿ 6 ಕೊಟೆಹೊರಗೆ ಬಡಗಪಾರಿಶ್ಯದಲ್ಲು । ಕೊಟೆಗೆ ಬಾಣದಳತೆಯಲ್ಲು ವೈ

3 ಗೆ ನದಿ । ಪಶ್ಚಿಮದಿಂದಾ ಪೂರ್ವಮುಖವಾಗಿ । ಅಂತರ್ವಾಹಿನಿಯಾಗಿ ಹರಿಯುತ್ತ ಯಿಧಿ

4 ತು । ಕೊಟೆಗೆ ಮೂಡಲ ಪಾರಿಶ್ಯ ಬಾಣದಳತೆಯಲ್ಲು । ತಿರುಮಲೇಶ್ವರನೆಂಬ

5 ಶಿವಸ್ಥಳ । ಗೋಪುರ ಪ್ರಾಕಾರ । ಕೊಟೆಗೆ ಮೂಡಲು । ಹರಿದಾರಿಯಲ್ಲು । ಬಂ

6 ಡಲೂರಸ್ತಳ ಯಿಾ ಬಳಿಯ ಬಹು ವಿಸ್ತಾರವಾದಂಥಾ ದೊಡ್ಡ ಕೊಳ 1 ಯಿಾಕೊ

7 ಳದಲ್ಲು ಅಳಗರು ಸ್ವಾಮಿಯವರು । ತೆಪ್ಪತಿರುನಾಳಿಗೆ ಬರುವಂತಾ ಬಳಿ । ಯಿಾ ಬಳಿಯ

8 ಅರಮನೆ (ಸಿಚ್ವೆ) ಸಹಾ ಯಿಧಿತು । ಕೊಟೆಗೆ ಪಶ್ಚಿಮ ಪಾರಿಶ್ಯದಲ್ಲು । (ವಿಟ್ಟ್ಹತೊಪು) ಬಹುವಿ

ಪತ್ರ ಸಂಖ್ಯೆ 25 : ಮುಂಭಾಗ

1 ಸ್ಥಾರವಾದಂಥಾ ತೊಪು । ಕೊಟೆಗೆ ನೈರುತ್ಯಗಳಿಗೆ ದಾರಿಯಲ್ಲು । ಚಿಂನರಾಉತನ ಪಾಳ್ಯವೆಂಬ ಪೆಠೆ ।

2 ಕೊಟೆಗೆ ವಾಯಾವ್ಯದಲ್ಲು । ತೊವರ್ರೆಮಾನುಯಂಬ ಅಗ್ಗ್ರಹಾರ । ಗಳ ಗ್ರಾಮ । ಯಿದಕ್ಕೆ ಬಡಗಲು । ಚೊಳ

3 ವಂದನೆಂಬಗಳ ಗ್ರಾಮ । ಕೊಟೆಗೆ ಬಡಗ ಪಾರಿಶ್ಯದಲ್ಲು । ವೈಗೆ ನದಿ ತಿರದಲ್ಲು । ಕೃಷ್ಣಾ

4 ಪುರವೆಂಬ ಅಗ್ಗ್ರಹಾರ ಯಿಾ ಪ್ರಕಾರ ಮದುರ್ರೆ ಪಟ್ಟಣ ॥ ಮದುರೆಗೆ ಯಿಾಶಾಂನ್ಯ

5 ಗಾವದದಲ್ಲು । ಅಳಗರ ಕೊವಿಲುಯಂಬ ವಿಷ್ಣುಸ್ಥಳ । ಯಿಾ ಬಳಿಯ ಬೆಟ್ಟು ಬಳಸಿಯು

6 ಮಹಾ ಅಡವಿ । ಯಿಾ ಬೆಟ್ಟದ ಬಳಿಯಲು । ಅಳಗರಸ್ವಾಮಿಯ (ಕಾಟುಹೊಡೆದ ಲಿಪಿ)ವರ ದೇವಸ್ಥಾ

7 ನ ಪ್ರಾಕಾ(ರ) ಗೊಪುರ 4 ಯಿಾ ಅಳಗರ ಸ್ವಾಮಿಯವರು ಬಹು ಪ್ರಸಂನ್ನಮೂರ್ತಿ (ಲಿಪಿ ಕಾಟು ಹೊಡೆದಿದೆ)

8 (ಒಂಭತ್ತು ಲಿಪಿ ಕಾಟು ಹೊಡೆದಿದೆ) ಯಿಾದೇವಸ್ಥಾನಕ್ಕೆ ಬಡಗಲು । ಬೆಟದ ಮೆಲಣಿಂದಾ ಅಂತರಗಂಗೆ । ತಲೆಯೆ

ಹಿಂಭಾಗ

1 ರುತಿರ್ಥವೆಂಬ ತಿರ್ಥ । ಆನೆ ಶುಂಡಿಲ ಪ್ರಮಾಣ ಬೆಟ್ಟದ ಮೇಲಣಿಂದಾ । ಕೆಳಗೆ (ಕೊಳದ ರಳಿಕೆ) ಬಿ

2 ಳುತ್ತ ಯಿಧಿತು । ಮಹಾಪುಂಣ್ಯತಿರ್ಥ ಯಿಾ ಅಳಗರ ದೆವಸ್ತಾನದ ಬಳಸಿಯು ಅಯಿದು

3 ಆರು ಗಾವದ ಕಳ್ಳಮರವನ ಸಿಮೆ । ತಂನರಸಿನಾಡು । ವಂದು (ಕೆಗೆ) ಬಡಗಲೂ ಯರಡುವ

4 ರ್ರೆ ಗಾವದದಲ್ಲು । ಅಂಮಿನಾಯಕನ ಪಾಳ್ಯ । ಯಿದಕೆ ಬಡಗಲ ವಾ

5 ರದಲ್ಲು । ಅಂಮ(ಟಿ) ಯಂಬ ಸ್ಥಳ । ಯಿದಕ್ಕೆ ಬಡಗಲು ಗಾವದವರ್ರೆಯಲ್ಲು

6 ಡಿಂಡುಕಲ್ಲು । ನೆಲಗೊಟೆ । ಯಿಾ ಬಳಿಯ ಚಿಕ್ಕಬೆಟ । ಮದುರೆಗೆ ಮೂಡಲು ಗಾವದ

7 ಅರೆಯಲ್ಲು । ತ್ರಿಭುವನ ಯಂಬ ಶಿವಸ್ಥಳ । ಗೊಪುರ ಪ್ರಾಕಾರ । ಯಿದಕ್ಕೆ ಮೂಡಲು । ಯ

8 ರಡು ಗಾವದದಲ್ಲು । ಮಾನಾ ಮದುಕ್ರಿ । ನೆಲಗೊಟೆ । ಯಿಾ ಬಳಿಯ ಬ್ರಾಂಹ್ಮರ ಅಗ್ರಹಾರ । ಮಹಂಗಳ ಗ್ರಾಮ ।

9 ಮದುರೆಗೆ ಪಶ್ಚಿಮ । ಯರಡು ಗಾವದದಲ್ಲು । ಪಂಚರ ಗ್ರಾಮ । ಅಗ್ಗ್ರಹಾರ । ಗಳ ಗ್ರಾಮಗಳು 1 ಯಿದಕ್ಕೆ

ಓಲೆಗರಿ ಪತ್ರ ಸಂಖ್ಯೆ 26 : ಮುಂಭಾಗ

1 ಹೆಸರು । ಬತ್ತಲುಗುಂಟೆಯಂಬ ಅಗ್ಗ್ರಹಾರ 1 ಗಂಗೆವಾರ ಪೆಟೆಯಂಬ ಅಗ್ಗ್ರಹಾರ 1 ಕಾಳುಮಂಗಲ ಯಂ
2 ಬಾ ಅಗ್ರಹಾರ 1 ರೆಯಿಮಂಗಲ ಯಂಬ ಗ್ರಾಮ 1 ಗುಂಡಲ ಪುರ ಗ್ರಾಮ 1 ಅಂತ್ತು ಪಂಚಗ್ರಾಮ 5 ಯಿದಕ್ಕೆ
3 ಪಶ್ಚಿಮ ಗಂಡಪ್ಪನಾಯಕರ ಪಾಳ್ಯ ಪೆಟೆಸ್ಥಳ 1 ಗುಳ್ಳಪ್ಪನಾಯಕನ ಪಾಳ್ಯ ಪೆಟೆ ಸ್ಥಳ 1 ಯಿದಕ್ಕೆ ಪ
4 ರ್ಶಚಿಮ ಎರಡು ಗಾವದದಲ್ಲು । ಉತ್ತಂ ಪಾಳ್ಯ । ಪೆರಿಕೊಳವೆಂಬ ಪೆಟೆಸ್ಥಳ 2 ಮದುರೆ
5 ಗೆ ತೆಂಕಲು । ಯರಡು ಹರಿದಾರಿಯಲ್ಲು ಚಿಕ್ಕ ತಾಮರ್ರೆಯಂಬ ಬೆಟ್ಟ । ಯಿಾ ಬೆ
6 ಟ್ಟದ ಬಳಿಯ ಉತ್ತರ ಭಾಗದಲ್ಲು । ಸುಬ್ರಮಂಣ್ಯ ಸ್ವಾಮಿಯವರ ದೆವಸ್ಥಾನ ।
7 ಪ್ರಾಕಾರ 3 ಗೊಪುರ 1 ಮಹಾಘನವಾದ ದೆವಸ್ಥಾನ । ಮದುರೆಗೆ ನೈರುತ್ಯ । ಮೂರು ಗಾ
8 ವದದಲ್ಲು । ದೆವಂಗುರುಚಿಯಂಬ ಸ್ಥಳಗಳ ಗ್ರಾಮ । ಯಿಾ ಊರ ಬಳಿಯಲ್ಲು । ಬೆಟ್ಟ । ಬೆಟ್ಟದ ಮೆಲೆ ದೆವಸ್ಥಾನ
9 ಮದುರೆಗೆ ನೈರುತ್ಯ ಆರು ಗಾವದದಲ್ಲು । ಶ್ರೀ (ವ)ಲಪುತ್ತೂರು । ಮಹಾಸ್ತಳ । ಶೂಡಿಕುಂಡುತ್ತು ನಾಚಾರಂಮ್ಮನ

ಹಿಂಭಾಗ

1 ವರ ದೆವಸ್ಥಾನ । ಗಳಿಗೆ ದಾರಿಯ ಪಟ್ಟಣ । ಯಿಾ ಊರಿಗೆ ಪಶ್ಚಿಮ ಭಾಗದಲ್ಲು । ನಾಚಾರಂಮ್ಮನವ
2 ರ ದೆವಸ್ಥಾನ । ಗೊಪುರ ಪ್ರಾಕಾರ ಮೂಡಲ ಸಂನಿಧಿ । ಅಂಮನವರು । ಉತ್ಸಹ । ವಿಗ್ಗ್ರಹವೆ ಮುಖ್ಯ ಯಿಾ
3 ಗುಡಿಗೆ ವಾಯಾವ್ಯದಲ್ಲು । ತಿಕೊಳವೆಂಬ ತಿರ್ಥದ ಕೊಳ 1 ಯಿಾ ದೆವಸ್ಥಾನಕ್ಕೆ ಯಿಾಶಾಂನ್ಯದಲ್ಲು ।
4 ವಟಪತ್ರಶಾಯಿ ಸ್ವಾಮಿಯವರ ದೆವಸ್ಥಾನ । ಗೊಪುರ ಪ್ರಾಕಾರ । ದೆವರು । ಪವಳಿ
5 ಸಿಯಿರುವ । ಮೂರ್ತಿ । ನಾಚೆರಂಮನವರ ದೆವಸ್ಥಾನಕ್ಕೆ ಆಗ್ನೆಯದಲ್ಲು । ಕ್ರುಷ್ಣಸ್ವಾ
6 ಮಿಯವರ ದೆವಸ್ಥಾನ । ಗೊಪುರ ಪ್ರಾಕಾರ । ದಕ್ಷಿಣ ಭಾಗದಲ್ಲು । ವೈದ್ಯನಾಥಸ್ವಾಮಿ
7 ತೈಲಾರಂಮನವರ ದೆವಸ್ಥಾನ । ಸಿವಸ್ತಳ ಗೊಪುರ ಪ್ರಾಕಾರ । ಯಿಾ ಊರ ಮದ್ಯದಲ್ಲು ಪೆರಿಕೊಳವೆಂಬ (ರೂಡ)
8 ಕೆರ್ರೆ 1 ಯಿಾ ಊರಿಗೆ ಪಶ್ಚಿಮ ಯರಡು ಹರಿದಾರಿಯಲ್ಲು । ಚೆಂಪಕವನವೆಂಬ । ಮಹಾ ತೊಪು ।

ಪತ್ರ ಸಂಖ್ಯೆ 27 : ಮುಂಭಾಗ

1 ಯಿಾ ಪ್ರಕಾರ ಕೇವಲ ಪೆತ್ತೂರ ಸ್ಥಳ । ಯಿಾ ಶ್ರಿವಲಪತ್ತೂರಿಗೆ । ಮೂಡಲು । ನಡುಮಂಡಲವೆಂಬ । ಸಿಮೆ । ಮೂ
2 ಡ ಪಡುವಲು । ಆರು ಗಾವದ ವಿಸ್ತಾರ । ಯಿದರಲ್ಲು । ಮಾದೊಪು । ಯೆಂಬ ಪ್ರಧಾನ ಸ್ತಳ । ಗಳ ಗ್ರಾಮ । ಯಿದ
3 ರಲ್ಲು ತಿರುಮಂಗಡ ಪೆಟೆಯೆಂಬ ದೊಡ್ಡ ಪೆಟೆ । ಶ್ರಿವಲಪತ್ತೂರಿಗೆ ತೆಂಕಲು । ಯರಡು ವರ್ರೆ ಗಾವದ
4 ದಲ್ಲು । ಶಂಕರನಾರುಗೊವಿಲುಯಂಬ ಸ್ಥಳ । ದೆವಾಲ್ಯ । ಗೊಪುರ ಪ್ರಾಕಾರ । ಹುತ್ತರೊಳಗೆ
5 ದೆವರು । ಸರ್ಪಾಕ್ರುತ್ರಿಯಾಗಿ ಯಿಧಿತು । ಯಿಾ ದೆವಸ್ಥಾನಕ್ಕೆ ಮೂಡಲು । ನಾಗತಿರ್ಥವೆಂಬ ಕೊ
6 ಳ 1 ಯಿಾ ಸ್ತಳದಲಿಯು । ಭೂತ ಪ್ರೆತು ಪಿಶಾಚಿಗಳು ಗ್ರಹ ಸೊಕಾಗಿ ಯಿರುವವರಿಗೆ ।
7 ವಿಮೊಚನವಾಗುತ್ತ ಯಿದ್ದಿತು । ಯಿಾ ಬಳಿಯಲ್ಲು । ಯಟ್ಟಪ್ಪನಾಯಕನೆಂಬ ಪಾಳ್ಯಗಾರನ ಸಿಮೆ ॥ * ॥
8 ತಿರುವಡಿ ರಾಜ್ಯದ ವಿಸ್ತಾರಾ ॥ ಪಶ್ಚಿಮ । ತಾಂಬ್ರಪರ್ನ್ನಿ । ಉಪ್ಪತ್ತಿ ಆರಬ್ಯ ಮೂಡಲು ಸಮುದ್ರ ಸಂಗಮ ಪರ್ರಿ

ಹಿಂಭಾಗ

1 ಯಂತ್ರ । ಮೂಡಲು ಪಡುವಲು । ಯೆಳು ಗಾವದ । ಬಡಗಲು ಕೈತಾರದ ಕೊಟೆ ಆರಭ್ಯ ತೆಂಕಲು । ಕಂ
2 ನ್ಯಾಕೊಮರಿ ಪರಿಯಂತರ ತೆಂಕಾ ಬಡಗಲು ಗಾವದ 10 ॥ ಯಿಾ ಪ್ರಕಾರ ತಿರುವಡಿ ರಾಜ್ಯ ಯಿದರ ಸ್ತಳಗಳ
3 ವಿವರಾ ॥ ಯಿದರಲ್ಲಿ ಪ್ರಧಾನ ಸ್ಥಳ । ತಿಂನೆವಲ್ಲಿ ಸ್ಥಳ । ಬಳಸಿಯು । ಹರಿದಾರಿಯ ಪಟ್ಟಣ । ಯಿಾ ಪಟಣದ
4 ಮದ್ಯೆ । ನೆಲೆನಾತಸ್ವಾಮಿಯವರ ದೆವಸ್ಥಾನ । ಪ್ರಾಕಾರ್ತ್ರ ಗೊಪುರ 4 ಅಂಮನವರ ಹೆ
5 ಸರು । ಕಾಂತಿಮತಿಯಂಬ ಹೆಸರು । ಯಿದಕ್ಕೆ ನೈರುತ್ಯ ಭಾಗದಲ್ಲು ಕರ್‍ರಿಮಾಣಿಕ್ಯ
6 ಪೆರುಮಾಳು ಯಂಬ ವಿಷ್ಣು ದೆವಸ್ಥಾನ । ಯಿಾ ಪಟಣದ ಮದ್ಯೆ ತಾಂಬ್ರಪರ್ನ್ನಿ ಹೊಳೆ
7 ಲುವೆ । ಯರಡು ಹರಿಉತ್ತಯಿಧಿತ್ತು । ಯಿಾ ತಿರುವಡಿ ದೆಶದಲ್ಲು । ಯಲ್ಲಉ । ಆಂಚಾಲಿಗರು । ಯಂಬ
8 ವಕ್ಕಲಿಗರು । ಯಿವರಲ್ಲಿ । ಯರಡು ಹೆಂಣು ಹುಟಿದಲ್ಲಿ । ವಂದು ಹೆಂಣ ಮದುವೆ ಮಾಡೂದು ಮತ್ತೊ

ಪತ್ರ ಸಂಖ್ಯೆ 28 : ಮುಂಭಾಗ

1 ಂದು । ಚೆಲುವಿಕೆಯಾಗಿ ಯಿದ್ದ ಹೆಂಣ । ಸೂಳೆಯಾಗಿ ಗಳಿಸುವುದಕ್ಕೆ ಮುದ್ರೆ ಹಾಕಿ ಬಿಡುವರು । ಯಿಾ ಪ್ರಕಾರ
2 ಯಿಾ ಆಂಚಾಲ ವಕ್ಕಲಿಗರ ವಿವರ । ಯಿಾ ತಿಂನವಲ್ಲಿ ಪಟ್ಟಣಕ್ಕೆ । ಮೂಡಲು ಗಳಿಗೆ ದಾರಿಯಲ್ಲು । ತಾಂಬ್ರಪರ್ನ್ನಿ
3 ನದಿ । ಯಿಾನದಿಗೆ ಮೂಡಲು ಗಳಿಗೆ ದಾರಿಯಲ್ಲು । ಪಾಳ್ಯದ ಕೊಟೆ । ಕೆತ್ತನೆ ಕಲ್ಲು ಕೊಟೆ । ಮೂಡಲು ಪಡು
4 ವಲು । ಕೂಗಳತ್ತೆ । ತೆಂಕಲು ಬಡಗಲು । ಯರಡು ಬಾಣದಳತ್ತೆ । ಬಾಗಲು 2 ಕೊಟೆ ವಳಗೆ ।
5 ಮಂನ್ನರಸ್ವಾಮಿ ಯಂಬ । ವಿಷ್ಣು ದೆವಸ್ಥಾನ । ಗೋಪುರ ಪ್ರಾಕಾರ । ಯಿಾ ದೆವಸ್ಥಾನ
6 ಕ್ಕೆ ತೆಂಕಲು ಕೊಳ 1 ಯಿಾ ಬಳಿಯಲ್ಲು ಅರಮನೆ ಕೊಟೆ ಹೊರಗೆ । ಬಡಗಲು ।
7 ಪಡುವಲು । ತೆಂಕಲು । ಮೂರು ಪಾರಿಶ್ಯದಲ್ಲು । ಬಳಸಿಯು ಪೆಟೆ । ಕೊಟೆ ಹೊರಗೆ ಮೂಡಲು । ಬಾಣದ
8 ಳತೆಯಲ್ಲು । ಬ್ರಾಂತಿಶ್ವರನ ದೆವಸ್ಥಾನ । 1 ॥ ಗೋಪುರ ಪ್ರಾಕಾರ । ಕೊಟೆಗೆ (ಲಿಪಿಕಾಟು ಹೊಡೆದಿದೆ) ಪಶ್ಚಿಮ ಪಾರಿಶ್ಯದಲ್ಲು । ಸು

ಹಿಂಭಾಗ

1 ಬ್ರಮಂಣೆಶ್ವರ ಸ್ವಾಮಿಯ ದೆವಸ್ಥಾನ । ಯಿಾ ಪ್ರಕಾರ ಪಾಳ್ಯದ ಕೊಟೆ । ಚಿಂನ್ನವಲ್ಲಿಗೆ ಪಶ್ಚಿಮ ।
2 ಅಯಿದು ಹರಿದಾರಿಯಲ್ಲು । ಗಜೆಂದ್ರಮೊಕ್ಷವೆಂಬ ಸ್ಥಳ । ತಾಂಬ್ರಪರ್ನ್ನಿ ತಿರ । ಯಿಾ ಊರಲ್ಲು । ಕ (ವಿ)
3 ರಾಜವರದನೆಂಬ ವೆಂಕಟೆಶ್ವರ ದೆವಸ್ಥಾನ । ಪೂರ್ವಯಿಾ ಸ್ಥಳ ಗಜೇಂದ್ರನಿಗೆ ಪ್ರತ್ಯಕ್ಷವಾದ
4 ಸ್ಥಳವೆಂಬ ಆಗಮಾ ॥ ಯಿದಕೆ ಪಶ್ಚಿಮ । ಯರಡು ಗಾವದದಲ್ಲು । ವಿಕ್ರಮಶಿಂಗ
5 ವೆಂಬ ಶಿವಸ್ಥಳ । ಗಳ ಗ್ರಾಮ । ಊರಿಗೆ ಪಶ್ಚಿಮ । ಗಳಿಗೆ ದಾರಿಯಲ್ಲು । ಬೆಟ । ಯಿಬೆ
6 ಟ್ಟುದ ಯರಡೂ ಹರಿದಾರಿ ಉಂನ್ನತದ ಮೆಲೆ । ತಾಂಬ್ರ ಪನ್ನಿ ಉತ್ಪತ್ತಿ । ಯಿಾ ಬಳಿಯ
7 ಲ್ಲು । ಚಿಕ್ಕಕೊಳ । ಯಿಾ ಕೊಳದಲ್ಲು ಉತ್ಪತ್ತಿ । ಯೀ ತಿರ್ಥದಲ್ಲು । ಮಶ ಸಂಕ್ರಾಂತಿ ದಿನ । ವರುಷಕ್ಕೆ ವಂದು ವೆಳೆ
8 ಬಹು ಪ್ರಜೆಗಳು ಸ್ನಾನಕ್ಕೆ ಬರುವರು । ಯಿದರಲ್ಲು । ಅತಿಶಯ । ಯೀ ಪ್ರಜೆಗಳು । ಮದ್ಯಾಂನ್ನ ಕಾಲದಲ್ಲಿ

ಪತ್ರ ಸಂಖ್ಯೆ 29 : ಮುಂಭಾಗ

1 ಸ್ನಾನವ ಮಾಡಿ । ಅಡಿಗೆಯ ಊಟವ ಮಾಡಿ । ಯೆಳುವ ವೆಳೆಗೆ । ಮಳೆ ಆಕಸ್ಮಿಕವಾಗಿ ಸಂತಯ್ಯಾರ್(ರ್ಯಾ)ತ್ರಿಯಾಗಿ ಪುಲಿವ

2 ದು ॥ ಯಿಾ ಪ್ರಕಾರ ವರುಷ ವರುಷಕ್ಕೆ ತಪ್ಪದು ॥ ತಿಂನ್ನವಲ್ಲಿಗೆ ಮೂರು ಗಾವದದಲ್ಲು । ವಾಯಾವ್ಯದಲ್ಲು ತೆಂಗಾ

3 ಜಿಯಂಬ ಸ್ಥಳ । ಯಿದು ಶಿವಸ್ಥಳ । ದಕ್ಷಿಣ ಕಾಶಿಯೆಂಬ ಹೆಸರು । ಯಿಾ ಲಿಂಗಕ್ಕೆ ವಿಶ್ವೇಶ್ವರ ಯೆಂಬ ಹೆಸರು

4 ಅಂಮನವರ ಹೆಸರ್‍ರು ವಿಶಾಲಾಕ್ಷೀ ಯಂನವರು ಯಂಬ ಹೆಸರ್‍ರೂ । ಯಿಾ ಊರಲ್ಲು (ಚಕ್ರ)

5 ನದಿಯೆಂಬ ಹೊಳೆ । ಯಿಾ ಊರಿಗೆ । ಯೆರಡು ಹರಿದಾರಿಯಲ್ಲು । ಪಶ್ಚಿಮ । ತಿರು

6 ಕುತ್ತಲ ಯೆಂಬ ಶಿವಸ್ತಳ । ಗೊಪುರ ಪ್ರಕಾರ । ಯಿಾ ಊರ ಬಳಿಯೇ ಚತುರ್ಮುಖ

7 ಪರ್ವತಯೆಂಬ ಮಹಾಪರ್ವತ । ಹಬ್ಬಿಗೆ । ಯಿಾ ಊರಲ್ಲು ಕುಕಾಲನಾಥಸ್ವಾಮಿ ಯೆಂಬ

8 ದೇವಸ್ಥಾನ । ಗೊಪುರ ಪ್ರಾಕಾರ । ಯಿಾ ಬೆಟದ ಮೆಲಳಿಂದ । ಅಂತರಗಂಗೆ । ಆನೆ ಸೊಂ

ಹಿಂಭಾಗ

1 ಡಿಲ ಪ್ರಮಾಣದಲ್ಲಿ । ಉದಕಉ ಕೆಳಗಿಹ । ಕೊಳಕ್ಕೆ ಬಿಳುವದು । ಯಿದು ಪಾಪ

2 ಹರ । ಮಹಾಪುಂಣ್ಯತೀರ್ಥ । ಯಿಾ ಊರಿಗೆ ಮೂಡಲು ।

3 ಪಾಪವಿನಾಶನಯೆಂಬ ಸ್ಥಳ । ಯಿಾ ಚತುರ್ಮುಖ ಪರ್ವ್ವತದ ಬಳಿಯಲ್ಲು ।

4 ವಾಸವನಲ್ಲೂರು ಯೆಂಬ ಸ್ಥಳ । ಯಿಾ ಊರಿಂದಾ । ಯಿಾ ಪರ್ವ್ವತದಲ್ಲಿ । ಆನೆಗಳ

5 ಹಿಡಿವ ಬಳಿ । ತಿಂನವಲ್ಲಿಗೆ ಮೂಡಲು । ಯರಡುಗಾವದದಲ್ಲು । ಕೈತಾ

6 ರ ಯೆಂಬ ಸ್ತಳ । ಕಲ್ಲು ಕೊಟೆ । ತಾಂಬ್ರಪಂರ್ನ್ನಿ ತಿರ । ನಾಲ್ಕು ಸಾವಿರ ಆಳು ಯಿರತಕ್ಕ ವಿಸ್ತಾರ ।

7 ಮೂಡಲು ಪಡುವಲು । ತೆಂಕಲು । ಮೂರು ಪಾರಿಶ್ಯದಲ್ಲು (ವೇಣರಪೆಟೆ) । ಯಿಾ ಪೆಟೆಯಲ್ಲು ।

8 ರಾಮೇಶ್ವರ ಸ್ವಾಮಿಯವರ ದೆವಸ್ಥಾನ । ಯಿದಕ್ಕೆ ಮೂಡಲು । ಯಿದಕ್ಕೆ ಮೂಡಲು (ಎರಡು ಬಾರಿ ಉಲ್ಲೇಖವಿದೆ) ತಾಂಬ್ರಪಂರ್ನ್ನಿ

ಪತ್ರ ಸಂಖ್ಯೆ 30 : ಮುಂಭಾಗ

1 ತಿರ । ಶ್ರಿ ವೈಕುಂಟವೆಂಬ ವಿಷ್ಣುಸ್ತಳ । ಗಳ ಗ್ರಾಮ । ಯಿಾ ಊರಲ್ಲು । ವೈಕುಂಟ ಸ್ವಾಮಿಯವರ ದೆವಸ್ಥಾ

2 ನ ಗೊಪುರ ಪ್ರಾಕಾರ । ಯಿದಕ್ಕೆ ತೆಂಕಲು ಹರಿದಾರಿಯಲ್ಲು । ಆಳ್ವಾರು ತಿರುನಗರಿ । ಗಳ ಗ್ರಾಮ । ದೊಡದೆವ

3 ಸ್ತಾನ । ಯಿಾ ದೆವಸ್ಥಾನದಲ್ಲು । ಹುಣಿಸಿ ಮರದಲ್ಲು । ಪೂರ್ವ್ವ ಆಳ್ವಾರು । ಅವತಾರ ಮಾಡಿದ ಸ್ಥಳ

4 ಶ್ರಿ ವೈಕುಂಟಕ್ಕೆ ಮೂಡಲು । ಹರಿದಾರಿಯಲ್ಲು । ನತನೆಂಬ ವಿಷ್ಣುಸ್ತಳ । ಯಿದಕ್ಕೆ ಮೂಡಲು

5 ಪಿರುಗೊಳವೆಂಬ ವಿಷ್ಣುಸ್ತಳ । ಯಿದಕ್ಕೆ ದಕ್ಷಿಣ ಪ್ರರದೆ । ತಿರುಪತಿಯೆಂಬ ವಿಷ್ಣು

6 ಸ್ಥಳ । ಯಿದಕ್ಕೆ ತೆಂಕಲು । ಕೆಂತಿರುಪತಿಯೆಂಬ ವಿಷ್ಣುಸ್ತಳ ಯಿದಕೆ ತೆಂಕಲು ತಿರು

7 ಕಾವಳೂರುಯೆಂಬ ವಿಷ್ಣುಸ್ತಳ । ಯಿಂತ್ತು ಶ್ರಿ ವೈಕುಂಟ ಸ್ತಳ ಆರಭ್ಯವಾಗಿ । ಯಿದೆಲ್ಲಉ ವಂಬತ್ತು ಸ್ತಳಗಳು

8 ವಂಬತ್ತು ತಿರುಪತಿಯೆಂಬ ಹೆಸರು । ಯೀ ಶ್ರಿ ವೈಕುಂಟಕ್ಕೆ ಮೂಡಲು । ಯರಡು ಗಾವದದಲ್ಲು

ಹಿಂಭಾಗ

1 ತಾಮ್ರಪರ್ನ್ನಿ । ಸಮುದ್ರ ಸಂಗಮ । ಯಿಾ ಬಳಿಯ ಸಮುದ್ರದಲ್ಲಿ ಮುತ್ತುಗಳು ಹುಟ್ಟುತ್ತಯಿಧಿ

2 ತು । ಯಿಾ ಬಳಿಯಲ್ಲೂ । ಕರಾವಳಿ । ಪಟ್ಟಣ । ತುತ್ತುಕುಡಿಯಂಬ ಪೆಟೆ । ಕಾಯಲಿ ಪಟಣವೆಂಬ ಪೆಟೆ 1

3 ಪರಂಗಿಗಳ ಕೊಟೆ । ಮರವನಸಿಮೆ ವಿವರಾ ॥ ತೆಂಕಾ ಬಡಗಲು । ಹದಿನೈದು ಗಾವದ ಮೂಡಾ ಪಡು

4 ವಲು ಹಂನೆರಡು ಗಾವದ । ಯಿಾದೆಲ್ಲಉ ಮಹಾನಿಡಲ ಸಿಮೆ । ಯಿದಕ್ಕೆ ರಾಜದಾನಿ । ರಾ

5 ಮನಾಥಪುರ । ಕಲ್ಲಕೊಟೆ ಬಾಗಿಲು ಯಿದು ಹತ್ತು ಸಾವಿರ

6 ಆಳು ಯಿರತಕ್ಕ ಸ್ತಳ । ಕೊಟೆ ಹೊರಗೆ । ತೆಂಕಪಾರಿಶ್ಯದಲ್ಲು ದೊಡ್ಡ ಪೆಟೆ । ಪ

7 ಶ್ಚಿಮ ಭಾಗದಲ್ಲು । ದೊಡ್ಡ ಕೊಳ । ಯಿದಕ್ಕೆ ಪಡುವಲು । ಹರಿದಾರಿಯಲ್ಲು । ರಘೂ

8 ನಾಥ ಶೆ(ದೆ)ವನು ಕಟಿಸಿದ ಕೆರೆ 1 ಯಿಾ ಕೆರ್‍ರೆಗೆ ವೈಗೆ ನದಿ । ನಿರು ಬರುತ್ತ ಯಿದ್ದಿತು । ಯಿಾ ಕೊಟೆಗೆ ನೈರುತ್ಯ

ಪತ್ರ ಸಂಖ್ಯೆ 31 : ಮುಂಭಾಗ

1 ಭಾಗದಲ್ಲು । ಬ್ರಾಂಹ್ಮರ ಅಗ್ಗ್ರಹಾರ 4 ಯಿಾ ಬಳಿಯ ದೆವಸ್ಥಾನ । ಕೊಟೆಗೆ ಬಡಗ ಪಾರಿಶ್ಯ ತೊಮು । ಯಿಾ ಪ್ರಕಾ

2 ರ ರಾಮನಾಥಪುರ । ಯಿಾ ರಾಮನಾಥಪುರಕ್ಕೆ ಬಡಗಲು । ಮೂರು ಗಾವದದಲ್ಲು । ಕಾಳಿಯಾರು ಕೊವಿಲು ಯಂಬ

3 ಸ್ಥಳ । ನೆಲಗೊಟೆ । ಬಳಸಿಯು ಅಡವಿ । ರಾಮನಾಥಪುರಕ್ಕೆ ಮೂಡಲು । ಪೂರ್ವ ರಾಮೆಶ್ವರ ಮಸ್ವಾಮಿಯು

4 ಸೆತುಬಂಧನಕ್ಕೆ ಸೆತುಬಂಧನಕ್ಕೆ ಪ್ರಾರಂಭವಮಾಡಿದ ನವ ಪಾಷಾಣದ ಕಲ್ಲು । ನೆಟು ಯಿ

5 ಯಿಧ್ಧಿತು । ಯಿದಕ್ಕೆ ಮೂಡಲು । ಸಮುದ್ರದ ತಿರ । ಯಿಾ ಬಳಿಯ ಅಗ್ರಹಾರ । ಯಿಾ ಸ

6 ಮುದ್ರದ ತಿರದಲ್ಲು । ಅತಂಗರ್‍ರೆ ಯಂಬ ಘನಗ್ರಾಮ ॥1॥ ಯಿದಕ್ಕೆ ಮೂಡಲು । ಗಾವ

7 ದದಲ್ಲು । ಸಮುದ್ರ ತಿರ । ಬೈತಾಳಪಟ್ಟಣ । ಯಿಾ ಬಳಿಯ ಅಗ್ರಹಾರ । ಯಿದಕ್ಕೆ ಮೂಡಲು ಹರಿದಾರಿಯಲ್ಲು ।

8 ಸಮುದ್ರ ದಾಟುವ । ವಾಡೆ ಹತ್ತುವ ಬಳಿ । ಯಿಾ ದಾಟುವ ಸಮುದ್ರ ಹರಿದಾರಿ ಅಗಲ । ಯಿದರ ಆಚೆದಡದಲ್ಲು

ಹಿಂಭಾಗ

1 ರಾಮೆಶ್ವರ । ಯಡತಿಟು । ವಿಸ್ತಾರ ಗಾವದವರ್‍ರೆ । ಯಿಾ ಯೆಡೆತಿಟ್ಟಿನ ಅಡಿಯಲ್ಲು । ಭೈರುವನ ತಿರ್ಥ

2 ದ ಕೊಳ । ಯಿಾ ಬಳಿಯ ತಂಗಚ್ಚರುನ ಮಠ । ಯಿಾಬಳಿ ಸತ್ರ । ಯಿದಕ್ಕೆ ಮೂಡಲು ಗಾವದ್ದಾರಿಯಲ್ಲು ।

3 ರಾಮೇಶ್ವರಾ । ಪೆಟೆಮನೆ । ಪೆಟೆಮನೆ ಕಟ್ಟು 1000 ರಾಮಲ್ಲಿಂಗ ಸ್ವಾಮಿಯವರ ದೆವಸ್ತಾನ

4 ಪ್ರಾಕಾರ ಗೊಪುರ ಸಹ । ಘನವಾದ ದೆವಸ್ಥಾನ । ಅಮ್ಮನವರ ಹೆಸರು ಪರುವ । ತರ

5 (ರ್ದಂ) ಯಂಬ ಹೆಸರು । ಯಿಾ ದೆವಾಲಯದಲ್ಲು । ಗಂಗಾ ಯಮುನಾ ಸರಸ್ವತಿ ।

6 ಸಹಾ 3 ಬಡಗ ಪಾರಿಶ್ಯದಲ್ಲು ಕೊಟತಿರ್ಥ 1 ಪಶ್ಚಿಮದಲ್ಲು । ಅಮೃತಪಡಿ 1 ತಿರ್ಥ

7 ವಂದು । ಸಿದ್ಯಾಮ್ರುತ ತಿರ್ಥ 1 ಯಿಾ ಗುಡಿ ಹೊರಗೆ । ಮೂಡಲ ಪಾರಿಶ್ಯದಲ್ಲು । ಸಮುದ್ರ ಸಮೀಪದಲ್ಲಿ ಯಿಧಿತು ।

8 ಯಿಾ ಬಳಿಯಲ್ಲು । ಅಗ್ನಿತಿರ್ಥ 1॥ ಲಕ್ಷ್ಮಣ ತಿರ್ಥ ॥1॥ ಬ್ರಹ್ಮಕುಂಡತಿರ್ಥ 1॥ ಯಿಾ ಬ್ರಂಹ್ಮಕುಂಡ

ಪತ್ರ ಸಂಖ್ಯೆ 32 : ಮುಂಭಾಗ

1 ದಲ್ಲು । ವಿಭೂತಿಯತ್ತುರ ಬಳಿ । ಯಿ ಬಳಿಯ ಹನುಮಂತ ತಿರ್ಥ 1॥ ಗುಡಿಗೆ ಪಶ್ಚಿಮ ದಿಕ್ಕಿನಲ್ಲು ।

2 ಪೆಟೆ । ಯಿಾ ಗುಡಿಗೆ ವಾಯಾವ್ಯದಲ್ಲು । ಗಂಧಮಾದನ ಪರ್ವ್ವತ । ಯೀ ದೆವಸ್ಥಾನಕ್ಕೆ 1 ಬಡಗ ದಿಕ್ಕಿನಲ್ಲು 1 ಅಂ

3 ನ್ನ ಸತ್ರಗಳು 3 ಗುಡಿಗೆ ದಕ್ಷಿಣ ಭಾಗದಲ್ಲು । ದನುಃಕೊಟಿಗೆ । ಹೊಗುವ ಮಾರ್ಗ । ಯಿಾ ರಾಮೆಶ್ವರಕ್ಕು । ಧ (ಲಿಪಿ ಹೊಡೆದಿದೆ)

4 ನಂ ಕೊಟಿಗು । ಅಯಿದು ಹರಿದಾರಿ ಯಿಧಿತು । ಯಿಾ ಮಾರ್ಗಕಡಿಗುವಂ*ಲಿನಲ್ಲಿಯೆ । ಬೆ

5 ಳಗ್ಯೆ ಜಾವ ಹೊತ್ತು ಯೆಂನ್ನ ಹೊಗಬೆಕು । ಯಿಾ ಮಾರ್ಗದಲ್ಲು । ರಾಮೆಶ್ವರಕ್ಕೆ ತೆಂಕಲು ।

6 ಯೆರಡು ಹರಿದಾರಿಯಲ್ಲು । ಬ್ರಂಹ್ಮಚಾರಿ ಮಟ । ಯಿದಕ್ಕೆ ತೆಂಕಲು । ಘಳಿಗೆ ದಾರಿ

7 ಯಲ್ಲೂ । ಯೆಕಾಂತ ರಾಮೆಶ್ವರ । ಯಿಾ ಬಳಿಯ । ಕೊದಂಡ ರಾಮಸ್ವಾಮಿ ದೆವಸ್ಥಾನ । ಯಿಾ ತೆಂಕಲು ಹರಿ

8 ದಾರಿಯಲ್ಲು । ಧನುಃ ಕೊಟಿ ಸಮಸ್ತವಾದವರು । ಸ್ಥಾನವ । ಮಾಡುವ ಬಳಿ । ಯಿಾ ಬಳಿಯ ।

ಹಿಂಭಾಗ

1 ಸಿಕಾಂಡಿಷ್ಟ್ಯೆ । ಸಮುದ್ರವ್ಯ । ಬ್ರಂಹ್ಮಹತ್ಯಾಂ ವ್ಯಪೂಹಯತ್ ಯೆಂಬ ಮಾಹಿಮೆ । ಯಿಾ ಪ್ರಕಾರ

2 ರಾಮೆಶ್ವರಾ ॥ ಮಲೆಯಾಳದ ಸಿಮೆಯ ವಿವರಾ ॥ ದಕ್ಷಿಣ ಸಮುದ್ರ ತಿರ । ಅನಂತಶಯನ । ಕಂನ್ಯಾಕುಮಾ

3 ರಿ ಆರಭ್ಯ । ಬಡಗಲು । ಸುಬ್ರಮಂಣ್ಯ ಪರಿಯಂತರ । ತೆಂಕಾ ಬಡಗಲು । ಅರುವತ್ತು ಗಾವದ ।

4 ಮೂಡ ಪಡುವಲು । ಹತ್ತು ಗಾವದ । ಅಗಲ । ಯಿಾ ಬಗೆ ಮಲೆಯಾಳದ ರಾಜ್ಯಾದ ವಿವರಾ

5 ದಕ್ಷಿಣ ಸಮುದ್ರ ತಿರ । ಕಂನ್ಯಾಕೊಮಾರಿ । ಸ್ಥಳದ ವಿವರಾ । ಗಳ ಗ್ರಾಮ । ಯಿಾ ಊರಲ್ಲು ।

6 ದೆವಿ ಸಂನಿದಿ । ಅಂಮನವರ ಹೆಸರು । ಕಂನ್ಯಾಕೊಮಾರಿಯಂಬ ಹೆಸರು । ಅಂಮ

7 ನವರು ಯಿಾಶ್ವರನ ಮದುವೆಯಾಗಬೆಕು ಯಂದು ತಪಸ್ಸುಮಾಡಿದ ಸ್ಥಳ । ಯಿಾ ಸ್ಥಳದಲ್ಲು । ಅತಿಶಯ

8 ಗುಡಿಯ ಬಳಿಯ ಸಮುದ್ರದ ತಿರದ ಬಳಿಯಲ್ಲಿ । ಯಿರುವ ಮಳಲರಾಶಿಯಿಲ್ಲಉ । ಸಂಣ

ಪತ್ರಸಂಖ್ಯೆ 33 : ಮುಂಭಾಗ

1 ಕಿ ಭಾವದಲ್ಲಿಯೆ ಯಿಧಿತು । ಯಿದೆನು ಯಂದರ್‍ರೆ । ಅಂಮನವರು ಶಿವನ ಮದುವೆ ಉತ್ಸಹದಲ್ಲು ।

2 ದೆವತೆಗಳು ಪೂರ್ವದಲ್ಲು । ವಸ್ತುಕಾರ ತಂದ । ಸಂಣಕ್ರಿಯೆ । ಯಿಾ ಕಾಲದಲ್ಲಿ ಮಳಲಾಗಿ ಯಿಧಿತು । ಯಂ

3 ಬ ಸ್ತಳಪುರಾಣ ಆಗಮವಾಗಿ ಯಿಧಿತು । ಯಿಾ ಊರ್‍ರಿಗೆ ಪಶ್ಚಿಮ ಗಾವದದಲ್ಲು । ಶುಚೆಂದ್ರಯಂಬ ಶಿವಸ್ತಳ ।

3 ದೊಡ್ಡ ದೆವಸ್ಥಾನ । ತ್ರಿಮೂರ್ತಿಗಳು । ಯಿಾ ಶಿವಲಿಂಗರೂಪಾಗಿ ಯಿದಾರ್‍ರೆ ಯಂಬ ಆಗ

4 ಮ । ಯೀ ದೆವರ್‍ರಿಗೆ ಸಾವಿರ ಕುಂಭ ನಿರು । ಅಭಿಶೆಕವ ಮಾಡಿ । ಗರ್ಭಃಗ್ರುಹದಲ್ಲಿ

5 ಯೆ । ಯಿಂಗಿ ಹೋಗಿ । ಯಿಾ ಜಲಉ ಕಂನ್ಯಾಕುಮಾರಿಸ್ತಳದಲ್ಲಿ । ಅಮ್ಮನವರು । ಯಿ

6 ರುಗುಡಿಯ । ಬಳಿಯ । ಕೊಳ । ಬರುತ್ತ ಯಿದ್ದಿತು । ಯಿಾ ಪ್ರಕಾರ ಯಿಾ ಸ್ಥಳದ ಅತಿಶಯ । ಯಾಸ್ತ

7 ಳಕ್ಕೆ ನೈರುತ್ಯ ಭಾಗದಲ್ಲು । ಕೊಟಾರೊ ಯಂಬ ಸ್ತಳ । ಗಾವುದ ದಾರಿಯು । ಪಟಳಣ । ತಿರುವಾಗೂಡು

ಪತ್ರ 34 : ಮುಂಭಾಗ

1 ಕೆಳಿಕೆ ಬಳುವರು ಯಲ್ಲ । ಯಿದಿಗ ಅತಿಶಯ । ಯಿದಕ್ಕೆ ಪಡುವಲು ಕುಳಿಶಿ । ತ್ರಿಯಂಬ ಪೆಟೆ ।

2 ಘನವಾದ ಪೆಟೆ । ಯಿಾ ಪೆಟೆಗೆ ಪಡುವಲು । ಯರಡು ಗಾವದಲ್ಲು । ಅನಂತಶಯನ । ವಿಷ್ಣು ಸ್ಥಳ ಕೌಂ

3 ಡಣ್ಯ ರುಷಿಶ್ವರಗೆ । ಪ್ರತ್ಯಕ್ಷರಾದ ಸ್ತಳ । ಗಳ ಗ್ರಾಮ । ಯಿಾ ಊರಿಗೆ । ದಕ್ಷಿಣ ಯರಡು । ಹರಿದಾರ್‍ರಿ

4 ಯಲ್ಲು ಸಮುದ್ರ । ಯಿಾ ಊರಲ್ಲು । ಅನಂತಪದ್ಮನಾಭ ಸ್ವಾಮಿಯವರ ದೆವಸ್ತಾನ ಶಿಕರ

5 ಪ್ರಕಾರ । ದೆವರು ಅನಂತಶಯನನಾಗಿ । (ಎ ಮಳಿಸಿ) ಯಿಧಾನೆ । ಯಿಾ ಸ್ವಾಮಿ ಗರ್ಭ

6 ಗ್ರುಹಕ್ಕೆ ದೆವರ ಮುಖಾರವಿಂದದ ಬಳಿಯಲ್ಲು ಬಾಗಿಲು । [ನಾಭಿಕ ಮತಿದ]

7 ಬಳಿಯ ಪಡಿದು । ಎಂದರ ದರಿಶನಕ್ಕೆ ಬಾಗಿಲು । ಯಿಾ(ಬ)ಗೆ ಗರ್ಭಗ್ರುಹಕ್ಕೆ ಬಾಗಿಲು 3 ಯಿಾದೆ

8 ವರ ಗುಡಿಯ । ಸಮುದ್ರದ ಮೆಲೆ (ಯುಧಿಶು) ಯಂಬಸ್ತಳ(ದಗಮ) ಯಿದಕ್ಕೆ ***

ಹಿಂಭಾಗ

1 ದೆವರ ಗರ್ಭಗೃಹದ ಬಳಿಯ ನಿಂತು । ಆಲಿಸ ಕೆಳಿದಲ್ಲಿ । ಆ ಗುಡಿ ಕೆಳಗೆ । ಸಮುದ್ರ ತೆರ್‍ರೆ

2 ಗಳು । ಶಬ್ದವಾಗುವದು । ಯಿಾ ಪ್ರಕಾರ ಅತಿಶಯ । ಯಿಾ ಗುಡಿಗೆ ದಕ್ಷಿಣ ಎರಡು ಬಾಣ ।

3 ದಳತೆಯಲ್ಲು । ಮತ್ಸ್ಯತಿರ್ಥವೆಂಬ ಕೊಳ । ಯಿಾ ಕೊಳಯರಡು ಬಾಣ ದೆಸಿ ವಿಸ್ತಾರ । ಯಿಾ ತಿರ್ಥ

4 ದಲ್ಲು । ಅತಿಶಯ । ಯಿ ತಿರ್ಥಲ್ಲಿ ಇರುವ ಮತ್ಸ್ಯಗಳು । ಯಲ್ಲಕ್ಕೂ । ಯರ

5 ಡು ಬಸದಿಗಳು ಶಂಖ ಚಕ್ರದ ರೆಖೆಗಳು । ಸ್ಪಷ್ಟವಾಗಿ ಕಾಣಿಸುವದು ।

6 ಯಿಾ ಪ್ರಕಾರ । ಯಿ ತಿರ್ಥದ ಅತಿಶಯ । ಯಿಾ ಅನಂತಪದ್ಮನಾಭ ಸ್ವಾಮಿಯ

7 ವರಿಗೆ । (ದುಳವಸಂತ್ಯಾಗಿ) ಪೂಜೆ ಮಾಡುವರು । ಗ್ರಹಸ್ತ ಪೂಜೆ ಮಾಡಲಾಗದು

8 ಯಿಾ ಅನಂತಶಯನಕ್ಕೆ । ಪಡುವಲು । ಮೂರುಗಾವದದಲ್ಲು ಜನಾರ್ದನ ವಿಷ್ಣುಸಂಗ

ಪತ್ರ ಸಂಖ್ಯೆ 35 : ಮುಂಭಾಗ

1 ಪಶ್ಚಿಮ ಸಮುದ್ರ ತಿರ । ತೆಂಕಣ ಪಾರಿಶ್ಯ । ಪಶ್ಚಿಮ ಪಾರಿಶ್ಯ ಯರಡು ಪಾರಿಶ್ಯದಲ್ಲು ಸಮುದ್ರ । ಯಿಾ

2 ಬ:ಒಲು । ಬ್ರಂಹ್ಮ ದೆವರು ಯಗ್ನ್ಯಾಮಾಡಿದ ಯಗ್ನ್ಯಕೊಂಡದ ತಿಟು ಕೊಗಳತೆ ನೀಟಿ । ಯಿಾ ಸಮುದ್ರದ ತಿರ

3 ದ ತಿಟೆನ ವತ್ತಿನಲ್ಲು । ಜನಾರ್ದನ ಸ್ವಾಮಿಯ ದೆವಸ್ತಾನ ಮೂಡಲು ಸ*ನ್ನಿಧಿ ಯಿಾ ಸ್ಥಳದಲ್ಲು (ತ್ರುಟಿತ)

4 ಅಮಾವಾ (ಲಿಪಿ ಕಾಟು ಹೊಡೆದಿದೆ) ಸ್ಯೆ ಪ್ರವೇಶವಾಗುವದಂನ್ನು । ಯಿಾಯಗ್ನ್ಯಕುಂಡದಲ್ಲಿ । ಜಲವಾಗಿ । ದ್ರವವಾಗಿ

5 ನಿರು ಹರಿವದು । ಆ ಪುಂಣ್ಯ ಕಾಲದಲ್ಲು । ಸಮಸ್ತ ಕುಂಬಿಯು ಬಂದು ಆ ತಿರ್ಥದಲ್ಲಿ ಸ್ನಾ

6 ನವ ಮಾಡುವರು ॥ ಯಿಾ ಅಮಾವಾದಸಿ ಹೋಗಿ ಪಾಡ್ಯ ಪ್ರವೆಶವಾಗುವದು । ಆಯಗ್ನ್ಯಕುಂಡ

7 ಕಲ್ಲ ಅ* ಹೊಗೆ । ದ್ರವವಿಲ್ಲದೆಯಿರುವದು । ಯಿಾ ಪ್ರಕಾರ ಅಮಾವಾದಸಿ ಕಾಲದಲ್ಲಿ । ತಿಥಿಗಳು । (ಹಿಂ) ಗಟ್ಟಿಗೆ

8 ಯಗ್ನ ಕುಂಡದಲ್ಲಿ । ತಿರ್ಥಹುಟ್ಟಿ । ಹರಿವದು । ಅತಿಶಯ । ಯಿಾ ಜನಾರ್ದನಕೆ (ಬು)ಡಗಲು ಯರಡುಗಾವದ

ಹಿಂಭಾಗ

1 ಪಶ್ಚಿಮ ಸಮುದ್ರದ । ತಿರ । ಕೊಲ್ಲವೆಂಬ ಕರಾವಳಿ ಪಟಣ । ಯಿಾ ಬಳಿಯಲ್ಲು । ಪರಂಗಿಗಳ ಕೊಟೆ ।
2 ಯಿಾ ಕೊಟೆಗೆ ಬಡಗಲು । ಯರಡು ಗಾವದದಲ್ಲು । ಸಮುದ್ರದ ತಿರ । ಕಾಯಂಗೊಳವೆಂಬ ಕರಾ
3 ವಳಿ ಪಟಣ । ಯಿದಕ್ಕೆ । ಅರಸು । ರಾಮಧರ್ಮನೆಂಬ ಅರಸು । ಯಿಾ ಪಟ್ಟಣಕ್ಕೆ ವಾಯವ್ಯ ಮೂ
4 ರು ಗಾವದದಲ್ಲು ಅಂಬಲಪಿಳ್ಳೆಯೆಂಬ ಪಟಣ । ಘನವಾದ ಪೆಟೆ । ಯಿಾ
5 ಪಟಣಕ್ಕೆ ಅರಸು । ಮಲೆಯಾಳಿ ಬ್ರಾಂಹ್ಮಣನು । ಮಹಾಶೂರನು ಯಿಾ .
6 ಊರಲ್ಲಿ ಕೃಷ್ಣದೆವರ ಗುಡಿ । ಪ್ರಸಿದ್ಧ । ಮಹಾಪ್ರಸಂನ ಮೂರ್ತಿ । ಯಿಾ ಅಂಬ
7 ಲಪಳಿ ಸ್ತಳಕ್ಕೆ ಬಡಗಲು । ಅಯಿದು ಗಾವದದಲ್ಲು । ವೈಕ್ಯವೆಂಬ ಸ್ತಳ । ಶಿವಸ್ತಳ । ಪಿರುಂ (ತ್ರುಟಿತ)
8 ವಿಲಪ್ಪನೆಂಬ ಶಿವನಿಗೆ । ಹೆಸರು । ಯಿದರಲ್ಲಿ । ಅತಿಶಯ । ಯಿಾ ಶಿವನಿಗೆ ನಿತ್ಯಉ । ಸಾವಿರಗುಂಬ ನಿರಾ
9 ಅಭಿಶಿಕವ ಮಾಡಬೆಕು । ಯಿದರಲಿ ವಂದುಗುಂಬ ಕಡಮೆ ಯಿಾ


ಪತ್ರ ಪುಟ ಸಂಖ್ಯೆ 36 : ಮುಂಭಾಗ

1 ದರು । ಊರ ಅರಸಿಗೆ ಕೈಕಾಲು ಮುಮಡಿ ಹೊಗುವದು । ಯಿದಲ್ಲದೆ । ಯಿಾ ಊರ
2 ದ ದಾರಿಯಲ್ಲು (ತ್ರುಟಿತ) ಕ್ರೆವಿಶವಿಲ್ಲ । ಯಿಾ ಪ್ರಕಾರ ಅತಿಶಯ ॥


ಅಸಮಗ್ರ

ಉಪಸಂಹಾರ


ಹಯವದನರಾಯರ ಉಲ್ಲೇಖನದಂತೆ ಟಿಪ್ಪುವಿನ ಆದೇಶದಿಂದ ಕಣ್ಮರೆಯಾಗಿರುವ ಜ್ಞಾನಭಂಡಾರಗಳು ಪುರಾತತ್ವ ಇತಿಹಾಸದಲ್ಲಿ ಅಪಾರವಾಗಿ ನಷ್ಟವಾಗಿರುವುದನ್ನು ಸೂಕ್ಷ್ಮವಾಗಿ ಅವಲೋಕಿಸಬಹುದಾಗಿದೆ. ಇಂತಹ ಮೂಲ ಸಾಮಗ್ರಿಗಳಲ್ಲಿ ನನಗೆ ಲಭಿಸಿದ ಮಧುರೆಯ ಇತಿಹಾಸ ಮತ್ತು ಪುರಾತತ್ವವನ್ನೊಳಗೊಂಡ ಓಲೆಗರಿ ಹಸ್ತಪ್ರತಿಯು ಅಮೂಲ್ಯ ಆಕರ ಸಾಮಗ್ರಿಗಳ ಸಾಲಿಗೆ ಸೇರುವುದನ್ನು ಅಲ್ಲಗಳೆಯುವಂತಿಲ್ಲ. ಈ ಹಸ್ತಪ್ರತಿಯಲ್ಲಿ ಉಲ್ಲೇಖಿಸಿರುವ ಕೋಟೆಗಳು, ದೇವಾಲಯಗಳು, ಕೊಳಗಳು, ಜನಜೀವನಗಳು ಮುಂದಿನ ಸಂಶೋಧನೆಗೆ ಅರ್ಹವಾಗಿದ್ದು ಪ್ರವಾಸೀ ಕಥನದೋಪಾದಿಯಲ್ಲಿ ಸಮ್ಮಿಳಿತಗೊಂಡಿವೆ. ಆದರೆ ಕೃತಿಕಾರ–ಲಿಪಿಕಾರನ ಉಲ್ಲೇಖವಿಲ್ಲದಿರುವುದು ದುರ್ದೈವ ! ಶ್ರೀರಂಗಪಟ್ಟಣದ ಸುತ್ತುಮುತ್ತಲೂ ಸರ್ವೇಕ್ಷಣೆ ಕೈಗೊಂಡಲ್ಲಿ ಪುರಾತನ ಹಸ್ತಪ್ರತಿಗಳು ಲಭಿಸುವ ಸಾಧ್ಯತೆಯಿದೆ. ಪ್ರಾಮಾಣಿಕ ಸಂಶೋಧಕರು ಇದಕ್ಕೆ ಪ್ರಯತ್ನಿಸಬೇಕಷ್ಟೆ?



ಮಧುರೆ ಸೀಮೆ ವಿಸ್ತಾರಾ : ಪ್ರಾಚೀನ ಓಲೆಗರಿ ಹಸ್ತಪ್ರತಿ



ಮಧುರೆ ಸೀಮೆ ವಿಸ್ತಾರಾ : ಪ್ರಾಚೀನ ಓಲೆಗರಿ ಹಸ್ತಪ್ರತಿ


VIJAYANAGARA EMPIRE-1561
(Sadāsiva Rāya and Rāma Rāya)
Empire limits
Rama Raya's major thrusts
Major battles
Shāhi capitals
Raichur Doab
Daulatabad (1558,59)
Ahmadnagar
Salsette
Choul
Alandi
Dabhol
Naldurg
Sholapur
Kalyani
Bidar (1558,59)
Gulbarga
Patancheru
Warangal
Golkonda
Nalgonda
Bijapur
Sagar
Devarakonda
Talikota
Jamkhandi
Nagarjunakonda
Belgaum
Pongal
(1556)
Mudgal
Anegundi
Srisaila
Addanki
Kanigiri
Kandukuru
Udayagiri
Gutti
Bankapura
Nagalapura
(Hospet)
Ahobilam
Gandikota
Gokarna
Mirjan
Kumta
Honnavar
Bhatkal
Keladi
Harihara
Ikkeri
Barkur
Cuddapah
Vellore
Penukonda
Chandragiri
Nandidurg
Mulbagal
Chittoor
Mangalore
Dwarasamudra
(Halebid)
Kolar
Kanchivaram
Mylapore (1558)
(Madras)
Srirangapattana
Sivasamudram
Mysore
Gingee
Sankaridurga
MANDALA
Chidambaram
Srirangam
Tiruchirapalli
Madurai
Srivilliputtur
Ramnad
Rameswaram
Dhanushkodi
Sankaranarayanarkovil
Tenkasi
Gajendramoksha
Tirunelveli
Nava Tripadi
Tiruchendur
Kanyakumari
Maddar
Anantagiri
Simhachalam
Srikakulam
Rajamahendri
Kondapalli
Bezwada
Musalipattana
Cuttack

ಮಧುರೆ

ಹರಿಹರದಲ್ಲಿರುವ ವಿಜಯನಗರ ಅರಸರ ಕಾಲದ ಶಾಸನೋಕ್ತ ಕಾರ್ಯಗಳು

ಡಾ॥ ಹರಿಹರ ಶ್ರೀನಿವಾಸರಾವ್

ವಿಜಯನಗರದ ಅರಸರು ಹಿಂದೂ ಧರ್ಮ, ಸಂಸ್ಕೃತಿಗಳನ್ನು ರಕ್ಷಿಸಿದುದಷ್ಟೇ ಅಲ್ಲದೆ ಅವುಗಳ ಪೋಷಣೆ, ಸಂರಕ್ಷಣೆಗಾಗಿ ಸಂಮೃದ್ಧವಾಗಿ ದತ್ತಿದಾನ ನೀಡಿರುವುದನ್ನು ಕನ್ನಡ ನಾಡಿನ ನೂರಾರು ಶಾಸನಗಳಂತೆ ಹರಿಹರದ ಶಾಸನಗಳೂ ದಾಖಲಿಸಿವೆ. ಇಲ್ಲಿ ದೊರೆತಿರುವ ಶಾಸನಗಳ ಸಂಖ್ಯೆ ಒಟ್ಟು 14. ಸರಿಸುಮಾರು ವಿಜಯನಗರದ ಪ್ರಾರಂಭ ಕಾಲ, ಎಂದರೆ ಕ್ರಿ.ಶ. 1354ರಿಂದ ರಕ್ಕಸತಂಗಡಿ ಯುದ್ಧಕ್ಕೆ ಒಂದೆರಡು ವರ್ಷಗಳ ಮುಂಚಿನವರೆಗೆ ಅಂದರೆ ಕ್ರಿ.ಶ. 1563ರ ವರೆಗೆ ಈ ಶಾಸನಗಳ ವ್ಯಾಪ್ತಿ ಇದೆ. ಇದು ಆ ರಾಜರು ಹರಿಹರದ ಬಗೆಗೆ ತೋರಿದ ಒಲವು ಹಾಗೂ ಈ ಜನರು ಆ ಸಾಮ್ರಾಜ್ಯಕ್ಕೆ ತಮ್ಮದೇ ಆದ ಕಾಣಿಕೆಯನ್ನು ನೀಡಿದುದರ ದ್ಯೋತಕವಾಗಿದೆ. ಹರಿಹರೇಶ್ವರನ ಮಹಿಮೆ, ಹಾಗೂ ಅನೇಕ ರೀತಿಯ ಶಾಸ್ತ್ರಗಳಲ್ಲಿ ಪರಿಣತಿ ಪಡೆದಿದ್ದ ವಿದ್ವಾಂಸರಿಗೆ ವಿಶೇಷ ರೀತಿಯ ದಾನ ನೀಡಿರುವುದನ್ನು ಶಾಸನಗಳು ವಿವರವಾಗಿಯೇ ತಿಳಿಸುತ್ತವೆ.

ಕ್ರಿ.ಶ. 1356ರ ಬುಕ್ಕರಾಯನ ಕಾಲಕ್ಕೆ ಸಂಬಂಧಿಸಿದ ದಾವಣಗೆರೆಯ 67 ಸಂಖ್ಯೆಯ ತಾಮ್ರಪಟವೇ ವಿಜಯನಗರ ಅರಸರಿಗೆ ಸೇರುವ ಮೊದಲ ಶಾಸನವಾಗಿದೆ. ಸಂಸ್ಕೃತ ಮತ್ತು ಕನ್ನಡ ಇದರ ಭಾಷೆ. ಜ್ಯೋತಿಷ್ಯ, ವೇದಾಂತದಲ್ಲಿ ಪಾರಂಗತನಾದ ಗೋತ್ರ, ಕಾಶ್ಯಪಗೋತ್ರ, ಬೋಧಾಯನ ಸೂತ್ರ, ಯಜುಶ್ಯಾಖೆಯ ಮಾದವ ಜೋಯಿಸರ ಮಗನಾದ ರಾಮಣ್ಣ ಜೋಯಿಸರಿಗೆ, ಬುಕ್ಕರಾಯನು ಕೊಟ್ಟೂರ ಚಾವಡಿಗೆ ಸೇರಿದ್ದ, ಉಚ್ಚಂಗಿ ವೇಂಟೆಯ "ಮಿಟ್ಟಲಿಗ" ಎನ್ನುವ ಗೊಲ್ಲನ ಹೆಸರಲ್ಲಿ ಕಟ್ಟೆಯೊಂದನ್ನು (ಸಣ್ಣ ಕೆರೆ) ಕಟ್ಟಿಸಿ, ಗ್ರಾಮಕ್ಕೆ ಆತನ (ಮಿಟ್ಲಕಟ್ಟೆ) ಹೆಸರನ್ನೇ ಇಟ್ಟು ದಾನ ನೀಡಿರುತ್ತಾನೆ. ಇಲ್ಲಿ ಗಮನಿಸಬಹುದಾದ ವಿಶೇಷವೆಂದರೆ ಆ ಗ್ರಾಮದ ನಾಲ್ಕೂ ಕಡೆಯ ಮೇರೆಗಳನ್ನು ಸ್ಪಷ್ಟವಾಗಿ ಗುರುತಿಸಿರುವುದು. "ಆ ಗ್ರಾಮದಿಂ ನಾಗೇನೂರೆಂಬ (ನಾಗೇನೂರು) ಗ್ರಾಮ ಭಾಗದಿಂ ಪಾಂಡವರ (ಬಿಳಿಕಲ್ಲ) ಮರಡೀ ಮೇಲೆ ಮಧ್ಯದಿ ನೆಟ್ಟ ಕರವನಂದ ಕಲ್ಲು ಗ್ರಾಮದಿಂ ಟ(ತೆ)ಂಕಲು ಮುದಿಹಡಯೆಂಬ ಗ್ರಾಮದ ಬಿಳೇ ಕಲ್ಲು ಮರಡೀ ಬದೀಲಿ ನೆಟ್ಟ ಬಿಳೇಕಲ್ಲುಗಳು ಎರಡು. ಗ್ರಾಮದಿಂ ಪಡುವಲು ಸಾಲುಕಟ್ಟೆ ಯೆಂಬ ಗ್ರಾಮದ ಸಣ್ಣ ಕಲ್ಲ ಮರಡೀ ಮೇಲೆ ನೆಟ್ಟಕರೇವರ್ನ(ಕರೇ ವರ್ಣ)ದ ಕಲ್ಲುಗಳು ಮೂರು, ಬಡಗಲು ಕುಂದುವಾಡೀ(ಕುಂದವಾಡಿ)ಯೆಂಬ ಗ್ರಾಮದ ಬಿಳೇಕಲ್ಲು ಮರಡಿ ತಗ್ಗಿನಲ್ಲು ನೆಟ್ಟ ಬಿಳೇಕಲ್ಲು ಮೊದಲಾದ ಸಾಲುಗಲ್ಲುಗಳು" "ಶ್ರೀ ವಿರೂಪಾಕ್ಷ ದೇವರ" ಸನ್ನಿಧಿಯಲ್ಲಿ ಕೊಡಲಾಗಿದೆ. ಪ್ರಾರಂಭ ಕಾಲದಲ್ಲಿ ವಿಜಯನಗರದ ಅರಸರು ಶ್ರೀ ವಿರೂಪಾಕ್ಷನ ಹೆಸರಿನಲ್ಲಿ ರಾಜ್ಯಭಾರ ಮಾಡುತ್ತಿದ್ದುದನ್ನು ಈ ಶಾಸನವು ಸೂಚಿಸುತ್ತದೆ. ಇಲ್ಲಿ ನಮೂದಿಸಿರುವ ಗ್ರಾಮಗಳ ಹೆಸರಿನಲ್ಲಿ ಹೆಚ್ಚಿನ ವ್ಯತ್ಯಾಸವಿರದೆ ನಾಲ್ಕುನೂರು ವರ್ಷಗಳ ನಂತರ ಈಗಲೂ ಅವು ಅಸ್ತಿತ್ವದಲ್ಲಿವೆ. ಈ ಗ್ರಾಮದ ಹೊಲದ ಒಂದು ಭಾಗವು ಕರ್ನಾಟಕ ರಾಜ್ಯದ ಹೆದ್ದಾರಿಗೆ

ಸೇರಿದುದರ ಪರಿಹಾರದ ಹಣವನ್ನು ಕ್ರಿ.ಶ. 1969ರಲ್ಲಿ ಈ ಸಂಪ್ರಬಂಧದ ಲೇಖಕರು ಸ್ವೀಕರಿಸಿರುತ್ತಾರೆ. ಈ ಶಾಸನಕ್ಕೆ ಮುಂಚಿತವಾಗಿ "ಮಿಟ್ಟಿಗನ ಕಟ್ಟೆಗ್ರಾಮ" ಇರಲಿಲ್ಲವೆನ್ನುವ ಅಂಶ ಮುಖ್ಯವೆನಿಸುತ್ತದೆ. ದುರದೃಷ್ಟವೆಂದರೆ ಇಲ್ಲಿ ಬರುವ ಮಿಟ್ಟಲಿಗ ಮತ್ತು ರಾಮಣ್ಣ ಜೋಯಿಸರು ಮಾಡಿದ್ದ ಮಹತ್ಕಾರ್ಯಗಳೇನೆಂಬುದನ್ನೇ ಶಾಸನವು ಹೇಳದಿರುವುದು.

ಇಮ್ಮಡಿ ದೇವರಾಯನ ಆಳ್ವಿಕೆಯನ್ನು ನಮೂದಿಸಿರುವ ಎರಡು ಶಾಸನಗಳು ಹೀಗಿವೆ. ದಾವಣಗೆರೆ 34 ಮತ್ತು ದಾವಣಗೆರೆ 68. ಇಮ್ಮಡಿ ದೇವರಾಯನ ಮಂತ್ರಿ ಹಾಗೂ ದಂಡಾಧಿಪ ಮುದ್ದ, ದಾವಣಗೆರೆ 34ನೇ ಶಾಸನವು ಈತನ ಶೌರ್ಯ ಸಾಹಸಗಳನ್ನು ಬಹುವಾಗಿ ಪ್ರಸ್ತಾಪಿಸುತ್ತದೆ. ದಶರಥನಿಂದ ರಾಮನು ಪಡೆದ ಸುಮಂತನಂತೆ ಸಂತತವಾಗಿ ತನ್ನ ನೀತಿಯಿಂದ ಶತ್ರುರಾಜರನ್ನು ನಿಯಂತ್ರಿಸಿದವನೂ, ಏರಿಕೆಯುಳ್ಳ ಪ್ರತಾಪಶಾಲಿಯೂ ಆಗಿದ್ದನು. ಹರಿಹರನು, ಶ್ರೀಹರಿಯು ಭೂಮಿಯ ಭಾರವನ್ನು ಆದಿಶೇಷನ ಹೆಡೆಗಳ ಮೇಲಿಟ್ಟು ಸುಖವಾಗಿರುವಂತೆ, ಸಮಸ್ತರಾಜ್ಯದ ಭಾರವನ್ನು ಮುದ್ದ ದಂಡೇಶನ ಮೇಲಿಟ್ಟು ಸುಖವಾಗಿದ್ದನು. ಮುದ್ದದಂಡೇಶನ ಭುಜಸ್ಥಂಭದಲ್ಲಿ ಉಂಟಾಗಿರುವ ಹೆದೆಯ ಗುರುತು, ಮದದಿಂದ ಕೂಡಿದ ಆನೆಯ ಮೇಖಲೆಯಂತಿದೆ (ಸರಪಳಿ). ಬಳ್ಳಿಯಂತೆ ಬಳುಕುವ ಖಡ್ಗಪಾತದ ಹೆದರಿಕೆಯಿಂದಲೇ ಶತ್ರುಗಳ ಪ್ರಾಣವಾಯುಗಳು ಕಂಪಿಸುತ್ತವೆ. ಶಾಸನದ ಪ್ರಮುಖ ವಿಷಯವೆಂದರೆ, ಈ ಮುದ್ದದಂಡೇಶನು ದಂಡನಾಯಕಪುರವೆಂದು ಪ್ರಸಿದ್ಧವಾದ ಶ್ರೇಷ್ಠ ಅಗ್ರಹಾರವನ್ನು ಕೂಡಲೂರು ಜನಪದದ, ಉಚ್ಚಂಗಿದುರ್ಗ ಪ್ರದೇಶದ ಚಿಕ್ಕ ಹದಡಿಯೆಂಬ ಇನ್ನೊಂದು ಹೆಸರು ಇದ್ದ, ಪ್ರಸಿದ್ಧವಾದ ಕೆರೆಯನ್ನು ಹೊಂದಿದ್ದ, ಮಹಾಕ್ಷೇತ್ರವನ್ನು ಕ್ರಿ.ಶ. 1379ರಲ್ಲಿ ಬ್ರಾಹ್ಮಣರಿಗೆ ಪ್ರೀತಿಪೂರ್ವಕವಾಗಿ ದಾನಕೊಟ್ಟಿರುವುದು. ಹರಿಹರ ಬುಕ್ಕ ಮತ್ತು ಮುದ್ದ ದಂಡನಾಯಕನ ವಿಸ್ತಾರ ವರ್ಣನೆಗಳು ಸಂಸ್ಕೃತ ಭಾಷೆಯಲ್ಲಿದ್ದರೂ, ಗ್ರಾಮ ಸೀಮೆಯ ನಿರ್ದೇಶನ "ಸ್ಫುಟಪರಿಜ್ಞಾನಾರ್ಥ"ವಾಗಿ ಕರ್ನಾಟಕ ಭಾಷೆಯನ್ನೂ ಬರೆದಿದ್ದೇವೆ ಎಂದು ಶಾಸನವು ಹೇಳುತ್ತದೆ. ಈ ಶಾಸನ ಬರೆದವನು ಧರಣೋಜ. ಈ ಶಾಸನಕ್ಕೂ ಹರಿಹರರಾಯನ ಶ್ರೀ ವಿರೂಪಾಕ್ಷ ಒಪ್ಪವಿದೆ. ಒಟ್ಟು 36 ವೃತ್ತಿಗಳನ್ನು ಗೋತ್ರಸಹಿತವಾದ 36 ಬ್ರಾಹ್ಮಣರಿಗೆ ನೀಡಲಾಗಿದೆ. ಇದೇ ಶಾಸನದಲ್ಲಿ ಶ್ರೀಧರ ಭಟ್ಟನಿಗೆ 37ನೇ ವೃತ್ತಿಯನ್ನು ಬೇರೆಯಾಗಿಯೇ ನೀಡಲಾಗಿದೆ.

68ನೇ ಶಾಸನವು ಇಮ್ಮಡಿ ಹರಿಹರನ ಕಾಲದ್ದಾಗಿದ್ದು, ಹರಿಹರೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ನಿರಂತರವಾಗಿ ವೇದಶಾಸ್ತ್ರಗಳ ಪಾರಾಯಣ ನಡೆಯಬೇಕೆನ್ನುವ ಉದ್ದೇಶದಿಂದ ರಾಮಾದೇವಯ್ಯನ ಮಗನಾದ ಲಿಂಗರಸನಿಗೆ ಶಾಂಕರೀಪುರ ಎಂದು ಪುನರ್‌ನಾಮಕರಣ ಮಾಡಿ ದಾನ ಕೊಡಲಾಗಿದೆ. ಆ ಗ್ರಾಮವು ಕೊಟ್ಟೂರ ಚಾವಡಿ ಉಚ್ಚಂಗಿ ವೇಂಟೆಯ ಹರಿಹರ ಸೀಮೆಗೆ ಸೇರಿದ್ದಿತು. ಇಲ್ಲಿಯೂ ಆ ಊರಿನ ಮೇರೆಗಳನ್ನು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಈ ಶಾಸನಗಳಿಂದ ತಿಳಿದುಬರುವ ಅಂಶವೆಂದರೆ ಹರಿಹರದಲ್ಲಿ ವೇದಶಾಸ್ತ್ರ ಪಂಡಿತರಿದ್ದು, ದೇವರ ಸೇವೆಯು ನಿರಂತರವಾಗಿ ಯಾವ ಅಡ್ಡಿ ಆತಂಕಗಳಿಲ್ಲದೆ ನಡೆಯಲು ಅರಸರು ಸಾಕಷ್ಟು ದಾನಗಳನ್ನು ಅರ್ಹಜನರಿಗೆ ನೀಡಲಾಗಿತ್ತು ಎನ್ನುವುದು.

ಹರಿದ್ರಾನದಿಗೆ (ಬ್ಯಾಲದಹಳ್ಳಿ ಹಳ್ಳ) ಸೇತುವೆಯನ್ನು ನಿರ್ಮಿಸಿ, ಅದರ ನೀರನ್ನು ಕಾಲುವೆಯ ಮೂಲಕ ಬನ್ನಿಕೋಡು, ಬೆಳುವಡಿ (ಬೆಳ್ಳೂಡಿ), ಹಗನವಾಡಿ, ಹರಿಹರ, ಗುತ್ತೂರು, ಗಂಗನರಸಿಯವರೆಗೆ ಇರುವ ಭೂಮಿಯನ್ನು ನೀರಾವರಿಗೆ ಅಳವಡಿಸಿ ಭತ್ತ, ಅಡಿಕೆ, ವೀಳ್ಯಯೆಲೆ ಇತ್ಯಾದಿ ಬೆಳೆಗಳನ್ನು ಬೆಳೆದಿದ್ದರೆಂದು ದಾವಣಗೆರೆ 23 ಮತ್ತು 29ನೇ ಶಾಸನಗಳು ತಿಳಿಸುತ್ತವೆ. ಕರ್ನಾಟಕದಲ್ಲಿಯೇ ಏಕೆ, ಭಾರತದಲ್ಲಿಯೇ "ನೆರೆ ನೀರಿನ" ಉಪಯೋಗವನ್ನು ಕ್ರಿ.ಶ. 1410ರಷ್ಟು ಹಿಂದೆಯೇ ಮಾಡಿತೋರಿಸಿರುವ ಅಪರೂಪದ ಸಂಗತಿಯನ್ನು ಹರಿಹರದ ಶಾಸನಗಳು ಹೊಂದಿವೆ. ಈ ಶಾಸನಗಳ ಭಾಷೆ ಸಂಸ್ಕೃತ ಮತ್ತು ಕನ್ನಡ. ಇದನ್ನು ತಾಮ್ರಪಟ ಹಾಗೂ ಶಿಲಾಶಾಸನಗಳಲ್ಲಿ ಕಂಡರಿಸಿದ್ದಾರೆ. ನೀರಿನಿಂದ ಬೆಳೆದ ಹೊಸ ಗದ್ದೆಗಳಿಂದ ಬರುವ ವರಮಾನವನ್ನು, ಸೇತುವೆ ಹಾಗೂ ಕಾಲುವೆಗೆ ವೆಚ್ಚಮಾಡಿದ ದೇವರು (ದೇವಸ್ಥಾನದವರು) 2 ಭಾಗ, ಮಹಾಜನರು 1 ಭಾಗ ಹಂಚಿಕೊಳ್ಳಬೇಕು. ಕಾಲುವೆ, ಕಟ್ಟೆಗಳನ್ನು ಕಾಲ ಕಾಲಕ್ಕೆ ಜೀರ್ಣೋದ್ಧಾರ ವೆಚ್ಚವನ್ನು ಮಹಾಜನರೇ ವಹಿಸಿಕೊಳ್ಳಬೇಕೆಂಬ ನಿಯಮವನ್ನೂ ದಾಖಲಿಸಿವೆ. ಮಹಾಜನರಿಗೆ ಸೇರಿದ 1 ಭಾಗದ ಭೂಮಿಯಲ್ಲಿ ಅವರವರು

ಕೊಟ್ಟ ಹಣಕ್ಕೆ ಅನುಗುಣವಾಗಿ 108 ವೃತ್ತಿಗಳನ್ನೂ, ಹರಿಹರ ದೇವರ ನೈವೇದ್ಯಕ್ಕೆ 1 ವೃತ್ತಿ, ಅಲ್ಲದೆ ಪ್ರತಿ ದಿನ 5 ಜನ ಬ್ರಾಹ್ಮಣರ ಭೋಜನಕ್ಕೆ 2 ವೃತ್ತಿ – ಹೀಗೆ ಒಟ್ಟು 111 ವೃತ್ತಿಗಳನ್ನು ಬಿಟ್ಟಿರುತ್ತಾರೆ. ವೃತ್ತಿಗಳನ್ನು ಹೊಂದಿದವರ ಸೂತ್ರ, ಗೋತ್ರ, ತಂದೆಯ ಹೆಸರು, ವೃತ್ತಿದಾರರ ಹೆಸರುಗಳೂ ಇಲ್ಲಿವೆ. ಈ ಉತ್ತಮ ಕೆಲಸದಿಂದ ತೃಪ್ತಿ ಹೊಂದಿದ ವೃತ್ತಿದಾರ ಮಹಾಜನರು ಜಗನ್ನಾಥನ ಮಗನಾದ ಬುಳ್ಳಪನಿಗೆ 2 ಖಂಡುಗ ಭತ್ತ ಬೆಳೆಯುವ ಭೂಮಿಯನ್ನು ಹಿರಣ್ಯೋದಕ ಸಹಿತವಾಗಿ ದಾನ ಕೊಟ್ಟಿರುತ್ತಾರೆ. ಸೇತು ಉದ್ಘಾಟನೆಯ ಕಾಲದಲ್ಲಿ "ಅಂಗ ಪ್ರದಕ್ಷಿಣೆ" ಎನ್ನುವ ವಿಶೇಷ ಕಾರ್ಯಕ್ರಮ ನೆರವೇರಿಸಿದ ಶಂಕರ ಭಟ್ಟರಿಗೆ ದೇವರಿಗೆ ಪಾಲಿನ 2 ಭಾಗ, ಬ್ರಾಹ್ಮಣರ ಪಾಲಿನ 2 ಭಾಗ – ಹೀಗೆ ಮಣುವಿನ 4 ಕೊಳಗ ಗದ್ದೆಯನ್ನು ದಾನ ಕೊಡಲಾಯಿತು. ಶಾಸನ ಬರೆದವನ ಹೆಸರು ತ್ರುಟಿತವಾಗಿದ್ದರೂ ಆತನಿಗೆ ದಾನ ಕೊಟ್ಟದ್ದು ಈ ಶಾಸನದಲ್ಲಿದೆ.

ದಾವಣಗೆರೆ 29ನೆಯ ಶಾಸನವು ದರಿದ್ರಾ ನದಿಗೆ ಕಟ್ಟಿದ್ದ ಸೇತುವೆ ಕ್ರಿ.ಶ. 1424ರಲ್ಲಿ ಒಡೆದುಹೋಯಿತು. ಹೀಗಾಗಿ ಅಲ್ಲಿಯ ಜನರ ಜೀವನೋಪಾಯ ತಪ್ಪಿತು. ಈ ಸಂಗತಿಯನ್ನು ಬುಳ್ಳಪನು ವೀರಪ್ರತಾಪ ರಾಯನಿಗೆ ಆತನ ಮಹಾಪ್ರಧಾನಿಯಾಗಿದ್ದ ನಾಗಣ್ಣ ದಂಡನಾಯಕನ ಮೂಲಕ ತಿಳಿಸಿ, ಅದನ್ನು ಪುನಃ ಕಟ್ಟುವವರು ಯಾರೆಂದು ವಿಚಾರಿಸಿ, ತನಗಿಂತ ಈ ವಿಷಯದಲ್ಲಿ ಪರಿಣತಿ ಹೊಂದಿದ್ದ, ಬೊಪ್ಪದೇವನ ಮಗನಾದ ಚಾಮರಾಜನನ್ನು ಈ ಕಾರ್ಯಕ್ಕೆ ಒಪ್ಪಿಸುತ್ತಾನೆ. ಕಟ್ಟೆಯ ಪುನರ್ ನಿರ್ಮಾಣಕ್ಕೆ ಬೇಕಾಗಿದ್ದ ಹಣದ ಕೆಲವು ಭಾಗವನ್ನು ಪ್ರತಾಪರಾಯನು, ಹರಿಹರದ ಮಹಾ ಜನರೂ ಅಲ್ಲದೇ ತನ್ನ ಸ್ವಯಾರ್ಜಿತ ಹಣವನ್ನೂ ಇದಕ್ಕಾಗಿ ವಿನಿಯೋಗಿಸುತ್ತಾನೆ. ಹರಿಹರ ದೇವರ ದಯೆಯಿಂದ ಈ ಶಾಸನವನ್ನು ರಚಿಸಿದವನು ಧರಣೋಜ ಎಂದು ಇದರ ರಚನಕಾರನೇ ಹೇಳಿಕೊಂಡಿದ್ದಾನೆ. ಶಾಸನ ಭಾಷೆ ಕನ್ನಡ ಮತ್ತು ಸಂಸ್ಕೃತವಾಗಿದ್ದು ಕಾವ್ಯಮಯವಾದ ಅನೇಕ ಉಪಮೆಗಳೊಂದಿಗೆ ಬುಳ್ಳಪ ಮತ್ತು ಚಾಮರಸರನ್ನು ಹೊಗಳುತ್ತದೆ.

ಇವುಗಳ ನಂತರ ಅಚ್ಯುತರಾಯನ ಕಾಲದ ಐದು ಶಾಸನಗಳು ಇಲ್ಲಿವೆ. ಇವುಗಳಲ್ಲಿ ನಾಲ್ಕು ಪ್ರಮುಖವಾದವು. ವಿವರ ಹೀಗಿದೆ: ಚಿನ್ನದ ಭಂಡಾರದ (ಚಿಕ್ಕ ಖಜಾನೆ ಅಧಿಕಾರಿ ಇರಬಹುದೆ?) ತಿಮ್ಮರಸನ ಮಗನಾದ ನಾರಾಯಣ ದೇವರು ಎನ್ನುವವನು ಅಚ್ಯುತರಾಯಪುರವೆಂಬ ಇನ್ನೊಂದು ಹೆಸರಿನ ಬುಳ್ಳಾಪುರವನ್ನು ಹರಿಹರದೇವರ ಅವಸರದ ನೈವೇದ್ಯಕ್ಕೆ ಸಮರ್ಪಿಸಿದ್ದಾನೆ. ಇದರಲ್ಲಿ ಎರಡು ಭಾಗ ಶ್ರೀ ಹರಿಹರ ದೇವರಿಗೆ, ಇನ್ನೊಂದು ಭಾಗ ರಾಮಚಂದ್ರಾರಾಧ್ಯರ ಮಗ ವಿಶ್ವೇಶ್ವರಾಧ್ಯನಿಗೆ. ತಿಮ್ಮರಸ ಮತ್ತು ಅವನ ಮಕ್ಕಳಿಗೆ ವಿಜಯನಗರದ ಅರಸರು ಹರಿಹರ ಸೀಮೆಯ "ಅಮರನಾಯಕತ್ವ"ವನ್ನು ಕೊಟ್ಟಂತೆ ತಿಳಿದು ಬರುತ್ತದೆ. ಈ ಶಾಸನದಲ್ಲಿ ಬಂದಿರುವ ಬುಳ್ಳಾಪುರವು, ಕೊಟ್ಟೂರ ಚಾವಡಿಗೆ ಸೇರಿದ, ಉಚ್ಚಂಗಿದುರ್ಗ ಪ್ರದೇಶದ, ಪಾಂಡ್ಯನಾಡಾದ ಹರಿಹರ ಸೀಮೆಯಲ್ಲಿ ಇದ್ದಿತು. ಈ ಶಾಸನದ ಕಾಲವು ಕ್ರಿ.ಶ. 1530 ಸಂಖ್ಯೆ ದಾವಣಗೆರೆ 28. ಪಾಂಡ್ಯನಾಡು ಹೊಯ್ಸಳ ನಾಡಿನಲ್ಲಿ ಸೇರಿಹೋಗಿ ಹಲವು ಶತಮಾನಗಳೇ ಕಳೆದು ಹೋಗಿದ್ದರೂ, ಜನಮಾನಸದಿಂದ ಪಾಂಡ್ಯನಾಡಿನ ಹೆಸರು ಇನ್ನೂ ದೂರವಾಗಿರಲಿಲ್ಲ ಎನ್ನುವುದರ ದಾಖಲೆ ಈ ಶಾಸನ. ಕ್ರಿ.ಶ. 1531ರ ದಾವಣಗೆರೆ 31 ಶಾಸನವು ಅವಸರದ ದೀಕ್ಷಿತರು, ಅವಸರದ ದೇಮರಸರಿಗೆ ಅಕ್ಷಯ ಪುಣ್ಯಲೋಕ ಪ್ರಾಪ್ತವಾಗಬೇಕೆಂದು ಪಾಂಡ್ಯನಾಡಿನ, ಉಚ್ಚಂಗಿ ಪ್ರದೇಶ, ಹರಿಹರದ ಸೀಮೆಯ, ವಿಜಯನಗರದ ಅರಸರಿಂದ ಇವರಿಗೆ ಅಮರನಾಯಕತ್ವಕ್ಕಾಗಿ ನೀಡಿದ್ದ ಬೆಳುವಡಿ, ಗಂಗನರಸಿ ಗ್ರಾಮಗಳನ್ನು ಹರಿಹರ ದೇವರ ಅಮೃತಪಡಿ ನೈವೇದ್ಯಕ್ಕಾಗಿ ಸಮರ್ಪಿಸಿದ್ದು, ತಾಯ ತಿಮ್ಮಣ್ಣನ ಮಕ್ಕಳು ಸಾವಿತ್ರ ಭಟ್ಟರಿಗೆ ದೇಮರಸರಿಗೆ ಪುಣ್ಯಲೋಕವಾಗಬೇಕೆನ್ನುವ ಉದ್ದೇಶದಿಂದ ಭೂಮಿ ದಾನಕೊಟ್ಟಿರುತ್ತಾರೆ. ಇದಲ್ಲದೆ ಅವಸರದ ದೀಕ್ಷಿತರು ಶ್ರೀ ಹರಿಹರ ದೇವರಿಗೆ ಸಂಬಂಧಿಸಿದಂತೆ ಅಕ್ಕಸಾಲೆಯ ಕೆಲಸ ಮಾಡುತ್ತಿದ್ದ ನಿರೋಜನ ಮಗ ಕರಿಯ ತಿಪ್ಪೋಜನಿಗೆ, ಈ ಶಾಸನವನ್ನು ತಿದ್ದಿರುವುದಕ್ಕೆ ಬೆಳುವಡಿಯ ಗ್ರಾಮದಲ್ಲಿ ಒಕ್ಕುಳ ಎರೆಯ ಭೂಮಿಯನ್ನು ಕೊಟ್ಟಂತೆ ಹೇಳಿದೆ. ಈ ಶಾಸನ ಬರೆದಿರುವ ಕಾಲಕ್ಕೆ ಆಗಲೇ ವಿಜಯನಗರದ

ಅರಸರಲ್ಲಿ ಕೃಷ್ಣದೇವರಾಯನ ಆಡಳಿತ ಮುಗಿದು ಅವನ ತಮ್ಮನಾದ ಅಚ್ಯುತರಾಯನು ರಾಜ್ಯಾಧಿಕಾರದಲ್ಲಿದ್ದನೆಂದು ಇತಿಹಾಸದಿಂದ ತಿಳಿದುಬರುತ್ತದೆ. ದಾವಣಗೆರೆ 46ನೇ ಶಾಸನವು ಅವಸರದ ಚಂದ್ರಶೇಖರಯ್ಯನು ತನ್ನ ಮಾವನಾದ ಅವಸರದ ದೇಮರಸಯ್ಯನ ಹೆಸರಿನಲ್ಲಿ ಹರಿಹರ ದೇವರ ಉತ್ತರ ಭಾಗದಲ್ಲಿ ದೇಮೇಶ್ವರನನ್ನು ಪ್ರತಿಷ್ಠೆ ಮಾಡಿದುದನ್ನು ಪ್ರಸ್ತಾಪಿಸುತ್ತದೆ. ಇದಲ್ಲದೆ ಹರಿಹರದ ಛತ್ರದಲ್ಲಿ 60 ಮಂದಿ ಬ್ರಾಹ್ಮಣರ ಭೋಜನಕ್ಕೆ, ದೇವರ ನೈವೇದ್ಯಕ್ಕೂ ಸಹಾ ದಾನ ಕೊಟ್ಟಿರುತ್ತಾನೆ. ದೇಮೇಶ್ವರ ದೇವಸ್ಥಾನ ಅಥವಾ ಆ ಕಾಲದ ಛತ್ರವಾಗಲೀ ಹರಿಹರ ದೇವಾಲಯದ ಉತ್ತರ ಭಾಗದಲ್ಲಿ ಈಗ ಕಂಡುಬರುವುದಿಲ್ಲ.

ಆದರೆ ದೇವಾಲಯದ ಆವರಣದ ಉತ್ತರ ಭಾಗದಲ್ಲಿ 1970ರ ದಶಕದಲ್ಲೂ ಮೈಸೂರು ಅರಸರ ದಿವಾನರಾಗಿದ್ದ ಪೂರ್ಣಯ್ಯನವರು ಕಟ್ಟಿಸಿದ್ದ ಛತ್ರ ಒಂದು ಅಸ್ತಿತ್ವದಲ್ಲಿದ್ದು, ಅಲ್ಲಿ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿದ್ದುವು. ಈ ಲೇಖಕನೂ ಅವುಗಳಲ್ಲಿ ಭಾಗಿಯಾಗಿದ್ದಾನೆ. ಈಗ ಅದೇ ಜಾಗದಲ್ಲಿ ಬಿರ್ಲಾ ಕಂಪನಿಯವರು ಛತ್ರ ನಿರ್ಮಿಸಿದ್ದಾರೆ. ಈ ಶಾಸನದ ಎಲ್ಲ ದಾನಾದಿಗಳು ಅಚ್ಯುತರಾಯನ ನಿರೂಪದಿಂದಲೇ, ಅಂದರೆ ರಾಜಾಜ್ಞೆಯ ಮೇಲ್ವಿಚಾರಣೆಯಲ್ಲಿಯೇ ನಡೆದಿರುವುದು ಹರಿಹರೇಶ್ವರನ ಬಗೆಗೆ ಮತ್ತು ಅಲ್ಲಿಯ ಜನರ ಬಗೆಗೆ ವಿಜಯನಗರದ ರಾಜರು ತೋರಿದ್ದ ಭಕ್ತಿ ಮತ್ತು ಗೌರವಗಳಿಗೆ ಹಿಡಿದ ಕನ್ನಡಿಯಂತಿವೆ. ಒಂದು ಆಶ್ಚರ್ಯದ ಸಂಗತಿ ಎಂದರೆ ವಿಜಯನಗರ ಸ್ಥಾಪಕ ರಾಜರಿಂದ ಮೊದಲಾಗಿ ಅಚ್ಯುತರಾಯ ಮತ್ತು ಆ ಮುಂದಿನ ರಾಜರು ಕೊಟ್ಟಿರುವ ಇಷ್ಟೊಂದು (14) ಶಾಸನಗಳಿದ್ದರೂ, ಚಕ್ರವರ್ತಿ ಕೃಷ್ಣದೇವರಾಯನ ಹೆಸರು ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯಾದರೂ ಕಂಡುಬರುವುದಿಲ್ಲ. ಪ್ರಾಯಶಃ ಆತನ ಭಕ್ತಿಯೆಲ್ಲವನ್ನೂ ದೂರದ ತಿರುಪತಿ ತಿಮ್ಮಪ್ಪನೇ ಸೆಳೆದುಕೊಂಡಿದ್ದಿರಬೇಕು. ಇಲ್ಲವೇ ಹರಿಹರದ ಭಾಗವು ಯಾವ ತಂಟೆ ತಕರಾರುಗಳಿಲ್ಲದೇ ಉತ್ತಮ ರಾಜಕೀಯ ಹಾಗೂ ಮುತ್ಸದ್ದಿಗಳ ಬೀಡಾಗಿದ್ದುದರಿಂದಲೂ, ಆತನು ಈ ಕಡೆ ಹೆಚ್ಚಾಗಿ ಗಮನ ಹರಿಸಲಿಲ್ಲವೆಂದು ಊಹಿಸಬಹುದಾಗಿದೆ. ಈ ಶಾಸನಗಳಲ್ಲಿ ಬಂದಿರುವ ಅವಸರದವರು ಎಂದರೆ ರಾಜನಿಗೆ ಅತಿಮುಖ್ಯ ವಿಷಯಗಳನ್ನು ತಕ್ಷಣವೇ ತಿಳಿಸುವ ಅಧಿಕಾರಿ ಎಂದು ಅರ್ಥ. ಹರಿಹರದಂತಹ ದೊಡ್ಡ ಅಥವಾ ಸಣ್ಣ ಪುಣ್ಯಕ್ಷೇತ್ರ, ವಿದ್ಯಾಕೇಂದ್ರಗಳಲ್ಲಿ ಈಗಿನಂತೆ (ಸ್ಟಾರ್) ಹೊಟೇಲ್, ಉಪಾಹಾರ ಮಂದಿರಗಳು ಇರುತ್ತಿರಲಿಲ್ಲ. ಇದರಿಂದಾಗಿ ಬೇರೆ ಊರಿನಿಂದ ಬಂದವರು, ವಿದ್ಯಾರ್ಥಿಗಳು, ಅನಾಥರು, ವೃದ್ಧರು, ಅಶಕ್ತರು ಇತ್ಯಾದಿ ಜನಗಳಿಗೆ ಉಪಕಾರ ಮಾಡುವ ಉದ್ದೇಶದಿಂದ ಧನಿಕರು ತಮಗೋ, ತಮ್ಮ ಬಂಧುಗಳಿಗೋ, ಪೂರ್ವಜರಿಗೋ ಪುಣ್ಯವಾಗಲೆಂಬ ಉದ್ದೇಶದಿಂದ ದತ್ತಿ, ದಾನಗಳನ್ನು ನೀಡುತ್ತಿದ್ದರು. ಇಂತಹ ಮಾನವೀಯತೆಯ ದೃಷ್ಟಿಯನ್ನು ಹೊಂದಿದ್ದ ಕನ್ನಡನಾಡಿನ ಜನರ ಭಾರತೀಯ ಸಂಸ್ಕೃತಿಯನ್ನು ಇಲ್ಲಿಯ ಅನೇಕ ಶಾಸನಗಳು ಬಿಂಬಿಸುತ್ತಿವೆ.

ಶಾಲಿವಾಹನಶಕ 1460ನೆಯ ವಿಳಂಬಿನಾಮ ಸಂವತ್ಸರದ ಕಾರ್ತೀಕಶುದ್ಧ ಪೌರ್ಣಮಿಯ ಬುಧವಾರ ಚಂದ್ರಗ್ರಹಣ ಪುಣ್ಯದಿನದಲ್ಲಿ (ಕ್ರಿ.ಶ. 1157) ಬರೆದಿರುವ ಶಿಲಾ ಶಾಸನದ ವಿವರವಿದು. ಸ್ವಾಮಿ ಭಕ್ತನಾದ ಅಚ್ಯುತ ಮಲ್ಲಪನೆಂಬುವನು ತಕ್ಕ ಸಮಯವನ್ನು ನೋಡಿಕೊಂಡು ಅಚ್ಯುತರಾಯನಲ್ಲಿ ವಿಜ್ಞಾಪಿಸಿಕೊಂಡು, ಕುಂದವಾಡವೆನ್ನುವ ಗ್ರಾಮವನ್ನು ಅದಕ್ಕೆ ಅಚ್ಯುತರಾಯೇಂದ್ರ ಮಲ್ಲಾಪುರವೆಂದು ಬೇರೆ ಇನ್ನೊಂದು ಹೆಸರನ್ನು ಇಟ್ಟು, ಹರಿಹರೇಶ್ವರನಿಗೆ ಮಧ್ಯಾಹ್ನದ ಅವಸರದ (ಶೀಘ್ರ) ನೈವೇದ್ಯ, ಸ(ಛ)ತ್ರದಲ್ಲಿಯ ಬ್ರಾಹ್ಮಣರ ಭೋಜನಕ್ಕೂ ಅನುಕೂಲವಾಗುವಂತೆ ಅಚ್ಯುತರಾಯ ಮಲಪಣ್ಣನ ಪರವಾಗಿ ನೆರವೇರಿಸಿದವನು, ರಾಜನ ಪರವಾಗಿ ಅಗ್ರಹಾರ ದೇವಾಲಯಗಳ ಮೇಲ್ವಿಚಾರಕನಾದ ಅಕ್ಕಪ. ದಾವಣಗೆರೆ 27ನೇ ಸಂಖ್ಯೆಯ ಈ ಶಾಸನವು ಅಚ್ಯುತರಾಯ, ಮಲಪಣ್ಣ, ಅಕ್ಕಪರ ಗುಣ, ಸ್ವಾಮಿನಿಷ್ಠೆ, ದೈವಭಕ್ತಿ, ಶೌರ್ಯಗಳನ್ನು ಮುಕ್ತಕಂಠದಿಂದ ಹೊಗಳುತ್ತದೆ. ಅಚ್ಯುತರಾಯೇಂದ್ರ ಮಲ್ಲಾಪುರವು ಈಗಲೂ ಇದ್ದು ಕೇವಲ ಮಲ್ಲಾಪುರವಾಗಿದೆ. ದತ್ತಿ ಬಿಟ್ಟ ಗ್ರಾಮದ ಮೇರೆಗಳನ್ನು ಶಾಸನನ ಉಲ್ಲೇಖಿಸುತ್ತದೆ. ಪಶ್ಚಿಮಕ್ಕೆ ಸೇಬನೂರು, ಉತ್ತರಕ್ಕೆ ಸಾಲಕಟ್ಟೆ, ಪೂರ್ವಕ್ಕೆ ಬಾತಿ, ದಕ್ಷಿಣಕ್ಕೆ ಯರಗುಂಟೆ. ಈ ಗ್ರಾಮಗಳಲ್ಲಿಯೂ ಈಗಲೂ ಜನವಸತಿ ಇದೆ. ಅಷ್ಟೇ ಅಲ್ಲದೆ ಈ ಗ್ರಾಮಗಳಲ್ಲಿ

"ಸರ್ವಸಸ್ಯಾಭಿವೃದ್ಧಿದಂ" ಎಂದರೆ ಎಲ್ಲ ಸಸ್ಯಗಳನ್ನೂ ಅಭಿವೃದ್ಧಿಪಡಿಸಬಹುದು ಎನ್ನುವ ಮಾತು ಕೇವಲ ಶಾಸನೋಕ್ತವೇ ಅಥವಾ ಕೃಷಿಶಾಸ್ತ್ರದ ದೃಷ್ಟಿಯಿಂದ ಎಷ್ಟು ಸತ್ಯ ಎನ್ನುವ ಅಂಶ ಪರಿಶೀಲನಾರ್ಹ ಅಪರೂಪದ ದಾಖಲೆ ಎನಿಸುತ್ತದೆ. ತಿಮ್ಮಣಾರಾಧ್ಯನ ಮಗನೂ, ವ್ಯಾಧೂಲಯಾಜುಷಗಳಲ್ಲಿ (?) ವಿದ್ವಾಂಸನೂ ಆಗಿದ್ದ ಮಲ್ಲಣಾರಾಧ್ಯನು ತನ್ನ ಸ್ವಾಮಿಯ ಅಪ್ಪಣೆಯ ಮೇರೆಗೆ ಈ ಶಾಸನವನ್ನು ರಚಿಸಿದನು.

ಪೌರ್ಣಮಿಯ ದಿವಸ ಚಂದ್ರಗ್ರಹಣ ಉಂಟಾಗುತ್ತದೆ ಎನ್ನುವ ಭೌಗೋಳಿಕ ಸಂಗತಿಯೊಂದನ್ನು ಈ ಶಾಸನ ದಾಖಲಿಸಿರುವುದು ಮಹತ್ವದ ವಿಷಯವಾಗಿದೆ. ಜ್ಯೋತಿಷ್ಯ ಹಾಗೂ ಖಗೋಲಶಾಸ್ತ್ರದಲ್ಲಿ ಆಸಕ್ತಿ ಇರುವವರು ಈ ಘಟನೆಯನ್ನು ತೂಗಿನೋಡಿ ತಮ್ಮ ತಮ್ಮ ಶಾಸ್ತ್ರ ಇತಿಹಾಸ ಜ್ಞಾನವಿಸ್ತಾರಕ್ಕೆ ಬಳಸಿಕೊಳ್ಳಬಹುದಾಗಿದೆ. ಈ ಶಾಸನದ ಇನ್ನೊಂದು ವಿಶೇಷವೆಂದರೆ ಹರಿಹರ ಗ್ರಾಮವಾಸಿಯಾಗಿದ್ದ ಅಚ್ಯುತ ಮಲ್ಲಪ ತನ್ನ ನೀತಿಶಾಸ್ತ್ರ ವಿವೇಕಜ್ಞತೆಗೆ, ತುಂಗಭದ್ರಾ ನದಿತೀರವಾಸಿಯಾಗಿರುವ ಶ್ರೀ ಹರಿಹರೇಶ್ವರ ಸ್ವಾಮಿಯ ಕೃಪೆಯೇ ಕಾರಣವಾಗಿದ್ದು, ಅದರ ಉಪಕೃತತನದ ದ್ಯೋತಕವಾಗಿಯೇ ಈ ದಾನ ನೀಡುತ್ತಿರುವುದಾಗ, ಸ್ವದೈವದ ನಂಬಿಕೆಯನ್ನು ನಿರ್ಭಿಡೆಯಿಂದ ಹೇಳಿಕೊಂಡಿರುವುದು. ಇಡೀ ಶಾಸನವು ಸಂಸ್ಕೃತದಲ್ಲಿದ್ದು ಅದರ ರಚನಾಕಾರನಾದ ಮಲ್ಲಣಾರಾಧ್ಯನ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ.

ಮುಂದಿನ ಶಾಸನವು ಅಚ್ಯುತರಾಯನು ಹರಿಹರದ ಬ್ರಾಹ್ಮಣರನ್ನು ಧನವಂತರಾದ ಕುಬೇರರನ್ನಾಗಿಸುವ ಉದ್ದೇಶದಿಂದ "ಮಹಾ(ಆ)ನಂದ ನಿಧಿ" (ಈಗಿನ ಬ್ಯಾಂಕುಗಳ ಠೇವಣಿ) ಎನ್ನುವ ವಿಶೇಷ ಇಡುಗಂಟನ್ನೊಂದನ್ನು ಸ್ಥಾಪಿಸಿದ ವಿಚಾರವನ್ನು ತಿಳಿಸುತ್ತದೆ. ಇದೊಂದು ಚಿಕ್ಕ ಶಾಸನವಾಗಿದ್ದು ಕಾಲ ಕ್ರಿ.ಶ. 1539 ಎಂದು ನಮೂದಿಸಲಾಗಿದೆ. ಶಾಸನ(ದ) ಒಕ್ಕಣೆಯ ಮುಖ್ಯ ಸಾಲುಗಳ ಅರ್ಥ ಹೀಗಿದೆ. ಪುಣ್ಯರಾಶಿಗಳಿಂದ ರಕ್ಷಿತವಾಗಿ, ಸಜ್ಜನರ ಉಪಯೋಗಕ್ಕೆ ಒದಗಿ ಬರುವ, ಹೊಸದಾದ ಪ್ರಶಸ್ತಿ ಪಡೆದು, ಅತಿಶಯವಾದ ಪ್ರಸಿದ್ಧಿ ಹಾಗೂ ಸಾಮರ್ಥ್ಯವನ್ನು ಹೊಂದಿರುವ ಮಹತ್ತಾದ ಈ ಆನಂದನಿಧಿಗೆ, ಭೂತಗಳಿಂದ ಸುತ್ತುವರಿದ, ಸರ್ಪಸಮೂಹದಿಂದ ಎಲ್ಲ ಕಾಲಗಳಲ್ಲಿಯೂ ಆವೃತವಾದ (ಕುಬೇರನ) ನವನಿಧಿಗಳು ಸಮವಾಗಬಲ್ಲವೇ? ಇಷ್ಟೆಲ್ಲ ವರ್ಣನೆ ಮಾಡಿರುವ ಶಾಸನವು ಅದರ ಮೊತ್ತವೆಷ್ಟು? ನಿಧಿಯ ಸ್ವರೂಪವೇನು? ಇಡುಗಂಟಿನ ಲಾಭ ಪ್ರಮಾಣವನ್ನು ಹಂಚಿಕೊಳ್ಳುವ ಬಗೆ, ಇದರ ಸಂರಕ್ಷಣೆ ಹೊಣೆ ಯಾರಿಗೆ ಸೇರಿದ್ದು ಎನ್ನುವುದರ ಬಗೆಗೆ ಏನನ್ನೂ ತಿಳಿಸದೆ ಮೌನ ತಾಳುತ್ತದೆ. ನಿಧಿಯನ್ನು "ಆನಂದನಿಧಿ", "ಮಹಾನಂದನಿಧಿ", "ಅಮಂದಾನಂದ ನಿಧಿ" ಎಂದು ಕರೆದಿರುವುದರಿಂದ ಅಲ್ಲದೇ ಚಕ್ರವರ್ತಿ ಅಚ್ಯುತರಾಯನೇ ನೇರವಾಗಿ ಇದರ ಸ್ಥಾಪನೆಗೆ ಕಾರಣವಾಗಿರುವುದರಿಂದ ಇದೊಂದು ದೊಡ್ಡಮೊತ್ತದ ಹಣವಾಗಿರಬಹುದೆಂಬ ಊಹೆಗೆ ಇಂಬುದೊರೆಯುತ್ತದೆ. ಅಚ್ಯುತರಾಯನಿಗೆ ಹರಿಹರದ ಜನರಲ್ಲಿ ಅಷ್ಟೊಂದು ವಿಶ್ವಾಸವಿರಲು ಕಾರಣವೇನು ಎನ್ನುವ ಮೂಲಪ್ರಶ್ನೆಗೆ ಉತ್ತರ ಈ ಶಾಸನದಲ್ಲಿ ದೊರೆಯುವುದಿಲ್ಲ.

ಕ್ರಿ.ಶ. 1555ರ ದಾವಣಗೆರೆ 22 ಶಾಸನವು ನಾಗಪುರವರಾಧೀಶ್ವರ ಬೈಯಪ್ಪನಾಯಕರು ಮಕ್ಕಳು ಕೃಷ್ಣಪ್ಪನಾಯಕರು ವೈಶಾಖ ಶುದ್ಧ ಚತುರ್ದಶಿ ನರಸಿಂಹ ಜಯಂತಿಯಂದು ತಮ್ಮ ತಂದೆ ಭೈಯಪ್ಪನಾಯಕರಿಗೆ, ತಾಯಿ ಕೊಂಡಮ್ಮನವರಿಗೆ ಪುಣ್ಯವಾಗಬೇಕೆಂಬ ಆಶಯದಿಂದ ಕೂಡಲೂರಿನ ಪ್ರಸನ್ನ ಹರಿಹರ ದೇವರಿಗೆ ಮಧ್ಯಾನ್ಹದ ಅವಸರದ ಅತಿರಸ ನೈವೇದ್ಯಕ್ಕೆ ಬೆಳ್ಳಿಯ ಹರಿವಾಣವನ್ನು ಕೊಟ್ಟ ವಿಷಯ ತಿಳಿಸುತ್ತದೆ. ವಿಶೇಷವೆಂದರೆ ಈ ಶಾಸನದಲ್ಲೂ 7ನೇ ಶತಮಾನದಿಂದಲೂ ಪ್ರಚಲಿತವಿದ್ದ ಕೂಡಲೂರು ಹರಿಹರದ ಹೆಸರನ್ನು 16ನೇ ಶತಮಾನದಲ್ಲಿಯೂ ಉಳಿಸಿಕೊಂಡಿರುವುದು. ಎರಡನೆದಾಗಿ, ಅತಿರಸ ನೈವೇದ್ಯಕ್ಕೆ ಬೆಳ್ಳಿಯ ಹರಿವಾಣವನ್ನೇ ಕೊಟ್ಟಿರುವುದು. ಮುಂದಿನ ದಾವಣಗೆರೆ 18 ಶಾಸನವು ಕ್ರಿ.ಶ. 1560ರ ಕಾಲದ್ದಾಗಿದೆ. ಇದು ಈ ಹಿಂದಿನ ಶಾಸನದ ಮುಂದುವರಿಕೆಯಾಗಿದ್ದು, ಬಿಳಿಚೋಡು ಸೀಮೆಯ ಕಾಡಜಿ ಎನ್ನುವ ಗ್ರಾಮವನ್ನು ಶ್ರೀ ಹರಿಹರದೇವರ ಛತ್ರದ ಅವಸರ ನೈವೇದ್ಯದ ತುಪ್ಪಕ್ಕೆ ಸಮರ್ಪಿಸಿದ್ದನ್ನು ತಿಳಿಸುತ್ತದೆ.

ಮುಂದಿನ ಶಾಸನ ಕ್ರಿ.ಶ. 1561 ವರುಷಕ್ಕೆ ಸಂಬಂಧಿಸಿದ್ದು ಈ ಕಾಲಕ್ಕಾಗಲೇ ಹಿಂದಿನ ಶಾಸನಗಳಲ್ಲಿ ಉಲ್ಲೇಖಿಸಲಾಗಿರುವ ಕೃಷ್ಣಪ್ಪ ನಾಯಕರು ದೈವಾಧೀನರಾಗಿದ್ದರೆಂದು ತಿಳಿಯಬಹುದಾಗಿದೆ. ಅವರ ಕಾರ್ಯಕ್ಕೆ ನೆರವಾಗುತ್ತಿದ್ದ ವೇಲೂರ ಕಾಳಪ್ಪನಾಯಕರ ಮಕ್ಕಳು ಮಾರ್ಗ ಸಹಾಯ ನಾಯಕರು ಕೃಷ್ಣಪ್ಪ ನಾಯಕರಿಗೆ ಪುಣ್ಯವಾಗಬೇಕೆಂದು ಮಾಘಶುದ್ಧ ಪೌರ್ಣಮಿಯಂದು ನಡೆಯುತ್ತಿದ್ದ ಶ್ರೀ ಹರಿಹರ ದೇವರ ರಥೋತ್ಸವಕ್ಕೆ ಮತ್ತು ಚೈತ್ರ ಶುದ್ಧ ಪೌರ್ಣಮಿಯಂದು ನಡೆಯುತ್ತಿದ್ದ ಲಕ್ಷ್ಮೀ ಪಾರ್ವತೀ ದೇವಿಯರ ರಥೋತ್ಸವಕ್ಕೆ ಗಂಗನರಸಿ ಎನ್ನುವ ಗ್ರಾಮವನ್ನು ದತ್ತಿ ಬಿಟ್ಟರು. ಹೀಗೆ ನೈವೇದ್ಯಕ್ಕೆ, ಇತರ ಸೇವೆಗಳಿಗೆ ಹಾಗೂ ಛತ್ರಕ್ಕೆ ಬರುವ ಭಕ್ತಾದಿಗಳ ಭೋಜನಕ್ಕೆ, ರಥೋತ್ಸವಗಳಿಗೆ ಆಗುವ ವೆಚ್ಚಕ್ಕೆ ದೇವಲಯಕ್ಕೆ ಗ್ರಾಮಗಳನ್ನೇ ದತ್ತಿ ಬಿಟ್ಟಿದ್ದರೆಂದರೆ, ದೇವಾಲಯದ ವೈಭವವು ಚೆನ್ನಾಗಿಯೇ ಇತ್ತೆಂದು ಧಾರಾಳವಾಗಿ ಹೇಳಬಹುದಾಗಿದೆ. ಹೊಯ್ಸಳರ ಪತನಾನಂತರ ಇಳಿಮುಖವಾಗಿದ್ದ ದೇವಾಲಯದ ವೈಭವವು ಕ್ರಮ ಕ್ರಮವಾಗಿ ಚೇತರಿಸಿಕೊಂಡು, ವಿಜಯನಗರಕಾಲಕ್ಕೆ ವೈಭವದ ಶಿಖರವನ್ನು ತಲುಪಿತ್ತು. 1565ರಲ್ಲಿ ನಡೆದ ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರದ ಪತನಾನಂತರ ದೇವಾಲಯದ ವೈಭವ ಮತ್ತೆ ಕುಗ್ಗತೊಡಗಿತು ಎನ್ನುವುದನ್ನು ಹರಿಹರದ ಶಾಸನಗಳ ಅಭ್ಯಾಸದಿಂದ ತಿಳಿಯಬಹುದಾದ ಚಾರಿತ್ರಿಕ ಅಂಶವಾಗಿದೆ.

ಸಾರಾಂಶ

"ಮಿಟ್ಟಲಿಗ" ಎನ್ನುವ ಗೊಲ್ಲನ ಹೆಸರಲ್ಲಿ ಕಟ್ಟೆಯೊಂದನ್ನು (ಸಣ್ಣ ಕೆರೆ) ಕಟ್ಟಿಸಿ, ಗ್ರಾಮಕ್ಕೆ ಆತನ (ಮಿಟ್ಟ್ಲಕಟ್ಟೆ) ಹೆಸರನ್ನೇ ಇಟ್ಟು ದಾನ ನೀಡಿರುತ್ತಾನೆ. ಇಲ್ಲಿ ಗಮನಿಸಬಹುದಾದ ವಿಶೇಷವೆಂದರೆ ಆ ಗ್ರಾಮದ ನಾಲ್ಕೂ ಕಡೆಯ ಮೇರೆಗಳನ್ನು ಸ್ಪಷ್ಟವಾಗಿ ಗುರುತಿಸಿರುವುದು. ಈ ವಿಷಯವು ವಿಜಯನಗರದ ಅರಸರ ಕಾಲದವರ ಭೂವಿಜ್ಞಾನ ಅರಿವನ್ನು ತಿಳಿಸುತ್ತದೆ. ಹೆಚ್ಚು ಕಡಿಮೆ ಈ ಮೇರೆಗಳು ಈಗಲೂ ಇದ್ದು, ಅವನ್ನು ಗುರುತಿಸಬಹುದಾಗಿದೆ.

ಹರಿದ್ರಾನದಿಗೆ (ಬ್ಯಾಲದಹಳ್ಳಿ ಹಳ್ಳ) ಸೇತುವೆಯನ್ನು ನಿರ್ಮಿಸಿ, ಅದರ ನೀರನ್ನು ವ್ಯವಸಾಯಕ್ಕೆ ಬಳಸಿ, ಆರ್ಥಿಕ ಅಭಿವೃದ್ಧಿ ಸಾಧಿಸಿ ಇಡೀ ದೇಶಕ್ಕೆ ಮೊಟ್ಟಮೊದಲ ಬಾರಿಗೆ ಇಲ್ಲಿಯ ಶಾಸನಗಳು ದಾಖಲಿಸಿವೆ. ಈಗ ಆ ಸೇತುವೆ ಇಲ್ಲವಾದರೂ ಶಾಸನೋಕ್ತ ಊರುಗಳು ಇರುವುದರಿಂದ ಅವುಗಳು ಭೂಮಿಯ ಕಾಂಟೂರುಗಳನ್ನು (ಏರು ತಗ್ಗು) ಗುರುತಿಸಿದಾಗ ಅವುಗಳು ಇಳಿಕೆಯ ಕ್ರಮದಲ್ಲಿರುವುದರಿಂದ, ಆ ಕಾಲದವರಿಗೆ ಜಲಭೂಕರ್ಷಣೆಯ ನಿಯಮಗಳ ತಿಳುವಳಿಕೆ ಇದ್ದಿತೆಂದು ಹೇಳಬಹುದಾಗಿದೆ. ಸೇತುವೆಯನ್ನು ಕಟ್ಟಿಸಿದ್ದ ಬುಳ್ಳಪ ಮತ್ತು ಅದು ಒಡೆದು ಹೋದ ನಂತರ ಮತ್ತೆ ಚಾಮರಸ ಎನ್ನುವ ಇನ್ನೊಬ್ಬ ಜಲತಂತ್ರಜ್ಞನ ಹೆಸರನ್ನು ದಾಖಲಿಸಿರುವ ಶಾಸನಗಳು ಕನ್ನಡ ನಾಡಿನ ಅಂದಿನ ಜಲವಿಜ್ಞಾನಿಗಳನ್ನೂ ಮತ್ತು ಅವರ ಕಾರ್ಯಗಳನ್ನು ದೇಶಕ್ಕೆ ಸಾರುತ್ತಿರುವುದು ಅಮೂಲ್ಯ ಕೊಡುಗೆಗಳಾಗಿವೆ.

ಆನಂದನಿಧಿ ಎನ್ನುವ ಠೇವಣಿ ನಿಧಿಯೊಂದನ್ನು ಅಚ್ಯುತ ರಾಯನು ಹರಿಹರದ ಬ್ರಾಹ್ಮಣರಿಗೋಸ್ಕರ ಸ್ಥಾಪಿಸಿದ ವಿಚಾರ ಶಾಸನಗಳಿಂದ ತಿಳಿದುಬರುತ್ತದೆ. ಈ ಪ್ರಸಂಗ ಮುಂದೆ ಕನ್ನಡ ನಾಡಿನ ಬ್ಯಾಂಕ್‌ಗಳ ಪ್ರಾರಂಭ ಇತಿಹಾಸಕ್ಕೆ ಒಂದು ಮೈಲಿಗಲ್ಲಾಯಿತೆನ್ನುವುದು ವಿದ್ವಾಂಸರ ಅಭಿಪ್ರಾಯ.

ಹರಿಹರೇಶ್ವರನನ್ನು "ಪ್ರಸನ್ನ ಹರಿಹರದೇವ"ನೆಂದು ಮೊದಲ ಬಾರಿಗೆ ಸಂಬೋಧಿಸಿರುವುದು ವಿಶೇಷವಾಗಿದೆ.

ಹರಿಹರದಲ್ಲಿ ಈಗ ಹರಿಹರೇಶ್ವರನ ಒಂದೇ ರಥ ಎಳೆಯುತ್ತಾರೆ. ಆದರೆ ಶಾಸನಗಳು ಹೇಳುವಂತೆ ಇದರ ಜೊತೆಗೆ, ಲಕ್ಷ್ಮೀದೇವಿ ಮತ್ತು ಪಾರ್ವತಿ ಅಮ್ಮನವರ ಜೋಡಿರಥೋತ್ಸವ, ಹೀಗೆ ಮೂರು ರಥಗಳನ್ನು ಎಳೆಯುತ್ತಿದ್ದ ಅಪರೂಪದ ಸಂಗತಿಯೊಂದನ್ನು ಶಾಸನವು ದಾಖಲಿಸಿದೆ. ಇದು ಅಂದಿನ ಹರಿಹರೇಶ್ವರ ದೇವಸ್ಥಾನದ ವೈಭವವನ್ನೂ ಸೂಚಿಸುತ್ತದೆ.

ಪೌರ್ಣಮಿಯ ದಿವಸ ಚಂದ್ರ ಗ್ರಹಣಉಂಟಾಗುತ್ತದೆ ಎನ್ನುವ ಭೌಗೋಳಿಕ ಲಿಖಿತ ಸಂಗತಿಯೊಂದನ್ನು ಶಾಸನ ದಾಖಲಿಸಿರುವುದು ಮಹತ್ವದ ಸಂಗತಿ ಎನಿಸಿದೆ.

ಹೀಗೆ ಹರಿಹರದ ಶಾಸನಗಳು ವಿಜಯನಗರದ ಅರಸರ ಕೆಲಸ ಕಾರ್ಯಗಳ ಸಾಂಸ್ಕೃತಿಕ, ಐತಿಹಾಸಿಕ ಮಹತ್ವವನ್ನಲ್ಲದೇ, ನೆರೆ ನೀರಿನ ಉಪಯೋಗದ ಹಿಂದಿರುವ ಜಲಸೂತ್ರಧಾರರ ಹೆಸರುಗಳು, ಚಂದ್ರಗ್ರಹಣದಂತಹ ವೈಜ್ಞಾನಿಕ ಸಂಗತಿಗಳನ್ನೂ ದಾಖಲಿಸಿರುವ ಅಪರೂಪ ಶಾಸನಗಳಾಗಿವೆ.

ಆಕರಗ್ರಂಥಗಳು

1. *ಎಪಿಗ್ರಾಫಿಯಾ ಕರ್ನಾಟಿಕಾ*, ಸಂ. 9.
2. ಹೆಚ್.ಎಂ. ಶಂಕರನಾರಾಯಣರಾವ್, *ಶ್ರೀ ಹರಿಹರ ದೇವಾಲಯ*.

8

ಮಂಡ್ಯ ಜಿಲ್ಲೆಯ ವಿಜಯನಗರ ಕಾಲದ ದೇವಾಲಯಗಳು ಹಾಗೂ ದಾನದತ್ತಿಗಳು

ಡಾ॥ ಎಸ್. ಶಿವರಾಮು

ದಕ್ಷಿಣ ಭಾರತವನ್ನಾಳಿದ ಅರಸು ಮನೆತನಗಳಲ್ಲಿ ಅತ್ಯಂತ ವೈಭವಯುತವಾಗಿ ಆಳ್ವಿಕೆ ನಡೆಸಿದವರೆಂದರೆ ವಿಜಯನಗರ ಅರಸರು. ಕ್ರಿ.ಶ. 14ನೇ ಶತಮಾನದ ಪೂರ್ವದಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ಘಟನೆ, ಈ ಸಾಮ್ರಾಜ್ಯ ಮೂರು ಶತಮಾನಗಳ ಕಾಲ ಆಳ್ವಿಕೆ ನಡೆಸಿ ಭಾರತೀಯ ಸಂಸ್ಕೃತಿಗೆ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ತನ್ನದೇ ಆದ ಕೊಡುಗೆ ನೀಡಿದೆ. ಇದರ ಕೀರ್ತಿ ಪ್ರತಿಷ್ಠೆಗಳು ವಿದೇಶಕ್ಕೆ ತಲುಪಿ ಅಲ್ಲಿಯ ವರ್ತಕರು, ಪ್ರವಾಸಿಗಳು ಈ ಬೃಹತ್ ರಾಜಕೀಯ ಶಕ್ತಿಯ ಕಡೆಗೆ ಕಣ್ಣುಹಾಯುವಂತೆ ಆಹ್ವಾನಿಸಿತು. ಇದರಿಂದ ಪೂರ್ವ, ಪಶ್ಚಿಮ ಮತ್ತು ಆಗ್ನೇಯ ದಿಕ್ಕಿನ ವಿದೇಶಿಯರನ್ನು ಆಕರ್ಷಿಸಿತು. ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ನೀಡಿದಷ್ಟು ಪ್ರವಾಸಿಗರು ಕರ್ನಾಟಕವನ್ನಾಳಿದ ಇತರೆ ಯಾವ ಸಾಮ್ರಾಜ್ಯಕ್ಕೂ ಭೇಟಿ ನೀಡಿಲ್ಲದಿರುವುದನ್ನು ಗಮನಿಸಿದರೆ ವಿಜಯನಗರ ಸಾಮ್ರಾಜ್ಯದ ವೈಭವ, ವ್ಯಾಪಕತೆ, ಪ್ರಭುತ್ವ ಮತ್ತು ಪ್ರಬಲತೆ ಎಷ್ಟಿತ್ತು ಎಂಬುದನ್ನು ಪ್ರವಾಸಿಗರ ಹೇಳಿಕೆಗಳಿಂದಲೂ ತಿಳಿಯಬಹುದಾಗಿದೆ. ದಖ್ಖನ್ನಿನ ರಾಜಕೀಯ ಅನೈಕ್ಯತೆ ಮತ್ತು ಶೂನ್ಯವನ್ನು ಹೋಗಲಾಡಿಸಿದ ವಿಜಯನಗರ ಸಾಮ್ರಾಜ್ಯ ಹಿಂದೂ ಧರ್ಮದ ರಕ್ಷಣಾಕೋಟೆಯಂತೆ ಕಾರ್ಯನಿರ್ವಹಿಸಿತು. ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಧರ್ಮಗಳನ್ನು ರಕ್ಷಿಸಿ ಪ್ರೋತ್ಸಾಹಿಸಿತು. ಆಡಳಿತ ಕ್ಷೇತ್ರಗಳಲ್ಲಿ ಹೊಸ ರೂಪ ತಂದಿತು. ವಿದೇಶಿಯರ ದಾಳಿಗಳಿಂದ ನಾಡನ್ನು ರಕ್ಷಿಸಿದ್ದರಿಂದಲೇ ಈ ವಂಶಕ್ಕೆ ವಿಜಯನಗರದ ಅರಸರೆಂಬ ಹೆಸರಾಯಿತೆಂದು ಹೇಳಲಾಗಿದೆ. ದಖ್ಖನ್ನಿನ ಕಟ್ಟ ಕಡೆಯ ಬಲಿಷ್ಠ ಸಾಮ್ರಾಜ್ಯವಾಗಿ ಮೆರೆದ ಇದರ ಸಾಧನೆಗಳು ಅಪೂರ್ವ.[1]

ವಿಜಯನಗರ ಅರಸರ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಅವಿರತವಾಗಿ ಸಾಗಿತು. ಅಷ್ಟೇ ಬಿರುಸಿನಿಂದ ಇದ್ದ ದೇವಾಲಯಗಳ ವಿಸ್ತರಣೆಯೂ ಆಯಿತು. ಇದಕ್ಕೆ ಕಾರಣ ಈ ಕಾಲದಲ್ಲಿ ದೇವಾಲಯಗಳಲ್ಲಿ ನಡೆಯಬೇಕಾಗಿದ್ದ ಅನೇಕ ಧರ್ಮಾಚರಣೆಯ ಎಲ್ಲ ವಿಧಿಗಳನ್ನು ನೆರವೇರಿಸಲು ಸಾಲದಾದುದರಿಂದ ಇವುಗಳ ವಿಸ್ತರಣೆ ಅವಶ್ಯವಾಯಿತು. ಅನೇಕ ಧಾರ್ಮಿಕ ವಿಧಿಗಳನ್ನು ದೇವಾಲಯಗಳಲ್ಲಿಯೇ ನೆರವೇರಿಸಬೇಕಾದುದರಿಂದ ದೇವಾಲಯದ ತಲವಿನ್ಯಾಸ ಹೆಚ್ಚು ವಿಸ್ತಾರವಾಗಿರುತ್ತದೆ. ಈ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ, ಪ್ರದಕ್ಷಿಣಾಪಥ, ಸುಕನಾಸಿ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿರುತ್ತವೆ. ನವರಂಗಕ್ಕೆ ಮೂರು ಪ್ರವೇಶ ದ್ವಾರಗಳಿದ್ದು ಪಕ್ಕದಲ್ಲಿರುವ ಪ್ರವೇಶದ್ವಾರಗಳು ನವರಂಗವನ್ನು ಚಿಕ್ಕ ದ್ವಾರಮಂಟಪಗಳಿಗೆ ಕೂಡಿಸಿರುತ್ತವೆ.

ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯಾಪ್ತಿಗೆ ದಕ್ಷಿಣ ಭಾರತದ ಸಾಕಷ್ಟು ಪ್ರದೇಶಗಳು ಸೇರಿದ್ದವು. ಅಲ್ಲಲ್ಲಾ ಸಾಕಷ್ಟು ವಾಸ್ತುಶಿಲ್ಪದ ಕುರುಹುಗಳನ್ನು ನಾವು ಇಂದಿಗೂ ಕಾಣಬಹುದು. ಅಂತೆಯೇ ಮಂಡ್ಯ ಪ್ರದೇಶದಲ್ಲಿ

ವಿಜಯನಗರದರಸರ ದೇವಾಲಯಗಳ ವಾಸ್ತುಶಿಲ್ಪ ಮತ್ತು ಪ್ರಾಚೀನತೆಯನ್ನು ತಿಳಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಬೆಳ್ಳೂರಿನ ವೀರಭದ್ರ ದೇವಾಲಯ

ಬೆಳ್ಳೂರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಒಂದು ಐತಿಹಾಸಿಕ ಗ್ರಾಮ. ಈ ಗ್ರಾಮದಲ್ಲಿ ದೊರೆತಿರುವ ಶಾಸನಗಳಿಂದ ಬೆಳ್ಳೂರಿಗೆ 'ಉದ್ಭವ ನರಸಿಂಹಪುರ' ಎಂದು ಹೆಸರಿತ್ತೆಂದು ತಿಳಿದುಬರುತ್ತದೆ. ಬೆಳ್ಳೂರಿನ ವೀರಭದ್ರ ದೇವಸ್ಥಾನವು ವಿಜಯನಗರ ಕಾಲದಲ್ಲಿ ನಿರ್ಮಾಣವಾದ ದೇವಾಲಯವಾಗಿದೆ.[2] ವಿಜಯನಗರ ಕಲಾ ಶೈಲಿಯ ಈ ದೇವಾಲಯವು ಸರಳ ವಾಸ್ತುವಿನ್ಯಾಸವನ್ನು ಹೊಂದಿದೆ. ದೇವಾಲಯದ ಮುಖಮಂಟಪವು ನಾಲ್ಕು ಕಂಬಗಳನ್ನು ಹೊಂದಿದ್ದು, ಈ ಕಂಬಗಳು ಯಾವುದೇ ಕೆತ್ತನೆಗಳಿಲ್ಲದೆ ಒರಟುಗಲ್ಲಿನ ಕಂಬಗಳಾಗಿದ್ದು ಬೋದಿಗೆಗಳ ಸಹಾಯದಿಂದ ನಿಂತಿವೆ.

ಇದಲ್ಲದೇ ನವರಂಗದಲ್ಲೇ ಗರ್ಭಗೃಹಕ್ಕೆ ಎದುರಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದಲ್ಲಿ ಸುಂದರವಾದ ವೀರಭದ್ರನ ಮೂರು ಅಡಿ ಎತ್ತರವಾದ ಶಿಲ್ಪವಿದೆ. ನಾಲ್ಕು ಕೈಗಳ ವೀರಭದ್ರನ ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಡಮರುಗ ಪ್ರಧಾನ ಆಯುಧಗಳಾಗಿವೆ. ವೀರಭದ್ರನ ಬಲಭಾಗದಲ್ಲಿ ದಕ್ಷಯಜ್ಞನ ಸಣ್ಣ ಮೂರ್ತಿಯನ್ನು ಕೆತ್ತಲಾಗಿದೆ.

ಹರವು ರಾಮದೇವರ ದೇವಾಲಯ

ಹರವು ಪಾಂಡವಪುರ ತಾಲ್ಲೂಕಿನ ಒಂದು ಗ್ರಾಮವಾಗಿದ್ದು, ಹಲವು ಶಾಸನಗಳಲ್ಲಿ ಈ ಗ್ರಾಮದ ಉಲ್ಲೇಖಗಳಿವೆ. ಕ್ರಿ.ಶ. 1540ರ ಶಾಸನದಲ್ಲಿ ಇದೊಂದು ವ್ಯಾಪಾರ ಕೇಂದ್ರವಾಗಿತ್ತೆಂದು ತಿಳಿಸುತ್ತದೆ. ಇಲ್ಲಿರುವ ವಿಜಯನಗರದ ಕಾಲದ ಬೃಹತ್ ರಾಮದೇವರ ದೇವಾಲಯವನ್ನು ವಿಜಯನಗರದ ಮೊದಲನೇ ದೊರೆ ವೀರಬುಕ್ಕಣ್ಣನ (1356–1377) ಕಾಲದಲ್ಲಿ ನಿರ್ಮಾಣವಾಗಿರುವುದಕ್ಕೆ ಶಾಸನಾಧಾರಗಳಿವೆ. ಕ್ರಿ.ಶ. 1467ರಲ್ಲಿ ನೆರೆಯ ಸೀತಾಪುರ ಶಾಸನ ಈ ದೇವಾಲಯಕ್ಕೆ ದತ್ತಿ ಬಿಟ್ಟಿರುವ ಅಂಶವನ್ನು ತಿಳಿಸುತ್ತದೆ. ಇದು ಬೃಹತ್ ಪ್ರಾಕಾರದ ನಡುವೆ ಪೂರ್ವಾಭಿಮುಖವಾಗಿದ್ದು ಪ್ರವೇಶ ದ್ವಾರವು ಎತ್ತರವಾಗಿದ್ದು ಭವ್ಯವಾಗಿದೆ. ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, 35 ಅಂಕಣದ ಕಂಬಗಳ ಸಾಲಿನ ವಿಶಾಲವಾದ ನವರಂಗ, ಮುಖಮಂಟಪ ಹಾಗೂ 78 ಬೃಹತ್ ಸ್ತಂಭಗಳನ್ನುಳ್ಳ ಹಜಾರವನ್ನು ಹೊಂದಿದೆ. ಈ ಹಜಾರದಲ್ಲಿ ಒಂದು ಸಭಾಮಂಟಪ. ಎರಡು ಅರ್ಧಮಂಟಪಗಳಿವೆ. ಅರ್ಧಮಂಟಪಕ್ಕೆ ಹೊಂದಿಕೊಂಡಂತೆಯೇ ಉತ್ತರಕ್ಕೆ ಯಾಗಶಾಲೆ, ದಕ್ಷಿಣಕ್ಕೆ ಪಾಕಶಾಲೆಯಿದೆ. ಸಭಾಮಂಟಪ, ಪ್ರದಕ್ಷಿಣಾಪಥ, ಹೊರ ಪ್ರಾಕಾರ ಎಲ್ಲವೂ ಭವ್ಯವಾಗಿದೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಕಲಾತ್ಮಕವಾದ ಉಬ್ಬುಶಿಲ್ಪಗಳಿವೆ.

ಗರ್ಭಗುಡಿಯ ಪ್ರವೇಶದ್ವಾರದಲ್ಲಿ ಜಯ ವಿಜಯರಿದ್ದು ಶ್ರೀರಾಮ ಪರಿವಾರ ಶಿಲ್ಪಗಳು ಹಿಂದೆಂದೋ ಗರ್ಭ ಗುಡಿಯಿಂದ ಕಣ್ಮರೆಯಾಗಿ ಅದೇ ಸ್ಥಾನದಲ್ಲಿ ಮೂರು ಅಡಿ ಎತ್ತರದ ಲಕ್ಷ್ಮೀನಾರಾಯಣ ಅಕ್ಕಪಕ್ಕ ಶ್ರೀದೇವಿ, ಭೂದೇವಿಯರಿದ್ದಾರೆ. ಆದರೆ ಮೂಲತಃ ಉತ್ಸವಮೂರ್ತಿಗಳಂತೂ ಶ್ರೀರಾಮ ಪರಿವಾರ ಬಹು ಆಕರ್ಷಕವಾಗಿದೆ. ಗರ್ಭಗುಡಿಯ ಎತ್ತರಕ್ಕೆ ಜಲಪ್ರನಾಳವಿದೆ. ಪ್ರನಾಳದ ವಿನ್ಯಾಸವು ಸಿಂಹವಕ್ತ್ರ ಆಕಾರವಾಗಿರುವುದರಿಂದ ಈ ದೇವಾಲಯವನ್ನು ಸ್ವತಃ ರಾಜನೇ ಕಟ್ಟಿಸಿದನೆಂಬ ಆಧಾರವಿದೆ.

ದೇವಾಲಯದ ಮುಂಭಾಗದಲ್ಲಿ ಸುಮಾರು 30 ಅಡಿ ಎತ್ತರದ ಗರುಡ ಸ್ತಂಭವಿದ್ದು, ಅದರ ಕೆಳಗೆ ಗರ್ಭಗೃಹಕ್ಕೆ ಎದುರಾಗಿ ಕೈಮುಗಿದು ನಿಂತಿರುವ ಗರುಡ ಶಿಲ್ಪವನ್ನೂ, ಪೂರ್ವಕ್ಕೆ ಶಂಖಚಕ್ರ, ಉತ್ತರಕ್ಕೆ ಸಿಂಹ, ದಕ್ಷಿಣಕ್ಕೆ ಆಂಜನೇಯರ ಉಬ್ಬುಶಿಲ್ಪಗಳನ್ನೂ ಬಿಡಿಸಲಾಗಿದೆ. ಈ ಸ್ತಂಭದ ಸಮೀಪದಲ್ಲಿಯೇ ವಸಂತೋತ್ಸವದ ಓಕುಳಿಕಟ್ಟೆಯಿದೆ.[3]

ನಾಗಮಂಗಲ ವೀರಭದ್ರೇಶ್ವರ ದೇವಾಲಯ

ನಾಗಮಂಗಲವು ಮಂಡ್ಯ ಜಿಲ್ಲೆಯ ಇತಿಹಾಸ ಪ್ರಸಿದ್ಧವಾದ ಸ್ಥಳವಾಗಿದ್ದು, ವಿಜಯನಗರ ಶೈಲಿಯ ಮೂರು ದೇವಾಲಯಗಳು ಇಲ್ಲಿವೆ. ಇವುಗಳಲ್ಲಿ ವೀರಭದ್ರ ದೇವಾಲಯ, ನಾಗರೇಶ್ವರ ದೇವಾಲಯ, ಸೌಮ್ಯ ಕೇಶವ ದೇವಾಲಯಗಳು ಮುಖ್ಯವಾಗಿವೆ. ನಾಗಮಂಗಲದ ವೀರಭದ್ರ ದೇವಾಲಯವು ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಕ್ರಿ.ಶ. 1511ರ ನಾಗಮಂಗಲದ 8ನೆಯ ಶಾಸನವು ಅನಾದಿ ಅಗ್ರಹಾರ ವೀರಬಲ್ಲಾಳ ಚತುರ್ವೇದಿ ಭಟ್ಟರತ್ನಾಕರವಾದ ನಾಗಮಂಗಲದ ವೀರಭದ್ರ ದೇವಾಲಯದ ರಂಗಮಂಟಪದ ಮುಂಭಾಗದಲ್ಲಿ ಗಂಧಗೋಡಿ ಮಂಟಪವನ್ನು ಕಟ್ಟಿಸಿದ ವಿಷಯವನ್ನು ದಾಖಲು ಮಾಡಿದೆ. ಈ ಗಂಧಮೋಡಿ ಮಂಟಪವು ಬಹುಶಃ ರಂಗಮಂಟಪದೊಳಗಿನ ಗಂಧದ ಮಂಟಪವಾಗಿದ್ದು, ದೇವರ ಉತ್ಸವ ಮೂರ್ತಿಗಳನ್ನು ಇಲ್ಲಿ ಕೂಡಿಸುತ್ತಿದ್ದಿರಬಹುದು. ದಾನಿಯಾದ ಹೊನ್ನಿಶೆಟ್ಟಿಯು ಅಕ್ಕನ ಚೆನ್ನಿಶೆಟ್ಟಿಯ ಮಗನಾಗಿದ್ದು ಅರಮನೆಯ ಬೇಹಾರಿಯಾಗಿದ್ದನು.[4] ಪೂರ್ವಾಭಿಮುಖವಾಗಿರುವ ವೀರಭದ್ರ ದೇವಾಲಯವು ಹಂತ ಹಂತವಾಗಿ ನಿರ್ಮಾಣಗೊಂಡಿದೆ. ಗರ್ಭಗುಡಿಯು ಚತುರ್ಭುಜಾಕಾರದಲ್ಲಿದೆ. ಇದರ ಮುಂದಿನ ಭಾಗದಲ್ಲಿ ಅಂತರಾಳವಿದೆ. ಅಂತರಾಳವು ಗರ್ಭಗೃಹಕ್ಕಿಂತ ದೊಡ್ಡದಾಗಿದೆ. ಅಂತರಾಳವು ಗರ್ಭಗೃಹ ಮತ್ತು ನವರಂಗಕ್ಕೆ ಸೇರಿಕೊಂಡಿದೆ. ಅಂತರಾಳದ ಎಡಬಲ ಬದಿಯಲ್ಲಿ ಸಣ್ಣ ಕೋಣೆಯನ್ನು ನಿರ್ಮಿಸಲಾಗಿದೆ. ಅಂತರಾಳದಿಂದ ಗರ್ಭಗುಡಿಗೆ ಪ್ರವೇಶಿಸುವ ಬಾಗಿಲು ನಾಲ್ಕು ಅಡಿ ಎತ್ತರವಾಗಿದೆ. ಗರ್ಭಗೃಹವು ನೆಲಮಟ್ಟಕ್ಕಿಂತ ಮೂರು ಅಡಿಯಷ್ಟು ತಗ್ಗಾಗಿದೆ. ಗರ್ಭಗುಡಿಯಲ್ಲಿ ನಾಲ್ಕು ಅಡಿ ಎತ್ತರದ ವೀರಭದ್ರ ವಿಗ್ರಹವಿದೆ. ವೀರಭದ್ರನು ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಡಮರುಗ ಮುಂತಾದ ಆಯುಧಗಳನ್ನು ಹಿಡಿದು ನಿಂತಿದ್ದಾನೆ. ವೀರಭದ್ರನ ಎದುರಿನಲ್ಲಿ ಅಂತರಾಳದಲ್ಲಿ ಒಂದು ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಬಲಭಾಗದಲ್ಲಿ ಹಿತ್ತಾಳೆಯ ವೀರಭದ್ರ, ಭದ್ರಕಾಳಮ್ಮ, ದಕ್ಷ ಯಜ್ಞರ ಉತ್ಸವ ಮೂರ್ತಿಗಳನ್ನು ಇಟ್ಟಿದ್ದಾರೆ. ಪ್ರಧಾನವಾದ ವೀರಭದ್ರನ ಉತ್ಸವಮೂರ್ತಿಯು ಸುಮಾರು ಎರಡೂವರೆ ಅಡಿ ಎತ್ತರವಾಗಿದೆ. ಅದರ ಹಿಂದೆ ಮೂರು ಅಡಿ ಎತ್ತರದ ಪ್ರಭಾವಳಿಯನ್ನು ರಚಿಸಲಾಗಿದೆ. ಇದರ ಮಗ್ಗುಲಲ್ಲಿ ಎಂಟು ಅಂಗುಲ ಎತ್ತರದ ಉತ್ಸವಮೂರ್ತಿ ಇದ್ದು ಇದರ ಹಿಂಬದಿಯಲ್ಲಿ ಕೂಡ ಒಂದು ಅಡಿ ಎತ್ತರದ ಪ್ರಭಾವಳಿ ಇದೆ. ಇದೇ ಅಂತರಾಳದಲ್ಲಿ ಗಣೇಶ, ನಂದಿ ಮುಂತಾದ ಶೈವ ಸಂಪ್ರದಾಯಕ್ಕೆ ಸೇರಿದ ಹಿತ್ತಾಳೆಯ ಉತ್ಸವಮೂರ್ತಿಗಳಿವೆ. ಗರ್ಭಗೃಹದ ಎಡ ಭಾಗದಲ್ಲಿ ಗಣಪತಿ ಅಂಕಣದಲ್ಲಿ ತ್ರಿಶೂಲ, ಖಡ್ಗ, ಡಮರು ಹಾಗೂ ಇನ್ನೊಂದು ಕೈಯಲ್ಲಿ ದಕ್ಷ ಬ್ರಹ್ಮನ ತಲೆಯನ್ನು ಹಿಡಿದು ನಿಂತಿರುವ ಉಗ್ರರೂಪಿಯಾದ ವೀರಭದ್ರನ ಶಿಲ್ಪವನ್ನು ಕಾಣಬಹುದು. ಗಣಪತಿ ಅಂಕಣದ ಮುಂದಿನ ಭಾಗವೇ ನವರಂಗ, ನವರಂಗದಲ್ಲಿನ ದ್ವಾರವು ಹಿತ್ತಾಳೆಯ ಕವಚದಿಂದ ಆವೃತವಾಗಿದೆ. ಇದರ ಲಲಾಟಬಿಂಬದಲ್ಲಿ ಶಿವ ಪಾರ್ವತಿಯರ ವಿಗ್ರಹವನ್ನು ಕಾಣಬಹುದು. ಈ ಬಾಗಿಲ ಪಕ್ಕದಲ್ಲಿ ಶೈವ ದ್ವಾರಪಾಲಕರ ವಿಗ್ರಹಗಳು ಇವೆ. ಮಹಾ ರಂಗಮಂಟಪವು 16 ಕಂಬಗಳನ್ನು ಹೊಂದಿದೆ. ಎರಡು ಕಂಬಗಳ ಸಹಾಯದಿಂದ ಮುಖಮಂಟಪದ ರಚನೆಯನ್ನು ಹೊಂದಿದೆ. ಅದರ ಮೇಲೆ ನಾಲ್ಕು ಕಂಬಗಳನ್ನೊಳಗೊಂಡ ಒಂದು ಅಂತಸ್ತಿನ ಶಿಲಾರಚನೆಯನ್ನು ಕಾಣಬಹುದು. ಪ್ರಾಕಾರದ ಒಳಗಡೆಯಲ್ಲಿ ಒಂದು ನಂದಿ ಮಂಟಪವಿದೆ. ಇದರ ಮೇಲೆ ಶಿಖರವನ್ನು ಹೊಂದಿದೆ. ಶಿಖರದ ಮೇಲೆ ನಾಲ್ಕು ಕಡೆಗಳಲ್ಲಿ ಶಿವನ ವಾಹನವಾದ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ನಾಗಮಂಗಲದ ವೀರಭದ್ರ ದೇವಾಲಯವು ವಿಜಯನಗರದ ಕಾಲದ ಕಲಾ ಶೈಲಿಯಿಂದ ಕೂಡಿದ್ದು ಒಂದು ಸುಂದರ ವಾಸ್ತುಶಿಲ್ಪವನ್ನು ಹೊಂದಿದೆ.

ದೇವನಹಳ್ಳಿಯ ತಿರುಮಲ ಅಥವಾ ದೇವಲಾಪುರದ ಲಕ್ಷ್ಮೀಕಾಂತ ದೇವಾಲಯ

ವಿಜಯನಗರದ ಕಾಲದಲ್ಲಿ ನಿರ್ಮಾಣವಾದ ನಾಗಮಂಗಲ ತಾಲ್ಲೂಕಿನ ದೇವಲಾಪುರಕ್ಕೆ ಸಮೀಪವಾಗಿರುವ ದೇವರಹಳ್ಳಿಯ ತಪಸಿರಾಯ ಅಥವಾ ಶಾಸನೋಕ್ತ ತಿರುಮಲ ದೇವಾಲಯ ಒಂದಾಗಿದೆ. ನೆರೆಯ ಮುತ್ಸಂದ್ರ ಹಾಗೂ

ಮಾದಿಹಳ್ಳಿ ಶಾಸನಗಳು ಇದಕ್ಕೆ ಆಧಾರವಾಗಿವೆ. ಊರ ಹೆಬ್ಬಾಗಿಲು ಬಳಿ ಇರುವ ಈ ದೇವಾಲಯವು ವಿಸ್ತೀರ್ಣದಲ್ಲಿ ವಿಶಾಲವಾಗಿದೆ. ದ್ರಾವಿಡ ಶಿಖರವಿರುವ ಪ್ರಧಾನ ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ಸ್ಥಾನಕ ಭಂಗಿಯ ತಿರುಮಲ ದೇವರ ಪ್ರತಿಷ್ಠಾಪನೆಯಾಗಿದೆ. ಎಡಭಾಗದಲ್ಲಿ ಅಮ್ಮನವರ (ಲಕ್ಷ್ಮಿ) ಗುಡಿ ಇದೆ. ವಿರೂಪಣ್ಣನಾಯಕ ಕ್ರಿ.ಶ. 1529ರಲ್ಲಿ ಈ ಗುಡಿಗೆ ದತ್ತಿಬಿಟ್ಟ ವಿಷಯ ಶಾಸನದಲ್ಲಿ ಉಲ್ಲೇಖವಾಗಿದೆ. ಗರ್ಭಗೃಹ, ನವರಂಗ, ಮುಖಮಂಟಪ ಮತ್ತು ಪಾತಾಳಂಕಣಗಳಿವೆ. ದೇವಾಲಯಕ್ಕೆ ಎರಡು ಸುತ್ತಿನ ಪ್ರಾಕಾರವಿದ್ದು ಮುಂದೆ ವಿಶಾಲವಾದ ತೆರೆದ ಕೈಸಾಲೆ ಮಂಟಪವಿದೆ. ವಿಜಯನಗರ ಕಾಲದ ಕಂಬಗಳ ರಚನೆಯೇ ಈ ದೇವಾಲಯಕ್ಕೆ ಶೋಭೆ ತಂದಿದೆ.

ದೇವಲಾಪುರದ ಲಕ್ಷ್ಮೀಕಾಂತ ದೇವಾಲಯ ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಮುಖ್ಯವಾಗಿ ಪ್ರಾಕಾರ, ಮಹಾದ್ವಾರ ಹಾಗೂ ದೀಪಸ್ತಂಭಗಳು ವಿಜಯನಗರ ಕಾಲದ ರಚನೆಗಳಾಗಿವೆ. ಕ್ರಿ.ಶ. 1472ರಲ್ಲಿ ಅಲ್ಲಪ್ಪನಾಯಕನು ನಿರ್ಮಿಸಿದ ವಿಚಾರವನ್ನು ಶಾಸನ ತಿಳಿಸುತ್ತದೆ.[5]

ವಿಜಯನಗರದ ಅರಸ ಸಾಳುವ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಹಳ್ಳಿಕಾರ ಚಿಕ್ಕಅಲ್ಲಪ್ಪನಾಯಕನಿಗೆ ಉಂಬಳಿ ನೀಡಿದ್ದ ದೇವಲಾಪುರದ ಲಕ್ಷ್ಮೀಕಾಂತ ಗುಡಿಗೆ ಬಾಗಿಲುವಾಡ ಹಾಗೂ ದೀಪಮಾಲೆ ಕಂಬಗಳನ್ನು ಮಾಡಿಸುವುದರ ಜೊತೆಗೆ ಗೋಪಿನಾಥ ದೇವರ ಸೇವೆಗೆಂದು, ದೇವಲಾಪುರದ ಹಿರಿಯ ಕೆರೆಯ ಕೆಳಗಣ ಗದ್ದೆಯನ್ನು ಶ್ರೀವೈಷ್ಣವರಾದ ಕೋನೇರಿ ಅಯ್ಯನವರಿಗೆ ದಾನ ನೀಡಿದ್ದನ್ನು ನೆರೆಯ ಚುಂಚನ ಹಳ್ಳಿಯ ಕ್ರಿ.ಶ. 1484ರ ಶಾಸನ ದಾಖಲಿಸುತ್ತದೆ.[6] ಅಲ್ಲದೇ ಸಾಳುವ ನರಸಿಂಗರಾಜ ಒಡೆಯನ ಮನೆಯ ಪ್ರಧಾನ ವಿರೂಪಾಕ್ಷ ದೇವಣ್ಣನು ಆರಣೆ ಸ್ಥಳಕ್ಕೆ ಸೇರಿದ ಚುಂಚನಹಳ್ಳಿಯನ್ನು ಚುಂಚನ ಭೈರವ ದೇವರಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸುತ್ತದೆ.

ಕೆಲ್ಲಂಗೆರೆಯ ಶ್ರೀಮಲ್ಲಿಕಾರ್ಜುನ ದೇವಾಲಯ

ನಾಗಮಂಗಲ ತಾಲ್ಲೂಕಿನ ವಿಜಯನಗರ ಕಾಲದ ಕೆಲ್ಲಂಗೆರೆಯ ಮಲ್ಲಿಕಾರ್ಜುನ ದೇವಾಲಯವು ಅತ್ಯಂತ ಪ್ರಾಚೀನವಾಗಿದ್ದು ಕಲಾತ್ಮಕವಾಗಿದೆ. ವಿಜಯನಗರ ಕಾಲದ ಶಾಸನದಲ್ಲಿ ಕೆಲ್ಲಂಗೆರೆಯ ಹಿರಿಯ ಹೊನ್ನೆಯನಾಯಕರ ಮಗ ವರದೆಯನಾಯಕನು ಊರ ಮುಂದೆ ಶ್ರೀ ಮಲ್ಲಿಕಾರ್ಜುನ ದೇವರ ದೇವಾಲಯದ ಗರ್ಭಗೃಹ, ಸುಖನಾಸಿ, ರಂಗಮಂಟಪ ನಿರ್ಮಿಸಿ, ಈ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ, ಹಳೆ ಕೆರೆಯನ್ನು ಜೀರ್ಣೋದ್ಧಾರ ಮಾಡಿ, ಹೊಸದಾಗಿ ವರದರಾಜ ಸಮುದ್ರವೆಂಬ ಕೆರೆಯನ್ನು ಕಟ್ಟಿ ಶ್ರೀಮಲ್ಲಿಕಾರ್ಜುನ ದೇವರ ಶ್ರೀಪಾದಕ್ಕೆ ಸಮರ್ಪಿಸಿದ್ದನ್ನು ತಿಳಿಯುತ್ತದೆ.

ಮೋದೂರು ರಾಮಲಿಂಗೇಶ್ವರ ದೇವಾಲಯ

ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ 10 ಕಿ.ಮೀ ದೂರದಲ್ಲಿದೆ. ಪೂರ್ವಾಭಿಮುಖವಾಗಿರುವ ಇಲ್ಲಿಯ ರಾಮಲಿಂಗೇಶ್ವರ ಗುಡಿಯು ವಿಜಯನಗರ ಕಾಲದಲ್ಲಿ ನಿರ್ಮಿಸಲ್ಪಟ್ಟಿದೆ. ಇದರ ಗರ್ಭಗೃಹ ಅಂತರಾಳ ಹಾಗೂ ನವರಂಗಗಳೆಲ್ಲವೂ ವಿಶಾಲವಾಗಿದ್ದು, ಗರ್ಭಗೃಹದಲ್ಲಿರುವ ಬೃಹತ್ತಾದ ಶಿವಲಿಂಗದ ಸೋಮಸೂತ್ರವು ಊರಿನ ಪ್ರಾಚೀನತೆಯನ್ನು ವಿವರಿಸುತ್ತದೆ. ನವರಂಗದಲ್ಲಿ ಗಣಪತಿ, ನಂದಿ ಶಿಲ್ಪಗಳಿದ್ದು, ಗುಡಿಯ ಭಿತ್ತಿ ನಿರಾಡಂಬರವಾಗಿದ್ದು, ಆಕರ್ಷಕ ಗಾರೆ ಶಿಖರ ಗರ್ಭಗೃಹವನ್ನು ಅಲಂಕರಿಸಿದೆ. ಎಡಭಾಗದಲ್ಲಿ ಪಾರ್ವತಿ ದೇವಾಲಯ, ಪ್ರಾಕಾರದಲ್ಲಿ ಪಾಕಶಾಲೆ, ಯಾಗಶಾಲೆ, ಆಗ್ನೇಯ ಮೂಲೆಯಲ್ಲಿ ಕ್ಷೇತ್ರಪಾಲ ಭೈರವ ಹಾಗೂ ನೈರುತ್ಯ ಭಾಗದಲ್ಲಿ ಚಂಡಿಕೇಶ್ವರ ಕಿರುಗುಡಿಗಳಿದ್ದು, ಹೊರಗೆ ಸುಮಾರು 36 ಅಡಿ ಎತ್ತರದ ನಂದಿಕಂಬವಿದೆ. ಗುಡಿಯ ಬಲಭಾಗದಲ್ಲಿ ಕಲ್ಯಾಣಿ ಇದೆ.[8]

ಶ್ರೀರಂಗಪಟ್ಟಣದ ಗಂಗಾಧರೇಶ್ವರ ದೇವಸ್ಥಾನ

ಮಂಡ್ಯ ಜಿಲ್ಲೆಯ ಪ್ರಮುಖ ಐತಿಹಾಸಿಕ ಸ್ಥಳಗಳಲ್ಲಿ ಶ್ರೀರಂಗಪಟ್ಟಣವು ಒಂದು. ಶ್ರೀರಂಗಪಟ್ಟಣವು ವಿಜಯನಗರ ಕಾಲದಲ್ಲಿ ಪ್ರಸಿದ್ಧಿಗೊಂಡ ಪಟ್ಟಣವಾಗಿತ್ತು. ಈ ಪಟ್ಟಣದಲ್ಲಿ ಪ್ರಾಮುಖ್ಯತೆ ಹೊಂದಿದ್ದ ದೇವಾಲಯವೆಂದರೆ ಗಂಗಾಧರೇಶ್ವರ ದೇವಸ್ಥಾನ. ವಿಶಾಲ ಪ್ರಾಕಾರ, ದ್ವಾರ ಬಾಗಿಲು ಹೊಂದಿದ್ದು ಪೂರ್ವಾಭಿಮುಖವಾಗಿದೆ. ದಕ್ಷಿಣ ದ್ವಾರವು ರಾಯಗೋಪುರ ಹೊಂದಿದ್ದು ಅದು ಶಿಥಿಲಾವಸ್ಥೆಯಲ್ಲಿದೆ. ದ್ವಾರಪಾಲಕರಿದ್ದು ಇದು ಹನ್ನೆರಡು ಕಂಬಗಳ ಸಹಾಯದಿಂದ ನಿರ್ಮಾಣವಾಗಿದೆ. ಮಹಾದ್ವಾರ ಪ್ರವೇಶಿಸಿದೊಡನೆ ವಿಶಾಲವಾದ ಪ್ರಾಂಗಣವು ದೊರೆಯುತ್ತದೆ. ಗಂಗಾಧರೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದೆ. ಪರಿವಾರ ದೇವರುಗಳ ಗುಡಿಗಳು ದೇವಸ್ಥಾನದ ಮುಂದೆ ಧ್ವಜಸ್ತಂಭ ಬಲಿಪೀಠವನ್ನು ನಿಲ್ಲಿಸಲಾಗಿದೆ. ಈ ಧ್ವಜಸ್ತಂಭದ ಮುಂದೆ ಬಹುಭುಜಾಕೃತಿಯ ಬಲಪೀಠವನ್ನು ನಿರ್ಮಿಸಲಾಗಿದೆ. ಮಹಾರಂಗಮಂಟಪವನ್ನು 32 ಕಂಬಗಳ ಸಹಾಯದಿಂದ ನಿರ್ಮಿಸಲಾಗಿದೆ.

ಮಹಾರಂಗಮಂಟಪದಿಂದ ದೇವಸ್ಥಾನದ ಒಳಗೆ ಪ್ರವೇಶಿಸಿದರೆ ನವರಂಗ, ನವರಂಗದ ಪೂರ್ವದಲ್ಲಿ ಪ್ರವೇಶ ದ್ವಾರವಿದೆ. ನವರಂಗಕ್ಕೆ ದಕ್ಷಿಣ ಮತ್ತು ಪೂರ್ವದಲ್ಲಿ ಎರಡೂ ಕಡೆ ಪ್ರವೇಶ ದ್ವಾರವನ್ನು ಹೊಂದಿದೆ. ನವರಂಗದಲ್ಲಿರುವ ಕಂಬಗಳು ಅನೇಕ ಶಿಲ್ಪಗಳನ್ನು ಒಳಗೊಂಡಿವೆ. ನವರಂಗದ ಮುಂದೆ ಅಂತರಾಳವಿದೆ. ಗರ್ಭಗೃಹದಲ್ಲಿ ಸುಂದರವಾದ ಶಿವಲಿಂಗವಿದೆ. ಇದು ಕಪ್ಪುಕಲ್ಲಿನ ಸುಂದರ ವಿಗ್ರಹವಾಗಿದೆ. ದಕ್ಷಿಣದ ಪ್ರವೇಶದ್ವಾರದ ಮುಖಮಂಟಪದ ಮೇಲಿನ ಶಾಸನವು ಕ್ರಿ.ಶ. 1517ರಲ್ಲಿ ಕೃಷ್ಣದೇವರಾಯನು ಉಂಬಳಿಯನ್ನು ಶ್ರೀರಂಗಪಟ್ಟಣ ರಾಜಧಾನಿಯಲ್ಲಿನ ಗಂಗಾಧರೇಶ್ವರ ದೇವಸ್ಥಾನಕ್ಕೆ ಮಾಡಿಕೊಟ್ಟ ವಿಷಯವು ತಿಳಿದುಬರುತ್ತದೆ.[9] ಗರ್ಭಗೃಹದ ಹೊರಭಿತ್ತಿಯಲ್ಲಿ ಅರ್ಧಮಂಟಪಗಳನ್ನು ನಿರ್ಮಿಸಲಾಗಿದೆ. ದೇವಸ್ಥಾನದ ಗರ್ಭಗೃಹದ ಮೇಲಿನ ವಿಮಾನವು ಅತ್ಯಂತ ಮನಮೋಹಕವಾಗಿ ಮೂಡಿಬಂದಿದೆ. ದೇವಸ್ಥಾನದ ಉತ್ತರದಲ್ಲಿ ಅಂದರೆ ಮುಖ್ಯ ದೇವಸ್ಥಾನದ ಎಡಬದಿಯಲ್ಲಿ ಅಮ್ಮನವರ ಸನ್ನಿಧಿ ಇದೆ. ಇದು ಕೂಡ ಪೂರ್ವಾಭಿಮುಖವಾಗಿ ರಚನೆಗೊಂಡಿದೆ, ಮುಖಮಂಟಪ, ನವರಂಗ ಮತ್ತು ಗರ್ಭಗೃಹಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಪಾರ್ವತಿ ಅಮ್ಮನವರ ವಿಗ್ರಹವಿದೆ. ದೇವಾಲಯದ ಮುಂದೆ ನಾಗರಕಲ್ಲುಗಳನ್ನು ಕಾಣಬಹುದು.

ಜಿಲ್ಲೆಯ ಹಲವು ಶಾಸನಗಳಲ್ಲಿ ದೇವಾಲಯಗಳ ಉಲ್ಲೇಖವಿರುವುದು ನಮಗೆ ತಿಳಿದುಬರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ವಿಜಯನಗರದ ಅರಸ ಮಲ್ಲಿಕಾರ್ಜುನನ ಮಹಾಪ್ರಧಾನ ತಿಮ್ಮಣ್ಣ ದಣಾಯಕನ (ದಂಡನಾಯಕ) ಆದೇಶದಂತೆ ಮದ್ದೂರು ಸ್ಥಳದ ಲಕ್ಕಪ್ಪನ ಮಗ ತಿಪ್ಪಯ್ಯನ ಮಗನು ಕಳಲೆ ನಾಡಿನ ಬಸವನಪಟ್ಟಣವನ್ನು ಬೆಳತೂರಿನ ರಾಮನಾಥ ದೇವಾಲಯಕ್ಕೆ ಈ ಗ್ರಾಮವನ್ನು ದಾನ ನೀಡಿದ ವಿಷಯವು ತಿಳಿದುಬರುತ್ತದೆ. ಹಾಗಾಗಿ ಈ ಗ್ರಾಮಕ್ಕೆ ತಿಮ್ಮಣ್ಣ ಡಣಾಯಕನ ಹೆಸರಿನಿಂದ ಡಣಾಯಕಪುರ ಎಂಬ ಹೆಸರು ಬಂದಿದೆ. ಇದೊಂದು ದಾನ ಶಾಸನವಾಗಿದ್ದು, ಬೆಳತೂರ ಶ್ರೀರಾಮದೇವರಿಗೆ ಅಮೃತಪಡಿ ಅಂಗ ರಂಗಭೋಗ ಸಮುದಾಯಕ್ಕೆ ಎಂಬ ಉಲ್ಲೇಖವಿದೆ. ಅಮೃತಪಡಿ ಅಂಗ ರಂಗಭೋಗ ಎಂದರೆ ದೇವರ ಅಭಿಷೇಕಕ್ಕೆ ಹಾಕುವ ಗಂಧ, ಕುಂಕುಮ, ಹೂ ಮತ್ತು ನೈವೇದ್ಯಕ್ಕೆ ದೇವರ ಮೂರ್ತಿಗೆ ಮಾಡುವ ಅಲಂಕಾರ, ರಂಗಭೋಗ ಹಾಡುಗಾರಿಕೆ ಅಮೃತಪಡಿಯೆಂದರೆ ನೈವೇದ್ಯ ಪ್ರಸಾದ ಈ ಖರ್ಚಿಗಾಗಿ ಬೆಳತೂರಿನ ರಾಮದೇವರಿಗೆ ಕಳಲೆಯ ಮದ್ದೂರು ಸ್ಥಳದ ಬಸವಪಟ್ಟಣವನ್ನು ಪಡೆದು ಅದಕ್ಕೆ ಲಿಂಗಮುದ್ರೆ ಕಲ್ಲನ್ನು ನೆಟ್ಟಿದ್ದರು. ದೇವತಾ ಕಾರ್ಯವನ್ನು ನಡೆಸಿಕೊಂಡು ಬಂದ ಆತನಿಗೆ ಬಸವಪಟ್ಟಣವನ್ನು ಕೊಟ್ಟ ವಿಚಾರ ಶಾಸನದಲ್ಲಿದೆ. ಈ ಬಸವಪಟ್ಟಣದ ತೆರಿಗೆ ಸಂಗ್ರಹದಿಂದ ದೇವರ ಕಾರ್ಯವನ್ನು ನಡೆಸಿಕೊಡತಕ್ಕದ್ದು ಎಂದು ಶಾಸನದಲ್ಲಿ ಉಲ್ಲೇಖವಾಗಿದೆ.[10]

ಮಂಡ್ಯ ಜಿಲ್ಲಾ ಕೇಂದ್ರದಿಂದ ಹತ್ತು ಕಿ.ಮೀ. ದೂರದಲ್ಲಿ ಲಾಳನ ಕೆರೆ ಗ್ರಾಮದಲ್ಲಿ ವಿಜಯನಗರದ ಒಂದು ಶಾಸನ ಬಸವೇಶ್ವರ ಗುಡಿಯ ಪಶ್ಚಿಮದಲ್ಲಿದ್ದು ಇದೊಂದು ದಾನ ಶಾಸನವಾಗಿದೆ. ಈ ಶಾಸನವನ್ನು ದುಂದುಭಿ ಸಂವತ್ಸರದ ಪುಷ್ಯ ಶು. 9, ಸೋಮವಾರ ಕೆತ್ತಿಸಲಾಗಿದೆ. ಇದರನ್ವಯ ವಿಜಯನಗರದ ಅರಸ ಸಂಗಮ ವಂಶದ

ಎರಡನೇ ಹರಿಹರನು ಕಂಣವೊಡೇರ್ (ಬುಕ್ಕಣ ಒಡೆಯ) ಮಗ ಕೆಂಪರಾಜನಿಗೆ ಲಾಳನ ಕೆರೆಯನ್ನು ದಾನ ನೀಡಿದ ಬಗ್ಗೆ ಉಲ್ಲೇಖಿತವಾಗಿದೆ.[11] ಕ್ರಿ.ಶ. 1440ರ ಮಳವಳ್ಳಿ ತಾಲ್ಲೂಕು ಕಿರಗಸೂರು ಗ್ರಾಮ ಶಾಸನದಲ್ಲಿ ಅಮಾತ್ಯ ಶಿರೋಮಣಿ ಲಕ್ಕಣ್ಣ ದಣ್ಣಾಯಕನು ತನ್ನ ದೊರೆಗಳ ದೀರ್ಘಾಯುಸ್ಸು, ಆರೋಗ್ಯ ಐಶ್ವರ್ಯಾಭಿವೃದ್ಧಿಗಾಗಿ ಕಿರಗಸೂರು ಗ್ರಾಮದ ತೆರಿಗೆ ಹಣವನ್ನು ಕಾವೇರಿ ದಡದಲ್ಲಿರುವ ತಲಕಾಡು ವೈದ್ಯನಾಥ ದೇವರಿಗೆ ಅರ್ಪಿಸಬೇಕೆಂದು ತನ್ನ ಅಧಿಕಾರಿ ಪಟ್ಟಣದ ರಾಯಣ್ಣ ಒಡೆಯರಿಗೆ ಆಜ್ಞಾಪಿಸಿದ್ದನ್ನು ಹೇಳುತ್ತದೆ. ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ಭಂಡಾರದಲ್ಲಿರುವ ಕ್ರಿ.ಶ. 1447ರ ತಾಮ್ರಶಾಸನವು ವಿಜಯನಗರದ ಎರಡನೇ ದೇವರಾಯನ ಆಳ್ವಿಕೆಯ ಕಾಲಕ್ಕೆ ಸೇರಿದ್ದು, ಇದರಲ್ಲಿ ಕನ್ನಂಬಾಡಿ ಸ್ಥಳದ ಮೊದನಾಡು ವ್ಯಾಪ್ತಿಯಲ್ಲಿರುವ ಹೊಸಹಳ್ಳಿ ಗ್ರಾಮವನ್ನು ದತ್ತಿಬಿಟ್ಟ ವಿಚಾರವಿದೆ.

ಮೇಲುಕೋಟೆಯ ಜೀಯರ್ ದೇವಾಲಯದಲ್ಲಿರುವ ಕ್ರಿ.ಶ. 1458ರ ಶಾಸನವು ಇಮ್ಮಡಿ ಪ್ರೌಢದೇವರಾಯನ ಆಳ್ವಿಕೆಯ ಅವಧಿಯಲ್ಲಿ ತಿಮ್ಮಣ್ಣ ಡಣ್ಣಾಯಕನ ಪತ್ನಿ ರಂಗಾಂಬಿಕೆಯು ರಂಗಮಠವನ್ನು ನಿರ್ಮಿಸಿದ ಬಗ್ಗೆ ಉಲ್ಲೇಖವಿದೆ. ಈ ಮಠಕ್ಕಾಗಿ ಹೊಯ್ಸಳ ರಾಜ್ಯ ಕುರುವಂಕನಾಡವೇಂಠೆಯ ವ್ಯಾಪ್ತಿಯಲ್ಲಿದ್ದ ಬಲ್ಲೇನಹಳ್ಳಿ ಮತ್ತು ಯಳವದಹಳ್ಳಿಗಳನ್ನು ದತ್ತಿಬಿಟ್ಟ ವಿಚಾರವನ್ನು ಶಾಸನದಲ್ಲಿ ದಾಖಲಿಸಲಾಗಿದೆ.[12]

ಮಳವಳ್ಳಿ ತಾಲ್ಲೂಕಿನ ಮಾರೇಹಳ್ಳಿಯಲ್ಲಿ ದೊರೆತಿರುವ ಕ್ರಿ.ಶ. 1530ರ ಶಾಸನವು ವಿಜಯನಗರದ ಅಚ್ಯುತರಾಯನ ಆಳ್ವಿಕೆಯಲ್ಲಿ ಮೂಲಸ್ಥಾನ ದೇವರಿಗೆ ಈ ಪ್ರದೇಶವನ್ನು ಆಳುತ್ತಿದ್ದ ತಿಪ್ಪಣ್ಣನಾಯಕನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.[13] ಇದೇ ತಾಲ್ಲೂಕಿನ ಕೊಡಗಹಳ್ಳಿಯ ಕ್ರಿ.ಶ. 1530ರ ಶಾಸನವು ಅಚ್ಚುತರಾಯನ ಆಳ್ವಿಕೆಯಲ್ಲಿ ಈ ಪ್ರದೇಶವನ್ನು ಆಳುತ್ತಿದ್ದ ರಾಯಣ್ಣ ನಾಯಕನೆಂಬ ಅಧಿಕಾರಿಯು ಮಾರನಪುರವೆಂಬ ಗ್ರಾಮವನ್ನು ತಲಕಾಡಿನ ಕೀರ್ತಿನಾರಾಯಣ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.[14]

ಮಳವಳ್ಳಿಯ ಶಾಸನದಲ್ಲಿ ಮಳವಳ್ಳಿಯ ಮಹಾಜನರೂ ಮತ್ತು ಹೆಸರು ಸ್ಪಷ್ಟವಾಗಿಲ್ಲದ ಗೌಡನೊಬ್ಬನೂ ಸೇರಿ ಅರ್ಕನಾಥ ದೇವಾಲಯವನ್ನು ಗರ್ಭಗೃಹ, ಅಂತರಾಳ, ಮಂಟಪ, ಶಿಖರ, ಚಾವಣಿ ಸಹಿತ ಕಿತ್ತು ಜೀರ್ಣೋದ್ಧಾರ ಮಾಡಿಸಿದಂತೆ ತಿಳಿಸಿದೆ. ಇದರ ಕಾಲ ಕ್ರಿ.ಶ. 1465ರ ಆಗಸ್ಟ್ 11. ಇದರಲ್ಲಿ ದೇವರಾಯನ ಆಳ್ವಿಕೆಯ ಪ್ರಸ್ತಾಪವಿದೆ.[15] ನಾಗಮಂಗಲ ತಾಲ್ಲೂಕಿನ ದೇವಲಾಪುರ ಶಾಸನವು ಲಕ್ಷ್ಮೀಕಾಂತ ದೇವಾಲಯದಲ್ಲಿ ದೀಪಮಾಲೆಯ ಕಂಬ ಮತ್ತು ಬಾಗಿಲುವಾಡವನ್ನು ಮಾಡಿಸಿದ ಹಳಿಕಾರ ಲಚ್ಚಿನಾಯಕನ ಮಗ ಚಿಕ್ಕಲ್ಲಪ್ಪನಾಯಕನಿಗೆ ಸಾಳುವ ನರಸಿಂಗಯ್ಯನು ದೇವಲಾಪುರ ಗ್ರಾಮವನ್ನು ದಾನವಾಗಿ ನೀಡಿದ ವಿಷಯವನ್ನು ನಿರೂಪಿಸಿದೆ. ಈ ಶಾಸನದ ಕಾಲ 1493 ನಂದನ ಸಂವತ್ಸರ. ಇದು ಸಾಳುವ ನರಸಿಂಗನ ಕಾಲದ್ದು.[16] ಕ್ರಿ.ಶ. 1406ರ ಒಂದು ಮದ್ದೂರು ಶಾಸನದಿಂದ ನರಸಿಂಹ ಚತುರ್ವೇದಿ ಮಂಗಳವೆಂದು ಕರೆಯಲ್ಪಡುತ್ತಿದ್ದಿತೆಂದು ತಿಳಿಯುತ್ತದೆ. ದೇವಸ್ಥಾನಗಳಿಗೆ ದಾನಗಳನ್ನು ಕೊಡುವುದು ಅಗ್ರಹಾರ ಸಭೆಯ ಒಂದು ಮುಖ್ಯ ಕರ್ತವ್ಯವಾಗಿತ್ತು. ವೈದ್ಯನಾಥ ದೇವರ ಪೂಜೆಗೆ ಆ ಸ್ಥಳದ ಎಲ್ಲಾ ನಿವಾಸಿಗಳು ಹಲವು ತೆರಿಗೆಗಳನ್ನು ಬಿಟ್ಟುಕೊಟ್ಟರು.[17] 1431ನೇ ಶ್ರೀರಂಗಪಟ್ಟಣದ ಶಾಸನದಲ್ಲಿ ಅರಸನ ನಿರೂಪದಿಂದ ದೇವರಾಜ ಒಡೆಯರು ಶ್ರೀರಂಗಪುರದ ಶ್ರೀವೈಷ್ಣವರು ಕೊಡುತ್ತಿದ್ದ ಅಡಿಕೆ ಸುಂಕ, ಮಗ್ಗ, ವುಮಾರಕಾಣಿಕೆ ಮುಂತಾದ ತೆರಿಗೆಗಳಿಂದ ಬರುತ್ತಿದ್ದ ಆದಾಯವನ್ನು ಸೌಮ್ಯರಾಜನೆನಿಸಿದ ಶ್ರೀರಂಗನಾಥದೇವರಿಗೆ ವಸಂತೋತ್ಸವ ಪೂಜೆಗಾಗಿ ದಾನ ಮಾಡಿದ ವಿಷಯ ಹೇಳಿದೆ.[18] ಮಹಾಮಂಡಲೇಶ್ವರ ಸಾಳುವ ನರಸಿಂಗರಾಜವೊಡೆಯನ ಮನೆಯ ಪ್ರಧಾನ ವಿರೂಪಾಕ್ಷ ದೇವ ಅಣ್ಣನು ಅರಣಿ ಸ್ಥಳಕ್ಕೆ ಸೇರಿದ ಚುಂಚನಹಳ್ಳಿ ಗ್ರಾಮಕ್ಕೆ ವಿರೂಪಾಕ್ಷಪುರವೆಂದು ಹೆಸರಿಸಿ ಚುಂಚನ ಭೈರವ ದೇವರಿಗೆ ದಾನ ನೀಡಿದ ವಿಷಯವನ್ನು ನಾಗಮಂಗಲ ಶಾಸನವು ತಿಳಿಸಿದೆ. ಈ ಶಾಸನದ ಕಾಲ ಕ್ರಿ.ಶ. 1484ರ ಸೆಪ್ಟೆಂಬರ್ 23 ಆಗಿದೆ.[19]

ವಿಜಯನಗರದ ಕೊನೆಯ ಹಂತದ ಅರಸರು ದಾನ ದತ್ತಿಗಳನ್ನು ನೀಡಿರುವುದು ಗಮನಾರ್ಹವಾದ ವಿಷಯವಾಗಿದೆ. ಅಲ್ಲದೇ ಹಿಂದಿನ ದಾನದತ್ತಿಗಳ ನವೀಕರಣದ ವಿಷಯವು ನಮಗೆ ತಿಳಿಯುತ್ತದೆ. ಶ್ರೀರಂಗಪಟ್ಟಣದ ರಂಗನಾಥ ದೇವಾಲಯದಲ್ಲಿಯ ಕ್ರಿ.ಶ. 1571ರ ಶಾಸನವು ಅಳಿಯ ರಾಮರಾಯನ ಮಗ ಒಂದನೆಯ ತಿರುಮಲರಾಯನ ಆಳ್ವಿಕೆಗೆ ಸೇರಿದ್ದು, ಈ ಪ್ರದೇಶವನ್ನು ಆಳುತ್ತಿದ್ದ ಒಡೆಯನಿಗೆ ರಂಗನಾಥ ದೇವರ ದೈನಂದಿನ ಪೂಜಾದಿ ಕೈಂಕರ್ಯಕ್ಕಾಗಿ ಒಣಂಗಟ್ಟಿ ಗ್ರಾಮವನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.

ಅಡಿಟಿಪ್ಪಣಿಗಳು

1. *ಕನ್ನಡ ವಿಷಯ ವಿಶ್ವಕೋಶ*, 2009, ಮೈಸೂರು, ಪು. 960.
2. ಜೀರಿಗೆಕಟ್ಟೆ ಬಸಪ್ಪ, *ಕರ್ನಾಟಕ ಯಾತ್ರೆ*, ಕಸಾಪ, ಬೆಂಗಳೂರು, ಪು. 46.
3. *ಲೋಕಪಾವನ* (ಸ್ಮರಣ ಸಂಚಿಕೆ), ಪಾಂಡವಪುರ, 2008, ಪು. 186.
4. *Epigraphia Carnatica,* Vol. VII, Ng. 8, pp. 8-9.
5. *Ibid.*, VII, Ng. 158, p. 154-55.
6. *Ibid.*, VII, Ng. 108, p. 113-114
7. ಮಹದೇವ ಸಿ., *ನಾಗಮಂಗಲ, ಹಂಪಿ*, 2011, ಪು. 26; *E.C.*, VII, Ng. 58, p. 31.
8. *ಮಂಡ್ಯ ಜಿಲ್ಲಾ ಗ್ಯಾಸೆಟಿಯರ್*, ಪು. 963.
9. ಷೇಕ್ ಅಲಿ (ಸಂ) *ಕರ್ನಾಟಕ ಚರಿತ್ರೆ*, ಪು. 1321
10. *Epigraphia Carnatica,* Vol. VII, Md. 39, 1459 A.D., pp. 227-28.
11. *Ibid.*, VII, Md. 77.
12. *Ibid.*, VII, PP. 179, 1458 A.D., p. 254.
13. *Ibid.*, VII, MI. 78, 1530 A.D., p. 390.
14. *Ibid.*, VII, MI. 108, 1530 A.D., p. 410.
15. *Ibid.*, VII, MI. 3, 1465 A.D., p. 349.
16. *Ibid.*, VII, Ng. 158, 1472 A.D., pp. 154-155.
17. *Ibid.*, III, Md. 28.
18. *Ibid.*, VI, Sr. 3, 1431 A.D., p. 334.
19. *Ibid.*, VI, Ng. 108, 1484 A.D., p. 113.

9

ವಿಜಯನಗರದ ಸೇನಾನಾಯಕರಾದ ದುಮ್ಮಿ ದೊಡ್ಡಣನಾಯಕ, ಸಲ್ಲೆತಿಮ್ಮನಾಯಕ ಸ್ಥಾಪಿಸಿದ 80 ಗಡಿಗಳ ವಿವರ

ಲೇ॥ ಬೆಂ.ಶಾ. ಶ್ಯಾಮಲಾ ರತ್ನಕುಮಾರಿ

ಕ್ರಿ.ಶ. 1403ಕ್ಕೆ ಸಲ್ಲುವ (ಶಕ 1324) ತೆಲುಗು ಭಾಷೆಯಲ್ಲಿರುವ ಜಯರೇಖೆ ಶಾಸನವು ತಿಳಿಸುವಂತೆ ಯದುವಂಶದ ದುಮ್ಮಿ ದೊಡ್ಡನಾಯಕ, ಸಲ್ಲೆ ತಿಮ್ಮನಾಯಕ (ಭಾವಮೈದುನರು) ಎಂಬ ವೀರರೀರ್ವರು ವಿಜಯನಗರದ ರಾಯರ ಸಮ್ಮುಖದಲ್ಲಿ ಹಾವು ಮೆಟ್ಟಿ ಹುಲಿಯನ್ನು ಕೊಂದದ್ದಕ್ಕಾಗಿ, 'ಪಂಚಕಲ್ಯಾಣಿ' ಎಂಬ ತುಂಟು ಕುದುರೆಯನ್ನೇರಿ ಸವಾರಿ ಮಾಡಿದ್ದಕ್ಕಾಗಿ ಹಾಗೂ ಅಂದೆ ರಾವುತ ಬಾಹ ಜೆಟ್ಟಿ, ಅಂದೆ ಮೊಲಗು ಬಹು ಬಾಹು ರಾವುತ ಜೆಟ್ಟಿ ಇವರನ್ನು ಸೋಲಿಸಿದ್ದಕ್ಕಾಗಿ – ಈ ಮೂರೂ ಸಾಹಸಗಳನ್ನು ಮೆಚ್ಚಿದ ವಿಜಯನಗರ ಸಿಂಹಾಸನದ ರಾಯರು ಈ ಯದುವೀರರಿಗೆ 160 ವರಹ ಸಂಬಳಕ್ಕೆ ಗೊತ್ತುಮಾಡಿ ದರ್ಬಾರಿನಲ್ಲಿಟ್ಟುಕೊಂಡರು. ಐದು ಗ್ರಾಮಗಳನ್ನು ನೀಡಿ ಅನೇಕ ಬಹುಮಾನಗಳನ್ನೂ ಅಡ್ಡಪಲ್ಲಕ್ಕಿ ಶ್ವೇತಛತ್ರಿ, ಕೀರ್ತಿಪತಾಕೆ ಮುಂತಾದ ಮರ್ಯಾದೆಗಳನ್ನೂ ನೀಡಿ ಈ ಯದುಕುಲದ ವೀರರನ್ನು ಅಳಿಕಾರ (ಹಳ್ಳಿಕಾರ)ರೆಂದು ಕರೆದು ಗೌರವಿಸಿದರು. ಈ ಜಯರೇಖೆಗೆ ಆನೆಗೊಂದಿರಾಯರ, ಬಳ್ಳಾಲರಾಯರ, ಕೃಷ್ಣರಾಯರ, ತಿರುಮಲರಾಯರ ಮುದ್ರಣ ಹಾಗೂ ಒಕ್ಕಣೆ ಇದೆ.

ಈ ಯದುವೀರರಾದ ಹಳ್ಳಿಕಾರ ಒಕ್ಕಲಿಗರು 80 ಗಡಿಗಳನ್ನು ಸ್ಥಾಪಿಸಿದರು. ಈ 80 ಗಡಿಗಳ ವಿವರ ಇಂತಿದೆ:

1.	ಬೆಂಗಳೂರು	– 06 ಗಡಿಗಳು	9.	ಹಾಸನ	– 05 ಗಡಿಗಳು
2.	ಕೋಲಾರ	– 08 "	10.	ಚಿಕ್ಕಮಗಳೂರು	– 03 "
3.	ತುಮಕೂರು	– 16 "	11.	ಬಳ್ಳಾರಿ	– 02 "
4.	ಚಿತ್ರದುರ್ಗ	– 15 "	12.	ಡೆಲ್ಲಿ	– 01 ಧುಮ್ಮಿ
5.	ಶಿವಮೊಗ್ಗ	– 03 "	13.	ಉತ್ತರ ಪ್ರದೇಶ	– 01
6.	ಮೈಸೂರು	– 07 "	14.	ತಮಿಳ್ನಾಡು	– 02
7.	ಮಂಡ್ಯ	– 05 "	15.	ಆಂಧ್ರ ಪ್ರದೇಶ	– 05
8.	ಕೊಡಗು	– 01 "		ಒಟ್ಟು	80

ಈ 80 ಗಡಿಗಳಿಗೆ ಅನ್ವಯಿಸುವಂತೆ ಒಂಬತ್ತು ಕಟ್ಟೆಗಳನ್ನು ವ್ಯವಸ್ಥೆ ಮಾಡಲಾಯಿತು.

1. ಇಕ್ಕನೂರು ಕೋಡಿಹಳ್ಳಿಕಟ್ಟೆ
2. ಚನ್ನಕಟ್ಟೆ
3. ಪಟ್ಟದಕಟ್ಟೆ
4. ಕಿಕ್ಕೇರಿ ಬಸವನಹಳ್ಳಿಕಟ್ಟೆ
5. ಹಳ್ಳಿ ಹಲಸಿನಕಟ್ಟೆ
6. ದೇವಿಹಳ್ಳಿ ಸಿದ್ಧನಹಳ್ಳಿಕಟ್ಟೆ
7. ಕಡಬಗರ್ಜೋಹಳ್ಳಿಕಟ್ಟೆ
8. ಬಿದರೇ ಗೊಲ್ಲಹಳ್ಳಿಕಟ್ಟೆ
9. ನರಿಗೇ ದೊಡ್ಡೇರಿಕಟ್ಟೆ

ಕಟ್ಟೆಗಳಲ್ಲಿ ಹಳ್ಳಿಕಾರರ ವಿವಿಧ ಬೆಡಗುಗಳನ್ನು (ಮನೆತನ) ಅಧಿಕಾರಕ್ಕಾಗಿ ನೇಮಿಸಲಾಯಿತು.

ಇಕ್ಕನೂರು ಕೋಡಿಹಳ್ಳಿಕಟ್ಟೆಗೆ ಸೇರಿದ ಹಳ್ಳಿಕಾರ ಬೆಡಗುಗಳು, ಗ್ರಾಮಗಳು :

ಹಳ್ಳಿಕಾರ ಬೆಡಗುಗಳು :

1. ಮಾನ್ಯದ ಹಳ್ಳಿಕಾರರು
2. ಮಲ್ಲಿಕಾವನ ಹಳ್ಳಿಕಾರರು
3. ಗುಡ್ಡದ ಹಳ್ಳಿಕಾರರು
4. ಅಜ್ಜನ ಹಳ್ಳಿಕಾರರು
5. ಜಲಗಣ್ಣ ಹಳ್ಳಿಕಾರರು
6. ದ್ವಾರನ ಹಳ್ಳಿಕಾರರು
7. ಕೊಟ್ಟದ ಹಳ್ಳಿಕಾರರು
8. ದ್ಯಾವನ ಹಳ್ಳಿಕಾರರು
9. ಎಲುಬುನ ಹಳ್ಳಿಕಾರರು

ಗ್ರಾಮಗಳು – ಚಿತ್ರದುರ್ಗ ಜಿಲ್ಲೆ :

1. ಕೋಡಿಹಳ್ಳಿ
2. ಬೇತೂರು
3. ಬೋರನಕುಂಟೆ
4. ಬಂಬಳದ ಹಟ್ಟಿ
5. ಕ್ಯಾತಾಮಣಿ
6. ಕುಂಡಲಗುರ
7. ವೇಣುಕಲ್ಲುಗುಡ್ಡ
8. ಚಳ್ಳಕೆರೆ
9. ಹೂವಿನಹೊಳಿ
10. ಗೊಳ್ಯ
11. ಬಿದರಕೆರೆ
12. ಹಿರಿಯೂರು
13. ಬಂಡೇರಹಟ್ಟಿ
14. ಕ್ಯೂನಿಗರಹಳ್ಳಿ
15. ಯಲ್ಲದಕೆರೆ
16. ಸಿಡ್ಲಯ್ಯನ ಕೋಟೆ
17. ಹಬ್ಬಿನ ಹೊಳೆ
18. ಬ್ಯಾಡರಹಳ್ಳಿ

ದೇವಿಹಳ್ಳಿ ಸಿದ್ಧನಹಳ್ಳಿ ಕಟ್ಟೆಗೆ ಸೇರಿದ ಹಳ್ಳಿಕಾರರ ಬೆಡಗುಗಳು, ಗ್ರಾಮಗಳು (ಕ್ರಿ.ಶ. 1476) :

ಹಳ್ಳಿಕಾರರ ಬೆಡಗುಗಳು :

1. ದ್ಯಾವನ ಹಳ್ಳಿಕಾರರು
2. ಸಿಂಬೆ ಹಳ್ಳಿಕಾರರು
3. ಕೊಲ್ದುವ ಹಳ್ಳಿಕಾರರು
4. ಕೊಟ್ಟ ಹಳ್ಳಿಕಾರರು
5. ಕೃಷ್ಣದ ಹಳ್ಳಿಕಾರರು
6. ಬೆಟ್ಟದ ಹಳ್ಳಿಕಾರರು

ಗ್ರಾಮಗಳು :

1. ಹಳೇಬೀಡು, ಹಾಸನ ಜಿಲ್ಲೆ
2. ಸಿದ್ದನಹಳ್ಳಿ, ಹಾಸನ ಜಿಲ್ಲೆ
3. ಹಡಗೂರು, ಹಾಸನ ಜಿಲ್ಲೆ
4. ದೇವಿ ಹಳ್ಳಿ, ಹಾಸನ ಜಿಲ್ಲೆ
5. ಹಿರೇಮಗಳೂರು, ಚಿಕ್ಕಮಗಳೂರು (ತಾ)
6. ಸಗಣಿಪುರ, ಸರಸ್ವತಿ ಪುರ
7. ಕಳಸಾಪುರ, ಕೋಟೆ ಬೀದಿ
8. ಸಕ್ಕರೆಪಟ್ನ, ಕಡೂರು (ತಾ)
9. ಬೀರೂರು
10. ಸೆಟ್ಟಿಹಳ್ಳಿ
11. ಮಂಡ್ರಿ
12. ಕೋಡಿಹಳ್ಳಿ

ಬಿದರೆ ಗೊಲ್ಲಹಳ್ಳಿ ಕಟ್ಟೆಗೆ ಸೇರಿದ ಹಳ್ಳಿಕಾರ ಬೆಡಗುಗಳು, ಗ್ರಾಮಗಳು (ಕ್ರಿ.ಶ. 1436) :

ಹಳ್ಳಿಕಾರ ಬೆಡಗುಗಳು :

1. ಕೊಲ್ಲುವ ಹಳ್ಳಿಕಾರರು
2. ನಿಂಬೆ ಹಳ್ಳಿಕಾರರು
3. ಗೋಡೆ ಹಳ್ಳಿಕಾರರು
4. ಜಲಗಣ್ಣ ಹಳ್ಳಿಕಾರರು
5. ಜೋಗಿ ಹಳ್ಳಿಕಾರರು
6. ಗುಡ್ಡದ ಹಳ್ಳಿಕಾರರು
7. ಕೊಟ್ಟಿ ಹಳ್ಳಿಕಾರರು
8. ಕೆಂಪನ ಹಳ್ಳಿಕಾರರು
9. ಪಟ್ಟಿ ಹಳ್ಳಿಕಾರರು
10. ಸಂದಿನ ಹಳ್ಳಿಕಾರರು
11. ಎಲುಬುನ ಹಳ್ಳಿಕಾರರು
12. ಅನುಮನ ಹಳ್ಳಿಕಾರರು

ಗ್ರಾಮಗಳು – ತುಮಕೂರು ಜಿಲ್ಲೆ (ಕ್ರಿ.ಶ. 1426):

1. ಚಿಕ್ಕೊನ ಹಳ್ಳಿ
2. ಶಂಬೋನ ಹಳ್ಳಿ
3. ಗುರಮ್ಮನ ಕಟ್ಟೆ
4. ಬೆಟ್ಟದ ತಿಮ್ಮನಹಳ್ಳಿ
5. ಚನ್ನರಾಯನ ದುರ್ಗ
6. ಕವಾಡಿಗರ ಪಾಳ್ಯ
7. ಚಿಕ್ಕನಾಯಕನ ಹಳ್ಳಿ (ತಾ.)
8. ಕೆರೆಯಂಗಲ ಪಾಳ್ಯ
9. ದೊಡ್ಡನರಸಯ್ಯನ ಪಾಳ್ಯ
10. ದೊಡ್ಡೇಗೌಡನ ಪಾಳ್ಯ
11. ಬೋರನಾಯಕನ ಪಾಳ್ಯ
12. ಕಗ್ಗೆರೆ
13. ಬಿದರೆ
14. ಗೂಬಲಕಟ್ಟೆ
15. ತೋವಿನಕೆರೆ
16. ಹುದ್ದೆಹೊಸಕೆರೆ
17. ಕೊಟ್ಲಗೆರೆ
18. ಮಧುಗಿರಿ (ತಾ)
19. ಕೊರಟಗೆರೆ (ತಾ)
20. ಚಿನಾಕವಜ್ರ
21. ಕಬೆಂಗೆರೆ
22. ಮಚ್ಚೆವಸಕೆರೆ

ಚನ್ನಕಟ್ಟೆಗೆ ಸೇರಿದ ಹಳ್ಳಿಕಾರರ ಬೆಡಗುಗಳು, ಗ್ರಾಮಗಳು :

ಹಳ್ಳಿಕಾರರ ಬೆಡಗುಗಳು :

1. ಕೊಟ್ಟೆ ಹಳ್ಳಿಕಾರರು
2. ಜಂಗಣ್ಣ ಹಳ್ಳಿಕಾರರು
3. ಗುಡ್ಡದ ಹಳ್ಳಿಕಾರರು
4. ಎಲುಬು ಹಳ್ಳಿಕಾರರು
5. ದ್ವಾರನ ಹಳ್ಳಿಕಾರರು
6. ಮಾನ್ಯದ ಹಳ್ಳಿಕಾರರು
7. ದ್ಯಾವನ ಹಳ್ಳಿಕಾರರು
8. ಅಜ್ಜನ ಹಳ್ಳಿಕಾರರು
9. ಕೊಲ್ಲುನ ಹಳ್ಳಿಕಾರರು

ಗ್ರಾಮಗಳು :

1. ಚನ್ನಕಟ್ಟೆ
2. ಕಂಬೀಪುರ
3. ಹೊಳಲ್ಕೆರೆ
4. ಕಾನುಜೀಹಳ್ಳಿ
5. ಕಿಟ್ಟದಾಳು
6. ಚಿಕ್ಕಬ್ಯಾಲದಕೆರೆ
7. ಚನ್ನಗಿರಿ

ಬೆಂಗಳೂರು ಪಟ್ನದ ಕಟ್ಟೆಗೆ ಸೇರಿದ ಹಳ್ಳಿಕಾರರ ಬೆಡಗುಗಳು, ಗ್ರಾಮಗಳು :

ಬೆಡಗುಗಳು :

1. ಕೊಲ್ಲುನ ಹಳ್ಳಿಕಾರರು
2. ಎಲೆದ "
3. ಜೋಗಿ "
4. ಗೋಡೆ "
5. ನಿಂಬೆ "
6. ಜಲಗಣ್ಣ "
7. ಕೊಟ್ಟ ಹಳ್ಳಿಕಾರರು
8. ಕುರುವಂಕ "
9. ಮಲ್ಲಿಕಾವನ "
10. ಕಬ್ಬಿರ "
11. ದ್ಯಾವನ "
12. ಹಾಲಿನ "
13. ಸುಳುವಿನ ಹಳ್ಳಿಕಾರರು
14. ಗುಡ್ಡದ "
15. ಹಾವಿನ "
16. ಆಲದ "

ಗ್ರಾಮಗಳು (I) :

1. ಜೈನಗರ
2. ಹುಳಿಮಾವು
3. ನಾಗರಭಾವಿ
4. ಭೈರಸಂದ್ರ
5. ಆಂಜನೇಯ ಟೆಂಪಲ್ ಬೀದಿ
6. ಮಲ್ಲೂರು ಪಟ್ನ
7. ದಾಸರಹಳ್ಳಿ
8. ಕನಕನಪಾಳ್ಯ
9. ಬನಶಂಕರಿ
10. ಸರ್ವೆಯರ್ ಸ್ಟ್ರೀಟ್
11. ಅಗಲಗುಪ್ಪೆ
12. ಮತ್ತಿಕೆರೆ
13. ದಾಬಸ್‌ಪೇಟೆ
14. ಕಳುಮಂಗಲ
15. ಡಬ್ಲ್ಯೂ ಕಾಲೋನಿ
16. ವಿಜಯನಗರ
17. ಗುಟ್ಟೆಹಳ್ಳಿ
18. ನೆಲಮಂಗಲ
19. ಮಲ್ಲೂರು ಕೆರೆ
20. ಹಾಗಲಗುಪ್ಪೆ

II.

1. ಚಾಮರಾಜಪೇಟೆ
2. ಲೆಗ್ಗೆರೆ
3. ರಾಣಾಸಿಂಗ್ ಪೇಟೆ
4. ಗೊಂಗಡಿಪುರ
5. ಬ್ಯಾಟರಾಯನಪುರ
6. ಮಲ್ಲರ ಹಳ್ಳಿ
7. ಬೆಟ್ಟಪ್ಪ ಪಾಳ್ಯ
8. ಹುಣಸೇಮರ ಪಾಳ್ಯ
9. ಕೆಂಗೆರೆ
10. ರಾಮಯ್ಯ ಕಾಲೇಜು
11. ಬಸವನಗುಡಿ
12. ಸಂಜೀವನಾಯಕಗಲ್ಲಿ
13. ನಾಗಸಂದ್ರ

ಕಡಬ ಗೊರ್ಜಿಹಳ್ಳಿ ಕಟ್ಟೆಗೆ ಸೇರಿದ ಹಳ್ಳಿಕಾರರ ಬೆಡಗುಗಳು, ಗ್ರಾಮಗಳು (ಕ್ರಿ.ಶ. 1430ರಲ್ಲಿ) :

ಬೆಡಗುಗಳು :

1. ದ್ಯಾವನ ಹಳ್ಳಿಕಾರರು
2. ಕುರುವಂಕ ಹಳ್ಳಿಕಾರರು
3. ಜಲಗಣ್ಣ ಹಳ್ಳಿಕಾರರು
4. ಕೊಲ್ಲು ಹಳ್ಳಿಕಾರರು
5. ಮಲ್ಲಿಕಾವನ ಹಳ್ಳಿಕಾರರು
6. ಕೆಂಪನ ಹಳ್ಳಿಕಾರರು
7. ದ್ವಾರನ ಹಳ್ಳಿಕಾರರು

ಗ್ರಾಮಗಳು : ಕೋಲಾರ ಜಿಲ್ಲೆ :

1. ಬೆಲವತ್ತ
2. ಸಿರಿವರ

ತುಮಕೂರು ಜಿಲ್ಲೆ

3. ಕಾಳೇನ ಹಳ್ಳಿ
4. ರಂಗಮ್ಮನ ಹಳ್ಳಿ
5. ರಾಜೇನಹಳ್ಳಿ
6. ಬೊಟಹಳ್ಳಿ ಪಾಳ್ಯ
7. ಗೊರ್ಜಿಹಳ್ಳಿ
8. ಕೋಡಿ ಪಾಳ್ಯ
9. ಮಲ್ಲೇನಹಳ್ಳಿ ಪಾಳ್ಯ
10. ಹನುಮಯ್ಯನ ಪಾಳ್ಯ
11. ಬ್ಯಾಟಪ್ಪನ ಪಾಳ್ಯ
12. ಶೆಟ್ಟಿಬೀಡು
13. ಬ್ಯಾಡಗೆರೆ
14. ಚಾಕೇನಹಳ್ಳಿ
15. ತಿಮ್ಮನಾಯಕನ ಹಟ್ಟಿ
16. ಕೊಪ್ಪ
17. ಅವ್ವರ ಹಳ್ಳಿ
18. ಸಿರಿವರ
19. ಗಂಗಪಟ್ಟಣ
20. ಒಳಗೆರೆ
21. ಸಿದ್ಧನಾಯಕನ ಪಾಳ್ಯ
22. ಶೆಟ್ಟಿಗೊಂಡನ ಹಳ್ಳಿ
23. ಕೆ. ಕಲ್ಲಹಳ್ಳಿ
24. ಕಮಲಪುರ
25. ಮಲ್ಲೂರು ಪಾಳ್ಯ
26. ದಾಸನಪುರ
27. ವರಕೆರೆ
28. ಅಳ್ಳಕೆರೆ
29. ದೊಡ್ಡೇರಿ

30. ಹರಿದೇವನ ಹಳ್ಳಿ
31. ಬಿಸುಗೊಂಡನ ಪಾಳ್ಯ
32. ತಾಳಕೇರೆ ಹೂವು
33. ಹಳಿಕಾರ ನಾಗಸಂದ್ರ
34. ಕೆಂಚನಹಳ್ಳಿ
35. ಅಬ್ಬನಕುಪ್ಪೆ
36. ಸೀಗೆಹಳ್ಳಿ
37. ತುರುವೆ ಕೆರೆ
38. ಹೆಬ್ಬೂರು
39. ಚಿಕ್ಕಲ್ಲೂರು
40. ಬಾಡರಹಳ್ಳಿ

ಕಿಕ್ಕೇರಿ ಬಸವನಹಳ್ಳಿ ಕಟ್ಟೆಗೆ ಸೇರಿದ ಮಂಡ್ಯ ಜಿಲ್ಲೆಯ ಗ್ರಾಮಗಳು :

1. ನಡಕನಹಳ್ಳಿ
2. ಸಿದ್ಧಾಪುರ
3. ಹಾಡಗೊಂಡನಹಳ್ಳಿ
4. ಚಿಕ್ಕ ಕಡುರ
5. ಗಂಗೇನಹಳ್ಳಿ
6. ಹೊಗಸಹಳ್ಳಿ
7. ಪಟೇಲ್‌ಮಗನ ಹೊಸಹಳ್ಳಿ
8. ರೇಚೂರು
9. ಹೊಳೆಮಾರ್ಗನಹಳ್ಳಿ
10. ನಗರ್ತಿ
11. ಆದಿನಮಾರನಹಳ್ಳಿ
12. ತೆಂಗಿನ ಘಟ್ಟ
13. ಅಚಮ್ಮನ ಹಳ್ಳಿ
14. ಗಜ್ಜಿಹೊಸೂರು
15. ಹುಲಿಹಳ್ಳಿ
16. ಕಿಕ್ಕೇರಿ
17. ಕಾಡನೂರ ಬಸವನಹಳ್ಳಿ
18. ವಡ್ಡರಹಳ್ಳಿ
19. ಹರೇಹಳ್ಳಿ
20. ಮಲ್ಲಾಪುರ
21. ಕಾಳೇನಹಳ್ಳಿ
22. ಬೇವಿನಹಳ್ಳಿ
23. ಗೊರಗುಂಡಿ
24. ಹಟ್ಟಿಗೌಡನ ಕೊಪ್ಪಲು
25. ಬಿದರಹಳ್ಳಿ

ಕೋಲಾರ ಜಿಲ್ಲೆಯ ಗ್ರಾಮಗಳು :

1. ಹಳ್ಳೀಕೆರೆ
2. ಕೆಂಚನಹಳ್ಳಿ
3. ಬೀದೊಡ್ಡೇರಿ
4. ಕಾಳೇಕೆರೆ ಕಟ್ಟೆ
5. ಯಡಿಯೂರು

ಹಳ್ಳಿ ಹಲಸಿನಕಟ್ಟೆಗೆ ಸೇರಿದ ಮಂಡ್ಯ ಜಿಲ್ಲೆಯ ಗ್ರಾಮಗಳು :

1. ಯಡಹಳ್ಳಿ
2. ವಡ್ಡರ ಹಳ್ಳಿ
3. ಮಲ್ಲನಾಯಕನಹಳ್ಳಿ
4. ಮಾರ್ಗ ಹೊಸಹಳ್ಳಿ
5. ಕಾರೀಗನಹಳ್ಳಿ
6. ಹೊಸಹಳ್ಳಿ
7. ಬೊಮ್ಮನಹಳ್ಳಿ
8. ಸಾಗಿನಹಳ್ಳಿ

ಹಾಸನ ಜಿಲ್ಲೆಯ ಗ್ರಾಮಗಳು :

1. ಹೊಳೆನರಸೀಪುರ (ತಾ)
2. ಎಲಿಚಾಕನ ಹಳ್ಳಿ
3. ದೇವರ ಗುಡ್ಡೇನ ಹಳ್ಳಿ
4. ಇರಪ್ಪನ ಹಳ್ಳಿ
5. ಅರಹಳ್ಳಿ
6. ತಾತನಹಳ್ಳಿ
7. ಹಾವಿನಮರನಹಳ್ಳಿ
8. ಹರಳಹಳ್ಳೀ
9. ದಾಸೇಗೌಡನಕೊಪ್ಪಲು
10. ಹಾರ್ಗೇನಹಳ್ಳಿ
11. ಗಾಡ್ಡೇನ ಹಳ್ಳಿ
12. ಬೂಕ
13. ಬಿಲಗುಂಡ
14. ಗೊರಗುಂಡಿ

ಪಟ್ನದ ಕಟ್ಟೆಗೆ ಸೇರಿದ ಮಂಡ್ಯ ಜಿಲ್ಲೆಯ ಗ್ರಾಮಗಳು :

1. ಹುನ್ನನದೊಡ್ಡಿ
2. ಪಟೇಲ್‌ಮಗನ ಹೊಸಹಳ್ಳಿ
3. ಕುಂದೂರು
4. ಮಂಡ್ಯ
5. ಹುನ್ನೂರು ಎಕ್ಸ್‌ಟೆನ್‌ಷನ್
6. ಮದ್ದೂರು

ನರಿಗೇ ದೊಡ್ಡೇರಿ ಕಟ್ಟೆಗೆ ಸೇರಿದ ತುಮಕೂರು ಜಿಲ್ಲಾ ಗ್ರಾಮಗಳು :

1. ಅಡಕೇಪುರ
2. ಯಲ್ಲಾಪುರ
3. ಲೆಂಕನಹಳ್ಳಿ
4. ಗುಡ್ಡೇನಹಳ್ಳಿ
5. ಕೋಡಿಹಳ್ಳಿ
6. ಇಜ್ಜನಹಳ್ಳಿ
7. ನಾಗೇಗೌಡನ ಪಾಳ್ಯ
8. ಹರಳಕೆರೆ
9. ಗೈನಾಥಪುರ
10. ತುಯ್ಯಲಹಳ್ಳಿ
11. ಕಲ್ಲುವರಹ ಸಂದ್ರ
12. ದೊಡ್ಡಮಾರ್ಗನ ಹಳ್ಳಿ
13. ಜಸ್ನೇನ ಹಳ್ಳಿ
14. ದ್ವಾರನ ಹಳ್ಳಿ
15. ಹರುಳುಕೆರೆ
16. ನಾಗೇಹಳ್ಳಿ
17. ಮಲ್ಲೂರು
18. ಕರಕನಕಟ್ಟೆ
19. ನರಿಗೇಹಳ್ಳಿ
20. ಮುರುಳಕುಪ್ಪೆ
21. ಬೋರನಪಾಳ್ಯ
22. ಮುರುಳಕುಪ್ಪೆ

ಪಟ್ನದ ಕಟ್ಟೆಗೆ ಸೇರಿದ ತುಮಕೂರು ಜಿಲ್ಲೆಯ ಗ್ರಾಮಗಳು :

1. ತುಮಕೂರು
2. ಮಾರನಾಯಕನಹಳ್ಳಿ
3. ನಾರಾಯಣಗೌಡನ ಪಾಳ್ಯ
4. ದೇವರಾಯನ ಪಟ್ಟಣ
5. ಹಾಗಲಗುಪ್ಪೆ
6. ಬೆಳಗುಂಬ
7. ಹೊಸಹಳ್ಳಿ

ಪಟ್ನದ ಕಟ್ಟೆಗೆ ಸೇರಿದ ಹಾಸನ ಜಿಲ್ಲೆಯ ಗ್ರಾಮಗಳು :

1. ಮಲ್ಲೂರು ಕೆರೆ
2. ಕಟ್ಟೆ ಬೆಲ್ಲಗುಲ್ಲ
3. ಸಕಲೇಶಪುರ
4. ಬೆಟ್ಟಬೆಳಗುಳಿ

ಪಟ್ನದ ಕಟ್ಟೆಗೆ ಸೇರಿದ ಕೋಲಾರ ಜಿಲ್ಲೆಯ ಗ್ರಾಮಗಳು :

1. ಕಮನೂರು 2. ಚಿಕ್ಕಬಳ್ಳಾಪುರ 3. ಮಾಲೂರು

ಪಟ್ನದ ಕಟ್ಟೆಗೆ ಸೇರಿದ ಮೈಸೂರು ಜಿಲ್ಲಾ ಗ್ರಾಮಗಳು :

1. ಕುವೆಂಪುನಗರ
2. ಹುಣಸೂರು
3. ನಜರಾಬಾದ್
4. ಶ್ರೀರಂಗಪಟ್ಟಣ
5. ಪಿರಿಯಾಪಟ್ಟಣ (ತಾ)
6. ಬೇಟೆರಾಯಪುರ

ದುಮ್ಮಿ ದೊಡ್ಡನಾಯಕ ಮಲ್ಲಿಕಾವನ ಮಾನ್ಯದ ಬೆಡಗು (ಕುಲ) ಜೋಡಿಕುಲ ಹಳ್ಳಿಕಾರರ ಪಂಗಡಕ್ಕೆ ಸೇರಿದವನು. ಅಂತೆಯೇ ಸಲ್ಲೆ ತಿಮ್ಮನಾಯಕನು ಹಾವಿನ ಹಳ್ಳಿಕಾರ ಒಕ್ಕಲಿಗರ ಜೋಡಿಕುಲಕ್ಕೆ ಸೇರಿದವನು.

ತುಳುನಾಡಿನಲ್ಲಿ ದರೋಡೆಕೋರರು ಹೆಚ್ಚಾಗಿ ಹಾವಳಿ ಎಬ್ಬಿಸಲು ತಿರುಮಲನಾಯಕರು ವಿಜಯನಗರಕ್ಕೆ ಬಂದು ರಾಯರನ್ನು ಕಂಡು ನಮಗೆ ಇಬ್ಬರು ಸೇನಾನಾಯಕರನ್ನು ಕಳುಹಿಸಬೇಕೆಂದು ಕೋರಿಕೊಳ್ಳಲು ಅದರಂತೆ ರಾಯರು ದುಮ್ಮಿ ದೊಡ್ಡನಾಯಕ ಮತ್ತು ಸಲ್ಲೆ ತಿಮ್ಮನಾಯಕರನ್ನು ತಮಿಳುನಾಡಿಗೆ ಕಳುಹಿಸಿದರು. ಇವರು ದರೋಡೆಕಾರರ ಹಾವಳಿಯನ್ನು ನಿಗ್ರಹಿಸಿದ್ದೇ ಅಲ್ಲದೆ ಗೆದ್ದಟ್ಟಿ, ಕಣಿವೆ, ಕೊಯಮತ್ತೂರುಗಳಲ್ಲಿ ನೆಲೆಸಿ ಶ್ರೀಕೃಷ್ಣನ ದೇವಸ್ಥಾನವನ್ನು ಕಟ್ಟಿಸಿ ಚಪ್ಪುಗೋಡನ್ನು ಜಹಗೀರಿಯಾಗಿ ಪಡೆದರು.

ಹೀಗೆ ಹಳ್ಳಿಕಾರ ಒಕ್ಕಲಿಗರು ಮೂಲತಃ ಯದುವಂಶದವರಾಗಿದ್ದು ವಿಜಯನಗರದ ಅರಸರ ಕಾಲದಲ್ಲಿ ಸೇನಾನಾಯಕರಾಗಿ ಜಹಗೀರುದಾರರಾಗಿ ಗಡಿಕಟ್ಟೆ ಹಳ್ಳಿಗಳ ನಿಯಾಮಕರಾಗಿ ಕೀರ್ತಿಶಾಲಿಗಳಾಗಿದ್ದಾರೆ.*

(* ಈ ಮೇಲಿನ ಮಾಹಿತಿ ಸಂಗ್ರಹಕ್ಕೆ ದಾಖಲೆಪತ್ರಗಳನ್ನು ನೀಡಿ ಸಹಕರಿಸಿದ ಶ್ರೀಯುತ ಹಳ್ಳಿಕಾರ ಸಂಘದ ಅಧ್ಯಕ್ಷರಾದ ರಂಗೇಗೌಡರಿಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತದೆ.)

10

ಹಂಪಿ ಪರಿಸರದಲ್ಲಿ ಮತ್ತಷ್ಟು ಕೆರೆಗಳು

ಡಾ॥ ಸಿ. ಮಹದೇವ

ವಿಜಯನಗರದ ಕಾಲದಲ್ಲಿ ಹಂಪಿ ಪರಿಸರ ಒಳಗೊಂಡಂತೆ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಕೆರೆ, ಕಟ್ಟೆ, ಅಣೆಕಟ್ಟುಗಳನ್ನು ನಿರ್ಮಿಸುವ ಮೂಲಕ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಈ ಕುರಿತು ಜಿ.ಎಸ್. ದೀಕ್ಷಿತ್, ಸಿ.ಟಿ.ಎಂ. ಕೊಟ್ರಯ್ಯ, ಲಕ್ಷ್ಮಣ್ ತೆಲಗಾವಿ, ಹರಿಹರ ಶ್ರೀನಿವಾಸರಾವ್ ಮತ್ತು ಸಿ.ಎಸ್. ವಾಸುದೇವನ್ ಮೊದಲಾದವರು ಸಂಶೋಧಿಸಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಹಂಪಿ ಪರಿಸರದಲ್ಲಿ ನಾನು ಕೈಗೊಂಡ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅಜ್ಞಾತವಾಗಿದ್ದ ಮೂರು ಕೆರೆಗಳು ಬೆಳಕಿಗೆ ಬಂದಿರುವುದು ಗಮನಾರ್ಹ. ನನಗೆ ತಿಳಿದಮಟ್ಟಿಗೆ ಈ ಕೆರೆಗಳು ಎಲ್ಲೂ ಉಲ್ಲೇಖಗೊಂಡಿಲ್ಲ. ಹಾಗಾಗಿ ಹೊಸದಾಗಿ ಬೆಳಕಿಗೆ ಬಂದ ಈ ಕೆರೆಗಳನ್ನು ಕುರಿತು ಪರಿಚಯಿಸುವುದು ಈ ಲೇಖನದ ಉದ್ದೇಶ.

ವಿಜಯನಗರ ಕಾಲದಲ್ಲಿ ಹಂಪಿ ಪರಿಸರದಲ್ಲಿ ಬರುವ ಪ್ರತಿಯೊಂದು ನಗರಕ್ಕೂ ಕೆರೆ, ಕೃಷಿಭೂಮಿಯನ್ನು ನಿಗದಿಗೊಳಿಸಿ ನಗರ ನಿರ್ಮಾಣ ಮಾಡುತ್ತಿದ್ದರು. ಇದು ಇಂದಿಗೂ ಅನುಕರಣೀಯ ಹಾಗೂ ಆದರ್ಶವಾದದ್ದು. ಮಧ್ಯಕಾಲೀನ ಈ ನೀತಿಯನ್ನು ಇಂದಿನ ನಗರೀಕರಣದಲ್ಲಿ ಅಳವಡಿಸಿಕೊಂಡಿದ್ದರೆ ನಮ್ಮ ನಗರಗಳ ನಡುವೆ ಕೆರೆ, ಉದ್ಯಾನಗಳೂ ಕಂಗೊಳಿಸಿ ನಗರಜೀವನವನ್ನು ಅರ್ಥಪೂರ್ಣವಾಗಿಸುತ್ತಿದ್ದವು. ಆದರೆ ದುರದೃಷ್ಟವಶಾತ್ ಆಧುನಿಕ ವ್ಯವಸ್ಥೆಯಲ್ಲಿ ಪ್ರಾಚೀನ ಕೆರೆಕಟ್ಟೆಗಳು, ನೆಡುತೋಪುಗಳು ಮತ್ತು ಸ್ಮಾರಕಗಳ ಸುತ್ತಮುತ್ತಲಿನ ಪ್ರದೇಶಗಳು ಭೂಗಳ್ಳರ ಅಥವಾ ವಿವೇಚನರಹಿತ ನಿರ್ಧಾರಗಳಿಂದ ಸರ್ಕಾರದ ವಶಗೊಂಡು ಅವು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿವೆ. ಉದಾಹರಣೆಗೆ ಬೆಂಗಳೂರು ಮಹಾನಗರದಲ್ಲಿ ಅನೇಕ ಕೆರೆಗಳು ಬಡಾವಣೆಗಳಾಗಿ ರೂಪಾಂತರ ಹೊಂದಿವೆ. ಇದು ನಮ್ಮ ಆಧುನಿಕ ನಗರೀಕರಣದ ವಿವೇಚನಾರಹಿತವಾದ ಬೆಳವಣಿಗೆ. ಆದರೆ ವಿಜಯನಗರದ ನಿರ್ಮಾಣಕಾರರು ಒಂದು ನಗರದಿಂದ ಮತ್ತೊಂದು ನಗರಕ್ಕೆ ಕನಿಷ್ಠ ಅಂತರವನ್ನು ಗುರುತುಮಾಡಿ, ಪ್ರತಿ ನಗರಕ್ಕೂ ಕೆರೆ, ತೋಟ, ಕೃಷಿಭೂಮಿ, ದೇವಾಲಯ ಮತ್ತಿತರ ಮೂಲಭೂತ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಯೋಜಿಸಿದ್ದರು. ಇದು ಆಧುನಿಕ ನಗರನಿರ್ಮಾಣದಲ್ಲಿ ಮಾದರಿಯಾಗಬೇಕಿತ್ತು. ಆದರೆ ಇದನ್ನು ತಿಳಿಯುವ, ಗ್ರಹಿಸುವ ವ್ಯವಧಾನ ಯಾರಿಗೂ ಇಲ್ಲವಾಗಿದೆ. ಕೃಷ್ಣದೇವರಾಯನು ತನ್ನ ತಾಯಿಯಾದ ನಾಗಲಾದೇವಿಯ ಹೆಸರಿನಲ್ಲಿ ಗ್ರಾಮ, ದೇವಾಲಯ ಮತ್ತು ಕೆರೆಯನ್ನು ನಿರ್ಮಿಸಿದನು.[1] ಅಂದರೆ ಒಂದು ಊರನ್ನು ನೆಲೆಗೊಳಿಸಿದಾಗ ಕೆರೆಯನ್ನು ಸಹ ನಿರ್ಮಿಸಲಾಗುತ್ತಿತ್ತು. ಅದೇ ರೀತಿ ತನ್ನ ಪಟ್ಟದರಸಿ ತಿರುಮಲಾದೇವಿಯ ಹೆಸರಿನಲ್ಲಿ ಈಗಿನ ಹೊಸಪೇಟೆ ನೈರುತ್ಯ ಭಾಗದಲ್ಲಿ ತಿರುಮಲಾದೇವಿಯರ ಪಟ್ಟಣವನ್ನು ನಿರ್ಮಿಸಿದನೆಂದು ವಿದೇಶಿ ಪ್ರವಾಸಿಗರ ಬರಹಗಳನ್ನು ಪರಿಶೀಲಿಸಿದಾಗ ತಿಳಿದುಬರುತ್ತದೆ.[2] ಹೊಸಪೇಟೆಯ ಶಾಸನವೊಂದು ತಿರುಮಲದೇವಿಯರ ಪಟ್ಟಣದ ಗೌರೇಶ್ವರ ದೇವರನ್ನು ಪ್ರತಿಷ್ಠಾಪಿಸುತ್ತದೆ.[3] ಇನ್ನೊಂದು ಶಾಸನ ತಿರುಮಲದೇವಿಯರ ಪಟ್ಟಣದ ನಾಲ್ಕು

ಬಾಗಿಲ ಬಳಿಯಲ್ಲಿ ಕಾಶಿವಿಶ್ವೇಶ್ವರ ದೇವರ ಪ್ರತಿಸ್ಥಾಪನೆಯನ್ನು ತಿಳಿಸುತ್ತದೆ.[4] ಮತ್ತೊಂದು ಶಾಸನ, ಅಯ್ಯಾವಳಿ ಮುಖ್ಯರಾದ ಸೆಟ್ಟಿ ಪಟ್ಟಣಸ್ವಾಮಿಗಳ ಸಮ್ಮುಖದಲ್ಲಿ ತಿರುಮಲದೇವಿಯರ ಪಟ್ಟಣದ ತಿರುವೆಂಗಳನಾಥ ದೇವರಿಗೆ ದತ್ತಿಬಿಟ್ಟ ಬಗ್ಗೆ ಉಲ್ಲೇಖಿಸುತ್ತದೆ.[5] ಆದರೆ ಈ ಪಟ್ಟಣಕ್ಕೆ ಸಂಬಂಧಿಸಿದ ಕೆರೆ ಬಗ್ಗೆ ಉಲ್ಲೇಖವಿಲ್ಲ.

ಈ ಮೇಲಿನ ಸಂಗತಿಗಳಿಂದ ತಿರುಮಲದೇವಿಯರ ಪಟ್ಟಣದ ಪ್ರಾಮುಖ್ಯ ವೇದ್ಯವಾಗುವುದು. ಇಲ್ಲಿ ಬಹುಸಂಖ್ಯೆಯಲ್ಲಿ ವರ್ತಕರಿದ್ದು, ಎತ್ತಿನ ಮೇಲೆ ವ್ಯಾಪಾರ ವ್ಯವಹಾರಗಳನ್ನು ಮಾಡುತ್ತಿದ್ದರು. ಅವರನ್ನು ಗೌರೆಯರು ಎಂದು ಕರೆಯಲಾಗುತ್ತಿತ್ತು. ಹಾಗಾಗಿ ಅವರಿಗೆ ಇಲ್ಲಿ ಗೌರೇಶ್ವರ ದೇವಾಲಯವನ್ನು ನಿರ್ಮಿಸಲಾಗಿತ್ತು.[6] ಡೊಮಿಂಗೋ ಪಾಯಸ್ ಕೂಡ ಈ ನಗರವನ್ನು ಪ್ರಸ್ತಾಪ ಮಾಡಿದ್ದಾನೆ.[7] ಈ ನಗರಕ್ಕೆ ಬೇಕಾದ ನೀರನ್ನು ಸಮೀಪದ ರಾಯರ ಕೆರೆಯಿಂದ ಒದಗಿಸಲಾಗುತ್ತಿತ್ತೆಂದು ಕೊಟ್ರಯ್ಯನವರು ಅಭಿಪ್ರಾಯಪಡುತ್ತಾರೆ.[8] ಆದರೆ ಜೋಳದ ರಾಸಿ ಗುಡ್ಡಪ್ರದೇಶದಿಂದಾಗಿ ರಾಯರ ಕೆರೆಯ ನೀರು ತಿರುಮಲದೇವಿಯರ ಪಟ್ಟಣಕ್ಕೆ (ಹೊಸಪೇಟೆಯ ನೆಹರೂ ಕಾಲೋನಿ ಪ್ರದೇಶ) ಹರಿಯಲು ಸಾಧ್ಯವೇ ಇಲ್ಲ. ಏಕೆಂದರೆ ರಾಯರ ಕೆರೆಯ ತಗ್ಗಿನಲ್ಲಿದ್ದು, ಎತ್ತರ ಪ್ರದೇಶದಲ್ಲಿದ್ದ ತಿರುಮಲದೇವಿಯರ ಪಟ್ಟಣಕ್ಕೆ ನೀರು ಹರಿಯುವುದಾದರು ಹೇಗೆ? ಇದರ ನೀರು ಕೃಷಿಗಷ್ಟೇ ಸೀಮಿತವಾಗಿತ್ತು. ಇದು ಇಂದಿಗೂ ವೇದ್ಯವಾಗುವುದು.

ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ತಿರುಮಲದೇವಿಯರಪಟ್ಟಣದ ಕೋಟೆ ಅಗಳಿಗೆ ಯಲ್ಲಪ್ಪಣ್ಣನ ಕೆರೆಯಿಂದ ನೀರು ಹಾಯಿಸುತ್ತಿದ್ದರು ಎಂದು ಅಭಿಪ್ರಾಯಿಸಿದ್ದಾರೆ.[9] ಹೊಸಪೇಟೆಯ ಈಗಿನ ನೆಹರೂ ಕಾಲೋನಿಯು ತಿರುಮಲದೇವಿಯರ ಪಟ್ಟಣದ ನೆಲೆಯಾಗಿದ್ದು, ಇಲ್ಲಿಂದ ಉತ್ತರಕ್ಕೆ ಅರ್ಧ ಕಿ.ಮೀ. ಅಂತರದಲ್ಲಿ ತಗ್ಗಿನಲ್ಲಿರುವ ಬಸವೇಶ್ವರ ಬಡಾವಣೆಯೆ ಯಲ್ಲಪ್ಪಣ್ಣನ ಕೆರೆಯ ನೆಲೆಯಾಗಿತ್ತು. ನೆಹರೂ ಕಾಲೋನಿ ಆದಿಯಾಗಿ ಬಿದ್ದ ಮಳೆನೀರು ಉತ್ತರಕ್ಕೆ ಹರಿದು ತುಂಗಭದ್ರಾ ನದಿ ಸೇರುತ್ತದೆ. ಅಂದರೆ ಹೊಸಪೇಟೆಯ ಭೂಮೇಲ್ಮೈ ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಾಗಿದೆ. ಈ ಹಿನ್ನೆಲೆಯಲ್ಲಿ ಯಲ್ಲಪ್ಪಣ್ಣನ ಕೆರೆ ನೀರು ಎತ್ತರ ಪ್ರದೇಶದಲ್ಲಿರುವ ತಿರುಮಲದೇವಿಯರ ಪಟ್ಟಣಕ್ಕೆ ಅಥವಾ ಕೋಟೆ ಅಗಳಿಗೆ ಹರಿಯಲು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗುವುದು. ಹೀಗಾಗಿ ತಿರುಮಲಾದೇವಿಯರ ಪಟ್ಟಣಕ್ಕೆ ಮೇಲೆ ಹೇಳಿದ ರಾಯರ ಕೆರೆಯ ನೀರಾಗಲಿ ಅಥವಾ ಯಲ್ಲಪ್ಪಣ್ಣನ ಕೆರೆಯ ನೀರಾಗಲಿ ಲಭ್ಯವಾಗುವುದಿಲ್ಲ. ಪಟ್ಟಣವೆಂದ ಮೇಲೆ ಅದಕ್ಕೆ ಜಲಮೂಲ ಸೌಲಭ್ಯವಿರಲೇಬೇಕು. ಈ ತೀರ್ಮಾನದ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಬೆಳಕಿಗೆ ಬಂದದ್ದು ಅಣ್ಣಿಕೆರೆ.

ಅಣ್ಣಿಕೆರೆ

ಹೊಸಪೇಟೆಯಿಂದ ಸೊಂಡೂರಿಗೆ ತೆರಳುವ ಮಾರ್ಗದಲ್ಲಿ, ಬಲಮೇಲ್ಮಟ್ಟದ ತುಂಗಭದ್ರಾ ಕಾಲುವೆಯ ನಂತರ ಎಡಭಾಗದಲ್ಲಿ ಪೂರ್ವ–ಪಶ್ಚಿಮವಾಗಿ ನಿರ್ಮಿಸಿರುವ ಕೆರೆಯ ಏರಿ ಇಂದು ಭಗ್ನ ಸ್ಥಿತಿಯಲ್ಲಿದೆ. ಈ ಒಡ್ಡು ಸುಮಾರು ಒಂದು ಫರ್ಲಾಂಗ್ ಉದ್ದವಿದೆ. ಏರಿಯ ನಿರ್ಮಾಣದಲ್ಲಿ ದಪ್ಪನಾದ ಒರಟು ಬಂಡೆಕಲ್ಲುಗಳನ್ನು ಪೇರಿಸಿ ಮಣ್ಣು ಸುರಿದು ನಿರ್ಮಿಸಲಾಗಿದೆ. ವಿಜಯನಗರ ಕಾಲದ ಇತರ ಕೆರೆಗಳ ಒಡ್ಡಿನಂತೆ ಈ ಕೆರೆಯನ್ನು ಸಹ ನಿರ್ಮಿಸಿದ್ದಾರೆ. ಕೆರೆಯ ವಿಸ್ತೀರ್ಣ ಸುಮಾರು 60 ಎಕರೆ ಇರಬಹುದು. ಈಗಾಗಲೇ ಕೆರೆ ಅಂಗಳದಲ್ಲಿ ವಾಸದ ಮನೆಗಳು ನಿರ್ಮಾಣಗೊಳ್ಳುತ್ತಿವೆ. ಪ್ರಸ್ತುತ ಕೆರೆಯನ್ನು ಜನಸಾಮಾನ್ಯರು ಅಣ್ಣಿಕೆರೆ ಎಂದು ಕರೆಯುತ್ತಾರೆ. ಜಂಬುನಾಥನ ಗುಡ್ಡದ ಪರಿಸರದಲ್ಲಿ ಬಿದ್ದ ಮಳೆ ನೀರೆ ಈ ಕೆರೆಗೆ ಜಲಮೂಲ. ಬೆಟ್ಟ ಸಾಲಿನಿಂದ ಉತ್ತರಕ್ಕೆ ಇಳಿಜಾರಾದ ಭೂಲಕ್ಷಣದಿಂದಾಗಿ ಆಯಕಟ್ಟಿನ ಸ್ಥಳದಲ್ಲಿ ಈ ಕೆರೆಯನ್ನು ನಿರ್ಮಿಸಿದ್ದಾರೆ. ಕೆರೆಯ ಮುಂಭಾಗದಲ್ಲಿ ಮೇಲೆ ಹೇಳಿದ ತುಂಗಭದ್ರಾ ಕಾಲುವೆ ಹಾಯ್ದು ಹೋಗಿದೆ. ಕೆರೆಯಾಶ್ರಿತ ಕೃಷಿಭೂಮಿ ಇಂದು ವಸತಿ ಬಡಾವಣೆಗಳಾಗಿ ಪರಿವರ್ತಿತಗೊಂಡಿವೆ.

ವಿಜಯನಗರ ಕಾಲದ ಈ ಕೆರೆಯು ತಿರುಮಲದೇವಿ ಅಮ್ಮನವರ ಪಟ್ಟಣದ ಕೆರೆಯೆ ಆಗಿದೆ. ಬಹುಶಃ ಈ ಕೆರೆಯ ಹೆಸರು ಮೊದಲಿಗೆ ತಿರುಮಲದೇವಿ ಅಮ್ಮನವರ ಸಮುದ್ರ ಎಂದಿರಬಹುದೆ? ಇದು ಕಾಲಾನಂತರ ಅಮ್ಮನವರ ಸಮುದ್ರ > ಅಮ್ಮಣ್ಣಿ ಸಮುದ್ರ > ಅಣ್ಣಿಕೆರೆಯಾಗಿರಬಹುದೆ? ಸಾಮಾನ್ಯವಾಗಿ ನಮ್ಮಲ್ಲಿ ಕೆರೆಗಳನ್ನು ಶಾಸನಗಳಲ್ಲಿ ಹೆಚ್ಚಾಗಿ

ಸಮುದ್ರಗಳೆಂದೆ ಉಲ್ಲೇಖಿಸಲಾಗಿದೆ.[10] ಮೇಲೆ ತಿಳಿಸಿದಂತೆ ಅಣ್ಣಿಕೆರೆಯು ಈಗ ಹಾಳುಬಿದ್ದಿದ್ದು, ಪೂರ್ವಪಶ್ಚಿಮವಾಗಿರುವ ಬೃಹತ್ ಏರಿ ಹಾಗೂ ಭಗ್ನಗೊಂಡಿರುವ ತೂಬುಗಳು ಉಳಿದುಬಂದಿವೆ.[11] ಕೆರೆಯ ಮುಂಭಾಗದಲ್ಲಿ ಹಾಯ್ದು ಹೋಗಿರುವ ತುಂಗಭದ್ರಾ ಬಲಮೇಲುಗಾಲುವೆ ಈ ಕೆರೆಯ ಅಸ್ತಿತ್ವವನ್ನು ಹಾಳುಮಾಡಿದೆ. ಅಣ್ಣಿಕೆರೆಯು ತಿರುಮಲದೇವಿಯರ ಪಟ್ಟಣದ ತೋಟಗಳಿಗೆ ಮತ್ತು ಪಟ್ಟಣಕ್ಕೆ ನೀರನ್ನು ಒದಗಿಸುತ್ತಿತ್ತು.[12] ಅಣ್ಣಿಕೆರೆ ಏರಿ ತಳದಲ್ಲಿ ಸುಮಾರು 30 ಅಡಿ ಅಗಲವನ್ನು, ಮೇಲ್ಭಾಗದಲ್ಲಿ ಸುಮಾರು 15 ಅಡಿ ಅಗಲವನ್ನು ಹೊಂದಿದೆ. ಎತ್ತರ ಒಳಭಾಗದಲ್ಲಿ ಸುಮಾರು 15 ಅಡಿ ಇದ್ದು, ಹೊರಭಾಗದಲ್ಲಿ ಸುಮಾರು 25 ಅಡಿ ಇದೆ. ಕೆರೆ ಏರಿಯ ಪಶ್ಚಿಮಾರ್ಧ ಭಾಗವು ನೆಲಸಮಗೊಂಡಿರುವ ಹಿನ್ನೆಲೆಯಲ್ಲಿ ಕೆರೆಯ ಕೋಡಿ ಭಾಗವು ಕಾಣಸಿಗುವುದಿಲ್ಲ. ಈ ಕೆರೆಯ ಹೆಚ್ಚುವರಿ ನೀರು ಹರಿದು ತಿರುಮಲದೇವಿಯರ ಪಟ್ಟಣದ ಉತ್ತರಕ್ಕಿದ್ದ ಯಲ್ಲಪ್ಪಣ್ಣನ ಕರೆಯನ್ನು ಸೇರುತ್ತಿತ್ತು. ನಂತರ ಅಂತಿಮವಾಗಿ ತುಂಗಭದ್ರ ನದಿಯನ್ನು ಸೇರುತ್ತಿತ್ತು. ಹೀಗೆ ಕೆರೆಗಳು ಸರಪಳಿ ರಚನೆಯಲ್ಲಿ ನಿರ್ಮಾಣಗೊಂಡು, ನೀರಿನ ಸದ್ಬಳಕೆಗೆ ಒತ್ತು ನೀಡಿರುವುದನ್ನು ಕಾಣಬಹುದು. ಇದು ವಿಜಯನಗರ ಕಾಲದ ನೀರಾವರಿ ವ್ಯವಸ್ಥೆಯ ವೈಶಿಷ್ಟ್ಯವೆಂದು ಗುರುತಿಸಬಹುದು. ಅಣ್ಣಿಕೆರೆ ಬಳಿ ಯಾವುದೇ ಪ್ರಾಚೀನ ಅಥವಾ ಮಧ್ಯಕಾಲೀನ ದೇವಾಲಯಗಳು ಕಂಡುಬರುವುದಿಲ್ಲ.

ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಬೆಳಕಿಗೆ ತಂದ ಕೃಷ್ಣದೇವರಾಯನ ಹೊಸಪೇಟೆಯ ಶಾಸನವು, ಹೊಸಪೇಟೆಯ ಬಸವೇಶ್ವರ ಬಡಾವಣೆ ಪ್ರದೇಶದಲ್ಲಿದ್ದ ಯಲ್ಲಪ್ಪಣ್ಣನ ಕೆರೆಯನ್ನು ಉಲ್ಲೇಖಿಸುತ್ತದೆ.[13] ಇದರ ಸಮರ್ಥನೆ ಎಂಬಂತೆ ಈಗಲೂ ಬಸವೇಶ್ವರ ಬಡಾವಣೆಯಲ್ಲಿ ಕೆರೆಯ ತೂಬನ್ನು ಕಾಣಬಹುದು. ಕೃಷ್ಣದೇವರಾಯನು ತಿರುಮಲದೇವಿಯರ ಪಟ್ಟಣದ ನಾಲ್ಕು ಬಾಗಿಲುಬಳಿಯ ಶ್ರೀ ಕಾಶಿವಿಶ್ವೇಶ್ವರ ದೇವರನ್ನು ಪ್ರತಿಷ್ಠಾಪಿಸಿದ ಸಂದರ್ಭದಲ್ಲಿ ದೇವರ ಪೂಜೆ-ನೈವೇದ್ಯಗಳಿಗಾಗಿ ತಿರುಮಲದೇವಿಯರ ಪಟ್ಟಣದ ಕೋಟೆಗೆ ಉತ್ತರಕ್ಕಿದ್ದ ಯಲ್ಲಪ್ಪಣ್ಣನ ಕೆರೆಯನ್ನು ಸಮರ್ಪಿಸುತ್ತಾನೆಂದು ಶಾಸನವು ತಿಳಿಸುತ್ತದೆ.[14] ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಯಲ್ಲಪ್ಪಣ್ಣನ ಕೆರೆಯನ್ನು ಕೃಷ್ಣದೇವರಾಯನ ಕಾಲಕ್ಕೂ ಮೊದಲೇ ಇದ್ದ ಕೆರೆ ಎಂದು ಅಭಿಪ್ರಾಯಪಡುತ್ತಾರೆ.[15] ಅವರ ಅಭಿಪ್ರಾಯ ಸಮಂಜಸವಾಗಿದೆ. ದಕ್ಷಿಣದಲ್ಲಿದ್ದ ಅಣ್ಣಿಕೆರೆಯಿಂದ ಯಲ್ಲಪ್ಪಣ್ಣನ ಕೆರೆಗೆ ನೀರು ಹರಿದುಬರುತ್ತಿತ್ತು. ಯಲ್ಲಪ್ಪಣ್ಣನ ಕೆರೆಯ ಹೆಚ್ಚುವರಿ ನೀರು ತುಂಗಭದ್ರ ನದಿ ಸೇರುತ್ತಿತ್ತು.

ಅನಂತಶಯನಗುಡಿ ಕೆರೆ

ಹೊಸಪೇಟೆಯಿಂದ ಹಂಪಿಯೆಡೆಗೆ ಸಾಗುವ ಮಾರ್ಗದಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ದಾಟಿದರೆ ಅನಂತಶಯನಗುಡಿ ಗ್ರಾಮ ಸಿಗುತ್ತದೆ. ಹೊಸಪೇಟೆಗೆ ಹೊಂದಿಕೊಂಡಂತೆ ಬೆಳೆದಿರುವ ಈ ಗ್ರಾಮದಲ್ಲಿ ಅನಂತಶಯನಗುಡಿ ಇದೆ. ಆ ಗುಡಿಯ ಹೆಸರೇ ಗ್ರಾಮನಾಮವಾಗಿದೆ. ಕೃಷ್ಣದೇವರಾಯನು ಇಲ್ಲಿ ತನ್ನ ಮಗನಾದ ಸಾಲೆ ತಿರುಮಲರಾಯನಿಗೆ ಪುಣ್ಯವಾಗಲೆಂದು ಅವನ ಹೆಸರಿನಲ್ಲಿ ಸಾಲೆ ತಿರುಮಲರಾಯಪುರವನ್ನು ಹಾಗೂ ಅನಂತಶಯನ ದೇವರಿಗೆ ಬೃಹತ್ ದೇವಾಲಯವನ್ನು ನಿರ್ಮಿಸುತ್ತಾನೆ.[16] ಈ ದೇವಾಲಯ ವಿಜಯನಗರ ಕಾಲದ ದೇವಾಲಯಗಳಲ್ಲಿ ತುಂಬ ವಿಶಿಷ್ಟವಾದ ವಾಸ್ತುರಚನೆ ಎನಿಸಿದೆ. ಹೀಗೆ ಊರು, ದೇವಾಲಯದೊಂದಿಗೆ ಕೆರೆಯನ್ನು ಸಹ ನಿರ್ಮಿಸಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಈ ಹಿನ್ನೆಲೆಯಲ್ಲಿ ಕೈಗೊಂಡ ಕ್ಷೇತ್ರಕಾರ್ಯದಿಂದ ಅನಂತಶಯನಗುಡಿ ಗ್ರಾಮಕ್ಕೆ ಸಂಬಂಧಿಸಿದ ಕೆರೆಯ ತೂಬು ಪತ್ತೆಯಾಯಿತು. ಈ ತೂಬಿನಿಂದಾಗಿ ಕೆರೆಯ ಅಸ್ತಿತ್ವವನ್ನು ಮತ್ತು ನೆಲೆಯನ್ನು ಗುರುತಿಸಲು ಸಾಧ್ಯವಾಯಿತು. ಅಂದರೆ ಕೃಷ್ಣದೇವರಾಯನು ದೇವಾಲಯದೊಂದಿಗೆ ಇಲ್ಲಿ ಕೆರೆಯನ್ನು ಸಹ ನಿರ್ಮಿಸಿರಬೇಕು. ಅಥವಾ ಈ ಕೆರೆ ಕೃಷ್ಣದೇವರಾಯನ ಕಾಲಕ್ಕೂ ಪೂರ್ವದ್ದಿರಬಹುದು. ಆದರೆ ಇಲ್ಲಿನ ಕೆರೆ ನಿರ್ಮಾಣ ಕುರಿತು ಇದುವರೆಗೆ ಯಾವುದೇ ಶಾಸನಾಧಾರ ದೊರೆತಿಲ್ಲ.

ಹೊಸಪೇಟೆಯಿಂದ ಅನಂತಶಯನಗುಡಿ ಗ್ರಾಮಕ್ಕೆ ಹೋಗುವ ಹಂಪಿ ರಸ್ತೆಯಲ್ಲಿ ಕಾಲುವೆಯನ್ನು ದಾಟಿದ ನಂತರ ಬಲಭಾಗದಲ್ಲಿರುವ ಬಾಳೆಕಾಯಿ ರೆಡ್ಡಿಯವರ ಜಮೀನಿನಲ್ಲಿರುವ ಕೆರೆಯ ತೂಬನ್ನು ಸ್ಥಳೀಯರು ಕೆರೆಲಕ್ಕಮ್ಮ

ಎಂದು ಕರೆಯುತ್ತಾರೆ. ತೂಬಿನ ಕೆಳ ಅಡ್ಡ ಶಿಲಾತೊಲೆಯಲ್ಲಿರುವ ರಂಧ್ರವನ್ನು ಅರಿಸಿನ ಕುಂಕುಮ ಹಚ್ಚಿ ಪೂಜಿಸುತ್ತಿದ್ದಾರೆ. ಈ ಕೆರೆಯ ಮೂಲ ಅಥವಾ ಇತ್ತೀಚಿನ ಹೆಸರೇನೆಂಬುದು ತಿಳಿದುಬರುವುದಿಲ್ಲ. ಕೆರೆ ಪ್ರದೇಶವು ಸಂಪೂರ್ಣವಾಗಿ ನಿವೇಶನ ಮತ್ತು ಕೃಷಿಭೂಮಿಯಾಗಿ ಪರಿವರ್ತನೆಗೊಂಡಿದೆ. ಇದರ ಪಕ್ಕದಲ್ಲಿ ಹಾಯ್ದು ಹೋಗಿರುವ ತುಂಗಭದ್ರೆಯ ಸಣ್ಣ ಕಾಲುವೆಯಿಂದಾಗಿ ಈ ಕೆರೆ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ ಎಂದು ಗ್ರಹಿಸಬಹುದು. ಹೀಗೆ ತುಂಗಭದ್ರಾ ಜಲಾಶಯದ ಹೊಸ ಕಾಲುವೆಗಳಿಂದಾಗಿ ಈ ಭಾಗದಲ್ಲಿ ಹಳೆಯ ಕೆರೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ ಹಾಗೂ ನಿರ್ಲಕ್ಷ್ಯಕ್ಕೆ ಒಳಗಾಗಿವೆ.

ಮಲಪನಗುಡಿಕೆರೆ

ಹೊಸಪೇಟೆಯಿಂದ ಹಂಪಿಗೆ ತೆರಳುವ ಮಾರ್ಗದಲ್ಲಿ ಮಲಪನಗುಡಿ ಗ್ರಾಮ ಸಿಗುತ್ತದೆ. ಇಲ್ಲಿನ ಮಲ್ಲಿಕಾರ್ಜುನ ಗುಡಿಯಿಂದಾಗಿ ಈ ಗ್ರಾಮಕ್ಕೆ ಅದೇ ಹೆಸರು ಬಂದಿದೆ. ಈ ಊರಿನಲ್ಲಿ ವಿಜಯನಗರದ ಐದನೆಯ ಸುತ್ತಿನ ಕೋಟೆ ಹಾಯ್ದು ಹೋಗಿದ್ದು, ಪ್ರವೇಶದ್ವಾರಗಳನ್ನು ಹೊಂದಿದೆ. ಪಶ್ಚಿಮದ ಕಡೆಯಿಂದ ವಿಜಯನಗರಕ್ಕೆ ಬರುವವರೆಲ್ಲರು ಮಲಪನಗುಡಿಯ ಪಶ್ಚಿಮ ಪ್ರವೇಶದ್ವಾರದ ಬಳಿ ಇರುವ ಸುಳಿಬಾವಿಯ (ಶಾಸನದಲ್ಲಿ ಮಾಳಿಗೆ ಕೂಪಾರಾಮ ಎಂದಿದೆ) ಹತ್ತಿರ ವಿಶ್ರಮಿಸಿ ತಮ್ಮ ಪ್ರಯಾಣವನ್ನು ರಾಜಧಾನಿಯತ್ತ ಮುಂದುವರೆಸುತ್ತಿದ್ದರು.[17] ಇಲ್ಲಿರುವ ಮಲ್ಲಿಕಾರ್ಜುನನ ದೇವಾಲಯಕ್ಕೂ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲಸಿರುವ ಕುರುಬ ಸಮುದಾಯಕ್ಕೂ ಸಾಂಸ್ಕೃತಿಕ ಸಂಬಂಧವಿದೆ. ಊರಿನ ಈಶಾನ್ಯಕ್ಕೆ ತೋಟದ ನಡುವೆ ಇರುವ ಕೆರೆ ಏರಿ ಮತ್ತು ಎತ್ತರವಾದ ತೂಬು ಮಲಪನಗುಡಿಯ ಪ್ರಮುಖ ಕೆರೆಯ ಅವಶೇಷವಾಗಿ ಉಳಿದಿದೆ. ಈ ತೂಬು ಸುಮಾರು 12 ಅಡಿ ಎತ್ತರವಿದ್ದು, ಎರಡು ಕಂಬಗಳಿಂದ ಕೂಡಿದೆ. ಕೆರೆ ಉತ್ತರಾಭಿಮುಖವಾಗಿದೆ. ಇದರ ಪಶ್ಚಿಮ ಭಾಗದಲ್ಲಿ ವಿಜಯನಗರ ಕಾಲದ ಕಾಲುವೆ ಆಳದಲ್ಲಿ ಹಾಯ್ದುಹೋಗಿದ್ದು, ಕೆರೆ ಕಾಲುವೆಗಿಂತ ಪ್ರಾಚೀನವಿರಬಹುದು. ಬಹುಶಃ ಈ ಕಾಲುವೆಯಿಂದಾಗಿ ಕೆರೆ ತನ್ನ ಪ್ರಾಶಸ್ತ್ಯವನ್ನು ಕಳೆದುಕೊಂಡಿರಬಹುದು. ಕೆರೆಯ ಪ್ರದೇಶ ಸಂಪೂರ್ಣವಾಗಿ ಕೃಷಿಭೂಮಿಯಾಗಿ ಮಾರ್ಪಟ್ಟಿದೆ. ಮಲಪನಗುಡಿಯ ಮತ್ತೊಂದು ಕೆರೆಯನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ.[18] ಅದು ಊರಿನ ದಕ್ಷಿಣ ಭಾಗದ ಅಂಚಿನಲ್ಲಿದೆ.

ಹೀಗೆ ಹಂಪಿ ಪರಿಸರದಲ್ಲಿ ಅಧಿಕ ಸಂಖ್ಯೆಯ ಕೆರೆಗಳಿದ್ದು, ಕೃಷಿ ಮತ್ತಿತರ ಚಟುವಟಿಕೆಗಳಿಗೆ ಆಧಾರವಾಗಿದ್ದವು. ಆಧುನಿಕ ಕಾಲುವೆಗಳ ನಿರ್ಮಾಣದಿಂದಾಗಿ ಕೆರೆಗಳ ಅವಲಂಬನೆ ಕಡಿಮೆಯಾಗಿದೆ. ಹೀಗಾಗಿ ಕೆರೆ ಭೂಮಿ ಅತಿಕ್ರಮಣಕ್ಕೊಳಗಾಗಿ ಅಂತರ್ಜಲಮಟ್ಟ ಕುಸಿಯಲು ಕಾರಣವಾಗಿದೆ. ಜನಸಾಮಾನ್ಯರಿಗೆ, ಪಶುಪ್ರಾಣಿಗಳಿಗೆ ಜೀವನಾಡಿಯಾಗಿದ್ದ ಕೆರೆಗಳು ಇಂದು ಕಣ್ಮರೆಯಾಗುತ್ತಿವೆ. ಬರ ಪರಿಸ್ಥಿತಿಯ ನಿರ್ವಹಣೆಯಲ್ಲಿ ಕೆರೆಗಳ ಪಾತ್ರ ಹಿರಿದು. ಇತ್ತೀಚಿಗೆ ಪ್ರಾಚೀನ ಕೆರೆಗಳ ಸಂರಕ್ಷಣೆಗೆ ಸರ್ಕಾರ ಹೆಚ್ಚು ಒತ್ತು ಕೊಡುತ್ತಿರುವುದು ಗಮನಾರ್ಹ.

ಗ್ರಂಥಋಣ ಮತ್ತು ಅಡಿಟಿಪ್ಪಣಿಗಳು

1. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ*, ಬಳ್ಳಾರಿ ಜಿಲ್ಲೆ, ಹೊಸಪೇಟೆ ಸಂಖ್ಯೆ 28.
2. ಮಹದೇವ ಸಿ., 2001, *ಕರ್ನಾಟಕ ಪುರಾತತ್ವ ಶೋಧ*, ಶ್ರೀ ಲಕ್ಷ್ಮಿ ಪ್ರಕಾಶನ, ಶ್ರೀರಂಗಪಟ್ಟಣ ಪು. 93.
3. *ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್*, ಸಂಪುಟ 9, ಭಾಗ 2, ಹೊಸಪೇಟೆ ಸಂಖ್ಯೆ 539.
4. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ*, ಬಳ್ಳಾರಿ ಜಿಲ್ಲೆ, ಹೊಸಪೇಟೆ ಸಂಖ್ಯೆ 4
5. ಅದೇ, ಹೊಸಪೇಟೆ ಸಂಖ್ಯೆ 8.
6. ಗೌರೆಯರು ಎಂದರೆ ಎತ್ತಿನ ಮೇಲೆ ವ್ಯಾಪಾರ ಮಾಡುವವರು. ಅವರ ಕುಲದೇವರನ್ನು ಗೌರವೇಶ್ವರ ಎಂದು ಕರೆಯಲಾಗಿದೆ.
7. ಸದಾನಂದ ಕನವಳ್ಳಿ (ಅನು.), 1992, *ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 264–66.

8. ಕೊಟ್ರಯ್ಯ ಸಿ.ಟಿ.ಎಂ., 1995, ಇರಿಗೇಶನ್ ಸಿಸ್ಟಮ್ ಅಂಡರ್ ವಿಜಯನಗರ ಎಂಪೈರ್, ಮೈಸೂರು.
9. ಲಕ್ಷ್ಮಣ್ ತೆಲಗಾವಿ, 'ಕೃಷ್ಣದೇವರಾಯನ ಇನ್ನೊಂದು ಹೊಸ ಶಾಸನ', ಬಳ್ಳಾರಿ ಜಿಲ್ಲಾ ದರ್ಶನ, ಡಾ. ಕೆ. ರವೀಂದ್ರನಾಥ (ಸಂ.), ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
10. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ*, ಬಳ್ಳಾರಿ ಜಿಲ್ಲೆ, ಹೊಸಪೇಟೆ ಸಂಖ್ಯೆ 28, 53, 56, ಕೃಷ್ಣದೇವರಾಯನು ತನ್ನ ತಾಯಿ ನಾಗಲಾದೇವಿಯ ಹೆಸರಿನಲ್ಲಿ ನಿರ್ಮಿಸಿದ ಕೆರೆಯನ್ನು ಶಾಸನದಲ್ಲಿ ನಾಗಸಮುದ್ರವೆಂದು ಹೆಸರಿಸಲಾಗಿದೆ. ಅದೇ ರೀತಿ ಭಯಕಾರ ರಾಮಪ್ಪಯ್ಯನು ನಿರ್ಮಿಸಿದ ಕೆರೆಗಳನ್ನು ಶಾಸನಗಳಲ್ಲಿ ಸಮುದ್ರಗಳೆಂದೆ ಕರೆಯಲಾಗಿದೆ. ಉದಾಹರಣೆಗೆ ಬಾಚಸಮುದ್ರಂ, ರಾಮಸಮುದ್ರಂ, ಅಕ್ಕಸಮುದ್ರಂ, ಕಾಮಸಮುದ್ರಂ, ಅಮ್ಮಸಮುದ್ರಂ, ಮುಂತಾದವು.
11. ಕೆರೆ ಹಾಳುಬಿದ್ದರೂ ತೂಬುಗಳು ಮಾತ್ರ ಉಳಿದುಬಂದಿವೆ. ಇದಕ್ಕೆ ಕಾರಣ ಜನರು ತೂಬುಗಳನ್ನು ಭಕ್ತಿಭಾವದಿಂದ ನೋಡುತ್ತಾರೆ. ಈ ತೂಬುಗಳಿಂದಲೇ ಕೆರೆಗಳ ಅಸ್ತಿತ್ವ ಮತ್ತು ಕಾಲವನ್ನು ಗುರುತಿಸಲು ಸಾಧ್ಯವಾಗುವುದು.
12. ಈಗ್ಗೆ ಕೆಲವು ವರ್ಷಗಳ ಹಿಂದೆ ಹೊಸಪೇಟೆಯ ನೆಹರೂ ಕಾಲೋನಿಯಲ್ಲಿರುವ ಶ್ರೀಸರ್ವೇಶ್ವರಯ್ಯ ಅವರ ಮನೆಯ ಅಂಗಳದಲ್ಲಿ, ನೀರಿನ ಸಂಪಿಗಾಗಿ ನೆಲ ಅಗೆಯುವ ಸಂದರ್ಭದಲ್ಲಿ ಮಣ್ಣಿನ ಜಲವಾಹಕ ಕೊಳವೆಗಳು ಕಂಡುಬಂದವು. ಅವು ವಿಜಯನಗರ ಕಾಲದ ತಿರುಮಲದೇವಿಯರ ಪಟ್ಟಣದ ವಸತಿ ಪ್ರದೇಶದ ಅವಶೇಷಗಳಾಗಿದ್ದವು.
13. *ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ*, ಬಳ್ಳಾರಿ ಜಿಲ್ಲೆ, ಹೊಸಪೇಟೆ ಸಂಖ್ಯೆ 4, ಶಾಸನವು ಹೊಸಪೇಟೆಯ ಇಂದಿರಾನಗರ ಬಡಾವಣೆಯ ಈಶ್ವರ ಗುಡಿಯಲ್ಲಿದ್ದು, ಪೂಜೆಗೊಳ್ಳುತ್ತಿದೆ.
14. ಲಕ್ಷ್ಮಣ್ ತೆಲಗಾವಿ, ಅದೇ.

ಇದೇ ಲೇಖನದಲ್ಲಿ ತೆಲಗಾವಿಯವರು ತಿರುಮಲದೇವಿಯರ ಪಟ್ಟಣದ ನಾಲ್ಕು ಬಾಗಿಲು ಯಾವುದು, ಆ ಕುರಿತು ನಿರ್ಧರಿಸಬೇಕಿದೆ ಎಂಬ ಇಂಗಿತವನ್ನು ವ್ಯಕ್ತಪಡಿಸುತ್ತಾರೆ. ಇತ್ತೀಚೆಗೆ ಹೊಸಪೇಟೆಯ ನೆಹರೂ ಕಾಲೋನಿಯೊಂದರ (ಕೆ.ಇ.ಬಿ. ಎದುರು) ನಿವೇಶನವೊಂದರಲ್ಲಿ ಮನೆ ಕಟ್ಟಲು ಪಾಯ ತೋಡುವಾಗ ಭಾರಿ ಗಾತ್ರದ ಕಲ್ಲುಗಳ ಅಡಿಪಾಯ ಮತ್ತು ಜಿನ ಶಿಲ್ಪಗಳು (ಕ್ರಿ.ಶ. 11–12ನೆಯ ಶತಮಾನ) ಬೆಳಕಿಗೆ ಬಂದವು. ಅಂದರೆ ವಿಜಯನಗರದ ಏಳನೆ ಸುತ್ತಿನ ಕೋಟೆ ಗೋಡೆ ಇಲ್ಲಿ ಹಾಯ್ದು ಹೋಗಿದ್ದು, ಬಹುಶಃ ಆ ಕೋಟೆಗಿದ್ದ ಸಮಾನಾಂತರವಾದ ನಾಲ್ಕು ಪ್ರವೇಶದ್ವಾರಗಳನ್ನು ಶಾಸನವು ತಿರುಮಲದೇವಿಯರ ಪಟ್ಟಣದ ನಾಲ್ಕು ಬಾಗಿಲು ಎಂದು ಕರೆದಿರಬಹುದು. ಈ ನಾಲ್ಕು ಬಾಗಿಲು ಈಗಿನ ಕೆ.ಇ.ಬಿ. ಕಚೇರಿಯ ಹತ್ತಿರವೇ ಹರಿಹರ ರಸ್ತೆಗೆ ಹೊಂದಿಕೊಂಡಂತೆ ಇದ್ದಿರಬಹುದೆಂದು ಗ್ರಹಿಸಬಹುದು. ಶ್ರೀರಂಗಪಟ್ಟಣ, ಚಿತ್ರದುರ್ಗ ಮತ್ತು ಪಶ್ಚಿಮದ ಕಡೆಯಿಂದ ವಿಜಯನಗರಕ್ಕೆ ಬರುವ ಅಧಿಕಾರಿಗಳು, ಜನಸಾಮಾನ್ಯರು, ವರ್ತಕರು, ಪ್ರವಾಸಿಗರು ಈ ನಾಲ್ಕು ಬಾಗಿಲ ಮೂಲಕವೇ ಬರುತ್ತಿದ್ದರು. ಈ ನಾಲ್ಕು ಬಾಗಿಲ ಬಳಿಯ ಕಾಶಿ ವಿಶ್ವೇಶ್ವರ ದೇವಾಲಯದ ಉಲ್ಲೇಖವು ಸಹ ತೆಲಗಾವಿಯವರ ಶೋಧಿತ ಶಾಸನದಲ್ಲಿದೆ. ದೇವಾಲಯ ಈಗಿರುವ ಮಾರ್ಕಂಡೇಶ್ವರ ಗುಡಿಯ ಪರಿಸರದಲ್ಲೇ ಇದ್ದಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಕಳೆದ ಶತಮಾನದ ಪ್ರಾರಂಭದಲ್ಲಿ ಪ್ಲೇಗು ಮೊದಲಾದ ರೋಗಗಳನ್ನು ಹತೋಟಿಯಲ್ಲಿಡಲು ನೆಹರೂ ಕಾಲೋನಿ ಪ್ರದೇಶದಲ್ಲಿದ್ದ ಕೋಟೆಗಳನ್ನು ಕೆಡವಿ ಕಂದಕಗಳನ್ನು ಮುಚ್ಚಲಾಯಿತೆಂದು ಸ್ಥಳೀಯರು ತಿಳಿಸುತ್ತಾರೆ. ಅದೇ ಸಂದರ್ಭದಲ್ಲಿ ಶಾಸನದಲ್ಲಿ ಉಲ್ಲೇಖಗೊಂಡಿರುವ ನಾಲ್ಕು ಬಾಗಿಲುಗಳನ್ನು ಸಹ ಕೆಡವಿರಬಹುದು. ಮುಂದೆ ವಸತಿ ಪ್ರದೇಶಗಳು ತಲೆಯೆತ್ತಿದ ಪರಿಣಾಮ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಸ್ಥಳಗಳನ್ನು ಈಗ ಗುರುತಿಸಲಾಗುವುದಿಲ್ಲ. ಆದರೆ ಈಗಲೂ ನೆಹರೂ ಕಾಲೋನಿಯ ದಕ್ಷಿಣ ಭಾಗದಲ್ಲಿ ಕೋಟೆಯ ಅವಶೇಷಗಳನ್ನು ಗುರುತಿಸಬಹುದು.

ಕೃಷ್ಣದೇವರಾಯನ ಪಟ್ಟಮಹಿಷಿ ತಿರುಮಲಾದೇವಿಯ ತವರೂರು ಶ್ರೀರಂಗಪಟ್ಟಣ. ಅವಳ ಹೆಸರಿನಲ್ಲಿ ನಿರ್ಮಿಸಿದ ತಿರುಮಲದೇವಿಯರ ಪಟ್ಟಣವು ಶ್ರೀರಂಗಪಟ್ಟಣಕ್ಕೆ ತೆರಳುವ ಮಾರ್ಗದಲ್ಲಿದೆ. ಅಂದರೆ ರಾಣಿಯರ ತವರೂರಿಗೆ ಸಾಗುವ ಮಾರ್ಗದಲ್ಲಿ ಅವರ ಹೆಸರಿನಲ್ಲಿ ವಿಜಯನಗರ ಕಾಲದಲ್ಲಿ ಪಟ್ಟಣ ನಿರ್ಮಿಸಿರುವುದು ಗಮನಾರ್ಹ. ಉದಾಹರಣೆಗೆ ಅಚ್ಯುತರಾಯನು ತನ್ನ ರಾಣಿ ವರದಾಂಬಿಕೆಯ ಹೆಸರಿನಲ್ಲಿ ವರದರಾಜಮ್ಮನ ಪಟ್ಟಣವನ್ನು, ಪಾಂಡ್ಯದೇಶಕ್ಕೆ ತೆರಳುವ ಪೆನುಗೊಂಡೆ ಮಾರ್ಗದಲ್ಲಿ ಅಂದರೆ ಈಗಿನ ಕಮಲಾಪುರದ ಪೂರ್ವಭಾಗದಲ್ಲಿ ನಿರ್ಮಿಸಲಾಗಿದೆ.

15. ಲಕ್ಷ್ಮಣ್ ತೆಲಗಾವಿ, ಅದೇ.
16. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ*, ಬಳ್ಳಾರಿ ಜಿಲ್ಲೆ, ಸಂಖ್ಯೆ 29.
17. ಅದೇ, ಹೊಸಪೇಟೆ, ಸಂಖ್ಯೆ 32.
18. ವಾಸುದೇವನ್ ಸಿ.ಎಸ್., 2001, *ಹಂಪಿ ಪರಿಸರದಲ್ಲಿ ಕೆರೆಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು. 72

11

ಕಲ್ಲೂರಿನ ಕಲ್ಲಿನಾಥೇಶ್ವರ ದೇವಾಲಯ

ಡಾ॥ ಮಲ್ಲಿಕಾರ್ಜುನ ಕುಂಬಾರ

ಕೊಪ್ಪಳ ಜಿಲ್ಲೆಯಲ್ಲಿರುವ ಯಲಬುರ್ಗಿಯಿಂದ 3–4 ಕಿ.ಮೀ ದೂರದಲ್ಲಿರುವ ಕಲ್ಲೂರ ಪುಟ್ಟಗ್ರಾಮ. ಆದರೆ ಇತಿಹಾಸದೃಷ್ಟಿಯಿಂದ ಈ ಗ್ರಾಮವು ಬಹು ದೊಡ್ಡದಾದ ಹಿರಿಮೆಯನ್ನು ಹೊಂದಿದೆ. ಕಲ್ಲೂರ ಗ್ರಾಮದಲ್ಲಿರುವ ಕಲ್ಲಿನಾಥೇಶ್ವರ ದೇವಾಲಯವು ಈ ಊರಿನ ಹಿರಿಮೆಯನ್ನು ಬೆಳಗಿಸಿದೆ. ಅಂದಿನ ಬೆಳ್ವಲ–300, ನರೆಯಂಗಲ್–12 ಮತ್ತು ಕುಕನೂರ–30 ಕ್ಕೆ ಸೇರಿದ ಕಲ್ಲೂರು ಗ್ರಾಮದಲ್ಲಿರುವ ಕಲ್ಲಿನಾಥೇಶ್ವರನು ಈ ಭಾಗದ ಆರಾಧ್ಯದೈವ. ಕಲ್ಯಾಣ ಕ್ರಾಂತಿಯಲ್ಲಿ ಬಿಜ್ಜಳ ಕೊಲೆ ಮಾಡಿದ ಮಲ್ಲೆಬೊಮ್ಮನು ಇಲ್ಲಿಗೆ ಸಮೀಪದ ರ್‍ಯಾವಣಕಿ ಗ್ರಾಮದವನು. ಕಲ್ಯಾಣ ಚಾಲುಕ್ಯ ಅರಸ ಚಾವುಂಡರಸನ ಮಗ ವೀರ ಬಿಜ್ಜಳದೇವರಸನು ಕಲ್ಲಿನಾಥನ ಭಕ್ತನಾದ ಈತನಿಗೆ (ಮೊಲ್ಲೆ ಬೊಮ್ಮಯ್ಯ) ಭೂದಾನವನ್ನು ಮಾಡಿದ ವಿಷಯವನ್ನು ಕಲ್ಲಿನಾಥೇಶ್ವರ ದೇವಾಲಯದ ಆವರಣದಲ್ಲಿರುವ ಶಾಸನವು ತಿಳಿಸುತ್ತದೆ. ಇದು ಗಮನಾರ್ಹವಾದ ವಿಷಯ.


ಕಲ್ಯಾಣ ಚಾಲುಕ್ಯರ ಮಹಾಮಂಡಲೇಶ್ವರರಾಗಿದ್ದ ಯಲಬುರ್ಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಸಿಂದರ ಕಾಲದಲ್ಲಿ ಈ ದೇವಾಲಯವು ಬಹು ಮಹತ್ವದ ಸ್ಥಾನವನ್ನು ಪಡೆದಿತ್ತು. ಕಲ್ಲಿನಾಥೇಶ್ವರ ದೇವಾಲಯದ ಭೋಗಮಂಟಪವನ್ನು ಹೊಯ್ಸಳ ಶಿಲ್ಪಗಳಿಂದ ಕೂಡಿದ ನಾಲ್ಕು ಕಂಬಗಳಿಂದ ನಿರ್ಮಿಸಲಾಗಿದೆ. ಉಳಿದ ಕಂಬಗಳು ವಿಜಯನಗರದ ಶಿಲ್ಪಕಲೆಗಳಿಂದ ಕೂಡಿವೆ. ಸುಖನಾಸಿನಿಯ ಹತ್ತಿರದ ಭೋಗಮಂಟಪವು ಬೆಣಚುಕಲ್ಲಿನಿಂದ ನಿರ್ಮಾಣಗೊಂಡಿದೆ. ಅಲ್ಲಿರುವ ಕಂಬಗಳು ಪ್ರಾಣಿ, ಪಕ್ಷಿ, ಬೇಡರ ಕಣ್ಣಪ್ಪ, ಆನೆಯನ್ನೇರಿದ ಸೈನಿಕ, ಮಿಥುನಶಿಲ್ಪಗಳಿಂದ ಕೂಡಿವೆ. ಈ ಕಂಬಗಳನ್ನು ಹಂಪೆಯಲ್ಲಿರುವ ವಿಜಯ ವಿಠ್ಠಲನ ಗುಡಿಯಲ್ಲಿರುವಂತೆ ಕಲಾತ್ಮಕವಾಗಿ ಕೆತ್ತಲಾಗಿದೆ. ದೇವಾಲಯದ ಪ್ರವೇಶದ ಕಂಬದಲ್ಲಿ ಬಾಯಿ ತೆರೆದ ಸಿಂಹದ ಚಿತ್ರಗಳಿವೆ. ಇಲ್ಲಿನ ಒಂದು ಕಂಬದಲ್ಲಿ ಕೈಮುಗಿದು ನಿಂತ ಪುರುಷನ ಶಿಲ್ಪವಿದೆ. ಅದರ ಪಕ್ಕದಲ್ಲಿ ಕೈಮುಗಿದು ನಿಂತ ಹೆಣ್ಣಿನ ಚಿತ್ರವಿದೆ. ಇದು ವಿಜಯನಗರದ ಅರಸ ಕೃಷ್ಣದೇವರಾಯನದಾಗಿರಬಹುದು.


ಕಲ್ಯಾಣ ಮಂಟಪದ ಕಂಬದ ಮೇಲಿರುವ ಶಾಸನವು ಈ ಭೋಗಮಂಟಪದ ಕಟ್ಟಡವನ್ನು ಕ್ರಿ.ಶ. 17–11–1549 ರಲ್ಲಿ ಪೂರ್ತಿಗೊಳಿಸಿದ್ದಾಗಿ ತಿಳಿಸುತ್ತದೆ. ದೇವಾಲಯದ ಆವರಣದಲ್ಲಿರುವ ಇನ್ನೊಂದು ಶಾಸನವು (ಕ್ರಿ.ಶ. 1537) ಇಲ್ಲಿನ ಸ್ವಾಮಿ ಕಲ್ಲಿನಾಥನು ಕಾಶಿಯ ವಿಶ್ವನಾಥನಿಗೆ ಸರಿಸಾಟಿಯಾದವನು ಎಂದು ವರ್ಣಿಸುತ್ತಾ, ವಿಜಯನಗರ

ಅರಸರ ಬಗ್ಗೆ ಉಲ್ಲೇಖಿಸುತ್ತದೆ. ವೀರ ಅಚ್ಯುತರಾಯನ ಆಳ್ವಿಕೆಯ ಸಂದರ್ಭದಲ್ಲಿ ಗುಜಲ ಚಿಕ್ಕ ಹನುಮಂತನಾಯಕರ ಮಕ್ಕಳು ಯಿಂಮಡಿ ಹನುಮಂತನಾಯಕರು ಮತ್ತು ಕುಷ್ಟಗಿಯ ಗುಜಲ ಯಿಂಮಡಿ ಮರನದಿ ನಾಯಕರ ಮಕ್ಕಳು ಮುಂಮಡಿ ಮಂಗಪ ನಾಯಕರು, ನಾಹಯ್ಯನವರು ಈ ದೇವಾಲಯಕ್ಕೆ ದಾನ ನೀಡಿದ್ದನ್ನು ಈ ಶಾಸನವು ಹೇಳುತ್ತದೆ. ಇದರಿಂದ ಯಲಬುರ್ಗಿಗೆ ಸೇರಿದ ಕಲ್ಲೂರ ಗ್ರಾಮದ ಅಮರ ನಾಯಕತ್ವವನ್ನು ಅಚ್ಯುತರಾಯನು ಈ ದಾನಿಗಳಿಗೆ ನೀಡಿದ್ದನು. ಇದರಿಂದ ಸಂತೃಪ್ತರಾದ ಅವರು ದೊರೆಗೆ ಪುಣ್ಯವಾಗಬೇಕೆಂದು ಹರಸಿದರು. ಶಾಸನದ ಕೊನೆಯಲ್ಲಿ ಈ ದಾನವನ್ನು ನಿಲ್ಲಿಸಿದವರು ಪಂಚಪಾತಕಕ್ಕೆ ಗುರಿಯಾಗುತ್ತಾರೆಂಬ ಶಾಪಾಶಯವಿದೆ. ಈ ಶಾಸನದಲ್ಲಿ ಬರುವ ದಾನಿಗಳೆಲ್ಲರೂ ನಾಯಕ ಜನಾಂಗಕ್ಕೆ ಸೇರಿದವರಾಗಿದ್ದರೆಂಬುದು ಗಮನಾರ್ಹ ಸಂಗತಿ. ವಿಜಯನಗರದರಸರ ಕಾಲದಲ್ಲಿ ಈ ದೇವಾಲಯವು ಖ್ಯಾತಿಯನ್ನು ಪಡೆದಿತ್ತು. ದೇವಾಲಯದ ಗರ್ಭಗೃಹವು ಪ್ರಾಚೀನವಾಗಿದ್ದು. ಅದರ ಮುಂಭಾಗವು ಹೊಯ್ಸಳ ಶಿಲ್ಪದಿಂದ, ಅದರ ಮುಂಭಾಗವು ವಿಜಯನಗರದ ಅರಸರ ಶಿಲ್ಪದಿಂದ ಕೂಡಿದೆ. ಮಂದಿರದ ಮೇಲ್ಭಾಗದ ಸುತ್ತಲೂ ಗಾರೆಯಿಂದ ಮಾಡಿದ ಶಿವ–ಪಾರ್ವತಿ ಇತ್ಯಾದಿ ದೇವತಾ ಚಿತ್ರಗಳಿಂದ ಕೂಡಿದೆ. ಅದು ವಿಜಯನಗರದ ಕಾಲದಲ್ಲಿ ಕಟ್ಟಿದ ಕಟ್ಟಡದ ಸುತ್ತಲೂ ಮಾತ್ರವಿದೆ. ಇಡೀ ದೇವಾಲಯದ ಬಗ್ಗೆ ಹೇಳುವುದಾದರೆ ಇದು ಚಾಲುಕ್ಯರ, ಹೊಯ್ಸಳರ ಮತ್ತು ವಿಜಯನಗರದ ಅರಸರ ಸಮ್ಮಿಶ್ರಣ ಶಿಲ್ಪಕಲೆಯಿಂದ ಕೂಡಿದೆ

ದೇವಾಲಯದ ಗೋಪುರವು ಪೂರ್ವಾಭಿಮುಖವಾಗಿದ್ದು. ಅದನ್ನು ಇಟ್ಟಿಗೆ ಗಾರೆಯಿಂದ ಕಟ್ಟಲಾಗಿದ್ದು ಅದು ಐದು ಅಂತಸ್ತುಗಳುಳ್ಳ ವಿಜಯನಗರ ಶೈಲಿಯಲ್ಲಿದೆ. ಇದರ ಪ್ರವೇಶ ದ್ವಾರದ ಕಂಬದಲ್ಲಿ 'ಸಿದ್ದಾರ್ತಿ ಸಂವತ್ಸರದ ಪಾಲ್ಗುಣ ಶು.10 ಲೂ ಗೋಪುರ ಸೇವೆ ಮುಗಿಯಿತು' ಎಂಬ ಶಾಸನವಿದೆ. ಅದರ ಲಿಪಿಯು 17ನೆಯ ಶತಮಾನಕ್ಕೆ ಸೇರಿದೆ. ಆದರೆ ಅದನ್ನು ಯಾರು ಕಟ್ಟಿಸಿದರೆಂದು ತಿಳಿಯುತ್ತಿಲ್ಲ. ದೇವಾಲಯದ ಗೋಪುರದ ಪ್ರವೇಶ ದ್ವಾರದ ಗೋಡೆಯ ಮೇಲಿರುವ ಶಾಸನವು 'ಸಿಕ್ಕ ಸೇನಬೋವ ಕೊಪ್ಪ' ಎಂದಿರುವುದರಿಂದ ಆತನೇ ಇದನ್ನು ಕಟ್ಟಿಸಿರಬಹುದು. ಇದೇ ಜಾಗದಲ್ಲಿ ನೆಲಕ್ಕೆ ಹಾಕಿರುವ ಕಲ್ಲಿನ ಮೇಲೆ ಸುಂಕಪ ಬಸವಪ ತಿಂಮಪ ಎನ್ನುವ ಹೆಸರುಗಳನ್ನು ಕೆತ್ತಲಾಗಿದೆ. ಇವರು ಗೋಪುರವನ್ನು ಕಟ್ಟಿದ ರೂವಾರಿಗಳಾಗಿರಬೇಕು. ಏಕೆಂದರೆ ಸುಂಕಪ್ಪ, ಬಸಪ್ಪ, ತಿಮ್ಮಪ್ಪ ಎನ್ನುವ ಕಲ್ಲುಕುಟಿಕರ ಹೆಸರುಗಳು ಈ ಭಾಗದಲ್ಲಿ ಹೆಚ್ಚಾಗಿರುವುದು ಇದಕ್ಕೆ ಪುಷ್ಟಿ ನೀಡುತ್ತದೆ. ಗೋಪುರದ ಮೇಲ್ಭಾಗದ ತುದಿಯಲ್ಲಿ ಧ್ಯಾನಸ್ಥ ಯೋಗಿಯೊಬ್ಬರು ಕುಳಿತಿದ್ದು ಗೋಪುರಕ್ಕೆ ದಟ್ಟವಾಗಿ ಸುಣ್ಣವನ್ನು ಬಳಿದ ಕಾರಣ ಅವರು ಯಾರೆಂಬುದು ಗೊತ್ತಾಗುತ್ತಿಲ್ಲ. ಈ ಗೋಪುರದ ನಾಲ್ಕು ಹಂತಗಳಲ್ಲಿ ಸುಂದರವಾದ ಮೂರ್ತಿಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ಮಾಡಲಾಗಿದೆ.

ಕಲ್ಲೂರ ಕಲ್ಲಿನಾಥೇಶ್ವರ ಮಂದಿರ





12

ಹೊಸನಗರ (ತಾ) ವಿಜಯನಗರ ಕಾಲದ ಶಾಸನಗಳು

ಜಯದೇವಪ್ಪ ಜೈನಕೇರಿ

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ 49 ಗ್ರಾಮಗಳಲ್ಲಿ ದೊರಕಿರುವ 126 ಶಾಸನಗಳು 2009ರಲ್ಲಿ ಪ್ರಕಟವಾದ 'ಎಪಿಗ್ರಾಫಿಯ ಕರ್ನಾಟಿಕ'–15ನೇ ಸಂಪುಟದಲ್ಲಿ ಪ್ರಕಟವಾಗಿವೆ. ಬಹುಪಾಲು ಶಾಸನಗಳು ಕನ್ನಡದಲ್ಲಿವೆ. ಇವುಗಳಲ್ಲಿ ದಾನಶಾಸನಗಳು, ವೀರಗಲ್ಲು, ಮಹಾಸತಿ ಶಾಸನಗಳಿವೆ. ಮಲೆನಾಡಿನ ಮಳೆಯ ಕಾರಣ ಬಹುಪಾಲು ಶಾಸನಗಳು ಭೂಮಿಯಲ್ಲಿ ಹೂತುಹೋಗಿವೆ ಅಕ್ಷರಗಳು ಕಾಣದಾಗಿವೆ. ಹೊಸನಗರ ತಾಲ್ಲೂಕಿನಲ್ಲಿ ವಿಜಯನಗರ ಅರಸರ ಕಾಲದ 50ಕ್ಕಿಂತಲೂ ಹೆಚ್ಚು ಶಾಸನಗಳು ದೊರಕಿವೆ. ಅವುಗಳಲ್ಲಿ ಮುಖ್ಯವಾದ ಶಾಸನಗಳ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ವೀರಗಲ್ಲು, ಮಹಾಸತಿ ಶಿಲಾಶಾಸನಗಳು ಹೆಚ್ಚಾಗಿವೆ. ಯುದ್ಧಗಳಲ್ಲಿ ಮಡಿದ ವೀರರ ಜೊತೆಗೆ (ಆಹುತಿಯಾದ) ಅವರ ಪತ್ನಿಯರ ಹೆಸರುಗಳು ಕಂಡುಬರುತ್ತವೆ. ಸತಿಪದ್ಧತಿಯು ವಿಜಯನಗರ ಅರಸರ ಕಾಲದಲ್ಲಿ ವ್ಯಾಪಕವಾಗಿ ಕಂಡುಬರುತ್ತಿದೆ. ಈ ವೀರಗಲ್ಲು, ಮಾಸ್ತಿಕಲ್ಲುಗಳ ಮೇಲಿನ ಶಾಸನಗಳು ಕೆಲವೇ ಸಾಲುಗಳ ಚಿಕ್ಕ ಶಾಸನಗಳಾದರೂ ಅಂದಿನ ಬಹುಮುಖ್ಯ ಸಂಗತಿಗಳನ್ನು ತಿಳಿಸುತ್ತವೆ.

ಆರಗದ ಪಾಳೆಗಾರರ ಆಡಳಿತಕ್ಕೆ ಸಂಬಂಧಿಸಿದಂತೆ ಹನ್ನೊಂದು ಶಾಸನಗಳಿವೆ. ಪುಣಜೆಯ ಕಿ.ಶ.1396ರ 29ನೇ ಶಾಸನವು ಆರಗ ರಾಜ್ಯವನ್ನಾಳುತ್ತಿದ್ದ ಸೋವಣ್ಣವೊಡೆಯರ ಆಳ್ವಿಕೆಗೆ ಸೇರಿದೆ. ಆ ಸಮಯದಲ್ಲಿ "ವಿಜಯನಗರಸ ಅರಸ ಎರಡನೆಯ ಹರಿಹರನು" ಅಧಿರಾಜನಾಗಿದ್ದ. ಇದರಲ್ಲಿ ಅಯ್ವತ್ತು ನಾಡಿನ ಹೆಬ್ಬಯಲ ಬೆಲಿಗನಬಾಡ ಗೌಡಪ್ರಜೆಗಳು ಮೂರು ವರಹಗಳನ್ನು ಪಡೆದು, ಬಡಗನಾಡ ತಿತಿಸರಿಗಡ ಸುಬೂರ್ ಎಂಬ ಗ್ರಾಮದಲ್ಲಿ ಭೂಮಿಯನ್ನು, ಅದೇ ಊರಿನ ನಿವಾಸಿಯಾದ ಚಿಕ್ಕ ವಿಠಪನ ಮಗ ವಿಠಪನಿಗೆ ಕೊಟ್ಟಿರುವುದನ್ನು ದಾಖಲಿಸಿದೆ. ಹರಿತಾಳು ಗ್ರಾಮದ ಕ್ರಿ.ಶ.1408ರ 72ನೇ ಶಾಸನವು ಆರಗದ ಹದಿನೆಂಟು ಕಂಪಣಗಳನ್ನಾಳುತ್ತಿದ್ದ ಬೊಮ್ಮಣ್ಣವೊಡೆಯರ ಮಗ ವೀರಣ್ಣವೊಡೆಯನ ಆಳ್ವಿಕೆಗೆ ಸೇರಿದೆ. ವಿಜಯನಗರದ ಅರಸ ದೇವರಾಯನು ಆಗ ಅಧಿರಾಜನಾಗಿದ್ದನು. ಈ ಸಮಯದಲ್ಲಿ ಅವರ ರಾಜ್ಯದಲ್ಲಿ ಬೋಳೆಯ ಮುಮ್ಮೆಯ ನಾಯಕನು ಅನೇಕ "ಅತ್ಯಂತ ಬರಪಟಳವನು" ಮಾಡುತ್ತಿದ್ದನು. ಆದಕಾರಣ ಈ ಮೇಲಿನ ರಾಜನ ಅಪ್ಪಣೆಯಿಂದ ವೀರಣ್ಣವೊಡೆಯ ಸೈನ್ಯಸಮೇತನಾಗಿ ಬೇಡರ ವಿರುದ್ಧವಾಗಿ ಹೋರಾಡಲು ಹರತಾಳ ಸಮಸ್ತ ಜನರನ್ನೂ ಒಂದೆಡೆ ಸೇರುವಂತೆ ಆದೇಶ ನೀಡಿದನು. ಹೀಗೆ ಹರತಾಳು, ಮೋದೂರು, ಕಂಲೂರು, ಕೆಳಲೆ, ದಾನಮೂಲದ ಜನರು ಹರತಾಳು ಮೇದಿ ಗೌಡನ ಮಗ ಮುದಗೌಡ, ಬೊಮ್ಮದೇವಗೌಡನ ತಮ್ಮ ತಿರಿಕಗೌಡರೊಂದಿಗೆ ಸೇರಿ ಕುದುರೆ ಮತ್ತು ಕಾಲಾಳು ಸೈನ್ಯದೊಂದಿಗೆ ಹೋಗಿ ವೀರಣ್ಣವೊಡೆಯನ ಮುಂದೆ ಹಾಜರಾದರು. ಆ ಸಮಯದಲ್ಲಿ ತಿರಕಗೌಡನು ಶತ್ರುಗಳೊಂದಿಗೆ ಕಾದಾಡಿ, ಅವರನ್ನು ಕೊಂದು ತಾನೂ ಮೃತನಾದನು. ಆ ತಿರಕಗೌಡನ ಮದವಳಿಗೆ ಬೊಂಮಯಕ್ಕ ಸಹಗಮನ ಮಾಡಿ ಧ್ರುವಲೋಕಕ್ಕೆ ಹೋದಳು ಎಂಬ ಅಂಶ ಕಂಡುಬರುತ್ತದೆ.

ಹುಲಿಕಲ್ಲು ಗ್ರಾಮದ ಕ್ರಿ.ಶ.1415ರ 118ನೇ ಶಾಸನವು, "ಒಂದನೆಯ ದೇವರಾಯನ" ಆಳ್ವಿಕೆಗೆ ಸೇರಿದ್ದು, ಆರಗ ರಾಜ್ಯದ ಪಾಳೆಗಾರನಾದ ಬೊಮ್ಮಣ್ಣ ವೊಡೆಯರ ಮಗ ವಿಠ್ಠಣ್ಣವೊಡೆಯನು ಹುಲಿಕಲ್ಲು ಗ್ರಾಮದ ಲಕ್ಷ್ಮೀ ನರಸಿಂಹದೇವರ ಆಹಾರ ದಾನಕ್ಕೆ ನೈವೇಧ್ಯಕ್ಕೆ ಭೂಮಿಯನ್ನು ದಾನಮಾಡಿದ ವಿಷಯವನ್ನು ದಾಖಲಿಸುತ್ತದೆ.

ಬಸವಾಪುರದ ಕ್ರಿ.ಶ.1436ರ 31ನೇ ಶಾಸನವು ಬಸವಾಪುರ ಗ್ರಾಮದ ವೀರಭದ್ರ ದೇವಸ್ಥಾನಕ್ಕೆ ಸೇರಿದ ಛತ್ರದಲ್ಲಿ ಮೂವತ್ತು ಒಡೆಯರಿಗೆ ಪೂಜಾರಿ ಆಹಾರ ಉಣಿಸುವುದಕ್ಕೆ ಬೊಮ್ಮರನೆಂಬುವನಿಗೆ ಸೇರಿದ ಮನೆ, ಅದರ ಹಿತ್ತಿಲು ಮತ್ತು ಹಲಸಿನ ಮರ ಸೇರಿದಂತೆ ಬೀಜವರಿ 32½ ಖಂಡುಗ ಭೂಮಿಯನ್ನು ದಾನಮಾಡಿದುದಾಗಿ ತಿಳಿಸುತ್ತದೆ. ಇದನ್ನು ದಾನ ಮಾಡಿದವ ಆರಗದ (ಪಾಳೆಗಾರ) ಮಲ್ಲಿನಾಥ ವೊಡೆಯ. ಇವನು ನರಸಿಂಹರಾಜಪುರ ತಾಲ್ಲೂಕಿನ ಬಾಳೆಯಹಳ್ಳಿಯ ಸಿಂಹಾಸನದಿಂದ ರಾಜ್ಯವನ್ನು ಆಳುತ್ತಿದ್ದನು. (ಇದು ಈಗ ವೀರಶೈವ ಧಾರ್ಮಿಕ ಪೀಠವಾಗಿದೆ.)

ಮಾಳೂರಿನ ಕ್ರಿ.ಶ.1502ರ 44ನೇ ಶಾಸನವು ಅರಗ ರಾಜ್ಯದ ಪಾಳೆಯಗಾರನಾದ ನಾಗರಸಣ್ಣನಾಯಕನ ಆಳ್ವಿಕೆಗೆ ಸೇರಿದೆ. ವಿಜಯನಗರ ಅರಸ "ಎರಡನೆಯ ನರಸಿಂಹನು" ಅವನಿಗೆ ಅಧಿರಾಜನಾಗಿದ್ದ. ಈ ಶಾಸನದಲ್ಲಿ ಅದೇ ಅಗ್ರಹಾರದ (ಮಾಳೂರು) ಅನೇಕ ಬ್ರಾಹ್ಮಣರಿಗೆ ಈ ಮೇಲಿನ ಪಾಳೆಯಗಾರ ನಾಗರಸಣ್ಣನಾಯಕನು ಮೊಳಊರು (ಮಾಳೂರು) ಅಗ್ರಹಾರವನ್ನು ದಾನಮಾಡಿದನೆಂದು ಹೇಳಿದೆ.

ರಾಮಚಂದ್ರಾಪುರದ ಕ್ರಿ.ಶ.1507ರ 55ನೇ ಮತ್ತು 57ನೇ ಶಾಸನಗಳು, ಅರಗ ರಾಜ್ಯವನ್ನಾಳುತ್ತಿದ್ದ, ಅರಗದ ಪಾಳೆಗಾರನಾದ ಸೋಮಣ್ಣ ನಾಯಕನಿಗೆ ಸೇರಿವೆ. ಆ ಸಮಯದಲ್ಲಿ ವಿಜಯನಗರದ ಅರಸ ವೀರ ನೃಸಿಂಹೇಂದ್ರ (ವೀರ ನರಸಿಂಹ) ಅವನ ಅಧಿರಾಜನಾಗಿದ್ದನು. ಹೊಸ. 55ನೇ ಶಾಸನವು ಪಾಳೆಯಗಾರ ಸೋಮಣ್ಣ ನಾಯಕನು ಅರಸ ವೀರ ನರಸಿಂಹನ ಅಪ್ಪಣೆಯನ್ನು (ಅರಗನಾಡು) ಮತ್ತು ಹೊನ್ನೆಕೊಪ್ಪದ ಮಧ್ಯದಲ್ಲಿನ 573 ವರಹಗಳ ಬೆಲೆಯುಳ್ಳ ಕೆಲವು ಹಳ್ಳಿಗಳನ್ನು ರಾಮಚಂದ್ರದೇವರ ಅಮೃತಪಡಿಗೆ ಕೊಟ್ಟನೆಂದಿದೆ. ಆ ಸಮಯದಲ್ಲಿ ರಾಘವೇಶ್ವರ ಭಾರತಿ ಸ್ವಾಮಿಗಳು ಆ ಮಠದ ಸ್ವಾಮಿಗಳಾಗಿದ್ದರು. 57ನೇ ಶಾಸನವು ಅರಗದ ವೇಂಠೆಯ ಐವತ್ತು ನಾಡ ಯೆಡೆಘಟ್ಟ ಸ್ಥಳದ ಮೊಳಊರು ಮತ್ತು ಸುಣ್ಣದಕಲ್ಲು ಗ್ರಾಮಗಳನ್ನು ಸೋಮಸಮುದ್ರವೆಂದು ಮರುನಾಮಕರಣ ಮಾಡಿ ಅದನ್ನು ಹದಿನೆಂಟು ಭಾಗಗಳನ್ನಾಗಿ ವಿಂಗಡಿಸಿ ವಿವಿಧ ಬ್ರಾಹ್ಮಣರಿಗೆ ದಾನಮಾಡಿರುವುದನ್ನು ದಾಖಲಿಸುತ್ತದೆ,

ಸಂಪಗೆಕೋಟೆಯ ಕ್ರಿ.ಶ.1566ರ 64ರಿಂದ 67 ರವರೆಗಿನ ಶಾಸನಗಳು ವಿಜಯನಗರದ ದೊರೆ ಸದಾಶಿವರಾಯನ ಆಳ್ವಿಕೆಗೆ ಸೇರಿದವು. ಆ ಸಮಯದಲ್ಲಿ ಇವನ ಅಧೀನ ಪಾಳೆಯಗಾರನಾಗಿ ಇಮ್ಮಡಿ ಸದಾಶಿವರಾಯನಾಯಕನು ಅರಗ ರಾಜ್ಯವನ್ನು ತನ್ನ ಮಾಗಣಿಯನ್ನಾಗಿ ಆಳುತ್ತಿದ್ದನು. ಇವನ ಒಪ್ಪಿಗೆಯ ಮೇರೆ ಬಂಕಿಯರಸ ಮತ್ತು ಹೊನ್ನೆಯ ಕಂಬಳಿವೊಡೆಯರಾದ ಅಮ್ಮಿದೇವಿ ಅಮ್ಮನವರು ಘಟ್ಟದ ಮೇಲಣ ಮುಂಗಿನಾಡು, ಕಬ್ಬನಾಡು ಮತ್ತು ಇತರೆ ಸೀಮೆಗಳನ್ನು ಆಳುತ್ತಿದ್ದರು. ಈ ಎಲ್ಲಾ ಶಾಸನಗಳೂ ಉಡುಕುಂದದ ಶಂಭುಲಿಂಗ ದೇವರಿಗೆ ಕೊಟ್ಟ ಭೂದಾನಗಳನ್ನು ಬ್ರಾಹ್ಮಣರ ಆಹಾರಕ್ಕೆ ಛತ್ರದ ವ್ಯವಸ್ಥೆ ಮಾಡುವುದನ್ನೂ ದಾಖಲಿಸಿವೆ. ಕೇಶಪ್ಪ ಅಧಿಕಾರಿ ಬಂಕಿಯರಸ ಮತ್ತು ಅಮ್ಮಿದೇವಿ ಅಮ್ಮ ದಾನಿಗಳು.

ಹುಂಚದ ಕ್ರಿ.ಶ. 1389ರ 114ನೇ ತಾಮ್ರಶಾಸನವು "ವಿಜಯನಗರ ಅರಸ ಬುಕ್ಕಮಹಾರಾಯ" (ಎರಡನೆಯ ಬುಕ್ಕ)ನ ಆಳ್ವಿಕೆಗೆ ಸೇರಿದೆ. ಇವನ ಅಧೀನ ರಾಜನಾಗಿ ಬೈಚಪ್ಪ ದಣ್ಣಾಯನ ಮಗ ವಿರುಗಪ್ಪ (ಇರುಗಪ್ಪ) ದಣ್ಣಾಯಕನು ಬಾರಕೂರು ಮತ್ತು ತುಳುರಾಜ್ಯದ ಇತರೆ ಊರುಗಳನ್ನು ಆಳುತ್ತಿದ್ದನು. ಈ ಶಾಸನವು ಪಾರ್ಶ್ವನಾಥ ದೇವರ ನಿತ್ಯ ನಡೆಯುವ ಪೂಜೆಗೆ ಮತ್ತು ಇತರೆ ಖರ್ಚುಗಳಿಗೆ ಭೋಜಸಂಘವಿಯ ಮಗ ಅಜ್ಜಸಾಹುನೆಂಬುವನು ಮಾಡಿದ ದಾನವನ್ನು ದಾಖಲಿಸುತ್ತದೆ. ಈ ಅಜ್ಜಸಾಹು ಎಂಬುವನು ವ್ಯಾಪಾರಕ್ಕೋಸ್ಕರ ಜಲಯಾತ್ರಿಯಾಗಿ (ಸಮುದ್ರ ಮಾರ್ಗವಾಗಿ) ಬಂದ ಮತ್ತು ಜಮೀನನ್ನು ಖರೀದಿಸಿಕೊಂಡು ಹುಂಚದ ಈ ಮೇಲೆ ಹೇಳಿರುವ ದೇವರಿಗೆ ದತ್ತಿಯಾಗಿ ನೀಡಿದ ಎಂಬುದು ಇಲ್ಲಿ ಹೇಳಿರುವ ಆಸಕ್ತಿಯ ವಿಷಯ.

54 ಮತ್ತು 32 ಈ ರಾಜಸಂತತಿಯ ಎರಡನೆಯ ವಿರೂಪಾಕ್ಷನ ಆಳ್ವಿಕೆಗೆ ಸೇರಿದ ಎರಡು ಶಾಸನಗಳು. 32 ಬಸವಾಪುರದ ಕ್ರಿ.ಶ.14–15ನೇ ಶತಮಾನದ ತ್ರುಟಿತ ಶಾಸನವು ಇದೇ ಅರಸನ ಆಳ್ವಿಕೆಗೆ ಸೇರಿದ್ದು ಇದರಲ್ಲಿ ಈ ರಾಜಮನೆತನದ ಸಾಮಾನ್ಯವಾದ ಬಿರುದುಗಳನ್ನು ಹೇಳಿದೆ. ರಾಮಚಂದ್ರಾಪುರ ಮಠದ 54ನೇ ಶಾಸನವು ವಿಜಯನಗರ ರಾಜ್ಯದ ಹರಿಹರ ಮಹಾರಾಯನ ಪುತ್ರ ವಿರೂಪಾಕ್ಷರಾಯನು ತೀರ್ಥರಾಜಪುರದ ಅಮರೇಂದ್ರಪುರಿ ಶ್ರೀಪಾದರಿಗೆ ಗೌರವಪೂರ್ವಕವಾಗಿ ಪಲ್ಲಕ್ಕಿ, ಎರಡು ಬಿಳಿ ಛತ್ರಿಗಳು, ಎರಡು ಚೌರಿಗಳು, ನಡೆದೋರಣ, "ಆನೆಯ ಮೇಲೆ ಹಸರುಪಟ ನಿಶಾನಿ, ಆನೆಯ ಮೇಲೆ ನಗಾರಿ, ಧವಳ ಶಂಕ" ಮುಂತಾದವುಗಳನ್ನು ಕೊಟ್ಟಿರುವುದನ್ನು ದಾಖಲಿಸುತ್ತದೆ.

ರಾಮಚಂದ್ರಾಪುರ ಕ್ರಿ.ಶ.1450ರ 58ನೇ ಶಾಸನವು ನಾಗರಿ ಲಿಪಿ ಮತ್ತು ಕನ್ನಡ ಭಾಷೆಯಲ್ಲಿದೆ. ಇದು ಮೂರನೆಯ ದೇವರಾಯನ ಆಳ್ವಿಕೆಗೆ ಸೇರಿದೆ. ಇದನ್ನು 'ವೈಭವ ತಾಮ್ರ ಶಾಸನ' ಎಂದು ಕರೆದಿದೆ. ಇದು ಋಷ್ಯಶೃಂಗಪುರ ಅಥವಾ ಶೃಂಗೇರಿಯ ಕೃಷ್ಣತೀರ್ಥ ಗುರುಗಳ ಶಿಷ್ಯ ವಿದ್ಯಾರಣ್ಯ ಶ್ರೀಪಾದರವರು ಗೋಕರ್ಣದ ರಘೂತ್ತಮ ಮಠದ ಸೀತಾರಾಮಚಂದ್ರ ಭಾರತಿಗಳ ಶಿಷ್ಯ ಚಿದ್ಬೋಧ ಭಾರತಿಯವರಿಗೆ, ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ, ಅನುಗ್ರಹಿಸಿದ ಬಿರುದುಗಳನ್ನು ದಾಖಲಿಸಿದೆ. ಇದೇ ಊರಿನ ಮತ್ತು ಇದೇ ಕಾಲದ 61ನೇ ಶಾಸನವು ಗೋಕರ್ಣದ ಮಹಾದೇವರ ಅಮೃತಪಡಿ ಮತ್ತು ಸತ್ರಧರ್ಮಕ್ಕೆ , ಬ್ರಾಹ್ಮಣರ ಆಹಾರಕ್ಕೆ ಒಂದು ಗೊತ್ತಾದ ಉತ್ಪತ್ತಿ ಇರುವ ಭೂಮಿಯನ್ನು ದಾನಮಾಡಿದ ಸಂಗತಿಯನ್ನು ಹೇಳುತ್ತದೆ. ಇದನ್ನು ಮೂರನೆಯ ದೇವರಾಯನ ಅದಿ ಅರಸನಾದ, ಹೈವೆ, ತುಳು ಮತ್ತು ಕೊಂಕಣವನ್ನು ತನ್ನ ರಾಜಧಾನಿ ಹೊನ್ನಾವರದಿಂದ ಆಳುತ್ತಿದ್ದ, ಭಾಯಪ್ಪನು ಕೊಟ್ಟನೆಂದಿದೆ. ಅದೇ ಊರಿನ ಕ್ರಿ.ಶ.1455ರ 56ನೇ ಶಾಸನವು ತಾಮ್ರಶಾಸನವಾಗಿದ್ದು, ಇದು ನಾಗರಿಲಿಪಿ ಹಾಗೂ ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿದೆ. ಇದು ಅದೇ ಅರಸ ಮಲ್ಲಿಕಾರ್ಜುನ ಅಥವಾ ಮೂರನೆಯ ದೇವರಾಯನಿಗೆ ಸೇರಿದೆ. ಇದರಲ್ಲಿ ಸವಿವರವಾಗಿ ಸಂಗಮ ಮನೆತನದ ಮೂಲ ಮತ್ತು ಅರಸ ಮಲ್ಲಿಕಾರ್ಜುನನವರೆಗೂ ವಂಶಾವಳಿಯನ್ನು ಮತ್ತು ವಿಜಯನಗರ ಅರಸರ ಬಿರುದಾವಳಿಗಳನ್ನು ಕೊಟ್ಟಿದೆ. ಈ ಶಾಸನವು ದ್ವಿಜ ವರದೇಶ್ವರನೆಂದು ಪ್ರಸಿದ್ಧಿ ಪಡೆದಿರುವ, ವಿಶ್ವಾಮಿತ್ರನೆಂದೂ ಕರೆಯುತ್ತಿದ್ದ ಯಜುಶ್ಶಾಖೆಯ ಮತ್ತು ಹೊನ್ನಾವುರಪುರದ ನಿವಾಸಿಯಾದ ನೀಲಕೊಡ ಎಂಬುವನನ್ನು ಹೆಸರಿಸುತ್ತದೆ. ಅವನ ಮಗ ಗೋವಿಂದ, ಅವನ ಅಣ್ಣ (ಬಸವಣ್ಣ) ಮತ್ತು ಅವನ ಮಗ ದಿವಾಕರನೆಂದಿದೆ. ಈತನು ಇವರೆಲ್ಲರ ಆಶೀರ್ವಾದವನ್ನು ಪಡೆದು ಈ ಧರ್ಮಶಾಸನವನ್ನು ಶಾಸನ ಪತ್ರಿಕೆಯಾಗಿ ಕೊಟ್ಟ ಎಂದಿದೆ. ಅದರಂತೆ 100 ವರಹಗಳ ಬೆಲೆಯ ಹಾಲಕೇರಿ ಮತ್ತು ಅಡುಗಟ್ಟು ಗ್ರಾಮಗಳನ್ನು ಗೋವಿಂದನಿಗೆ ದಾನ ಮಾಡಿದೆ ಹಾಗೂ ಮಣಿವಳ್ಳಿಯ ಪೂರ್ವ ಭಾಗದ ನಿವೇಶನ ಮತ್ತು ಕೊಲಪೈಕಿಯ ಆದಾಯವನ್ನು ದಿವಾಕರನಿಗೆ ಕೊಟ್ಟಿದೆ. ಅದೇ ಊರಿನ ಕ್ರಿ.ಶ.1463ರ 59ನೇ ಶಾಸನವು ಅದೇ ಅರಸ ಮೂರನೆಯ ದೇವರಾಯನಿಗೆ ಸೇರಿದೆ. ಇದು ಗೋಕರ್ಣದ ರಘೂತ್ತಮ ಮಠದ ರಾಘವೇಶ್ವರ ಭಾರತಿ ಶ್ರೀಪಾದರಿಗೆ, ಅವರ ಗುರು ಚಿದ್ಬೋಧ ಭಾರತಿ ಶ್ರೀಪಾದರವರಿಗೆ 58ನೇ ಈಗಾಗಲೇ ಅನುಗ್ರಹಿಸಿದ ಬಿರುದುಗಳ ಜೊತೆಗೆ, ಇನ್ನೂ ಹಲವು ಬಿರುದುಗಳನ್ನು ಕೊಟ್ಟಿರುವುದನ್ನು ದಾಖಲಿಸಿದೆ. ಅದೇ ಊರಿನ, ಅದೇ ಕಾಲದ ಮತ್ತು ಅದೇ ಅರಸನ 60ನೇ ಶಾಸನವು ರಾಮಚಂದ್ರ ದೇವರ ಅಮೃತಪಡಿಗೆ ಮೂರು ಹಳ್ಳಿಗಳನ್ನು ಈ ಮೇಲಿನ ರಾಮಚಂದ್ರಾಪುರದ ಮಠದ ರಾಘವೇಶ್ವರ ಸರಸ್ವತಿ ಶ್ರೀಪಾದ ಅವರಿಗೆ ಕೊಟ್ಟಿರುವುದನ್ನು ಹೇಳಿದೆ.

ನಗರದ ಕ್ರಿ.ಶ.16ನೇ ಶತಮಾನ 22ನೇ ಶಾಸನವು ಸದಾಶಿವರಾಯನ ಆಳ್ವಿಕೆಗೆ ಸೇರಿದ್ದು ಇದರಲ್ಲಿ ಜೆಟಿ ಗೌಡನು, ಬಿರಿರೂರು ಮಠದ ಗುತು ಜಾಳಿಗೆ ಕಂತೆಯ ಕಲುಣವೊಡೆಯರ ನಿರಾಸಿಮಠಕ್ಕೆ ಒಂದು ವರಡ ವರಮಾನದ ಭೂಮಿಯನ್ನು ದತ್ತಿಯಾಗಿ ನೀಡಿದ ಎಂದು ಹೇಳುತ್ತದೆ. ಹೀಗೆ ದತ್ತಿಯಾಗಿ ಕೊಟ್ಟ ಭೂಮಿಯನ್ನು ದಾನಿಗೆ ಪೂರ್ವದಲ್ಲಿ ಅವನ ಪೂರ್ವಿಕರಿಗೆ ನೆತ್ತರುಗೊಡುಗೆಯಾಗಿ ಕೊಟ್ಟಿದ್ದು ಎಂದು ಹೇಳಿದೆ.

ಮಳೂರು ಗ್ರಾಮದ ಕ್ರಿ.ಶ.1502ರ 44ನೇ ಶಾಸನವು ಎರಡನೆಯ ನರಸಿಂಹನ ಆಳ್ವಿಕೆಗೆ ಸೇರಿದ್ದು ಇದು ಮೊಳಊರು (ಮಳೂರು) ಎಂಬ ಅಗ್ರಹಾರವನ್ನು ಅಲ್ಲಿನ ಹಲವು ಬ್ರಾಹ್ಮಣರಿಗೆ ದತ್ತಿಯಾಗಿ ಕೊಟ್ಟಿರುವುದನ್ನು ಹೇಳಿದೆ.

ಹುಂಚದ ಕ್ರಿ.ಶ.1509ರ 116ನೇ ತಾಮ್ರ ಶಾಸನವು ಅಲ್ಲಿಯ ಮಠದಲ್ಲಿದ್ದು ಅದು ಭಾನುಪುರದಿಂದ ಆಳಿದ ಸಾಳುವ ಮನೆತನದ ದೇವರಾಯನ ಆಳ್ವಿಕೆಗೆ ಸೇರಿದೆ. ಇದು ಹುಂಚದಲ್ಲಿರುವ, ಮಳೆಯಖೇಡಸಿಂಹಾಸನಾಧೀಶ್ವರರಾಗಿದ್ದ ಪಟ್ಟದ ಗುರು, ದೇವೇಂದ್ರಕೀರ್ತಿ ಭಟ್ಟಾರಕ ದೇವರಿಗೆ ಕೊಟ್ಟ ಭೂದಾನವನ್ನು ಹೇಳುತ್ತದೆ. ದೇವರಾಯನು, ಜಿನಾಲಯದ ಜೀರ್ಣೋದ್ಧಾರಕ್ಕೂ ದೇವೇಂದ್ರಕೀರ್ತಿ ಭಟ್ಟಾರಕದೇವರ ಪ್ರಶಸ್ತಿ ನಡೆಯಬೇಕೆಂಬ ಕಾರಣಕ್ಕೂ ಈ ಭೂಮಿಯ ಜೊತೆಗೆ ಕೆಂಚವೀ(ಮೀ)ರಯ್ಯನಿಂದ ಬಂದ ಹಣವನ್ನು ದಾನಮಾಡಿದನೆಂದಿದೆ. ಈ ಹಣವನ್ನು ಅವನ ತಾಯಿ ಮಾದರಸಿಯು ಈ ಮೊದಲು ದಾನ ಮಾಡಿದ್ದಳು. ಇಲ್ಲಿ ಕೊಟ್ಟಿರುವ ಶಾಪಪದ್ಯವೊಂದು ಕುತೂಹಲಕಾರಿಯಾಗಿದೆ. ಅದು ಹೀಗಿದೆ: "ಇ ಧರ್ಮಕ್ಕೆ ಜೈನರಾಗಿ ತಪ್ಪಿದವರುಗಳು ಗುಂಟನಾಥ ಚಂದ್ರನಾಥಸ್ವಾಮಿಗಳನೂ ಕಿತ್ತ ಪಾಪಕ್ಕೆ ಹೋಹರು; ಶೈವರಾಗಿ ತಪ್ಪಿದವರು ಕೋಟಿಲಿಂಗವ ಭಿಂನವ ಮಾಡಿದ ಪಾಪಕ್ಕೆ ಹೋಹರು. ವೈಷ್ಣವರಾಗಿ ತಪ್ಪಿದವರು ಗಯಾವಾರಣಾಸಿಯಲ್ಲಿ ಸಹಸ್ರ ಗೋಬ್ರಾಹ್ಮಣ ವಧೆಯ ಮಾಡಿದ ಪಾಪಕ್ಕೆ ಹೋಹರು" ಎಂದಿರುವುದು ವಿಶೇಷ.

ತುಳುವ ಮನೆತನಕ್ಕೆ ಸೇರಿರುವ ಹನ್ನೆರಡು ಶಾಸನಗಳಿವೆ. 55 ಮತ್ತು 57 ರಾಮಚಂದ್ರಾಪುರ ಮಠದಲ್ಲಿರುವ ಕ್ರಿ.ಶ.1507ರ ತಾಮ್ರ ಶಾಸನಗಳು. ಈ ತಾಮ್ರ ಶಾಸನಗಳು ನಾಗರಿ ಅಕ್ಷರ ಹಾಗೂ ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿವೆ. ಇವು ವಿಜಯನಗರದಿಂದ ರಾಜ್ಯವನ್ನಾಳುತ್ತಿದ್ದ ತುಳುವ ಮನೆತನದ ವೀರನರಸಿಂಹನ ಆಳ್ವಿಕೆಗೆ ಸೇರಿವೆ. ಈ ಎರಡೂ ಶಾಸನಗಳಲ್ಲಿ ಈ ಮೇಲಿನ ರಾಜ ವೀರ ನರಸಿಂಹನವರೆಗಿನ ಈ ರಾಜವಂಶದ ಹುಟ್ಟು ಮತ್ತು ಅವನು ಮಾಡಿದ ದಾನಗಳ ವಿವರಗಳನ್ನೂ ಕೊಟ್ಟಿದೆ. ಇವನು ಕನಕದಸ್ಸಿನಲ್ಲಿ, ವಿರೂಪಾಕ್ಷ ದೇವಸ್ಥಾನದಲ್ಲಿ, ಕಾಳಹಸ್ತಿಯ ದೇವಸ್ಥಾನದಲ್ಲಿ, ವೆಂಕಟಾದ್ರಿ, ಕಾಂಚಿ, ಶ್ರೀಶೈಲ, ಶೋಣಶೈಲ, ಹರಿಹರ, ಅಹೋಬಲ, ಸಂಗಮ, ಶ್ರೀರಂಗ, ಕುಂಭ ಕೋಣ, ಕತ್ತಲೆಯನ್ನು (ಅಜ್ಞಾನವನ್ನು) ನಿವಾರಿಸುವ ನಂದಿತೀರ್ಥದಲ್ಲಿ (ಮಹಾನಂದಿ) ನಿವೃತ್ತಿ, ಗೋಕರ್ಣ, ರಾಮಸೇತು ಮುಂತಾದ ತೀರ್ಥಸ್ಥಳಗಳಲ್ಲಿ ದಾನಮಾಡಿದುದಾಗಿ ಹೇಳಿದೆ.

ಹುಂಚದ ಕ್ರಿ.ಶ.1515ರ 115ನೇ ಶಾಸನವು ವಿಜಯನಗರದಿಂದ ರಾಜ್ಯವನ್ನಾಳಿದ ಕೃಷ್ಣರಾಯ ಮಹಾರಾಯ (ಕೃಷ್ಣದೇವರಾಯ)ನ ಆಳ್ವಿಕೆಗೆ ಸೇರಿದೆ. ಇವನ ಅಧೀನ ರಾಜನಾಗಿ ವಿಜಯಪ್ಪ ವೊಡೆಯನು ಬಾರಕೂರು ರಾಜ್ಯವನ್ನಾಳುತ್ತಿದ್ದನು. ಈ ಮೇಲಿನ ವಿಜಯಪ್ಪ ವೊಡೆಯನು ವಿದ್ಯಾನಂದಸ್ವಾಮಿಯ ಆಹಾರ ಮತ್ತು ಇತರೆ ಖರ್ಚಿಗೋಸ್ಕರ ಗೋಪಾಡಿ ಊರಲ್ಲಿ ಎರಡು ನೂರು ವರಹಗಳನ್ನು ದಾನ ಮಾಡಿದುದಾಗಿ ಹೇಳಿದೆ.

ಹುಂಚದ ಕ್ರಿ.ಶ.ಸುಮಾರು 1530ರ 93ನೇ ಶಾಸನವು ದೇವರಾಯನ ಸಹೋದರಿ ಪದ್ಮಾಂಬಾಳ ಮಗ ಸಾಳುವ ಕೃಷ್ಣರಾಯನ ಆಳ್ವಿಕೆಗೆ ಸೇರಿದೆ. ಇಲ್ಲಿ ಹೇಳಿರುವ ದೇವರಾಯನು ಬಹುಶಃ ಸಾಳುವ ಅರಸ ದೇವರಾಯನಾಗಿರಬೇಕು. ಇವನಿಂದ ಮುಂಚೆ ಸಾಳುವ ಅರಸ ಮಲ್ಲಿರಾಯ ಬರುತ್ತಾನೆ. ತೌಳವದೇಶದಲ್ಲಿನ ಸಂಗೀತಪುರವು ಅವರ ರಾಜಧಾನಿಯಾಗಿತ್ತು. ಅವರು ಕಾಶ್ಯಪಗೊತ್ರ ಮತ್ತು ಸೋಮಕುಲಕ್ಕೆ ಸೇರಿದವರಾಗಿದ್ದರು ಹಾಗೂ ಜೈನರಾಗಿದ್ದರು. ಇದು ಈ ಮನೆತನದ ತುಂಬಾ ಕುತೂಹಲಕಾರಿಯಾದ ಮತ್ತು ಬಹುಮುಖ್ಯವಾದ ಶಾಸನ. ಈ ಶಾಸನದಲ್ಲಿ ದತ್ತಿಯನ್ನು ಹೇಳಿಲ್ಲವಾದರೂ ಇದರಲ್ಲಿ ಸಂಪೂರ್ಣವಾಗಿ ವಾದಿ ವಿದ್ಯಾನಂದರ ಅಥವ ವಿದ್ಯಾನಂದ ಸ್ವಾಮಿಯ ಹೊಗಳಿಕೆಗಳು ತುಂಬಿಹೋಗಿವೆ. ಇದರಲ್ಲಿ ಅನೇಕ ಐತಿಹಾಸಿಕ ವೃತ್ತಾಂತಗಳ ಸೂಚನೆಗಳಿವೆ ಅವನ ವಾಕ್ಸಂಪತ್ತನ್ನು ರಚಿತವಾದ ಭಾಷ್ಯ ಕೃತಿಗೂ ಮತ್ತು ಬಾಣನ ಗದ್ಯ-ಪದ್ಯ ಕೃತಿಗೂ (ಕಾದಂಬರಿ) ಸಂಬಂಧ ಕಲ್ಪಿಸಿದೆ. ಇದರಲ್ಲಿ ಅವನು ಅನೇಕ ಆಸ್ಥಾನಗಳಲ್ಲಿ ಪ್ರಸಿದ್ಧಿ ಪಡೆದು, ಎದುರಾಳಿಗಳನ್ನು ಖಂಡಿಸಿರುವುದನ್ನು ಸ್ಪಷ್ಟಪಡಿಸಿದೆ. ಅವುಗಳಲ್ಲಿ ನಂಜರಾಯಪಟ್ಟಣದ (ಚಂಗಾಳ್ವ) ಅರಸ ನಂಜದೇವನ (ಆಸ್ಥಾನದಲ್ಲಿ) ನಂದನ ಮಲ್ಲಿಭಟ್ಟನ ಸೋಲಿಸಿದ. ಶ್ರೀರಂಗನಗರ (ಶ್ರೀರಂಗಪಟ್ಟಣ)ದಲ್ಲಿ ನಡೆದ ವಿದ್ವತ್ ಸಭೆಯಲ್ಲಿ ತನ್ನ ವಿದ್ಯೆಯಿಂದ ವಾಕ್ಸಂಪತ್ತಿನಿಂದ ರಾಜಪ್ರತಿನಿಧಿಯನ್ನು ಸೋಲಿಸಿದ. ಶಾಂತವೇಂದ್ರ ಅರಸ ಕೇಸರಿ ವಿಕ್ರಮ ಆಸ್ಥಾನದಲ್ಲಿ ಅವನು ಹೇಳಿರುವ ಪದ್ಯವೊಂದು ಪ್ರಪಂಚದಲ್ಲೆಲ್ಲಾ ಕೋಲಾಹಲವನ್ನುಂಟುಮಾಡಿತು; ಗುರು ನೃಪಾಲನ ಆಸ್ಥಾನದಲ್ಲಿ ಪ್ರಸಿದ್ಧ ಕರ್ನಾಟಕ ಕೃತಿಯನ್ನು ರಚಿಸಿದನು; ಸಾಳುವ ದೇವರಾಯನ ಆಸ್ಥಾನದಲ್ಲಿ

ಅವನು ಎಲ್ಲಾ ಮತಗಳ ವಾದ ಮಾಡುವವರನ್ನು ತನ್ನ ವಾದಗಳಿಂದ ಸೋಲಿಸಿದನು; ಅರಸ ಬೀಳಗಿ ನರಸಿಂಹ ಮತ್ತು ಕಾರಕಳ (ಕಾರ್ಕಳ) ಅರಸ ಭೈರವನ ಆಸ್ಥಾನಗಳಲ್ಲಿ ಹಾಗೂ ಬಿದಿರೆಯ ಜೈನರ ಸಭೆಗಳಲ್ಲಿ ಜೈನ ಸಿದ್ಧಾಂತವನ್ನು ಪ್ರತಿಪಾದಿಸಿದನು. "ಕೃಷ್ಣರಾಯನು" (ವಿಜಯನಗರದ ಅರಸ) ಆಸ್ಥಾನದಲ್ಲಿ ಇತರೆ ಮತಗಳ ಮಹೋಪಾಧ್ಯಾಯರನ್ನು ತನ್ನ ವಾಕ್ಸಂಪತ್ತಿನಿಂದ ಸಂಪೂರ್ಣವಾಗಿ ಸೋಲಿಸಿದ. ಕೊಪಣ ಮತ್ತು ಇತರೆ ಪುಣ್ಯ ಕ್ಷೇತ್ರಗಳಲ್ಲಿ ಬೆಳಗುಳದ ಗೊಮ್ಮಟೇಶನ ಸನ್ನಿಧಿಯಲ್ಲಿ ಅನೇಕ ದೊಡ್ಡ ಉತ್ಸವಗಳನ್ನು ನಡೆಸಿ ಗೇರುಸೊಪ್ಪೆಯ ಮುನಿಗಳಿಗೆ ಬೆಂಬಲಿಸಿದನು.

ಸದಾಶಿವರಾಯನಿಗೆ ಸೇರಿರುವ ಆರು ಶಾಸನಗಳಿವೆ. ನಗರದ ಕ್ರಿ.ಶ.1550ರ 20ನೇ ತ್ರುಟಿತ ಶಾಸನವು ಹಂಪೆ ಹಸ್ತಿನಾವತಿ ಎಂದು ಕರೆಯುತ್ತಿದ್ದ ವಿದ್ಯಾನಗರದಿಂದ ರಾಜ್ಯವನ್ನಾಳುತ್ತಿದ್ದ ಸದಾಶಿವರಾಯನ ಆಳ್ವಿಕೆಗೆ ಸೇರಿದೆ. ಇವನ ಆದೇಶದಂತೆ ಅಧೀನ ಅರಸನಾಗಿ ಕೆಳದಿಯ ಅರಸ ಸದಾಶಿವನಾಯಕನು ಆರಗ ರಾಜ್ಯವನ್ನಾಳುತ್ತಿದ್ದನು. ಇದರಲ್ಲಿ ಬಂಕಿಯರಸ, ಶಂಕರದೇವಿ ಅಮ್ಮ ಮತ್ತು ಬಿದಿರೂರು (ಬಿದನೂರು) ಸೀಮೆಯ ಉಲ್ಲೇಖವೂ ಇದೆ.

ಸಂಪಗೆಕೋಟೆಯ ಕ್ರಿ.ಶ.1552ರ 68ನೇ ಶಾಸನವು ಹಂಪೆ ಹಸ್ತಿನಾವತಿ ಎಂದು ಕರೆಯುತ್ತಿದ್ದ ವಿದ್ಯಾನಗರಿಯಿಂದ ರಾಜ್ಯವನ್ನಾಳುತ್ತಿದ್ದ ವಿಜಯನಗರ ಮನೆತನದ ಸದಾಶಿವ ಮಹಾರಾಯನ ಆಳ್ವಿಕೆಗೆ ಸೇರಿದೆ. ಈ ಸಮಯದಲ್ಲಿ ಅವನ ಅಧೀನರಸ ಸದಾಶಿವರಾಯ ನಾಯಕನು ಅರಗದ ಹದಿನೆಂಟು ಕಂಪಣಗಳನ್ನು ಆಳುತ್ತಿದ್ದನು. ಆಗ ಇವನ ಒಪ್ಪಿಗೆಯ ಮೇರೆಗೆ ಬಂಕಿಯರಸ ಮತ್ತು ಕಂಬಳಿವೊಡೆಯ ಶಂಕರದೇವಿ ಅಮ್ಮನವರು ತಾವು ಅರಗಸೀಮೆಯಲ್ಲಿ ಕಾಣಾಚಿಯಾಗಿ ಪಡೆದ ಮುಂಗಿನಾಡು, ಕಬ್ಬನಾಡು ಮತ್ತು ಹೊಸನಾಡುಗಳನ್ನು ಆಳುತ್ತಿದ್ದರು. ಈ ಸಮಯದಲ್ಲಿ ಮುಂಗಿನಾಡು, ಕಬ್ಬನಾಡು ವಿದ್ಯಾವಂತರಿಗೆ ಮತ್ತು ಹಲವು ಊರುಗಳ ಸಮಸ್ತ ಜನರಿಗೆ ಕೊಟ್ಟಿರುವ ಶಿಲಾ ಶಾಸನದ ವಿವರಗಳು ಇಂತಿವೆ: ಈ ಮೇಲಿನ ಹಳ್ಳಿಗಳಲ್ಲಿ ಯಾರಾದರೂ ಮಕ್ಕಳಿಲ್ಲದೆ, ಸಹೋದರರಿಲ್ಲದೆ ಅಥವಾ ಅವರ ತಲೆಮಾರಿನವರಿಲ್ಲದೆ ಮೃತರಾದ ಸಂದರ್ಭಗಳಲ್ಲಿ ಅವರ ಎಲ್ಲಾ ಆಭರಣಗಳನ್ನು ಎಲ್ಲಾ ಆಸ್ತಿಯನ್ನೂ ಮೃತನಾದ ವ್ಯಕ್ತಿಯ ಗೋತ್ರಕ್ಕೆ ಸೇರಿದ ವಾರಸುದಾರರಿಗೆ ಕಡ್ಡಾಯವಾಗಿ ಹಂಚಬೇಕು. ಈ ವಾರಸುದಾರರೂ ಇಲ್ಲದಿದ್ದ ಪಕ್ಷದಲ್ಲಿ ಈ ಆಸ್ತಿಯನ್ನು ಆ ಊರಿನ ದೇವಸ್ಥಾನಕ್ಕೆ ದಾನ ಮಾಡಬೇಕು. ಈ ಮೇಲಿನ ಆಸ್ತಿಯನ್ನು ಯಾವ ರೀತಿಯಲ್ಲು ಅರಮನೆಗೆ ಮುಟ್ಟುಗೋಲು ಹಾಕಿಕೊಳ್ಳುವುದಿಲ್ಲವೆಂಬುದಾಗಿಯೂ ಇದರಲ್ಲಿ ಹೇಳಿದೆ. ಸಂಪಗೆಕೋಟೆಯ ಕ್ರಿ.ಶ. 1566ರ 64ನೇ ಶಾಸನವು ಹಂಪೆ ವಿದ್ಯಾನಗರಿಯಿಂದ ರಾಜ್ಯವನ್ನಾಳುತ್ತಿದ್ದ ವಿಜಯನಗರ ಮನೆತನದ "ಸದಾಶಿವರಾಯ ಮಹಾರಾಯನ" ಆಳ್ವಿಕೆಗೆ ಸೇರಿದೆ. ಈ ಸಮಯದಲ್ಲಿ ಅವನ ಅಧೀನರಾಜನಾಗಿ ಅರಗ ರಾಜ್ಯವನ್ನು ತನ್ನ ಮಾಗಣಿಯನ್ನಾಗಿ ಇಮ್ಮಡಿ ಸದಾಶಿವರಾಯ ನಾಯಕನು ಆಳುತ್ತಿದ್ದನು. ಅಗ ಇವನ ಒಪ್ಪಿಗೆಯ ಮೇರೆಗೆ ಬಂಕಿಯರಸ ಮತ್ತು ಹೊನ್ನೆಯ ಕಂಬಳಿವೊಡೆಯ ಅಮ್ಮಿದೇವಿ ಅಮ್ಮರವರು ಘಟ್ಟದ ಮೇಲಣ ಮುಂಗಿನಾಡು, ಕಬ್ಬುನಾಡು ಆಳುತ್ತಿದ್ದರು. ಇವರಿಬ್ಬರ ಆದೇಶದಂತೆ ಹೆಬ್ಬಲಗೆಯ ಗೋವಿಂದ ಅಧಿಕಾರಿಯ ಮಗ ಕೇಶಪ್ಪ ಅಧಿಕಾರಿಯು ಉಡುಕುಂದದ ಶಂಭುಲಿಂಗದೇವರಿಗೆ ಒಂದು ಮದುವಟ್ಟುವನ್ನು ಕೊಟ್ಟನೆಂದಿದೆ. ಈ ಶಾಸನವು ಮುಂದುವರೆದು ಬಂಕಿಯರಸ ಮತ್ತು ಅಮ್ಮಿದೇವಿ ಅಮ್ಮನವರು ಕಬ್ಬುನಾಡುಸೀಮೆ ಬೂವನಕೊಪ್ಪದಲ್ಲಿ 80 ಖಂಡುಗಬತ್ತದ ಸ್ಥಿರವಾಗಿ ಉತ್ಪತ್ತಿ ಬರುವ ಭೂಮಿಯನ್ನು, ಈ ಮೇಲೆ ಹೇಳಿದ ದೇವರಿಗೆ ಮತ್ತು ನಾಲ್ಕು ಬ್ರಾಹ್ಮಣರಿಗೆ ಪ್ರತಿದಿನ ಒಪ್ಪೊತ್ತಿನ ಊಟ ಛತ್ರದಲ್ಲಿ ಒದಗಿಸಲು ದಾನ ಮಾಡಿದುದಾಗಿ ಹೇಳಿದೆ. ಈ ದತ್ತಿಯಾಗಿ ಕೊಟ್ಟಿರುವ ಭೂಮಿಯ ಚಕ್ಕುಬಂದಿಯ ವಿವರಗಳನ್ನೂ ಕೊಟ್ಟಿದೆ. ಸಂಪಗೆಕೋಟೆಯ ಶಾಸನಗಳಲ್ಲಿ 64ರಿಂದ 68ರಲ್ಲಿ ಈ ಸದಾಶಿವರಾಯನನ್ನು ಹರಿಹರರಾಯನ ಮನೆತನಕ್ಕೆ ಸೇರಿದವನೆಂದು ಹೇಳಿದೆ. ಇದರ ಅರ್ಥ ಅವನ ತಾಯಿ ಅಂದರೆ ರಂಗರಾಯನ ಪತ್ನಿ ಸಂಗಮ ಮನೆತನಕ್ಕೆ ಸೇರಿದವಳು ಎಂದಿದ್ದಾನೆ.

ಆಕರ

1. ಎಪಿಗ್ರಾಫಿಯ *ಕರ್ನಾಟಿಕ*, 15ನೇ ಸಂಪುಟ, ಪ್ರಕಟಣೆ 2009, ಮೈಸೂರು ವಿಶ್ವವಿದ್ಯಾನಿಲಯ.

ಹಳೆಬಿಡ ಗ್ರಾಮಕ್ಕೆ ವಿಜಯನಗರದ ರಾಯರು ಬರಶಿಕೊಟ್ಟ ಶಾಸನಪ್ರತಿ

ಡಾ॥ ಕೆಳದಿ ವೆಂಕಟೇಶ್ ಜೋಯಿಸ್

ತೀರ್ಥಹಳ್ಳಿ ತಾಲ್ಲೂಕು ದೂರ್ವಾಸಪುರ ಗ್ರಾಮದ ಶ್ರೀ ಶಾಮಾಚಾರ್ ಕುಟುಂಬದಲ್ಲಿ ದೊರೆತ ಐತಿಹಾಸಿಕ ದಾಖಲೆಗಳನ್ನೊಳಗೊಂಡ ಹಸ್ತಪ್ರತಿಯು ಐತಿಹಾಸಕ್ಕೆ ಪೂರಕವಾದಂತಹ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತದೆ. ಈ ಹಸ್ತಪ್ರತಿಯು ಸುಮಾರು ಒಂದು ನೂರು ಪುಟಗಳಿಗೂ ಹೆಚ್ಚಿದ್ದು ಅದರಲ್ಲಿರುವ ಹೆಚ್ಚಿನ ನಿರೂಪ ಮತ್ತು ಶಾಸನ ಪಾಠಗಳು ಕೆಳದಿ ಇತಿಹಾಸಕ್ಕೆ ಸಂಬಂಧಿಸಿದಂತಹುದಾಗಿದೆ. ಇಲ್ಲಿ ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಶಾಸನವೊಂದರ ಪಾಠವನ್ನು ಯಥಾವತ್ತಾಗಿ ದಾಖಲಿಸಲಾಗಿದೆ.

ಪುಸ್ತಕದಲ್ಲಿ ದಾಖಲಾಗಿರುವುದು ಮೋಡಿ ಅಕ್ಷರದಲ್ಲಿ. ಈ ಶಾಸನ ಒಟ್ಟು ಅರವತ್ತು ಸಾಲುಗಳನ್ನೊಳಗೊಂಡಿದ್ದು ಎರಡು ಪುಟಗಳಲ್ಲಿ ಬರೆದದ್ದಾಗಿದೆ. ಪಾಠ ಹೀಗಿದೆ.

ಪುಟ ೧೦

ನಮಸ್ತುಂಗಶಿರಶ್ಚುಂಬಿ ಚಂದ ಚಾಮರ ಚಾರವೆ ತ್ರೈಲೊಕ್ಯ ।
ನಗರಾರಂಭ ಮೂಲಸ್ತಂಭಾಯ ಶಂಭವೆ ॥೧॥ ಸ್ವಸ್ತಿ ಶ್ರೀ
ಜಯಾಭ್ಯುದಯ ಶಾಲಿವಹನಶಕವರುಷ ೧೫೪೮ನೆಯ ।
ವರ್ತಮಾನಕ್ಕೆ ಸಲುವ ಪ್ಲವ ಸಂವತ್ಸರದ ಮಾಘ ಶು ೭ ಆ
ದಿವಾರದಲ್ಲು ಆತ್ರೆಯ ಗೋತ್ರದ ಆಪಸ್ತಂಭ ಸೂತ್ರದ
ಯಜುಶಾಖೆದ್ಯಾಯಿರಾದ ಸೊಮವಂಶೊದ್ಭವರಾದ ಆ
ರವೆಟ್ಟಿರಾಮರಾಜರಂಗಪ್ಪರಾಜದೆವಮಹಾರಾ
ರೈಯನವರ್‍ರಿಗೆ ಪುತ್ರರಾದ ಶ್ರೀಮದ್ರಾರಾಧಿರಾಜರಾಜಪ
ರವೆಶ್ವರ ಶ್ರೀವಿರಪ್ರತ್ತಾಪ ಶ್ರೀವಿರಶ್ರೀರಂಗರಾಜದೆವಮ
ಹಾರಾಜರಯನವರೂ । ವಶಿಷ್ಟಗೊತ್ರದ ಆಶ್ವಲಾನ
ಸೀತ್ರದ ರಿಲಶಾಖೆಯ।ನಂಮ ಚಿಂನಭಂಡಾರದ ರಾಮ ।
ಕ್ರಿಷ್ಣಪ್ಪೈಯನ ಪ್ರಪಉತ್ರರಾದ ಪುರ್‍ರುಷೊತ್ತಮೈಯನ
ಪಉತ್ರರಾದ ರಾಮಕೃಷ್ಣಪ್ಪೈಯನ ಪುತ್ರರಾದ ಹುವೈ ।
ಯಗೆ । ಪಾಲಿಶಿದ ಭೂದಾನತ್ತಾಂಬ್ರಶಾಸನಕ್ರಮವೆಂತ್ತೆಂ

ದರ್ರೆ ವೆಲಾಪುರ್ರಿ ಸ್ಥಳದಲ್ಲಿ ರತ್ನಸಿಂಹ್ಹಾಸನಾದ್ಯಕ್ಷರಾಗಿ
ಷಟ್ಸಾಂಬ್ರಾಜವ ಪ್ರತ್ತಿಪಾಲಿಸುತ್ತಿದಲ್ಲಿ । ಕರ್ನಟಕ ಸಿಂ
ಹಾಸದೊಳಗಣ ಬೆಲೂರ ರಾಜಕೆ ಸಲುವ ಹಳೆಬಿಡ
ಗ್ರಾಮ ಉದೆಶಕಾಲವಿಪರ್ಯಸಗಳಿಂದ ಕೆರೆಕಾಲು
ವೆಗಳೊದದು ಕೊಟತ್ತುಡಿಕೆ ಕಡದುಗದೆ ಬೆದಲು
ಬಿದ್ದು ಸ್ಥಳದ ವಕಲುಗತ್ತ ನಷ್ಟವಾಗಿ ಹಿಗೆ ಬಿದ್ದು ನಶಿ
ಸಲಾಗಿ ನಂಮ್ಮ ಅರಮನಿಗೆ ಹುಟುವಳಿಯಾಗಿ ಯಿಹ
ಪ್ರಮಾಣಿ ಗ ೧೩೦೦ ಸವಿರದ ಮುಂನ್ನುರು ವರಹಾ ಉ
ಯತ್ತಿ ಬರುತ್ತಿದಲ್ಲಿ ಯೀ ಉತ್ಪತ್ಯಾವಾದ ಭೂಮಿಯಂನ್ನು
ನಷ್ಟವಾದ ಭೂಮಿಸಹಾ ಹಳೆಬಿಡ ಗ್ರಾಮವನ್ನು ರಥಸಪ್ತ
ಮಿ ಪುಂಣ್ಯ ಕಾಲದಲ್ಲು ನಿಮಗೆ ಸಹಿರಂನೋದಕದಾನಧಾರಾ
ಪೂರ್ವಕವಾಗಿ ಶ್ರಿ ವಿಷ್ಣುಸಮುದ್ರ ತ್ತೀರದ್ಸಲ್ಲು ಚಂನಕೆಶ್ವರ ಸ್ವಾ
ಮಿ ಸಂನ್ನಿಧಿಯಲ್ಲು ಶ್ರೀವೈಂಕಟಾಚಲಪ್ರಿತ್ತಿಯಾಗಿ ಶ್ರೀ ಕೃ
ಷ್ಣಾರ್ಪಣವಾಗಿ ಕೊಟ್ಟೆವಾಗಿ । ಯೀ ಗ್ರಾಮದ ಚತ್ತುಶಿಮೆಗಡಿ ವಿ
ವರ ಮೂಡಲು ಜಾಜಿಕಟ್ಟೆಯಿಂದ ಪಡವಲು ತೆಂ

ಪುಟ ೧೧


ಕಲು ಕಟೆ ಸೊಮೆನಹಳಿಯಿಂದ ಪಡವಲು ತ್ತಿಪ್ಪನಹಳಿಯಿಂ
ದಂ ಮೂಡಲು ಬಡಗಲು ತ್ತೆಂಕಲು ಯಿಂತ್ತಿಚತ್ತುಃಸಿಮೆವಳ
ಗುಳ್ಳ ನಿಧಿ ನಿಕ್ಷೆಪಜಲಪಾಷಾಣ ಅಕ್ಷಣಿ ಆಗಾಮಿಸಿದ್ದ ಸಾ
ದ್ಯಂಗಳೆಂಬ ಅಷ್ಟ ಭೋಗ ತ್ತೆಜಸ್ವಾಮ್ಯವಂನ್ನು ಅನುಭವಿ
ಸಿಕೊಂಡು ಯೀ ಗ್ರಾಮಕ್ಕೆ ಮಾಡಿದ ಸ್ಥಳದ ಕಾರಕ ಮಗ್ಗಕಾರಕ
ಅನಮುಸುರ್ವನಾದಾಯ ಆಚಾರ ವಿಚಾರ ಯೆನಿಸಿದ್ದದ್ದನ್ನು
ವಿಚಾರ್‍ರಿಶಿ ಕೊಂಡು ಯೀ ಗ್ರಾಮದಲ್ಲಿ ನಷ್ಟವಾದ ಭೂಮಿಯಂ
ನ್ನು ಆಗಾಮಿಮಾಡ್ಡಿಕೊಂಡು ದೆವಸುಭ್ರಂಹ್ಮಸುಗಳ ಪರ್‍ರಿ
ಪಾಲಿಶಿಕೊಂಡು । ದಾನವಿನಯ ವಿಕ್ರಮಂಗಳಿಗೆ ಸಲುವ ।
ರ್‍ರಿತ್ತಿಗೆ ನಿಂಮ ಸಂತ್ತಾನ ಪಾರಂಪರ್ಯವಾಗಿ ಆಚಂದ್ರಾರ್ಕ
ಸ್ಥಾಯಿಗಳಾಗಿ ಸುಖದಿಂ ಅನುಭವಿಸಿಕೊಂಡು ಬಾಹ
ದೂ ಯಂದು ಆತ್ರೆಯಗೊತ್ರದ ಆಪಸ್ತಂಭ ಸೂತ್ರದ ।
ಯಜುಶಾಖಾದ್ಯಾಯರಾದ ಸೊಮವಂಶೋದ್ಭವರಾದ ಆರವೆ
ಟ್ಟಿ ರಾಮರಾಜರಂಗಪ್ಪ ರಾಜ ದೆವಮಹರಾಜರಯನವರ್‍ರಿಗೆ
ಪುತ್ರರಾದ ಶ್ರೀಮದ್ರಾಜಾಧಿರಾಜ ರಾಜ ಪರಮೆಶ್ವರ ಶ್ರೀ ವಿರಪ್ರತಾಪ ।
ಶ್ರೀ ವಿರಶ್ರೀರಂಗರಾಯದೆವಮಹಾರಾರ್‍ಯೆಯನವರೂ ।
ವಶಿಷ್ಟ ಗೋತ್ರದ ಆಶ್ವಲಾಯನ ಸೂತ್ರರುಖ್ ಶಾಕೆಯ ಚಿಂನಭಂ
ಡಾರದ ರಾಮಕೃಷ್ಣಪ್ಪಯನ ಪ್ರಪ ಉತ್ರರಾದ ಪುರುಷೋತ್ತು ।


ಮ್ಮೆಯನ ಪುತ್ರರಾದ ರಾಮಕೃಷ್ಣಪ್ಪೆಯನ ಪುತ್ರರಾದ ಹು
ವ್ವೆಯರ್ಗ ಶ್ರೀಕರಣ ತ್ರಿವಾಚವಾಗಿ ಪಾಲಿಸಿದ ಭೂದಾನಧ


ಪುಟ ೧೨


॥ ರ್ಮ ಶಾಸನ । ಯೀತ್ತ್ರೋಪಿದಕ್ಕೆ ಸಾಕ್ಷಿಗಳು । ಆದಿತ್ಯಚಂ
ದ್ರಾವನಿಲೊನಲಶ್ಚದ್ಯೌರ್ಭುಮಿರಾಪೊ ಹೃದಯಂ
ಯಮಶ್ಚ ಅಹಶ್ಚ ರಾತ್ರಿಶ್ಚ ಉಭೆಚ ಸಂದ್ಯೆ
ಧರ್ಮಸ್ಯ ಜಾನಾತ್ತಿ ನರಸ್ಯ ಉತ್ತಂ ॥೧॥ ಸ್ವದತ್ತಾದ್ವಿಗು
ಣಂ ಪುಣ್ಯಂ ಪರದತ್ತಾನುಪಾಲನಂ ಪರದತಾಪರಾರೇಣ ।
ಸ್ವದತ್ತಂನಿಷ್ಪಲಂಭವೆತ್ತು ॥೨॥ ದಾನಪಾಲನಯೊರ್ಮದ್ಯೆ
ದಾನಾಟ್ರೆಯೊನುಪಾಲನಂದನಾತ್ತುಸ್ವರ್ಗಮವಾಪ್ನೊತ್ತಿ
ಪಾಲನದಚುತಂಪದಂ ॥೩॥ ಯ್ತೈವಭಾಸಿಮಿಲೊಕೆಸರ್ವೆಮೆ
ವಭೂಭುಜಾಂನಬೊಜ್ಜನಖರಗ್ರಾಹ್ಯಾವಿಷದತ್ತಾವಸುಂ
ಧರಾ ॥ ಶ್ರೀ ವಿರೂಪಾಕ್ಷಯಂತ್ತ ವಪ್ಪ । ೭

ಈ ಶಾಸನವು ಶಾಲಿವಾಹನ ಶಕ ೧೫೪೪ ಅಂದರೆ ಕ್ರಿ.ಶ. ೧೬೧೪ಕ್ಕೆ ಅನ್ವಯವಾಗುತ್ತದೆ. ಶಾಸನ ನಮಸ್ತುಂಗ ಶಿರಶ್ಚುಂಬಿ ಚಂದ ಚಾಮರ ಚಾರವೆಯಿಂದ ಪ್ರಾರಂಭವಾಗುತ್ತದೆ. ಆತ್ರೆಯ ಗೋತ್ರದ ಆಪಸ್ತಂಭ ಸೂತ್ರದ ಯಜುಶಾಖೆಯ ಆರವೆಟ್ಟಿ ರಾಮರಾಜ ರಂಗಪ್ಪರಾಜ ದೇವಮಹಾರಾಯರ್ರೈಯನವರಿಗೆ ಶ್ರೀ ಮದ್ರಾಜಾಧಿರಾಜ ರಾಜಪರವೆಶ್ವರ ಶ್ರೀವೀರಪತಾಪ ಶ್ರೀ ವೀರ ಶ್ರೀರಂಗರಾಜ ದೇವ ಮಹಾರಾಜರವರು ವಶಿಷ್ಟಗೊತ್ರದ ಆಶ್ವಲಾನ ಸೂತ್ರದ ಶಾಕೆಯ । ನಂಮ ಚಿಂನಭಂಡಾರದ ರಾಮಕೃಿಷ್ಣಪ್ಪೆಯನ ಪ್ರಪೌತ್ರರಾದ ಪುರ್‍ರುಷೊತ್ತುಮ್ಮೆಯನ ಪಉತ್ರರಾದ ರಾಮಕೃಷ್ಣಪ್ಪೆಯನ ಪುತ್ರರಾದ ಹುವ್ವೆಯಗೆ ಪಾಲಿಶಿದ ಭೂದಾನತಾಂಬ್ರ ಶಾಸನದ ಕ್ರಮವೆಂತೆಂದರೆ ವೆಲಾಪುರಿ ಸ್ಥಳದಲ್ಲಿ ರತ್ನಸಿಂಹಾಸನಾದ್ಯಕ್ಷರಾಗಿ ಷಟ್ಟಸಾಂಬ್ರಾಜವ ಪ್ರತಿಪಾಲಿಸುತ್ತಿದಲ್ಲಿ । ಕರ್ನಾಟಕ ಸಿಂಹಾಸದೊಳಗಣ ಬೆಲೂರ ರಾಜಕೆ ಸಲುವ ಹಳೆಬೀಡ ಗ್ರಾಮವು ದೇಶಕಾಲ ವಿಪರ್ಯಸಗಳಿಂದ ಕೆರೆಕಾಲುವೆಗಳು ಕೊಟತುಡಿಕೆ ಕಡದುಗದೆ ಬೆದಲು ಬಿದ್ದು ಸ್ಥಳದ ವಕ್ಕಲುಗತ್ತ ನಷ್ಟವಾಗಿ ಹೀಗೆ ಬಿದ್ದು ನಶಿಸಲಾಗಿ ನಮ್ಮ ಅರಮನೆಗೆ ಹುಟುವಳಿಯಾಗಿ ಇರುವ ಪ್ರಮಾಣಿ ಗ ೧೩೦೦ ಸಾವಿರದ ಮುನ್ನುರು ವರಹಾ ಉತ್ಪತ್ಯಾವಾದ ಭೂಮಿಯಂನ್ನು ನಷ್ಟವಾದ ಭೂಮಿ ಸಹಾ ಹಳೇಬಿಡು ಗ್ರಾಮವನ್ನು ರಥಸಪ್ತಮಿ ಪುಣ್ಯಕಾಲದಲ್ಲಿ ಚಂನಕೆಶ್ವರ ಸ್ವಾಮಿ ಸಂನ್ನಿಧಿಯಲ್ಲಿ ಶ್ರೀ ವೈಂಕಟಾಚಲ ಪ್ರೀತಿಯಾಗಿ ಶ್ರೀ ಕೃಷ್ಣಾರ್ಪಣವಾಗಿ ಕೊಟ್ಟಿರುವುದನ್ನು ಶಾಸನ ಹೇಳುತ್ತದೆ.









14

ಅರಸೀಕೆರೆ ತಾಲ್ಲೋಕಿನ ವಿಜಯ ನಗರದ ಶಾಸನಗಳು

ಮಲ್ಲೇಶಪ್ಪ ಕೆ.ಎಸ್.

ಹಾಸನ ಜಿಲ್ಲೆಗೆ ಸೇರಿದ ಅರಸೀಕೆರೆ ಕಲ್ಪವೃಕ್ಷದ ನಾಡಾಗಿದ್ದು, ಹಾಸನದಿಂದ 48 ಕಿ.ಮೀ ದೂರದಲ್ಲಿದೆ. ತಾಲ್ಲೂಕ್ ಕೇಂದ್ರವಾಗಿರುವ ಅರಸೀಕೆರೆ ಬೆಂಗಳೂರು ಮತ್ತು ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿಯಲ್ಲಿದ್ದು, ಸಾರಿಗೆ ಹಾಗೂ ರೈಲ್ವೆ ಸಂಪರ್ಕಗಳನ್ನು ಹೊಂದಿದ್ದು, ನಗರವಾಗಿ ಬೆಳೆಯುತ್ತಿದೆ. 11ನೇ ಶತಮಾನದಲ್ಲಿ ಹೊಯ್ಸಳ ವಿನಯಾಧಿತ್ಯನ ಮಗ ಎರೆಯಂಗನ ಪಟ್ಟದ ರಾಣಿ ಮಹಾದೇವಿ ಕೆರೆಯನ್ನು ಕಟ್ಟಿಸಿದಂತೆ ಶಾಸನ ಒಂದರಿಂದ ತಿಳಿದುಬಂದಿದ್ದು, ಈ ಅರಸಿಯ ಹೆಸರಿನಿಂದಲೇ 'ಅರಸೀಕೆರೆ' ಎಂಬ ಹೆಸರು[1] ಈ ಊರಿಗೆ ಬಂದಿದೆ. ಎರಡನೇ ಬಲ್ಲಾಳನ ರಾಣಿ ಉಮಾದೇವಿಯ ತವರುಮನೆ ಈ ಊರಾಗಿದ್ದು, ಮುಂದೆ ಅರಸೀಕೆರೆಯು ಹೊಯ್ಸಳರ ಉಪರಾಜಧಾನಿಯಾಗಿ, ವಾಣಿಜ್ಯಕೇಂದ್ರವಾಗಿ ಬೆಳೆಯಿತು. ಈ ಊರಿಗೆ ಜಯಗೊಂಡ ಬಲ್ಲಾಳಪುರ, ವೀರವಿಜಯ ಬಲ್ಲಾಳಪುರ ಎಂಬ ಹೆಸರುಗಳಿದ್ದು, ಶಾಸನಗಳಲ್ಲಿ ರಾಜಧಾನಿ ಅರಸೀಕೆರೆ ಎನಿಸಿಕೊಂಡಿದೆ.

"ಮುಳಿದಾಗಡೆ ಕೂರ್ಪವರುಳ್ ತಿಳುಮದು ತಿಳುವುದು ಗಡೆಂದು ಸಾರುವ ತೆರದಿಂ ಗಳಪ್ಪನ ಹಿಳಿವಿಂಡಿಯ **ಕಳಕಳವರಸಿಕರೆಯ** ಬನದೊಳ್ಳಪುತ್ತಿರ್ಕಲ್ರ್ಂ."[2] ಹೀಗೆ ಕ್ರಿ.ಶ. 1411ರ ಶಾಸನದಲ್ಲಿ ಅರಸೀಕೆರೆಯನ್ನು ವರ್ಣಿಸಲಾಗಿದೆ. ಕ್ರಿ.ಶ.1368ರ ಬುಕ್ಕರಾಯನ ಶಾಸನದಲ್ಲಿ ಉದ್ಭವ ಸರ್ವಜ್ಞ ವೀರ ವಿಜಯಬಲ್ಲಾಳಪುರ ಎಂದು ಇದರಲ್ಲಿ ವರ್ಣಿಸಿದೆ. ದಕ್ಷಿಣ ಕರ್ನಾಟಕದ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದು ಬಾದಾಮಿ ಪಟ್ಟದಕಲ್ಲು ಬನವಾಸಿ, ನಾಸಿಕ್, ವಿಜಯನಗರ, ಕಂಚಿ ತಾಂಜಾವುರು, ಮಧುರೈ ಶ್ರೀರಂಗಂ, ಪ್ರಮುಖ ವ್ಯಾಪಾರ ನಗರಗಳೊಂದಿಗೆ ಸಂಪರ್ಕಪಡೆದಿದ್ದು, 'ದಕ್ಷಿಣದ ಐಹೊಳೆ" ಎಂದು ಪ್ರಸಿದ್ಧಿ ಪಡೆದಿತ್ತು.[3]

ತರೀಕೆರೆ ಹನುಮಪ್ಪನಾಯಕ ಕೆಳದಿ ಶಿವಪ್ಪನಾಯಕರ ಕಾಲದಲ್ಲಿ ಇವರ ಅಧೀನಲ್ಲಿದ್ದು, ಮುಂದೆ ಮೈಸೂರಿನ ಒಡೆಯರ ಕಾಲದಲ್ಲಿ ಮೈಸೂರಿನ ಒಡೆಯರು ಮರಾಠರಿಗೆ ಈ ಪ್ರದೇಶವನ್ನು ತೆರಿಗೆ ವಸೂಲಿಗೆ ಬಿಟ್ಟುಕೊಡಲಾಗಿತ್ತು. ಹೀಗೆ ಈ ಪ್ರದೇಶದಲ್ಲಿ ಕಳ್ಳತನ, ದರೋಡೆಗಳಿಗೆ ಒಳಗಾಗುತ್ತಿದ್ದು, ಯಾವುದೆ ಅಭಿವೃದ್ಧಿಯಾಗಲಿಲ್ಲ. ಕಳ್ಳ ಅರಸೀಕೆರೆ ಸುಳ್ಳು ಬಾಣಾವರ ಎಂಬ ಹೆಸರಿನ ಪ್ರತೀತಿಯಿತ್ತೇಂದು ಸ್ಥಳೀಯರಿಂದ ತಿಳಿದುಬರುತ್ತದೆ. ಈ ಮೊದಲು ಹಾರನಹಳ್ಳಿ ತಾಲ್ಲೋಕಿಗೆ ಸೇರಿದ್ದ ಈ ಸ್ಥಳ 1882ರಲ್ಲಿ ತಾಲ್ಲೋಕ್ ಆಗಿ ಮಾರ್ಪಾಡಾಯಿತು. ಇಲ್ಲಿ 90 ಎಕರೆ ವಿಸ್ತೀರ್ಣದಲ್ಲಿರುವ ರಾಷ್ಟ್ರೀಯ ಕಸ್ತೂರಿ ಬಾ ಆಶ್ರಮವಿದೆ.[4]

ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೋಕಿನಾದ್ಯಂತ 1352 ರಿಂದ 1586ರ ವರೆಗೆ ವಿಜಯನಗರದ 19ಕ್ಕೂ ಹೆಚ್ಚು ಶಾಸನಗಳು ಲಭ್ಯವಿದ್ದು, ಆಗ ಈ ಅರಸೀಕೆರೆ ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿತ್ತೆಂಬುದಕ್ಕೆ ಶಾಸನಗಳು ಸಾಕ್ಷಿಯಾಗಿವೆ.

ಈ ಶಾಸನಗಳನ್ನು ಆಧಾರವಾಗಿ ಇಟ್ಟುಕೊಂಡು ಅವುಗಳ ವಿಶೇಷತೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ವಿಜಯನಗರದ ಅರಸರು ತಮ್ಮ ನಾಡಿನಲ್ಲಿ ಕೃಷಿ, ನೀರಾವರಿ ಅಭಿವೃದ್ಧಿ ಕೆರೆ, ಕಟ್ಟೆ, ಕಾಲುವೆಗಳ ನಿರ್ಮಾಣ ಮತ್ತು ಪ್ರಾಕೃತಿಕ ಜಲಸಂಪತ್ತನ್ನು ಸಂಗ್ರಹಿಸಲು ಅನೇಕ ಕೆರೆ ಕಟ್ಟೆಗಳನ್ನು ನಿರ್ಮಿಸಿದ್ದಾರೆ. ಸಾಹಿತ್ಯಕ್ಕೆ ಸಂಬಂಧಿಸಿದ ಅತಿ ಮಹತ್ವವಾದ ಶಾಸನ ಒಂದು ರಾಮರಾಯನ ಕಾಲದ್ದು, ದೊರಕಿರುವುದು ವಿಶೇಷವಾಗಿದೆ. ಮುಖ್ಯವಾಗಿ ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ, ದೇವಾಲಯಗಳ ಕಾರ್ಯ ಚಟುವಟಿಕೆಗಳು ಸುಲಭವಾಗಿ ನಡೆಯುವುದಕ್ಕೆ ಹೇರಳವಾಗಿ ದಾನ ಧರ್ಮಗಳನ್ನು ನೀಡಿದ ಮಾಹಿತಿ ಇದೆ. ಕೆಲವು ಜಾತಿ ಜನಾಂಗಗಳ ಮೇಲೆ ಪ್ರಜೆಗಳ ಮೇಲೆ ಕಂದಾಯ ವಿಧಿಸಿದ್ದು, ತೆರಿಗೆ ವಿನಾಯಿತಿ ನೀಡಿದ ಬಗ್ಗೆ, ರದ್ದು ಮಾಡಿದ ಬಗ್ಗೆ ಸ್ಪಷ್ಟ ಮಾಹಿತಿ ಇದೆ.

ವಿಜಯನಗರವನ್ನು ಆಳಿದ ನಾಲ್ಕು ಸಂತತಿಗಳು

ಸಂಗಮ್ ಸಂತತಿ ಕಾಲ

ಅರಸೀಕೆರೆ 153 / ಕೆಲ್ಲಂಗೆರೆ : ಕ್ರಿ.ಶ.1367ರಲ್ಲಿ ದೊರೆತ ಕೆಲ್ಲಂಗೆರೆ ಶಾಸನವೇ ಬುಕ್ಕನ ಮೊದಲ ಶಾಸನವಾಗಿದ್ದು, ಒಟ್ಟು ಎರಡು ಶಾಸನಗಳು ದಾಖಲಾಗಿವೆ. ಕೆಲ್ಲಂಗೆರೆ ಗ್ರಾಮವು ಈ ಶಾಸನದಲ್ಲಿ ಹರಿಹರಪುರ ಅಗ್ರಹಾರವೆಂದು ಉಲ್ಲೇಖಿತವಾಗಿದೆ. ಒಂದನೇ ಹರಿಹರನ (ಹಕ್ಕ) ಹೆಸರಿನ ಮೇಲೆ ಹರಿಹರಪುರವೆಂಬ ಹೆಸರು ಇಡಲಾಯಿತ್ತೆನ್ನುವುದು ಸ್ಪಷ್ಟ. ಕೆರೆ ಬಂಡಿಯ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದ ವ್ಯಕ್ತಿಯೊಬ್ಬನ ಜೀವನಾಂಶಕ್ಕೆ ಮಹಾಜನರು ಅವಕಾಶ ಕಲ್ಪಿಸಿಕೊಟ್ಟದನ್ನು ಈ ಶಾಸನ ತಿಳಿಸುತ್ತದೆ.

ಈ ಶಾಸನದಲ್ಲಿ ಹೆರೆಎಣ್ಣೆ, ಹಾರೆ, ಗುದ್ದಲಿ, ಮುಂತಾದವು ಕೆರೆ ಬಂಡಿಯಲ್ಲಿ ಅಡಕವಾಗಿರುವ ಸಾಮಗ್ರಿಗಳು ಮೂಲ ಒಕ್ಕಲುಗಳಲ್ಲಿ ಪ್ರತಿಯೊಬ್ಬನು ಹೇರಿಗೆ 2 'ತಾರ' ನೀಡಬೇಕೆಂಬ ನಿಬಂಧನೆ ಇತ್ತು. ಎರಡು ಸಲ ಬಳಸಲಾದ ಈ ತಾರ ಎಂಬ ಶಬ್ದ ಸ್ವಲ್ಪ ವಿವರಣೆಯನ್ನು ಬಯಸುತ್ತದೆ. ಒಂದು ಪಣ ಅಥವಾ ಎರಡು ಕಾಸಿನ 1/3ಕ್ಕೆ ಸಮನಾಗುವ ತಾರವು ಒಂದು ಚಿಕ್ಕ ತಾಮ್ರ ನಾಣ್ಯವೆಂದು ಪರಿಗಣಿಸಲಾಗಿದೆ. ಈ ನಾಣ್ಯ ಬೆಳ್ಳಿಯ ನಾಣ್ಯ ಹಾಗೂ ಚಿನ್ನದ ಪಣದ 1/6 ಭಾಗಕ್ಕೆ ಸಮನಾಗಿತ್ತೆಂದು 'ಅಬ್ದುಲ್ ರಜಾಕ್' ಹೇಳುತ್ತಾನೆ. ಪಣದ 1/15 ಭಾಗವಾದ 'ತಾರ್ಹ' ಎಂದು ಕರೆಯಲಾದ ನಾಣ್ಯವೊಂದನ್ನು ಮಹುವನ್ ಉಲ್ಲೇಖಿಸುತ್ತಾನೆ. ಆದರೆ ವರ್ಥಮನ್ ಪ್ರಕಾರ ತಾರ ಎಂಬುದು ಬೆಳ್ಳಿಯ ನಾಣ್ಯದ 1/16 ಭಾಗದ ಇದೊಂದು ಬೆಳ್ಳಿಯ ನಾಣ್ಯವಾಗಿತ್ತೆಂದು ಸ್ಪಷ್ಟವಾಗುತ್ತದೆ.

ಅರಸೀಕೆರೆ 1 : ಬುಕ್ಕರಾಯನ ಕ್ರಿ.ಶ.1368ರ ಈ ಅರಸೀಕೆರೆ ಒಂದರ ಶಾಸನದಲ್ಲಿ ಈ ಸ್ಥಳವನ್ನು ಸರ್ವನಮಸ್ಯದ ಪಿರಿಯಪಟ್ಟಣ ಮಹಾಗ್ರಹಾರ ಉದ್ಭವ ಸರ್ವಜ್ಞವೀರ ವಿಜಯ ಬಲ್ಲಾಳಪುರ ಎಂದು ವರ್ಣಿಸಿದೆ. ಇಲ್ಲಿಯ ಮಹಾಜನರು ಮಲ್ಲಿಕಾರ್ಜುನನಿಗೆ ಅರ್ಪಿತವಾದ ಹೊಸದೇವಾಲಯವನ್ನು ನಿರ್ಮಿಸಿದರು. ಇದಕ್ಕೆ ಮಳೆಮಲ್ಲೇಶ್ವರ ದೇವಾಲಯವೆಂದು ಕರೆಯಲಾಗಿದ್ದು, ಗುಡ್ಡದ ಮೇಲಿದೆ. ಮಹಾಪ್ರಧಾನ ಬಸವಧಣ್ಣಾಯಕ ಮತ್ತು ನಾಯಕ ಅಚರಸರು ಈ ಪುರದ ಆಡಳಿತವನ್ನು ನಡೆಸುತ್ತಿದ್ದರು. ದಾನ ಭೂಮಿಯನ್ನು ವಿವರಿಸುವಾಗ 'ಸಂಜೆ ಮಠ' ಎಂದು ವಿವರಿಸಲಾಗಿದೆ. ಸಂಧ್ಯಾಹ್ನಿಕಾದಿ ಆಚರಣೆಗಾಗಿ ವಿಶೇಷವಾಗಿ ಕಟ್ಟಲಾದ ಸ್ಥಳವೆಂದು ಇದನ್ನು ವಿವರಿಸಲಾಗಿದೆ. ದೇವಾಲಯವನ್ನು ಕಲ್ಲುಕುಟಿಗನನ್ನು ಈ ಶಾಸನ ಉಲ್ಲೇಖಿಸಿದೆ.

ಅರಸೀಕೆರೆ 194 / ಬಾಗವಾಳು : ಕ್ರಿ.ಶ.1352ರ ಕಾಲದ ಬಾಗವಾಳು ಶಾಸನವು ಅರಸೀಕೆರೆಯಲ್ಲಿ ದೊರೆತ ಎಲ್ಲಾ ಶಾಸನಗಳಿಗಿಂತ ಹೆಚ್ಚು ಪ್ರಾಮುಖ್ಯ ಪಡೆದಿದೆ. ಕುಮಾರ ಕಂಪಣನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ವಾಸ್ತವವಾಗಿ ಈ ಶಾಸನವು ಒಂದು ವೀರಗಲ್ಲು ಹೊಸದಾಗಿ ನಕಲು ಮಾಡಿಕೊಂಡಿರುವ ಈ ಶಾಸನದಲ್ಲಿ ಕುಮಾರ ಕಂಪಣರಾಯನು ಬೇಲೂರಿನ ಮೇಲೆ ದಾಳಿ ಮಾಡಿದ್ದನ್ನು ಉಲ್ಲೇಖಿಸುತ್ತದೆ. ವೀರನೊಬ್ಬ ಈ ಸಂದರ್ಭದಲ್ಲಿ ಹೋರಾಡಿ ಮಡಿದ ಎಂಬ

ಅಂಶ ಇದುವರೆಗೆ ತಿಳಿದಿರಲಿಲ್ಲ. ಕಂಚಿಯ ಸಮೀಪವಿರುವ ರಾಜಗಂಭೀರ ಮಲೈಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಶಂಬುವರಾಯನ ವಿರುದ್ಧ ಒಂದನೇ ಬುಕ್ಕನ ಮಗನಾದ ಕಂಪಣನು ಹೋರಾಡಿದನೆಂಬುದು ತಿಳಿದಿ ಸಂಗತಿ. ಯುವರಾಜ ಕಂಪಣನು ಶಂಬುರಾಯನನ್ನು ಸೋಲಿಸಿ ವಿಜಯನಗರ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ಮಧುರೈ, ಕಣ್ಣಾನೂರು, ಕೊಪ್ಪಂವರೆಗೆ ದಾಳಿ ಮಾಡಿದನು. ತಿರುಪತಿಯಲ್ಲಿ ಇಡಲಾಗಿದ್ದ ಶ್ರೀರಂಗನಾಥನ ಪ್ರತಿಮೆಯನ್ನು ಮರಳಿ ಶ್ರೀರಂಗಕ್ಕೆ ತಂದು ಪ್ರತಿಷ್ಠಾಪನೆ ಮಾಡಿಸಿದನು. ಮಧುರೈ ಸುಲ್ತಾನನ್ನು ಸೋಲಿಸಿ ಮಧುರಾ ನಗರವನ್ನು ಸ್ವಾಧೀನಪಡಿಸಿಕೊಂಡನು. ಈ ಮಹಾವಿಜಯವನ್ನು ವೀರ ಕಂಪಣರಾಯನ ಪತ್ನಿಯಾದ ಗಂಗಾಬಿಕೆ ತನ್ನ 'ಮಧುರಾವಿಜಯಂ' ಎಂಬ ಕಾವ್ಯದಲ್ಲಿ ವರ್ಣಿಸಿದ್ದಾಳೆ. ಮಧುರೆಗೆ ದಾಳಿ ಮಾಡುವ ಮೊದಲು ಬೇಲೂರು ರಾಜ್ಯದ ಮೇಲೂ ದಾಳಿ ಮಾಡಿರಬೇಕು. ವಾಸ್ತವವೆಂದರೆ ಕಂಪಣನಿಗಿಂತ ಮುಂಚೆ ಸಂಗಮನ ಮಕ್ಕಳು ಹೊಯ್ಸಳ ಮೂರನೇ ಬಲ್ಲಾಳನ ಅಧೀನ ಅಧಿಕಾರಿಗಳಾಗಿದ್ದ ಸಿಂಗೇಯ ಮತ್ತು ಬಳ್ಳಪ್ಪ, ಇವರಲ್ಲಿ ಹರಿಹರನು ಬಳ್ಳಪ್ಪನ ಸಹೋದರಿಯನ್ನು ವಿವಾಹವಾಗಿದ್ದನು. ವೀರ ಕಂಪಣನಿಗಿಂತ ಮುಂಚೆಯೇ ಸಂಗಮ್ ಸಹೋದರರು ಬೇಲೂರಿನ ಅಧಿಪತ್ಯವನ್ನು ಹೊಂದಿದ್ದರು. ಹೊಯ್ಸಳರ ಅಧೀನ ಅಧಿಕಾರಿಗಳಾಗಿದ್ದರು ಮುಂದೆ ಏಳಿಗೆಗೆ ಬಂದ ಸಂಗಮ್ ಅರಸರು ಬೇಲೂರಿನ ಚೆನ್ನಕೇಶವನನ್ನು ಆರಾಧ್ಯ ದೇವರನ್ನಾಗಿ ಹಂಪೆಯ ವಿರೂಪಾಕ್ಷನನ್ನು ಮನೆದೇವರನ್ನಾಗಿ ಪೂಜಿಸುತ್ತಿದ್ದರೆಂಬುದುಕ್ಕೆ ಧಾರ್ಮಿಕ ವಿಚಾರಗಳ ಬಗ್ಗೆ ದಾಖಲೆಗಳಿವೆ.

ಅರಸೀಕೆರೆ 198 / ಗಂಡಸಿ : ಎರಡನೇ ಹರಿಹರನ ಕಾಲಕ್ಕೆ ಸೇರಿದ ಕ್ರಿ.ಶ.1403ರ ಗಂಡಸಿ ಶಾಸನವು ಛಾಯಣ್ಣನೆಂಬಾತನು ತನ್ನ ತಾಯಿಯ ಹೆಸರಿನಲ್ಲಿ ಮಂಗಾಪುರವೆಂಬ ಗ್ರಾಮವನ್ನು ರಚಿಸಿ ಅದಕ್ಕೆ ಮಂಗಸಮುದ್ರ ಎಂಬ ಕೆರೆಯನ್ನು ಕಟ್ಟಿಸಿದ. ಹಿರಿಯ ಗಂಡಸಿ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿದ ಹಾಗೂ ಅಲ್ಲಿನ ಹಿರಿಯ ಕೆರೆಗೆ ತಂದ ಕಾಲುವೆಗೆ ರಕ್ಷಣಾರ್ಥವಾಗಿ ಹನುಮಂತದೇವರ ಪ್ರತಿಷ್ಠೆ ಮಾಡಿಸಿದ ವಿಷಯವನ್ನು ತಿಳಿಸುತ್ತದೆ.

ಅರಸೀಕೆರೆ 280 / ತಿಮ್ಮನಹಳ್ಳಿ : ಎರಡನೇ ದೇವರಾಯ ಅಥವಾ ವೀರ ಪ್ರತಾಪ ದೇವರಾಯನಿಗೆ ಸಂಬಂಧಿಸಿದ ಎರಡು ಶಾಸನಗಳು ಒಂದು ತಿಮ್ಮನಹಳ್ಳಿ ಮತ್ತೊಂದು ನೇರ್ಲಿಗೆ ಗ್ರಾಮದಲ್ಲಿ ದೊರೆಕಿವೆ. ಅರಸೀಕೆರೆ 280 ತಿಮ್ಮನಹಳ್ಳಿಯ ಈ ಶಾಸನ ಕ್ರಿ.ಶ.1432ರ ಕಾಲಕ್ಕೆ ಸೇರಿದ್ದು, ಮಹಾರಾಜಾಧಿರಾಜ, ವೀರ ಪ್ರತಾಪ ದೇವರಾಯನ ಮಕ್ಕಳಲ್ಲಿ ಮೂರು ರಾಯ ಬಸವ ಶಂಕರ ಶೆಟ್ಟಿ ನಾಯಕ ನೇರ್ಲಿಗೆ ಹಿರಿಯ ಕೆರೆಗೆ ಬಂಡೀ ಹಾದಿ ಮತ್ತು ಕೆರೆಯ ಬಂಡೀಕೊಡುಗೆಗಾಗಿ ಹಿರಿಯಹಳ್ಳದಲ್ಲಿರುವ ಭೂಮಿ ಪೂರ್ವಕ್ಕೆ ಬೂಚನಹಳ್ಳಿಯವರ ಮಡುಗದ್ದೆ ತೆಂಕ ಕಾಲುವೆ, ಪಡುವ ಹಿರಿಕಟ್ಟೆ ಬಡಗ ಕೆರೆ ಬಂಡೀಯ ಗದ್ದೆ ಈ ಚತುಸಿಮೆ ಒಳಗಣ ಭೂಮಿಯನ್ನು ಕೆರೆ ಬಂಡಿಗೆ ದಾನವಾಗಿ ಕೊಟ್ಟದನ್ನು ತಿಳಿಸುತ್ತದೆ.

ಅರಸೀಕೆರೆ 285 / ನೇರ್ಲಿಗೆ : ಕ್ರಿ.ಶ. 1429ರ ಕಾಲಕ್ಕೆ ಸೇರಿದ ಇಮ್ಮಡಿ ದೇವರಾಯನ ಶಾಸನದಲ್ಲಿ ವಿರುಪಣ್ಣನಾಯಕನ ಕೆರೆಯ ಬಂಡಿ ನಿರ್ವಹಣೆಗಾಗಿ ಭೂಮಿ ದಾನ ನೀಡಿದ ವಿಷಯವನ್ನು ಹೇಳಿದೆ. ಇದನ್ನು ತಿರುವಕ್ಕುಳ್ ಎಂದು ವರ್ಣಿಸಲಾದ ಜಯಪ್ಪನಾಯಕರ ನಿರೂಪದ ಮೇರೆಗೆ ದಾನ ಮಾಡಲಾಯಿತೆಂದು ಉಲ್ಲೇಖಿಸಿದೆ.

ಸಾಳುವ ಸಂತತಿ

ಅರಸೀಕೆರೆ 269/ ಜಾವಗಲ್ : ಲಕ್ಷ್ಮೀನರಸಿಂಹದೇವಾಲಯದ ಮಹಾದ್ವಾರದಲ್ಲಿರುವ ಈ ಶಾಸನ ಶಾಲಿವಾಹನ ಶಕವರುಷ 1483 ಕ್ರಿಶ 1561ರ ಶಾಸನದಲ್ಲಿ ಈ ಹಿಂದೆ ರೈಸ್ ಶಾಸನ ಸಂಗ್ರವಿಸುವಾಗ ಅಥವಾ ಸಂಪುಟ ಮುದ್ರಿಸುವಾಗ ಕಾಲದ ಮುದ್ರಣ ತಪ್ಪಾಗಿರಬಹುದು. (1581) ಎಂದು ಉಲ್ಲೇಖಿತವಾಗಿದೆ, ಶಕ 1483ಕ್ಕೆ 78ನ್ನು ಸೇರಿಸಿದರೆ 1561 ಕಾಲಕ್ಕೆ ಸೇರಿದ ಈ ಶಾಸನದಲ್ಲಿ ಮಹಾರಾಜಾಧಿರಾಜ, ಪರಮೇಶ್ವರ, ಪ್ರತಾಪ ಸಾಳುವರಾಯ, ದಿಗೂರ ನಿಮರಾಜಯ ಮತ್ತು ರಾಮಪ್ಪಯ ಎಂದು ಉಲ್ಲೇಖಿಸಿದ್ದು, ಉಳಿದ ವಿವರಗಳು ಅಸ್ಪಷ್ಟವಾಗಿದೆ. ಸಾಳುವ ರಾಯ ಎಂದರೆ ಯಾರು

ಎಂಬುದನ್ನು ನಿರ್ಧರಿಸಬೇಕಾಗಿದೆ. ಉಳಿದಂತೆಯೇ ಸಾಳುವ ಸಂತತಿಯ ಅರಸರ ಬಗ್ಗೆ ಈ ತಾಲ್ಲೂಕಿನಲ್ಲಿ ಹೆಚ್ಚಿನ ಶಾಸನಗಳು ಲಭ್ಯವಾಗಿಲ್ಲ.

ತುಳುವ ಸಂತತಿ

ಅರಸೀಕೆರೆ 240 / ಹಾರನಹಳ್ಳಿ : ಗ್ರಾಮಸ್ಥರ ವಶದಲ್ಲಿದ್ದ ಕ್ರಿ.ಶ.1535ರ ಒಂದು ತಾಮ್ರದ ಶಾಸನ ವಿಜಯನಗರದ ಅಚ್ಚುತರಾಯನ ಕಾಲಕ್ಕೆ ಸೇರಿದ್ದು, ಸಂಸ್ಕೃತ ಮತ್ತು ನಾಗರಿಯಲ್ಲಿರುವ ಈ ಶಾಸನವು ಈಶ್ವರ ನಾಯಕನಿಂದ ಆರಂಭವಾಗುವ ಅಲ್ಲದೆ ತುಳುವ ವಂಶದ ಅರಸರ ಪಟ್ಟಿಯನ್ನು ನೀಡುತ್ತದೆ. ನರಸಿಂಹನನ್ನು ತುಂಬ ವಿಶದವಾಗಿ ವರ್ಣಿಸಿದೆ. ಚಿದಂಬರಂ ಹಂಪಿ, ಕಾಳಹಸ್ತಿ, ತಿರುಪತಿ, ಕಂಚಿ, ಶ್ರೀ ಶೈಲ, ತಿರುವಣ್ಣಾಮಲೈ, ಅಹೋಬಲ, ಶ್ರೀರಂಗಂ, ಕುಂಬಕೋಣಂ, ಮಹಾನಂದಿ, ಗೋಕರ್ಣ, ಮತ್ತು ರಾಮಸೇತು – ಈ ಸ್ಥಳಗಳಲ್ಲಿನ ದೇವಾಲಯಗಳಿಗೆ ದಾನ ನೀಡಿದ ವಿಷಯ ಮಹತ್ವದ್ದಾಗಿದೆ. ಅಲ್ಲದೆ ಗೋಸಹಸ್ರ, ಹೇಮಗರ್ಭ, ಹೇಮಾಶ್ವ, ತುಲಾಪುರುಷ, ಬ್ರಹ್ಮಾಂಡ, ವಿಶ್ವಚಕ್ರ, ಉದಿತ ಮಹಾಭೂತಕ, ರತ್ನಧೇನು. ಸಪ್ತಾಬೋದಿ ಇತ್ಯಾದಿ ದಾನಗಳನ್ನು ನೀಡಿದನೆಂದು ಹೇಳಲಾಗಿದೆ. ಇಂತಹ ವರ್ಣನೆಗಳು ಕೃಷ್ಣದೇವರಾಯನ ಮತ್ತು ಅಚ್ಚುತರಾಯನ ಶಾಸನಗಳಲ್ಲಿ ಕಂಡುಬರುತ್ತವೆ. ಈ ಹಾರನಹಳ್ಳಿ ಶಾಸನದ ಉದ್ದೇಶ ಚಿಕ್ಕಗಂಡಸಿ ಗ್ರಾಮವನ್ನು ದಾನವಾಗಿ ನೀಡಿದ ವಿಷಯದ ನಿರೂಪಣೆ ಇದೆ.

ಅ.ಕೆ.206 / ಚಿಕ್ಕಗಂಡಸಿ : ಅಚ್ಚುತರಾಯನ ಕಾಲದ ಕ್ರಿ.ಶ. 1535ರ ಮತ್ತೊಂದು ಶಾಸನದಲ್ಲಿ ತಿಮ್ಮರಸನ ಮಗ ರಾಮಪ್ಪನು ಚಿಕ್ಕಗಂಡಸಿ ಗ್ರಾಮದಲ್ಲಿ ಕೆಲವು ಭೂಮಿ ಕಾಣಿಕೆಗಳನ್ನು ವಿವಿಧ ವಿದ್ವಾಂಸ ಮಹಾನ್ ಪಂಡಿತರಿಗೆ ನೀಡಿದನೆಂದು ತಿಳಿಸುತ್ತದೆ. ಅಲ್ಲದೆ ಚಿಕ್ಕಗಂಡಸಿಗೆ **ಲಖಸಮುದ್ರ**ವೆಂಬ ಪ್ರತಿನಾಮಧೇಯವನ್ನು ನೀಡಲಾಯಿತು. ಚಿಕ್ಕದೇವರಾಯನಿಗೆ ಧರ್ಮವಾಗಬೇಕೆಂಬ ಮತ್ತು ಕಡಿಗಳನ ನರಸಿಅಮ್ಮನಿಗೆ ಪುಣ್ಯಲೋಕ ಪ್ರಾಪ್ತಿಯಾಗಬೇಕೆಂದು ದಾನವನ್ನು ಮಾಡಲಾಯಿತು.

ಅ.ಕೆ.261 / ಸಿಂಗನಹಳ್ಳಿ : ಕ್ರಿ.ಶ. 1555ರ ಅಳಿಯ ರಾಮರಾಯ (ರಾಮರಾಜ)ನ ಸಿಂಗನಹಳ್ಳಿಯ ಏಕೈಕ ಶಾಸನದಲ್ಲಿ ಆತನನ್ನು ಮಹಾರಾಜಾಧಿರಾಜ, ರಾಜಪರಮೇಶ್ವರ, ವೀರ ಪ್ರತಾಪ, ಮಹಾಮಂಡಲೇಶ್ವರ ರಾಮರಾಜ ಮಹಾಅರಸು ಎಂದು ವರ್ಣಿಸಲಾಗಿದೆ. ಈ ಶಾಸನವು ರಾಮರಾಯನ ಅಧೀನ ಕುಟುಂಬವಾದ ಕೋಳಗುಂದದ ಗೌಡರ ವಂಶಪಟ್ಟಿಯನ್ನು ಹೀಗೆ ನೀಡುತ್ತದೆ :

ಹಿರಿಯಣಗೊಂಡ ಪತ್ನಿ ಬಮ್ಮಜ್ಜಿ
ಚಿಗಣಗೊಂಡ ಪತ್ನಿ ಅಜ್ಜಿಅಕ್ಕ
ಹೊಳೆಯಗೊಂಡ

ಈ ಹೊಳೆಯಗೊಂಡನು ತನ್ನ ಮಾತಾಪಿತೃಗಳಿಗೆ ಪುಣ್ಯವಾಗಲೆಂದು ಕಣಿವೆ ರಾಮೇಶ್ವರ ದೇವಾಲಯವನ್ನು ನಿರ್ಮಿಸಿ ದೇವತಾ ಪ್ರತಿಷ್ಠೆಯನ್ನು ಮಾಡಿಸಿದನು. ದೇವಾಲಯದ ನಿರ್ವಹಣೆಗಾಗಿ ಬೇರೆ ಬೇರೆ ಗ್ರಾಮಗಳಿಗೆ ಸೇರಿದ ಭೂಮಿ ಕಾಣಿಕೆಗಳನ್ನು ಕೂಡ ದಾನ ನೀಡಿದನು. ಸಾಹಿತ್ಯ ದೃಷ್ಟಿಯಿಂದ ಈ ಶಾಸನ ಮಹತ್ವವಾಗಿದೆ. 21–23ನೇ ಸಾಲುಗಳಲ್ಲಿ ಶಿವವರ್ಣನೆ ಸೊಗಸಾಗಿದೆ.

ಪಳುಕಿನ ಕಳೆ ಬೆಳಗಿನ ಮಯಿ
ವೊಳಪಿನ ತಿಳಿ ಜೊನ್ನ ನಗೆಯ ಕಡೆ ಗೊರಲಿಂಕಣ್
ಗೊಳಿಪ ಪೆರೆದಲೆಯ ದೇವಂ
ಹೊಳೆಯನ ಪಾಲಿಸುಗೆ ಕರುಣದಿಂ ರಾಮೇಶಂ ॥

ಅ.ಕೆ.278 / ದ್ಯಾಮೇನಹಳ್ಳಿ : ದ್ಯಾಮೇನಹಳ್ಳಿ ಶಾಸನದಲ್ಲಿ ಕೆಂಚರಾಯನ ದೇವಸ್ಥಾನದ ಪಕ್ಕದಲ್ಲೆ ಇರುವ ಶಕುನರಾಯನಿಗೆ ಪೋತಮನಾಯಕನು ದಾನ ನೀಡಿದ್ದನ್ನು ಉಲ್ಲೇಖಿಸಲಾಗಿದೆ. ಇದೇ ರೀತಿ ಶಕುನರಾಯ ಎಂಬ ದೇವರ ಶಿಲ್ಪ ಕಡೂರು ತಾಲೂಕು ಸಕ್ಕರಾಯಪಟ್ಟಣದ ಹತ್ತಿರವಿದೆ. ಆರ್ಯರ ಕಾಲದಲ್ಲಿ ನಿಸರ್ಗದಲ್ಲಿ ಕಂಡು ಬರುವ ಮಳೆ (ವರುಣ) ಅಗ್ನಿ, ಇತ್ಯಾದಿ ಪ್ರಕೃತಿ ಆರಾಧನಾ ದೇವರುಗಳು ಪೂಜೆಯಲ್ಲಿದ್ದವು. ಆದರೆ ಶಕುನಕ್ಕೆ ಸಂಬಂಧಿಸಿದ ದೇವಾಲಯ ಇಲ್ಲಿರುವುದು. ಧಾರ್ಮಿಕ ವಿಚಾರಕ್ಕೆ ಸಂಬಂಧಿಸಿದ್ದು ಚಾರಿತ್ರಿಕ ಅಂಶವಾಗಿದೆ.

ಅ.ಕೆ.53 / ಬೆಂಡೆಕೆರೆ : ಕ್ರಿ.ಶ.1411ರ ಕಾಲದ ಈ ಶಾಸನದಲ್ಲಿ ಸಿದ್ದನಾಯಕವೆಂಬುವವನು ಹಿರಣ್ಯಕಷಿಪು ಸಂಹಾರವನ್ನು (ಉಗ್ರನರಸಿಂಹ ಶಿಲ್ಪ) ಮಾಡಿಸಿದ್ದನು ಉಲ್ಲೇಖಿಸುತ್ತದೆ. ನರಸಿಂಹಮೂರ್ತಿ ಪೀಠದ ಮೇಲೆ (ತೇದಿ) ಕಾಲಸಹಿತ ಉಲ್ಲೇಖವಾಗಿರುವ ಈ ಬೆಂಡೆಕೆರೆ ಶಾಸನದ ಶಿಲ್ಪದ ಕಾಲನಿರ್ಣಯಕ್ಕೆ ಉಪಯುಕ್ತವಾಗಿದ್ದು ಕಾಲಸಹಿತ ಇರುವ ಶಿಲ್ಪಗಳು ಸಿಗುವುದು ಕಡಿಮೆ.

ಅ.ಕೆ. 98 / ಹಲಕೂರು (ಜೆ.ಸಿ.ಪುರ) : ಜಯಚಾಮರಾಜಪುರದ ಅ.ಕೆ.98ನೇ ಶಾಸನವು ಕ್ರಿ.ಶ.1374ರ ಕಾಲಕ್ಕೆ ಸೇರಿದ್ದು ಯಾವುದೇ ರಾಜನ ಇಲ್ಲವೇ ರಾಜವಂಶದ ಹೆಸರನ್ನು ಉಲ್ಲೇಖಿಸಿಲ್ಲ. ಅದನ್ನು 'ಪರಿವರ್ತನ ಶಾಸನ'ವೆಂದು ಕರೆಯಲಾಗಿದೆ. ಹೊನ್ನವಳ್ಳಿ ಮಹಾಜನರು ಹಲಕೂರ ಬೊಮ್ಮಗೌಡ, ಮಾದಿಗೌಡ, ನಾಗಗೌಡ, ಮತ್ತು ಕೇತಗೌಡ, ಹಾಗೂ ಸಮಸ್ತಗೌಡ, ಪ್ರಜೆಗಳಿಗೆ ಪರಿವರ್ತನಾ ಶಾಸನವನ್ನು ನೀಡಿದರು. ಸರ್ವಾನುಮತದಿಂದ ಒಪ್ಪಿಕೊಂಡ ಮೇಲೆ ಪ್ರಸ್ತುತ ಶಾಸನವನ್ನು ಹೊರಡಿಸಲಾಯಿತು.

ಅರಸೀಕೆರೆ ತಾಲ್ಲೋಕಿನ ವಿಜಯನಗರದ ಶಾಸನಗಳಲ್ಲಿ ವಿಜಯನಗರವನ್ನು ಆಳಿದ ನಾಲ್ಕು ಸಂತತಿಗಳ ಕಾಲಕ್ಕೆ ಸಂಬಂಧಿಸಿದ ಹಲವಾರು ಶಾಸನಗಳು, ಸಾಹಿತ್ಯ, ವ್ಯಾಪಾರ, ವಾಣಿಜ್ಯ ಕೇಂದ್ರಗಳ ಬಗ್ಗೆ ವಿಜಯನಗರದ ತುಳುವ ಸಂತತಿ ವಂಶದ ಬಗ್ಗೆ ಕೃಷ್ಣದೇವರಾಯನ ಅಳಿಯ ರಾಮರಾಯನಿಗೆ ಸಂಬಂಧಿಸಿವೆ. ಹೀಗೆ ಹಲವಾರು ಶಾಸನಗಳು ದಾನ ನೀಡಿದ ಬಗ್ಗೆ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರಕ್ಕೆ ಸಂಬಂಧಿಸಿದಂತೆ ಉಪಯುಕ್ತ ಮಾಹಿತಿಗಳನ್ನು ಒಳಗೊಂಡಿವೆ. ಇವುಗಳ ಅಧ್ಯಯನದ ಆವಶ್ಯಕತೆ ಇದೆ.

ಆಧಾರಗ್ರಂಥಗಳು

1. ಕನ್ನಡ ವಿಷಯ ವಿಶ್ವಕೋಶ, (ಪರಿಷ್ಕೃತ) ಕು.ಕ.ಅ.ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪು. 48.
2. ಇ.ಸಿ. 10, ಅರಸೀಕೆರೆ 25, ಪೀಠಿಕೆ, ಪು. 1–16,
3. ಮಳಲಿ ವಸಂತಕುಮಾರ್, ಪ್ರಥಮ ಸಂಪುಟ, *ಹೊಯ್ಸಳ ಸಂಪದ*, ಕ.ಸಾ.ಪ ಹಾಸನ, 1996, ಪು. 113–144.
4. ಅಭಿಶಂಕರ್, ಪ್ರಥಮ ಸಂಪುಟ, *ಹಾಸನ ಗೆಜೆಟಿಯರ್*, ಕರ್ನಾಟಕ ಸರ್ಕಾರ, 1971, ಪು. 631.
5. *ಎಪಿಗ್ರಾಫಿಯ ಕರ್ನಾಟಿಕ*, ಸಂಪುಟ 10 (ರೈಸ್ ಆವೃತ್ತಿ).

15

ಶ್ರೀ ಕೃಷ್ಣದೇವರಾಯನ ಆಳ್ವಿಕೆಯ ಕಾಲ ಮತ್ತು ಆತನ ಜೀವಿತಾವಧಿ

ಹುಲಿಕುಂಟೆಮೂರ್ತಿ

ವಿಜಯನಗರ ಸಾಮ್ರಾಜ್ಯವನ್ನಾಳಿದ ಪ್ರಸಿದ್ಧ ಚಕ್ರವರ್ತಿ ಶ್ರೀ ಕೃಷ್ಣದೇವರಾಯ ಕ್ರಿ.ಶ. 1509 ರಿಂದ ಕ್ರಿ.ಶ. 1529 ಅಥವಾ ಕ್ರಿ.ಶ. 1530ರ ವರೆಗೆ ಆಳ್ವಿಕೆ ನಡೆಸಿದನೆಂದು ಎಲ್ಲಾ ಚರಿತ್ರಕಾರರ ಅಭಿಪ್ರಾಯ. ಆದರೆ ಶ್ರೀ ಕೃಷ್ಣದೇವರಾಯ ನಿಧನನಾದ ಸಂವತ್ಸರ, ಆತನ ಮತ್ತು ಅಳಿಯಂದಿರಾದ ರಾಮರಾಯ, ತಿರುಮಲರಾಯ ಅವರುಗಳ ವಯೋಮಿತಿಗಳ ವಿಷಯಗಳಲ್ಲಿರುವ ಗೊಂದಲ ಇನ್ನೂ ಸಂಶಯಾಸ್ಪದವಾಗಿದೆ.

ಪೋರ್ಚುಗೀಸು ಯಾತ್ರಿಕ ನ್ಯೂನಿಜ್‌ನ ಪ್ರಕಾರ ಶ್ರೀ ಕೃಷ್ಣದೇವರಾಯ ಪಟ್ಟಕ್ಕೆ ಕ್ರಿ.ಶ. 1509ರಲ್ಲಿ ಬಂದಾಗ 20 ವರ್ಷ ಮೇಲ್ಪಟ್ಟು ವಯಸ್ಸು ಇದ್ದಿತು. ಆತನ ಅಣ್ಣ ವೀರ ಭುಜಬಲರಾಯ ಅಥವಾ ನರಸಿಂಹರಾಯನ ಮಗನಿಗೆ ಎಂಟು ವರ್ಷ ವಯಸ್ಸು ಇದ್ದಿತು.

ವೀರಭುಜಬಲರಾಯ ಕ್ರಿ.ಶ. 1503ರ ಸುಮಾರಿಗೆ ತನ್ನ ತಂದೆ ನರಸನಾಯಕನ ನಿಧನಾನಂತರ ಪಟ್ಟಕ್ಕೆ ಬರುತ್ತಾನೆ. ನರಸನಾಯಕ ವಿಜಯನಗರ ಸಿಂಹಾಸನವನ್ನಾಕ್ರಮಿಸಿದರೂ, ಸಾಳ್ವ ನರಸಿಂಹನ ಎರಡನೇ ಮಗನ ಹೆಸರಿನಲ್ಲೇ ರಾಜ್ಯಾಧಿಕಾರ ನಡೆಸುತ್ತಿದ್ದನು. ತುಳುವ ವಂಶದ ಮೊದಲನೇ ಚಕ್ರವರ್ತಿ ಆಗಿ ವೀರಭುಜಬಲರಾಯನೇ ಆಳ್ವಿಕೆ ಪ್ರಾರಂಭಿಸುತ್ತಾನೆ.

ಕ್ರಿ.ಶ. 1509 ವರ್ಷಕ್ಕೆ ವೀರಭುಜಬಲ ನರಸಿಂಹರಾಯನಿಗೆ ಎಂಟು ವರ್ಷದ ಮಗನಿದ್ದನೆಂದರೆ ಆ ಮಗುವಿನ ಜನನ ಕ್ರಿ.ಶ. 1501ರ ಸುಮಾರಿಗೆ ಅಂದರೆ, ವೀರನರಸಿಂಹ ಪಟ್ಟಕ್ಕೆ ಬರುವುದಕ್ಕೆ ಮುಂಚಿತವಾಗಿಯೇ ಆಗಿರುತ್ತದೆ.

ನರಸನಾಯಕ ಕ್ರಿ.ಶ. 1503ರಲ್ಲಿ ನಿಧನವಾದಾಗ, ಆತನ ವಯಸ್ಸು ಸುಮಾರು 70 ವರ್ಷ ಇರಬಹುದು ಎಂದು ಅಂದುಕೊಂಡರೆ ನರಸನಾಯಕ ಸಾಳ್ವ ನರಸಿಂಹರಾಯನ ಸೇನಾಧಿಪತಿಯಾಗಿ ಮತ್ತು ಸಾಳ್ವ ನರಸಿಂಹ ಚಂದ್ರಗಿರಿ ರಾಜ್ಯವನ್ನಾಳುವಾಗ ಮತ್ತು ವಿಜಯನಗರ ಸಿಂಹಾಸನವನ್ನು ಕ್ರಿ.ಶ. 1482ರ ಸುಮಾರಿಗೆ ಆಕ್ರಮಿಸಿಕೊಳ್ಳುವಾಗ ಬಹಳ ಸಹಾಯಮಾಡುತ್ತಾನೆ. ಈ ಕಾಲಕ್ಕೆ ನರಸನಾಯಕನಿಗೆ 35 ವರ್ಷ ಅಥವಾ 40 ವರ್ಷ ಇರಬಹುದೆಂದುಕೊಂಡರೂ, ನರಸನಾಯಕ ಕ್ರಿ.ಶ. 1434–40 ಸುಮಾರಿಗೆ ಜನಿಸಿರಬಹುದೆಂದು ಊಹಿಸಬಹುದು ಸರಿಹೋಗುತ್ತದೆ.

ನಮಗೆ ತಿಳಿದಂತೆ, ನರಸನಾಯಕನಿಗೆ ತಿಪ್ಪಾಂಬಿಕೆ, ನಾಗಾಂಬಿಕೆ ಮತ್ತು ಓಬಲಾಂಬಿಕೆ ಎನ್ನುವ ಪತ್ನಿಯರಿದ್ದರು. ತಿಪ್ಪಾಂಬಿಕೆಗೆ ವೀರನರಸಿಂಹ, ನಾಗಾಂಬಿಕೆಗೆ ಶ್ರೀ ಕೃಷ್ಣರಾಯ ಮತ್ತು ಓಬಾಂಬಿಕೆಗೆ ಅಚ್ಯುತರಾಯ, ರಂಗರಾಯ ಎನ್ನುವ ಪುತ್ರರು ಜನಿಸಿದ್ದರು.

ಸುಮಾರು 25 ವರ್ಷ (ಆಗಿನ ಕಾಲದಲ್ಲಿ ಈ ಅಂತರ ಇನ್ನೂ ಕಡಿಮೆ ಇರಬಹುದು) ಒಂದು ತಲೆಮಾರಿನ ಅಂತರ (Generation) ಅಂತ ಅಂದುಕೊಂಡರೆ ನರಸನಾಯಕನಿಗೆ ಕ್ರಿ.ಶ. 1460-65ರ ಅವಧಿಯಲ್ಲಿ ವೀರನರಸಿಂಹ ಜನಿಸಿರಬೇಕು. ವೀರನರಸಿಂಹನಿಗೆ ನಿಧನವಾದಾಗ 45 ಅಥವಾ 50 ವರ್ಷ ಇರಬಹುದು. 35 ವರ್ಷ ವಯಸ್ಸಿನ ನಂತರ ಪುತ್ರ ಜನನವಾಗಿರಬಹುದು.

ಹಾಗಲ್ಲದೆ, ನ್ಯೂಜಿಜ್ ಹೇಳುವಂತೆ, ಶ್ರೀಕೃಷ್ಣದೇವರಾಯನಿಗೆ ಪಟ್ಟಕ್ಕೆ ಬಂದಾಗ 20 ವರ್ಷ ಮೇಲ್ಪಟ್ಟು ವಯಸ್ಸು ಇದ್ದಿತೆಂದರೆ, ಆತನ ಮಲಸಹೋದರ ವೀರನರಸಿಂಹನಿಗೆ ನಿಧನದ ಸಮಯದಲ್ಲಿ 45 ಅಥವಾ 50 ವರ್ಷ ಇತ್ತೆಂದು ನಂಬುವುದು ಸರಿಯೆನಿಸುವುದಿಲ್ಲ. ವೀರನರಸಿಂಹನ ನಂತರ ಶ್ರೀ ಕೃಷ್ಣರಾಯನೇ ಜನಿಸಿರುವುದರಿಂದ, ಅವರಿಬ್ಬರ ವಯಸ್ಸಿನ ಅಂತರ 25 ಅಥವಾ 30 ವರ್ಷ ಇರುತ್ತದೆ, ಅಂತ ಅಂದುಕೊಳ್ಳುವುದು ಸಮಂಜಸವೆನಿಸುವುದಿಲ್ಲ; ಅಲ್ಲದೆ, ಅಂತರ ಸುಮಾರು ಐದು ವರ್ಷ ಇರಬಹುದೆಂದರೆ ವೀರನರಸಿಂಹ ನಿಧನನಾದಾಗ 25 ವರ್ಷ ಅಥವಾ 28 ವರ್ಷದವರಾಗಿದ್ದಿರಬೇಕು. ಅಂದರೆ ಆತ ಕ್ರಿ.ಶ. 1480-85ರ ಅವಧಿಯಲ್ಲಿ ಜನಿಸಿರಬೇಕು. ಆದರೆ ಇದು ಮುಂದೆ ಶ್ರೀ ಕೃಷ್ಣರಾಯನ ಜೀವಿತಾವಧಿಯ ವಿಷಯವಾಗಿ ಚರ್ಚಿಸಲ್ಪಡುವ ಸಂಗತಿಗಳಿಗೆ ಸರಿಹೊಂದುವುದಿಲ್ಲ. ಅದಲ್ಲದೆ ಕ್ರಿ.ಶ. 1480-85ರಲ್ಲಿ ಜನನ ಅಂದರೆ, ಕ್ರಿ.ಶ. 1503ಗೆ ವೀರನರಸಿಂಹನಿಗೆ 18 ಅಥವಾ 23 ವಯಸ್ಸು ಆಗಿದ್ದು, ಆ ಸನ್ನಿವೇಶದಲ್ಲಿ ಅಂದರೆ ಕ್ರಿ.ಶ. 1503ಗೆ ಸಾಮ್ರಾಜ್ಯದಲ್ಲಿ ಸಾಳ್ವ ವಂಶದ ಮೇಲೆ ರಾಜಭಕ್ತಿ, ನಿಷ್ಠೆ ಮತ್ತು ತುಳುವ ನರಸನಾಯಕನ ಮೇಲೆ ವಿರೋಧ ಹೆಚ್ಚಿಗೆ ಇರುವಾಗ, ಮಹಾಮಂತ್ರಿ ತಿಮ್ಮರಸು ಅಂಥ ಅನುಭವವಿಲ್ಲದ 18 ಅಥವಾ 23 ವಯಸ್ಸಿನ ವೀರನರಸಿಂಹನನ್ನು ಸಿಂಹಾಸನದ ಮೇಲೆ ಕೂರಿಸಲು ಸಾಧ್ಯವಿಲ್ಲ ಎಂದು ನಾವು ಊಹಿಸಬಹುದು. ಅಂಥಾ ವಿಪತ್ಸಮಯದಲ್ಲಿ ಸಿಂಹಾಸನದಲ್ಲಿ ವಿರಾಜಮಾನರಾಗುವವರಿಗೆ ತಕ್ಕಮಟ್ಟಿಗೆ ಪ್ರಪಂಚಾನುಭವ, ರಾಜನೀತಿಕೌಶಲ ಇರಬೇಕಾಗುತ್ತದೆ. ಅದಲ್ಲದೆ ಸಿಂಹಾಸನಕ್ಕೆ ಬಂದಾಗ 18-20 ವಯಸ್ಸು ಇತ್ತೆಂದರೆ ಆತನಿಗೆ ಪುತ್ರಜನನವಾದಾಗ 16 ಅಥವಾ 21 ವಯಸ್ಸು ಇರಬೇಕು. ಇದು ಕೂಡ ಶ್ರೀ ಕೃಷ್ಣರಾಯನ ಕಾಲದ ವಿಷಯಗಳಿಗೆ ಸರಿಹೊಂದುವುದಿಲ್ಲ. ಅದಲ್ಲದೆ ನರಸನಾಯಕನಿಗೆ 45 ಅಥವಾ 50 ವರ್ಷ ಆಗುವವರೆಗೆ ಸಂತಾನವಾಗಲಿಲ್ಲ ಅಂಥ ಊಹಿಸುವುದು ಸರಿ ಆಗುವುದಿಲ್ಲ.

ಆದ್ದರಿಂದ ನರಸನಾಯಕನಿಗೆ 25 ಅಥವಾ 30 ವರ್ಷ ವಯಸ್ಸಿನಲ್ಲಿ ಅಂದರೆ ಕ್ರಿ.ಶ. 1460-65 ಅವಧಿಯಲ್ಲಿ ವೀರನರಸಿಂಹನ ಜನನವಾಗಿರಬೇಕು. ಸಾಳ್ವ ನರಸಿಂಹರಾಯ ವಿಜಯನಗರ ಸಿಂಹಾಸನವನ್ನು ಕ್ರಿ.ಶ. 1482ರ ಸುಮಾರಿಗೆ ವಶಪಡಿಸಿಕೊಳ್ಳುವ ಕಾಲಕ್ಕೆ ನರಸನಾಯಕ ಆತನ ಸೇನಾಧಿಪತಿಯಾಗಿ ಎಷ್ಟೋ ವರ್ಷಗಳಿಂದ ಇದ್ದು, ಸಿಂಹಾಸನ ಆಕ್ರಮಿಸುವಲ್ಲಿ ಸಾಳ್ವ ನರಸಿಂಹನಿಗೆ ಸಾಕಷ್ಟು ಸಹಾಯಮಾಡುತ್ತಾನೆ. ಆದ್ದರಿಂದ ಆತನ ವಯಸ್ಸು ಚಿಕ್ಕ ವಯಸ್ಸು ಆಗಿರಲಿಕ್ಕೆ ಸಾಧ್ಯವಿಲ್ಲ. ಮಧ್ಯವಯಸ್ಕನಾಗಿ 40ರ ಮೇಲ್ಪಟ್ಟು ಇರಬಹುದಾಗಿರುತ್ತದೆ.

ವೀರನರಸಿಂಹ ಜನನ ಕ್ರಿ.ಶ. 1460-65ರ ಅವಧಿ ಎಂಬುದನ್ನು ನಾವು ತರ್ಕಿಸಿದ ಮೇಲೆ, ಆತನ ಮಲಸಹೋದರ ಶ್ರೀ ಕೃಷ್ಣರಾಯನ ಜನನ ನಂತರ ಐದು ವರ್ಷಗಳಲ್ಲಿ ಆಗಿರಬಹುದು ಅಂತ ಅಂದುಕೊಳ್ಳಬಹುದು. ಅಂದರೆ ಶ್ರೀ ಕೃಷ್ಣರಾಯ ಕ್ರಿ.ಶ. 1465-1470ರ ಅವಧಿಯಲ್ಲಿ ಜನಿಸಿರಬಹುದು. ಅಂದರೆ ಶ್ರೀ ಕೃಷ್ಣರಾಯ ಕ್ರಿ.ಶ. 1509ರಲ್ಲಿ ಪಟ್ಟಕ್ಕೆ ಬರುವಾಗ, ಸುಮಾರು 40-45 ವಯಸ್ಸು ಆಗಿರಬಹುದು. ಮಹಾಮಂತ್ರಿ ತಿಮ್ಮರಸು ವೀರನರಸಿಂಹನ ಎಂಟು ವರ್ಷದ ಪುತ್ರನಿಗಿಂತ ಪ್ರಬುದ್ಧನಾದ ಸಮರ್ಥನಾದ 40-45 ವಯಸ್ಸಿನ ಶ್ರೀಕೃಷ್ಣರಾಯನನ್ನೆ ಪಟ್ಟಕ್ಕೆ ಆಯ್ಕೆ ಮಾಡಿದನೆಂದು ಅಂದುಕೊಳ್ಳಬಹುದು.

ಈಗ ಮತ್ತೊಂದು ವಿಷಯ: ಶ್ರೀ ಕೃಷ್ಣರಾಯನ ಮಲಸಹೋದರರಾದ ಅಚ್ಯುತ, ರಂಗರನ್ನು, ತಿಮ್ಮರಸು ಶ್ರೀ ಕೃಷ್ಣರಾಯನ ಪಟ್ಟಾಭಿಷೇಕದ ನಂತರ ಚಂದ್ರಗಿರಿಗೆ ಕಳುಹಿಸಿ, ಗೃಹಬಂಧನದಲ್ಲಿ ಇರಿಸುವುದು. ಒಂದು ವೇಳೆ ಪಟ್ಟದ ಕಾಲಕ್ಕೆ ಶ್ರೀ ಕೃಷ್ಣರಾಯನಿಗೆ 20 ವರ್ಷ ಮೇಲ್ಪಟ್ಟು ಮಾತ್ರ ಇದ್ದಿದ್ದರೆ ಆತನ ಸಹೋದರರಿಗೆ 20 ವರ್ಷದೊಳಗೆ ವಯಸ್ಸಿರಬೇಕಾಗುತ್ತದೆ. ತಿಮ್ಮರಸು ಅವರನ್ನು ಚಂದ್ರಗಿರಿಗೆ ಕಳುಹಿಸುವ ಮುಖ್ಯೋದ್ದೇಶ ಅವರು ಪ್ರಬಲರಾಗಿರುವುದರಿಂದ

ಮತ್ತು ಸಿಂಹಾಸನಕ್ಕಾಗಿ ಅವರಿಂದ ಶ್ರೀ ಕೃಷ್ಣರಾಯನಿಗೆ ಸ್ಪರ್ಧಿಗಳಾಗಬಾರದೆಂದು ಅವರು ಪ್ರಬುದ್ಧರಾಗಿರದೆ ಚಿಕ್ಕವರಾಗಿದ್ದರೆ, ಅವರು ಸಿಂಹಾಸನಕ್ಕೆ ಪ್ರತಿಸ್ಪರ್ಧಿಗಳೆಂದು ತಿಮ್ಮರಸು ಅಂದುಕೊಳ್ಳುವ ಪ್ರಮೇಯವೇ ಬರುತ್ತಿರಲಿಲ್ಲ.

ಅದಲ್ಲದೆ ನಾವು ವೀರನರಸಿಂಹ, ನರಸನಾಯಕರ ಜನನದ ಕಾಲವನ್ನು ಚರ್ಚಿಸುವಾಗ, ಶ್ರೀ ಕೃಷ್ಣರಾಯನ ನಂತರ ಆತನ ಮಲಸಹೋದರರು ಅಚ್ಯುತ, ರಂಗ; 5, 10 ವರ್ಷಗಳ ಅಂತರದಲ್ಲಿ ಜನಿಸಿರರೆಂದುಕೊಂಡರೆ ಅಚ್ಯುತ, ರಂಗ ಕ್ರಿ.ಶ. 1470–80ರ ಅವಧಿಯಲ್ಲಿ ಜನಿಸಿರಬೇಕು. ಈ ರೀತಿ ಆದರೂ, ಶ್ರೀ ಕೃಷ್ಣರಾಯನ ಪಟ್ಟದ ಸಮಯದಲ್ಲಿ ಅಚ್ಯುತ, ರಂಗನ ವಯಸ್ಸುಗಳು 35 ಅಥವಾ 40 ವರ್ಷಗಳಿದ್ದು, ಪ್ರಬುದ್ಧರಾದ್ದರಿಂದಲೇ ಅವರನ್ನು ರಾಜಧಾನಿಯಿಂದ ಚಂದ್ರಗಿರಿಗೆ ಕಳುಹಿಸಿ ಶ್ರೀ ಕೃಷ್ಣರಾಯನ ಆಳ್ವಿಕೆ ಪೂರ್ತಿ ಗೃಹಬಂಧನದಲ್ಲಿ ಇಡಲಾಗಿತ್ತು.

ಆದರೆ ಇಲ್ಲಿ ಒಂದು ಪ್ರಶ್ನೆ ಬರುತ್ತದೆ. ನ್ಯೂಜಿಜ್ ಶ್ರೀ ಕೃಷ್ಣರಾಯನನ್ನು ಪ್ರತ್ಯಕ್ಷ ಕಂಡವನಲ್ಲ. ಆತ ಶ್ರೀ ಕೃಷ್ಣರಾಯ ಪಟ್ಟಕ್ಕೆ ಬರುವಾಗ 20 ವರ್ಷ ಮೇಲ್ಪಟ್ಟು ವಯಸ್ಸು ಇರಬಹುದೆಂದು ಬರೆದಿರುವನೆಂದರೆ – ಆ ವಿಷಯ ಸ್ವಲ್ಪ ಚರ್ಚಿಸಬೇಕಾಗುತ್ತದೆ. ಫೆರ್ನಾವೋ ನ್ಯೂನಿಜ್ ಕ್ರಿ.ಶ. 1536 ಅಥವಾ ಕ್ರಿ.ಶ. 1537ರ ಸುಮಾರಿಗೆ ವಿಜಯನಗರಕ್ಕೆ ಬಂದು, ತಾನು ಕೇಳಿ ತಿಳಿದುಕೊಂಡದ್ದನ್ನು ಬರೆದವನು. ಆದರೆ, ಮತ್ತೊಬ್ಬ ಪೋರ್ಚುಗೀಸ್ ಯಾತ್ರಿಕ ಪಯಸ್ ಕ್ರಿ.ಶ. 1520ರ ಸುಮಾರಿಗೆ ಅಂದರೆ, ಶ್ರೀ ಕೃಷ್ಣರಾಯನ ಕಾಲದಲ್ಲಿ ಬಂದಿದ್ದವನು. ಪಯಸ್ ತನ್ನ ಬರಹದಲ್ಲಿ ಶ್ರೀ ಕೃಷ್ಣರಾಯನ ವಯಸ್ಸಿನ ವಿಷಯವಾಗಿ ಹೇಳುವುದಿಲ್ಲ.

ಆದ್ದರಿಂದ ಶ್ರೀ ಕೃಷ್ಣರಾಯನ ನಿಧನದನಂತರ ಬಂದ ಫೆರ್ನಾವೋ ನ್ಯೂನಿಜ್ ಕ್ರಿ.ಶ. 1536–37ರಲ್ಲಿ ಬರೆದಿದ್ದು ತಾನು ಬರುವವರೆಗೆ ನಡೆದ ಚರಿತ್ರೆಯನ್ನು ಕೇಳಿ ತಿಳಿದುಕೊಂಡ ಮೇಲೆ ಶ್ರೀ ಕೃಷ್ಣರಾಯ ನಿತ್ಯ ವ್ಯಾಯಾಮದಿಂದ ದೇಹದಾರ್ಢ್ಯವನ್ನು ಇಟ್ಟುಕೊಂಡಿದ್ದನೆಂದ ಮೇಲೆ ಆತನು ಪಟ್ಟಕ್ಕೆ ಬರುವಾಗ ಇರುವ ವಯಸ್ಸಿಗಿಂತ ಚಿಕ್ಕವನಾಗಿ ಕಂಡಿರಬಹುದು. ಆ ನೆನಪು 25 ವರ್ಷಗಳ ನಂತರ ದಂತಕಥೆಯಾಗಿ, ನ್ಯೂನಿಜ್ ಬರೆಯುವ ವೇಳೆಗೆ ಭಾವನಾತ್ಮಕವಾಗಿ ಶ್ರೀ ಕೃಷ್ಣರಾಯನನ್ನು ಹೇಳುವವರು ವರ್ಣಿಸಿರಬಹುದು.

ಈಗ ಮತ್ತೊಂದು ವಿಧದಲ್ಲಿ ಶ್ರೀ ಕೃಷ್ಣರಾಯನ ಜೀವಿತ ಕಾಲವನ್ನು ಚರ್ಚಿಸಬಹುದು.

ಶ್ರೀ ಕೃಷ್ಣರಾಯ ತನ್ನ ಇಬ್ಬರು ಕುಮಾರಿಯರನ್ನು ರಾಮರಾಯ ತಿರುಮಲರಾಯರಿಗೆ ಕೊಟ್ಟು ವಿವಾಹ ಮಾಡುತ್ತಾನೆ. ರಾಮರಾಯ ಕ್ರಿ.ಶ. 1565ರಲ್ಲಿ ತಾಳಿಕೋಟೆ ಯುದ್ಧದಲ್ಲಿ ಯುದ್ಧಮಾಡುವ ಕಾಲಕ್ಕೆ 80 ವರ್ಷದ ಮುದುಕನಾಗಿದ್ದನೆಂದು ಹೇಳಲಾಗಿಯಿದೆ. ಕೌಟೋ ಹೇಳುವ ಪ್ರಕಾರ ರಾಮರಾಯ 96 ವರ್ಷ ಮುದುಕನಾಗಿದ್ದರೂ 30 ವರ್ಷದವನಂತೆ ಧೈರ್ಯಶಾಲಿಯಾಗಿದ್ದನಂತೆ (ಎ ಫರ್‌ಗಾಟನ್ ಎಂಪೈರ್, ಪು. 203) ವಯಸ್ಸು ಖಚಿತವಲ್ಲದಿದ್ದರೂ, ವೃದ್ಧನಾಗಿದ್ದನೆಂಬುದು ಚಾರಿತ್ರಿಕವಾಗಿದೆ. ಆದ್ದರಿಂದ ರಾಮರಾಯನ ವಯಸ್ಸು ತಾಳಿಕೋಟೆ ಯುದ್ಧದ ವೇಳೆಗೆ ಕನಿಷ್ಠ ಪಕ್ಷ ಸುಮಾರು 70–75 ವರ್ಷಗಳಿರಬಹುದೆಂದು ನಾವು ಊಹಿಸಬಹುದು.

ಈಗ ಶ್ರೀ ಕೃಷ್ಣರಾಯ ಪಟ್ಟಕ್ಕೆ ಬಂದಾಗ (ಕ್ರಿ.ಶ. 1509) 20 ವರ್ಷ ಮೇಲ್ಪಟ್ಟು ಮತ್ತು ಅಂದರೆ ಆತ ನಿಧನನಾದಾಗ ಸುಮಾರು 45 ವರ್ಷದ ಒಳಗೆ ಇರಬೇಕು. ಶ್ರೀ ಕೃಷ್ಣರಾಯ ಒಂದು ವೇಳೆ ಕ್ರಿ.ಶ. 1565ರ ವರೆಗೆ ಬದುಕಿದಿದ್ದರೆ ಆತನ ವಯಸ್ಸು ಸುಮಾರು 75 ವರ್ಷದ ಮೇಲೆ ಆಗುತ್ತದೆ. ಅಂದರೆ, ಕ್ರಿ.ಶ. 1567 ಸುಮಾರಿಗೆ ರಾಮರಾಯ ಮತ್ತು ಆತನ ಮಾವನಾದ ಶ್ರೀ ಕೃಷ್ಣದೇವರಾಯನ ವಯಸ್ಸುಗಳು ಬಹುಶಃ ಒಂದೇ ಅಂದರೆ ಐದು ವರ್ಷದ ವ್ಯತ್ಯಾಸದಲ್ಲಿ (same age group) ಆಗುತ್ತದೆ.

ಹಾಗಿದ್ದಾಗ, ಶ್ರೀ ಕೃಷ್ಣರಾಯ ತನ್ನ ಮಗಳನ್ನು ತನ್ನಷ್ಟೇ ಅಥವಾ ಒಂದು ಐದು ವರ್ಷ ಕಡಿಮೆಯಿರುವ ವರನಿಗೆ ಕೊಟ್ಟು ವಿವಾಹಮಾಡುತ್ತಾನೆ, ಅಂತ ಹೇಳುವುದು ಅಸಂಗತವಾಗುತ್ತದೆ. ಸಾಮಾನ್ಯವಾಗಿ ತಂದೆ ಮಗ ಅಥವಾ ಮಾವ, ಅಳಿಯ ಇವರಲ್ಲಿ ಕನಿಷ್ಠ 20 ರಿಂದ 25 ವರ್ಷದ ಅಂತರ ಇರುತ್ತದೆ. ಅಂದರೆ ಶ್ರೀ ಕೃಷ್ಣರಾಯ ಕ್ರಿ.ಶ. 1530ರಲ್ಲಿ

ನಿಧನನಾದಾಗ ಅಳಿಯ ರಾಮರಾಯನಿಗೆ 35 ವರ್ಷ ಅಥವಾ 40 ವರ್ಷ ಇರಬಹುದು ಎಂದರೆ ಖಚಿತವಾಗಿ ಮಾವನಾದ ಶ್ರೀ ಕೃಷ್ಣದೇವರಾಯನಿಗೆ 60-65 ವರ್ಷ ವಯಸ್ಸು ಆಗಿರಬೇಕಾಗುತ್ತದೆ.

ಅದಲ್ಲದೆ, ಶ್ರೀ ಕೃಷ್ಣದೇವರಾಯ ಪಟ್ಟಕ್ಕೆ ಬಂದ ಮೇಲೆ ವಿವಾಹ ಮಾಡಿಕೊಂಡನೆಂದಮೇಲೆ ಆತನ ಇಬ್ಬರು ಪುತ್ರಿಯರು ಕ್ರಿ.ಶ. 1510 ರಿಂದ 1515ರ ಅವಧಿಯಲ್ಲಿ ಜನಿಸಿರಬೇಕು. ತನ್ನ ಮಕ್ಕಳಿಗೆ 15 ವರ್ಷ ಆದ ಮೇಲೆ ಲಗ್ನ ಮಾಡಿದನೆಂದರೆ ಸುಮಾರು ಕ್ರಿ.ಶ. 1525-1530 ಅವಧಿಯಲ್ಲಿ ಲಗ್ನ ಮಾಡಿರಬೇಕು. ಈ ಅವಧಿಯಲ್ಲಿ ರಾಮರಾಯ ತಿರುಮಲರಾಯ ಅವರಿಗೆ 35 ವರ್ಷ ಮೇಲ್ಪಟ್ಟು ಇದ್ದುದರಿಂದ ತನ್ನ ಮಗಳಿಗಿಂತ 20 ವರ್ಷ ದೊಡ್ಡವನಿಗೆ ಕೊಡುವ ಅಗತ್ಯ ಶ್ರೀ ಕೃಷ್ಣದೇವರಾಯನಿಗೆ ಇಲ್ಲ.

ಇನ್ನು ರಾಮರಾಯ ನಾವು ಚರ್ಚಿಸಿದಂತೆ ಕ್ರಿ.ಶ. 1525ರ ವೇಳೆ ನಿಜವಾಗಿಯೂ ವೃದ್ಧನಾಗಿದ್ದನೆ ಇಲ್ಲವೆ ಎನ್ನುವುದು.

ರಾಮರಾಯ ಶ್ರೀ ಕೃಷ್ಣರಾಯನ ಸೇವೆಗೆ ಬರುವುದಕ್ಕೆ ಮೊದಲು ಗೋಲ್ಕೊಂಡ ನವಾಬ ಕುತುಬ್‌ಷಾ ಸೇವೆಯಲ್ಲಿ ಮೂರು ವರ್ಷಯಿದ್ದು ಸರಿಹೋಗದೆ ಬಿಟ್ಟು ವಿಜಯನಗರದ ಸೇವೆಗೆ ಬರುತ್ತಾನೆ. ಅದಲ್ಲದೆ ಶ್ರೀ ಕೃಷ್ಣರಾಯನು, ರಾಮರಾಯ, ತಿರುಮಲರಾಯರನ್ನು ಹಲವು ವರ್ಷಗಳು ನೋಡಿ ಪರೀಕ್ಷಿಸಿ ಯೋಗ್ಯರೆಂದು ತಿಳಿದುಕೊಂಡು ಆಮೇಲೆ, ತನ್ನ ಮಕ್ಕಳನ್ನು ಕೊಟ್ಟನೆಂದುಕೊಂಡರೆ, ರಾಮರಾಯ ಶ್ರೀ ಕೃಷ್ಣರಾಯನ ಆಸ್ಥಾನಕ್ಕೆ ಸುಮಾರು ಕ್ರಿ.ಶ. 1515ರ ಸುಮಾರಿಗೆ ಬಂದಿರಬಹುದು. ಇದಕ್ಕೆ ಮುಂಚೆ ಗೋಲ್ಕೊಂಡಾ ನವಾಬನ ಸೇವೆಯಲ್ಲಿ ಮೂರು ವರ್ಷಯಿದ್ದನೆಂದುಕೊಂಡರೆ ಕ್ರಿ.ಶ. 1510, 1511 ಸುಮಾರಿಗೆ ಗೋಲ್ಕೊಂಡದಲ್ಲಿರಬೇಕು. ನವಾಬನ ಸೇವೆಯಲ್ಲಿ ಸೇರಬೇಕಾಗಿದ್ದರೆ ರಾಮರಾಯನಿಗೆ ಕ್ರಿ.ಶ. 1510, 1511ರ ಸುಮಾರಿಗೆ ಕನಿಷ್ಠ 20 ವರ್ಷಗಳಾದರೂ ಆಗಿರಬೇಕು. ಅಂದರೆ ರಾಮರಾಯ ಕ್ರಿ.ಶ. 1490ರ ಸುಮಾರಿಗೆ ಜನಿಸಿರಬಹುದಾಗಿದ್ದರೆ ಆತನಿಗೆ ಕ್ರಿ.ಶ. 1565ಕ್ಕೆ 75 ವರ್ಷ ವಯಸ್ಸು ಆಗಿ ಚಾರಿತ್ರಿಕವಾಗಿ ತಾಳಿಕೋಟೆ ಯುದ್ಧದ ವೇಳೆಗೆ ವೃದ್ಧನಾಗಿದ್ದನೆಂದು ಹೇಳಿರುವುದು ಸರಿಹೋಗುತ್ತದೆ.

ಅಳಿಯ ರಾಮರಾಯನ ವಯೋಮಿತಿಯ ಆಧಾರದ ಮೇಲೆ ನೋಡಿದರೂ, ಶ್ರೀ ಕೃಷ್ಣರಾಯನಿಗೆ ಕ್ರಿ.ಶ. 1530ರಲ್ಲಿ ನಿಧನನಾದಾಗ ಸುಮಾರು 60-65 ವಯಸ್ಸು ಆಗಿರಬಹುದಾಗಿದೆ ಎಂದು ನಾವು ಊಹಿಸಬಹುದು.

ಈ ಸಂದರ್ಭದಲ್ಲಿ ಮತ್ತೆ ಒಂದು ಪ್ರಶ್ನೆ ಬರುತ್ತದೆ. ಈಗಾಗಲೇ ನಾವು ತಿಳಿದಂತೆ ಶ್ರೀ ಕೃಷ್ಣರಾಯ ಪಟ್ಟಕ್ಕೆ ಬಂದ ಮೇಲೆ ಲಗ್ನವಾಗಿ, ತನ್ನ ಪುತ್ರಿಯರನ್ನು ಅವರಿಗಿಂತ ಸುಮಾರು 20 ವರ್ಷ ಮೇಲ್ಪಟ್ಟು ವಯಸ್ಸು ಆಗಿರಬಹುದಾದ ರಾಮರಾಯ, ತಿರುಮಲರಾಯರಿಗೆ ಲಗ್ನ ಮಾಡಿಕೊಟ್ಟನೆನ್ನುವುದು ಅಸಂಗತವಾಗುತ್ತದೆ. ಅದಲ್ಲದೆ ಶ್ರೀ ಕೃಷ್ಣರಾಯನಿಗೆ ನಿಧನವಾದಾಗ ಸುಮಾರು 40 ವರ್ಷ ವಯಸ್ಸು ಆಗಿರಬೇಕು. ಅಂದರೆ ಆತನು ಪಟ್ಟಕ್ಕೆ ಬರುವ ವೇಳೆಗೆ ಲಗ್ನವಾಗಿ ಇಬ್ಬರು ಪುತ್ರಿಯರನ್ನು ಪಡೆದಿರಬೇಕು. ಅಂದರೆ ಅವರು ಕ್ರಿ.ಶ. 1495-1500ರ ಅವಧಿಯಲ್ಲಿ ಜನಿಸಿರಬಹುದಾಗಿದೆ. ರಾಮರಾಯ ಗೋಲ್ಕೊಂಡ ನವಾಬನ ಸೇವೆ ಮುಗಿಸಿ, ವಿಜಯನಗರ ಸೇವೆಗೆ ಬಂದು, ಆತನ ಯೋಗ್ಯತೆಗಳನ್ನು ಗಮನಿಸುವ ವೇಳೆಗೆ ಶ್ರೀ ಕೃಷ್ಣರಾಯ ಪಟ್ಟಕ್ಕೆ ಬಂದು ಸ್ವಲ್ಪ ವರ್ಷಗಳಾಗಿರಬಹುದಲ್ಲದೆ ಆತನ ಪುತ್ರಿಯರಿಗೆ 15 ಅಥವಾ 20 ವರ್ಷಗಳ ಒಳಗೆ ಇದ್ದು, ಆ ವೇಳೆಗೆ ರಾಮರಾಯ, ತಿರುಮಲರಾಯ ಅವರಿಗೆ 20 ಅಥವಾ 25 ವರ್ಷಗಳಾಗಿ, ವಯಸ್ಸಿನ ವ್ಯತ್ಯಾಸ ಉಂಟಾಗುವುದಿಲ್ಲ.

ರಾಬರ್ಟ್ ಸ್ಯೂಯೆಲ್ ತನ್ನ 'ಎ ಫರ್‌ಗಾಟನ್ ಎಂಪೈರ್' *(A Forgotten Empire)*ನಲ್ಲಿ ಹೇಳುವಂತೆ ಶ್ರೀ ಕೃಷ್ಣರಾಯನ ಮಗ ತಿರುಮಲರಾಯ ರಾಯಚೂರು ದಿಗ್ವಿಜಯ ಆದ ಮೇಲೆ ಅಂದರೆ ಕ್ರಿ.ಶ. 1520, ತರುವಾಯ ತನ್ನ ಚಿಕ್ಕ ವಯಸ್ಸಿನಲ್ಲಿ ವಿಷಪ್ರಾಶನದಿಂದ ಮರಣಿಸಿದ. ತದನಂತರ ಶ್ರೀ ಕೃಷ್ಣರಾಯ ಬಹುಕಾಲ ಬದುಕಲಿಲ್ಲ ಎಂದು ಹೇಳಲಾಗಿದೆ. ಈ ಮಗನ ಮರಣ ಕ್ರಿ.ಶ. 1524ರ ಸುಮಾರಿಗೆ ಸಂಭವಿಸಬಹುದಾಗಿದೆ.

ಶ್ರೀ ಕೃಷ್ಣರಾಯ ಕ್ರಿ.ಶ. 1530ರಲ್ಲಿ ನಿಧನವಾಗಿರುವುದೆನ್ನುವುದಕ್ಕೆ ಕೂಡ ಕೆಲವು ತೊಡಕುಗಳಿವೆ. ಕ್ರಿ.ಶ. 1525ರ ಸುಮಾರಿಗೆ ಶ್ರೀ ಕೃಷ್ಣರಾಯನು ನಿಧನನಾಗಿರಬಹುದೆನ್ನುವುದಕ್ಕೆ ಕೆಲವು ಶಾಸನಗಳಿವೆ ಮತ್ತು ತೆಲುಗು ಭಾಷೆಯಲ್ಲಿ ಚಾಟು ಪದ್ಯಗಳಿವೆ (ಜಾನಪದ ಗೀತೆಗಳು ಎನ್ನೋ ಹಾಗೆ). ಸಾಮ್ರಾಜ್ಯದ ಕೆಲವು ಸ್ಥಳೀಯ ಅಧಿಕಾರಗಳು ಕೊಟ್ಟ ದಾನಪತ್ರ ವಿವರಗಳಿವೆ.

ಕ್ರಿ.ಶ. 1525 ಸಂವತ್ಸರದಲ್ಲಿ (ತಾರಣ ನಾಮ ಸಂವತ್ಸರ) ಶ್ರೀ ಕೃಷ್ಣರಾಯನ ಪುತ್ರನಾದ ತಿರುಮಲರಾಯ ರಾಜ್ಯ ಮಾಡುತ್ತಿರುವನೆಂದು ಒಂದು ಕನ್ನಡ ಶಾಸನವಿದೆ. ಇದೇ ರೀತಿ ಕ್ರಿ.ಶ. 1525 ರಿಂದ 1530ರ ಅವಧಿಗೆ ಅಳಿಯ ರಾಮರಾಯ ಮತ್ತು ಅಚ್ಯುತದೇವರಾಯ ಅವರು ತಾವು ವಿಜಯನಗರ ಸಾಮ್ರಾಜ್ಯಾಧೀಶ್ವರರಾಗಿರುವರೆಂದು ಹೇಳುವ ಕೆಲವು ಶಾಸನಗಳಿವೆ.

ಆದರೆ ಇದೇ ಅವಧಿಯಲ್ಲಿ ಶ್ರೀ ಕೃಷ್ಣರಾಯನ ಅನೇಕ ಶಾಸನಗಳು ಸಿಗುತ್ತವೆ.

ಈ ಗೊಂದಲಕ್ಕೆ ತೆಲುಗು ಭಾಷೆಯಲ್ಲಿ ಖ್ಯಾತ ಸಾಹಿತಿ, ಸಂಶೋಧಕರಾಗಿದ್ದ ಕೀ.ಶೇ. ಕೊಮರ್ರಾಜು ವೆಂಕಟಲಕ್ಷ್ಮಣರಾವು ಅವರು ತಮ್ಮದೇ ಆದ ವಿವರಣೆ ಕೊಡುತ್ತಾರೆ. ಅವರ ಪ್ರಕಾರ ಶ್ರೀ ಕೃಷ್ಣರಾಯ ಕ್ರಿ.ಶ. 1525ರಲ್ಲಿ ನಿಧನನಾಗಿರಬಹುದೆಂದು ತದನಂತರ, ಆತನ ಮಗ ತಿರುಮಲರಾಯ, ಅಳಿಯ ರಾಮರಾಯ ಮತ್ತು ಮಲಸಹೋದರ ಅಚ್ಯುತರಾಯ, ವಿಜಯನಗರ, ಸಿಂಹಾಸನಾರೂಢರಾಗಲು ಪ್ರಯತ್ನಿಸಿದರೆಂದು ತಮಗೆ ಅನುಕೂಲವಾದಾಗಲೆಲ್ಲಾ ತಮ್ಮ ಹೆಸರಿನಲ್ಲಿ ಶಾಸನಗಳು ಹಾಕಿಸುತ್ತಿದ್ದರೆಂದು ಈ ಐದು ವರ್ಷದ ಅವಧಿಯಲ್ಲಿ ಯಾರ ಅಧಿಕಾರವು ಸುಸ್ಥಿರವಾಗಿ ನಿಲ್ಲಲಿಲ್ಲವೆಂದು ತೋಚುತ್ತದೆ ಎಂದು ಬರೆಯುತ್ತಾರೆ. ರಾಬರ್ಟ್ ಸ್ಯೂಯೆಲ್ ಅವರು ತಮ್ಮ 'ಎ ಫರ್‌ಗಾಟನ್ ಎಂಪೈರ್' ಗ್ರಂಥವನ್ನು ಬರೆಯುವ ಕಾಲಕ್ಕೆ ತಿರುಮಲರಾಯ, ಅಳಿಯ ರಾಮರಾಯ, ಅಚ್ಯುತರಾಯರ ಶಾಸನಗಳು ಈ ಅವಧಿಗೆ ಸಂಬಂಧಿಸಿದವು, ಬೆಳಕಿಗೆ ಬಂದಿರಲಿಕ್ಕಿಲ್ಲವಾದ್ದರಿಂದ, ರಾಬರ್ಟ್ ಸ್ಯೂಯೆಲ್ ಶ್ರೀ ಕೃಷ್ಣರಾಯ ಕ್ರಿ.ಶ. 1530ರ ವರೆಗೆ ಜೀವಿಸಿದ್ದನೆಂದು ಬರೆದಿರಬಹುದೇನೋ ಎಂದೂ ಹೇಳುತ್ತಾರೆ.

ಇನ್ನೊಂದು ಅಭಿಪ್ರಾಯದಂತೆ, ಶ್ರೀ ಕೃಷ್ಣರಾಯ ಕ್ರಿ.ಶ. 1525ರಲ್ಲಿ ನಿಧನನಾಗಿರಬಹುದೆಂದು ತರುವಾಯ ಆತನ ಮಗ ಅಳಿಯ ಮತ್ತು ಮಲತಮ್ಮಂದಿರ ನಡುವೆ ಸಿಂಹಾಸನಕ್ಕಾಗಿ ನಡೆಯುತ್ತಿದ್ದ ಹೋರಾಟದ ಅವಧಿಯಲ್ಲಿ ಈ ಮೂರು ಕಡೆ ಇಲ್ಲದೆ ತಟಸ್ಥರಾಗಿದ್ದ ಸಾಮ್ರಾಜ್ಯದ ಕೆಲವು ಅಧಿಕಾರಿಗಳು ಗತಿಸಿದ ತಮ್ಮ ಪ್ರೀತಿಯ ಚಕ್ರವರ್ತಿ ಶ್ರೀ ಕೃಷ್ಣದೇವರಾಯನ ಹೆಸರಿನಲ್ಲೇ ಶಾಸನಗಳನ್ನು ಹೋರಾಟ ನಿಲ್ಲುವವರೆಗೆ ಹಾಕಿಸಿರಬಹುದು.

ಶ್ರೀ ಕೃಷ್ಣರಾಯನು ತನ್ನ ಮಗ ತಿರುಮಲರಾಯ ಕ್ರಿ.ಶ. 1524ರ ಸುಮಾರು ಎಂಟು ವರ್ಷದ ಚಿಕ್ಕ ವಯಸ್ಸಿನಲ್ಲೇ ವಿಷಪ್ರಾಶನದಿಂದ ಮರಣಿಸಿದ್ದರಿಂದ, ಮಹಾಮಂತ್ರಿ ತಿಮ್ಮರಸು ಆತನ ಮಕ್ಕಳ ಮೇಲೆ ಸಂಶಯಗೊಂಡು ಅವರನ್ನು ಶಿಕ್ಷಿಸಿದನೆಂದು ಆ ದುಃಖದಲ್ಲಿ ತದನಂತರ ನಿಧನನಾದನೆಂದು ಇದುವರೆಗೆ ಲಿಖಿತವಾದ ಚರಿತ್ರೆ. ಆದರೆ ಕ್ರಿ.ಶ. 1525ರಲ್ಲಿ ಶ್ರೀ ಕೃಷ್ಣರಾಯನ ಮಗ ತಿರುಮಲನ ಶಾಸನವಿರುವುದರಿಂದ ತಿರುಮಲ ವಿಷಪ್ರಾಶನದಿಂದ ಮರಣಿಸಲಿಲ್ಲವೇ? ವಿಷಪ್ರಾಶನ ಮಾಡಿಸಿ ಹತ್ಯೆ ಮಾಡಲಿಕ್ಕೆ ಪ್ರಯತ್ನಪಟ್ಟದ್ದು, ಅಪರಾಧವಾಗಿದ್ದರಿಂದ, ತಿಮ್ಮರಸು ಮಂತ್ರಿ ಮಕ್ಕಳ ಮೇಲೆ ವಿರೋಧಿಗಳ ಪಿತೂರಿಯಿಂದ ಶ್ರೀ ಕೃಷ್ಣರಾಯ ಸಂಶಯಗೊಂಡು ಅವರನ್ನು ಶಿಕ್ಷಿಸಿರಬಹುದು ಮತ್ತು ತದನಂತರ ಪಶ್ಚಾತ್ತಾಪಪಟ್ಟು, ಆ ದುಃಖದಲ್ಲಿ ಶೀಘ್ರವೇ ನಿಧನನಾಗಿರಬಹುದು. ತನ್ನ ಜೀವಿತ ಕಾಲದಲ್ಲೇ ಶ್ರೀ ಕೃಷ್ಣರಾಯ ತನ್ನ ಮಗ ತಿರುಮಲರಾಯನಿಗೆ ಪಟ್ಟ ಕಟ್ಟಿದ್ದರಿಂದ ಶ್ರೀ ಕೃಷ್ಣರಾಯನ ನಿಧನಾನಂತರ ಇನ್ನೂ ಚಿಕ್ಕವನಿದ್ದ ತಿರುಮಲರಾಯ, ಆತನ ಭಾವ, ಅಳಿಯ ರಾಮರಾಯ ಮತ್ತು ಮಲಚಿಕ್ಕಪ್ಪ ಅಚ್ಯುತರಾಯ ಸಿಂಹಾಸನಕ್ಕಾಗಿ ಹೋರಾಟ ನಡೆಸಿರಬಹುದೆ? ಕಡೆಗೆ ಈ ಹೋರಾಟದಲ್ಲಿ ತಿರುಮಲರಾಯ ಆತನ ಸಮರ್ಥಕರು ಹಿಂದೆಬಿದ್ದು ಅಥವಾ ಮರಣಿಸಿದ್ದು, ಆ ಸಮಯದಲ್ಲಿ ಜನರ ಅಭಿಪ್ರಾಯ

ಗಮನಿಸಿ, ಅಚ್ಯುತರಾಯನ ಪರವಾಗಿ ರಾಮರಾಯ ಸಂಧಿ ಮಾಡಿಕೊಂಡಿರಬಹುದೆ? ವಿಷಪ್ರಾಶನದ ಅಪಾಯದಿಂದ ಪಾರಾಗಿ, ತಿರುಮಲ ಉಳಿದಿದ್ದಿರಬಹುದಾದರೂ ಹೇಗೆ?

ಇದಲ್ಲದೆ ಶ್ರೀ ಕೃಷ್ಣದೇವರಾಯನ ನಿಧನ ಕಾಲಕ್ಕೆ ಆತನ 18 ತಿಂಗಳ ಮಗು ಗೋವಿಂದರಾಜು ಬದುಕಿದ್ದನೆಂದು ಆ ಮಗುವನ್ನು ಹುಚ್ಚುತಿರುಮಲ ಕೊಂದನೆಂದು ಹೇಳಲ್ಪಟ್ಟಿದೆ. ಬಹುಶಃ ಸಿಂಹಾಸನಕ್ಕಾಗಿ ನಡೆದ ಹೋರಾಟದಲ್ಲಿ ತಿರುಮಲರಾಯ ಹಿಂದೆ ಬಿದ್ದ ಅಥವಾ ಮರಣಿಸಿದ ಮೇಲೆ, ಹುಚ್ಚುತಿರುಮಲ ಗೋವಿಂದರಾಜನ ಪಕ್ಷ ವಹಿಸಿ, ಹೋರಾಟಕ್ಕಿಳಿದು ಕೊನೆಗೆ ಸೋತು, ಮಗುವನ್ನು ಹತ್ಯೆಗೈದು ತಾನು ಮರಣಿಸಿರಬಹುದು.

ಶ್ರೀ ಕೃಷ್ಣರಾಯ ನಿಧನನಾಗುವ ಸಮಯದಲ್ಲಿ ಅಚ್ಯುತರಾಯನಿಗೆ ಪಟ್ಟ ಕಟ್ಟಿದರೆಂದು ಹೇಳಿದ್ದನೆಂದು, ಆದುದರಿಂದಲೇ ಅಚ್ಯುತರಾಯ ಪಟ್ಟಕ್ಕೆ ಬಂದನೆಂದು ಈಗ ತಿಳಿದಿರುವ ಚರಿತ್ರೆಯಿದೆ. ಆದರೆ ಮೇಲೆ ಚರ್ಚಿಸಿದ ಅಂಶಗಳ ದೃಷ್ಟಿಯಿಂದ ಕೂಡ ಇದನ್ನು ವಿವೇಚಿಸಬೇಕಾಗಿದೆ. ಸಿಂಹಾಸನಕ್ಕಾಗಿ ಹೋರಾಟ ನಡೆಸಿ, ಆಮೇಲೆ ಅಧಿಷ್ಠಿಸಿದ ಅಚ್ಯುತರಾಯ ಕೊನೆಗೆ ಸಮರ್ಥಿಸಿದ ಅಳಿಯರಾಮರಾಯ, ಮೇಲೆ ಹೇಳಿದಂತೆ ಪ್ರಚಾರ ಮಾಡಿಸಿರಬಹುದೇನೋ ಎನ್ನುವ ವಿಷಯ ಪರಿಶೋಧಿಸಬೇಕಾಗಬಹುದು.

ಈ ಎಲ್ಲ ವಿಷಯಗಳಲ್ಲಿರುವ ಗೊಂದಲ, ವ್ಯತ್ಯಾಸವನ್ನು ನೋಡಿದಾಗ ಈ ಕೆಳಗಿನ ಅಂಶಗಳಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ, ಚರ್ಚೆ ಅಗತ್ಯವಾಗಿದೆ ಏನೋ ಎಂದು ಅನಿಸುತ್ತದೆ ಹಾಗು ಆ ಸಮಸ್ಯೆಗಳಿಗೆ ಉತ್ತರ ಬೇಕೆನಿಸುತ್ತದೆ:

1. ಶ್ರೀ ಕೃಷ್ಣರಾಯನ ಜೀವನದ ಅವಧಿ ಮತ್ತು ಪಟ್ಟಕ್ಕೆ ಬರುವಾಗ ಹಾಗು ನಿಧನನಾದಾಗ ಆಗಿದ್ದ ವಯಸ್ಸು.
2. ಶ್ರೀ ಕೃಷ್ಣರಾಯನ ಅಳಿಯ ರಾಮರಾಯನ ವಯಸ್ಸು ತಾಳಿಕೋಟೆ ಯುದ್ಧಸಮಯಕ್ಕೆ.
3. ಶ್ರೀ ಕೃಷ್ಣರಾಯ ಅಳಿಯ ರಾಮರಾಯನ ವಯೋಮಿತಿಗಳು : ಮಾವ–ಅಳಿಯಂದಿರ ಸಂಬಂಧ ದೃಷ್ಟಿಯಿಂದ.
4. ಶ್ರೀ ಕೃಷ್ಣರಾಯ ಕ್ರಿ.ಶ. 1525ರಲ್ಲಿ ಅಥವಾ ಕ್ರಿ.ಶ. 1530ರಲ್ಲಿ ನಿಧನನಾಗಿದ್ದನೇ?
5. ಶ್ರೀ ಕೃಷ್ಣರಾಯನ ಮಗ ತಿರುಮಲ ವಿಷಪ್ರಾಶನದಿಂದ ಮರಣಿಸಿದನೇ ಅಥವಾ ಬದುಕಿ ಉಳಿದಿದ್ದು, ಶ್ರೀ ಕೃಷ್ಣರಾಯನ ತರುವಾಯ ನಡೆದ ಸಿಂಹಾಸನದ ಹೋರಾಟದಲ್ಲಿ ಮರಣಿಸಿದನೆ?
6. ವೀರಭುಜಬಲರಾಯ ಅಥವಾ ವೀರನರಸಿಂಹರಾಯ ಕ್ರಿ.ಶ. 1509ರಲ್ಲಿ ಮರಣಿಸಿದಾಗ ಆತನ ವಯಸ್ಸು.
7. ಶ್ರೀ ಕೃಷ್ಣರಾಯನ ಜನನ ಕ್ರಿ.ಶ. 1489 ಅಥವಾ ಕ್ರಿ.ಶ. 1465–70ರಲ್ಲಿ ಆಯಿತೆನ್ನುವುದು.
8. ಶ್ರೀ ಕೃಷ್ಣರಾಯನ ನಂತರ ಬದುಕುಳಿದ 18 ತಿಂಗಳ ಮಗು ಗೋವಿಂದರಾಜ ನಿಜವಾಗಿ ಹುಚ್ಚು ತಿರುಮಲನಿಂದ ಹತನಾದನೇ?

ಆಧಾರ ಸೂಚಿ

1. ರಾಬರ್ಟ್ ಸ್ಯೂಯೆಲ್, *ಎ ಫರ್‌ಗಾಟನ್ ಎಂಪೈರ್.*
2. ಶಿವಾನಂದ ಗುಬ್ಬಣ್ಣವರ, *ಕ್ಷಮಾಪತಿ ರಾಮರಾಯ.*
3. ಎ.ಎಸ್. ನಂಜುಂಡಸ್ವಾಮಿ, *ವಿಜಯನಗರ ಇತಿಹಾಸ.*
4. ಅ.ನ.ಕೃ., *ಅಭಯ ಪ್ರಧಾನ.*
5. ನೂತಲಪಾಟಿ ಪೇರರಾಜು, *ವಿಜಯನಗರ ಚರಿತ್ರಮು,* (ತೆಲುಗು)
6. ಕೀ.ಶೇ. ಕೋಮರ್ರಾಜು, ವೆಂಕಟ ಲಕ್ಷ್ಮಣರಾವು, ಲಕ್ಷ್ಮಣರಾವು ವ್ಯಾಸಾವಳಿ (ತೆಲುಗು) (ಪ್ರಥಮ ಸಂಪುಟಮು).

16

ವಿಜಯನಗರದ ನಿರ್ಣಾಯಕ ಯುದ್ಧದಲ್ಲಿ ರಾಮರಾಯನನ್ನು ಕೊಂದವರು ಯಾರು?

ಡಾ॥ ಕೃಷ್ಣ ಕೊಲ್ಹಾರ ಕುಲಕರ್ಣಿ

ಮಧ್ಯಯುಗೀನ ದಕ್ಷಿಣ ಭಾರತದಲ್ಲಿ ಶಾಹಿಬಾದಶಹರ ಒಕ್ಕೂಟ ಹಾಗೂ ವಿಜಯನಗರದ ಮಧ್ಯ ಕ್ರಿ.ಶ. 1565ರಲ್ಲಿ ನಡೆದ ನಿರ್ಣಾಯಕ ಕಾಳಗದಲ್ಲಿ ರಾಮರಾಯನು ಸತ್ತು ವಿಜಯನಗರ ಸೈನ್ಯವು ಸೋತು ಓಡಿಹೋಯಿತು. ನಿರ್ಣಾಯಕ ಕಾಳಗ ನಡೆದು 435 ವರುಷಗಳಷ್ಟು ಗತಿಸಿದ್ದರೂ ಕಾಳಗದ ಕುರಿತಾದ ಕೆಲವು ವಿಷಯಗಳು ಇಂದಿಗೂ ಸ್ಪಷ್ಟವಾಗಿಲ್ಲ. ಅವುಗಳಲ್ಲಿ

1. ನಿರ್ಣಾಯಕ ಯುದ್ಧ ನಡೆದ ಸ್ಥಳ
2. ರಾಮರಾಯ ಸತ್ತ ಬಗೆ
3. ರಾಮರಾಯ ಸತ್ತ ನಿಶ್ಚಿತ ದಿನ

– ಇವನ್ನು ಖಚಿತವಾಗಿ ನಿರ್ಧರಿಸುವುದಾಗಿಲ್ಲ ಎಂಬುದು ವಿಶೇಷವಾಗಿದೆ.

ಯುದ್ಧ ನಡೆದ ಸ್ಥಳದ ಕುರಿತು ಹೇಳುವಾಗ ಇದನ್ನು ತಾಳಿಕೋಟೆ ಕಾಳಗ, ರಕ್ಕಸಗಿ–ತಂಗಡಗಿ ಕಾಳಗ, ಬನ್ನಿಹಟ್ಟಿ ಕಾಳಗ, ಕೃಷ್ಣಾ ಕಾಳಗ, ಬಯಾಪುರ – ಭೋಗಾಪುರ ಕಾಳಗ ಇತ್ಯಾದಿಯಾಗಿ ಹಲವಾರು ವಿದ್ವಾಂಸರು ಗುರುತಿಸಿದ್ದಾರೆ.

ರಾಮರಾಯ ಸತ್ತ ಬಗೆಯನ್ನು ಹೇಳುತ್ತ ಅವನನ್ನು

* ಬಿಜಾಪುರದ ಆಲಿ ಅದಿಲಶಹನು ಕೊಂದನು.
* ಅಹ್ಮದನಗರದ ಹುಸೇನ ನಿಜಾಮಶಹನು ಕೊಂದನು.
* ಕಾಳಗದಲ್ಲಿ ತೋಫಿನ ಬಾಯಿಗೆ ಬಲಿಯಾದನು.
* ಆನೆಯ ಕಾಲಿಗೆ ಸಿಕ್ಕು ಸತ್ತನು. ಸತ್ತವನ ಶಿರಚ್ಛೇದನ ಮಾಡಿ ಪ್ರದರ್ಶಿಸಿದರು.
* ಅವನ ಶಿರವನ್ನು ಕಾಶಿಗೆ ಕಳಿಸಲಾಯಿತು.

– ಇತ್ಯಾದಿಯಾಗಿ ಅನೇಕ ವಿದ್ವಾಂಸರು ಸಮಕಾಲೀನ ಆಕರಗಳನ್ನು ಆಧರಿಸಿ ಹೇಳಿದ್ದಾರೆ. ಅದರಂತೆ ಆತ ಮಡಿದ ದಿನವೂ 5 ಜನವರಿ, 23 ಜನವರಿ, 26 ಜನವರಿ 1565 ಎಂದು ನಮೂದಿಸಲಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ರಾಮರಾಯನ ಮರಣದ ಕುರಿತು ಉಪಲಬ್ಧವಿದ್ದ ವಿವರಗಳನ್ನು ಚರ್ಚಿಸುತ್ತ, ರಾಮರಾಯನನ್ನು ಖಚಿತವಾಗಿ ಯಾರು ಕೊಂದಿರಬಹುದು ಎಂಬುದರ ಬಗ್ಗೆ ಸಂಭಾವ್ಯತೆಗಳನ್ನು ಕಂಡುಹಿಡಿಯಲು ಪ್ರಯತ್ನಿಸಲಾಗಿದೆ. ಅದಕ್ಕಾಗಿ ಕನ್ನಡ, ಪರ್ಶಿಯನ್, ಉರ್ದು, ಮರಾಠಿ ಹಾಗು ಇಂಗ್ಲೀಷ್ ಭಾಷೆಗಳಲ್ಲಿ ಉಪಲಬ್ಧವಿದ್ದ ಮೂಲ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಜೊತೆಗೆ ಇವುಗಳನ್ನು ಆಧರಿಸಿ ನಿರ್ಧರಿಸಿದ ಇತ್ತೀಚಿನ ವಿದ್ವಾಂಸರ ಲೇಖನಗಳನ್ನೂ ಗಮನಿಸಲಾಗಿದೆ, ಇವುಗಳಲ್ಲಿ ಸ್ಕಾಟ್, ಬ್ರಿಗ್ಸ, ರಾಬರ್ಟ್ ಸಿವೆಲ್, ಡಾ॥ ಆರ್. ಸುಬ್ರಮಣ್ಯಂ, ಪ್ರೊ॥ ನೀಲಕಂಠಶಾಸ್ತ್ರಿ, ಪ್ರೊ॥ ಎಚ್.ಕೆ. ಶೇರವಾನಿ, ಪ್ರೊ॥ ಪಿ.ಎಂ. ಜೋಶಿ, ಡಾ॥ ರಾಧೇಶ್ಯಾಮ ಪ್ರಮುಖರು. ಇವುಗಳ ವ್ಯತಿರಿಕ್ತ ಇನ್ನು ಕೆಲವು ಆಕರಗಳೂ ಇರಲೂ ಸಾಧ್ಯವಿದೆ.

1. ಕನ್ನಡದಲ್ಲಿ ಬಹುಮುಖ್ಯರಾದ ಆಕರ, 'ರಾಮರಾಯನ ಬಖೈರು'. ಇದನ್ನು ಬರೆದವನು ವಿಜಯನಗರದ ರಾಮರಾಯನ ಸನ್ನಿಧಿಯಲ್ಲೆ ಇದ್ದವನು ಎಂದು ಪ್ರಾರಂಭದಲ್ಲಿಯೆ ಹೇಳಿಕೊಂಡಿದ್ದಾನೆ. ಬಖೈರಿನಲ್ಲಿ ರಾಮರಾಯನ ಮರಣದ ಕುರಿತು ಹೀಗೆ ಹೇಳಲಾಗಿದೆ:

> *"ನಾಲ್ಕೂ ಪಾದುಶಹರ ಸೈನ್ಯ ಹಿಂದೂ ಸೈನ್ಯವನ್ನಾವರಿಸಿತು. ಠಾಣ್ಯವೆಲ್ಲ ಲೂಟಿಯಾಗಿ ಹೋಯಿತು.... ಈ ಮಧ್ಯ ರಾಜ ಭೂವರರು ಆದಿಲಶಾಹಿಯನ್ನು ಕುರಿತು ಹೇಳಿದ್ದು 'ನೀನು ನನ್ನ ಮಗನಾಗಿ ಈ ಪ್ರಕಾರ ನಡೆಯುವುದು ಯುಕ್ತವಲ್ಲ... ಮಗನಾದುದಕ್ಕೆ ನನಗೊಂದು ಉಪಕಾರವನ್ನು ಮಾಡು. ನನ್ನನ್ನು ವೈರಿ ಕೈಗೆ ಕೊಟ್ಟು ತಲೆ ಹೊಯಿಸಬೇಡ. ನೀನೆ ನನ್ನನ್ನು ಫಿರಂಗಿಯಿಂದ ಹೊಡೆದು ಕೊಲ್ಲು....' ಆದಿಲಷಹನು ಕೊಂಚ ನಿಧಾನಿಸಿ ತರುವಾಯ ತಾನೆ ಫಿರಂಗಿಯನ್ನು ಹಾರಿಸಿ ರಾಜ ಭೂವರರ ತಲೆಯನ್ನು ಹೊಂಲಿದನು."*[1]

2. ಕಾಳಗ ಸಂಭವಿಸಿದ ಅನಂತರ ಸುಮಾರು ಎರಡು ನೂರು ವರುಷಗಳ ಅನಂತರ ಕೆಳದಿಯ ನಾಯಕರಲ್ಲಿ ಆಸ್ಥಾನ ಕವಿಯಾಗಿದ್ದ ಲಿಂಗಣ್ಣ ಕವಿಯು ತನ್ನ 'ಕೆಳದಿ ನೃಪವಿಜಯ' ಎಂಬ ಚಂಪೂ ಕಾವ್ಯದಲ್ಲಿ ಯುದ್ಧದ ವಿವರಗಳನ್ನು ಹೇಳುತ್ತ.

> *'ಬಳಿಕ್ಕಂ ವಿಜಾಪುರದ ಆದಿಲಷಹನ ಸಂಚಿನ ಮೇಲಾ*
> *ಬಾದಶಹರೊಂದಾಗಿ ಮೋಸದ ಮೇಲೆ ರಾಮರಾಯರಂ*
> *ಪಿಡಿದು ಶಿರಚ್ಛೇದನಂ ಗೈದು, ಆ ಶಿರಮಂ ಕಾಶಿಗೆ ಕಳುಹಿ...'*

ಎಂದು ಮುಂತಾಗಿ ಹೇಳಿದ್ದಾನೆ.

3. ಅಹಮದನಗರದ ಹುಸೇನ ನಿಜಾಮಶಹನ (ಕ್ರಿ.ಶ. 1557–1565) ಆಸ್ಥಾನ ಕವಿ 'ಆಫಾತಾಬ'ನು ಹುಸೇನನ ಆಪ್ತಮಿತ್ರನಾಗಿದ್ದನು. ಯುದ್ಧವನ್ನು ಕಣ್ಣಾರೆ ಕಂಡವನು. ತನ್ನ ಆಶ್ರಯದಾತನ ಕುರಿತು ಬರೆದ ಪರ್ಶಿಯನ್ ಕಾವ್ಯ '*ತಾರೀಫ–ಎ–ಹುಸೇನಶಾಹ ಬಾದಶಾಹ ದಖನ*' ಬಹು ಪ್ರಸಿದ್ಧ ಕೃತಿ. ಅದರಲ್ಲಿ ರಾಮರಾಯನ ಕೊನೆಯ ಬಗ್ಗೆ ಎರಡು ದ್ವಿಪಂಕ್ತಿಗಳು ಬಂದಿವೆ. ಅವು ಹೀಗಿವೆ.[3]

ದ್ವಿಪದಿ ಸಂಖ್ಯೆ 313: 'ರಾಮರಾಜನು ಭಲ್ಲೆಯಿಂದ ಗಾಯಗೊಂಡನು. ಆತನ ತಲೆ ಭೂಮಿಗೆ ಬಡಿದು ಕಿರೀಟವು ಕೆಳಗೆ ಬಿದ್ದಿತು.'

ದ್ವಿಪದಿ ಸಂಖ್ಯೆ 316: 'ಬಾದಶಹನು ಒಬ್ಬನಿಗೆ ಬೆರಳೆತ್ತಿ ಸೂಚಿಸಿದಾಗ, ಆತನು ತಲೆಯನ್ನು ಬೇರ್ಪಡಿಸಿ ಒಣ ಹುಲ್ಲಿನಲ್ಲಿ ತುಂಬಿದರು.'

4. ನಿಜಾಮಶಹನ ಆಸ್ಥಾನದಲ್ಲಿಯೇ ಇದ್ದ ಇನ್ನೊಬ್ಬ ಕವಿ 'ಅಲಿ ತಾಬಾತಾಬಾ' ಎಂಬವನು 'ಬುರ್ಹಾನ-ಇ-ಮಾಸಿರ್' ಎಂಬ ಚರಿತ್ರಗ್ರಂಥವನ್ನು ಬರೆದಿದ್ದಾನೆ. ಪ್ರಸ್ತುತ ಘಟನೆ ಸಂಭವಿಸಿದ ಕೆಲವೇ ಕಾಲದಲ್ಲಿ ಬರೆದ ಈ ಕೃತಿಯಲ್ಲಿ ಹೀಗೆ ಹೇಳಲಾಗಿದೆ.[4]

> *'ಯುದ್ಧದ ಮಧ್ಯದಲ್ಲಿ ನಿಜಾಮಶಹನ ಆನೆಯೊಂದು ರಾಮರಾಜನನ್ನು ಹಿಡಿಯಿತು. ರಾಮರಾಜನು ಭಲ್ಲೆಯಿಂದ ಗಾಯಗೊಂಡು ಕೆಳಗೆ ಬಿದ್ದನು. ಅಲಿ ಆದಿಲಶಹ ಬರುವ ಮೊದಲು ಆತನ ತಲೆಯನ್ನು ಕತ್ತರಿಸಲು ನಿಜಾಮಶಹನು ಆಜ್ಞೆ ಮಾಡಿದನು. ತಕ್ಷಣ ಆತನ ತಲೆಯನ್ನು ಕತ್ತರಿಸಿ ನಿಜಾಮ ಶಹನ ಕಾಲಡಿಯಲ್ಲಿ ಇಟ್ಟರು. ಅನಂತರ ಅದನ್ನು ಯುದ್ಧಭೂಮಿಯಲ್ಲಿ ಪ್ರದರ್ಶಿಸಲಾಯಿತು.'*

5. ಸಮಕಾಲೀನ ಪಾಶ್ಚಿಮಾತ್ಯ ವಿದ್ವಾಂಸ ಕೌಟೋ ಕೂಡ,

> *"ನಿಜಾಮಶಹನು, 'ಈಗ ನಿನ್ನ ಮೇಲೆ ಸೇಡು ತೀರಿಸಿಕೊಂಡೆ. ದೇವರು ನನಗೆ ಏನು ಬೇಕಾದರೂ ಮಾಡಲಿ' ಎಂದು ಉದ್ಗರಿಸುತ್ತ ತನ್ನ ಕೈಯಿಂದಲೇ ತನ್ನ ವೈರಿಯ ತಲೆ ಕಡಿದನು"*

ಎಂದು ಹೇಳುತ್ತಾನೆ.[5]

6. ಮಹ್ಮದ ಕಾಶಿಮ ಫಿರಿಶ್ತಾನನ 'ಭಾರತೀಯ ಮುಸಲ್ಮಾನರ ಚರತ್ರೆ', ಒಂದು ಸುಪ್ರಸಿದ್ಧ ಗ್ರಂಥ. ವಿಜಾಪುರದ ಎರಡನೆಯ ಇಬ್ರಾಹಿಮ ಆದಿಲಶಹನ ಆಸ್ಥಾನದಲ್ಲಿದ್ದು ಘಟನೆ ಸಂಭವಿಸಿದ 30 ವರುಷಗಳ ಅನಂತರ ಬರೆದ ಗ್ರಂಥ. ಇದರಲ್ಲಿ ನಿರ್ಣಾಯಕ ಕಾಳಗದ ಕುರಿತು ವಿಸ್ತಾರವಾಗಿ ಕಣ್ಣಿಗೆ ಕಟ್ಟುವಂತೆ ಹೇಳಿದ್ದಾನೆ. ಪ್ರಸ್ತುತ ಸಂದರ್ಭದ ಕುರಿತು ಹೀಗೆ ಹೇಳುತ್ತಾನೆ.

'ಎರಡೂ ಬದಿಗಳು ಯುದ್ಧದಲ್ಲಿ ನಿರತವಾಗಿರುವಾಗ ನಿಜಾಮ ಶಹನ ಆನೆಗಳಲ್ಲೊಂದಾದ "ಗುಲಾಮಲಿ" ಎಂಬ ಹೆಸರಿನ ಆನೆಯು ರೂಮೀಖಾನನ ನೇತೃತ್ವದಲ್ಲಿತ್ತು. ಅದು ರಾಮರಾಜನ ಆನೆಗಳ ಮೇಲೆ ಏರಿ ಹೋಗಿ ಅವುಗಳನ್ನು ಬೆಂಬತ್ತಿ ರಾಮರಾಜನ ಬಿಡಾರದವರೆಗೂ ಹೋಯಿತು. ಆನೆಯು ಬಂದು ಘಾಸಿಗೊಳಿಸೀತೆಂಬ ಭಯದಿಂದ ರಾಮರಾಜನು ತನ್ನ ಆಸನದಿಂದ ಕೆಳಗಿಳಿದು ನಡೆಯಹತ್ತಿದನು. (ಅಷ್ಟರಲ್ಲಿ ಭೋಯಿಗಳು ಬಂದು ಸಿಂಹಾಸನ ಸಹಿತ ರಾಮರಾಜನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ನಡೆಯಹತ್ತಿದರು). ಅನಿರೀಕ್ಷಿತವಾಗಿ ಆನೆ ಬಂದುದರಿಂದ ಸಿಂಹಾಸನದ ಮೇಲಿದ್ದ ರಾಮರಾಜನನ್ನು ಹೊತ್ತುಕೊಂಡು ಹೋಗುತ್ತಿದ್ದ ಭೋಯಿಗಳು (ಸೇವಕರು) ಪಲ್ಲಕ್ಕಿಯನ್ನು ನೆಲದ ಮೇಲೆ ಒಗೆದು ಭಯದಿಂದ ಓಡಹತ್ತಿದರು. ನಿಜಾಮಶಹನ ಆನೆಯ ಮಾವುತನು ರತ್ನಖಚಿತ ಸಿಂಹಾಸನದ ಆಶೆಯಿಂದ ಆನೆಯನ್ನು ನಿಲ್ಲಿಸಿ ಅದರ ಸೊಂಡಿಲಿನಿಂದ ಸಿಂಹಾಸನವನ್ನು ಎತ್ತಿ ಮೇಲೆ ತರಲು ಆಜ್ಞೆ ಮಾಡಿದನು. ಅಷ್ಟರಲ್ಲಿ ಅಲ್ಲಿದ್ದ ವಿಜಯನಗರದ ಸರದಾರನೊಬ್ಬ ಆನೆಯನ್ನು ಕೊಲ್ಲಲು ಆಜ್ಞೆಮಾಡಿ, ತನ್ನ ರಾಜನ ರಕ್ಷಣೆಗಾಗಿ ಕೂಗಹತ್ತಿದನು. ಆಗ ಸಿಂಹಾಸನದಿಂದ ಕೆಳಗೆ ಬಿದ್ದವನು ರಾಮರಾಜನೆಂದು ತಿಳಿದ ಮಾವುತನು ತಕ್ಷಣ ಜಾಗೃತನಾಗಿ, ಸಿಂಹಾಸನದ ಕಡೆಗೆ ಲಕ್ಷ್ಯಕೊಡದೆ, ರಾಮರಾಜನನ್ನು ಎತ್ತಿಕೊಂಡು ರೂಮೀಖಾನನ ಹತ್ತಿರ ಬಂದನು. ಆತನು ತಡಮಾಡದೆ, ನಿಜಾಮಶಹನಿಗೆ ತಂದು ಒಪ್ಪಿಸಿದನು. ನಿಜಾಮಶಹನು ಗುರುತು ಹಿಡಿದು ರೆಪ್ಪೆ ಬಡಿಯುವಷ್ಟರಲ್ಲಿ ಆತನ ತಲೆಯನ್ನು ಶರೀರದಿಂದ ಬೇರ್ಪಡಿಸಿ ಭಲ್ಲೆಗೆ ಚುಚ್ಚಿ ಅದೇ ಆನೆಯ ಮೇಲೆ ಎತ್ತರವಾಗಿ ಇಟ್ಟು – ಶತ್ರುಗಳ ಪಾಳೆಯದಲ್ಲಿ ಪ್ರದರ್ಶಿಸಲು ಆಜ್ಞೆ ಮಾಡಿದನು' ಎಂದು ಮೂಲ ಪರ್ಶಿಯನ್ ಪ್ರತಿಯಲ್ಲಿ ಹೇಳಿದೆ.[6]

ಫಿರಿಶ್ತಾನನ್ನು ಕ್ರಿ.ಶ. 1829ರಲ್ಲಿ ಅನುವಾದಿಸಿದ ಕ್ಯಾಪ್ಟನ್ ಬ್ರಿಗ್ಸನ್‌ನು, ಆನೆ ಮುನ್ನುಗ್ಗಿದ್ದ ವಿವರಣೆಗಳನ್ನು ಹೇಳಿ,

'ಆ ಗದ್ದಲದಲ್ಲಿ ಮಿತ್ರಸೈನ್ಯದ ಒಂದು ಪಡೆ ಅವನ ಮೇಲೆ ಬಿದ್ದಿತ್ತು. ಮತ್ತು ಅವನನ್ನು ಬಂಧಿಸಿದರು... ರಾಮರಾಜನನ್ನು ಸುಲ್ತಾನನಲ್ಲಿಗೆ ಕರೆದೊಯ್ದರು... ಸುಲ್ತಾನನು ತನ್ನ ಬಂದಿಯ ತಲೆಯನ್ನು ಕಡಿದು ಹಿಂದು ಸೈನ್ಯಕ್ಕೆ

ಕಾಣುವಂತೆ ಉದ್ದವಾದ ಭಲ್ಲೆಗೆ ಚುಚ್ಚಿ ಎತ್ತಿ ಹಿಡಿಯಬೇಕೆಂದು ಆಜ್ಞಾಪಿಸಿದನು. ಆದಿಲಶಹನು ರಾಮರಾಯನ ಮರಣಕ್ಕೆ ಬಹಳ ವ್ಯಥೆಪಟ್ಟನು' ಎಂದು ಅನುವಾದಿಸಿ ಜೊತೆಗೆ ಒಂದು ಸ್ವಾರಸ್ಯಕರವಾದ ಟಿಪ್ಪಣಿಯನ್ನು ಕೊಡುತ್ತಾನೆ. ಅದು ಹೀಗಿದೆ:

'ಕಲ್ಲಿನಲ್ಲಿ ಕಡೆದ ರಾಮರಾಜನ ತಲೆಯ ಪ್ರತಿಕೃತಿ ಇಂದಿಗೂ ಬಿಜಾಪುರದ ಕೋಟೆಯ ಚರಂಡಿಯೊಂದರ ಬಾಯಿಯನ್ನಾಗಿಸಲಾಗಿದೆ.... ಇದುವರೆಗೆ ಆ ತಲೆ ತಮ್ಮಲ್ಲಿ ಉಳಿದಿರುವ ಶಿರಚ್ಛೇದಕನ ವಂಶಜರು ಕಳೆದ ಇನ್ನೂರೈವತ್ತು ವರುಷಗಳುದ್ದಕ್ಕೂ ಯುದ್ಧದ ವಾರ್ಷಿಕದಂದು ನಿಜವಾದ ತಲೆಗೆ ಪ್ರತಿವರುಷ ಎಣ್ಣೆ ಮತ್ತು ವರ್ಣದ್ರವ್ಯ ಹಚ್ಚಿ ಅದನ್ನು ಅಹಮದನಗರದ ಶ್ರದ್ಧಾ ಭಕ್ತಿಗಳುಳ್ಳ ಮಹಮ್ಮದೀಯರಿಗೆ ಪ್ರದರ್ಶಿಸಲಾಗುತ್ತಿದೆ ಎಂದು ತಿಳಿಯುತ್ತದೆ.' ಇದನ್ನು ಕ್ರಿ.ಶ. 1829ರಲ್ಲಿ ಬರೆಯಲಾಗಿದೆ.[7]

ಇವು ರಾಮರಾಯನ ಮರಣದ ಕುರಿತು ಉಲ್ಲೇಖಿಸಿದ ಕೆಲವು ಮೂಲದಾಖಲೆಗಳು. ಇವುಗಳನ್ನೇ ಆಧರಿಸಿ ಮುಂದೆ ಬಂದ – ವಿದ್ವಾಂಸರು ಲೇಖನಗಳನ್ನು, ಚರಿತ್ರಗ್ರಂಥಗಳನ್ನೂ ಬರೆದಿದ್ದಾರೆ. ಒಟ್ಟಾರೆ ಇವುಗಳಿಂದ ನಿರ್ಧಾರವಾಗುವ ಒಂದು ಸಂಗತಿಯೆಂದರೆ, ಕನ್ನಡದ ಉಲ್ಲೇಖಗಳಲ್ಲಿ ಹೇಳಿದಂತೆ ರಾಮರಾಯನನ್ನು ಬಿಜಾಪುರದ ಆದಿಲಶಹನು ಕೊಂದಿರುವ ಸಾಧ್ಯತೆ ಕಡಿಮೆ. ಬ್ರಿಗ್ಸನ ಟಿಪ್ಪಣಿಯಲ್ಲಿ ಹೇಳಿದಂತೆ 'ಶಿರಚ್ಛೇದಕನ ವಂಶಜರು' ಬಿಜಾಪುರದಲ್ಲಿ ಮಾಡುತ್ತಿದ್ದ ಪೂಜೆ, ಆದಿಲಶಹನ ಪಾಳೆಯದಲ್ಲೆ ಕೊಂದಿರಬಹುದೆಂಬ ಸಂಶಯ ಬರುವುದಾದರೂ, ರಾಮರಾಯನ ಕಲ್ಲಿನ ತಲೆಯ ಬಗ್ಗೆಯೇ ಮೊದಲು ಪ್ರತ್ಯೇಕವಾದ ಅಭ್ಯಾಸವಾಗಬೇಕು. ಆ ಬಗ್ಗೆ ಚರ್ಚೆ ಇಲ್ಲಿ ಅಪ್ರಸ್ತುತ.

ರಾಮರಾಯನು ಸತ್ತದ್ದು ನಿಜಾಮಶಹನ ಪಾಳೆಯದಲ್ಲಿ ಎಂಬುದನ್ನು ಉಳಿದ ದಾಖಲೆಗಳು ಎತ್ತಿ ತೋರಿಸುತ್ತವೆ. ಆದರೆ ಅವನು ಖಚಿತವಾಗಿ ಎಲ್ಲಿ? ಹೇಗೆ? ಮತ್ತು ಯಾರಿಂದ ಎಂಬುದು ಇನ್ನೂ ಸ್ಪಷ್ಟವಾಗುವುದಿಲ್ಲ. ರಾಮರಾಯನು ಯುದ್ಧರಂಗದಲ್ಲಿಯೇ ಸತ್ತು ಆತನ ಹೆಣವನ್ನು ನಿಜಾಮಶಹನ ಹತ್ತಿರ ತಂದಿರಬಹುದೆ? ಅಲ್ಲಿ ಅವನ ತಲೆ ಕತ್ತರಿಸಿ ಪ್ರದರ್ಶಿಸಿದರೆ? ಅಥವಾ ಜೀವಂತವಾಗಿ ಹಿಡಿದೊಯ್ದು ನಿಜಾಮಶಹನ ಎದುರಿಗೆ ಆತನ ತಲೆ ಕತ್ತರಿಸಿದರೆ? ಅವನನ್ನು ನಿಜಾಮಶಹನು ಖುದ್ದಾಗಿ ಶಿರಚ್ಛೇದನ ಮಾಡಿದನೆ ? ಅಥವಾ, ಅವನ ಆಜ್ಞೆಯಂತೆ ಬೇರೊಬ್ಬರು ಶಿರಚ್ಛೇದನ ಮಾಡಿದರೆ? ಎಂಬುದು ಸ್ಪಷ್ಟವಾಗುವುದಿಲ್ಲ.

8. ರಫೀಯುದ್ದೀನ ಶಿರಾಜಿ ಎಂಬುವನು ಮೊದಲನೆಯ ಅಲಿ ಆದಿಲಶಹನ ಆಪ್ತಸಹಾಯಕನಾಗಿದ್ದನು. ಬಾದಶಹನೊಂದಿಗೆ ಕಾಳಗದಲ್ಲಿ ಭಾಗವಹಿಸಿದ್ದನು. ಅನಂತರ ಎರಡನೆಯ ಇಬ್ರಾಹಿಮ ಆದಿಲಶಹನ ಕಾಲದಲ್ಲಿ ಕೋಶಾಧಿಕಾರಿಯಾಗಿದ್ದನು. ಆತನು *ತದ್‌ಕಿರಾತುಲ್‌ಮುಲ್ಕ* ಎಂಬ ಆದಿಲಶಾಹಿಗಳ ಚರಿತ್ರಗ್ರಂಥವನ್ನು ಬರೆದಿದ್ದಾನೆ. ಪರ್ಶಿಯನ್ ಮೂಲ ಪ್ರತಿ ನೋಡಲು ದೊರೆತಿಲ್ಲ. ಅದರ ಅನುವಾದಗಳೂ ಆದದ್ದು ಕಂಡುಬಂದಿಲ್ಲ.

9. ಬಿಜಾಪುರದ ಇನ್ನೊಬ್ಬ ಇತಿಹಾಸಕಾರ ಮಹಮ್ಮದ ಇಬ್ರಾಹಿಮ ಜುಬೇರಿಯು ಕ್ರಿ.ಶ. 1824ರಲ್ಲಿ 'ಬುಸಾತಿನೆ–ಸಲಾತಿನ್' ಎಂಬ ಗ್ರಂಥವನ್ನು ಬರೆದಿದ್ದಾನೆ. ಅದು ಆದಿಲಶಾಹಿಗಳ ಸಂಪೂರ್ಣ ಇತಿಹಾಸ ಗ್ರಂಥವಾಗಿದೆ. ಪ್ರಾರಂಭದಲ್ಲಿ ತನ್ನ ಗ್ರಂಥಕ್ಕೆ ಆಧಾರಮಾಡಿಕೊಂಡ ಗ್ರಂಥಗಳ ಪಟ್ಟಿಯನ್ನು ಕೊಟ್ಟಿದ್ದಾನಲ್ಲದೆ ಆಯಾ ಸಂದರ್ಭಗಳನ್ನು ವಿವರಿಸುವಾಗ ಮತ್ತೆ ಪ್ರತ್ಯೇಕವಾಗಿ ಆಧರಿಸಿದ ಗ್ರಂಥಕಾರನ ಹೆಸರನ್ನೂ ನಮೂದಿಸುತ್ತಾನೆ. ಪ್ರಸ್ತುತ ಸಂದರ್ಭದಲ್ಲಿ ರಾಮರಾಜನ ಮರಣ ಹಾಗು ಅನಂತರದ ವಿಜಯನಗರದ ಲೂಟಿಯ ಬಗ್ಗೆ ಪೂರ್ವೋಕ್ತ ರಫಿಯುದ್ದೀನ, ಶಿರಾಜಿಯನ್ನೇ ಆಧರಿಸಿದ್ದಾಗಿ ಉಲ್ಲೇಖಿಸಿ ಹೀಗೆ ಹೇಳುತ್ತಾನೆ.[8]

'ಮದಗಜದ ಹಲ್ಲೆಯಿಂದ ಅಲ್ಲಿದ್ದ ಎಲ್ಲರೂ ಒಬ್ಬರೊಬ್ಬರ ಮೇಲೆ ಬಿದ್ದು ತಮ್ಮ ಒಡೆಯ ರಾಮರಾಜನ ಆಶೆಯನ್ನು ಬಿಟ್ಟು ಪ್ರತಿಯೊಬ್ಬರೂ ಓಡಿಹೋಗಹತ್ತಿದರು. ರಾಜರಾಜನು ಜನರ ಗದ್ದಲದಲ್ಲಿ ಸಿಕ್ಕು ಒದ್ದಾಡಿ ಒದೆ ತಿಂದು ಬೀಳುವ ಮನುಷ್ಯನಂತೆ ಗಾಯಾಳುವಾಗಿ ಒಂದೆಡೆ ಬಿದ್ದಿದ್ದನು. ರಾಮರಾಜನ ಖಾಸಾ ಸೇವಕರಲ್ಲಿಯ ಯಾರೊಬ್ಬರೂ

ಆತನ ಹತ್ತಿರ ಉಳಿದಿರಲಿಲ್ಲ. ಆದರೆ ದಲಪತರಾವ್ ಎಂಬ ಬ್ರಾಹ್ಮಣನೊಬ್ಬನು ಮಾತ್ರ... ಇದ್ದು ಧೈರ್ಯವನ್ನು ಹೇಳುತ್ತಿದ್ದ. ಆ ಸಮಯದಲ್ಲಿ ರೂಮೀಖಾನನು ಆನೆಯನ್ನು ನಡಿಸುತ್ತ ನೇರವಾಗಿ ರಾಜರಾಜನ ಎದುರಿಗೆಯೇ ಬಂದನು. ಆನೆಯ ಮೇಲಿನ ಮನುಷ್ಯನು ರಾಮರಾಜನ ಮೇಲೆ ಬಂದಿದ್ದಾನೆಂದು, ಆತನನ್ನು ಕೊಲ್ಲುತ್ತಾನೆಂದು ತಿಳಿದು ದಲಪತರಾವ ಬ್ರಾಹ್ಮಣನು ಧೈರ್ಯ ಹೇಳುತ್ತಿದ್ದವನು ಆತನನ್ನು ಉಳಿಸಲು ಒಮ್ಮೆಲೆ ರಾಮರಾಜನ ಮೇಲೆ ಬಿದ್ದುಬಿಟ್ಟನು ಮತ್ತು ದೊಡ್ಡದನಿಯಿಂದ ರಾಜನ ಹೆಸರನ್ನು ತೆಗೆದುಕೊಂಡು ಕೂಗಿ-ಕೂಗಿ ಅಳಹತ್ತಿದನು.... ರಾಮರಾಜ ಎಂಬ ಹೆಸರನ್ನು ಕೇಳುತ್ತಲೇ ರೂಮೀಖಾನನು ತನ್ನ ಆನೆಗೆ ಸನ್ನೆಮಾಡಿ, ಅದರ ಸೊಂಡೆಯಿಂದ ರಾಮರಾಜನನ್ನು ಎತ್ತಿ ಬೆನ್ನಮೇಲೆ ತೆಗೆದುಕೊಂಡನು. ಮನೋರಥದ ಮುಕ್ತಾಫಲವು ಕೈಗೆ ದೊರೆತ ಸಂತೋಷದಲ್ಲಿ ತಕ್ಷಣ ಆನೆಯನ್ನು ಹಿಂತಿರುಗಿಸಿದನು ಹಾಗು ವಾಯುವಿನಂತೆ, ವಿದ್ಯುತ್ತಿನಂತೆ ಆನೆಯನ್ನು ಓಡಿಸುತ್ತ ತನ್ನ ಸೈನ್ಯದಲ್ಲಿ ಬಂದನು. ರಾಮರಾಜನನ್ನು ***ಜೀವಂತವಾಗಿ*** *ತಂದು ನಿಜಾಮಶಹನ ವಶಕ್ಕೆ ಕೊಟ್ಟನು. ಎಂದೂ ದೊರಕದ ವಸ್ತುವಿನ ಅಲಭ್ಯ ಲಾಭದಿಂದ ನಿಜಾಮಶಹನು ಅತ್ಯಂತ ಸಂತೋಷದಿಂದ ರಾಮರಾಜನನ್ನು ಹತ್ತಿರ ಕರೆದುಕೊಂಡು ಕೂಡಿಸಿದನು. ಅವನನ್ನು ಮಾತನಾಡಿಸುತ್ತ ನಿಜಾಮಶಹನು 'ರಾಮರಾಜ ನಿಮ್ಮ ಅವಸ್ಥೆ ಏನಾಗಿದೆ? ಹೇಗಿದ್ದೀರಿ?' ಎಂದು ಕೇಳಿದನು. ಅದನ್ನು ಕೇಳಿದ ರಾಮರಾಜನು ಏನನ್ನೂ ಹೇಳದೆ, ತನ್ನ ಕೈಯಿಂದ ಹಣೆಯ ಮೇಲೆ ಬಡಿದುಕೊಂಡನು. ಹಣೆಯನ್ನು ಬಡಿದುಕೊಳ್ಳುವುದೆಂದರೆ ತನ್ನ ಹಣೆಯಲ್ಲಿ ಏನು ಬರೆದಿದೆಯೋ ಅದರ ಫಲವನ್ನು ಪಡೆದಿರುವೆ ಎಂದು ಅರ್ಥವಾಗುತ್ತದೆ. ಹೀಗೆ ನಿಜಾಮಶಹ ಮತ್ತು ರಾಮರಾಜರ ಮಧ್ಯೆ ಮಾತುಕತೆಗಳು ನಡೆದಾಗ ಮಧ್ಯ ಪ್ರವೇಶಿಸಿದ* ***ಹಕೀಯ ಕಾಸದು ಬೇಗ*** *ಎಂಬ ನಿಜಾಮಶಹನ ವಿಶ್ವಾಸಿಕ ಸೇವಕನು ಗಾಬರಿಯಿಂದ.... 'ಇದು ಮಾತುಕತೆಯಾಡುವ ಸಮಯವಲ್ಲ. ತಕ್ಷಣ ರಾಮರಾಜನನ್ನು ಶೂಲಕ್ಕೇರಿಸಿ ಕೊಲ್ಲಿರಿ. ಆತನ ಭಯದಿಂದ ಮುಕ್ತರಾಗಿರಿ. ಇಲ್ಲದಿದ್ದಲ್ಲಿ ಆದಿಲಶಹನು ರಾಮರಾಜನೊಂದಿಗೆ ಮಗನ ಸಂಬಂಧವನ್ನು ಇಟ್ಟುಕೊಂಡಿದ್ದಾನೆ.... ಬಂದನೆಂದರೆ, ಈಗಲೇ ರಾಮರಾಜನನ್ನು ನಿಮ್ಮ ಕೈಯಿಂದ ಕಸಿದುಕೊಳ್ಳುತ್ತಾನೆ..... ಅನಂತರ ಏನಾಗುತ್ತದೆ ಎಂಬುದು ದೇವರಿಗೇ ಗೊತ್ತು....' ಎಂದು ಹೇಳಿದಾಗ ನಿಜಾಮಶಹನಿಗೆ ಹಕೀಮನ ಮಾತಿನ ಅರ್ಥವಾಯಿತು. ಆಗ ರಾಮರಾಜನ ತಲೆಯನ್ನು ಕಡಿಯಲು ಆಜ್ಞೆ ಮಾಡಿದನು. ಅನಂತರ ಶೂಲಕ್ಕೆ ಏರಿಸಿ ವಿಜಯನಗರದ ಸೈನ್ಯದ ಮಧ್ಯ ನಿಲ್ಲಿಸಿರಿ ಎಂದು ಆದೇಶ ಮಾಡಿದನು".*

ಕನ್ನಡದಲ್ಲಿ ದೊರೆಯುವ ಎರಡು ಆಕರಗಳೂ ಭಿನ್ನವಾಗಿವೆ. ಬಖೈರಿಯಲ್ಲಿ ಆದಿಲಶಹನು ರಾಮರಾಯನನ್ನು ಕೊಂದನೆಂದು ಸ್ಪಷ್ಟವಾಗಿ ಹೇಳಿದ್ದರೆ, ಕೆಳದಿನೃಪವಿಜಯದಲ್ಲಿ 'ಅದಿಲಷಹನ ಸಂಚಿನ ಮೇಲೆ ರಾಮರಾಯನನ್ನು ಹಿಡಿದು ಶಿರಚ್ಛೇದನ ಮಾಡಿದರು' ಎಂದು ಹೇಳಿದೆ. ಲಿಂಗಣ್ಣ ಕವಿಯ ವಿಷಯ ಬೇರೆಯಾದ್ದರಿಂದ... ಶಿರಚ್ಛೇದನ ಮಾಡಿದ್ದನ್ನು ಮಾತ್ರ ಹೇಳುತ್ತ 'ಅದನ್ನು ಕಾಶಿಗೆ ಕಳಿಸಿದರು' ಎಂದು ಧಾರ್ಮಿಕ ಸಮಾಧಾನ ಹೇಳಿದ್ದಾನೆ.

ಉಳಿದ ಎಲ್ಲ ಆಕರಗಳೂ ನಿಜಾಮಶಹನತ್ತಲೇ ಬೆರಳು ತೋರಿಸುತ್ತವೆ. ಆಫತಾಬನ ಕಾವ್ಯ 'ತಾರೀಫ-ಇ-ಹುಸೇನ' ಹಸ್ತಪ್ರತಿಯೊಂದಿಗೆ ಸಮಕಾಲೀನ ಹನ್ನೊಂದು ಬಣ್ಣದ ಚಿತ್ರಗಳಿದ್ದದ್ದು ವಿಶೇಷವಾಗಿದೆ. ಅವುಗಳಲ್ಲಿಯ ಒಂದು ಚಿತ್ರದಲ್ಲಿ ನಿಜಾಮಶಹನು - ಬೆರಳೆತ್ತಿ ವಧೆ ಮಾಡಲು ಸೂಚಿಸಿದ್ದು, ಸೈನಿಕನೊಬ್ಬನು ರಾಮರಾಯನನ್ನು ಹಿಡಿದು ಕೊರಳು ಕತ್ತರಿಸುವ ಚಿತ್ರವಿದೆ. ಅದನ್ನೆ ಆಫತಾಬನು ಒಂದು ದ್ವಿಪದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ (ಸಂಖ್ಯೆ 316). ರಾಮರಾಯನ ರುಂಡದ ಪ್ರದರ್ಶನ ಮಾಡಿದ ದಾಖಲೆಯನ್ನು ಆತ ಮಾಡುವುದಿಲ್ಲ. ಬಹುಶಃ ಅದನ್ನೆ ಅನುಸರಿಸಿದ ಅಲಿತಾಬಾತಾಬಾನು ಆಫತಾಬ ಹೇಳಿದ್ದನ್ನೇ ಹೇಳಿ ಕೊನೆಗೆ 'ಅದನ್ನು ಯುದ್ಧಭೂಮಿಯಲ್ಲಿ ಪ್ರದರ್ಶಿಸಲಾಯಿತು' ಎನ್ನುತ್ತಾನೆ. 'ಅದಿಲಶಹನು ಬರುವ ಮೊದಲು ಆತನ ತಲೆಯನ್ನು ಬೇರ್ಪಡಿಸಲು ನಿಜಾಮಶನು ಆಜ್ಞೆ ಮಾಡಿದನು.'

ಫಿರಿಶ್ತಾನ ವಿವರಣೆ ಇದನ್ನೆ ಹೇಳುತ್ತಿದ್ದರೂ, ರೂಮೀಖಾನನ ಆನೆಗಳಲ್ಲಿಯ ಒಂದು ಆನೆ 'ಗುಲಾಮ ಆಲಿ' ಎಂಬುದಾಗಿ ಅದರ ಹೆಸರನ್ನೂ ಖಚಿತವಾಗಿ ಹೇಳುತ್ತಾನೆ. ಜೊತೆಗೆ ಮಾವುತನಿಗೆ ಕೆಳಗೆ ಬಿದ್ದ ರತ್ನಖಚಿತ ಸಿಂಹಾಸನದ

ಆಶೆ, ರಾಮರಾಜನ ಹೆಸರು ಕೇಳಿದ ತಕ್ಷಣ ಜಾಗೃತನಾಗಿ ಎಲ್ಲ ಬಿಟ್ಟು ರಾಮರಾಜನನ್ನು ತಂದು ರೂಮೀಖಾನನಿಗೆ ಒಪ್ಪಿಸಿದ್ದು, ಅನಂತರ ರೂಮೀಖಾನನ ಅವನೊಂದಿಗೆ ನಿಜಾಮಶಹನ ಹತ್ತಿರ ಬಂದ... ಇತ್ಯಾದಿಯಾಗಿ ಅಧಿಕ ವಿವರಗಳನ್ನು ಕೊಡುತ್ತಾನೆ.

ಇದೇ ಮಾದರಿಯಲ್ಲಿ ಬರುವ ಇಬ್ರಾಹಿಮ ಜುಬೇರಿಯ ವಿವರಣೆಗಳಲ್ಲಿ 'ಗುಲಾಮ ಅಲಿ' ಆನೆಯ ಪ್ರಸ್ತಾಪವಿಲ್ಲ. ಆದರೆ ಒಂದು ಆನೆ ಶತ್ರುಗಳ ಪಾಳೆಯವನ್ನು ಹೊಕ್ಕು ಗದ್ದಲ ಮಾಡಿದಾಗ ಜನರು ದಿಕ್ಕಾಪಾಲಾಗಿ ಓಡಿಹೋದರು ಎಂದು ಸ್ಪಷ್ಟವಾಗಿ ಹೇಳುವುದಲ್ಲದೆ; ಆ ಗದ್ದಲದಲ್ಲಿ ಸಿಕ್ಕ ರಾಮರಾಯನನ್ನು ದಲಪತರಾವ್ ಎಂಬ ಬ್ರಾಹ್ಮಣನು ಸಾಂತ್ವನ ಹೇಳುತ್ತಿದ್ದನೆಂಬುದು; ಅನಂತರ ಬೆನ್ನಹಿಂದೆಯೇ ಬಂದ ರೂಮೀಖಾನನಿಗೆ ಆತ ರಾಮರಾಜನೆಂಬುದೂ ಗೊತ್ತಿಲ್ಲ; ರಾಜನ ರಕ್ಷಣೆಗಾಗಿ ಆತನ ಹೆಸರಿನೊಂದಿಗೆ ದಲಪತರಾಯನು ಕೂಗಿದ್ದು ಅವನ ಬಂಧನಕ್ಕೆ ಕಾರಣವಾಯಿತು. ನಿಜಾಮನ ಹತ್ತಿರ ಬಂದಾಗಲೂ ತಕ್ಷಣ ಕೊಲ್ಲುವ ವಿಚಾರವಿರಲಿಲ್ಲ. ಮಾತುಕತೆಗಳ ಮಧ್ಯ ಕಾಸಮ ಬೇಗ ಬಂದು ನೆನಪಿಸಿದಾಗ ನಿಜಾಮಶಹನು ವಧಿಸಲು ಆದೇಶ ಮಾಡುತ್ತಾನೆ ಎಂಬ ವಿವರಗಳು ವಿಶೇಷವಾಗಿವೆ. ಅವು ಸತ್ಯಕ್ಕೆ ಹತ್ತಿರವೂ ಆಗಿವೆ.

ಆದ್ದರಿಂದ, ರಾಮರಾಯನು ಆಕಸ್ಮಿಕವಾಗಿ ನಿಜಾಮಶಹನ ಸೈನಿಕರ ಕೈಗೆ ಸಿಕ್ಕು – ಸುರಕ್ಷಿತವಾಗಿ ನಿಜಾಮಶಹನ ಹತ್ತಿರ ಬಂದನು. ಅಲ್ಲಿ ಬಾದಶಹನ ಆದೇಶದಿಂದಾಗಿ ಅವನನ್ನು ವಧಿಸಲಾಯಿತು, ಎಂಬುದು ಸದ್ಯ ದೊರೆಯುವ ದಾಖಲೆಗಳಿಂದ ಖಚಿತವಾಗಿ ಹೇಳಬಹುದು.

ಆಕರಸೂಚಿ

1. *ಚಾರಿತ್ರಿಕ ದಾಖಲೆಗಳು:* (ಸಂ.) ತಿ.ತಾ.ಶರ್ಮ, 1971, ಪು. 1–19.
2. *ಕೆಳದಿ ನೃಪವಿಜಯ:* (ಸಂ.) ಕೆಳದಿ ಗುಂಡಾಜೋಯಿಸ, 1977, ಪು. 104–6
3. ಆಫತಾಬ – *ತಾರೀಫ–ಇ–ಹುಸೇನಶಾಹ ಬಾದಶಾಹ ದಖನ,* ಪು. 201, ಜಿ.ಪಿ. ಕುಲಕರ್ಣಿ ಮತ್ತು ಮಾಡೆ (ಸಂ.), 1977.
4. ಅದೇ, ಪು 202.
5. ರಾಬರ್ಟ್ ಸಿವೆಲ್ಲ, ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, (ಸದಾನಂದ ಕನವಳ್ಳಿ ಅನುವಾದ) 1992, ಪು. 221–22.
6. ಫಿರಿಶ್ತಾ, *ತಾರೀಖ–ಇ–ಫಿರಿಶ್ತಾ* (ಮೂಲ ಸಂಪುಟ 2), ಪರ್ಶಿಯನ್ ಆವೃತ್ತಿ, 1936, ಪು. 250–52.
7. ರಾಬರ್ಟ್ ಸಿವೆಲ್ಲ, ಪು. 221.
8. ಜುಬೇರಿ: *ಬಸಾತಿನ – ಸಲಾತಿನ* (ಮರಾಠಿ ಅನುವಾದ – ಪಾರಸನೀಸ) 1971.

17

ರಾಜಪ್ರತಿನಿಧಿ ತಿರುಮಲ ಮತ್ತು ರಾಜ ಒಡೆಯರ ಸಂಬಂಧ

ಡಾ॥ ಲ. ನ. ಸ್ವಾಮಿ

ಭಾರತೀಯ ಇತಿಹಾಸದಲ್ಲಿ ಉತ್ತಮ ಭವಿಷ್ಯವನ್ನು ಅರಸಿ, ಪ್ರದೇಶದಿಂದ ಪ್ರದೇಶಕ್ಕೆ ವಲಸೆಯಾದ ಆಡಳಿತ ಯಂತ್ರದ ಅಧಿಕಾರಿಗಳ ಬಹುದೊಡ್ಡ ಯಾದಿ ನಮ್ಮ ಮುಂದೆ ಇದೆಯಾದರೂ ಅದನ್ನು ಅಧ್ಯಯನ ಮಾಡುವ ಸಂಪ್ರದಾಯ ನಮ್ಮಲ್ಲಿ ಇನ್ನೂ ಆರಂಭವಾಗಬೇಕಿದೆ. ಇತ್ತೀಚೆಗೆ ವಿಜಯನಗರದ ಸಾಮ್ರಾಟ ಕೃಷ್ಣರಾಯನ ದಕ್ಷಿಣದ ದಾಳಿಗಳು ಸಣ್ಣ ರಾಜಮನೆತನಗಳ ಉಗಮಕ್ಕೆ ಕಾರಣವಾದ ಬಗ್ಗೆ ಕೆಲವು ಲೇಖನಗಳು ಪ್ರಕಟವಾಗಿವೆ. ಕೃಷ್ಣರಾಯನ ಕಳಿಂಗದ ದಂಡೆಯಾತ್ರೆಯ ನಂತರ ಕೆಲವು ಮಹಾಪಾತ್ರರು ಇಂದಿನ ಚಾಮರಾಜನಗರ ಜಿಲ್ಲೆಯಲ್ಲಿ ಬಂದು ಆಡಳಿತಾಧಿಕಾರಿಗಳಾಗಿದ್ದನ್ನು ಕೆಲವು ಶಾಸನಗಳೂ ಖಚಿತಪಡಿಸುತ್ತವೆ. ಚಾಮರಾಜನಗರದ ಪ್ರದೇಶದಲ್ಲಿ ಉತ್ತರ ಭಾರತದ ತ್ರಿವೇದಿ, ದಿವೇದಿ ಬ್ರಾಹ್ಮಣ ಮನೆತನಗಳು ವಲಸೆ ಬಂದು ನೆಲೆಸಿರುವುದೂ ಕಂಡುಬರುತ್ತದೆ. ಮಧ್ಯಕಾಲೀನ ಸಂಸ್ಕೃತಿಯಲ್ಲಿ ಬ್ರಾಹ್ಮಣ ಸಮುದಾಯ, ಕ್ಷತ್ರಿಯ ಮತ್ತು ಬ್ರಾಹ್ಮಣ ವೃತ್ತಿಗಳಲ್ಲಿ ಹೆಚ್ಚಾಗಿ ತೊಡಗಿಕೊಂಡಿದ್ದನ್ನು ನೋಡಿದರೆ ಉತ್ತಮ ಅವಕಾಶಕ್ಕಾಗಿ ಅವರು ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಬರುತ್ತಿದ್ದುದು ಹೊಸದೇನಲ್ಲ. ಕದಂಬ ಕಾಕುಸ್ಥವರ್ಮನ ತಾಳಗುಂದ ಶಾಸನದಲ್ಲಿ ಉಕ್ತವಾಗಿರುವಂತೆ, ಮೈಸೂರು ಜಿಲ್ಲೆಯ ಕೆಲವು ಶಾಸನಗಳಲ್ಲಿ ಸಹ ಬ್ರಾಹ್ಮಣ ಉದ್ಧಾರಕ್ಕೆ ಅವರನ್ನು ಈ ಪ್ರದೇಶಕ್ಕೆ ಕರೆತಂದು ನೆಲೆಗೊಳಿಸಿದಂತೆ ಶಾಸನಗಳಲ್ಲಿ ಉಲ್ಲೇಖಗಳಿವೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಮೈಸೂರು ಅರಸರ ಪ್ರಾರಂಭವನ್ನು ವಿಜಯನಗರದ ಸಾಳುವ ನರಸಿಂಹನ ಶ್ರೀರಂಗಪಟ್ಟಣದ ದಂಡಯಾತ್ರೆಯಿಂದ ಪ್ರಾರಂಭಿಸಬೇಕಾಗುತ್ತದೆ. ಸಾಳುವ ನರಸನು, ಒರಿಸ್ಸಾದವರೆಗೆ ದಂಡಯಾತ್ರೆ ಮಾಡಿ ಆನಂತರ ಉಮ್ಮತ್ತೂರು ನಾಯಕರನ್ನು ಶ್ರೀರಂಗಪಟ್ಟಣದಲ್ಲಿ ಸೋಲಿಸಿದನು. ಸಾಳುವ ನರಸಿಂಹನು ಪ್ರಾಯಶಃ ಉಮ್ಮತ್ತೂರು ನಾಯಕರ ಸೋದರ ಸಂಬಂಧಿಗಳನ್ನು ವಿಜಯನಗರ ಸಾಮ್ರಾಜ್ಯದ ಮಾಹಿತಿದಾರರಾಗಿ ಈ ಪ್ರದೇಶದಲ್ಲಿ ನೇಮಿಸಿರಬೇಕು. ಉಮ್ಮತ್ತೂರು ನಾಯಕರು ತಮ್ಮನ್ನು "ಪೆನುಗೊಂಡೆ ಚಕ್ರೇಶ್ವರ"ರೆಂದು ಕರೆದುಕೊಳ್ಳುತ್ತಾರೆ. ಉಮ್ಮತ್ತೂರು ನಾಯಕರು ಮತ್ತು ಹುರದ ಅರಸರು ದಾಯಾದಿಗಳೆಂದು ಡಾ॥ ಬಿ.ಆರ್. ಗೋಪಾಲ್ ನಿರೂಪಿಸಿರುತ್ತಾರೆ. ಹುರದ ಅರಸರಿಗೂ ಮೈಸೂರು ಅರಸರಿಗೂ ವೈವಾಹಿಕ ಸಂಬಂಧವಿತ್ತು. ಈ ಎಲ್ಲಾ ಹಿನ್ನೆಲೆಯಲ್ಲಿ ಗಮನಿಸಿದಾಗ ಮೈಸೂರು ಅರಸರ ಮೂಲ, ವಿಜಯನಗರ ಸಾಮ್ರಾಜ್ಯದ ದಕ್ಷಿಣದ ದಂಡಯಾತ್ರೆಗಳಲ್ಲಿ ಅಡಗಿರುವುದು ವೇದ್ಯವಾಗುತ್ತದೆ.

ಪ್ರಾಯಶಃ ಇಲ್ಲಿನವರೆಗೆ ಕಂಡುಕೊಂಡಂತೆ ಉಮ್ಮತ್ತೂರಿನ ಆಡಳಿತಕ್ಕೆ ಸೇರಿದ ಈ ಪ್ರದೇಶಕ್ಕೆ ಹೊರಗಿನವರನ್ನು ಕೃಷ್ಣರಾಯ 1512ರ ಶ್ರೀರಂಗಪಟ್ಟಣ ದಾಳಿಯಲ್ಲಿ ಇಲ್ಲಿನ ಮಾಹಿತಿದಾರರು ಹಾಗೂ ಆಡಳಿತಗಾರರಾಗಿ ನೇಮಿಸಿರುವ

ಸಾಧ್ಯತೆಯನ್ನು ಈಗಾಗಲೇ ಲೇಖನಗಳಲ್ಲಿ ಪ್ರಕಟವಾಗಿರುವುದನ್ನು ಮುಂದುವರಿಸಿ, ವಿಜಯನಗರ ಮತ್ತು ಮೈಸೂರಿನ ಸಂಸ್ಥಾನದ ಸಂಬಂಧವನ್ನು ಇಲ್ಲಿ ಅಭ್ಯಸಿಸಲಾಗಿದೆ.

ರಾಜ ಒಡೆಯರು 33 ಹಳ್ಳಿಗಳಿಂದ ಕೂಡಿದ್ದ ಪಾಳೇಪಟ್ಟನ್ನು ರಾಜ್ಯವಾಗಿ ಪರಿವರ್ತಿಸುವಲ್ಲಿ ಕೆಸರೆಯ ಯುದ್ಧಕ್ಕೆ ಪೂರ್ವದಲ್ಲಿ ಸಾಕಷ್ಟು ಸೈನಿಕ ಕಾರ್ಯಾಚರಣೆಗಳನ್ನು ಕೈಗೊಂಡ ಮಹಾನ್ ದೂರದೃಷ್ಟಿಯುಳ್ಳ ಯೋಜಕರು. ಯೋಜನೆಯನ್ನು ಪರಿಪಕ್ವವಾಗಿ ತಮ್ಮಂತೆಯೇ ಪರಿವರ್ತಿಸಿಕೊಂಡ ಕ್ರಿಯಾಶೀಲರಾಗಿ ಕಂಡುಬರುತ್ತಾರೆ.

ಶ್ರೀರಂಗಪಟ್ಟಣದ ರಾಜಪ್ರತಿನಿಧಿಯ ಸಿಂಹಾಸನವನ್ನು ಏರುವ ಹೊತ್ತಿಗೆ ರಾಜ ಒಡೆಯರಿಗೆ 58 ವರ್ಷ ವಯಸ್ಸಾಗಿದ್ದಿತು. ಮೂರು ದಶಕಗಳಿಗೂ ಹೆಚ್ಚು ಕಾಲ ರಾಜ ಒಡೆಯರ್ ಮೈಸೂರು ಸಂಸ್ಥಾನದ ನಿಷ್ಠಾವಂತ ಸ್ಥಾನಿಕರಾಗಿ ಕಾರ್ಯನಿರ್ವಹಿಸಿರುವರೆಂದು ಭಾವಿಸಬೇಕಾಗುತ್ತದೆ. ಈ ಅಭಿಪ್ರಾಯವನ್ನು ಹಯವದನರಾವ್[1] ಕೂಡ ಉಲ್ಲೇಖಿಸಿದ್ದಾರೆ. ಶ್ರೀರಂಗಪಟ್ಟಣವು ಮೈಸೂರು ಅರಸರ ರಾಜಧಾನಿಯಾಗಿ ಪರಿವರ್ತಿತವಾದ ನಂತರ ಕೇವಲ ಏಳು ವರ್ಷಗಳ ಕಾಲ ಆಡಳಿತದ ಚುಕ್ಕಾಣಿಯನ್ನು ಹಿಡಿದಿದ್ದರು. ಅಷ್ಟರಲ್ಲಿಯೆ ಮಹತ್ವದ ಸಾಧನೆ ಮಾಡಿದವರು ರಾಜ ಒಡೆಯರು.

ರಾಜ ಒಡೆಯರ ಆಡಳಿತ ಕಾಲದ ವಿಜಯನಗರದ ಸಂಬಂಧವನ್ನು ಮೂರು ಹಂತಗಳಲ್ಲಿ ಅಧ್ಯಯನ ಮಾಡಬಹುದು. ಶ್ರೀರಂಗಪಟ್ಟಣದ ಸ್ವಾಧೀನದವರೆಗಿನ ರಾಜ ಒಡೆಯರ ಆಳ್ವಿಕೆಯನ್ನು ಎರಡು ಹಂತಗಳಲ್ಲಿ ವಿಭಾಗಿಸಿಕೊಳ್ಳಬಹುದು.[2] ಮೊದಲನೆ ಹಂತ 1578ರಿಂದ 1585ರ ವರೆಗಿನ ಅವಧಿ. ದ್ವಿತೀಯ ಹಂತವನ್ನು 1585ರಿಂದ 1610ರ ವರೆಗಿನ ಅವಧಿಯೆಂದೂ ಗುರುತಿಸಬಹುದು. ಸತ್ಯನಾರಾಯಣರವರು[3] ರಾಜ ಒಡೆಯರ ಸಾಧನೆ ಬಗೆಗೆ ಬರೆಯುತ್ತಾ ಶ್ರೀರಂಗಪಟ್ಟಣದ ಸ್ವಾಧೀನದ ನಂತರ ರಾಜ ಒಡೆಯರ್ ಅಂತ್ಯದವರೆಗಿನ ಕಾಲವನ್ನು (ಕ್ರಿ.ಶ. 1610–1617) ರಾಜ ಒಡೆಯರ ತೃತೀಯ ಆಡಳಿತದ ಹಂತವೆಂದು ಗುರುತಿಸಿದ್ದಾರೆ.

ಮೊದಲ ಹಂತ

ರಾಜ ಒಡೆಯರ್ ಅಧಿಕಾರಕ್ಕೆ ಬಂದ ತಕ್ಷಣ ರಾಜಮನೆತನದ ಆಳ್ವಿಕೆಯಲ್ಲಿದ್ದ ಹಲವಾರು ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಬೇಕಾದ ಅನಿವಾರ್ಯತೆಯಿದ್ದಿತು. ಅದೇನೆಂದರೆ ಮೂರನೆ ಹಿರಿಯ ಬೆಟ್ಟದ ಚಾಮರಾಜ ಒಡೆಯರು ಮೈಸೂರು, ಕೆಂಬಾಳು ಮತ್ತು ಮಲ್ಲೂರುಗಳೆಂದು ತಮ್ಮ ಪಾಳೆಪಟ್ಟನ್ನು ವಿಭಾಗಿಸಿದ್ದರು.[4] ಈ ಆಡಳಿತ ವಿಭಾಗಗಳು ರಾಜ ಒಡೆಯರ್ ಪಟ್ಟಾಭಿಷೇಕದವರೆಗೆ ಹಾಗೆಯೇ ಮುಂದುವರಿದಿದ್ದಿತು. ಇವನ್ನು ಒಂದುಗೂಡಿಸಬೇಕಾದ ಪ್ರಮೇಯ ಇದ್ದಿತು. 1591ರ ವರೆಗೆ ಹಾಗೆಯೇ ಮುಂದುವರಿದಿದ್ದಿತು.[5] ರಾಜ ಒಡೆಯರು ಅಧಿಕಾರಕ್ಕೆ ಬಂದ ವರ್ಷದಿಂದ 1585ರ ಅವಧಿಯಲ್ಲಿ ಯಾವುದೇ ಸೈನಿಕ ಕಾರ್ಯಾಚರಣೆಗಳನ್ನು ಕೈಗೊಳ್ಳದೆ ಎರಡನೆ ಶ್ರೀರಂಗ ಮತ್ತು ಶ್ರೀರಂಗಪಟ್ಟಣದ ರಾಜಪ್ರತಿನಿಧಿಯಾಗಿದ್ದ ರಾಮರಾಜಯ್ಯನ ಅತ್ಯಂತ ನಿಷ್ಠಾವಂತ ಸಾಮಂತರಾಗಿ ಮುಂದುವರಿದರು.[6] ಶ್ರೀರಂಗಪಟ್ಟಣದ ರಾಜಪ್ರತಿನಿಧಿಯ ದಳವಾಯಿಯಾಗಿದ್ದ ರೇಮಟಿ ವೆಂಕಟಯ್ಯನೊಂದಿಗೆ ಸಹ ಅನ್ಯೋನ್ಯ ಸಂಬಂಧವನ್ನೂ ಹೊಂದಿದ್ದರು. ಈ ಕಾಲದಲ್ಲಿ ಎರಡನೇ ತಿರುಮಲನು ಇನ್ನೂ ಅಪ್ರಾಪ್ತನಾಗಿದ್ದ ಕಾರಣ ರೇಮಟಿ ವೆಂಕಟಯ್ಯನೇ ಆತನ ಪ್ರತಿನಿಧಿಯಂತೆ ಶ್ರೀರಂಗಪಟ್ಟಣವನ್ನು ಆಳುತ್ತಿದ್ದನು.[7]

ಎರಡನೇ ತಿರುಮಲನು, ರಾಮರಾಜಯ್ಯನ ಹಿರಿಯ ಪುತ್ರನು. 1584ರಲ್ಲಿ ಶ್ರೀರಂಗಪಟ್ಟಣದ ರಾಜಪ್ರತಿನಿಧಿಯ ಸ್ಥಾನ ತೆರವಾಗಿದ್ದರಿಂದ ಮತ್ತು ರಾಮರಾಜಯ್ಯನ ಪುತ್ರರು ಪೆನುಗೊಂಡೆಯಲ್ಲಿ ರಕ್ಷಣೆಯನ್ನೂ ಪಡೆದಿದ್ದರಿಂದ ರಾಜ ಒಡೆಯರ್ ತಮ್ಮ ಚಟುವಟಿಕೆಗಳನ್ನು ಅಂದರೆ ಇತರೆ ಪಾಳೇಪಟ್ಟುಗಳ ವಿರುದ್ಧ ಸೈನಿಕ ಕಾರ್ಯಾಚರಣೆ ಕೈಗೊಳ್ಳುವ ಮತ್ತು ಬಲವೃದ್ಧಿಸಿಕೊಳ್ಳುವ ಕಾರ್ಯಕ್ಕೆ ಕೈ ಹಾಕಿದರು. 1584ರ ಮಾರ್ಚ್ ತಿಂಗಳಲ್ಲಿ ಅಕ್ಕಿಹೆಬ್ಬಾಳನ್ನು ಹೊಳೆನರಸೀಪುರದ ಪಾಳೆಪಟ್ಟಿನ ನಾಯಕನಾದ ನರಸಿಂಹ ನಾಯಕನಿಂದ ವಶಪಡಿಸಿಕೊಂಡನು.[8]

ಎರಡನೆಯ ಹಂತ

ರಾಜ ಒಡೆಯರ ದ್ವಿತೀಯ ಆಡಳಿತಾವಧಿ ಕ್ರಿ.ಶ. 1585ರಿಂದ 1610ರ ವರೆಗಿನ ಕಾಲಘಟ್ಟ. ಈ ಕಾಲಘಟ್ಟದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಒಂದನೇ ವೆಂಕಟನು ಆಳುತ್ತಿದ್ದನು. ಇದೇ ಕಾಲಘಟ್ಟದಲ್ಲಿ ತಿರುಮಲನು ಶ್ರೀರಂಗಪಟ್ಟಣದ ರಾಜಪ್ರತಿನಿಧಿಯಾಗಿದ್ದನು. ಶ್ರೀರಂಗಪಟ್ಟಣದ ಸುತ್ತಮುತ್ತಲಿನಲ್ಲಿ ದೊರಕಿರುವ ಶಾಸನ ಆಕರಗಳು ಆ ಹೊತ್ತಿಗಾಗಲೇ ತಿರುಮಲನು ರಾಜಪ್ರತಿನಿಧಿಯಾಗಿದ್ದನ್ನು ದಾಖಲಿಸಿವೆ.[9] ಈ ಕಾಲಘಟ್ಟದಲ್ಲಿ ರೇಮಟಿ ವೆಂಕಟಯ್ಯನ ಉತ್ತರಾಧಿಕಾರಿ ದಳವಾಯಿ ರಾಮಾನುಜಯ್ಯನು ತಿರುಮಲನೊಂದಿಗೆ ಸಹಕರಿಸುತ್ತಿದ್ದನು. ತಿರುಮಲನ ರಾಜಪ್ರತಿನಿಧಿತ್ವದ ಮೊದಲನೆಯ ವರ್ಷದಲ್ಲಿ ಅಂದರೆ 1585ರಲ್ಲಿ ರಾಜ ಒಡೆಯರು ಶ್ರೀರಂಗಪಟ್ಟಣಕ್ಕೆ ಮೊದಲ ಭೇಟಿಯನ್ನೂ ಇತ್ತಿದ್ದರು. ಈ ಭೇಟಿಯ ಕಾಲದಲ್ಲಿ ತಿರುಮಲನು ಮೈಸೂರು ಸಂಸ್ಥಾನದಿಂದ ಬಾಕಿಯಿದ್ದ ಕಂದಾಯದ ಹಣವನ್ನು ಸಲ್ಲಿಸುವಂತೆ ಸೂಚಿಸಿದನು. ಇದಕ್ಕೆ ಪ್ರತಿಯಾಗಿ ರಾಜ ಒಡೆಯರು ಕಾಡುಮೃಗಗಳ ಹಾವಳಿಯಿಂದಾಗಿ ಬೆಳೆ ಹಾಳಾಗಿರುವ ಕಾರಣ ಕಂದಾಯ ಸಲ್ಲಿಸಲಾಗುವುದಿಲ್ಲವೆಂದು ಉತ್ತರಿಸಿದ್ದು ದಾಖಲಿಸಲಾಗಿದೆ.[10]

ಇದೇ ಸಂದರ್ಭದಲ್ಲಿ ರಾಜ ಒಡೆಯರು ಮೈಸೂರು ನಗರದ ಸುತ್ತ ಆಳೆತ್ತರದ ಕೋಟೆಯನ್ನು ಕಟ್ಟಲು ತಿರುಮಲನಿಂದ ಅನುಮತಿಯನ್ನು ಸಹ ಪಡೆದುಕೊಂಡರು. ಅಲ್ಲದೆ ಸೈನ್ಯವನ್ನು ಬಲಪಡಿಸಿಕೊಂಡು ಕಾಲಕಾಲಕ್ಕೆ ಸರಿಯಾಗಿ ಪೊಗದಿಯನ್ನು ಸಲ್ಲಿಸುವುದಾಗಿ ವಚನವಿತ್ತರು. ಆನಂತರ ಮೈಸೂರಿನಲ್ಲಿ ಕೋಟೆಯನ್ನು ಕಟ್ಟುವುದಕ್ಕೆ ತಿರುಮಲನ ಅಪ್ಪಣೆ ದೊರೆತ ನಂತರ ಅಲ್ಲಿಂದ ವಿಜಯನಗರದ ತೆರಿಗೆ ವಸೂಲಿದಾರರನ್ನು ಹೊರಹಾಕಿದರು.[11]

ರಾಜ ಒಡೆಯರು ಶ್ರೀರಂಗಪಟ್ಟಣದ ಪ್ರಾಂತ್ಯಕ್ಕೆ ಹೊಸದಾಗಿ ಬಂದ ರಾಜಪ್ರತಿನಿಧಿಯ ಶಕ್ತಿಸಾಮರ್ಥ್ಯಗಳ ಅರಿವಿದ್ದಿದ್ದರಿಂದಲೇ ಅವರು ಈ ಮೇಲಿನ ನಿರ್ಧಾರವನ್ನೂ ಕೈಗೊಂಡಂತೆ ಕಂಡುಬರುತ್ತದೆ. ಈ ಮೇಲಿನ ಹೇಳಿಕೆಗೆ ಪೂರಕವಾಗಿ ರಾಜ ಒಡೆಯರು 1586ರ ಫೆಬ್ರವರಿಯಲ್ಲಿ ರಂಗಸಮುದ್ರ ಮತ್ತು ಅದರ 12 ಗ್ರಾಮಗಳನ್ನು ತಿರುಮಲನಿಂದ ವಶಪಡಿಸಿಕೊಳ್ಳುತ್ತಾರೆ.[12] 1590ರ ಹೊತ್ತಿಗೆ ಮೈಸೂರಿನಿಂದ ಆಡಳಿತಗಾರರಾಗಿ ರಾಜ ಒಡೆಯರ್ ಸ್ಥಾನಮಾನ ಸಂಪೂರ್ಣ ಸುಭದ್ರವಾಗಿದ್ದಿತು. ಅಷ್ಟೇ ಅಲ್ಲದೆ ಶ್ರೀರಂಗಪಟ್ಟಣದ ರಾಜಪ್ರತಿನಿಧಿಯೊಂದಿಗೆ ರಾಜತಾಂತ್ರಿಕ ಸಂಬಂಧವನ್ನು ಮತ್ತೂ ಮುಂದುವರಿಸಿಕೊಂಡು ಹೋದರು.

ಕ್ರಿ.ಶ. 1590ರಲ್ಲಿ ರಾಜ ಒಡೆಯರ್ ಎರಡನೆಯ ಬಾರಿ ತಿರುಮಲನ ಆಸ್ಥಾನಕ್ಕೆ ಭೇಟಿ ನೀಡಿದ್ದರು.[13] ಈ ಕಾಲಘಟ್ಟದಲ್ಲಿ ಒಂದು ಸ್ವಾರಸ್ಯಕರ ಘಟನೆ ನಡೆದಂತೆ ಕೆಲವೊಂದು ಐತಿಹಾಸಿಕ ಕೃತಿಗಳಲ್ಲಿ ದಾಖಲಾಗಿದೆ. ಈ ಘಟನೆಯು ರಾಜಪ್ರತಿನಿಧಿ ತಿರುಮಲ ಮತ್ತು ರಾಜ ಒಡೆಯರ ನಡುವೆ ಇದ್ದ ಸಂಬಂಧ ಮತ್ತು ರಾಜಕೀಯ ಸ್ಥಿತಿಯ ಬಗ್ಗೆ ಬೆಳಕು ಚೆಲ್ಲುತ್ತದೆ. ರಾಜ ಒಡೆಯರು ಶ್ರೀರಂಗಪಟ್ಟಣ ತಲುಪುವ ಹಾದಿಯಲ್ಲಿ ಕೆಂಬಾಳಿನಲ್ಲಿ ಆಡಳಿತ ನಡೆಸುತ್ತಿದ್ದ ದೇವರಾಜ ಒಡೆಯರು ಅವರೊಂದಿಗೆ ಸೇರಿಕೊಂಡರು. ಈ ಸಂದರ್ಭದಲ್ಲಿ ರಾಜ ಒಡೆಯರು ತಮ್ಮ ಪಂಚವಾದ್ಯಗಳ ನಿಲ್ಲಿಸಿ ಅರಮನೆಯನ್ನು ಪ್ರವೇಶಿಸಿದರು. ರಾಜ ಒಡೆಯರ ಈ ವರ್ತನೆಗೆ ತಿರುಮಲನು ಕಾರಣ ಕೇಳಿದಾಗ ಅವರು ತನಗಿಂತ ಶ್ರೇಷ್ಠತೆಯಲ್ಲಿ ಅತಿ ಕಿರಿಯವನಾದ ದೇವರಾಜ ಒಡೆಯರೊಂದಿಗೆ ಪಂಚವಾದ್ಯಗಳೊಡನೆ ಗೌರವಿಸಿಕೊಳ್ಳುವುದು ಅಸಾಧ್ಯವೆಂದು ಈ ರೀತಿ ನಡೆದುಕೊಳ್ಳಬೇಕಾಯಿತೆಂದು ತಿಳಿಸುತ್ತಾರೆ. ಈ ಕಾರಣಕ್ಕಾಗಿ ರಾಜ ಒಡೆಯರು ದೇವರಾಜನ ವಿರುದ್ಧ ಸೈನಿಕ ಕಾರ್ಯಾಚರಣೆ ನಡೆಸಿ ಅದೇ ವರ್ಷ ಕೆಂಬಾಳನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಂಡರು.[14]

ಈ ಘಟನೆಯ ಸತ್ಯಾಸತ್ಯತೆ ಏನೇ ಇದ್ದರೂ ಇದು ರಾಜ ಒಡೆಯರ್ ಹೊಂದಿದ್ದ ಆತ್ಮಗೌರವ ಮತ್ತು ರಾಜಕೀಯ ಮುತ್ಸದ್ದಿಯಾಗಿ ಬೆಳೆದಿದ್ದ ಹಂತವನ್ನು ತೋರುತ್ತದೆ. ಅಲ್ಲದೆ ತಮ್ಮ ರಾಜಕೀಯ ಸ್ಥಾನಮಾನವನ್ನು ಕಾಪಾಡಿಕೊಳ್ಳಲು ಉತ್ಸುಕರಾಗಿದ್ದುದನ್ನು ವ್ಯಕ್ತಪಡಿಸುತ್ತದೆ. ಕ್ರಿ.ಶ. 1591ರಲ್ಲಿ ತನ್ನ ದಾಯಾದಿಯಿಂದ ಮುಳ್ಳೂರನ್ನು ವಶಪಡಿಸಿಕೊಂಡರು.[15]

ಈ ಎರಡೂ ಘನೆಗಳಿಂದಾಗಿ ಹಿರಿಯ ಬೆಟ್ಟದ ಚಾಮರಾಜ ಒಡೆಯರ್ ಕಾಲದಲ್ಲಿ ವಿಭಜನೆಯಾಗಿದ್ದ ಮೈಸೂರು ಸಂಸ್ಥಾನ ಮತ್ತೆ ಒಂದಾಯಿತು.

ಸೈನಿಕ ಕಾರ್ಯಾಚರಣೆ ಮುಂದುವರಿಸಿದ ರಾಜ ಒಡೆಯರ್ ಒಂದೇ ಗತಿಯಲ್ಲಿ ಆಕ್ರಮಣ ಮತ್ತು ಪ್ರತ್ಯಾಕ್ರಮಣ ಮಾಡದೆ ಕೆಲ ಕಾಲ ತಾಟಸ್ಥ್ಯ ನೀತಿಯನ್ನು ಸಹ ಅನುಸರಿಸಿದರು. 1590ರಿಂದ 1592ರ ವರೆಗೆ ರಾಜ ಒಡೆಯರ್ ಆಡಳಿತಾವಧಿ ಒಂದು ರೀತಿಯಲ್ಲಿ ತಾಟಸ್ಥ್ಯ ನೀತಿಗೆ ವಿರುದ್ಧವಾದ ಅತಿವೇಗದ ಆಕ್ರಮಣಗಳ ಕಾಲ.[16] ಈ ಕಾಲಘಟ್ಟದಲ್ಲಿ ತಿರುಮಲನು ರಾಜಧಾನಿಯಿಂದ ದೂರವಿದ್ದನು. ಈ ಕಾಲವನ್ನು ಬಳಸಿಕೊಂಡ ರಾಜ ಒಡೆಯರ್ ತಮ್ಮ ರಾಜಕೀಯ ಮಹತ್ವಾಕಾಂಕ್ಷೆಯನ್ನು ಸೈನಿಕ ವಿಜಯಗಳ ಆಧಾರದ ಮೇಲೆ ಸಾಧಿಸಲಾರಂಭಿಸಿದರು. ಕ್ರಿ.ಶ. 1592ರಲ್ಲಿ ರಂಗಸಮುದ್ರದಲ್ಲಿ ಬಲವಾದ ಕೋಟೆಯನ್ನು ನಿರ್ಮಿಸಿದರು.[17]

ಕ್ರಿ.ಶ. 1593ರಲ್ಲಿ ಹಾರೋಹಳ್ಳಿಯನ್ನು ಗೆದ್ದುಕೊಂಡರು[18] ಮತ್ತು 1595ರ ಜುಲೈ ತಿಂಗಳಲ್ಲಿ ನರುನೇಹಳ್ಳಿಯನ್ನು ಮಲ್ಲರಾಜನಿಂದ ಗೆದ್ದುಕೊಂಡರು.[19] 1595ರ ಅಕ್ಟೋಬರ್‌ನಲ್ಲಿ ರಾಜ ಒಡೆಯರವರ ತಮ್ಮ ಬೆಟ್ಟದ ಚಾಮರಾಜ ಒಡೆಯರ ನೇತೃತ್ವದಲ್ಲಿ 300 ಜನ ಆಯ್ದು ಸೈನಿಕರ ಸಹಾಯದಿಂದ ತಮ್ಮ ಸಂಬಂಧಿ ವೀರರಾಜಯ್ಯನನ್ನೂ ಸೋಲಿಸಿದರು.[20] ಈತನು ಚಾಮುಂಡಿಬೆಟ್ಟದ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದನಲ್ಲದೆ ರಾಜ ಒಡೆಯರನ್ನು ಕೊಲ್ಲಲು ಸಂಚು ರೂಪಿಸಿದ್ದನು. ಒಂದು ಆಧಾರದಂತೆ ಈ ಯುದ್ಧ ಕಾಡುಬಸವನ ತಿಟ್ಟಿನಲ್ಲಿ ನಡೆಯಿತೆಂದು ದಾಖಲಿಸಲಾಗಿದೆ. ರಾಜ ಒಡೆಯರ್ ಕುದುರೆಯ ಮೇಲೆ ಕುಳಿತು ವೀರರಾಜಯ್ಯನೊಂದಿಗೆ ದ್ವಂದ್ವಯುದ್ಧದಲ್ಲಿ ಭಾಗಿಗಳಾಗಿದ್ದರು. ಈ ಯುದ್ಧದಲ್ಲಿ ರಾಜ ಒಡೆಯರ್ ಬೀಸು ಸುತ್ತಿಗೆಯಿಂದ ಅವನ ಮೂಗನ್ನು ಜಜ್ಜಿ ಸೋಲಿಸಿ ಆನಂತರ ಕೋಟೆಯನ್ನು ನೆಲಸಮಮಾಡಿ ನಗರವನ್ನು ಹಾಳುಗೆಡವಿ, ಉತ್ತು, ಹರಳು ಬಿತ್ತಿದಂತೆ ದಾಖಲಿಸಲಾಗಿದೆ.

ಈ ಎಲ್ಲ ಸೈನಿಕ ಕಾರ್ಯಾಚರಣೆಗಳು ರಾಜ ಒಡೆಯರನ್ನೂ ಮತ್ತೊಮ್ಮೆ ತಿರುಮಲನ ವಿರೋಧಿಯನ್ನಾಗಿ ರೂಪಿಸಿ ನೇರವಾದ ಸಂಘರ್ಷಕ್ಕೆ ಎಡೆಮಾಡಿಕೊಟ್ಟವು. ರಾಜ ಒಡೆಯರು ಮೈಸೂರು ಸಂಸ್ಥಾನವನ್ನು ಪ್ರಥಮ ಮತ್ತು ದ್ವಿತೀಯ ಹಂತದಲ್ಲಿ ಒಂದು ಮಹತ್ವದ ಸಂಸ್ಥಾನವನ್ನಾಗಿ ಬೆಳೆಸಿದುದಲ್ಲದೆ ಶ್ರೀರಂಗಪಟ್ಟಣದ ರಾಜಪ್ರತಿನಿಧಿ ತಿರುಮಲನೊಂದಿಗೆ ರಾಜ ಒಡೆಯರ್ ಸಂಬಂಧ ನಕಾರಾತ್ಮಕ ಬೆಳವಣಿಗೆಯನ್ನು ಪಡೆಯಲು ಪ್ರೇರೇಪಿಸಿದವು.

ಕ್ರಿ.ಶ. 1592ರಿಂದ 1595ರ ವರೆಗೆ ವಿಜಯನಗರದ ರಾಜಪ್ರತಿನಿಧಿ ತಿರುಮಲನು ವಿಜಯನಗರ ಸಾಮ್ರಾಜ್ಯದ ವಿರುದ್ಧ ಬಂಡೆದ್ದ ಮಧುರೆಯ ನಾಯಕನನ್ನು ಶಿಕ್ಷಿಸಲು ವಿಜಯನಗರ ಸಾಮ್ರಾಟನ ನಿರ್ದೇಶನದಂತೆ ತನ್ನ ಸೇನೆಯೊಂದಿಗೆ ಮಧುರೆಯತ್ತ ಪ್ರಯಾಣ ಮಾಡಿ ಸೈನಿಕ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಹಿಂತಿರುಗಿದನೆಂದು ತಿಳಿದುಬರುತ್ತದೆ. ಕೆಲವೊಂದು ಆಕರಗಳಲ್ಲಿ ತಿರುಮಲನು ಸಾಮ್ರಾಟನಿಗೆ ಸಂಪೂರ್ಣ ನಿಷ್ಠನಾಗಿರುವುದಕ್ಕೆ ಬದಲಾಗಿ ಸಾಮ್ರಾಜ್ಯದ ಶತ್ರುವಾದ ಮಧುರೆಯ ನಾಯಕನೊಂದಿಗೆ ಕೈಜೋಡಿಸಿ ಸಾಮ್ರಾಟನ ಕೋಪಕ್ಕೆ ಗುರಿಯಾದನೆಂದು ಚಿತ್ರಿಸಲಾಗಿದೆ. ಮತ್ತೆ ಕೆಲವು ಆಕರಗಳು ಇದು ಆಧಾರರಹಿತವೆಂದೂ ಮಧುರೆಯ ನಾಯಕನ ವಿರುದ್ಧದ ಕಾರ್ಯಾಚರಣೆಗಳಲ್ಲಿ ತಿರುಮಲನು ಹೆಚ್ಚಿನದನ್ನು ಸಾಧಿಸಲಾಗಲಿಲ್ಲವೆಂದು ಅದು ಆತನ ಅದಕ್ಷತೆಯನ್ನು ಹೊರಹಾಕಿತೆಂದು ವ್ಯಾಖ್ಯಾನಿಸಿವೆ. ತಿರುಮಲನ ಮಧುರೆಯ ಪಯಣ ಒಂದು ರೀತಿಯಲ್ಲಿ ರಾಜ ಒಡೆಯರು ತಮ್ಮ ಮಹತ್ವಾಕಾಂಕ್ಷೆಯನ್ನು ಬೆಳೆಸಿಕೊಳ್ಳಲು ಮತ್ತು ಅದನ್ನು ಸಾಧಿಸಲು ಬೇಕಾದ ಎಲ್ಲ ಪೂರ್ವ ತಯಾರಿಯನ್ನು ಮಾಡಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ಮತ್ತು ಕಾಲಾವಕಾಶವನ್ನು ಒದಗಿಸಿತು ಮತ್ತು ತಿರುಮಲನ ಅಶಕ್ತತೆಯನ್ನು ಬಯಲು ಮಾಡುವಲ್ಲಿ ಫಲಕಾರಿಯಾಯಿತು. ತಿರುಮಲನು ಮಧುರೆಯಿಂದ ಹಿಂತಿರುಗಿದ ಮೇಲೆ ಆತನ ಪ್ರಾಂತ್ಯದ ಹಲವಾರು ಪಾಳೇಗಾರರುಗಳು ಶ್ರೀರಂಗಪಟ್ಟಣದ ಆಸ್ಥಾನಕ್ಕೆ ತೆರಳಿ ರಾಜ ಒಡೆಯರ ಸೈನಿಕ ಕಾರ್ಯಾಚರಣೆಗಳು ಮತ್ತು ಆತನು ದಿನೇ ದಿನೇ ತಿರುಮಲನ

ವಿರೋಧಿಯಾಗುತ್ತಿರುವುದರ ಬಗ್ಗೆ ದೂರಿದರು. ಈ ಮಧ್ಯೆ ರಾಜ ಒಡೆಯರ ನಿಯೋಗಿಗಳೂ ತಿರುಮಲನ ಆಸ್ಥಾನಕ್ಕೆ ಭೇಟಿ ನೀಡಿ ರಾಜ ಒಡೆಯರು ತಿರುಮಲನೊಂದಿಗೆ ಸ್ನೇಹಭಾವದಿಂದ ವರ್ತಿಸಲು ಸನ್ನದ್ದವಾಗಿರುವ ವಿಷಯವನ್ನು ಅರುಹಿದರು.

ಈ ವಿಷಯವನ್ನು ಚಿಕ್ಕದೇವರಾಜ ವಂಶಾವಳಿ ಮತ್ತು ಕಂಠೀರವ ನರಸರಾಜ ವಿಜಯ ಕೃತಿಗಳು ಎರಡೂ ಅನುಮೋದಿಸುತ್ತವೆ. ಚಿಕ್ಕದೇವರಾಜ ವಂಶಾವಳಿಯು[21] ತಿರುಮಲನು, ರಾಜ ಒಡೆಯರ ನಿಯೋಗಿಗಳನ್ನು ಗೌರವದಿಂದ ಕಂಡು ಅವರಿಗೆ ಕಾಣಿಕೆಗಳನ್ನು ಇತ್ತು ರಾಜ ಒಡೆಯರು ಮುಂದಿನ ಮಾತುಕತೆಗಾಗಿ ಆಸ್ಥಾನವನ್ನು ಸಂದರ್ಶಿಸಬಹುದೆಂಬ ಒಪ್ಪಿಗೆಯನ್ನು ನೀಡಿದ್ದನ್ನು ತಿಳಿಸುತ್ತದೆ. ಇದೇ ಸಮಯದಲ್ಲಿ ತಿರುಮಲನ ರಾಜಕೀಯ ಮುತ್ಸದ್ದಿ ಪರಾಕ್ರಮಿಯೂ ಆದ ರಾಜ ಒಡೆಯರಂತಹವರನ್ನು ತನ್ನ ಆಡಳಿತದಲ್ಲಿ ಸಾಮಂತನಾಗಿ ಇಟ್ಟುಕೊಳ್ಳಲು ಉದ್ವೇಗಸಹಿತವಾದ ಭಯ ಇದ್ದಿತೆಂಬ ಅಭಿಪ್ರಾಯ ಸಹ ದಾಖಲಾಗಿದೆ.[22] ಅಂದರೆ ತಿರುಮಲನು ಮೈಸೂರಿನಲ್ಲಿ ರಾಜ ಒಡೆಯರು ಸಾಮಂತನಾಗಿರುವುದು ಒಂದು ರೀತಿಯಲ್ಲಿ ತನ್ನ ಸ್ಥಾನಮಾನಗಳಿಗೆ ಕುತ್ತಾಗುವುದೆಂದು ಭಾವಿಸಿದಂತೆ ಸಹ ತಿಳಿದುಬರುತ್ತದೆ. ಪಾಳೆಪಟ್ಟನ್ನು ಸೈನಿಕ ಕಾರ್ಯಾಚರಣೆ ಮೂಲಕ ವಶಪಡಿಸಿಕೊಳ್ಳುವ ಲೆಕ್ಕಾಚಾರದಲ್ಲಿ ತೊಡಗಿದನು. ಈ ಹಂತದಲ್ಲಿ ತಿರುಮಲನು ತನ್ನ ಪ್ರಾಂತ್ಯದ ಎಲ್ಲ ಅರಸುಗಳಿಗೆ ತಮ್ಮ ಸೇನೆಯನ್ನು ಮಹಾನವಮಿಯ ಆಚರಣೆಯ ಸಂದರ್ಭದಲ್ಲಿ ತರುವಂತೆ ತಾಳೆ ಓಲೆಯನ್ನು ಕಳುಹಿಸಿದನು.[23] ಈ ಎಲ್ಲ ವಿದ್ಯಮಾನಗಳೂ ರಾಜ ಒಡೆಯರಿಗೆ ಬೇಹುಗಾರರಿಂದ ಅಂದಂದಿನ ಸಮಾಚಾರಗಳ ರೀತಿಯಲ್ಲಿ ಅರುಹಲ್ಪಟ್ಟವು. ರಾಜ ಒಡೆಯರವರು ತಮ್ಮ ಸೋದರಸಂಬಂಧಿ ದೇವರಾಜಯ್ಯನ ಸಲಹೆಯಂತೆ ಮೈಸೂರು ಪಾಳೆಪಟ್ಟು ಮತ್ತು ಇತರ ಪಾಳೆಪಟ್ಟುಗಳ ನಡುವಿನ ಸಂಬಂಧವನ್ನು ಗಮನದಲ್ಲಿಟ್ಟುಕೊಂಡು ಮತ್ತೆ ತಿರುಮಲನ ಆಸ್ಥಾನಕ್ಕೆ ನಿಯೋಗಿಗಳನ್ನು ಕಳುಹಿಸಿದರು. ಈ ನಿಯೋಗಿಗಳು ರಾಜ ಒಡೆಯರು ತಿರುಮಲನ ಭೇಟಿಗೆ ಉತ್ಸುಕರಾಗಿರುವ ವಿಚಾರವನ್ನು ಅರುಹಿದರು.[24] ಆದರೂ ತಿರುಮಲನ ಮನಸ್ಸಿನಲ್ಲಿ ರಾಜ ಒಡೆಯರನ್ನು ಕೊಲ್ಲುವ ಕುಟಿಲ ಯೋಜನೆಯು ಹುಟ್ಟಿತು. ಈ ವಿದ್ಯಮಾನಗಳು ನಡೆದ ಸ್ವಲ್ಪಕಾಲದಲ್ಲೇ ರಾಜ ಒಡೆಯರು ತಮ್ಮ ಸೋದರಸಂಬಂಧಿ ದೇವರಾಜ ಒಡೆಯನೊಂದಿಗೆ ತಿರುಮಲನ ಆಸ್ಥಾನಕ್ಕೆ ಭೇಟಿ ನೀಡುವ ಸಲುವಾಗಿ ಶ್ರೀರಂಗಪಟ್ಟಣಕ್ಕೆ ತೆರಳಿ ತಮ್ಮ ಆರಾಧ್ಯದೈವನೂ ಆದ ಶ್ರೀ ರಂಗನಾಥನ ದರ್ಶನ ಮಾಡುವ ಯೋಜನೆಯನ್ನು ಹಾಕಿಕೊಂಡರು.

ರಾಜ ಒಡೆಯರು ಶ್ರೀರಂಗಪಟ್ಟಣಕ್ಕೆ ಬರುವ ಸುದ್ದಿಯನ್ನು ಪಡೆದ ತಿರುಮಲನು ಕಾವೇರಿ ನದಿಯ ದಕ್ಷಿಣದ ಭಾಗವನ್ನು ದಾಟಿ ಪಶ್ಚಿಮವಾಹಿನಿಯವರೆಗೆ ಬಂದು ಸೇನಾಸಮೇತರಾಗಿ ರಾಜ ಒಡೆಯರನ್ನು ಸಂಧಿಸಲು ಯೋಜಿಸಿ ಕಾರ್ಯಪ್ರವೃತ್ತನಾದನು. ಈ ಪ್ರದೇಶದಲ್ಲಿ ತಿರುಮಲನು ರಾಜ ಒಡೆಯರನ್ನು ಸಂಧಿಸಿದನು. ರಾಜ ಒಡೆಯರ ಬಿಡಾರಕ್ಕೆ ಬಂದ ತಿರುಮಲನು ತಮ್ಮ ನಡುವೆ ಆಗಬೇಕಾದ ಸೌಹಾರ್ದತೆಯ ಬೆಳವಣಿಗೆಯ ಬಗೆಗೆ ಒಮ್ಮತದ ಅಭಿಪ್ರಾಯಕ್ಕೆ ಬಂದು ತನ್ನ ಬಿಡಾರಕ್ಕೆ ಹಿಂತಿರುಗಲು ಸನ್ನದ್ಧನಾದನು. ತಿರುಮಲನು ರಾಜ ಒಡೆಯರ ಬಿಡಾರದಿಂದ ಹಿಂತಿರುಗುವ ಸಂದರ್ಭದಲ್ಲಿ ರಾಜ ಒಡೆಯರ ಪ್ರಹರಿಯು ರಾಜ ಒಡೆಯರಿಗೆ ಪರಾಕು ಹೇಳುತ್ತಾ 'ಬಿರುದಂತೆಂಬರಗಂಡ' ಎಂಬ ಬಿರುದನ್ನು ಹೇಳಿದನು. ಇದರಿಂದ ಕುಪಿತನಾದ ತಿರುಮಲನು ಬಿರುದಂತೆಂಬರಗಂಡ ಬಿರುದು ಅತಿ ಹಿಂದಿನಿಂದಲೂ ನಮ್ಮ ಮನೆತನದ ಬಿರುದಾಗಿರುವುದೆಂದು ಅದನ್ನು ಮೈಸೂರು ದೊರೆಗಳು ಬಳಸಬಾರದೆಂದು ತನ್ನ ಮಂತ್ರಿಗಳ ಮೂಲಕ ತಿಳಿಹೇಳುವ ಪ್ರಯತ್ನವನ್ನು ಮಾಡಿದನು.[25] ರಾಜ ಒಡೆಯರು ತಮ್ಮ ಸೋದರಸಂಬಂಧಿ ದೇವರಾಜಯ್ಯನೊಂದಿಗೆ ಈ ಬಿರುದು ಮೈಸೂರು ಅರಸರಿಗೆ ಅವರ ಶೌರ್ಯದಿಂದ ಪ್ರದತ್ತವಾದ ಬಿರುದು ಎಂದು ತಿಳಿಸಿ ನಾವು ಅದನ್ನು ಉಪಯೋಗಿಸಿಯೇ ತೀರುತ್ತೇವೆಂದು ಪುನಃ ತಿರುಮಲನಿಗೆ ಹೇಳಿಕಳುಹಿಸಿದನು. ಈ ಬಿರುದು ಎರಡನೇ ತಿಮ್ಮರಾಜ ಮತ್ತು ಮುಮ್ಮಡಿ ಹಿರಿಯ ಬೆಟ್ಟದ ಚಾಮರಾಜ ಒಡೆಯರವರ ಕಾಲದಿಂದಲೂ ಮೈಸೂರು ಅರಸರು ಬಿರುದಾಗಿ ಹೊಂದಿರುವುದನ್ನು ತಿರುಮಲನಿಗೆ ತಿಳಿಸುವ ಪ್ರಯತ್ನ ನಡೆಯಿತು. ಈ ಹೊತ್ತಿಗೆ ತಿರುಮಲನು ರಾಜ ಒಡೆಯರೊಂದಿಗಿನ

ಎಲ್ಲ ಸ್ನೇಹಸಂಬಂಧವನ್ನು ತೊರೆದು ಅವರೊಂದಿಗಿನ ಸಂಘರ್ಷದ ಮಾರ್ಗವನ್ನು ಹಿಡಿಯುವ ಯೋಜನೆಯಲ್ಲಿ ಮುಳುಗಿದ್ದನು. ಇದೇ ಸಮಯದಲ್ಲಿ ತಿರುಮಲನ ಆಸ್ಥಾನದಲ್ಲಿದ್ದ ಮೈಸೂರು ಪ್ರಾಂತ್ಯದ ಪಾಳೆಗಾರರುಗಳ ಸಭೆಯಲ್ಲಿ ರಾಜ ಒಡೆಯರನನ್ನು ನಿಗ್ರಹಿಸುವ ಯೋಜನೆಯನ್ನು ರೂಪಿಸಿದನು.

ಈ ವಿಷಯವನ್ನು ತಿರುಮಲನ ಆಸ್ಥಾನದಲ್ಲಿದ್ದ ಸೋಮಯಾಜಿಯು ರಾಜ ಒಡೆಯರಿಗೆ ಅರುಹಿದನು. ರಾಜ ಒಡೆಯರು ತಿರುಮಲನ ಭೇಟಿಯನಂತರ ತನ್ನ ಆರಾಧ್ಯದೈವವಾದ ಶ್ರೀರಂಗನಾಥನ ದರ್ಶನಕ್ಕಾಗಿ ಶ್ರೀರಂಗಪಟ್ಟಣ ಪ್ರವೇಶಿಸುವ ಯೋಜನೆಯನ್ನು ಇಟ್ಟುಕೊಂಡಿದ್ದರು. ತಿರುಮಲನು ಈ ಸಂದರ್ಭವನ್ನು ಬಳಸಿಕೊಂಡು ಶ್ರೀರಂಗನಾಥನ ದೇವಸ್ಥಾನದಲ್ಲಿ ಒಂಟಿಯಾಗಿ ನಿರಾಯುಧರಾಗಿ ಪರಮಾತ್ಮನ ಸೇವೆಯಲ್ಲಿರುವಾಗ ರಾಜ ಒಡೆಯರನ್ನು ಬಂಧಿಸುವ ಯೋಜನೆಯನ್ನು ಮಾಡಿದ್ದನು. ಆದರೆ ರಾಜ ಒಡೆಯರ್ ಶ್ರೀರಂಗನಾಥನ ದರ್ಶನವನ್ನು ಮಾಡಿ ಬ್ರಹ್ಮಪುರಿ ದ್ವಾರದ ಮೂಲಕ ಶ್ರೀರಂಗಪಟ್ಟಣದಿಂದ ಹೊರಬಂದು ಮೈಸೂರು ತಲುಪುವಂತೆ ಅವರ ಸೋದರಸಂಬಂಧಿ ದೇವರಾಜನು ಎಲ್ಲ ವ್ಯವಸ್ಥೆಗಳನ್ನೂ ಮಾಡಿದ್ದನು. ತಿರುಮಲನ ಯೋಜನೆ ವಿಫಲವಾದುದು ಆತನಿಗೆ ಅತೀವವಾದ ನಿರಾಶೆಯನ್ನುಂಟು ಮಾಡಿತು.[26] ಆತನು ಮೈಸೂರನ್ನು ಮುತ್ತುವ ಯೋಜನೆಯನ್ನು ಮಾಡಿದನು. ಈ ಸಂದರ್ಭದಲ್ಲಿ ತಿರುಮಲನ ಪಕ್ಷಪಾತಿಗಳಾದ ಪಾಳೆಗಾರರು ಈತನ ತಂದೆ ರಾಮರಾಜಯ್ಯನ ಕಾಲದಲ್ಲಿ ಮೈಸೂರಿನ ಮೇಲೆ ನಡೆದ ಆಕ್ರಮಣ ಮತ್ತು ಅವರ ಫಲಿತಾಂಶವನ್ನು ವಿವರಿಸಿ ಮೈಸೂರನ್ನು ಮುತ್ತುವುದಕ್ಕೆ ಬದಲಾಗಿ ಮೈಸೂರಿನಂಚಿನಲ್ಲಿರುವ ಕೆಸರೆ ಕೋಟೆಯನ್ನು ಮುತ್ತುವುದು ಸೂಕ್ತವೆಂದು ತಿರುಮಲನಿಗೆ ತಿಳಿಸಿದರು.[27]

ಕೆಸರೆ ಕದನದ ಹಿನ್ನೆಲೆ

ರಾಜ ಒಡೆಯರು ಮತ್ತು ತಿರುಮಲನ ಸಂಘರ್ಷಕ್ಕೆ ಕಾರಣವಾದ ಅಂಶಗಳನ್ನು ಹುಡುಕುವ ಯಾವುದೇ ಇತಿಹಾಸಕಾರರಿಗೆ ಎರಡು ಪ್ರಮುಖ ಕಾರಣಗಳು ಎದುರಾಗುತ್ತವೆ. ಒಂದನೆಯ ತಿರುಮಲನು ಮಧುರೆಯ ಆಕ್ರಮಣದ ಸಮಯದಲ್ಲಿ ರಾಜ ಒಡೆಯರ ಸಹಾಯ ನೀಡುವಂತೆ ಕೋರಿದ್ದನು. ರಾಜ ಒಡೆಯರು ತಿರುಮಲನ ಕೋರಿಕೆಯನ್ನು ಮನ್ನಿಸಲಿಲ್ಲ. ಹಾಗಾಗಿ ತಿರುಮಲನು ರಾಜ ಒಡೆಯರ ಬಗ್ಗೆ ಅಸಮಾಧಾನವನ್ನು ಬೆಳೆಸಿಕೊಂಡಿದ್ದನು.[28] ಎರಡನೇ ಕಾರಣವನ್ನು ಗುರುತಿಸುವುದಾದರೆ ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯ ಮತ್ತು ತಿರುಮಲಾರ್ಯನ ಚಿಕ್ಕದೇವರಾಜ ವಂಶಾವಳಿ ಕೃತಿಗಳೆರಡೂ ತಿರುಮಲನು ಶ್ರೀರಂಗಪಟ್ಟಣಕ್ಕೆ ಹಿಂತಿರುಗಿದ ನಂತರ ವಿಜಯನಗರ ಸಾಮ್ರಾಜ್ಯದ ರಾಜಪ್ರತಿನಿಧಿಯ ಸಾಮಂತರುಗಳು ಕಾರುಗಹಳ್ಳಿ, ಶ್ರೀರಂಗಪಟ್ಟಣ, ಕನ್ನಂಬಾಡಿ, ತಲಕಾಡು, ಅಮ್ಮಚವಾಡಿ ಮುಂತಾದ ಪ್ರದೇಶಗಳ ನಾಯಕರುಗಳು ತಿರುಮಲನ ಆಸ್ಥಾನವನ್ನು ಸಂದರ್ಶಿಸಿ ತಿರುಮಲನಿಗೆ ರಾಜ ಒಡೆಯರ್ ವಿರುದ್ಧ ಕಾರ್ಯಾಚರಣೆಯನ್ನು ಕೈಗೊಳ್ಳುವಂತೆ ಹುರಿದುಂಬಿಸಿದರೆಂದು ತಿಳಿಸುತ್ತದೆ.

ರಾಜ ಒಡೆಯರು, ತಿರುಮಲರಾಜನು ಮಧುರೆಯಲ್ಲಿದ್ದ ಸಂದರ್ಭದಲ್ಲಿ ಮೈಸೂರಿನ ಸುತ್ತಮುತ್ತ ಕೈಗೊಂಡ ಸೈನಿಕ ಕಾರ್ಯಾಚರಣೆಗಳು ಮತ್ತು ಅವರು ಸಣ್ಣಪುಟ್ಟ ಪಾಳೇಗಾರರ ವಿರುದ್ಧ ಸಾಧಿಸಿದ ಮೇಲುಗೈ ಈ ಮೇಲೆ ಹೇಳಿದ ಮೈಸೂರಿನ ಎಲ್ಲೆಯ ನಾಯಕರುಗಳನ್ನು ಮೈಸೂರಿನ ವಿರೋಧಿಗಳಾಗಿ ರೂಪಿಸಿತು. ರಾಜ ಒಡೆಯರು ತಿರುಮಲನಿಗೆ ಮಧುರೆಯ ಕಾರ್ಯಾಚರಣೆಯಲ್ಲಿ ಸಹಾಯ ನೀಡದ ನೆಪವನ್ನು ಮುಂದಿಟ್ಟುಕೊಂಡು ಇವರು ತಿರುಮಲನನ್ನು ರಾಜ ಒಡೆಯರ್‌ನ ವಿರುದ್ಧ ಎತ್ತಿಕಟ್ಟಿದರು. ಈ ಹಂತದಲ್ಲಿ ರಾಜ ಒಡೆಯರು ತಿರುಮಲನಿಗೆ ಸಹಕಾರ ನೀಡದೇ ಇದ್ದುದು ಮತ್ತು ಈ ನಾಯಕರುಗಳು ತಿರುಮಲನಿಗೆ ರಾಜ ಒಡೆಯರ್‌ನನ್ನು ಶಿಕ್ಷಿಸುವ ಕಾರ್ಯದಲ್ಲಿ ಕೈಜೋಡಿಸುವುದೂ ತಿರುಮಲನ ರಾಜ ಒಡೆಯರ್ ವಿರುದ್ದದ ಸೇಡನ್ನು ವೃದ್ಧಿಸಿ ಅವರನ್ನು ದಮನ ಮಾಡುವ ಮಹತ್ವಾಕಾಂಕ್ಷೆಯನ್ನು ದ್ವಿಗುಣಗೊಳಿಸಿದವು. ಈ ಹಿನ್ನೆಲೆಯಲ್ಲಿ ತಿರುಮಲನು ಕೆಸರೆಯ ಅಧೀನದಲ್ಲಿದ್ದ ಕೆರೆಹಟ್ಟಿ, ಸತ್ಯಾಗಾಲ, ಹಂಪ್ಯಾ, ಸಾತಹಳ್ಳಿ ಮತ್ತು ಬೆಲವತ್ತಗಳನ್ನು ಮುತ್ತಿದನು.[29]

ಇದೆಲ್ಲದರ ತರುವಾಯ ಶ್ರೀರಂಗಪಟ್ಟಣದ ಸಮೀಪವಿರುವ ಕೊಡಿಯಾಲದಲ್ಲಿ ತಲಕಾಡು, ಅಮ್ಮಚವಾಡಿ ಮುಂತಾದ ನಾಯಕರ ಸೇನೆಯನ್ನು ಮೈಸೂರು ಸೇನೆ ಸೋಲಿಸಿತು. ಇದರಿಂದಾಗಿ ತಿರುಮಲನು ಕೆಸರೆಯನ್ನು ಮುತ್ತುವ ಕಾರ್ಯಕ್ಕೆ ಹಿನ್ನಡೆ ಉಂಟಾಯಿತು. ಈ ಎಲ್ಲ ಚಟುವಟಿಕೆಗಳಲ್ಲಿ ತಿರುಮಲನ ಹಿನ್ನಡೆ ಆತನನ್ನು ಮತ್ತಷ್ಟು ಉದ್ರೇಕಿಸಿತೇ ವಿನಃ ಸೈನಿಕ ಕಾರ್ಯಾಚರಣೆಯಿಂದ ಹಿಂದೆ ಸರಿಯುವಂತೆ ಮಾಡಲಿಲ್ಲ. ತಿರುಮಲನನ್ನು ಕೆಸರೆಯ ಹೊರ ಪ್ರದೇಶಗಳಲ್ಲಿ ಮತ್ತು ಕೊಡಿಯಾಲದ ಬಳಿ ಸೋಲಿಸಿದ ರಾಜ ಒಡೆಯರ್ ಮಾನಸಿಕವಾಗಿ ಹೆಚ್ಚು ಪ್ರಬಲರಾದರು. ಅಲ್ಲದೆ ತಿರುಮಲನಿಗೆ ಯಾವುದೇ ಕಪ್ಪಕಾಣಿಕೆಗಳನ್ನು ಸಲ್ಲಿಸದಿರಲು ನಿರ್ಧರಿಸಿದರು. ಕೊಡಬೇಕಾಗಿದ್ದ ಎಲ್ಲ ರಾಜಧನವನ್ನು ನಿಲ್ಲಿಸಿಬಿಟ್ಟರು. ಇದಾದ ನಂತರ ತಿರುಮಲನು ರಾಜ ಒಡೆಯರನ್ನು ಪುನಃ ಕೊಲ್ಲುವ ವಿಫಲ ಯತ್ನವನ್ನು ಮಾಡಿದನು.

ಕಂಠೀರವ ನರಸರಾಜ ವಿಜಯ ಕೃತಿಯಲ್ಲಿ ತಿರುಮಲನೊಂದಿಗೆ ಕೈಜೋಡಿಸಿದ ಪಾಳೆಯಗಾರರ ಪಟ್ಟಿಯೇ ಕಂಡುಬರುತ್ತದೆ. ಅದರಂತೆ ಹದಿನಾಡಿನ ರಾಮರಾಜೇಂದ್ರ, ಪಿರಿಯಾಪಟ್ಟಣದ ರುದ್ರಗಣಭೂಪ, ತಲಕಾಡಿನ ನಂಜೇಂದ್ರ, ಕೆರೆಯೂರ ತಿಮ್ಮನಾಯಕ, ಸಾಲನಾಯಕನ ಬೈರೇಂದ್ರ, ನರಸಿಂಹಪುರದ ನಾಯಕ, ಬೇಲೂರಿನ ನಾಯಕ, ಸುಗ್ಗೇಹಳ್ಳಿಯ ದಾಸನಾಯಕ, ಯಲಹಂಕ ನಾಡಿನ ಕೆಂಗೇಂದ್ರ, ಕೋಲಾಲ, ದೊಡ್ಡಬಳ್ಳಾಪುರ ಹಾಗೂ ಬೆಂಗಳೂರ ನಾಯಕರು ತಿರುಮಲನಿಗೆ ಮೈಸೂರು ಅರಸನ ವಿರುದ್ಧವಾಗಿ ಕೈಜೋಡಿಸಿದ್ದರು. ಕೆಸರೆಯ ಯುದ್ಧಕ್ಕೆ ಈ ನಾಯಕರು ಕರೆತಂದ ಸೈನ್ಯದ ವಿವರ ಸಹ ದೊರೆಯುತ್ತದೆ. ಅದನ್ನು ಈ ಮುಂದಿನಂತೆ ಪಟ್ಟಿ ಮಾಡಬಹುದು.

	ರಾಜ	ಆನೆ	ಕುದುರೆ	ಕಾಲ್ದಳ
1	ಹದಿನಾಡ ರಾಜರಾಜೇಂದ್ರ	50	1,000	10,000 (ಸಂ. 3, ಪ. 23)
2	ಪಿರಿಯಾಪಟ್ಟಣದ ರುದ್ರ ಗಣಭೂಪ	50	2,500	20,000 (ಸಂ. 3, ಪ. 24)
3	ತಲಕಾಡು ನಂಜೇಂದ್ರ	30	1,000	16,000 (ಸಂ. 3, ಪ. 25)
4	ಕೆರೆಯೂರ ತಿಮ್ಮನಾಯಕ	20	500	8,000 (ಸಂ. 3, ಪ. 26)
5	ಸಾಲನಾಯಕನ ಬೈರೇಂದ್ರ	20	500	10,000 (ಸಂ. 3, ಪ. 27)
	ಒಟ್ಟು	170	5,500	64,000

ತಿರುಮಲನ ಕೂಟಕ್ಕೆ ಬಂದು ಐವರು ಅರಸರು ಕರೆತಂದ ಸೈನ್ಯದಲ್ಲಿ 64,000 ಕಾಲ್ದಳ; 5,500 ರಾವುತರು; ಮತ್ತು 170 ಗಜಗಳು ಇದ್ದವೆಂದು ತಿಳಿದುಬರುತ್ತದೆ. ಮುಂದಿನ ಪದ್ಯವೊಂದರಲ್ಲಿ ಕವಿ ಗೋವಿಂದವೈದ್ಯ ಸೈನ್ಯದ ಸಂಖ್ಯೆಯನ್ನು ಹೀಗೆ ವಿವರಿಸಿದ್ದಾನೆ:

ಕುದುರೆಗಳೆಂಟುಸಾವಿರ ಹೆಚ್ಚಿನ
ಮದಸಾಮಜಗಳಿನ್ನೂರು
ಒದವಿಹ ಬಲ ಲಕ್ಷ ಸಹ ತಿರುಮಲರಾಜ
ಕದನಕೈದಿದನೇನೆಂಬೆ.[30]

ಅಂದರೆ ರಾವುತರು 8,000, ಗಜಗಳು 200, ಮತ್ತು ಕಾಲ್ದಳ ಒಂದು ಲಕ್ಷವಾಗಿತ್ತು. ವ್ಯಕ್ತಿಗತ ಸಂಖ್ಯಾಬಲ ಮತ್ತು ಒಟ್ಟಾರೆ ಸೈನ್ಯಬಲದ ಪಟ್ಟಿಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಅದೇನೆಂದರೆ ಸೈನಿಕರಲ್ಲಿ 36,000, ರಾವುತರಲ್ಲಿ 2500 ಮತ್ತು 30 ಆನೆಗಳ ವ್ಯತ್ಯಾಸ ಎದುರಾಗುತ್ತದೆ. ಇದನ್ನು ನಾವು ತಿರುಮಲನ ಸೇನೆ ಎಂದು ಗ್ರಹಿಸಿದಲ್ಲಿ ಮೇಲಿನ

ಗೋವಿಂದವೈದ್ಯನ ಅಂಕಿಸಂಖ್ಯೆಗಳು ಎರಡೂ ಸಂದರ್ಭಗಳಲ್ಲಿ ಸರಿ ಇತ್ತೆಂದು ಭಾವಿಸಬೇಕಾಗುತ್ತದೆ. ಕಾರಣ ಪೂರ್ವದಲ್ಲಿ ತಿರುಮಲನು ಹೊಂದಿದ್ದ ಸೇನೆಯನ್ನು ಹೇಳಿಲ್ಲ. ಎರಡನೇ ಸಂದರ್ಭದಲ್ಲಿ ಅದನ್ನು ಸೇರಿಸಿ ಒಟ್ಟಾರೆ ಅಂಕಿಅಂಶವನ್ನು ತಿಳಿಸಿದ್ದಾನೆಂದು ಭಾವಿಸಬೇಕಾಗುತ್ತದೆ.

ಕೆಸರೆಯನ್ನು ಮುತ್ತಿದ ತಿರುಮಲನ ಸೇನೆಯ ವಿವರವನ್ನು ದಾಖಲಿಸುತ್ತಾ ಹಯವದನರಾಯರು ಶ್ರೀರಂಗಪಟ್ಟಣದ ಸೇನೆಯು ಒಂದು ಲಕ್ಷಕ್ಕೂ ಮಿಗಿಲಾದ ಪದಾತಿದಳವನ್ನು ಏಳರಿಂದ 12 ಸಾವಿರ ಸಂಖ್ಯೆಯವರೆಗಿನ ರಾವುತರನ್ನೂ 100 ರಿಂದ 200 ಸಂಖ್ಯೆಯ ಗಜಬಲವನ್ನೂ ತಿರುಮಲನೂ ತನ್ನ ಸ್ಥಾನಿಕ ಆಡಳಿತಗಾರರಿಂದ ಪಡೆದು ಅದರ ಸಹಾಯದಿಂದ ಮುತ್ತಿದನೆಂದೂ ತಿಳಿಸುತ್ತಾರೆ.[31] ಇದೇ ಸಂಖ್ಯಾಬಲವನ್ನು ಕಂಠೀರವ ನರಸರಾಜ ವಿಜಯದ ಒಂದು ಪದ್ಯ ಉಲ್ಲೇಖಿಸುತ್ತದೆ. ಇಷ್ಟು ಬಲವನ್ನು ಹೊಂದಿದ ತಿರುಮಲನ ಸೇನೆಯು ಬಹುಪಾಲು ಕೆಸರೆಯನ್ನು ಮುತ್ತಿತು. ಇದರ ಮತ್ತೊಂದು ಭಾಗ ಉಮ್ಮತ್ತೂರು ಮತ್ತು ಮೂಗೂರು ನಾಯಕನ ನೇತೃತ್ವದಲ್ಲಿ ಕೆಸರೆಯ ಯುದ್ಧದಲ್ಲಿ ಗೆದ್ದರೆ ಮೈಸೂರನ್ನು ಮುತ್ತುವ ಸಲುವಾಗಿ ಕೆರೆಹಟ್ಟಿ (ಸತ್ಯಾಗಾಲದ ಸಮೀಪ ಪಾಳ್ಯಂ)ಯಲ್ಲಿ ಬೀಡುಬಿಟ್ಟಿದ್ದಿತು. ತಿರುಮಲನು ಕೆಸರೆ ಮುತ್ತಿಗೆಯ ನಾಯಕತ್ವವಹಿಸಿಕೊಂಡು ಅದರಲ್ಲಿ ನಿರತನಾಗಿದ್ದನು. ರಾಜ ಒಡೆಯರ ಇಬ್ಬರು ಸಹೋದರರಾದ ಬೆಟ್ಟದ ಚಾಮರಾಜ ಒಡೆಯರ್, ಚನ್ನರಾಜ ಒಡೆಯರವರು ಮೈಸೂರು ಮುತ್ತಿಗೆಗಳ ಎಲ್ಲಾ ಅವಶ್ಯಕತೆಗಳನ್ನೂ ಅನುಕ್ರಮವಾಗಿ ನೋಡಿಕೊಳ್ಳುತ್ತಿದ್ದರು.

ಕೆಸರೆಯ ಕದನ

ಚಿಕ್ಕದೇವರಾಜ ವಂಶಾವಳಿ ಕೃತಿಯು ಕೆಸರೆಯ ಯುದ್ಧಕ್ಕೆ ತಿರುಮಲನು ಅಣಿಮಾಡಿಕೊಂಡ ಬಗೆಯನ್ನು ಸಹ ವಿವರಿಸುತ್ತದೆ. ಚಿಕ್ಕದೇವರಾಜ ವಂಶಾವಳಿ, ಕಂಠೀರವ ನರಸರಾಜ ವಿಜಯ ಕೃತಿಗಳು ಕೆಸರೆಯ ಕಾಳಗದ ವಿವರವನ್ನೂ ಒದಗಿಸುತ್ತವೆ.

"ಬೆಟ್ಟದ ಚಾಮರಾಜ, ಚೆನ್ನರಾಜರೂ ಲಗ್ಗೆಯೇರಿದ ಎಲ್ಲರನ್ನೂ ಸ್ವರ್ಗಕ್ಕೇರಿಸಿ ಚಿಕ್ಕದಳವೊಂದನ್ನು ಊರಲ್ಲಿಟ್ಟು ಉಳಿದ ಸೈನ್ಯದೊಡನೆ ಹೊರಬಿದ್ದು ತಮ್ಮ ತಮ್ಮ ಪಾಳಯದಲ್ಲಿ ಕೋಲಾಹಲ ಉಂಟುಮಾಡಿದುದನ್ನು ಕೇಳಿ ಕೆಟ್ಟೋಡುತ್ತಿರುವ ದಕ್ಷಿಣ-ಪಶ್ಚಿಮದವರನ್ನು ಬಿಟ್ಟು ಪೂರ್ವಕ್ಕೆ ನಡೆದು ಅಡ್ಡಗಟ್ಟಿ ತರಿದು ಇರಿದು ತಲ್ಲಣಗೊಳಿಸಿ ಧೃತಿಗೆಡಿಸಿ ಶರಣು ಬಂದವರಿಗೆ ದಯದೋರಿ, ತಿರುಗಿ ಉತ್ತರಕ್ಕೆ ಬರುತ್ತ ಅಣ್ಣನನ್ನು ಕಂಡು ಕಾಲಿಗೆರಗಿ, ಬೇಗನೆ ನಾಲ್ವರೂ ಒಡಹುಟ್ಟಿದವರು ಶ್ರೀರಂಗಪಟ್ಟಣಕ್ಕೆ ಓಡಿಹೋಗುತ್ತಿರುವ ತಿರುಮಲ ರಾಜನನ್ನು ಬೆನ್ನಟ್ಟಿ ಬರಲು, ಅವನೂ ಸಾವಿಗೆ ಹೆದರಿ, ಬೆಳ್ಗೊಡೆಯನ್ನು ಬಿಟ್ಟು, ಸೀಗುರಿಗಳನ್ನು ನೀಗಿ ಚಾಮರವನ್ನು ಕಳೆದುಕೊಂಡು ಧ್ವಜವನ್ನು ಹಳಿಮು ವಾದ್ಯಗಳನ್ನು ತ್ಯಜಿಸಿ ಕುದುರೆಯಿಂದಿಳಿದು ಆಭರಣಗಳನ್ನು ತೊರೆದು ಒಳ್ಳೆಯ ಬಟ್ಟೆಗಳನ್ನು ಬಿಟ್ಟು ವೇಷವನ್ನು ಮರೆಮಾಚಿ ಅಂಜಿ ಓಡಿಹೋದನು. (ಬೆಳ್ಗೊಡೆ ಮುಂತಾದುವೆಲ್ಲ ಚಕ್ರವರ್ತಿತ್ವ ಸೂಚಕವಾದವುಗಳು) ಅವನ ಅರಸುತನದ ಕುರುಹುಗಳನ್ನೆಲ್ಲ ತೆಗೆದುಕೊಂಡು ಪೌರುಷ ಹೆಚ್ಚಿದವರಾಗಿ ಮೈಸೂರು ಸೇರಿದರು. ಸೆರೆಸಿಕ್ಕವರಾರು? ಎಂದು ವಿಚಾರಿಸಿದನು ಅವರು ಬಿನ್ನವಿಸಿದರು.

"ಈ ದಳವಾಯಿ ಚೆನ್ನಮನಾಯಕನೂ ಈ ಪ್ರಧಾನಿ ರಾಮಾನಂಜಯ್ಯನೂ ನನ್ನ ಎಡ-ಬಲಗಳಲ್ಲಿದ್ದೂ ನನ್ನ ಮೇಲೆರಗಿದ ಯುದ್ಧಭರಕ್ಕೆ ಹೋರಾಡುವವರಂತೆ ಮುಂದಕ್ಕೆ ನಡೆದು ಮುಖ ತಪ್ಪಿಸಿದರು. ನನ್ನನೊಪ್ಪಿಸಿ ತಪ್ಪುದಾರಿ ಹಿಡಿದು (ತಾವು ಮಾತ್ರ) ಒಪ್ಪವಾಗಿ ನಡೆದರು. ನಾನು ಈವರೆಗೆ ಇವರನ್ನು ಮನ್ನಣೆಯಿಂದ ಪೋಷಿಸಿದ್ದು ಅರಣ್ಯರೋಧನದಂತೆ. ಇವರನ್ನು ನೆಚ್ಚಿ ಮೈಸೂರವರೊಡನೆ ಸೆಣಸಿದೆನು. ಅರಿತರಿತೂ ಅರಿಯದವನಾದೆನು, ಕೊಡೆಯನ್ನು ಮರೆಗೊಂಡು ಸಿಡಿಲಿಗೆದುರಾದೆನು. ನಾಯಬಾಲ ಹಿಡಿದು ಗಂಗೆಯನ್ನು ದಾಟಲೆಳಸಿದೆನು. ಗಿಡುಗವನ್ನು ಸಿಟ್ಟಿದ್ದ ಸಿಂಹವನ್ನು ಕೆಣಕಿ ಕೆಟ್ಟೆನು. ಇನ್ನು ಈ ಪಟ್ಟಣದ ಆಸೆಬಿಟ್ಟು ಹೊರಡುವುದೇ ಕ್ಷೇಮ. ಮುನ್ನವೇ ಸಾಗುವೆನೆಂದು ಪಯಣ ಸಿದ್ಧತೆ ಮಾಡುತ್ತಿದ್ದನು."[32]

ಕಂಠೀರವ ನರಸರಾಜ ವಿಜಯ ಮತ್ತು ಚಿಕ್ಕದೇವರಾಜ ವಂಶಾವಳಿಯಲ್ಲಿ ಕಂಡುಬರುವ ವರ್ಣನೆಗಳು ಕವಿಯ ವರ್ಣನೆಗಳಾಗಿದ್ದರೂ ಮಹತ್ವದ ಐತಿಹಾಸಿಕ ವಿವರಗಳನ್ನು ಒಳಗೊಂಡಿವೆ. ಕೆಸರೆಯ ತಿರುಮಲನ ಆಕ್ರಮಣವನ್ನು ದುರ್ಮುಖಿ ನಾಮ ಸಂವತ್ಸರದ ಭಾದ್ರಪದ ಶುದ್ಧ ಪಂಚಮಿಯಂದು ಅಂದರೆ ಕ್ರಿ.ಶ. 1596ರ ಅಕ್ಟೋಬರ್ 18ರಂದು ಪ್ರಾರಂಭವಾಯಿತೆಂದು ಹಯವದನರಾಯರು, ಮೈಸೂರು ದೊರೆಗಳ ಪೂರ್ವೋತ್ತರ ಮತ್ತು ವಿಲ್ಕ್ಸನ ಕೃತಿಯಲ್ಲದೆ ಚಿಕ್ಕದೇವರಾಜ ವಂಶಾವಳಿಯನ್ನು ಆಧರಿಸಿ ನಿರ್ಧರಿಸಿದ್ದಾರೆ.[33]

ಬೆಟ್ಟದ ಚಾಮರಾಜ ಒಡೆಯರು ಪರಿಸ್ಥಿತಿಯ ಗಂಭೀರತೆಯನ್ನು ಅರಿತು ರಾಜ ಒಡೆಯರ ನೇತೃತ್ವದಲ್ಲಿ ಮೈಸೂರಿನ ಸೇನೆಯನ್ನು ಮೈಸೂರಿನಲ್ಲಿಯೇ ಉಳಿಸಿ ಕೆಸರೆಯ ಕೋಟೆಯ ಮೇಲಿನ ಮುತ್ತಿಗೆಯನ್ನು ಚದುರಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮೈಸೂರಿನಿಂದ ದಕ್ಷಿಣಕ್ಕೆ ಹೊರಟ ಬೆಟ್ಟದ ಚಾಮರಾಜ ಒಡೆಯರು ನಂಜನಗೂಡನ್ನು ದಾಟಿ ಹೆಗ್ಗಡದೇವನಕೋಟೆಯನ್ನು ಮುತ್ತಿದರು. ಆನಂತರ ಅವರು ಕೆರೆಹಟ್ಟಿಯಲ್ಲಿ ಬೀಡುಬಿಟ್ಟಿದ್ದ ತಿರುಮಲನ ಸೈನ್ಯದ ಮೇಲೆ ರಾತ್ರಿ ದಾಳಿಯನ್ನು ಮಾಡಿ ಇಡೀ ಅವನ ಬಿಡಾರವನ್ನು ಕೊಳ್ಳೆಹೊಡೆದರು.[34] ನಂತರ ಅತಿ ವೇಗವಾಗಿ ಮುಂದುವರಿದು ಸೋಸಲೆಯ ಬಳಿ ಕಾವೇರಿಯನ್ನು ದಾಟಿ ಕಿರಂಗೂರಿನಲ್ಲಿ ಬೀಡುಬಿಟ್ಟಿದ್ದ ಮತ್ತೊಂದು ಸೇನೆಯನ್ನು ಪುನಃ ರಾತ್ರಿ ಯುದ್ಧದಲ್ಲಿ ಲೂಟಿಮಾಡಿ ಪಡೆದುಕೊಂಡ ಎಲ್ಲ ಧನಕನಕ ವಸ್ತುಗಳನ್ನು ಹೊಂದಿ ಮೈಸೂರಿಗೆ ಹಿಂತಿರುಗಿದರು.[35] ಈ ಕಾರ್ಯ ಕೇವಲ ಮೂರು ರಾತ್ರಿಯಲ್ಲಿ ನೆರವೇರಿತೆಂದು ಕಂಠೀರವ ನರಸರಾಜ ವಿಜಯ ಉಲ್ಲೇಖಿಸುತ್ತದೆ. ಕೆಸರೆಯಲ್ಲಿ ನಿಜವಾದ ಯುದ್ಧ ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿಯೇ ಮೈಸೂರು ಸಂಸ್ಥಾನದ ಬೆಟ್ಟದ ಚಾಮರಾಜ ಒಡೆಯರು ತಿರುಮಲನ ಸೇನೆಯ ಬಹುತೇಕ ನಾಯಕರನ್ನು ಕೆರೆಹಟ್ಟಿ ಮತ್ತು ಕಿರಂಗೂರು ಪ್ರದೇಶದಲ್ಲಿ ಸೋಲಿಸಿ ಅವರ ಸೇನೆಯ ಬಲವನ್ನೇ ನಿಸ್ತೇಜಗೊಳಿಸಿದ್ದರು.

ಇದಾದ ನಂತರ ತಿರುಮಲನು ಕೆಸರೆಯ ಮುತ್ತಿಗೆಯನ್ನು ಮುಂದುವರಿಸಲು ಹಿಂದೆ ಸರಿದನು. ಈ ಕಾಲದಲ್ಲಿ ಕೆಸರೆಯು 30 ಓಲೆಕಾರರ ಮತ್ತು 12 ಕೋವಿಗಳು ಸಹಾಯದಿಂದ ಹಾಗೂ ಅಲ್ಲಿನ ಜನರ ಅಪಾರ ಧೈರ್ಯದಿಂದ ರಕ್ಷಣೆಯನ್ನು ಪಡೆದುಕೊಂಡಿದ್ದಿತು.[36] ಕೆಸರೆಯ ನಾಗರಿಕರು ಕೆಸರೆಯನ್ನು ಮುತ್ತಿದ ಸೇನೆಯ ಧನಕನಕಗಳನ್ನು ಪ್ರಾಣಿಗಳನ್ನೂ ಅಪಾರವಾಗಿ ದೋಚಿದರು. ಇದೇ ಸಮಯದಲ್ಲಿ ತಿರುಮಲನ ಸೇನೆಯ ನಾಯಕನಾದ ಜಕ್ಕನು ಮೈಸೂರಿನ ಆಡಳಿತದಲ್ಲಿದ್ದ ಹಂಚ್ಯಾ ಗ್ರಾಮವನ್ನು ಮುತ್ತಲು ಯೋಚಿಸಿದನು. ರಾಜ ಒಡೆಯರ ತಮ್ಮಂದಿರಾದ ಬೆಟ್ಟದ ಚಾಮರಾಜ ಒಡೆಯರು ಮತ್ತು ಚನ್ನರಾಜ ಒಡೆಯರು ಸೇನಾಸನ್ನದ್ಧರಾಗಿ ಜಕ್ಕನ ಮೇಲೆ ಬಿದ್ದು ಸೋಲಿಸಿ ಅವನ ಸೇನೆಯನ್ನೂ ಲೂಟಿ ಮಾಡಿದರು. ಈ ಮಧ್ಯೆ ರಾಜ ಒಡೆಯರು ಕೆಸರೆಯ ದಾಳಿಗೋಸ್ಕರವಾಗಿ ಬೀಡುಬಿಟ್ಟಿದ್ದ ಎಲ್ಲ ನಾಯಕರು ಹಿಂದೆ ಸರಿಯುವಂತೆ ಸಂಧಾನ ಮಾಡಿಕೊಳ್ಳುವಲ್ಲಿ ಯಶಸ್ವಿಯಾದರು. ಅಲ್ಲದೆ ತಮ್ಮ ಸೇನೆಯೊಂದಿಗೆ ಚಾಮರಾಜ ಮತ್ತು ಚನ್ನರಾಜರನ್ನು ಸತ್ತೆಗಹಳ್ಳಿಯಲ್ಲಿ ಸೇರಿಕೊಂಡು ಅಲ್ಲಿ ಬೀಡುಬಿಟ್ಟಿದ್ದ ತಿರುಮಲನ ಸಂಪೂರ್ಣ ಸೈನ್ಯವನ್ನು ದೋಚಿದರು. ತಿರುಮಲನ ನೇತೃತ್ವದಲ್ಲಿದ್ದ ಆನೆ, ಕುದುರೆ, ಸಾಗಾಣಿಕೆಯ ಎತ್ತು ಮತ್ತು ಸೇನೆಯ ಎಲ್ಲ ಸರಂಜಾಮುಗಳನ್ನು ವಶಪಡಿಸಿಕೊಂಡು ಮೈಸೂರಿಗೆ ಹಿಂತಿರುಗಿದರು.[37]

ಆದರೆ ರಾಜ ಒಡೆಯರು ತಾವು ವಶಪಡಿಸಿಕೊಂಡ ಆನೆಗಳನ್ನು ತಿರುಮಲನಿಗೆ ಹಿಂತಿರುಗಿಸಿದರು.[38] ಏಕೆಂದರೆ ರಾಜ ಒಡೆಯರ ಒಂದು ಆನೆಗೆ ಬದಲಾಗಿ 40 ಓಲೆಕಾರರನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವೆಂದು ಮನಗಂಡು ಈ ರೀತಿ ನಡೆದುಕೊಂಡರೆಂದು ತಿಳಿದುಬರುತ್ತದೆ. ಇದಾದ ನಂತರ ರಾಜ ಒಡೆಯರ್ ತನ್ನ ಸೇನೆಯ ವಸ್ತುಸ್ಥಿತಿಯನ್ನರಿಯಲು ಸೇನಾ ಸಮೀಕ್ಷೆಯನ್ನು ಬೆಳುವಲದ ಸಮೀಪದ ಎತ್ತರವಾದ ಪ್ರದೇಶದಲ್ಲಿ ಕೈಗೊಂಡರು.[39]

ಆನಂತರ ಕೆಸರೆಗೆ ಪೂರ್ವದಲ್ಲಿ ಬೀಡುಬಿಟ್ಟಿದ್ದ ತಿರುಮಲನ ನಾಯಕರುಗಳ ಮೇಲೆ ದಾಳಿಯನ್ನು ಮಾಡಲು ಸೂಚಿಸಿದರು. ಅದರಂತೆ ಬೆಟ್ಟದ ಚಾಮರಾಜ ಮತ್ತು ಚನ್ನರಾಜ ಒಡೆಯರು ತಿರುಮಲನ ಸಹಾಯಕ್ಕಿದ್ದ ಪಾಳೇಗಾರರುಗಳನ್ನು

ಅವರವರ ಬಿಡಾರದಲ್ಲಿ ಸೋಲಿಸಿದುದಲ್ಲದೆ ಬ್ರಹ್ಮಪುರಿಯವರೆಗೆ ಬೆನ್ನಟ್ಟಿಕೊಂಡು ಹೋದರು.[40] ಈ ಸೈನಿಕ ಕಾರ್ಯಾಚರಣೆಯಲ್ಲಿ ಹಳೇ ಪೈಕದ ಸೈನಿಕರು ಅಪಾರವಾಗಿ ಶ್ರಮಿಸಿದರು. ಈ ಆಕ್ರಮಣದ ತರುವಾಯ ಚಾಮರಾಜ ಮತ್ತು ಚನ್ನರಾಜ ಉತ್ತರದ ಕಡೆಗೆ ಪ್ರಯಾಣ ಬೆಳೆಸಿ ರಾಜ ಒಡೆಯರನ್ನು ಸೇರಿಕೊಂಡರು ಮತ್ತು ತಿರುಮಲನ ವಿರುದ್ಧ ಸಜ್ಜಾದರು. ಈ ಎಲ್ಲ ಮಾಹಿತಿಯನ್ನು ಪಡೆದು ತಿರುಮಲನು ಯಾವುದೇ ಪ್ರತಿರೋಧವನ್ನು ತೋರದೆ ಕೆಸರೆಯ ದಾಳಿಯನ್ನು ಹಿಂಪಡೆದು ಶ್ರೀರಂಗಪಟ್ಟಣದ ಕೋಟೆಯನ್ನು ಸೇರಿಕೊಂಡನು.[41]

ಈ ಎಲ್ಲ ಘಟನಾವಳಿಗಳನ್ನು ಸಮೀಕ್ಷಿಸಿದಾಗ ನಮಗೆ ಖಚಿತವಾಗುವುದೇನೆಂದರೆ ರಾಜ ಒಡೆಯರು, ತಿರುಮಲನು ಮುತ್ತಿದ ಕೆಸರೆಯ ಕೋಟೆಯನ್ನು ಬಿಡಿಸಿಕೊಳ್ಳುವುದಕ್ಕೆ ಬದಲಾಗಿ ತಿರುಮಲನೊಂದಿಗೆ ನೇರ ಸಂಘರ್ಷಕ್ಕೆ ಇಳಿಯದೆ ತಿರುಮಲನಿಗೆ ಸಹಕಾರಿಗಳಾಗಿದ್ದ ಅನೇಕ ಪಾಳೇಗಾರರನ್ನೂ ಅವರು ಮೈಸೂರಿನ ನಾಲ್ಕು ದಿಕ್ಕುಗಳಲ್ಲಿಯೂ ಬೀಡುಬಿಟ್ಟಿದ್ದ ಸ್ಥಳಗಳಲ್ಲಿಯೇ ಸೋಲಿಸಿ, ತಿರುಮಲನಿಗೆ ಪಾಳೇಗಾರರ ಸಹಾಯ ದೊರೆಯದಂತೆ ಮಾಡಿದರು. ಅಲ್ಲದೆ ಅವರು ತಮ್ಮ ತಮ್ಮ ಬಿಡಾರಗಳಿಂದಲೇ ಹಿಂದೆ ಸರಿಯುವಂತೆ ಮಾಡಿದ್ದಲ್ಲದೆ ತಿರುಮಲನೂ ಕೆಸರೆ ಮುತ್ತಿಗೆಯನ್ನು ಹಿಂಪಡೆದು ಶ್ರೀರಂಗಪಟ್ಟಣವನ್ನು ಸೇರಿಕೊಳ್ಳುವಂತೆ ಮಾಡಿ ತಮ್ಮ ರಾಜ್ಯದ ಎಲ್ಲೆಗಳನ್ನು ಸಂರಕ್ಷಿಸಿಕೊಂಡರು. ಇಷ್ಟಲ್ಲದೆ ಈ ಯುದ್ಧದ ಕಾಲದಲ್ಲಿ ಅಪಾರವಾದ ಧನಕನಕ ಹಾಗೂ ಸೈನ್ಯದ ಅವಶ್ಯಕತೆಗಳಾದ ತರಬೇತಿಗೊಂಡ ಆನೆ, ಕುದುರೆ, ಎತ್ತುಗಳು ಮತ್ತು ಅಪಾರ ಯುದ್ಧಸಾಮಗ್ರಿಗಳು ರಾಜ ಒಡೆಯರ ವಶವಾದವು.

ಕೆಸರೆ ಕದನದ ಪರಿಣಾಮಗಳು

ಕೆಸರೆ ಯುದ್ಧದ ನಂತರ ರಾಜ ಒಡೆಯರು ಮತ್ತಷ್ಟು ಪ್ರಬಲರಾದರಲ್ಲದೆ ವಿಜಯನಗರ ಸಾಮ್ರಾಜ್ಯದ ರಾಜಪ್ರತಿನಿಧಿ ತಿರುಮಲನ ಆಡಳಿತಕ್ಕೆ ಒಳಪಟ್ಟ ಹಲವಾರು ಪ್ರದೇಶಗಳನ್ನು ಕೈವಶಮಾಡಿಕೊಳ್ಳುವ ಪ್ರಯತ್ನವನ್ನು ಮತ್ತೂ ಮುಂದುವರಿಸಿದರು. ಕೆಸರೆ ಯುದ್ಧವಾದ ಮರು ವರ್ಷವೇ ಅಂದರೆ ಕ್ರಿಸ್ತ ಶಕ 1597ರ ಹೇವಿಳಂಬಿ ಸಂವತ್ಸರದಲ್ಲಿ ಹರಿಹರಪುರವನ್ನು ಗೆದ್ದುಕೊಂಡರು.[42] ರಾಜ ಒಡೆಯರು 1598ರಲ್ಲಿ ತಿರುಮಲನ ಆಸ್ಥಾನವನ್ನು ಸಂದರ್ಶಿಸಿದಂತೆ ತಿಳಿದುಬರುತ್ತದೆ. ಈ ಭೇಟಿಯ ಸಂದರ್ಭದಲ್ಲಿ ನೂರು ಖಂಡುಗ ಬತ್ತ ಬೆಳೆಯುವ ಭೂಮಿಯನ್ನು ತಿರುಮಲನಿಂದ ದಾನವಾಗಿ ಪಡೆದುಕೊಂಡಂತೆ ಶಾಸನವೊಂದು ಉಲ್ಲೇಖಿಸುತ್ತದೆ.[43] ಕ್ರಿ.ಶ. 1598ರ ಅಕ್ಟೋಬರ್ 24ರಲ್ಲಿ ತಿರುಮಲನು ರಾಜಬೊಕ್ಕಸಕ್ಕೆ ಸಲ್ಲಬೇಕಾದ ರಾಜಧನವನ್ನು ನೀಡುವಂತೆ ರಾಜ ಒಡೆಯರವರಿಗೆ ನಿರ್ದೇಶನ ಇತ್ತನು. ಆದರೆ ರಾಜ ಒಡೆಯರು ತಿರುಮಲನ ಅಧಿಕಾರಿಗಳು ತಮ್ಮ ಪ್ರಾಂತ್ಯದಲ್ಲಿ ನಡೆಸಿದ ದಾಳಿಗಳ ಉಪಟಳದಿಂದಾಗಿ ಹಾನಿಯುಂಟಾಗಿದ್ದು ಕಂದಾಯವನ್ನು ತೆರಲಾಗುವುದಿಲ್ಲವೆಂದು ತಿರುಮಲನಿಗೆ ತಿಳಿಸುತ್ತಾರೆ. ತಿರುಮಲನು ತನ್ನ ಅಧಿಕಾರಿಗಳಿಂದಾದ ದಾಳಿಗೆ ಬದಲಾಗಿ ರಂಗಸಮುದ್ರವನ್ನು ರಾಜ ಒಡೆಯರ್ ಬಿಟ್ಟುಕೊಡುತ್ತಾನೆ.[44] 1598ರಿಂದ ಪ್ರಾರಂಭ ಮಾಡಿ 1607ರ ವರೆಗೆ ರಾಜ ಒಡೆಯರವರು ತಿರುಮಲನ ಆಡಳಿತಕ್ಕೊಳಪಟ್ಟ ಪ್ರದೇಶಗಳ ಮೇಲೆ ಸ್ವಲ್ಪ ಸ್ವಲ್ಪವಾಗಿ ತಮ್ಮ ಪ್ರಭುತ್ವವನ್ನು ಸಾಧಿಸಲಾರಂಭಿಸಿದರು. ಮಾರ್ಚ್ 1600ರಲ್ಲಿ ಅರಕೆರೆಯನ್ನು ಜಗದೇವರಾಯನ ಸೇನಾನಿ ಆದಟ್ಟರಾಯನಿಂದ ವಶಪಡಿಸಿಕೊಂಡರು.[45] 1606ರಲ್ಲಿ ಸೋಸಲೆ, 1607ರಲ್ಲಿ ಬನ್ನೂರು ಮತ್ತು ತಲಕಾಡನ್ನೂ ವಶಪಡಿಸಿಕೊಂಡರು.[46] ಈ ಎಲ್ಲ ಚಟುವಟಿಕೆಗಳು ತಿರುಮಲನನ್ನು ಮತ್ತೊಮ್ಮೆ ರಾಜ ಒಡೆಯರ್ ವಿರುದ್ಧ ಕಾರ್ಯಾಚರಣೆಗೆ ಇಳಿಯುವಂತೆ ಪ್ರೇರೇಪಿಸಿದವು. 1607ರ ಪ್ಲವಂಗ ನಾಮ ಸಂವತ್ಸರದಲ್ಲಿ ರಾಜ ಒಡೆಯರನ್ನು ಸಂಹಾರ ಮಾಡುವ ಮತ್ತೊಂದು ವಿಫಲ ಪ್ರಯತ್ನವೊಂದು ನಡೆಯಿತು.[47] ರಾಜ ಒಡೆಯರ ಸಂಹಾರದ ಪೂರ್ವಯೋಜಿತ ಕಾರ್ಯವನ್ನು ನಡೆಸುವಂತೆ ಬೆಳಗೊಳದ ಸಿಂಗಪ್ಪ ಒಡೆಯರ್‌ನನ್ನು ನೇಮಿಸಲಾಯಿತು. ಸಿಂಗಪ್ಪ ಒಡೆಯನು ರಾಜ ಒಡೆಯರ್‌ನನ್ನು ಭೇಟಿ ಮಾಡಿದ ಸಂದರ್ಭವೊಂದರಲ್ಲಿ ಅವರ ಆಸ್ಥಾನದಲ್ಲಿಯೆ ಒರೆಯಿಂದ ಕತ್ತಿ ಹಿರಿದು ಇನ್ನೇನು ರಾಜ ಒಡೆಯರ್ ಮೇಲೆ ಆಕ್ರಮಣ ಮಾಡಬೇಕಿದ್ದ ಸಂದರ್ಭದಲ್ಲಿ ರಾಜ ಒಡೆಯರ್ ಸೋದರಸಂಬಂಧಿಯಾದ ಯಳಂದೂರಿನ ದೇವರಾಜ ಒಡೆಯನು ರಾಜ ಒಡೆಯರ್‌ನನ್ನು ರಕ್ಷಿಸಿದನು.[48] ಸಿಂಗಪ್ಪ ಒಡೆಯನನ್ನು ದೇವರಾಜನು ಅರಮನೆಯಲ್ಲಿಯೇ ಕೊಂದುಹಾಕಿದನು. ಇದಾದ ತರುವಾಯ 1608ರಲ್ಲಿ ರಾಜ

ಒಡೆಯರ್ ಕನ್ನಂಬಾಡಿಯನ್ನು ಗೆದ್ದುಕೊಂಡರು.[49] ಅಲ್ಲದೆ ಅದರ ಆಡಳಿತಕ್ಕೆ ಒಳಪಟ್ಟಿದ್ದ ಬೂಕನಕೆರೆಯನ್ನು ದೊಡ್ಡ ಹೆಬ್ಬಾರುವನಿಂದ ಗೆದ್ದುಕೊಂಡರು.[50]

ಕೆಸರೆಯ ಯುದ್ಧದ ತರುವಾಯ ತಿರುಮಲನು ತನ್ನ ರಾಜಪ್ರತಿನಿಧಿಯ ಸ್ಥಾನದಲ್ಲಿ ಸಾಕಷ್ಟು ಅಧೀರನೂ, ಅಶಕ್ತನೂ ಆಗಿ ಮಾರ್ಪಟ್ಟನು. ಹೇಗೆಂದರೆ ತಿರುಮಲನು ತನ್ನ ಸ್ಥಾನಿಕರ ಸಲಹೆಯಂತೆ ರಾಜ ಒಡೆಯರನ್ನೂ ಕೊಲ್ಲುವ ಸಲುವಾಗಿ ಅವರ ಮೇಲೆ ಶ್ರೀರಂಗಪಟ್ಟಣದಲ್ಲಿ ಮತ್ತು ಮೈಸೂರಿನಲ್ಲಿ ಪ್ರಯತ್ನಿಸಿ ಆ ಎರಡೂ ಸಂದರ್ಭಗಳಲ್ಲಿ ತನ್ನ ಅಕೃತ್ಯದಿಂದ ಮೈಸೂರಿನೊಂದಿಗಿನ ಸಂಬಂಧವನ್ನು ಹದಗೆಡಿಸಿಕೊಂಡಿದ್ದನು. ಇದಲ್ಲದೆ ಕೆಸರೆಯ ಯುದ್ಧದ ಪೂರ್ವದ ಯುದ್ಧಗಳಲ್ಲಿ ಸೋತು ತನ್ನ ಸ್ಥಾನಿಕರ ಮುಂದೆಯೇ ಅವಮಾನಿತನಾಗಿದ್ದನು. ಇದೆಲ್ಲಕ್ಕಿಂತ ಕಳಶಪ್ರಾಯವಾಗಿ ರಾಜ ಒಡೆಯರು ಕೆಸರೆಯ ಯುದ್ಧದಲ್ಲಿ ತಿರುಮಲನನ್ನು ಸಶಕ್ತವಾಗಿ ಹಿಮ್ಮೆಟ್ಟಿಸಿ ಆತನ ಮತ್ತು ಆತನ ಅನುಯಾಯಿಗಳ ಸೇನೆಯ ಅಪಾರ ವಸ್ತುಗಳನ್ನು ಲೂಟಿ ಮಾಡಿ ಅವರನ್ನು ಅವರವರ ಸಂಸ್ಥಾನಗಳಿಗೆ ಹಿಂದಟ್ಟಿದರು. ರಾಜ ಒಡೆಯರ ಈ ಎಲ್ಲ ಸೈನಿಕ ಚಟುವಟಿಕೆಗಳು ತಿರುಮಲನನ್ನು ಅಶಕ್ತನೂ ಮತ್ತು ಅದಕ್ಷ ಆಡಳಿತಗಾರ ಎಂದು ರೂಪಿಸಿದವು. ಇದಲ್ಲದೆ ಕೆಸರೆಯ ಯುದ್ಧಾನಂತರ ತಿರುಮಲನು ರಾಜ ಒಡೆಯರೊಂದಿಗೆ ಮಾಡಿಕೊಂಡ ರಾಜತಾಂತ್ರಿಕ ಸಂಬಂಧಗಳು ಅವರಿಗೆ ಬಿಟ್ಟುಕೊಟ್ಟ ಭೂ ಪ್ರದೇಶಗಳು ತಿರುಮಲನನ್ನು ಅಶಕ್ತನೆಂದು ಬಿಂಬಿಸುವಲ್ಲಿ ಮತ್ತಷ್ಟು ಯಶಸ್ವಿಯಾದವು.

ಈ ಹಿನ್ನೆಲೆಯಲ್ಲಿ ತಿರುಮಲನು ವಿಜಯನಗರ ಸಾಮ್ರಾಟನ ಸಹಾಯವನ್ನು ಪಡೆಯುವ ಹಂತಕ್ಕೆ ಬಂದುನಿಂತನು. ವಿಜಯನಗರ ಸಾಮ್ರಾಜ್ಯದ ರಾಜಪ್ರತಿನಿಧಿ ಕರ್ನಾಟಕ ಪ್ರದೇಶದ ಸರ್ವತಂತ್ರ ಸ್ವತಂತ್ರ ರಾಜ ತಿರುಮಲನು ಕೇವಲ ತನ್ನ ಸ್ಥಾನಿಕನ ವಿರುದ್ಧದ ಸೈನಿಕ ಕಾರ್ಯಾಚರಣೆಗಾಗಿ ಸಾಮ್ರಾಟನ ಸೇನೆಯ ಸಹಾಯವನ್ನು ಬಯಸಿದುದು ಆತನ ಅದಕ್ಷತೆಗೆ ಪ್ರಮುಖ ನಿದರ್ಶನವಾಯಿತು. ತನ್ನ ಚಿಕ್ಕಪ್ಪನಾದ ಒಂದನೆ ವೆಂಕಟನೊಂದಿಗೆ ತಿರುಮಲನು ಈ ಕಾರಣಕ್ಕಾಗಿ ಸಂಧಿಗೆ ಪ್ರಯತ್ನಪಟ್ಟನು.[51] ಈ ಹಂತದಲ್ಲಿ ಹಲವಾರು ಪಾಳೇಗಾರರು ಈತನಿಗೆ ಸಹಕರಿಸಿದಂತೆ ತಿಳಿದುಬರುತ್ತದೆ. ಅವರೆಂದರೆ ಬೇಲೂರಿನ ಕೃಷ್ಣಪ್ಪ ನಾಯಕ, ಗ್ರಾಮದ ವೀರರಾಜಯ್ಯ, ಮೂಗೂರಿನ ಭೂಲೋಚನ ನಾಯಕ, ಯಳಂದೂರಿನ ಎರಡನೆ ರಾಮರಾಜನಾಯಕ ಮತ್ತು ಉಮ್ಮತ್ತೂರಿನ ಮಲ್ಲರಾಜಯ್ಯ. ಇವರು ಕುಣಿಗಲ್‌ನ ಸಮೀಪ ಒಕ್ಕೂಟವನ್ನು ರಚಿಸಿಕೊಂಡು ಬೀಡುಬಿಟ್ಟರು.[52]

ಪ್ರಾಯಶಃ ಈ ಒಕ್ಕೂಟ ತಿರುಮಲನ ಸಹಾಯಕ್ಕೆ ಬಂದಿದೆ ಎಂದು ಗ್ರಹಿಸಿದ ರಾಜ ಒಡೆಯರು ಮೈಸೂರಿನಿಂದ ಸಂಸ್ಥಾನ ರಕ್ಷಣೆಗೆ ಬೇಕಾದ ಎಲ್ಲ ಮಾರ್ಗೋಪಾಯಗಳನ್ನು ಚಿಂತಿಸಿ ತಮ್ಮ ಸಹೋದ್ಯೋಗಿಗಳ ಮತ್ತು ಸ್ಥಾನಿಕರ ಸಲಹೆಯಂತೆ ಅವರನ್ನು ಎದುರಿಸುವ ಎಲ್ಲ ಏರ್ಪಾಟುಗಳನ್ನು ಮಾಡಿಕೊಂಡರು.[53] ಅದರಂತೆ ಮೈಸೂರಿನ ಸೇನೆ ಬೇಲೂರು ಮತ್ತು ಅದರ ಉಪಗ್ರಾಮಗಳನ್ನು ಮುತ್ತಿ ಆ ಪ್ರದೇಶಗಳನ್ನು ವಶಪಡಿಸಿಕೊಂಡಿತು.[54] ಇದೇ ಕಾಲದಲ್ಲಿ ತಿರುಮಲನ ಪ್ರಾರ್ಥನೆಯನ್ನು ವೆಂಕಟನು ತಿರಸ್ಕರಿಸಿದನು. ತಿರುಮಲನು ಶ್ರೀರಂಗಪಟ್ಟಣಕ್ಕೆ ಬರುವ ಮಾರ್ಗದಲ್ಲಿ ಹೊಳೆನರಸೀಪುರದಲ್ಲಿ ತನ್ನ ದಳವಾಯಿ ಭದ್ರಯ್ಯನೊಂದಿಗೆ ಇದ್ದಾಗ ನರಸೀಪುರದ ನಾಯಕ ಲಕ್ಷ್ಮಪ್ಪನಿಂದ ಸೆರೆ ಹಿಡಿಯಲ್ಪಟ್ಟನು.[55] ಈ ಸಂದರ್ಭದಲ್ಲಿ ತಿರುಮಲನು ಪರಿಸ್ಥಿತಿಯನ್ನು ತಿಳಿಗೊಳಿಸಲು ವೆಂಕಟನ ಸಹಾಯವನ್ನು ಕೇಳದೆ ಆತನ ಸ್ಥಾನೀಕರಾದ ರಾಜ ಒಡೆಯರ ಸಹಾಯವನ್ನು ಅಪೇಕ್ಷಿಸಿದನು.[56] ಇದಕ್ಕೆ ಓಗೊಟ್ಟ ರಾಜ ಒಡೆಯರು ಹೊಳೆನರಸೀಪುರದ ವಿರುದ್ಧ ಸೈನಿಕ ಕಾರ್ಯಾಚರಣೆ ನಡೆಸಿ ಲಕ್ಷ್ಮಪ್ಪ ನಾಯಕನನ್ನು ಯುದ್ಧದಲ್ಲಿ ಸೋಲಿಸಿ ಹೊಳೆನರಸೀಪುರವನ್ನು ಗೆದ್ದುಕೊಂಡರಲ್ಲದೆ ತಿರುಮಲ ಮತ್ತು ಆತನ ದಳವಾಯಿ ಭದ್ರಯ್ಯ ಹಾಗೂ ಇತರರನ್ನು ರಕ್ಷಿಸಿದರು.[57] ರಾಜ ಒಡೆಯರ ಈ ಸೈನಿಕ ಕಾರ್ಯಾಚರಣೆ ಅವರನ್ನು ವಿಜಯನಗರ ಸಾಮ್ರಾಟನಿಗೆ ಅತ್ಯಂತ ಸಮೀಪದ ವ್ಯಕ್ತಿಯನ್ನಾಗಿ ಪರಿವರ್ತಿಸಿತು. ಇದಕ್ಕೆ ಪ್ರತಿಫಲವಾಗಿ ವೆಂಕಟನು ರಾಜ ಒಡೆಯರ್‌ಗೆ ಉಮ್ಮತ್ತೂರು ಸೀಮೆಯ ತಾಯೂರು ನಾಡಿನ ಆಲ್ದೂರು ಮತ್ತು ನವಿಲೂರು ಗ್ರಾಮಗಳನ್ನು ಉಂಬಳಿಯಾಗಿ ಬಿಟ್ಟುಕೊಟ್ಟನು.[58] ಅಲ್ಲದೆ ಬನ್ನೂರಿಗೆ ಸೇರಿದ ಕೊಣಗಪಳ್ಳಿ ಮತ್ತು ಇತರ ಗ್ರಾಮಗಳನ್ನು ಉಮ್ಮತ್ತೂರಿನ ನಂಜರಾಜಯ್ಯನಿಗೆ ಬಿಟ್ಟುಕೊಟ್ಟನು.[59]

ಈ ಎಲ್ಲ ಸೈನಿಕ ಚಟುವಟಿಕೆಗಳು ಶ್ರೀರಂಗಪಟ್ಟಣದಲ್ಲಿ ವಿಜಯನಗರ ಸಾಮ್ರಾಜ್ಯದ ರಾಜ ಪ್ರತಿನಿಧಿಯಾಗಿದ್ದ ತಿರುಮಲನ ಅಸ್ತಿತ್ವವನ್ನು ಅತ್ಯಂತ ಹೀನಾಯ ಸ್ಥಿತಿಗೆ ಕೊಂಡೊಯ್ದವು. ಚಿಕ್ಕದೇವರಾಜ ವಂಶಾವಳಿಯು ಈ ಘಟನೆಯ ನಂತರದ ತಿರುಮಲನ ಆಡಳಿತ ಮತ್ತು ವಾಸ್ತವ್ಯದ ವಿವರಗಳನ್ನು ಅತಿ ಸೂಕ್ಷ್ಮವಾಗಿ ವಿವರಿಸುತ್ತದೆ.[60] ರಾಜ ಒಡೆಯರ ವಿರುದ್ಧವಾಗಿ ತಿರುಮಲನು ವೆಂಕಟನ ಸಹಾಯವನ್ನು ಅಪೇಕ್ಷಿಸಿದನು. ಆದರೆ ಅದೇ ಕಾಲಘಟ್ಟದಲ್ಲಿ ತಿರುಮಲನು ರಾಜ ಒಡೆಯರ ಸಹಾಯವನ್ನು ಪಡೆದು ಆತನಿಂದ ಉಪಕೃತನಾಗಿ ರಾಜ ಒಡೆಯರಿಗೆ ಕೇಡು ಬಯಸದಂತಹ ಸಂದಿಗ್ಧ ಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡನು. ತಿರುಮಲನ ಅಶಕ್ತತೆಯನ್ನು ಮನಗಂಡ ವಿಜಯನಗರದ ಸಾಮ್ರಾಜ್ಯದ ಸಾಮ್ರಾಟ ವೆಂಕಟನು ರಾಜ ಒಡೆಯರಿಗೆ ಅಭಯ ಹಸ್ತ ನಿರೂಪವನ್ನು ನೀಡಿದಂತೆ ಮೈಸೂರು ದೊರೆಗಳ ಪೂರ್ವೋತ್ತರ ಹಸ್ತಪ್ರತಿಯನ್ನು ಆಧರಿಸಿ ವಿಲ್ಕ್ಸ್ ಉಲ್ಲೇಖಿಸುತ್ತಾರೆ.[61] ಈ ನಿರೂಪದ ಪ್ರಸ್ತಾಪವನ್ನು 1622ರ ಒಂದು ಶಾಸನ ಮತ್ತೆ ಉಲ್ಲೇಖಿಸುತ್ತದೆ.[62] ತಿರುಮಲನು ತನ್ನ ರಾಜಧಾನಿ ಶ್ರೀರಂಗಪಟ್ಟಣದಲ್ಲಿ ಅತ್ಯಂತ ಹೀನಾಯ ಬದುಕನ್ನು ಬದುಕುತ್ತಿದ್ದನೆಂದು ತನ್ನ ಸೇನೆಯ ಆನೆ ಕುದುರೆಗಳಿಗೆ ಆಹಾರವಿಲ್ಲದೆ ಸೈನಿಕರ ಭತ್ಯೆಯನ್ನು ಭರಿಸಲಾಗದೆ ತನ್ನ ದಿನನಿತ್ಯದ ನಿರ್ವಹಣೆಗೂ ಬ್ರಹ್ಮಪುರಿಯ ಆದಾಯವನ್ನು ಅವಲಂಬಿಸಿದ್ದನೆಂದು *ಚಿಕ್ಕದೇವರಾಜ ವಂಶಾವಳಿ* ಹೇಳುತ್ತದೆ.[63] ಇದನ್ನು ಗಮನಿಸಿದಾಗ ಮೈಸೂರು ಸೇನೆ ಪ್ರಾಯಶಃ ಶ್ರೀರಂಗಪಟ್ಟಣವನ್ನು ಅಘೋಷಿತ ಮುತ್ತಿಗೆಗೆ ಒಳಪಡಿಸಿದುದು ಸತ್ಯವೆನಿಸುತ್ತದೆ.[64] ಈ ಹಂತದಲ್ಲಿ ತಿರುಮಲನಿಗೆ ಶ್ರೀರಂಗಪಟ್ಟಣವನ್ನು ತೊರೆದು ಹೋಗುವ ದಾರಿಯ ವಿನಃ ಮತ್ತಾವ ದಾರಿಯೂ ಇಲ್ಲದಂತಾಗಿತ್ತು. ಆದರೂ *ಚಿಕ್ಕದೇವರಾಜ ವಂಶಾವಳಿ* ಕೃತಿಯನ್ನು ಆಧರಿಸಿ ಹಯವದನರಾಯರು, ತಿರುಮಲನು ಕೆಸರೆಯ ಯುದ್ಧದ ನಂತರ ಶ್ರೀರಂಗಪಟ್ಟಣ ಪ್ರಾಂತ್ಯವನ್ನು ಅತ್ಯಂತ ದರ್ಪದಿಂದ ವಿಚಕ್ಷಣೆಯಿಂದ ಆಳುತ್ತಿದ್ದನೆಂದು ಹೇಳುತ್ತಾ ಈ ಉಲ್ಲೇಖ ಕೇವಲ ಪಾರಂಪರಿಕ ಹೇಳಿಕೆ ಎಂಬ ಅಭಿಪ್ರಾಯದೊಂದಿಗೆ ಈ ಸಂಗತಿಯನ್ನು ತಳ್ಳಿಹಾಕುತ್ತಾರೆ.[65]

ಶ್ರೀರಂಗಪಟ್ಟಣದ ಸ್ವಾಧೀನದ ಹಿನ್ನೆಲೆ

ಶ್ರೀರಂಗಪಟ್ಟಣವನ್ನು ರಾಜ ಒಡೆಯರು ಸ್ವಾಧೀನಪಡಿಸಿಕೊಳ್ಳಲು ಸಹಾಯಕವಾದ ಅಂದಿನ ರಾಜಕೀಯ ಪರಿಸ್ಥಿತಿಯನ್ನು ಇಲ್ಲಿ ವಿವೇಚಿಸುವುದು ಅವಶ್ಯಕವೆನಿಸುತ್ತದೆ. ವಿಜಯನಗರ ಸಾಮ್ರಾಟ ವೆಂಕಟನು ತನ್ನ ದಾಯಾದಿ ಶ್ರೀರಂಗಪಟ್ಟಣದ ರಾಜಪ್ರತಿನಿಧಿ ತಿರುಮಲನೊಂದಿಗೆ ಸೌಹಾರ್ದ ಸಂಬಂಧವನ್ನು ಹೊಂದಿರಲಿಲ್ಲ.[66] ಇದಕ್ಕೆ ಕಾರಣವನ್ನು ಹುಡುಕುವುದಾದರೆ ತಿರುಮಲನು ಮಧುರೆಯ ದಾಳಿಯ ಕಾಲದಲ್ಲಿ ಸಾಮ್ರಾಟ ವೆಂಕಟನಿಗೆ ಸರಿಯಾಗಿ ಸಹಕರಿಸದೇ ಇದ್ದುದು ಅಥವಾ ಅರೆ ಐತಿಹಾಸಿಕ ಕೃತಿಗಳಲ್ಲಿ ಉಲ್ಲೇಖಿತವಾಗಿರುವಂತೆ ತಿರುಮಲನು ಮಧುರೆಯ ರಾಜನಿಂದ ಹಣ ಪಡೆದು ವೆಂಕಟನ ಅಪೇಕ್ಷೆಗೆ ವಿರುದ್ಧವಾಗಿ ಮಧುರೆಯ ನಾಯಕರೊಂದಿಗೆ ಕೈ ಜೋಡಿಸಿರುವ ಸಾಧ್ಯತೆಗಳು. ಈ ಸಾಧ್ಯಾಸಾಧ್ಯತೆಗಳು ಏನೇ ಇದ್ದರೂ ಸಾಮ್ರಾಟ ವೆಂಕಟ ಮತ್ತು ಶ್ರೀರಂಗಪಟ್ಟಣದ ರಾಜ್ಯಪಾಲ ತಿರುಮಲನ ನಡುವಿನ ಸಂಬಂಧ ಆ ಕಾಲಕ್ಕಾಗಲೇ ಸಾಕಷ್ಟು ಹಳಸಿದ್ದಿತು. ವೆಂಕಟನು, ತಿರುಮಲನ ಸಾಲು ಸಾಲು ಸೋಲುಗಳನ್ನು ಗಮನಿಸಿ ಹೊಳೆನರಸೀಪುರದ ಘಟನೆಯ ನಂತರ ರಾಜ ಒಡೆಯರಿಗೆ ಉಂಬಳಿ ನೀಡಿದುದು ಎಲ್ಲೋ ಒಂದು ಕಡೆ ಇವರಿಬ್ಬರ ಸಂಬಂಧ ಕ್ಷೀಣಿಸಿದುದನ್ನು ಅತ್ಯಂತ ಸೂಕ್ಷ್ಮವಾಗಿ ಸೂಚಿಸುತ್ತದೆ. ರಾಜ ಒಡೆಯರು ಮತ್ತು ತಿರುಮಲನ ಸಂಬಂಧ ಕೂಡ ಸಂಪೂರ್ಣವಾಗಿ ಉತ್ತಮವಾಗಿತ್ತೆಂದು ಹೇಳಲಾಗುವುದಿಲ್ಲ. ಕೆಸರೆ ಯುದ್ಧಕ್ಕೆ ಪೂರ್ವದಲ್ಲಿ ಸ್ವಲ್ಪ ಮಟ್ಟಿನ ಕೊಡುಕೊಳ್ಳುವ ವಾತಾವರಣವಿದ್ದಿತಾದರೂ ಕೆಸರೆಯ ಯುದ್ಧದಲ್ಲಿ ಪರಸ್ಪರ ವಿರೋಧಿಗಳಾಗಿದ್ದರು. ಕೆಸರೆಯ ಯುದ್ಧದ ತರುವಾಯ ಸಹ ರಾಜ ಒಡೆಯರು ತಿರುಮಲ ಸ್ನೇಹವನ್ನು ಬಯಸಿದರಾದರೂ ತಿರುಮಲನ ಕಾರ್ಯಚಟುವಟಿಕೆಗಳು ಅದಕ್ಕೆ ಪೂರಕವಾಗಿರಲಿಲ್ಲ. ಆದರೂ ತಿರುಮಲನು ರಾಜ ಒಡೆಯರಿಗೆ ಕೆಲ ಪ್ರದೇಶಗಳನ್ನು ಮಾನ್ಯ ಮಾಡಿಕೊಟ್ಟುದುದನ್ನು ಈ ಹಿಂದೆಯೇ ವಿವರಿಸಲಾಗಿದೆ. ಅಂದಮೇಲೆ ಸಾಮ್ರಾಟ ವೆಂಕಟನ ಅವಕೃಪೆಗೆ ಒಳಗಾಗಿದ್ದ ತಿರುಮಲನ ವಿರೋಧಿಯಾದ ರಾಜ ಒಡೆಯರು ವಿಜಯನಗರದ ಆಸ್ಥಾನದಲ್ಲಿ ಸಾಕಷ್ಟು ಉತ್ತಮವಾಗಿ ಪ್ರತಿನಿಧಿಸಲ್ಪಟ್ಟಿದ್ದರು. ಇದು ಶ್ರೀರಂಗಪಟ್ಟಣದ ಸಾಧನೆಗೆ ರಂಗಮಂಚವನ್ನು ಅಣಿಗೊಳಿಸಿತು.

ಶ್ರೀರಂಗಪಟ್ಟಣದ ಸಾಧನೆ

ರಾಜ ಒಡೆಯರ್ ಶ್ರೀರಂಗಪಟ್ಟಣವನ್ನು ಗೆದ್ದುಕೊಂಡ ಬಗೆಗೆ ಮೂರು ಬಗೆಯ ಅಭಿಪ್ರಾಯಗಳನ್ನು ಮೈಸೂರು ಸಂಸ್ಥಾನದ ಇತಿಹಾಸದ ಬಗೆಗಿನ ಐತಿಹಾಸಿಕ ಕೃತಿಗಳು ದಾಖಲಿಸುತ್ತವೆ. ವಿಶೇಷವಾಗಿ *ಕಂಠೀರವ ನರಸರಾಜ ವಿಜಯ*,[67] *ಚಿಕ್ಕದೇವರಾಜ ವಂಶಾವಳಿ*[68] ಮತ್ತು *ಚಿಕ್ಕದೇವರಾಜ ವಿಜಯ*[69] ಕೃತಿಗಳು ಕೆಸರೆಯ ಯುದ್ಧದನಂತರ ಶ್ರೀರಂಗಪಟ್ಟಣದ ಸ್ವಾಧೀನದವರೆಗಿನ ಯಾವ ಘಟನೆಗಳನ್ನು ಚಿತ್ರಿಸದೆ ಏಕಾಏಕಿ ಶ್ರೀರಂಗಪಟ್ಟಣವನ್ನು ರಾಜ ಒಡೆಯರು ಸಾಧಿಸಿದರೆಂದು ತಿಳಿಸುತ್ತವೆ. ಮುಂದುವರಿದು ಈ ಹಂತದಲ್ಲಿ ರಾಜ ಒಡೆಯರ ಸೈನಿಕ ಕಾರ್ಯಾಚರಣೆ ಯಾವ ಮಟ್ಟವನ್ನು ತಲುಪಿತ್ತೆಂದರೆ, ತಿರುಮಲನು ತನ್ನ ದಿನನಿತ್ಯದ ಖರ್ಚುವೆಚ್ಚಗಳಿಗೆ ಸಹ ಬ್ರಹ್ಮಪುರಿಯ ಆದಾಯದ ಮೇಲೆ ಅವಲಂಬಿಸಿದ್ದನೆಂದು ಹಾಗೂ ಈ ಪರಿಸ್ಥಿತಿಯಲ್ಲಿ ದಾರಿ ಕಾಣದ ತಿರುಮಲನು ಮಾಲಂಗಿಗೆ ಓಡಿಹೋದನು,[70] ಆನಂತರ ರಾಜ ಒಡೆಯರು ಶ್ರೀರಂಗಪಟ್ಟಣವನ್ನು ಸ್ವಾಧೀನ ಮಾಡಿಕೊಂಡರೆಂದೂ ದಾಖಲಿಸುತ್ತವೆ.[71]

ಮಹಿಷೂರ ಶ್ರೀ ಮನ್ಮಹಾರಾಜ ಚಾಮರಾಜ ಒಡೆಯರ ವಂಶರತ್ನಾಕರ[72] ಮತ್ತು ಶ್ರೀ ಮನ್ಮಹಾರಾಜರವರ ವಂಶಾವಳಿ[73] ಕೃತಿಗಳು ತಿರುಮಲನು ರಾಜ ಒಡೆಯರ್‌ಗೆ ರಾಜಧಾನಿಯನ್ನೂ ಸಿಂಹಾಸನವನ್ನೂ ತ್ಯಾಗ ಮಾಡಿದನೆಂದೂ ಆ ಸಂದರ್ಭದಲ್ಲಿ ತಿರುಮಲನು ಬೆನ್ನುಫಣಿ ರೋಗದಿಂದ ನರಳುತ್ತಿದ್ದುದರಿಂದ ಭವರೋಗವೈದ್ಯನಾದ ತಲಕಾಡಿನ ವೈದ್ಯನಾಥೇಶ್ವರನಿಗೆ ಸೇವೆ ಸಲ್ಲಿಸುವ ಸಲುವಾಗಿ ರಾಜ ಒಡೆಯರಿಗೆ ತನ್ನ ಸಂಪತ್ತು ಧನಕನಕ, ಸಿಂಹಾಸನವನ್ನೂ ನೀಡಿ ತಲಕಾಡಿಗೆ ತೆರಳಿದನೆಂದೂ ದಾಖಲಿಸುತ್ತವೆ. ಮೈಸೂರು ದೊರೆಗಳ ಪೂರ್ವೋತ್ತರ ಕೃತಿಯು ಮೂರನೆ ವಾದವನ್ನು ದಾಖಲಿಸುತ್ತದೆ. ಅದೇನೆಂದರೆ ವಿಜಯನಗರದ ಸಾಮ್ರಾಟ ವೆಂಕಟನು ರಾಜ ಒಡೆಯರಿಗೆ ಅಭಯಹಸ್ತ ನಿರೂಪವನ್ನು ಕಳುಹಿಸಿ ಶ್ರೀರಂಗಪಟ್ಟಣದ ಆಡಳಿತವನ್ನು ವಹಿಸಿಕೊಳ್ಳುವಂತೆ ನೆರವಾದನೆಂದೂ ದಾಖಲಿಸುತ್ತದೆ.[74] ಈ ಸಂದರ್ಭದಲ್ಲಿ ಈ ಮೂರು ವಾದಗಳ ಸತ್ಯಾಸತ್ಯತೆಯನ್ನು ತಿಳಿಯಲು ಪ್ರಯತ್ನಿಸುವುದು ಪ್ರಮುಖವಾಗುತ್ತದೆ. ಎರಡನೆ ಮತ್ತು ಮೂರನೆ ಸಿದ್ಧಾಂತವನ್ನು ಹುಟ್ಟುಹಾಕಿದ ಐತಿಹಾಸಿಕ ಕೃತಿಗಳಾವುವೂ ರಾಜ ಒಡೆಯರ ಕಾಲಕ್ಕೆ ಸಮೀಪವಾದವುಗಳಲ್ಲ. ಇವೆಲ್ಲವೂ ಶ್ರೀರಂಗಪಟ್ಟಣದ ಸ್ವಾಧೀನದ ಎರಡು ಶತಮಾನಗಳ ತರುವಾಯ ರಚಿಸಲ್ಪಟ್ಟವು. ಅಲ್ಲದೆ ಚಿಕ್ಕದೇವರಾಜ ವಂಶಾವಳಿಯನ್ನು ಬರೆದ ತಿರುಮಲಾರ್ಯನು, ರಾಜ ಒಡೆಯರ ಸಮಕಾಲೀನನು. ಕಂಠೀರವ ನರಸರಾಜ ವಿಜಯ ಕೃತಿಕಾರನಾದ ಗೋವಿಂದ ವೈದ್ಯನು ರಾಜ ಒಡೆಯರ ಕಾಲೀನನು. ಆ ಕಾಲದ ಬಗೆಗೆ ಆಳವಾದ ಜ್ಞಾನವನ್ನು ಹೊಂದಿದ್ದ ವ್ಯಕ್ತಿ. ಕೇವಲ ರಾಜ ಒಡೆಯರ ನಿಧನದ ಮೂವತ್ತು ವರ್ಷಗಳಲ್ಲಿ ಕೃತಿ ರಚಿಸಿದವನು. ಅಂದಮೇಲೆ ರಾಜ ಒಡೆಯರ್ ಕಾಲದಲ್ಲಿ ಆದ ಆಗು ಹೋಗುಗಳ ಬಗೆಗೆ ತನ್ನ ನೇರವಾದ ಜ್ಞಾನ ಹೊಂದಿದ ಮತ್ತು ಆತನೇ ಅದಕ್ಕೆ ಸಾಕ್ಷಿಯಾಗಿದ್ದಿರಬಹುದು. ಇದಲ್ಲದೆ ಗೋವಿಂದ ವೈದ್ಯನು ಈ ಕೃತಿ ರಚಿಸುವ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ಅಂದಿನ ವಿಷಯಗಳನ್ನು ಸಂಗ್ರಹಿಸಿಯೇ ರಚಿಸಿರುವನೆಂದು ನಿಖರವಾಗಿ ಹೇಳಲು ಕೃತಿ ಉದ್ದಕ್ಕೂ ಸಾಕಷ್ಟು ಪುರಾವೆಗಳಿವೆ. ಇವೆಲ್ಲದರ ಆಧಾರದ ಮೇಲೆ ನಿರ್ಧರಿಸುವುದಾದರೆ ಕೆಸರೆ ಯುದ್ಧದ ನಂತರ ತಿರುಮಲನು ಅನುಭವಿಸಿದ ಸಾಲು ಸಾಲು ಸೈನಿಕ ಸೋಲುಗಳು ಆತನನ್ನು ಅಧೀರನಾಗಿಸಿದವು. ಅಷ್ಟೇ ಅಲ್ಲದೆ ರಾಜ ಒಡೆಯರು ಮತ್ತು ಆತನ ಸೋದರರು ಶ್ರೀರಂಗಪಟ್ಟಣದ ನಾಲ್ಕು ದಿಕ್ಕುಗಳಲ್ಲಿ ತಿರುಮಲನಿಗೆ ಸಹಕರಿಸುತ್ತಿದ್ದ ಮತ್ತು ಸಹಾಯಹಸ್ತ ಚಾಚುತ್ತಿದ್ದ ಎಲ್ಲ ಪಾಳೇಗಾರರನ್ನು ಸೋಲಿಸಿ ರಾಜಧಾನಿಗೆ ರವಾನೆಯಾಗುತ್ತಿದ್ದ ಎಲ್ಲ ಸವಲತ್ತುಗಳನ್ನು ತಡೆಹಿಡಿದರು.

ಹೀಗಾಗಿ ತಿರುಮಲನು ಅಘೋಷಿತ ಶ್ರೀರಂಗಪಟ್ಟಣದ ಮುತ್ತಿಗೆಯಿಂದ ಹೊರಬರಲು ಶ್ರೀರಂಗಪಟ್ಟಣವನ್ನು ತ್ಯಜಿಸಿ ಹೋದನೆಂದೂ, ಆನಂತರ ರಾಜ ಒಡೆಯರು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡರೆಂದು ಹೇಳಬಹುದು.

ಎ. ಸತ್ಯನಾರಾಯಣರವರು[75] 1610ರಲ್ಲಿ ರಾಜ ಒಡೆಯರ್ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ತಿರುಮಲರಿಗೆ ಬೆನ್ನುಫಣಿ ಖಾಯಿಲೆ ಇರಲಿಲ್ಲವೆಂದೂ ಮತ್ತು ಆ ಖಾಯಿಲೆಯಿಂದ ಆತನು ಸಾಯಲಿಲ್ಲವೆಂದೂ ಇದಕ್ಕೆ

ಬದಲಾಗಿ ವಿಜಯನಗರ ಸಾಮ್ರಾಟ ಒಂದನೆ ಶ್ರೀರಂಗನು ಬೆನ್ನುಫಣಿ ಖಾಯಿಲೆಯಿಂದ ಶ್ರೀರಂಗಪಟ್ಟಣದಲ್ಲಿ ಮೃತನಾದನೆಂದು ದೇವಚಂದ್ರನ ರಾಜಾವಳಿ ಕಥಾಸಾರದ ಆಧಾರದ ಮೇಲೆ ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ಮುಂದುವರಿದು ವೆಂಕಟ ಮತ್ತು ತಿರುಮಲರಿಬ್ಬರೂ ಹೊಂದಿದ್ದ ಅಸಮಾಧಾನ ಮತ್ತು ಮನಸ್ತಾಪದ ಆಧಾರದ ಮೇಲೆ 1800ರಲ್ಲಿ ರಚಿತವಾದ ಹಸ್ತಪ್ರತಿ ಆಧಾರದ ಮೇಲೆ ಇವರು ರಾಜನಿರೂಪವನ್ನು ಬೆಂಬಲಿಸುತ್ತಾರೆ.[76]

ವಿಲ್ಕ್ಸ್‌ನು[77] ಮೈಸೂರು ದೊರೆಗಳ ಪೂರ್ವೋತ್ತರ ವಿವರ ಆಧಾರದ ಮೇಲೆ ವೆಂಕಟಪತಿಯು ತಿರುಮಲನಿಗೆ ನಿವೃತ್ತಿಯನ್ನು ಪಡೆಯುವಂತೆ ಒತ್ತಾಯಿಸಿದನೆಂದೂ ದಾಖಲಿಸಿದ್ದಾರೆ. ಇದನ್ನೇ ಅವರು ರಾಜ ನಿರೂಪವೆಂದೂ ಅರ್ಥೈಸಿ ಭಾವಿಸಿರುವಂತೆ ಆತನ ಬರವಣಿಗೆಯಲ್ಲಿ ಕಂಡುಬರುತ್ತದೆ.[78] ಈ ಎರಡೂ ವಾದಗಳು ಅಂದರೆ ತಿರುಮಲರು ಶ್ರೀರಂಗಪಟ್ಟಣವನ್ನು ರಾಜ ಒಡೆಯರಿಗೆ ಬಿಟ್ಟುಕೊಡುವಷ್ಟು ವೆಂಕಟನು ತಿರುಮಲನಿಗೆ ನಿವೃತ್ತಿಯಾಗುವಂತೆ ಆಜ್ಞೆ ನೀಡುವಷ್ಟರ ಮಟ್ಟಿಗೆ ಅವರ ಸಂಬಂಧ ಉತ್ತಮವಾಗಿರಲಿಲ್ಲ. ಆದರೆ ತನ್ನ ದಾಯಾದಿಯನ್ನು ರಾಜಭ್ರಷ್ಟನನ್ನಾಗಿ ಮಾಡುವಷ್ಟು ಆತ ನಿಷ್ಕರುಣಿಯಾಗಿದ್ದಿರಲಾರ. ಕಾರಣ ಆತನು ಅಂದಿನ ರಾಜಕೀಯ ಪರಿಸ್ಥಿತಿಯ ಕೈಗೊಂಬೆಯಾಗಿ ಸ್ಥಾನಿಕರ ಸಲಹೆ ಸೂಚನೆಯಂತೆ ಕಾರ್ಯನಿರ್ವಹಿಸಬೇಕಾಗಿದ್ದಿತು. ರಾಜ ಒಡೆಯರು ಮತ್ತು ತಿರುಮಲನ ನಡುವಿನ ಸಂಬಂಧ ಸಹ ಸಿಂಹಾಸನವನ್ನು ದಾನಮಾಡುವಷ್ಟು ಉತ್ತಮವಾಗಿದ್ದಂತೆ ಸಮಕಾಲೀನ ಕೃತಿಗಳು ಹೇಳುವುದಿಲ್ಲ. ಇವುಗಳೆಲ್ಲದರ ಹಿನ್ನೆಲೆಯಲ್ಲಿ ರಾಜ ಒಡೆಯರು ಶ್ರೀರಂಗಪಟ್ಟಣವನ್ನು ಗೆದ್ದುಕೊಂಡುದುದನ್ನು ಅನಂತರದ ದಿನಗಳಲ್ಲಿ ರಾಜ ಒಡೆಯರ ಸಾಧನೆಯನ್ನು ಒಪ್ಪಿಕೊಂಡು ಚಕ್ರವರ್ತಿಯು ಒಪ್ಪಿ ಆತನನ್ನು ಸಾಮಂತನೆಂದು ಭಾವಿಸಿ ಅಭಯಹಸ್ತ ನಿರೂಪವನ್ನು ಕಳುಹಿಸಿರುವ ಸಾಧ್ಯತೆಯನ್ನು ಮಾತ್ರ ಒಪ್ಪಬಹುದು. ಈ ನಿರೂಪವನ್ನು ರಾಜ ಒಡೆಯರ ನಂತರದ ಒಂದು ಶಾಸನ ಉಲ್ಲೇಖಿಸುತ್ತದೆ.[79] ಈ ಶಾಸನದ ಕಾಲವನ್ನು 1612 ಎಂದು ಗುರುತಿಸಿದ್ದರೂ ಈ ಶಾಸನದ ವಿಷಯ ಉಲ್ಲೇಖವಾಗಿರುವುದು 1622ರಲ್ಲಿ. ಹಾಗಾಗಿ ರಾಜ ಒಡೆಯರು ಶ್ರೀರಂಗಪಟ್ಟಣವನ್ನು ಕೆಸರೆಯುದ್ಧದ ತರುವಾಯ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಒಗ್ಗೂಡಿಸಿಕೊಂಡು ವಿಜಯನಗರದ ರಾಜ ಪ್ರತಿನಿಧಿ ತಿರುಮಲನ ವಿರುದ್ಧ ಆತನಿಗೆ ಸಹಕಾರಿಯಾಗಿದ್ದ ಒಂದೊಂದೇ ಪಾಳೆಪಟ್ಟನ್ನು ಜಯಿಸಿ ಆತನನ್ನು ಅಸಹಾಯಕನನ್ನಾಗಿಸಿ ಗತ್ಯಂತರವಿಲ್ಲದೆ ಶ್ರೀರಂಗಪಟ್ಟಣವನ್ನು ತೊರೆಯುವಂತೆ ಮಾಡಿ ಅದನ್ನು ಸಾಧಿಸಿದರೆಂದು ಹೇಳಬಹುದು.

ಮೂರನೆಯ ಹಂತ

ಶ್ರೀರಂಗಪಟ್ಟಣ ವಶವಾದುದು ರಾಜ ಒಡೆಯರ್ ಜೀವನದ ಒಂದು ಮಹತ್ವದ ಕಾಲಘಟ್ಟವಾಗಿ ಪರಿವರ್ತಿತವಾಯಿತು. ಮೈಸೂರು ಸಂಸ್ಥಾನವು ವಿಜಯನಗರದ ಸಾಮ್ರಾಟನ ಅಧೀನದಲ್ಲಿ ನೇರವಾಗಿ ಆಳ್ವಿಕೆ ಮಾಡುವ ಅವಕಾಶವನ್ನು ಪಡೆದುಕೊಂಡಿತು. 1668ರ ವರೆಗೆ ಇದೇ ಪರಿಸ್ಥಿತಿ ಮುಂದುವರಿಯಿತು.[80]

ಶ್ರೀರಂಗಪಟ್ಟಣ ಸ್ವಾಧೀನದಿಂದಾಗಿ ಶ್ರೀರಂಗಪಟ್ಟಣವೇ ಮೈಸೂರಿನ ರಾಜಧಾನಿಯಾಗಿ ಪರಿವರ್ತಿತವಾಯಿತಲ್ಲದೆ ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವದ ಹೆಸರನ್ನು ದಾಖಲಿಸಿತು. ಅದರಲ್ಲೂ ರಣಧೀರ ಕಂಠೀರವ ನರಸರಾಜ ಮತ್ತು ಚಿಕ್ಕದೇವರಾಜರ ಕಾಲದಲ್ಲಂತೂ ಶ್ರೀರಂಗಪಟ್ಟಣ ಇಡೀ ದಕ್ಷಿಣ ಭಾರತದ ಎಲ್ಲ ರಾಜಮನೆತನಗಳಿಗೂ ಅಪೇಕ್ಷಿತ ಸ್ಪರ್ಶಮಣಿಯಂತೆ ಕಂಡುಬಂದಿತಲ್ಲದೆ ರಾಜಕೀಯ ಮೇಲಾಟಕ್ಕೆ ರಣರಂಗವಾಯಿತು. ಇದೆಲ್ಲವನ್ನೂ ಮೆಟ್ಟಿನಿಂತು ಶ್ರೀರಂಗಪಟ್ಟಣ ರಕ್ಷಿಸಿ ರಾಜಧಾನಿಯನ್ನಾಗಿ ಮುಂದುವರಿಸಿಕೊಂಡು ಬಂದುದು ಮೈಸೂರು ಮನೆತನದ ಮಹತ್ವದ ಸಾಧನೆ. ಆದರೆ ಅನಂತರದ ಅರಸರ ನಿರ್ಲಕ್ಷ್ಯ ಮತ್ತು ಅಶಕ್ತತೆ ಅರಮನೆಯ ಒಳಗಿನ ಪಿತೂರಿಗಳಿಗೆ ದಾರಿ ಮಾಡಿಕೊಟ್ಟು ಅವನತಿಯೆಡೆಗೆ ಸಾಗುವಂತೆ ಮಾಡಿತು.

ಶ್ರೀರಂಗಪಟ್ಟಣದ ಸ್ವಾಧೀನದ ನಂತರ ರಾಜ ಒಡೆಯರು ವಿಜಯನಗರದ ಸ್ಥಾನಿಕ ಆಡಳಿತಗಾರರಾಗಿ ಮಾರ್ಪಟ್ಟರು. ರಾಜ ಒಡೆಯರು 1610ರ ಮಾರ್ಚ್ 21ರಂದು ಅಂದರೆ ಸಾಧಾರಣ ಸಂವತ್ಸರ ಚೈತ್ರ ಶುದ್ಧ 7ರಂದು ಸಿಂಹಾಸನಾರೋಹಣ ಮಾಡಿದಂತೆ ತಿಳಿದುಬರುತ್ತದೆ.[81] ಇದನ್ನು ಗಮನಿಸಿದಾಗ ಶ್ರೀರಂಗಪಟ್ಟಣ ವಶಪಡಿಸಿಕೊಂಡ ನಂತರ ಸುಮಾರು 45 ದಿನಗಳಷ್ಟು ಕಾಲ ಅವರು ಅರಮನೆಯನ್ನು ಪ್ರವೇಶಿಸಿರಲಿಕ್ಕಿಲ್ಲ. ಇದು ಮೈಸೂರು ಮತ್ತು ಶ್ರೀರಂಗಪಟ್ಟಣದ ಸುತ್ತಮುತ್ತ ಪ್ರದೇಶಗಳ ಮೇಲೆ ರಾಜ ಒಡೆಯರ್ ಸಾಧಿಸಿದ ಪ್ರಭುತ್ವವನ್ನು ಸಂಕೇತಿಸುತ್ತದೆ. ಶ್ರೀರಂಗಪಟ್ಟಣದ ಸಾಧನೆಯ ನಂತರದ ರಾಜ ಒಡೆಯರ ಸೈನಿಕ ಕಾರ್ಯಾಚರಣೆಗಳು ಮುಂದುವರಿದವು. 1612ರಲ್ಲಿ ರಾಜ ಒಡೆಯರು 'ಶ್ರೀಮನ್ಮಹಾಧಿರಾಜ' ಎಂದು ಕರೆಸಿಕೊಂಡರು.[82] ರಾಜ ಒಡೆಯರು ವಿಜಯನಗರದ ಸಾಮ್ರಾಟನಾದ ಒಂದನೆ ವೆಂಕಟನ ಪ್ರಮುಖ ಸಾಮಂತರಾಗಿದ್ದರೆಂಬುದನ್ನು ಇದು ಖಚಿತಪಡಿಸುತ್ತದೆ. ಬಹುಶಃ ಒಂದನೆ ವೆಂಕಟನು ತನ್ನ ದಾಯಾದಿ ತಿರುಮಲನು ಮಧುರೆಯ ಯುದ್ಧದಲ್ಲಿ ತೋರಿದ ಅನ್ಯಮನಸ್ಕತೆಯಿಂದಾಗಿ ಮತ್ತು ರಾಜ ಒಡೆಯರ ವಿರುದ್ಧದ ಸೈನಿಕ ಕಾರ್ಯಾಚರಣೆಗಳಲ್ಲಿ ಅನುಭವಿಸಿದ ಸೋಲುಗಳು ವೆಂಕಟನಿಗೆ ರಾಜ ಒಡೆಯರ ಶಕ್ತಿ ಸಾಮರ್ಥ್ಯಗಳನ್ನು ಪರಿಚಯಿಸಿದ್ದವು. ಇದು ವೆಂಕಟನು ತಿರುಮಲನ ನಿವೃತ್ತಿಯನ್ನು ಅತ್ಯಂತ ಯೋಜಿತವಾಗಿ ಯೋಚಿಸಿ ಕಾರ್ಯಾಚರಣೆಗೆ ತರಲು ಸಹಾಯಕವಾದವು.[83]

ಚಿಕ್ಕದೇವರಾಜ ವಂಶಾವಳಿಯು ರಾಜ ಒಡೆಯರು ಶ್ರೀರಂಗಪಟ್ಟಣದಿಂದ ತಿರುಮಲನನ್ನು ಹೊರಗೋಡಿಸಿದುದನ್ನು ತೆರೆದ ಮನಸ್ಸಿನಿಂದ ಶ್ಲಾಘಿಸಿದನೆಂದು ತಿಳಿಸುತ್ತದೆ.[84] *ಚಿಕ್ಕದೇವರಾಜ ವಂಶಾವಳಿ* ಆಧರಿಸಿ ಹೇಳುವುದಾದರೆ ರಾಜ ಒಡೆಯರ ಸಾಧನೆಯಿಂದ ಹರ್ಷಿತನಾದನು. ಅದರ ಕುರುಹಾಗಿ ಒಂದನೆ ವೆಂಕಟನು ತನ್ನ ಸೇನಾನಿ ಗಂಭೀರರಾಯ ವಿರೂಪಣ್ಣನೊಂದಿಗೆ ರಾಜ ಒಡೆಯರಿಗೆ ಬಹುಮಾನಗಳನ್ನು ಕಾಣಿಕೆಗಳನ್ನು ಉತ್ತಮವಾದ ಆನೆಗಳು, ಉತ್ತಮ ತಳಿಯ ಕುದುರೆಗಳು, ಆಭರಣಗಳು ಮತ್ತು ಶಾಲುಗಳನ್ನು ಕಳುಹಿಸಿಕೊಟ್ಟನೆಂದು ದಾಖಲಾಗಿದೆ.[85] ಇದನ್ನು ಒಪ್ಪಿಕೊಂಡ ರಾಜ ಒಡೆಯರು ಗಂಭೀರರಾಯ ವಿರೂಪಣ್ಣನನ್ನು ಸಂಸ್ಥಾನದ ಪ್ರತಿಷ್ಠೆಗೆ ತಕ್ಕಂತೆ ಆದರದಿಂದ ಬರಮಾಡಿಕೊಂಡು ಗೌರವಿಸಿ ಆತನಿಗೂ ಕಾಣಿಕೆಗಳನ್ನಿತ್ತು ವಿಜಯನಗರದ ಸಾಮ್ರಾಟನಿಗೆ ಆತನ ಮೂಲಕ ಸಕಲ ಮರ್ಯಾದೆಗಳನ್ನು ಯಥೋಚಿತವಾಗಿ ಸಲ್ಲಿಸಿದಂತೆ ತಿಳಿದುಬರುತ್ತದೆ.[86] ಹೀಗಾಗಿ ರಾಜ ಒಡೆಯರು ಸಾಮ್ರಾಜ್ಯದ ನಂಬಿಕಸ್ಥ ನಾಯಕರಾಗಿ ಮುಂದುವರಿದರು. ಇದನ್ನು 1623ರ ಶಾಸನ ಉಲ್ಲೇಖಿಸುತ್ತದೆ.[87]

1623ರ ದಳವಾಯಿ ಅಗ್ರಹಾರದ ತಾಮ್ರಶಾಸನದಂತೆ ರಾಜ ಒಡೆಯರು ಅಭಯಹಸ್ತ ನಿರೂಪವನ್ನು ಪಡೆದುಕೊಂಡರೆಂದೂ ಉಮ್ಮತ್ತೂರು, ಶ್ರೀರಂಗಪಟ್ಟಣ ಸ್ಥಳಗಳ ಕೆಲವು ಪ್ರದೇಶಗಳನ್ನು ರಾಜ ಒಡೆಯರಿಗೆ ಉಂಬಳಿಯಾಗಿ ನೀಡಿದರೆಂದೂ ತಿಳಿದುಬರುತ್ತದೆ.[88] 1615ರ ತಿರುಮಕೂಡಲು ನರಸೀಪುರತಾಲ್ಲೂಕಿನ ಶಾಸನವೊಂದು ರಾಜ ಒಡೆಯರ್‌ಗೆ ಬನ್ನೂರು ಸ್ಥಳ ಸಹ ತೆರಿಗೆರಹಿತ ಉಂಬಳಿಯಾಗಿತ್ತೆಂದೂ ತಿಳಿಸುತ್ತದೆ.[89] ಆದರೆ ಬನ್ನೂರನ್ನು 1607ರಲ್ಲಿ ಮತ್ತು ಶ್ರೀರಂಗಪಟ್ಟಣವನ್ನು 1610ರಲ್ಲಿ ರಾಜ ಒಡೆಯರು ಸೈನಿಕ ಕಾರ್ಯಾಚರಣೆಯಿಂದಾಗಿ ಅವನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದರು.[90] ಪ್ರಾಯಶಃ ವೆಂಕಟನು, ರಾಜ ಒಡೆಯರು ಈ ಪ್ರದೇಶಗಳ ಮೇಲೆ ನಡೆಸಿದ ಸೈನಿಕ ಕಾರ್ಯಾಚರಣೆಯನ್ನು 1612ರಲ್ಲಿ ಕಳುಹಿಸಿದ ನಿಯೋಗದ ಮೂಲಕ ಒಪ್ಪಿಕೊಂಡಿರುವ ಸಾಧ್ಯತೆಗಳಿವೆ. ಹಾಗಾಗಿ ರಾಜ ಒಡೆಯರು ಗೆದ್ದುಕೊಂಡ ಪ್ರದೇಶಗಳನ್ನು ವೆಂಕಟನಿಂದ ತೆರಿಗೆರಹಿತ ಉಂಬಳಿಗಳಿಗಾಗಿ ಪಡೆದುಕೊಂಡರೆಂದು ಊಹಿಸಬಹುದು.

ರಾಜ್ಯ ವಿಸ್ತಾರ

ರಾಜ ಒಡೆಯರ ಸೈನಿಕ ಕಾರ್ಯಾಚರಣೆಗಳು ಒಂದು ಸಣ್ಣ ಪಾಳೆಯಪಟ್ಟನ್ನು ವಿಸ್ತಾರವಾದ ರಾಜ್ಯವನ್ನಾಗಿಸಿದವು. ಹಯವದನರಾಯರು ಹೇಳುವಂತೆ ಅವಿಭಜಿತ ಮೈಸೂರು ಜಿಲ್ಲೆಯ ಬಹುತೇಕ ಪ್ರದೇಶಗಳ ಮೇಲೆ ತಮ್ಮ ಪ್ರಭುತ್ವವನ್ನು ಸಾಧಿಸಿದ್ದರೆಂದು ತಿಳಿದುಬರುತ್ತದೆ.[91]

ರಾಜ ಒಡೆಯರ ರಾಜ್ಯದ ಎಲ್ಲೆಗಳು ಈ ರೀತಿಯಾಗಿವೆ: ಶ್ರೀರಂಗಪಟ್ಟಣದಿಂದ ದಕ್ಷಿಣದಲ್ಲಿ ಉಮ್ಮತ್ತೂರು, ಬನ್ನೂರು ಮತ್ತು ತೆರಕಣಾಂಬಿಯವರೆಗೆ, ಪೂರ್ವದಲ್ಲಿ ಮಾವತ್ತೂರು ಮತ್ತು ಅಕ್ಕಿಹೆಬ್ಬಾಳಿನವರೆಗೆ, ಪಶ್ಚಿಮದಲ್ಲಿ ಹೊಳೆ ನರಸೀಪುರದವರೆಗೆ, ಉತ್ತರದಲ್ಲಿ ಪಿರಿಯಾಪಟ್ಟಣದವರೆಗೆ ಹರಡಿದ್ದಿತು.[92]

ಈ ಎಲ್ಲೆಗಳನ್ನು ಗಮನಿಸಿದಾಗ ರಾಜ ಒಡೆಯರ ಕಾಲದ ಮೈಸೂರು ರಾಜ್ಯ ಪೂರ್ವದಲ್ಲಿ ಜಗದೇವರಾಯನ ಎಲ್ಲೆಗೆ ಅಂಟಿಕೊಂಡಿತಲ್ಲದೆ ದಕ್ಷಿಣದಲ್ಲಿ ಮಧುರೆ ನಾಯಕನ ಎಲ್ಲೆಯವರೆಗೆ ವಿಸ್ತರಿಸಿದ್ದಿತು. ಈ ಎಲ್ಲ ಸೈನಿಕ ಕಾರ್ಯಾಚರಣೆಗಳು ರಾಜ ಒಡೆಯರ್‌ನನ್ನು ಒಬ್ಬ ಮಹಾನ್ ರಾಜ್ಯ ನಿರ್ಮಾಪಕನಾಗಿ ನಿರೂಪಿಸಲು ಸಹಾಯಕವಾಗಿವೆ.

33 ಹಳ್ಳಿಗಳನ್ನೊಳಗೊಂಡಿದ್ದ ಕೇವಲ ಮೂರು ಸಾವಿರ ವರಹಗಳ ಆದಾಯವುಳ್ಳ ಹಾಗೂ 300 ಮಂದಿ ಸೈನಿಕರನ್ನು ಹೊಂದಿದ್ದ ಸಣ್ಣ ಪಾಳೆಪಟ್ಟನ್ನು ಸುಮಾರು 5,500 ಚದರ ಮೈಲಿಗಳ ವಿಸ್ತಾರವಾದ ರಾಜ್ಯವನ್ನಾಗಿ ಪರಿವರ್ತಿಸಿದ ಕೀರ್ತಿ ಇವರದು.[93]

ಆರ್ಥಿಕ ಸಂಕಷ್ಟದಲ್ಲಿದ್ದ ಮೈಸೂರಿನ ಪಾಳೇಪಟ್ಟು, ಮೂರು ಭಾಗವಾಗಿ ವಿಭಜನೆಗೊಂಡಿದ್ದಿತು. ತನ್ನ ದಾಯಾದಿಗಳಿಂದಲೇ ಸ್ಪರ್ಧೆ ಎದುರಿಸಿ ಆರ್ಥಿಕ ಸಂಕಷ್ಟದಲ್ಲಿದ್ದ ಪಾಳೇಪಟ್ಟಿನ ಅಧಿಕಾರವನ್ನು ವಹಿಸಿಕೊಂಡು ಯುದ್ಧ ಮತ್ತು ತಟಸ್ಥ ನೀತಿಯನ್ನು ಬಳಸಿ, ಆನಂತರ ಸಾಮ, ದಾನ, ಭೇದ, ದಂಡಗಳೆಂಬ ಯುಕ್ತಿಗಳನ್ನು ಚತುರತೆಯಿಂದ ಬಳಸಿ ತನ್ನೆಲ್ಲ ವಿರೋಧಿಗಳನ್ನು ಜಯಿಸಿ ವಿಶಾಲವಾದ ರಾಜ್ಯವನ್ನು ಕಟ್ಟಿ ವಿಜಯನಗರ ಸಾಮ್ರಾಜ್ಯದ ಸಾಮಂತರೆನಿಸಿಕೊಂಡು ಸಾಮ್ರಾಟನಿಂದಲೇ ಗೌರವಿಸಲ್ಪಟ್ಟ ವ್ಯಕ್ತಿ ರಾಜ ಒಡೆಯರ್.

ಪರಾಮರ್ಶನಗಳು

1. Hayavadana Rao, C. 1943, *History of Mysore*, Bengaluru, Vol. I, pp. 44-80.
2. *ಅದೇ.*
3. A. Sathyanarayana, 1996, *History of the Wodeyars of Mysore (1610-1748),* Mysore, pp. 11-33
4. *ಅದೇ.*
5. *ಅದೇ.*
6. ಹಯವದನರಾವ್, 1943, *ಪೂರ್ವೋಕ್ತ.*
7. *ಅದೇ.*
8. ರಾಮಕೃಷ್ಣರಾವ್ ಬಿ., 1916, *ಶ್ರೀ ಮನ್ಮಹರಾಜರ ವಂಶಾವಳಿ*, ಸರ್ಕಾರಿ ಮುದ್ರಣಾಲಯ, ಮೈಸೂರು, ಪು. 18–19 (ಮುಂದೆ 'ವಂಶಾವಳಿ' ಎಂದು ನಮೂದಿಸಿದೆ)

   ಮಹಿಶೂರ ಶ್ರೀ ಮನ್ಮಹರಾಜ ಚಾಮರಾಜೇಂದ್ರ ಒಡೆಯರವರ ವಂಶರತ್ನಾಕರ, 1887, ಅರಮನೆಯ ಜಗನ್‌ಮೋಹನ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಲ್ಪಟ್ಟಿತು. ಮೈಸೂರು, ಪು. 12–49 (ಇದಾದ ನಂತರ 'ವಂಶರತ್ನಾಕರ'ವೆಂದು ನಮೂದಿಸಲಾಗಿದೆ).
9. ಹಯವದನರಾವ್, 1943, *ಪೂರ್ವೋಕ್ತ.*
10. *ಅದೇ.*
11. ಸತ್ಯನಾರಾಯಣ, 1996, *ಪೂರ್ವೋಕ್ತ.*
12. *ಅದೇ.*
13. ಹಯವದನರಾವ್, 1943, *ಪೂರ್ವೋಕ್ತ.*
14. *ಅದೇ.*

15. ಅದೇ.
16. ಸತ್ಯನಾರಾಯಣ, 1996, *ಪೂರ್ವೋಕ್ತ.*
17. ಅದೇ.
18. ವಂಶಾವಳಿ, 1916, *ಪೂರ್ವೋಕ್ತ.*
19. ಅದೇ.
20. ಹಯವದನರಾವ್, 1943, *ಪೂರ್ವೋಕ್ತ.*
21. ತಿರುಮಲಾರ್ಯ, 1999, *ಚಿಕ್ಕದೇವರಾಜ ವಂಶಾವಳಿ*, ಮ.ಭಾ. ಭೋಇಯಿ (ಸಂ.), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. 1–32.
22. ಹಯವದನರಾವ್, 1943, *ಪೂರ್ವೋಕ್ತ.*
23. ತಿರುಮಲಾರ್ಯ, 1999, *ಪೂರ್ವೋಕ್ತ.*
24. ಹಯವದನರಾವ್, 1943, *ಪೂರ್ವೋಕ್ತ.*
25. ಅದೇ.
26. ಅದೇ.
27. ಅದೇ.
28. ಅದೇ.
29. ತಿರುಮಲಾರ್ಯ, 1999, *ಪೂರ್ವೋಕ್ತ* ; ಗೋವಿಂದವೈದ್ಯ, 1971, *ಕಂಠೀರವ ನರಸರಾಜ ವಿಜಯ;* ಆರ್. ಶಾಮಶಾಸ್ತ್ರಿ (ಸಂ.), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಮೂರನೆ ಸಂಧಿ, ಪು. 27–45.
30. ಗೋವಿಂದವೈದ್ಯ, 1971, *ಪೂರ್ವೋಕ್ತ.*
31. ಹಯವದನರಾವ್, 1943, *ಪೂರ್ವೋಕ್ತ.*
32. ತಿರುಮಲಾರ್ಯ, 1999, *ಪೂರ್ವೋಕ್ತ.*
33. Colonel Mark Wilks, 1930, *Historical Sketches of the South of India, in an attempt to trace the History of Mysore,* Govt. Press, Mysore, pp. 38-54.
34. ಸತ್ಯನಾರಾಯಣ, 1996, *ಪೂರ್ವೋಕ್ತ.*
35. ಹಯವದನರಾವ್, 1943, *ಪೂರ್ವೋಕ್ತ.*
36. ಅದೇ.
37. ಅದೇ.
38. ಅದೇ.
39. ಅದೇ.
40. ಅದೇ.
41. ಅದೇ.
42. ವಂಶಾವಳಿ, 1916, *ಪೂರ್ವೋಕ್ತ.*
43. ಹಯವದನರಾವ್, 1943, *ಪೂರ್ವೋಕ್ತ.*
44. ಅದೇ.
45. ಸತ್ಯನಾರಾಯಣ, 1996, *ಪೂರ್ವೋಕ್ತ.*
46. ಹಯವದನರಾವ್, 1943, *ಪೂರ್ವೋಕ್ತ.*

47. *ಅದೇ.*
48. *ಅದೇ.*
49. *ವಂಶಾವಳಿ*, 1916, *ವಂಶರತ್ನಾಕರ*, 1887, *ಪೂರ್ವೋಕ್ತ.*
50. *ಅದೇ.*
51. ಹಯವದನರಾವ್, 1943, *ಪೂರ್ವೋಕ್ತ*
52. *ಮೈಸೂರು ದೊರೆಗಳ ಪೂರ್ವಾಭ್ಯುದಯ*, M.S. No. 15-37, a Kaditam in the Mackanze Collections in the Madras Oriental Library.
53. ವೆಂಕಟರಮಣಯ್ಯ (ಸು. 1800) ಮೈಸೂರು ರಾಜ *ಚರಿತ್ರೆ*, ORI, ಮೈಸೂರು
54. *ಅದೇ.*
55. *ಅದೇ.*
56. *ಪೂರ್ವಾಭ್ಯುದಯ, ಪೂರ್ವೋಕ್ತ.*
57. *ಅದೇ.*
58. *ವಂಶಾವಳಿ*, 1916, *ವಂಶರತ್ನಾಕರ*, 1887, *ಪೂರ್ವೋಕ್ತ.*
59. *ಅದೇ.*
60. ತಿರುಮಲಾರ್ಯ, 1999, *ಪೂರ್ವೋಕ್ತ.*
61. ವಿಲ್ಕ್ಸ್, 1930, *ಪೂರ್ವೋಕ್ತ.*
62. *EC*, V, Tn. 15, 1621-1622.
63. ತಿರುಮಲಾರ್ಯ, 1999, *ಪೂರ್ವೋಕ್ತ.*
64. *ಅದೇ.*
65. ಹಯವದನರಾವ್ ಸಿ., 1943, *ಪೂರ್ವೋಕ್ತ.*
66. *ಅದೇ.*
67. ಗೋವಿಂದವೈದ್ಯ, 1931, *ಪೂರ್ವೋಕ್ತ.*
68. ತಿರುಮಲಾರ್ಯ, 1986, *ಪೂರ್ವೋಕ್ತ.*
69. ತಿರುಮಲಾರ್ಯ, 1896, *ಚಿಕ್ಕದೇವರಾಜ* ವಿಜಯಂ, ಮೈಸೂರು
70. ತಿರುಮಲಾರ್ಯ, 1999 ಮತ್ತು ಗೋವಿಂದವೈದ್ಯ, 1971, *ಪೂರ್ವೋಕ್ತ*
71. *ವಂಶಾವಳಿ*, 1916, *ವಂಶರತ್ನಾಕರ*, 1887, *ಪೂರ್ವೋಕ್ತ.*
72. *ಅದೇ.*
73. *ಅದೇ.*
74. *EC.*,V. Tn. 15, 1622. ತಿರುಮಲಾರ್ಯ, *ವಂಶರತ್ನಾಕರ* ಮತ್ತು *ವಂಶರತ್ನಾವಳಿ*, 1999, *ಪೂರ್ವೋಕ್ತ.*
75. ಸತ್ಯನಾರಾಯಣ, 1996, *ಪೂರ್ವೋಕ್ತ.*
76. *ಅದೇ.*
77. ವಿಲ್ಕ್ಸ್, 1930, *ಪೂರ್ವೋಕ್ತ*
78. *ಅದೇ.*
79. *EC.*, V. 15, 1622, CE.
80. *ವಂಶಾವಳಿ*, 1916, *ವಂಶರತ್ನಾಕರ*, 1887, *ಪೂರ್ವೋಕ್ತ.*

81. *ಅದೇ.*
82. *ಅದೇ.*
83. ತಿರುಮಲಾರ್ಯ, 1999, *ಪೂರ್ವೋಕ್ತ.*
84. *ಅದೇ.*
85. ವೆಂಕಟರಮಣಯ್ಯ, *ಪೂರ್ವೋಕ್ತ.*
86. *ವಂಶಾವಳಿ,* 1916, *ವಂಶರತ್ನಾಕರ,* 1887, *ಪೂರ್ವೋಕ್ತ;* ಹಯವದನರಾವ್ ಸಿ., 1943, *ಪೂರ್ವೋಕ್ತ.*
87. *EC,* V, Tn. 15, 1623 A.D.
88. *EC,* V, Tn. 50, 1615 A.D.
89. *ವಂಶಾವಳಿ,* 1916, *ವಂಶರತ್ನಾಕರ,* 1887, *ಪೂರ್ವೋಕ್ತ* ಮತ್ತು ಹಯವದನರಾವ್ ಸಿ., 1943, *ಪೂರ್ವೋಕ್ತ.*
90. *ಪೂರ್ವಾಭ್ಯುದಯ* ಮತ್ತು *ಮೈಸೂರು ರಾಜರ ಚರಿತ್ರೆ, ಪೂರ್ವೋಕ್ತ.*
91. ಹಯವದನರಾವ್ ಸಿ., 1943, *ಪೂರ್ವೋಕ್ತ*
92. *ಅದೇ.*
93. ಹಯವದನರಾವ್ ಸಿ., 1947, ಮೈಸೂರು *ಗೆಜೆಟಿಯರ್,* ಸಂ. 5, ಮೈಸೂರು ಜಿಲ್ಲೆ

18

ವಿಜಯನಗರ ಕಾಲದಲ್ಲಿ ದಕ್ಷಿಣ ಕನ್ನಡದ ವ್ಯಾವಸಾಯಿಕ ಪದ್ಧತಿಯಲ್ಲಿ ಆರುವಾರ

ಬಿ. ಜಗದೀಶ ಶೆಟ್ಟಿ

ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಜಯನಗರ ಕಾಲದಲ್ಲಿ ಪ್ರಚಲಿತವಿದ್ದ ವಿವಿಧ ಆರುವಾರ ಪದ್ಧತಿಗಳ ಅಧ್ಯಯನವೇ ಈ ಪ್ರಬಂಧದ ಮುಖ್ಯ ಉದ್ದೇಶ. ಈ ಪ್ರಬಂಧ ರಚನೆಗೆ ಪ್ರಮುಖ ಆಧಾರ ಶಾಸನಗಳು.

ವಿಜಯನಗರ ಕಾಲದ ಶಾಸನಗಳಲ್ಲಿ ಹಣದ ಅವಶ್ಯಕತೆಯನ್ನು ಪೂರೈಸುವುದಕ್ಕಾಗಿ ಅನೇಕ ರೀತಿಯ ಆರುವಾರ ಪದ್ಧತಿಯ ಅಡವು ವಿಧಾನಗಳನ್ನು ಕಾಣಬಹುದು. ವಿಜಯನಗರ ಕಾಲದ ಶಾಸನಗಳಲ್ಲಿ ಹಲವು ಬಾರಿ ಉಲ್ಲೇಖಿಸಲ್ಪಟ್ಟಿರುವುದರಿಂದ ಅವು ಬಹಳಷ್ಟು ಪ್ರಚಾರ ಪಡೆದಿದ್ದವೆಂದು ನಿರ್ಣಯಿಸಬಹುದು. ಆರುವಾರ ಶಾಸನಗಳಲ್ಲಿ ಕಾಣುವ ಅತೀ ಪ್ರಸಿದ್ಧಿಯಾದ ಭೂ ಅಡವು ಪದ್ಧತಿಯಾಗಿದೆ. ಕಿಟ್ಟೆಲ್ ಅವರ ಪ್ರಕಾರ "ಸ್ವಾಧೀನದೊಂದಿಗೆ ಮಾಡುವ ಭೂ ಅಡವು ಕ್ರಮ ಆರುವಾರ ಎಂದೆನಿಸಿಕೊಳ್ಳುತ್ತದೆ."[1] ಆರುವಾರವನ್ನು "ಭೂಮಿಯನ್ನು ಪರಭಾರೆ ಮಾಡುವುದರೊಂದಿಗೆ ಮಾಡುವ ಭೂಅಡವು ಕ್ರಮ-ಅನುಭವದ ಹಕ್ಕಿನೊಂದಿಗೆ ಅಡವು"[2] ಎಂದೂ ವಿವರಿಸಲಾಗಿದೆ. ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನುವಲ್ ಆರುವಾರವನ್ನು ಸ್ಪಷ್ಟವಾಗಿ ವಿವರಿಸುತ್ತಾ "ಸ್ವಾಧೀನತೆಯೊಂದಿಗಿನ ಭೂಅಡವು ಆರುವಾರವೆಂದು ಕರೆಯಲ್ಪಡುವುದು"[3] ಎಂದಿದೆ.

ಹೀಗೆ ಆರುವಾರವನ್ನು ಒಂದು ಭೂಅಡವು ಕ್ರಮವಾಗಿ ಈ ಕೆಳಗಿನಂತೆ ವಿವರಿಸಬಹುದು. ಹಣವನ್ನು ಸ್ವೀಕರಿಸಿದ ನಂತರ ಹಣ ಕೊಟ್ಟವನಿಗೆ ಭೂಮಿಯನ್ನು ಹಸ್ತಾಂತರಿಸಿ ಮಾಡುವ ಭೂಅಡವು ಕ್ರಮವನ್ನು ಆರುವಾರವೆನ್ನಬಹುದು. ಈ ರೀತಿಯ ಅಡವು ಪದ್ಧತಿಯಲ್ಲಿ ಕೊಟ್ಟ ಹಣಕ್ಕೆ ಪೂರ್ಣ ಜವಾಬ್ದಾರಿ ಇದೆ. ಏಕೆಂದರೆ ಹಣಕ್ಕೆ ಭದ್ರತೆ ನೀಡಿದ ಭೂಮಿ ಹಣ ಕೊಟ್ಟವನಿಗೆ ಹಸ್ತಾಂತರಿಸಲ್ಪಡುತ್ತದೆ ಮಾತ್ರವಲ್ಲ, ಅವನೇ ಅದನ್ನು ಅನುಭವಿಸಿಕೊಂಡು ಬರುತ್ತಾನೆ. ಆದುದರಿಂದ ಆರುವಾರ ಒಂದು ಭೂ ಅಡವು ಕ್ರಮ ಎಂಬ ಅಂಶ ಶಾಸನಗಳಲ್ಲಿ ವಿವರಿಸಲ್ಪಟ್ಟಿರುವುದರಿಂದ ಆರುವಾರ ಎಂದರೆ ತೆರಿಗೆ ಎಂಬ ವಾದವನ್ನು ಒಪ್ಪುವುದು ಕಷ್ಟವಾಗುತ್ತದೆ.[4]

ಕುಂದಾಪುರ ತಾಲ್ಲೂಕು ಬಸ್ರೂರಿನ ಒಂದು ಶಾಸನ ಮನೆಯ ಜಾಗ, ಮರಗಳು, 9 ನಾಗಂಡುಗ ಮೂಡೆ ಜಾಗ ಮತ್ತು ಅವುಗಳ ಉತ್ಪತ್ತಿ ಸೇರಿ 100 ವರಹ ಗದ್ಯಾಣಗಳನ್ನು ಪಡೆದು ಅಡವು ಮಾಡಿದ ವಿಷಯವನ್ನು ತಿಳಿಸುತ್ತದೆ.[5] ಮೇಲಿನ ಶಾಸನದಲ್ಲಿ ಹಣ ಪಡೆದುಕೊಂಡವನು ಹಣ ಕೊಟ್ಟವನಿಗೆ ಭೂಮಿಯೊಂದಿಗೆ ಅದಕ್ಕೆ ಸಂಬಂಧಿಸಿದ ಎಲ್ಲಾ

ಸೌಕರ್ಯಗಳನ್ನು ಹಸ್ತಾಂತರಿಸಿದುದನ್ನು ತಿಳಿಸುತ್ತದೆ. ಈ ರೀತಿ ಮಾಡಿದುದರಿಂದ ಭೂಮಿ ಪಡೆದುಕೊಂಡವನಿಗೆ ಅದರ ಪ್ರಯೋಜನವನ್ನು ಸಂಪೂರ್ಣವಾಗಿ ಪಡೆಯಲು ಸಹಾಯವಾದಂತಾಯಿತು.

ಬಸ್ರೂರಿನ ಕ್ರಿ.ಶ. 1524ರ ಶಾಸನ ಆರುವಾರ ಸಾಲವಾಗಿ ಕೊಟ್ಟ 100 ಗದ್ಯಾಣ ಹಣಕ್ಕೆ 10 ಮೂಡೆ ಅಕ್ಕಿಯನ್ನು ಬಡ್ಡಿಯಾಗಿ ತೆಗೆದುಕೊಂಡ ವಿಷಯವನ್ನು ತಿಳಿಸುತ್ತದೆ.[6] ಮೇಲೆ ಹೇಳಿದ ಶಾಸನದಿಂದ ಹಾಗೂ ಇತರ ಶಾಸನಗಳಿಂದ ನಮಗೆ ತಿಳಿಯುವುದೇನೆಂದರೆ, ಸಾಮಾನ್ಯವಾಗಿ ಆರುವಾರ ಸಾಲಕ್ಕೆ ನಿಗದಿಪಡಿಸುತ್ತಿದ್ದ ಬಡ್ಡಿಯ ದರ ಶೇಕಡಾ 10. ಇಲ್ಲಿನ ಒಂದು ವಿಶೇಷತೆಯೆಂದರೆ ಹಲವಾರು ಶಾಸನಗಳು ಆರುವಾರದ ಬಗ್ಗೆ ತಿಳಿಸಿದರೂ, ಒಂದು ಮೂಡೆ ಭೂಮಿಯ ಮೇಲೆ ಸಾಮಾನ್ಯವಾಗಿ ಎಷ್ಟು ಹಣವನ್ನು ಸಾಲವಾಗಿ ನೀಡುತ್ತಿದ್ದರು ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಅಂದರೆ ಸಾಲದ ಮೊತ್ತವನ್ನು ನಿಗದಿಪಡಿಸುವಲ್ಲಿ, ಹಲವಾರು ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಿದ್ದರು. ಭೂಮಿಯ ಫಲವತ್ತತೆ, ನೀರಿನ ಸೌಕರ್ಯ, ಭೂಮಿಯಲ್ಲಿ ಒತ್ತೆ ಇಟ್ಟುಕೊಂಡವನಿಗೆ ಇರುವ ಆಸಕ್ತಿ ಹಾಗೂ ಇತರ ವಿಷಯಗಳು ಹೆಚ್ಚಾಗಿ ಸಾಲದ ಮೊತ್ತ ನಿಗದಿಪಡಿಸುವಲ್ಲಿ ಗಮನಕ್ಕೆ ತೆಗೆದುಕೊಳ್ಳುವ ವಿಷಯಗಳು. ಅಂತೆಯೇ ಎಲ್ಲಾ ವರ್ಗದ ಭೂಮಿಯನ್ನು ಸಾಲಕ್ಕೆ ಒಳಪಡಿಸುತ್ತಿದ್ದರು. ತೋಟವನ್ನು ಕೂಡ ಆರುವಾರಕ್ಕೊಳಪಡಿಸುತ್ತಿದ್ದರು.[7]

ನಮಗೆ ಲಭ್ಯವಿರುವ ಆಧಾರಗಳು ಈ ರೀತಿಯ ಅಡವು ಮಾಡುವಾಗ ತಯಾರಿಸುವ ಕಾಗದ ಪತ್ರಗಳ ಬಗ್ಗೆಯೂ ಹೇಳುತ್ತವೆ. ಹೀಗೆ ತಯಾರಿಸುವ ಕಾಗದ ಪತ್ರಕ್ಕೆ 'ಆರುವಾರಪತ್ರ' ಎಂದು ಹೆಸರು.[8] ಆರುವಾರಕ್ಕೆ ಸಂಬಂಧಿಸಿದ ಎಲ್ಲಾ ನಿಯಮಗಳನ್ನು ಅಲ್ಲಿ ವಿವರವಾಗಿ ನಮೂದಿಸುವ ಕ್ರಮವಿತ್ತು. ಒಂದು ಶಾಸನ ಆರುವಾರ ಮಾಡುವುದಕ್ಕೆ ಸಂಬಂಧಿಸಿದ ಕಾರಣವನ್ನು ಹಾಗೂ ಇತರ ವಿಷಯಗಳನ್ನು ತಿಳಿಸುತ್ತದೆ.[9] ಆರುವಾರ ವ್ಯವಹಾರದಲ್ಲಿ ವ್ಯಕ್ತಿಗಳು ಮಾತ್ರವಲ್ಲ, ಸಂಸ್ಥೆಗಳು ಸಹ ಪಾಲುಗೊಳ್ಳುತ್ತಿದ್ದವು ಹಾಗೂ ಹಣವನ್ನು ಸಾಲವಾಗಿ ನೀಡುತ್ತಿದ್ದವು.[10]

ಆರುವಾರದಲ್ಲಿ ಹಲವು ವಿಧಗಳಿವೆ. ಅವು ಯಾವುವೆಂದರೆ ಅರ್ಧಾರುವಾರ,[11] ಅಂತರಾರುವಾರ[12] ಮತ್ತು ಬಿಡಾರುವಾರ.[13] ಹೆಸರೇ ಸೂಚಿಸುವಂತೆ ಅರ್ಧಾರುವಾರು ಎಂದರೆ ಅರ್ಧ ಆರುವಾರ. ಆದರೆ ಈಗ ನಮಗೆ ಲಭ್ಯವಿರುವ ಆಧಾರಗಳ ಸಹಾಯದಿಂದ, ಅರ್ಧಾರುವಾರಕ್ಕೆ ಸಂಬಂಧಿಸಿದ ರೀತಿ, ನಿಯಮಗಳನ್ನು ವಿವರವಾಗಿ ಹೇಳುವುದು ಕಷ್ಟ. ಅದನ್ನು ನಾವು ಹೇಗೆ ವಿವರಿಸಬಹುದೆಂದರೆ, ಭೂಮಿಯ ಭದ್ರತೆಯ ಮೇಲೆ ಆರುವಾರವಾಗಿ ಸಾಲತೆಗೆದುಕೊಂಡವ, ಆರುವಾರ ಮಾಡಿದ ಎಲ್ಲಾ ಭೂಮಿಯನ್ನು ಪರಭಾರೆ ಮಾಡದೆ ಅದರಲ್ಲಿ ಒಂದು ಭಾಗವನ್ನು ಮಾತ್ರ ತೆಗೆದುಕೊಂಡ ಹಣದ ಬಡ್ಡಿಗಾಗಿ ಪರಭಾರೆ ಮಾಡಿದರೆ ಹಾಗೂ ಉಳಿದ ಭಾಗ ಭದ್ರತೆ ಆಗಿದ್ದರೆ ಅದು ಅರ್ಧಾರುವಾರ ಎನಿಸಿಕೊಳ್ಳುವುದು.

ಅಂತರಾರುವಾರ ಎಂದರೆ "ಆರುವಾರ ಪದ್ಧತಿಯಂತೆ ಸಾಲ ತೆಗೆದುಕೊಂಡ ನಂತರ, ಇನ್ನೂ ಹೆಚ್ಚಿನ ಹಣ ಬೇಕಿದ್ದಲ್ಲಿ ಆಗ ಅಂತರಾರುವಾರ ಪದ್ಧತಿಯಂತೆ ಹಣ ತೆಗೆದುಕೊಳ್ಳಬಹುದು."[14] ಶಾಸನಗಳನ್ನು ಕೂಲಂಕಷವಾಗಿ ಪರಿಶೀಲಿಸಿದಲ್ಲಿ ಅಂತರಾರುವಾರವೆಂದಲ್ಲಿ ದ್ವಿತೀಯಬಾರಿಗೆ ಆರುವಾರಕ್ಕೊಳಪಡಿಸುವುದಲ್ಲ, ಬದಲಾಗಿ ಭೂಮಿಯನ್ನು ಅನುಭವಿಸುವ ಹಕ್ಕನ್ನು ಇನ್ನೊಬ್ಬನಿಗೆ ಹಸ್ತಾಂತರಿಸುವುದು (ಅಂದರೆ ಯಾವನು ಹಣವನ್ನು ನೀಡುತ್ತಾನೋ ಅವನಿಗೆ) ಎಂಬ ವಿಷಯ ಸ್ಪಷ್ಟವಾಗುವುದು. ಇಲ್ಲಿ ಮೂಲ ಹಕ್ಕುಮೂಲ ಅನುಭವದಾರನ ಹತ್ತಿರ ಇರುತ್ತದೆ.[15]

ಆರುವಾರದಲ್ಲಿ ಇನ್ನೊಂದು ವಿಧ ಬಿಡಾರುವಾರ. ಇದುವರೆಗಿನ ಅಭಿಪ್ರಾಯ ಎಂದರೆ 'ಬಿಡು' ಬೀಳು ಭೂಮಿ ಅಥವಾ ಬೇಸಾಯ ಮಾಡದೆ ಬಿಟ್ಟಿರುವ ಭೂಮಿ ಎಂದರ್ಥ. ಬಿಡಾರುವಾರವೆಂದರೆ ಬೇಸಾಯಯೋಗ್ಯವಾದ, ಆದರೆ ಬೇಸಾಯ ಮಾಡದೆ ಆರುವಾರವಾಗಿ ಬಿಟ್ಟ ಭೂಮಿಯ ಮೇಲೆ ವಿಧಿಸುವ ತೆರಿಗೆ.[16] ಆದರೆ ಅದು ಒಪ್ಪತಕ್ಕ ವಾದವಲ್ಲ. ಅದು ಬೇಸಾಯ ಮಾಡದ ಭೂಮಿಯ ಮೇಲೆ ವಿಧಿಸುವ ತೆರಿಗೆ ಅಲ್ಲ. ಶಾಸನಗಳಲ್ಲಿ ಕಂಡುಬರುವ "ಬಿಡಾರುವಾರವಾಗಿ ಬಿಟ್ಟು ಕಡಂಗೊಂಡ"[17] ಮತ್ತು "ಯಿ ಬಾಳ ಬಿಡಾರುವಾರವಾಗಿ ಬಿಟ್ಟು ಕಡಂಗೊಂಡದು ದೊಡ್ಡ ವರಹ 28"[18]

ಮುಂತಾದ ವಿವರಗಳು ಬಿಡಾರುವಾರವೆಂದರೆ ಒಂದು ಅಡವು ಕ್ರಮ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತವೆ. ಇಲ್ಲಿ ನಾವು ಗಮನಿಸಬೇಕಾದ ಅಂಶ ಏನೆಂದರೆ, ಬಿಡಾರುವಾರದಲ್ಲಿ ಹಣವನ್ನು ಸಾಲವಾಗಿ ನೀಡಿ ಭೂಮಿಯನ್ನು ವಶಕ್ಕೆ ತೆಗೆದುಕೊಂಡ ವ್ಯಕ್ತಿ ಸ್ವಲ್ಪ ಸಮಯದ ನಂತರ ಭೂಮಿಯನ್ನು ಹಿಂದಕ್ಕೆ ಕೊಡಬೇಕು. ಭೂಮಿಯ ಮೂಲ ವಾರಸುದಾರ, ತಾನು ತೆಗೆದುಕೊಂಡ ಹಣಕ್ಕಿಂತ ಮೂರು ಪಾಲು ನೀಡಿ ಭೂಮಿಯನ್ನು ವಾಪಾಸು ಪಡೆಯುವ ಅವಕಾಶ ಬಿಡಾರುವಾರದಲ್ಲಿ ಇದೆ. ಅಂದರೆ ಬಿಡಾರುವಾರದಲ್ಲಿಯೂ ಭೂಮಿ ಪರಭಾರೆ ಮಾಡಬೇಕಾಗುತ್ತದೆ.[19] ಅಲ್ಲದೆ ಭೂಮಿಯೊಂದಿಗೆ ಅದಕ್ಕೆ ಸಂಬಂಧಿಸಿದ ಎಲ್ಲಾ ಸೌಕರ್ಯಗಳನ್ನು ಸಹ ಪರಬಾರೆ ಮಾಡುವ ಕ್ರಮವಿತ್ತು.[20] ಬಿಡಾರುವಾರವನ್ನು ಸಹ ಉತ್ತಮ ನೀತಿಯಲ್ಲಿ ದಾಖಲೆ ಮಾಡಿದ ಬಗ್ಗೆ ಹಾಗೂ ಬಿಡಾರುವಾರ ಪತ್ರವನ್ನು ವ್ಯವಸ್ಥೆ ಮಾಡುವ ಬಗ್ಗೆ ನಮಗೆ ಆಧಾರಗಳು ಸಿಗುತ್ತವೆ.[21]

ಇಲ್ಲಿ ಹೆಚ್ಚು ಗಮನಿಸಬೇಕಾದ ಅಂಶವೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದಲ್ಲಿ ಆರುವಾರಕೆ ಸಿಕ್ಕಿದಷ್ಟು ಉಲ್ಲೇಖಗಳು, ಜಿಲ್ಲೆಯ ದಕ್ಷಿಣ ಭಾಗದಲ್ಲಿ ಸಿಗುವುದಿಲ್ಲ. ಮೂಡಬಿದರೆಯ ಶಾಸನಗಳಲ್ಲಿ ಆರುವಾರ ಹಾಗೂ ಅದರ ವಿವಿಧ ವಿಧಗಳ ಬಗ್ಗೆ ಅನೇಕ ಉದಾಹರಣೆಗಳು ಸಿಗುತ್ತವೆ.[22] ಮೂಡಬಿದರೆ ಪ್ರದೇಶದ ಹೆಚ್ಚಿನ ಶಾಸನಗಳು ಹಣ ಸಾಲ ಪಡೆಯಲು ಕಾರಣವನ್ನು ತಿಳಿಸುತ್ತಾ ಮದುವೆಗಾಗಿ ಹಣ ಸಾಲ ಪಡೆದುಕೊಂಡ ವಿಷಯವನ್ನು ತಿಳಿಸುತ್ತವೆ.[23]

ಆರುವಾರ ಅಡವು ಪದ್ಧತಿ ಭೂಪರಭಾರೆಗೆ ಒಂದು ಕಾರಣವಾಗಿತ್ತು. ಅದೇ ರೀತಿಯಲ್ಲಿ ತಾತ್ಕಾಲಿಕ ಭೂ ಒಡೆತನವು ಭೂ ಉತ್ಪತ್ತಿಯ ಮೇಲೆ ಪ್ರಭಾವ ಬೀರಿತು. ಅಂದರೆ ಸ್ವಲ್ಪ ಸಮಯದಮಟ್ಟಿಗೆ ಭೂಮಿಯ ಒಡೆತನವನ್ನು ಪಡೆದ ವ್ಯಕ್ತಿಗಳು ಅದರ ಅಭಿವೃದ್ಧಿಯಲ್ಲಿ ಯಾವ ಆಸಕ್ತಿಯನ್ನೂ ತೋರಿಸುವ ಸಾಧ್ಯತೆ ಇರಲಿಲ್ಲ. ಇನ್ನೊಂದು ವಿಷಯವೆಂದರೆ ತುಂಬಾ ಹಣವಿದ್ದವರು ದೊಡ್ಡ ದೊಡ್ಡ ಭೂಮಾಲಿಕರಾಗುವುದು ಇದರಿಂದ ಸಾಧ್ಯವಾಯಿತು. ಇದು ಸಮಾಜದಲ್ಲಿ ಅವರ ಸ್ಥಾನಮಾನವನ್ನು ಹೆಚ್ಚಿಸಿತು. ಈ ಒಂದು ಅಡವು ಪದ್ಧತಿ ಪ್ರಚಲಿತವಿದ್ದುದರಿಂದ ಜನರಿಗೆ ಕುಟುಂಬದ ಅನೇಕ ಸಮಾರಂಭಗಳಿಗೆ ಹಣವನ್ನು ಪಡೆಯುವುದು ಸಾಧ್ಯವಾಯಿತು. ಒಟ್ಟಿನಲ್ಲಿ ಆರುವಾರ ಪದ್ಧತಿ ಸಮಾಜದಲ್ಲಿ ಜನರ ಸ್ಥಾನಮಾನ ಭೂ ಉತ್ಪತ್ತಿ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿತ್ತು.

ಅಡಿ ಟಿಪ್ಪಣಿಗಳು

1. Kittil: *Kannada English Dictionary Revised and Enlarged Edition,* Vol. I, Madras, 1968, p. 168.
2. Rao Narasinga Ullal, *A Kissamwar Glossary of Kannada Words,* Delhi, 1985, p. 49.
3. Sturroek J., *Madras District Mannuals South Kanara,* Vol. I, Madras, 1894, p. 130.
4. Ramesh K.V., *A History of South Kanara,* Dharwar, 1970, p. 279
5. *SII,* Vol. IX, Pt. II, No. 517.
6. *Ibid.*
7. *Ibid.*
8. *Ibid,* No. 446
9. *Ibid,* No. 460
10. Mudabidre Copper Plate Inscription (In the possession of Swamiji of Jaina Mutt, Mudabidre).
11. *SII,* Vol. IX, Pt. II, Nos. 470-471.

12. *Ibid,* No. 512.
13. *Ibid.*
14. Bhat Gururaja P., *Studies in Tuluva History and Culture,* Kallianpur, 1975, p. 203.
15. *SII,* Vol. IX, Pt. II, No. 525.
16. Ramesh K.V., *AHOSK,* Dharwar, 1970, p. 279.
17. *SII,* Vol. VII, No. 368.
18. *Ibid.*, Vol. IX, Pt. II, No. 517.
19. *SII.*, Vol. VII, No. 390
20. *Ibid.*, No. 355.
21. *SII,* Vol. IX, pt. II, No. 655.
22. Mudabidre Copper Plate Inscription, No. 7, dated 1389 A.D. (In the possession of Swamiji of Jaina Mutt, Mudabidre).
23. (i) Mudabidre Inscription No. 3.
    (ii) Copper Plate Inscriptions of Lalitha Devi, *Karnataka Bharati Samputa* 17, Sanchike 3, January 1985.

19

ವಿಜಯನಗರ ಕಾಲದ ಸಂತೆಗಳು : ಒಂದು ಅಧ್ಯಯನ

ಡಾ॥ ಎಂ.ಬಿ. ಪಾಟೀಲ

ಸಂತೆ ಅಥವಾ ಬಜಾರ್ ಎಂಬ ವಾಣಿಜ್ಯ ಪಾರಿಭಾಷಿಕ ಪದದ ಪರಿಕಲ್ಪನೆ, ಅರ್ಥವ್ಯಾಪ್ತಿ ಮತ್ತು ಉಪಯುಕ್ತತೆ ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿರುವುದನ್ನು ಇತಿಹಾಸದ ಉದ್ದಕ್ಕೂ ಗಮನಿಸಬಹುದು. ವಾಣಿಜ್ಯ ಚಟುವಟಿಕೆಗಳ ವಿಕಾಸದ ವಿವಿಧ ಹಂತಗಳನ್ನು ಗುರುತಿಸುವಲ್ಲಿ ಸಂತೆಯನ್ನು ಪ್ರಾರಂಭದ ಮತ್ತು ಮೂಲಹಂತವೆಂದು ಗುರುತಿಸಬಹುದು. ವಾಣಿಜ್ಯ ಎಂಬ ಪದದ ಅರ್ಥ, ವ್ಯಾಪ್ತಿ ಬಹು ವ್ಯಾಪಕವಾಗಿದ್ದು ಅದು ಹತ್ತು ಹಲವಾರು ಆರ್ಥಿಕ ಚಟುವಟಿಕೆಗಳನ್ನು ಒಳಗೊಂಡಿರುವುದು. ಆ ಚಟುವಟಿಕೆಗಳ ಒಂದು ಭಾಗವೇ ಸಂತೆ.

ಪ್ರಾಚೀನ ಮತ್ತು ಮಧ್ಯಕಾಲೀನ ಆರ್ಥಿಕ ಇತಿಹಾಸದ ಅವಲೋಕನದಿಂದ ಸಂತೆಗಳು ತಮ್ಮದೇ ಆದ ಆರ್ಥಿಕ, ವಾಣಿಜ್ಯಕ, ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಸಂತೆಯು, ಮೂಲತಃ ಒಂದು ಸಮಷ್ಟಿಯ ಕೊಳ್ಳುವ ಮತ್ತು ಮಾರುವ ಆರ್ಥಿಕ ಚಟುವಟಿಕೆ. ಸಂತೆಗೆ ಒಂದು ಸೀಮಿತ ಅರ್ಥವ್ಯಾಪ್ತಿ ಮತ್ತು ಭೌಗೋಳಿಕ ವ್ಯಾಪ್ತಿ ಇದ್ದು ಈ ಲೇಖನದಲ್ಲಿ ಆಧುನಿಕ ವಾಣಿಜ್ಯದ ಆರ್ಥವ್ಯಾಪ್ತಿಯಲ್ಲಿ ಆ ಕಾಲದ ಸಂತೆಯ ಚಟುವಟಿಕೆಗಳನ್ನು ವಿಶ್ಲೇಷಿಸಲಾಗಿದೆ.

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರದ ಇತಿಹಾಸ (1336–1759) ಅತ್ಯಂತ ಮಹತ್ವದ ಅಧ್ಯಾಯ. ದಿವ್ಯ ಪರಂಪರೆಯ ಕಾಲ. ಸುಮಾರು 400 ವರ್ಷಗಳ ಆಳ್ವಿಕೆಯ ನಾಲ್ಕು ಅರಸು ಮನೆತನಗಳನ್ನು ಒಳಗೊಂಡ ಈ ವಿಜಯನಗರ ಸಾಮ್ರಾಜ್ಯದ ಇತಿಹಾಸಕ್ಕೆ ಸಂಬಂಧಪಟ್ಟಂತೆ ಸುಮಾರು ಆರು ಸಾವಿರ ಶಾಸನಗಳು ದಕ್ಷಿಣ ಭಾರತದಲ್ಲಿ ಲಭ್ಯ ಇದ್ದು ಅವುಗಳಲ್ಲಿ ಸುಮಾರು 2500 ಶಾಸನಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ದೊರೆತ ಬಗ್ಗೆ ಇತ್ತೀಚಿನ ವರದಿಗಳಿಂದ ತಿಳಿದುಬರುವುದು. ಈ ಶಾಸನಗಳ ಪೈಕಿ ಸುಮಾರು 200–250 ಕನ್ನಡ ನಾಡಿನ ಶಾಸನಗಳಿಂದ ಆ ಕಾಲದ ಸಂತೆ, ಅವುಗಳ ರಚನೆ, ಅವು ಒಳಗೊಂಡ ವಿವಿಧ ವರ್ತಕ ಸಮುದಾಯ, ವರ್ತಕರ ಸಾಮಾಜಿಕ, ರಾಜಕೀಯ ವರ್ಚಸ್ಸು, ಸುಂಕ ಪದ್ಧತಿ, ಸಂತೆಯ ವ್ಯವಸ್ಥೆಗೆ ಪೂರಕವಾದಂತಹ ಇತರ ಅಂಶಗಳು ಅಂದರೆ ಹಣಕಾಸು, ಸಂಚಾರ ಸೌಲಭ್ಯ, ತೂಕ ಮತ್ತು ಅಳತೆ, ಆಮದು–ರಫ್ತು, ವರ್ತಕರ ನೀತಿಸಂಹಿತೆ, ವರ್ತಕರ ಸಂಘ ರಚನೆ, ವಿದೇಶ ವ್ಯಾಪಾರ ನೀತಿ ಮುಂತಾದ ಹತ್ತು ಹಲವಾರು ವಿಷಯ ತಿಳಿದುಬರುವುದು, ಬಹುಪಾಲು ಶಾಸನಗಳು ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಕಂಡುಬರುವುವು. ವಿಜಯನಗರ ಇತಿಹಾಸಕ್ಕೆ ಸಂಬಂಧಪಟ್ಟಂತೆ ಕೇವಲ ಶಾಸನಗಳಲ್ಲದೇ ಅನೇಕ ವಿದೇಶಿ ಪ್ರವಾಸಿಗರ ವರದಿಗಳು, ಸಮಕಾಲೀನ ವಿವಿಧ ಸಾಹಿತ್ಯ (ಗ್ರಂಥಗಳು, ಕಾವ್ಯಗಳು, ಜಾನಪದ ಸಾಹಿತ್ಯ ಮುಂತಾದವು) ಈ ಅಧ್ಯಯನಕ್ಕೆ ಸಹಕಾರಿಯಾಗಿವೆ.

ಮುಂದುವರೆದ ಹಳೆಯ ವ್ಯವಸ್ಥೆ ವಿವಿಧ ವರ್ತಕ ಸಮುದಾಯ

ಸಂತೆ ವ್ಯಾಪಾರ ಒಂದು ನಿರಂತರ ಪ್ರಕ್ರಿಯೆ. ವಿಜಯನಗರದ ಕಾಲದಲ್ಲಿ ಹೊಯ್ಸಳರ ಕಾಲದ ಮತ್ತು ಅದರ ಹಿಂದಿನ ಪಾರಂಪರಿಕ ಸಂತೆಯ ವ್ಯವಸ್ಥೆ ಬಹುಪಾಲು ಮುಂದುವರೆಯಿತು. ಆದರೆ ಅದು ಅನೇಕ ಬದಲಾವಣೆಗಳಿಂದ ಕೂಡಿತ್ತು. ಪ್ರಾಚೀನ ಮತ್ತು ಮಧ್ಯಕಾಲೀನ ವರ್ತಕರ ಸಮುದಾಯವನ್ನು ಅವರು ನಿರ್ವಹಿಸುತ್ತಿದ್ದ ಕಾರ್ಯವೈಖರಿ, ಕಾರ್ಯವ್ಯಾಪ್ತಿ, ಅವರು ಹೊಂದಿದ್ದ ಸಾಮಾಜಿಕ ಮತ್ತು ರಾಜಕೀಯ ಘನತೆ ಗೌರವ ಇವುಗಳಿಂದ ಗವರೆ, ಹರದ, ಬಣಜಿಗ, ಬೇಹಾರಿ, ಶೆಟ್ಟಿ, ವೇಲಕಾರ (ಬಂದರು ಪ್ರದೇಶಗಳ ವರ್ತಕರು), ನಾನಾದೇಶಿ, ಉಭಯ ನಾನಾದೇಶಿ, ವಡ್ಡವ್ಯವಹಾರಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ವರ್ತಕರು ನಗರ ಪ್ರದೇಶಗಳಲ್ಲಿ ವಿಶೇಷವಾಗಿ ನೆಲೆಸಿದ್ದರು. ಇವರಲ್ಲಿ ಎಲ್ಲ ಮತದವರು ಇದ್ದರೂ, ಅವರಲ್ಲಿ ಜೈನರು ಹೆಚ್ಚಾಗಿದ್ದರು. ಈ ವ್ಯವಸ್ಥೆ ವಿಜಯನಗರ ಕಾಲದಲ್ಲಿಯೂ ಮುಂದುವರೆಯಿತು. ವಡ್ಡವ್ಯವಹಾರಿಗಳನ್ನು ಹಿರಿಯರು, ವೃದ್ಧರು, ದೊಡ್ಡವರೆಂದು ಗೌರವಿಸಲಾಗುತ್ತಿತ್ತು. ಇವರಲ್ಲಿ ಹಲವರು ರಾಜಪೂಜಿತರು, ರಾಜಾನುಗ್ರಹಯುಕ್ತರು ಆಗಿರುತ್ತಿದ್ದರು. ಕಲ್ಯಾಣ ಚಾಳುಕ್ಯರ ಕಾಲದಲ್ಲಿ ವಿರಳವಾಗಿದ್ದ ಈ ವರ್ತಕರ ಸಂಖ್ಯೆ ಹೊಯ್ಸಳ ಮತ್ತು ನಂತರದ ವಿಜಯನಗರ ಅರಸರ ಕಾಲದಲ್ಲಿ ಹೆಚ್ಚಾಯಿತು. ಇವರಲ್ಲಿ ಶೈವರು, ಜೈನರು ಇದ್ದರು (1427ರ ವರೆಗಿನ ಶಾಸನಗಳಲ್ಲಿ ಈ ಬಗೆಯ ಉಲ್ಲೇಖ ದೊರೆಯುವುದು). ವ್ಯಾಪಾರಿಗಳು ತಮ್ಮದೇ ಆದ ಸಂಘಗಳನ್ನು ಮಾಡಿಕೊಂಡಿದ್ದರು. ಅರಮನೆಗೆ ಮತ್ತು ಗುರುಮನೆಗೆ ತೀರ ಹತ್ತಿರದವರಾಗಿದ್ದರು. ವ್ಯಾಪಾರದೊಂದಿಗೆ ಲೇವಾದೇವಿ ವ್ಯವಹಾರ ನಡೆಸುತ್ತಿದ್ದರು. ಅನೇಕರು ಸ್ಥಳೀಯ ಆಡಳಿತದ ಮುಖ್ಯಸ್ಥರೂ ಆಗಿದ್ದು ಪಟ್ಟಣದ ಶೆಟ್ಟಿಯರೂ ಸಹ ಆಗಿದ್ದರು. ವಿಶೇಷವಾದ ಸವಲತ್ತುಗಳನ್ನು ಅನುಭವಿಸುತ್ತಿದ್ದರು. ವಿಜಯನಗರ ಕಾಲದಲ್ಲಿ ಕರ್ನಾಟಕದ ಒಳನಾಡಿನ ಮತ್ತು ಹೊರನಾಡಿನ ವ್ಯಾಪಾರ ಉನ್ನತ ಮಟ್ಟದಲ್ಲಿ ಇತ್ತು. ಪೋರ್ತುಗೀಜರು, ಡಚ್ಚರು, ಇಂಗ್ಲೀಷರು, ಹೊರನಾಡಿನ ವ್ಯಾಪಾರದಲ್ಲಿ ಆಸಕ್ತರಾಗಿದ್ದರು.

ಸಾಲುಮೂಲೆ ಬಣಜಿಗರು

ವರ್ತಕರ ಸಮುದಾಯಗಳಲ್ಲಿ ವಿಜಯನಗರದ ಶಾಸನಗಳು ಪ್ರಮುಖವಾಗಿ ಸಾಲುಮೂಲೆ ಬಣಜಿಗರನ್ನು ಉಲ್ಲೇಖಿಸುತ್ತವೆ. ಸಾಲುಮೂಲೆ ಎಂಬ ಪದವು ಬಹುಶಃ ಅಂದಿನ ಬಣಜಿಗ ಸಮುದಾಯದಲ್ಲಿನ ಬಹು ಪ್ರಧಾನವಾಗಿದ್ದ ಉಪಜಾತಿ ಒಂದನ್ನು ಸೂಚಿಸುತ್ತಿರಬಹುದು? ಎರಡನೆ ಹರಿಹರನ ಬೇಲೂರಿನ ಶಾಸನವು ಇವರು ಮೂಲ ಭದ್ರೇಶ್ವರನ ಸಂತತಿಯವರಾದುದರಿಂದ ಸಾಲುಮೂಲೆ ಎಂಬ ವಿಶೇಷಣ ಬಂದಿರಬಹುದು? ಎರಡನೇ ಹರಿಹರನ ಬೇಲೂರಿನ ಶಾಸನವು ಸಾಲುಮೂಲೆ ಬಣಜಿಗ ವರ್ತಕರ ದೊಡ್ಡ ಸಭೆಯು 1382ರಲ್ಲಿ (ಹಾಸನ ಜಿಲ್ಲೆಯ ಬೇಲೂರು ಶಾಸನ) ನಡೆದುದನ್ನು ವಿವರಿಸುತ್ತದೆ. ವಿಜಯನಗರ ಕಾಲದಲ್ಲಿ ಈ ವರ್ತಕರು ಉತ್ತಮ ರೀತಿಯಲ್ಲಿ ಸಂಘಟಿತರಾಗಿದ್ದರು ಎಂದು ಶಾಸನಗಳಿಂದ ತಿಳಿಯಬರುವುದು. ವೀರ ಬಣಜಿಗರು 11 ಮತ್ತು 12ನೇ ಶತಮಾನಗಳಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಪ್ರಧಾನವಾಗಿದ್ದರು. ಈ ಸಾಲುಮೂಲೆ ಬಣಜಿಗರು ವಿಶೇಷವಾಗಿ ಕೃಷಿ ಉತ್ಪನ್ನಗಳ ವಹಿವಾಟನ್ನು ಮುಖ್ಯವಾಗಿ ನಿರ್ವಹಿಸುತ್ತಿದ್ದರು. ಇವರು ವಿಜಯನಗರದಲ್ಲಿ ಸುಮಾರು 26 ನಗರಗಳಲ್ಲಿ ಸಂತೆಗಳನ್ನು ಸ್ಥಾಪಿಸಿದ್ದರು. ಅವುಗಳೆಂದರೆ: ವಿಜಯನಗರ, ಹಸ್ತಿನಾವತಿ, ದೋರಸಮುದ್ರ, ಗುತ್ತಿ, ಪೆನುಕೊಂಡ, ಆದವಾನಿ, ಉದಯಗಿರಿ, ಚಂದ್ರಗಿರಿ, ಮುಳಬಾಗಿಲು, ಕಂಚಿ, ಪಡೆವೀಡು, ಚದುರಂಗಪಟ್ಟಣ, ಮಂಗಳೂರು, ಬಾರಕೂರು, ಹೊನ್ನಾವರ, ಚಂದಾವರ, ಚಂದ್ರಗುತ್ತಿ, ಅಣ್ಣಿಗೇರಿ, ಹುಲಿಗೆರೆ, ನಿಡುಗಲ್ಲು, ಚಿಮತನಕಲ್ಲು, ತರಿಯಕಲ್ಲು, ಆನೇಬಿದ್ದಸರಿ, ಕಲ್ಲೆಯ, ತೆರಕಣಾಂಬಿ ಮತ್ತು ಸಿಂಗಪಟ್ಟಣ. ಸಾಲುಮೂಲೆ ಬಣಜಿಗರು ತಮಿಳುನಾಡು ಮತ್ತು ಆಂಧ್ರಗಳೊಂದಿಗೂ ಸಂಪರ್ಕ ಇಟ್ಟಿಕೊಂಡಿದ್ದರು. ಈ ಇಪ್ಪತ್ತಾರು ನಗರ ಸಂತೆಗಳಲ್ಲಿ ಪ್ರಮುಖ ಕೃಷಿ ಉತ್ಪನ್ನಗಳಾದ ಭತ್ತ, ಜೋಳ, ರಾಗಿ, ಬಾರ್ಲಿ, ಬರಗು, ಸಾವೆ, ಗೋದಿ, ಕಡಲೆ, ಎಳ್ಳು, ಅಗಸೆ, ಕುಸುಬೆ, ಹೆಸರು, ಉದ್ದು, ತೊಗರಿ, ಅಕ್ಕಿ, ಸಕ್ಕರೆ, ಎಣ್ಣೆ, ತುಪ್ಪ, ಉಪ್ಪು, ಬೆಲ್ಲ, ಅಡಿಕೆ,

ವಿಳ್ಳೆದೆಲೆ, ಮೆಣಸು, ಅರಿಷಿಣ, ಈರುಳ್ಳಿ, ಜೀರಿಗೆ, ಸಾಸಿವೆ, ಕಬ್ಬು ಮುಂತಾದವು ಭಾರಿ ಪ್ರಮಾಣದಲ್ಲಿ ವಿನಿಮಯವಾಗುತ್ತಿದ್ದವು. ಕೃಷಿ ಉತ್ಪನ್ನಗಳ ವಿದೇಶ ವ್ಯಾಪಾರಕ್ಕೆ ಬಟ್ಕಳ, ಮಂಗಳೂರು, ಹೊನ್ನಾವರ ಬಂದರುಗಳಿಂದ ರಫ್ತಾಗುತ್ತಿದ್ದ ಅತ್ಯಂತ ಪ್ರಮುಖವಾದ ವಸ್ತು ಮೆಣಸು. ಅದಕ್ಕೆ ದೇಶದಲ್ಲಿ ಮತ್ತು ವಿದೇಶದಲ್ಲಿ ಬೇಡಿಕೆ ಇತ್ತು.

ರಾಜಕೀಯ ಸ್ಥಿರತೆಗೂ ಮತ್ತು ವ್ಯಾಪಾರ ಅಭಿವೃದ್ಧಿಗೆ ನೇರವಾದ ನಂಟು ಉಂಟು. ಒಂದನೇ ಬುಕ್ಕನ ಕಾಲದಲ್ಲಿ, ಇಮ್ಮಡಿ ದೇವರಾಯನ ಕಾಲದಲ್ಲಿ (1424-1446) ಸಾಮ್ರಾಜ್ಯದಲ್ಲಿ ರಾಜಕೀಯ ಸ್ಥಿರತೆ ಇತ್ತು. ನಾನಾದೇಶದ ವ್ಯಾಪಾರಸ್ಥರು ತಮ್ಮ ವ್ಯವಹಾರವನ್ನು ಮುಂದುವರೆಸಿದರು. ಅಲ್ಲದೇ ವಿಸ್ತರಿಸಿದರು ಎಂದು ತಿಳಿಯಬಹುದು.

ಪ್ರಮುಖ ವ್ಯಾಪಾರಿ ಕೇಂದ್ರಗಳು

ಸುಮಾರು 1380ರಲ್ಲಿ ಅಂದರೆ ಎರಡನೆಯ ಹರಿಹರನ ಕಾಲದಲ್ಲಿ ವಿಜಯನಗರವಲ್ಲದೇ ದ್ವಾರಸಮುದ್ರ, ಪೆನುಗೊಂಡ, ಉದಯಗಿರಿ ಮತ್ತು ಬಂಕಾಪುರ ಪ್ರಮುಖ ವ್ಯಾಪಾರಿ ಪಟ್ಟಣಗಳಾಗಿದ್ದವು. ಕಂಚಿಯು ವಿಜಯನಗರ ಸಾಮ್ರಾಜ್ಯದಲ್ಲಿ ಬಹು ಪ್ರಮುಖವಾದ ವ್ಯಾಪಾರ ಕೇಂದ್ರವಾಗಿತ್ತು. ಇವುಗಳಲ್ಲದೇ ಐಹೊಳೆ, ಬಾದಾಮಿ, ಕೊಪ್ಪಳ, ಬಸವಕಲ್ಯಾಣ, ರಾಯಭಾಗ, ಬಳ್ಳಿಗಾವಿ, ಬನವಾಸಿ, ಕೋಲಾರ, ತಲಕಾಡು, ಬೆಂಗಳೂರು, ಅರಸೀಕೆರೆ, ಬಾಣಾವರ, ಲಕ್ಕುಂಡಿ ಮತ್ತು ಮಣ್ಣೆ ಇವು ಪ್ರಮುಖ ಒಳನಾಡು ವ್ಯಾಪಾರಕೇಂದ್ರಗಳಾಗಿದ್ದವು.

ರಾಜಧಾನಿಯಲ್ಲಿನ ಸಂತೆ

ರಾಜಧಾನಿ ಹಂಪೆಯ ವಿವಿಧ ಚಟುವಟಿಕೆಗಳನ್ನು ಕೂಲಂಕಷವಾಗಿ ವರ್ಣಿಸಿದ ವಿದೇಶಿ ಪ್ರವಾಸಿಗರಿಂದ ಕೇವಲ ಸಂತೆಯು ಮಾತ್ರ ತಪ್ಪಿಸಿಕೊಳ್ಳಲು ಹೇಗೆ ಸಾದ್ಯ? ವಿಜಯನಗರ ಸಾಮ್ರಾಜ್ಯವನ್ನು ಮತ್ತು ಅದರ ಪ್ರಕೃತಿ ಸಂಪತ್ತನ್ನು ಮುಕ್ತಕಂಠದಿಂದ ಕೊಂಡಾಡಿರುವ ವಿದೇಶಿ ಪ್ರವಾಸಿಗರು ಅಲ್ಲಿನ ಮಾರುಕಟ್ಟೆಗಳಲ್ಲಿ ರಾಶಿಗಟ್ಟಲೆ ಮಾರುತ್ತಿದ್ದ ನಿಂಬೆ, ಕಿತ್ತಳೆ, ದ್ರಾಕ್ಷಿ, ದಾಳಿಂಬೆಗಳನ್ನು ಪಾಯಸ್ (1520) ವರ್ಣಿಸಿರುವನು. ಇದೇ ಪ್ರವಾಸಿಯು ಮುಂದುವರೆದು "ಇಲ್ಲಿ ಮಾರಾಟವಾಗುವ ವಸ್ತುಗಳನ್ನು ನೋಡಿ ನನಗೆ ವರ್ಣಿಸಲು ಸಾಧ್ಯವಾಗಲಿಲ್ಲ. ಈ ತರಹ ಹಸು ಎಮ್ಮೆಗಳನ್ನು ಮತ್ತೆಲ್ಲಿಯೂ ಕಾಣುವಂತಿಲ್ಲ, ದೊಡ್ಡ ಬೀದಿಗಳ ಎರಡೂ ಬದಿಗಳಲ್ಲಿ ಮಾರುತ್ತಿದ್ದ ನಾನಾ ವಿಧದ ಪದಾರ್ಥಗಳ ಅಂಗಡಿಗಳನ್ನು ಅಲ್ಲಿಯ ಮಾರಾಟಧ ವೈಖರಿಯನ್ನು ಈ ಪ್ರವಾಸಿಯು ವರ್ಣಿಸುತ್ತ ಎಲ್ಲಿ ಜನರು ಇದನ್ನು ಉತ್ಪ್ರೇಕ್ಷೆ ಎಂದು ಭಾವಿಸುವರೋ ಎಂದು ತಾನೇ ಅನುಮಾನ ಪಡುವನು."

ವಿಜಯನಗರದ ಪೇಟೆಗಳಲ್ಲಿನ ಸುಂದರ ಗುಲಾಬಿ ಹೂವಿನ ವ್ಯಾಪಾರವನ್ನು ಕುರಿತಂತೆ ಅಬ್ದುಲ್ ರಜಾಕ್ (1443 ಏಪ್ರಿಲ್) ಈ ರೀತಿ ವಿವರಣೆ ನೀಡುವನು: "ಗುಲಾಬಿ ವ್ಯಾಪಾರಿಗಳು ತಮ್ಮ ಅಂಗಡಿಗಳ ಮುಂದೆ ಎತ್ತರವಾದ ವೇದಿಕೆಗಳ ಮೇಲೆ ಎರಡೂ ಕಡೆ ಹೂವುಗಳ ರಾಶಿಯನ್ನು ಹಾಕಿಕೊಂಡು ವ್ಯಾಪಾರ ಮಾಡುತ್ತಾರೆ. ಇಲ್ಲಿನ ಜನರು ಗುಲಾಬಿ ಹೂಗಳು ಇಲ್ಲದಿದ್ದರೆ ಬದುಕುವಂತೆಯೇ ಕಾಣುವುದಿಲ್ಲ" ಎಂದು ಅಚ್ಚರಿ ಸೂಚಿಸಿರುವನು. ಅವನೇ ಮುಂದುವರೆದು ನಗರವು ಏಳು ಸುತ್ತಿನ ಕೋಟೆಗಳಿಂದ ಕೂಡಿದ್ದು ಮೂರನೇ ಮತ್ತು ಏಳನೇ ಸುತ್ತುಗಳ ನಡುವೆ ಅಂಗಡಿಗಳು, ಮಾರುಕಟ್ಟೆಗಳು ಒಂದಕ್ಕೊಂದು ಎದುರುಬದುರಾಗಿ ಹೊಂದಿಕೊಂಡು ಇದ್ದವು. ಮಾರುಕಟ್ಟೆಯ ಮುಂಭಾಗ ವಿಶಾಲವಾದ ಗ್ಯಾಲರಿ ಮತ್ತು ಕಮಾನುಗಳಿಂದ ಕೂಡಿರುತ್ತಿತ್ತು ಎಂದು ವಿವರಿಸಿರುವನು." ತಮ್ಮ ವರ್ಣನೆಯನ್ನು ಕೇವಲ ಗುಲಾಬಿ ಹೂವಿನ ಮತ್ತು ಪಾನಸುಪಾರಿ (ಎಲೆ-ಅಡಿಕೆ) ಬಜಾರಿನ ಮಟ್ಟಿಗೆ ಸೀಮಿತಗೊಳಿಸದ ವಿದೇಶ ಪ್ರವಾಸಿಗಳು ಜನಸಾಮಾನ್ಯರ ದಿನನಿತ್ಯದ ಮಾರಾಟ ವಸ್ತುಗಳಾದ ಅಕ್ಕಿ ಮತ್ತು ಗೋದಿಯ ಸಂತೆಯನ್ನು ಕುರಿತು ಸಹ ವರ್ಣಿಸಿರುವರು.

ಪಯಸ್ ಹೇಳುವ ಪ್ರಕಾರ ವಿಜಯನಗರದಲ್ಲಿ ಒಂದು ಲಕ್ಷ ಮನೆಗಳಿದ್ದವು ಅಂದರೆ ವಿಜಯನಗರವು ಒಂದು ದೊಡ್ಡ ವ್ಯಾಪಾರ ಕೇಂದ್ರವಾಗಿತ್ತು ಎಂದು ತಿಳಿಯಬಹುದು. (ಜನಸಂಖ್ಯೆ ಸುಮಾರು 5 ಲಕ್ಷ ಇದ್ದಿರಬಹುದು.)

ವಿರೂಪಾಕ್ಷ ದೇವಾಲಯದ ಎದುರಿಗೆ ಒಂದು ಸಂತೇಪೇಟೆ ಇತ್ತು. ವಿಜಯನಗರದ ಒಂದು ಪೇಟೆಗೆ ಅಚ್ಯುತರಾಯನ ಪೇಟೆ ಎಂದು, ಇನ್ನೊಂದು ಪೇಟೆಗೆ ಕೃಷ್ಣದೇವರಾಯನ ಪೇಟೆ ಎಂದು ಹೆಸರಿತ್ತು. ಇಲ್ಲಿ ಧಾನ್ಯಗಳ ಅಂಗಡಿಗಳು ಇದ್ದವೆಂದು ಶಾಸನಗಳಿಂದ ತಿಳಿಯಬರುವುದು.

ಲೌಕಿಕ ಜೀವನ ಜಂಜಾಟವೆಂಬ ಸಂತೆಯಿಂದ ದೂರವಾದ ದಾಸರನ್ನೂ ವಿಜಯನಗರದ ಪೇಟೆ ಬೀದಿಗಳು, ಸಂತೆಗಳು ತನ್ನೆಡೆಗೆ ಸೆಳೆದಿವೆ. ಕನಕದಾಸರ (16ನೇ ಶತಮಾನ) ಮೋಹನ ತರಂಗಿಣಿಯು ವಿಜಯನಗರದ ಸಂತೆಯನ್ನು ವೈಭವೀಕರಿಸುವುದು. ಐತಿಹಾಸಿಕ ಮತ್ತು ಸಾಹಿತ್ಯಕ ವರ್ಣನೆಗಳು ಒಂದಕ್ಕೊಂದು ಪೂರಕವಾಗಿರುವವು. ದಾಸರು ಕೆಲವು ವಾಸ್ತವ ಸಂಗತಿಗಳನ್ನು ಪ್ರವಾಸಿಗರಿಗಿಂತ ಹೆಚ್ಚು ವಿಶದವಾಗಿ ವಿವರಿಸಿರುವರು. ಪೇಟೆಯ ಭಾಗದ ಅಂಗಡಿಗಳು ಆಗಮಜ್ಞರು (ನಗರ ರಚನಾಶಾಸ್ತ್ರ ಬಲ್ಲವರು) ಜನರಿಗೆ ಅನುಕೂಲವಾಗುವಂತೆ ಬೇರೆ ಬೇರೆಯಾಗಿ ಹಂಚಿಕೊಟ್ಟ ಸ್ಥಳಗಳಲ್ಲಿ ಇದ್ದವು. ವಿಜಯನಗರ ಸಾಮ್ರಾಜ್ಯದ ಕೀರ್ತಿ ದೇಶವಿದೇಶಗಳಲ್ಲಿ ವ್ಯಾಪಿಸಿ ಜನರನ್ನು ಆಕರ್ಷಿಸುವುದಕ್ಕೆ ಅಲ್ಲಿನ ನಿರ್ಬಂಧರಹಿತ ಚಿನ್ನ ಮತ್ತು ರತ್ನಗಳ ವ್ಯಾಪಾರವೂ ಒಂದು ಕಾರಣ ಎಂದು ವಿದೇಶ ಪ್ರವಾಸಿಗರ ವರ್ಣನೆಗೆ ಪೂರಕವಾಗಿ ಸಮಕಾಲೀನ ಸಾಹಿತ್ಯ ಕೃತಿಗಳಿಂದ ವಿಷಯ ತಿಳಿದುಬರುವುದು.

ಸಾಗರ ವ್ಯಾಪಾರಿಗಳು

ವಿಜಯನಗರದ ಅರಸರು ಒಳನಾಡಿನ ವ್ಯಾಪಾರದಷ್ಟೇ ಪ್ರೋತ್ಸಾಹವನ್ನು ಹೊರನಾಡಿನ ವ್ಯಾಪಾರಕ್ಕೂ ನೀಡಿದ್ದರು. ಹಿಂದಿನ ಅರಸುಮನೆತನಗಳಿಗಿಂತ ಈ ಕಾಲದಲ್ಲಿ ವಿದೇಶದ ವ್ಯಾಪಾರಕ್ಕೆ ಹೆಚ್ಚು ಒತ್ತು ಕೊಡಲಾಯಿತು ಮತ್ತು ಹೆಚ್ಚುತ್ತಿರುವ ವಿದೇಶಿ ವಸ್ತುಗಳ ಬೇಡಿಕೆ ಅದರಲ್ಲಿಯೂ ಯುದ್ಧದ ಮತ್ತು ಶ್ರೀಮಂತರ ಅವಶ್ಯಕತೆಗಳನ್ನು ಪೂರೈಸಲು ವಿಜಯನಗರದ ಅರಸರು ವಿದೇಶಿ ವ್ಯಾಪಾರವನ್ನು ಹೆಚ್ಚು ಪ್ರೋತ್ಸಾಹಿಸಿದರು, ಅದರಲ್ಲಿಯೂ ವಿಶೇಷವಾಗಿ ಎರಡನೆಯ ದೇವರಾಯ ಮತ್ತು ಕೃಷ್ಣದೇವರಾಯನ ಕಾಲದಲ್ಲಿ. ಈ ಕಾಲದ ಆಂಧ್ರದ ಶ್ರೀನಾಥಕವಿಯ 'ಹರವಿಲಾಸಮು' ಕಾವ್ಯದಿಂದ ವೈಶ್ಯ ವರ್ತಕರು ಬೆಲೆ ಬಾಳುವ ವಸ್ತುಗಳನ್ನು ಹೊರದೇಶಗಳಿಂದ ಆಮದು ಮಾಡಿಕೊಂಡು ಅರಸರಿಗೆ, ಸರದಾರರಿಗೆ, ಮಾಂಡಲಿಕರಿಗೆ ಸರಬರಾಜು ಮಾಡುತ್ತಿದ್ದರು ಎಂದು ತಿಳಿದುಬರುವುದು. ಆಗಿನ ಮುಖ್ಯ ಆಮದು ವಸ್ತುಗಳೆಂದರೆ ಪಂಜಾಬದಿಂದ ಕರ್ಪೂರ, ಶ್ರೀಲಂಕಾದಿಂದ ಆನೆಗಳು, ಅರಬ ದೇಶದಿಂದ ಕುದುರೆಗಳು, ಚೀನಾದಿಂದ ರೇಷ್ಮೆ ಮುಂತಾದವು. ಈ ವ್ಯಾಪಾರಸ್ಥರ ಪ್ರಮುಖ ಗ್ರಾಹಕರಲ್ಲಿ ವಿಜಯನಗರದ ಅರಸರು, ಬಹಮನಿ ಸುಲ್ತಾನರು ಒರಿಸ್ಸಾದ ಗಜಪತಿ, ಕೊಂಡವೀಡುವಿನ ರೆಡ್ಡಿಗಳು ಮುಂತಾದವರು ಇದ್ದರೆಂದು ತಿಳಿದುಬರುವುದು.

ಕುಬೇರನಿಗೆ ಕಡಕೊಡುವ ಶ್ರೀಮಂತರು

ಕನಕದಾಸರ 'ಮೋಹನ ತರಂಗಿಣಿ'ಯಲ್ಲಿ ಸಾಗರ ವ್ಯಾಪಾರಿಗಳನ್ನು ಕುರಿತಂತೆ ಈ ರೀತಿ ವರ್ಣಿಸಲಾಗಿದೆ. "ಹಡಗಿನ ವ್ಯವಹಾರದಿಂದ ಗಳಿಸಿದ ಹಣವನ್ನು ಎಣಿಸಲಾರದವರಾಗಿ ಹೇರುಗಟ್ಟಲೇ ಅಳತೆಯ ಮಾನದಿಂದ ತೂಗಿಕೊಳ್ಳುತ್ತಿದ್ದರು. ಅಪೇಕ್ಷಿಸಿದರೆ ಧನಪತಿಯಾದ ಕುಬೇರನಿಗೆ ಕಡವನ್ನು ಕೊಡುವ ಯೋಗ್ಯತೆಯವರು ಆಗಿದ್ದರು" ಎಂದು ವಿವರಿಸಲಾಗಿದೆ. ಈ ವರ್ಣನೆ ಉತ್ಪ್ರೇಕ್ಷೆ ಎಂದು ಕಂಡರೂ ಸ್ಥಳೀಯ ವ್ಯಾಪಾರಿಗಳ ಸಂಪತ್ತನ್ನು ವೈಭವೀಕರಿಸುವುದಲ್ಲದೇ ರಾಜ್ಯದ ಆರ್ಥಿಕ ಸಮೃದ್ಧಿಯನ್ನು ಸೂಚಿಸುವುದು.

ಕಡಲ ತೀರದ ವಾಣಿಜ್ಯವೈಭವ

1520ರ ಸುಮಾರಿಗೆ ಕೃಷ್ಣದೇವರಾಯನ ಕಾಲದಲ್ಲಿ ಮತ್ತು ನಂತರದ ದಶಕಗಳಲ್ಲಿ ಪೋರ್ತುಗೀಜರು, ಡಚ್ಚರು, ಇಂಗ್ಲೀಷರು ಗಮನಾರ್ಹ ವಾಣಿಜ್ಯ ಚಟುವಟಿಕೆಗಳಲ್ಲಿ ನಿರತರಾಗಿದ್ದರಲ್ಲದೇ ಬಟ್ಕಳ, ಕುಂದಾಪುರ, ಮಂಗಳೂರುಗಳಲ್ಲಿ ವ್ಯಾಪಾರ ಮಳಿಗೆಗಳನ್ನು ಪ್ರಾರಂಭಿಸಿದ್ದರು. ಬರ್ಮ, ಮಲಯಾ, ಚೀನ, ಅರೇಬಿಯಾ, ಪರ್ಶಿಯಾ, ದಕ್ಷಿಣ ಆಫ್ರಿಕ,

ಪೋರ್ಚುಗಲ್‌ಗಳೊಂದಿಗೆ ವಿಜಯನಗರವು ವ್ಯಾಪಾರಸಂಪರ್ಕವನ್ನು ಹೊಂದಿತ್ತು. ಪಶ್ಚಿಮ ಕರಾವಳಿಯ ಕುಮಟಾ, ಅಂಕೋಲಾ, ಮಿರ್ಜಾನ, ಹೊನ್ನಾವರ, ಬಟ್ಕಳ, ಕುಂದಾಪುರ, ಮಂಗಳೂರು, ಬಾರಕೂರು ಇವುಗಳ ಮೂಲಕ ವಿದೇಶಿ ವ್ಯಾಪಾರ ನಡೆಯುತ್ತಿತ್ತು. ಇವುಗಳಲ್ಲಿ ಬಟ್ಕಳವು ವಿದೇಶ ವ್ಯಾಪಾರದ ಪ್ರಮುಖ ಕೇಂದ್ರವಾಗಿತ್ತು ಎಂದು ಪಾಯಸ್ ವರ್ಣಿಸಿರುವನು. ಬಟ್ಕಳ ಮತ್ತು ಚೀನಾ ದೇಶದ ಪಿಂಗಾಣಿ ವಸ್ತುಗಳಿಗೆ ವಿಜಯನಗರದಲ್ಲಿ ಬಹಳ ಬೇಡಿಕೆ ಇತ್ತು. ಚೀನಾ ನಡುವಿನ ವ್ಯಾಪಾರ ಶ್ರೀಲಂಕಾ ಮೂಲಕ ನಡೆಯುತ್ತಿತ್ತು. ಚೀನಾ ಮತ್ತು ವಿಜಯನಗರದ ಮಧ್ಯೆ ರಾಯಭಾರಿ ಸಂಬಂಧ ಇತ್ತು. 1374ರಲ್ಲಿ ಬುಕ್ಕನ ರಾಯಭಾರಿ ಚೀನಾಕ್ಕೆ ಹೋಗಿದ್ದನು. ಕೃಷ್ಣದೇವರಾಯನು ಪೋರ್ಚುಗೀಜರಿಗೆ ಬಟ್ಕಳದಲ್ಲಿ ಕೋಟೆ ಕಟ್ಟಲು ಒಪ್ಪಿಗೆ ಕೊಟ್ಟನು. 1512ರಲ್ಲಿ ಅಲ್ಬುಕರ್ಕನು ಗೋವಾವನ್ನು ವಿಜಾಪುರದಿಂದ ಗೆದ್ದುಕೊಂಡಾಗ ಕೃಷ್ಣದೇವರಾಯನು ಅವನನ್ನು ಅಭಿನಂದಿಸಿದನು. ನಂತರದ ಅರಸರು ಸಹ ಪೋರ್ತುಗೀಜರ ಸಂಗಡ ಒಳ್ಳೇ ವ್ಯಾಪಾರ ಸಂಬಂಧ ಇಟ್ಟುಕೊಂಡಿದ್ದರು.

ಅರಸರ ಕುದುರೆವ್ಯಾಪಾರ

ವಿಜಯನಗರದ ಅರಸರು ಮತ್ತು ಇತರರು ತಮಗೆ ಬೇಕಾಗುವ ಯುದ್ಧದ ಉತ್ತಮ ಕುದುರೆಗಳಿಗಾಗಿ ಪೋರ್ತುಗೀಜರನ್ನು ಸಂಪೂರ್ಣವಾಗಿ ಅವಲಂಬಿಸಬೇಕಾಗಿತ್ತು. ಇದು ಪೋರ್ಚುಗೀಜರ ಏಕಸ್ವಾಮ್ಯದ ವ್ಯಾಪಾರವೂ ಆಗಿತ್ತು. 1514ರ ಸುಮಾರಿಗೆ ಕೃಷ್ಣದೇವರಾಯನು ಸುಮಾರು 20,000 ಪೌಂಡುಗಳ ಬೆಲೆಯ ಕುದುರೆಗಳನ್ನು ಕೊಳ್ಳುವ ಬೇಡಿಕೆಯನ್ನು ಸಲ್ಲಿಸಿದ್ದಾಗಿ ತಿಳಿದುಬರುವುದು. ಒಂದು ವಿಧದಲ್ಲಿ ಅರಸರ ಈ ಕುದುರೆವ್ಯಾಪಾರ ಅವರಿಗೆ ಲಾಭ ತರುತ್ತಿತ್ತು. ಪಶ್ಚಿಮ ದೇಶದ ಕುದುರೆಗಳನ್ನು ಅರಸರು ಸುಮಾರು 1000 ಪಗೋಡ (ಚಿನ್ನದ ನಾಣ್ಯ)ಗಳಿಗೆ 12 ರಿಂದ 15 ಕುದುರೆಗಳನ್ನು ಕೊಳ್ಳುತ್ತಿದ್ದರು. ಅರಸರು ದೇಶೀಯ ಕುದುರೆಗಳನ್ನು ಮಾಂಡಲಿಕರಿಗೆ ಮತ್ತು ಇತರರಿಗೆ 1000 ಪಗೋಡಗಳಿಗೆ 5 ಕುದುರೆಗಳಂತೆ ಮಾರಾಟಮಾಡುತ್ತಿದ್ದರು. ಈ ಕುದುರೆವ್ಯಾಪಾರ ದಸರೆ ಹಬ್ಬದಲ್ಲಿ ಮಾಂಡಲಿಕರು ಅರಸರಿಗೆ ಕಪ್ಪ ಕಾಣಿಕೆ ಕೊಡುವಾಗ ಕುದುರುತ್ತಿತ್ತು ಎಂದು ತಿಳಿದುಬರುವುದು. ವಿಜಯನಗರದ ಪತನಾನಂತರ (1565) ಪೋರ್ತುಗೀಜರ ವ್ಯಾಪಾರ ತುಂಬಾ ಕಡಿಮೆ ಆಯಿತು. ಮೊದಲು ವಾರ್ಷಿಕ 120 ರಿಂದ 150 ಸಾವಿರ ಯೂರೋಪದ ಚಿನ್ನದ ನಾಣ್ಯಗಳಷ್ಟು ಇದ್ದ ವ್ಯಾಪಾರ ಕೇವಲ 6,000ಕ್ಕೆ ಇಳಿಯಿತು. ಯುದ್ಧಾನಂತರ ಸ್ಥಳೀಯ ಮತ್ತು ವಿದೇಶಿ ವ್ಯಾಪಾರಿಗಳಿಗೆ ಯಾವುದೇ ರಕ್ಷಣೆ ಇಲ್ಲದಂತಾಯಿತು.

ಸಂತೆಯ ಪ್ರಾಮುಖ್ಯತೆ

ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಸಂತೆಗೆ ಒಂದು ವಿಶೇಷ ಮಹತ್ವ ಉಂಟು. ಅಂತೆಯೇ ಸಂತೆ ಪದದ ಉಲ್ಲೇಖವನ್ನು 'ಲೌಕಿಕ' ಮತ್ತು 'ಪಾರಮಾರ್ಥಿಕ' ಅರ್ಥದಲ್ಲಿ ಬಳಸಲಾಗಿದೆ. (ಉದಾ: ವಚನ ಸಾಹಿತ್ಯ, ದಾಸ ಸಾಹಿತ್ಯ, ಸಂತರ ಹಾಡುಗಳು.)

ಅನೇಕ ಗ್ರಾಮಗಳನ್ನು ನಗರಗಳನ್ನಾಗಿ ಪರಿವರ್ತಿಸಿ ಅಲ್ಲಿಯ ಹೆಚ್ಚಿನ ವ್ಯವಸಾಯ ಉತ್ಪನ್ನಗಳನ್ನು ಮಾರಲು ಸಂತೆಗಳನ್ನು ಪ್ರಾರಂಭಿಸಲಾಯಿತು. 14ನೇ ಶತಮಾನದ ನಂತರ, ಇದುವರೆಗೆ ಅನುಭೋಗಕ್ಕಾಗಿ ಉತ್ಪಾದನೆಯಾಗುತ್ತಿದ್ದ ವ್ಯವಸಾಯ ಮತ್ತು ಇತರೆ ಉತ್ಪನ್ನಗಳನ್ನು ಮಾರಾಟಕ್ಕಾಗಿ ಉತ್ಪಾದನೆ ಪ್ರಾರಂಭವಾದ ನಂತರ ಒಳನಾಡು ಮತ್ತು ಹೊರನಾಡ ವ್ಯಾಪಾರದಲ್ಲಿ ಹೆಚ್ಚಳ ಉಂಟಾಯಿತು. ಇದು ವಿಸ್ತಾರಗೊಳ್ಳಲು ಅರ್ಥವ್ಯವಸ್ಥೆಗೆ ಪೂರಕವಾಗುವಂತೆ ಸಂತೆಗಳು, ಮಾರುಕಟ್ಟೆಗಳು ಹೆಚ್ಚಾದವು. ರಾಜರೇ ವ್ಯಾಪಾರದ, ಸಂತೆಗಳ ಅಗತ್ಯವನ್ನು ಪ್ರಯೋಜನಗಳನ್ನು ಗುರುತಿಸಿದ್ದರು. ಸಮೀಪದ ನಗರಗಳ ವ್ಯಾಪಾರಿ ಸಂಘಗಳು ಪಟ್ಟಣಸ್ವಾಮಿಯ ಮಾರ್ಗದರ್ಶನದಲ್ಲಿ ವ್ಯಾಪಾರ ವ್ಯವಹಾರವನ್ನು ನಿರ್ವಹಿಸುತ್ತಿದ್ದವು. ನಾಡ ಮುಖ್ಯಸ್ಥ ನಾಡಗೌಡ ಅಥವಾ ಮಹಾಮಂಡಲೇಶ್ವರ ಇವರ ಅನುಮತಿಯನ್ನು ಪಡೆದು ಸಂತೆಗಳನ್ನು

ಏರ್ಪಡಿಸಲಾಗುತ್ತಿತ್ತು. ಸಂತೆಗಳನ್ನು ಪ್ರಾರಂಭಿಸಿದ ವರ್ತಕರಿಗೆ ಅನೇಕ ಸೌಲಭ್ಯಗಳನ್ನು ಸ್ಥಳೀಯ ಸಂಸ್ಥೆಗಳು, ಅಧಿಕಾರಿಗಳು ನೀಡುತ್ತಿದ್ದರು. ಸಂತೆ ನಡೆಯುವುದರಿಂದ ಆ ಸ್ಥಳದ ಮಹತ್ವ ಹೆಚ್ಚುತ್ತಿತ್ತು. ಹಳ್ಳಿ ಬೆಳೆದು ಪಟ್ಟಣವಾಗುತ್ತಿತ್ತು. ಪಟ್ಟಣದ ಆಡಳಿತವನ್ನು ನೋಡಿಕೊಳ್ಳಲು ಪಟ್ಟಣಶೆಟ್ಟಿಯನ್ನು ನಿಯಮಿಸಲಾಗುತ್ತಿತ್ತು, ಒಂದನೊಂದು ಕಾಲದಲ್ಲಿ ಕೇವಲ ಸಾಮಾನ್ಯ ಗ್ರಾಮವಾಗಿದ್ದ ಹಳ್ಳಿಯು ಹೊಸದಾಗಿ ನಿರ್ಮಾಣವಾದ ಪೇಟೆ, ಮಾರುಕಟ್ಟೆ, ಸಂತೆಯ ಕಾರಣದಿಂದ ಅಥವಾ ಜಾತ್ರೆಯ ಕಾರಣದಿಂದ ಪ್ರಾಮುಖ್ಯತೆಯನ್ನು ಪಡೆದು ಊರಿನ ಹೆಸರು ಸಂತೆಯೊಂದಿಗೆ ಬೆರೆತಿರುವುದನ್ನು ಅನೇಕ ಉದಾಹರಣೆಗಳಿಂದ ತಿಳಿದುಬರುವುದು. ಬಹುಶಃ ಸಂತೆಯು ಪ್ರಾಮುಖ್ಯತೆಯನ್ನು ಪಡೆದಾಗ ಈ ಹೆಸರಿನ ಬದಲಾವಣೆ ಆಗಿರಬಹುದು ಅಥವಾ ಸಂತೆಯು ನಡೆಯುವ ಸ್ಥಳಕ್ಕೆ ಆ ಹೆಸರು ಬಂದಿರಬಹುದು.

ಉದಾ: ಶನಿವಾರಸಂತೆ, ಸೋಮವಾರಪೇಟೆ, ಕೊಡಲಿಪೇಟೆ, ವೀರರಾಜೇಂದ್ರಪೇಟೆ (ಕೊಡಗು ಜಿಲ್ಲೆ); ಸಂತೆಬೆನ್ನೂರು, ಸಂತೆಸರಗೂರು, ಸಂತೆಮರಳ್ಳಿ ಮುಂತಾದವುಗಳ ಅನೇಕ ಸಂದರ್ಭಗಳಲ್ಲಿ ರಾಜರ ಪರಿವಾರದವರ ಹೆಸರಿನಿಂದ ಪಟ್ಟಣಗಳನ್ನು ನಿರ್ಮಿಸಿ ಅಲ್ಲಿ ಸಂತೆ ನಡೆಯುವ ವ್ಯವಸ್ಥೆ ಮಾಡಿರುವುದು ಶಾಸನಗಳಿಂದ ತಿಳಿದುಬರುವುದು. ಉದಾ: ನಾಗಲಾಪುರ (ಹೊಸಪೇಟೆ) (1520) ವರದರಾಜಮ್ಮನ ಪೇಟೆ, ಕೆಂಪರಾಜಪಟ್ಟಣ, ತಿರುಮಲಾದೇವಿ ಪಟ್ಟಣ, ಬೊಮ್ಮರಸ ಪಟ್ಟಣ ಮತ್ತು ವಿಜಯಡಣ್ಣಾಯಕನ ಪಟ್ಟಣ.

ನಗರಗಳು ವಿಶಾಲವಾಗಿ ಬೆಳೆದಂತೆ ವಿವಿಧ ಬಡಾವಣೆಗಳಲ್ಲಿ ಬೇರೆ ಬೇರೆ ದಿವಸ ಸಂತೆ ನಡೆಯುವುದರಿಂದ ಆ ಪೇಟೆಗಳನ್ನು ಆಯಾ ದಿವಸ ನಡೆಯುವ ಸಂತೆಯ ಹೆಸರಿನಿಂದ ಅಥವಾ ಆ ಪೇಟೆಯನ್ನು ಕಟ್ಟಿಸಿದವರ ಹೆಸರಿನಿಂದ ಕರೆಯುವ ಪದ್ಧತಿ ಬಹುಶಃ ಪೇಶ್ವೆಯವರ ಕಾಲದಲ್ಲಿ ರೂಢಿಯಲ್ಲಿ ಬಂದಿರುವುದು. ಸಾಮಾನ್ಯ ಸಂತೆಗಳಲ್ಲದೇ ವಿಶೇಷವಾದ ಧರ್ಮಸಂತೆಗಳು ನಡೆಯುತ್ತಿದ್ದವು. ಕೆಲವು ಸಂತೆಗಳಲ್ಲಿ ಸರಕುಗಳ ಮೇಲೆ ಸಂತೆಸುಂಕ, ಮಾರಾಟ ತೆರಿಗೆ ವಿಧಿಸುತ್ತಿರಲಿಲ್ಲ. ಸಾಮಾನ್ಯವಾಗಿ ಸ್ಥಳೀಯ ಗ್ರಾಮದೇವತೆ ಅಥವಾ ಇತರ ಪ್ರಮುಖ ದೇವರ ವಾರದ ದಿವಸ ಸಂತೆಗಳನ್ನು ನಡೆಸುತ್ತಿದ್ದರು. ಅದು ಇಂದಿಗೂ ರೂಢಿಯಲ್ಲಿ ಇರುವುದು. ವರ್ತಕರು ಸಂತೆಮೈದಾನದ ಮಧ್ಯದಲ್ಲಿ ದೇವಾಲಯ ನಿರ್ಮಿಸಿ ಆ ದೇವತೆಯ ವಾರದ ದಿವಸ ಸಂತೆ ನಡೆಸುತ್ತಿದ್ದರು. ಸಂತೆಯ ದಿವಸ ಸ್ಥಳೀಯ ಮಠ–ಮಾನ್ಯಗಳ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ದಾಸೋಹಕ್ಕೆ ವರ್ತಕರು ಮಾರಾಟ ಮಾಡುವ ವಸ್ತುಗಳನ್ನು ಪಸಿಗೆ(ಚಂದಾ)ರೂಪದಲ್ಲಿ ಸಂಗ್ರಹಿಸುವ ಪದ್ಧತಿ ಉತ್ತರ ಕರ್ನಾಟಕದ ಪ್ರಮುಖ ಸಂತೆಗಳಲ್ಲಿ ಕಂಡುಬರುವುದು.

ಪೇಟೆಗಳು – ಅಂಗಡಿಗಳು

ವಿಜಯನಗರದ ಕಾಲದಲ್ಲಿ ಪೇಟೆಗಳನ್ನು ಅವುಗಳ ಇರುವಿಕೆಯ ಆಧಾರದ ಮೇಲೆ ಹೊರಪೇಟೆ, ಒಳಪೇಟೆ ಮುಂತಾಗಿ ವಿಭಾಗಿಸಲಾಗಿತ್ತು. ಸಂತೆಯ ದಿವಸ ಸಂತೆಯು ಸಾಮಾನ್ಯವಾಗಿ ಹೊರಪೇಟೆಯಲ್ಲಿ ನಡೆಯುತ್ತಿತ್ತು. ಉಳಿದ ದಿನ ವ್ಯಾಪಾರ ಒಳಪೇಟೆಯಲ್ಲಿ ನಡೆಯುತ್ತಿತ್ತು. ವಿವಿಧ ವಸ್ತುಗಳ ಮಾರಾಟಕ್ಕೆ ಪ್ರತ್ಯೇಕವಾದ ಮಾರುಕಟ್ಟೆಗಳು ಇದ್ದವು. ಪ್ರತಿ ಒಂದು ಪೇಟೆಗೆ ನಾಲ್ಕು ದಿಕ್ಕಿನಲ್ಲಿ ಮೇರೆಗಳನ್ನು ಗೊತ್ತುಪಡಿಸಲಾಗುತ್ತಿತ್ತು. ಪೇಟೆಗಳ ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಇದು ಉತ್ತಮ ವ್ಯವಸ್ಥೆಯಾಗಿತ್ತು. ಹಂಪೆಯ 1524ರ ಶಾಸನದಲ್ಲಿ ಅಚ್ಯುತರಾಯ ಪೇಟೆಯ ಚತುಸ್ಸೀಮೆಯನ್ನು ಈ ರೀತಿ ಗೊತ್ತುಪಡಿಸಲಾಗಿದೆ. (ಪಶ್ಚಿಮಕ್ಕೆ ಮತಂಗಪರ್ವತ, ಪೂರ್ವಕ್ಕೆ ತಿಪ್ಪರಾಜನ ತೋಟ, ಬಡಗ ತುಂಗಭದ್ರಾ ತೀರದ ಸೀತಾಕೊಂಡ, ತೆಂಕಣ ಭೂಪತಿ ಕೆರೆ ಇತ್ಯಾದಿ.)

ಸಂತೆಯ ಬಯಲಿನ ಅಂಗಡಿ ಸಂತೆಯ ದಿನ ಮಾತ್ರ ತೆರೆಯುತ್ತಿದ್ದವು. ಪೇಟೆಯ ಅಂಗಡಿಗಳು ಪ್ರತಿ ದಿನ ಕಾರ್ಯನಿರ್ವಹಿಸುತ್ತಿದ್ದವು. ಅಂಗಡಿಗಳಲ್ಲಿ ಹರದಗೇರಿ, ಸಾಮಾನ್ಯ ಅಂಗಡಿ, ಬಯಲು ಅಂಗಡಿ, ಧರ್ಮದ ಅಂಗಡಿ,

ದೇವರ ಅಂಗಡಿ, ಮಾನ್ಯದ ಮುಂತಾದ ಪ್ರಭೇದಗಳು ಇದ್ದವು. ಧರ್ಮದ ಅಂಗಡಿ, ದೇವರ ಅಂಗಡಿ ಮತ್ತು ಮಾನ್ಯದ ಅಂಗಡಿಗಳಿಗೆ ಕರವಿನಾಯಿತಿ ಇತ್ತು. ವಿಜಯನಗರದ ಸಂತೆಯನ್ನು ಕುರಿತಂತೆ ಪಯಸ್ ಈ ರೀತಿ ವಿವರಿಸುತ್ತಾನೆ. "ಇಲ್ಲಿ ಪ್ರತಿದಿನ ಸಾಯಂಕಾಲ ಸಂತೆ ನಡೆಯುತ್ತಿತ್ತು. ಅಲ್ಲಿ ಸಾಮಾನ್ಯ ಕುದುರೆಗಳು, ಗಿಡ್ಡ ಜಾತಿಯ ಸವಾರಿ ಕುದುರೆಗಳು, ಹಣ್ಣು ಮತ್ತು ತೋಟದ ಬೆಳೆಗಳು ಮತ್ತು ಮರದ ವಸ್ತುಗಳು ಮಾರಾಟವಾಗುತ್ತಿತ್ತು. ಅಲ್ಲದೇ ಪ್ರತಿ ಶುಕ್ರವಾರ ಹಂದಿಗಳ, ಕೋಳಿಗಳ ಮತ್ತು ಒಣಗಿದ ಮೀನುಗಳ ಸಂತೆ ನಡೆಯುತ್ತಿತ್ತು. (ಬಹುಶಃ ಇದು ಮುಸ್ಲೀಮ ಧರ್ಮಿಯರಿಗೆ ಇತರ ಮಾಂಸಾಹಾರಿಗಳಿಗೆ ಇರಬಹುದು.) ನಗರದ ಪ್ರತಿ ಒಂದು ಭಾಗದಲ್ಲಿ ಪ್ರತಿ ದಿವಸ ಸಂತೆ ನಡೆಯುತ್ತಿತ್ತು."

ತೂಕ ಮತ್ತು ಅಳತೆ

ವ್ಯಾಪಾರದ ಪ್ರಮುಖ ಸಾಧನಗಳಾದ ತೂಕ ಮತ್ತು ಅಳತೆಗಳಲ್ಲಿ ತುಂಬಾ ವೈವಿಧ್ಯ ಇತ್ತು. ಇದು ಪ್ರದೇಶದಿಂದ ಪ್ರದೇಶಕ್ಕೆ ತುಂಬಾ ಬದಲಾಗುತ್ತ ಹೋಗುತ್ತಿತ್ತು. ವರ್ತಕರು ಇದರ ಲಾಭವನ್ನು ಪಡೆಯದೇ ಇರಲಿಲ್ಲ. ಈ ಸಾಂಪ್ರದಾಯಿಕ ಪದ್ಧತಿಯನ್ನು ಬದಲಾಯಿಸಲು ರಾಜರಿಗೂ ಕಷ್ಟವಾಗಿತ್ತು ಎಂದು ಟಿ.ವಿ. ಮಹಾಲಿಂಗಮ್ ಸೂಚಿಸಿರುವರು. ತೂಕಕ್ಕೆ ತ್ರಾಸ್ (ತಕ್ಕಡಿ), ಅಳತೆ ಬಳ್ಳ, ಕೊಳಗ, ಖಂಡಗ ಉಪಯೋಗಿಸುತ್ತಿದ್ದರು.

ನಾಣ್ಯಗಳು

ಹಿಂದಿನ ನಾಣ್ಯ ಪದ್ಧತಿ ಮುಂದುವರೆದರೂ ಎರಡನೆಯ ಹರಿಹರನನ ಕಾಲದಲ್ಲಿ ಕಂದಾಯವನ್ನು ನಾಣ್ಯ ರೂಪದಲ್ಲಿ ವಸೂಲು ಮಾಡುವ ಪದ್ಧತಿ ರೂಢಿಯಲ್ಲಿ ಬಂದುದರಿಂದ ವಿವಿಧ ಮೌಲ್ಯದ ನಾಣ್ಯಗಳನ್ನು ಟಂಕಿಸುವುದು ಅನಿವಾರ್ಯವಾಯಿತು. ಕೃಷ್ಣದೇವರಾಯನು ಹೊಸ ಚಿನ್ನದ ನಾಣ್ಯ 'ದುರ್ಗಿ'ಯನ್ನು ಜಾರಿಯಲ್ಲಿ ತಂದನು. ಅಬ್ದುಲ್ ರಜಾಕ್‌ನು ಮೂರು ಬಗೆಯನ್ನು (ಚಿನ್ನ, ಬೆಳ್ಳಿ, ತಾಮ್ರ) ನಾಣ್ಯಗಳನ್ನು ಕುರಿತು ಹೇಳಿರುವನು. 'ಗದ್ಯಾಣ' ಮತ್ತು ಫೊನ್ ಪ್ರಮುಖ ನಾಣ್ಯಗಳಾಗಿದ್ದವು. ಅರಮನೆಯ ಪಕ್ಕದಲ್ಲಿಯೇ ಟಂಕಸಾಲೆ ಇತ್ತು ಎಂದು ಸಹ ವಿವರಿಸಿರುವನು.

ತೆರಿಗೆ ಪದ್ಧತಿ

ಸಂತೆಗಳ ಮತ್ತು ಮಾರುಕಟ್ಟೆಗಳ ಸರಕುಗಳ ಮೇಲೆ ವಿಧಿಸುತ್ತಿದ್ದ ಕರಗಳ ಮೇಲಿಂದ, ಸಂತೆಗಳಲ್ಲಿ ಸಂಗ್ರಹಿಸಿದ ಪ್ರವೇಶ ಸುಂಕಗಳಿಂದ ರಾಜ್ಯ ಸರ್ಕಾರಕ್ಕೆ ಗಣನೀಯವಾದ ವರಮಾನ ಬರುತ್ತಿತ್ತು. ಒಟ್ಟಾರೆ ಹೇಳುವುದಾದರೆ, ವಿಜಯನಗರದ ಅರಸರ ಕಾಲದಲ್ಲಿ ವರ್ತಕರು ಮತ್ತು ಇತರರು ಸಾಕಷ್ಟು ಪ್ರಮಾಣದಲ್ಲಿ ತೆರಿಗೆಯನ್ನು ಕೊಡುತ್ತಿದ್ದರು ಎಂದು ತಿಳಿದುಬರುವುದು. ತೆರಿಗೆಯ ಜಾಲದಿಂದ ಹೊರಗೆ ಉಳಿದವರೇ ಇರಲಿಲ್ಲ ಎಂದು ಹೇಳಬಹುದು. ವ್ಯಾಪಾರಿ ವಸ್ತುಗಳ ಮೇಲೆ ಆಮದು ಸುಂಕ, ರಫ್ತು ಸುಂಕ, ಮಾರಾಟ ತೆರಿಗೆ, ಜಕಾತಿ, ಸರ್ವೆ ಸಾಮಾನ್ಯವಾಗಿದ್ದವು. ಮದುವೆ ಮತ್ತು ವಿಧವಾ ವಿವಾಹಕ್ಕೂ (ಕೂಡಿಕೆ) ತೆರಿಗೆಯನ್ನು ವಿಧಿಸುತ್ತಿದ್ದರು (1396ರ ಒಂದು ಶಾಸನ). ಯಾವುದೇ ವ್ಯಕ್ತಿಯು ವೃತ್ತಿ ತೆರಿಗೆಯಿಂದ ಹೊರಗೆ ಉಳಿದಿರಲಿಲ್ಲ. ವೃತ್ತಿ ತೆರಿಗೆಯನ್ನು ವೃತ್ತಿದಾರರ ಆದಾಯದ ಮೇಲೆ ಹಾಕದೇ ಕಸಬು ಆಧಾರದ ಮೇಲೆ ವಿಧಿಸಲಾಗುತ್ತಿತ್ತು. ಕಸಬುದಾರರು ಅಲ್ಲದೇ ಗ್ರಾಮದ ಮುಖ್ಯಸ್ಥರು, ಕುರುಬರು, ಆಯಗಾರರು ವೃತ್ತಿ ತೆರಿಗೆಯನ್ನು ನಗದು ರೂಪದಲ್ಲಿ ವರ್ಷಕ್ಕೆ ಒಂದು ಸಾರಿ ಕೊಡಬೇಕಾಗುತ್ತಿತ್ತು. ಆದರೆ ಅಳಿಯ ರಾಮರಾಯ ಮತ್ತು ಸದಾಶಿವ ಇವರ ಕಾಲದಲ್ಲಿ ಕ್ಷೌರಿಕರ ವೃತ್ತಿ ತೆರಿಗೆಯನ್ನು ರಾಜ್ಯಾದ್ಯಂತ ತೆಗೆದು ಹಾಕಿದ ಅನೇಕ ಉಲ್ಲೇಖಗಳು ದೊರೆಯುವವು. ರಾಜ್ಯದ ಒಟ್ಟು ಆದಾಯದಲ್ಲಿ ಬಹುಪಾಲು ವಾಣಿಜ್ಯ ತೆರಿಗೆ ಮತ್ತು ವೃತ್ತಿ ತೆರಿಗೆಯ ಮೂಲಗಳಿಂದ ಸಂಗ್ರಹವಾಗುತ್ತಿತ್ತು. ಹೊಸದಾಗಿ ಪ್ರಾರಂಭವಾಗುವ ಸಂತೆಗಳಿಂದ ರಾಜ್ಯಕ್ಕೆ ಒಳ್ಳೆಯ ಆದಾಯ ಬರುತ್ತಿತ್ತು. ಲಾಭದ ಮೇಲೆ ಗೊತ್ತಾದ ಅವಧಿಗೆ ನಿಗದಿತ ಸುಂಕವನ್ನು ವ್ಯಾಪಾರಿಗಳು, ಅಂಗಡಿಕಾರರು, ಚಿಲ್ಲರೆವ್ಯಾಪಾರಿಗಳು ಕೊಡಬೇಕಾಗುತ್ತಿತ್ತು. ಕೈಗಾರಿಕೆಗಳ ಮೇಲೆ ನಿವ್ವಳ ಲಾಭದ ಮೇಲೆ ತೆರಿಗೆ ಹಾಕಲಾಗುತ್ತಿತ್ತು.

ವಿವಿಧ ಹಂತದ ತೆರಿಗೆ

ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಆದಾಯ ಬರುವಂತೆ ವಿವಿಧ ಹಂತದ (ಮಲ್ಟಿಪಲ್) ತೆರಿಗೆಯನ್ನು ವಿಧಿಸಲಾಗುತ್ತಿತ್ತು. ನ್ಯೂನಿಜ್ ಹೇಳುವಂತೆ ನಾಗಲಾಪುರ (ಹೊಸಪೇಟೆ) ಒಂದರಿಂದಲೇ ಸುಮಾರು 42,000 ಪಗೋಡಗಳಷ್ಟು ಸುಂಕ ಸಂದಾಯವಾಗುತ್ತಿತ್ತು. ಸರ್ಕಾರ ಸುಂಕದ ಕಟ್ಟೆಗಳನ್ನು ಹರಾಜು ಹಾಕುತ್ತಿತ್ತು. ಸುಂಕದ ಕಟ್ಟೆಯ ಗುತ್ತಿಗೆದಾರರು ತಮ್ಮ ತಮ್ಮಲ್ಲಿ ಪೈಪೋಟಿ ನಡೆಸುತ್ತಿದ್ದರು ಎಂಬುದು ಶಿವಮೊಗ್ಗದ ಒಂದು ಶಾಸನದಿಂದ ತಿಳಿದುಬರುವುದು. ಬಿ. ಲುಯಿಸ್ ರಾಯಿಸ್ ಅವರ ಪ್ರಕಾರ ವ್ಯಾಪಾರಿ ವಸ್ತುಗಳ ಮೇಲೆ ಮೂರು ರೀತಿಯ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಸ್ಥಳ ಆದಾಯ (ಆಮದು ವಸ್ತುವಿನ ಮೇಲೆ ಮಾರಾಟ ತೆರಿಗೆ), ಮಾರ್ಗ ಆದಾಯ (ಜಕಾತಿ) ಮತ್ತು ಮಾಮೂಲಾದಾಯ (ರಫ್ತು ಸುಂಕ).

ಸಂತೆಯ ಶಾಸನಗಳು

ವಿಜಯನಗರದ ಕಾಲದಲ್ಲಿನ ಸಂತೆಗೆ ನೇರವಾಗಿ ಸಂಬಂಧಪಟ್ಟಂತಹ ಕೆಲವು ಆಯ್ದ ಶಾಸನಗಳ ಸಂಕ್ಷಿಪ್ತ ಪರಿಚಯವನ್ನು ಈ ಮೂಲಕ ವಿವರಿಸಲಾಗಿದೆ. ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿನ ಎರಡನೆ ದೇವರಾಯನ 1427ರ ಒಂದು ಶಾಸನ, ಸರ್ಜಾಪುರದ 1408ರ ಶಾಸನ ಮತ್ತು ಮಾಯಸಂದ್ರದ 1412ರ ಶಾಸನಗಳು ಸಂತೆಯನ್ನು ಕುರಿತಂತೆ ಅನೇಕ ಮಾಹಿತಿ ನೀಡುವುವು. ಅಂದರೆ ಸಂತೆ ನಡೆಸುವವರಿಗೆ ಉಚಿತ ಭೂಮಿ, ಪಟ್ಟಣಸ್ವಾಮಿ ಎಂಬ ಬಿರುದು, ವಡ್ಡ ವ್ಯವಹಾರಿ ಮತ್ತು ಉಭಯನಾನಾದೇಶಿಯರಿಗೆ ಹಲವು ವರ್ಷಗಳವರೆಗೆ ವಿವಿಧ ಸುಂಕಗಳಲ್ಲಿ ರಿಯಾಯಿತಿ ಮುಂತಾದವುಗಳು. ಆನೇಕಲ್ ತಾಲ್ಲೂಕಿನ ಸೋಮಗೊಂಡನಹಳ್ಳಿಯಲ್ಲಿ 1412ರಲ್ಲಿ ಸಂತೆ ಪ್ರಾರಂಭ ಮಾಡಿ ಸ್ಥಳದ ಇಬ್ಬರು ಸಹೋದರರಿಗೆ ಪಟ್ಟಣಸ್ವಾಮಿಗಳನ್ನಾಗಿ ನೇಮಿಸಿ ನೀರಾವರಿ ಭೂಮಿಯನ್ನು ಸಂತೆ ನಡೆಸುವ ಸಲುವಾಗಿ ಜಹಗೀರು ಹಾಕಿಕೊಟ್ಟಿರುವ ವಿಷಯ ಶಾಸನದಿಂದ ತಿಳಿಯುವುದು. ಬೆಂಗಳೂರು ನಗರದ ಒಂದು ತೆಲುಗು ಶಾಸನ ಅರವೀಡುವಂಶ, (1628) ವೀರರಾಮದೇವರಾಯನು ಮುತ್ಯಾಲುಪೇಟೆಯ ರಂಗನಾಥ ದೇವಾಲಯಕ್ಕೆ ವಿವಿಧ ನಾನಾದೇಶಿಯರಿಂದ (ಪೆನುಗೊಂಡೆ, ಬೆಂಗಳೂರು, ಗೂಳೂರು, ದೊಡ್ಡಬಳ್ಳಾಪುರ, ಚಿಕ್ಕನಾಯಕನಹಳ್ಳಿ) ದೇವಾಲಯಕ್ಕೆ ದಾನ ನೀಡಿದ ವಿವರ ದೊರೆಯುವುದು. ಆಗ ಇಮ್ಮಡಿ ಕೆಂಪೇಗೌಡ ಬೆಂಗಳೂರನ್ನು ಆಳುತ್ತಿದ್ದನು. ಅದರಂತೆ ದೊಮ್ಮಲೂರಿನ ಚೊಕ್ಕನಾಥ ದೇವಾಲಯದ ಶಾಸನ ಮತ್ತು ದೇವನಹಳ್ಳಿ ತಾಲ್ಲೂಕಿನ ಹೂಡಿಯ 1332ರ ಶಾಸನ, ಬೆಂಗಳೂರಿನ ಬಳಿಯ ಬೇಗೂರಿನ 1402ರ ಶಾಸನವು ನಗರೇಶ್ವರ ದೇವಾಲಯಕ್ಕೆ ವರ್ತಕರು ನೀಡಿದ ದಾನವನ್ನು ವಿವರಿಸುವುದು. ಸರ್ಜಾಪುರದ 1408ರ ಶಾಸನವು ಸಂತೆ ಕಟ್ಟೆಯನ್ನು ನಿರ್ಮಿಸಿದ ಬಗ್ಗೆ ವಿವರಿಸುವುದು, ಮೈಸೂರು ಜಿಲ್ಲೆಯ ಕಳಲೆಯ ಶಾಸನವು ಗವರೆ, ಗಾತ್ರಿಗ ಮುಂತಾದ ವರ್ತಕರನ್ನು ಕುರಿತು ವಿವರಿಸಿದರೆ ಮಾಂಬಳ್ಳಿಯ 13ನೇ ಶತಮಾನದ ಶಾಸನ ನಾನಾದೇಶೀಯರನ್ನು ಕುರಿತು ವಿವರಿಸುವುದು. ಉತ್ಪಾದಕರ ವಿನಿಮಯ ಸಂಘಗಳನ್ನು ಕುರಿತಂತೆ ಸುಮಾರು 50ಕ್ಕಿಂತ ಹೆಚ್ಚು ಶಾಸನಗಳ ಉಲ್ಲೇಖ ದೊರೆಯುವುದು. ಇವುಗಳಲ್ಲಿ ಬಹಳಷ್ಟು ಶಾಸನಗಳು ದಕ್ಷಿಣ ಕರ್ನಾಟಕದ ಜಿಲ್ಲೆಗಳಿಗೆ ಸೀಮಿತವಾಗಿವೆ.

ಆಧಾರಸೂಚಿ

1. ಬಿ.ಎ. ರೈಸ್, *ಗ್ಯಾಸೆಟಿಯರ್ ಆಫ್ ಮೈಸೂರು ಮತ್ತು ಕೂರ್ಗ್*, 1873.
2. ಸಿ. ಹಯವದನರಾವ್, ಮೈಸೂರು *ಗ್ಯಾಸೆಟಿಯರ್*, ಭಾಗ-2, 1930.
3. ಎಪಿಗ್ರಾಫಿಯಾ *ಕರ್ನಾಟಿಕಾ* ಸಂಪುಟಗಳು.
4. ಡಾ॥ ಬಿ.ಆರ್. ಹಿರೇಮಠ, *ಶಾಸನಗಳಲ್ಲಿ ಕರ್ನಾಟಕದ* ವರ್ತಕರು, ಕ.ವಿ.ವಿ., ಧಾರವಾಡ.
5. ವಿಜಯನಗರದ ಇತಿಹಾಸ ವಿಚಾರಗೋಷ್ಠಿ ಪ್ರಬಂಧಗಳು, 1970 (ಅಪ್ರಕಟಿತ)
6. ವಿಷಯ ವಿಶ್ವಕೋಶ, 1997, ಮೈಸೂರು ವಿ.ವಿ.
7. *ಕರ್ನಾಟಕ* ರಾಜ್ಯ *ಗ್ಯಾಸೆಟಿಯರ್ ಸಂಪುಟಗಳು*, 1984.
8. ಡಾ॥ ಬಿ.ಆರ್. ಗೋಪಾಲ, ವಿಜಯ*ನಗರ ಶಾಸನಗಳು*, ಸಂಪುಟ 1 ಮತ್ತು 2.
9. *ಕರ್ನಾಟಕ ಚರಿತ್ರೆ*, ಸಂಪುಟ 3, ಕನ್ನಡ ವಿಶ್ವವಿದ್ಯಾಲಯ, ಹಂಪೆ, 1997.

20

ವಿಜಯನಗರ ಸಾಮ್ರಾಜ್ಯದಲ್ಲಿ ಕೃಷಿ ಮತ್ತು ನೀರಾವರಿ : ಕಿರುಸಮೀಕ್ಷೆ

ಪಿ.ಜಯಸಿಂಹ

ವಿಜಯನಗರ ಸಾಮ್ರಾಜ್ಯವು ಹದಿನಾಲ್ಕನೆಯ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಹಿಂದೂ ಧರ್ಮದ ಸದೃಢತೆ ಹಾಗೂ ಪ್ರಸಾರಕ್ಕಾಗಿ ಸ್ಥಾಪಿಸಲ್ಪಟ್ಟ ಸನಾತನ ಮಹಾಸಾಮ್ರಾಜ್ಯ. ಈ ಸಾಮ್ರಾಜ್ಯದ ಅರಸರಿಗೆ ಇಲ್ಲಿನ ಸ್ಥಿತಿ ಗತಿಗಳ ಬಗ್ಗೆ ಸಂಪೂರ್ಣವಾಗಿ ಅರಿವಿದ್ದು ಇದಕ್ಕೆ ಅಗತ್ಯವಾಗಿದ್ದ ಸೂಕ್ತ ಜ್ಞಾನವನ್ನು ಹೊಂದಿದ್ದರು.

ಹಿಂದೂ ರಾಜನೀತಿ ಶಾಸ್ತ್ರದ ಅನುಸಾರ, ರಾಜ್ಯದ ಮೂಲ ಉದ್ದೇಶ ಪ್ರಜೆಗಳ ಶ್ರೇಯೋಭಿವೃದ್ಧಿ ಮತ್ತು ರಕ್ಷಣೆ. ಇದನ್ನು ವಿಜಯನಗರದ ಅರಸರು ಸಮರ್ಥವಾಗಿ ಪಾಲಿಸುತ್ತ ಬಂದರು. ಸಾಮ್ರಾಜ್ಯದ ಬಹುಪಾಲು ಜನ ಕೃಷಿಯನ್ನಾಧರಿಸಿದ್ದ ಕಾರಣ ವಿಜಯನಗರದ ಅರಸರು ಕೃಷಿಯ ಸ್ಥಿತಿಯನ್ನು ಉತ್ತಮಗೊಳಿಸಲು ತಮ್ಮ ಎಲ್ಲ ಶಕ್ತಿ ಸಾಮರ್ಥ್ಯವನ್ನು ಮುಡುಪಿಟ್ಟಿದ್ದರು. ಕೃಷಿಗೆ ಹೆಚ್ಚು ಉತ್ತೇಜನ ಕೊಡಲು ಹೊಸ ಹಳ್ಳಿಗಳನ್ನು ಸ್ಥಾಪಿಸಿದರು. ಕಾಡನ್ನು ಕಡಿದು ಹೊಸ ಪ್ರದೇಶವನ್ನು ಜನರ ಪುನರ್ವಸತಿಗಾಗಿ ಮೀಸಲಿಟ್ಟರು. ಕೃಷಿ ಚಟುವಟಿಕೆಗೆ ತೊಡಗಲು ಜನರಿಗೆ ಹೆಚ್ಚು ಸವಲತ್ತುಗಳನ್ನು ನೀಡಿರುವ ಹಲವು ಶಾಸನಗಳು ದೊರೆತಿವೆ.

ವಿಜಯನಗರದ ಆಡಳಿತದ ಕಾಲದಲ್ಲಿ ಯಾವ ಪ್ರಮಾಣದಲ್ಲಿ ಜನರು ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದರೆಂಬುದಕ್ಕೆ ಸರಿಯಾದ ಮಾಹಿತಿ ಸಿಗುವುದಿಲ್ಲ. ನಮಗೆ ಕೇವಲ ಶಾಸನಗಳು ಮತ್ತು ವಿದೇಶಿ ಪ್ರವಾಸಿಗರು ದಾಖಲು ಮಾಡಿರುವ ಬರಹಗಳಲ್ಲಿ ಮಾಹಿತಿಯ ತುಣುಕುಗಳು ಲಭ್ಯವಾಗುತ್ತವೆ.

ಧಾನ್ಯಗಳು

ಭತ್ತ ಜನಸಾಮಾನ್ಯರ ಧಾನ್ಯವಾಗಿದ್ದ ಕಾರಣ ಅತಿ ಹೆಚ್ಚು ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು. ಇದಲ್ಲದೆ ಗೋಧಿ, ಬೇಳೆಕಾಳುಗಳು, ಅಡಿಕೆ, ಮಸಾಲೆ ಪದಾರ್ಥಗಳಾದ ಕಾಳುಮೆಣಸು, ಶುಂಠಿ, ಕಬ್ಬು, ಹತ್ತಿ ಮುಂತಾದವನ್ನು ಬೆಳೆಯಲಾಗುತ್ತಿತ್ತು.

ಡೊಮಿಂಗೊ ಪಯಾಸ್ ಎಂಬ ವಿದೇಶಿ ಪ್ರವಾಸಿ ಉಲ್ಲೇಖಿಸಿರುವ ಪ್ರಕಾರ ವಿಜಯನಗರದ ಸಾಮ್ರಾಜ್ಯವು ಅತ್ಯಂತ ಸಮೃದ್ಧ ನಾಡಾಗಿತ್ತು. ಇಲ್ಲಿ ಭತ್ತ, ಜೋಳ ಮತ್ತು ಇತರೇ ಧಾನ್ಯಗಳು ಹೇರಳ ಪ್ರಮಾಣದಲ್ಲಿ ಲಭ್ಯವಿತ್ತು ಹಾಗೂ ರಾಜ್ಯದ ಮೂಲೆಮೂಲೆಗಳಲ್ಲೂ ಹಣ್ಣಿನ ತೋಟಗಳು ಕಂಡುಬರುತ್ತಿವೆ ಎಂದು ದಾಖಲಿಸಿದ್ದಾನೆ.

ಗೋವೆಯನ್ನು ಆಳುತ್ತಿದ್ದ ಪೋರ್ಚುಗೀಸರಿಗೂ ಮತ್ತು ವಿಜಯನಗರದ ಅರಸರಿಗೂ ಮಿತ್ರತ್ವದ ಸಂಬಂಧ ಕೆಲವು ಕಾಲ ಇದ್ದ ಕಾರಣ ಇಬ್ಬರ ನಡುವೆ ಹಲವು ಒಪ್ಪಂದಗಳು ಏರ್ಪಟ್ಟಿದ್ದವು. ಪೋರ್ಚುಗೀಸರು ಹಲವಾರು

ತರಹದ ಗಿಡಗಳನ್ನು ಭಾರತಕ್ಕೆ ಪರಿಚಯ ಮಾಡಿಸಿದರು. ಇವುಗಳಲ್ಲಿ ಶೇಂಗ, ಮುಸುಕಿನಜೋಳ, ಆಲೂಗಡ್ಡೆ, ಟೊಮೇಟೋ, ಹಸಿಮೆಣಸು, ತಂಬಾಕು ಮುಂತಾದವು ಪ್ರಮುಖವಾದವು.

ನೀರಾವರಿ

ಅನಾದಿ ಕಾಲದಿಂದ ಭಾರತವು ಸಂಪದ್ಭರಿತ ಹಾಗೂ ಪ್ರಜ್ಞಾವಂತರ ನಾಡೆಂದು ಕೀರ್ತಿ ಪಡೆದಿತ್ತು. ಈ ನೆಲದಲ್ಲಿ ಸಾವಿರಾರು ವರ್ಷಗಳಿಂದ ಹಳ್ಳಿ ಹಳ್ಳಿಗಳಲ್ಲಿನ ಸಮರ್ಥ ಆಡಳಿತ ವ್ಯವಸ್ಥೆಯಿಂದ ಪ್ರತಿ ಗ್ರಾಮವು ಸ್ವಯಂಪರಿಪೂರ್ಣತೆಯನ್ನು ಹೊಂದಿತ್ತು. ಆದರೆ, ಭಾರತದ ಆಡಳಿತ ಚುಕ್ಕಾಣಿಯು ಮುಸಲ್ಮಾನ ದಂಗೆಕೋರರ ಕೈವಶವಾದ ಕಾಲದಿಂದ ಈ ವ್ಯವಸ್ಥೆ ಹಿಂದೆಸರಿದು ಭಾರತವು ಪ್ರಗತಿ ಪಥದಿಂದ ಅಧಃಪತನವನ್ನು ಹಿಡಿಯುವಂತಾಯಿತು.

ಹರಿಯುವ ನದಿಯನ್ನು ಅಡ್ಡಗಟ್ಟಿ, ಅಣೆಕಟ್ಟನ್ನು ನಿರ್ಮಿಸಿ, ಆ ನೀರನ್ನು ಕೃಷಿ ಮತ್ತಿತರ ಚಟುವಟಿಕೆಗೆ ಬಳಕೆ ಮಾಡುವ ತಂತ್ರಜ್ಞಾನವು ದಕ್ಷಿಣ ಭಾರತದಲ್ಲಿ ನೂರಾರು ವರ್ಷಗಳಿಂದ ಯಶಸ್ವಿಯಾಗಿ ನಡೆದುಕೊಂಡು ಬಂದಿತ್ತು. ಇದಕ್ಕೆ ಹಲವಾರೂ ಶಾಸನೋಲ್ಲೇಖಗಳೇ ಸಾಕ್ಷಿಯಾಗಿವೆ.

ಈ ಅಣೆಕಟ್ಟುಗಳ ಬಗೆಗೆ ಅಧ್ಯಯನ ಅತ್ಯಂತ ಜಾಗೃತೆಯಾಗಿ ನಡೆಯಬೇಕಿದೆ. ಆಗ ಭಾರತೀಯರ ಅಣೆಕಟ್ಟಿನ ತಂತ್ರಜ್ಞಾನ, ಸಾಧನೆಗಳು ವಿಶದವಾಗಿ ತಿಳಿದುಬರುತ್ತವೆ.

ವಿಜಯನಗರದ ಅರಸರು ಅಣೆಕಟ್ಟಿನ ಅಗತ್ಯವನ್ನು ಅನುಕೂಲವನ್ನು ಪರಿಪೂರ್ಣವಾಗಿ ಅರಿತಿದ್ದು ನೀರಾವರಿ ಕೃಷಿಗೆ ಹೆಚ್ಚು ಒತ್ತುಕೊಟ್ಟಿದ್ದರು. ಇದು ಕ್ರಮೇಣ ಸಾಮ್ರಾಜ್ಯದ ಯಶಸ್ಸು ಮತ್ತು ಸಮೃದ್ಧಿಗೆ ಕಾರಣವಾಗಿತ್ತು. ಕೃಷ್ಣದೇವರಾಯನು ತಾನೇ ರಚಿಸಿದ ಆಮುಕ್ತಮಾಲ್ಯದ ಕೃತಿಯಲ್ಲಿ ದೇಶದ ಶ್ರೇಯೋಭಿವೃದ್ಧಿಗೆ ರಾಜನು ರಾಜ್ಯದ ಮೂಲೆಮೂಲೆಗಳಲ್ಲಿ ಕೆರೆ, ಕೊತ್ತಲುಗಳನ್ನು ನಿರ್ಮಿಸಿ ನೀರಾವರಿ ವ್ಯವಸ್ಥೆಯನ್ನು ಬಲಪಡಿಸಿ ಬಡ ರೈತರಿಗೆ ದಯೆ ತೋರಬೇಕೆಂದು ಹೇಳಿರುವುದು ಗಮನಾರ್ಹ.

ವಿಜಯನಗರದ ಕಾಲದಲ್ಲಿ ನೀರಾವರಿಯ ವಿವಿಧ ವ್ಯವಸ್ಥೆಗಳು

* **ನದಿ ನೀರಾವರಿ ವ್ಯವಸ್ಥೆ:** ನದಿಗೆ ಅಡ್ಡಲಾಗಿ ಕಟ್ಟುವ ಅಣೆಕಟ್ಟುಗಳು ಮತ್ತು ಇದರ ಕಾಲುವೆಗಳಲ್ಲಿ ಸಂಗ್ರಹಿಸಲ್ಪಟ್ಟ ನೀರನ್ನು ರಾಜಧಾನಿಯ ಜನರ ದಾಹ ನೀಗಿಸಲು ಬಳಸಲಾಗುತ್ತಿತ್ತು ಮತ್ತು ತೋಟಗಳಿಗೆ ನೀರನ್ನು ಪೂರೈಸಲು ಸದ್ಬಳಕೆಯಾಗುತ್ತಿತ್ತು. ಅಂದಿನ ಕಾಲದ, ಇಂದಿಗೂ ಉತ್ತಮ ಸ್ಥಿತಿಯಲ್ಲಿರುವ ಹಲವು ಅಣೆಕಟ್ಟುಗಳ ನಿರ್ಮಾಣದಲ್ಲಿನ ತಂತ್ರಜ್ಞಾನ ಮತ್ತು ಕಾರ್ಯ ಕೌಶಲ್ಯವನ್ನು ನಾವು ಈ ದಿನವೂ ಕಾಣಬಹುದು. ಇಂತಹ 18 ಅಣೆಕಟ್ಟುಗಳನ್ನು ಕೃಷ್ಣದೇವರಾಯ ನಿರ್ಮಿಸಿದ ಎಂದು ದಾಖಲಿಸಿರುವ ಹಲವು ಶಾಸನಗಳು ಸಿಕ್ಕಿವೆ. ಇಮ್ಮಡಿ ಹರಿಹರನ ಮಗನಾದ ಕಂಪಭೂಪಾಲನು ತುಂಗಭದ್ರೆಗೆ ಸೋಪಾನಮಾರ್ಗವನ್ನು ನಿರ್ಮಿಸಿದ ಉಲ್ಲೇಖ ಶಾಸನೋಕ್ತವಾಗಿದ್ದು ಇದು ಕೂಡ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ನಿರ್ಮಾಣಗೈದದ್ದು ಎಂಬುದು ವಿದಿತ.

* **ಕೆರೆ ನೀರಾವರಿ:** ಕೆರೆ ನೀರಾವರಿ ವ್ಯವಸ್ಥೆ ದಕ್ಷಿಣ ಭಾರತದ ಭೌಗೋಳಿಕ ಸ್ಥಿತಿಗೆ ಅತ್ಯಂತ ಸೂಕ್ತ. ಮತ್ತು ಇಲ್ಲಿನ ನಾಗರೀಕತೆ ಪ್ರಾರಂಭದಿಂದಲೂ ಉತ್ತಮ ಸ್ಥಿತಿಯಲ್ಲಿರುವುದು ಕಾಣಸಿಗುವ ಅಂಶ. ವಿಜಯನಗರದ ಅರಸರು ಹೊಸ ಕೆರೆಗಳನ್ನು ನಿರ್ಮಿಸಿದ್ದಲ್ಲದೆ ಅನೇಕ ಹಳೆಯ ಕೆರೆಗಳನ್ನು ದುರಸ್ತಿಗೊಳಿಸಿದರು. ಈ ಕೆರೆಗಳು ಬಹು ಉಪಯೋಗಿಯಾಗಿದ್ದು ಸ್ಥಳೀಯರ ಕುಡಿಯುವ ನೀರಿನ ಸಮಸ್ಯೆ ಮತ್ತು ಕೃಷಿ ಚಟುವಟಿಕೆಯ ನೀರಾವರಿ ವ್ಯವಸ್ಥೆಗೆ ಬಳಕೆಯಾಗುತ್ತಿತ್ತು. ಈ ಕೆರೆಗಳಲ್ಲಿ ಮೂರು ವಿಧಗಳನ್ನು ಕಾಣಬಹುದು: 1. ನದಿ ಆಧಾರಿತ ಕೆರೆಗಳು, 2. ಮಳೆಯಾಧಾರಿತ ಕೆರೆಗಳು, ಮತ್ತು 3. ಕಾಡುತೊರೆ ಆಧಾರಿತ ಕೆರೆಗಳು.

ವಿಜಯನಗರದ ಸಾಮ್ರಾಜ್ಯದ ಉದ್ದಗಲಕ್ಕೂ ಪ್ರಜೆಗಳ ಉಪಯೋಗಕ್ಕಾಗಿ ಕೆರೆಗಳನ್ನು ನಿರ್ಮಾಣ ಮಾಡಿರುವುದಕ್ಕೆ ಅನೇಕ ಶಾಸನಗಳು ನಮಗೆ ಸಿಗುತ್ತವೆ. ಕ್ರಿ.ಶ. 1368–69ರ ಕಡಪ ಜಿಲ್ಲೆಯ ಒಂದು ಶಾಸನ ಭಾಸ್ಕರ ಬವದುರ ಎಂಬ ಹೆಸರಿನ ವಿಜಯನಗರದ ಮಾಂಡಲಿಕನೊಬ್ಬ ಅನಂತರಾಜ ಸಾಗರ ಪರುಮಾಮಿಲ ಎಂಬ ಬೃಹತ್ ಕೆರೆಯನ್ನು ಬರಪೀಡಿತ ಕಡಪ ಜಿಲ್ಲೆಯಲ್ಲಿ ನಿರ್ಮಿಸಿದ ಎಂಬ ಅಂಶವನ್ನು ಹೇಳುತ್ತದೆ. ಇದು 41.4 Km^2 ವಿಸ್ತೀರ್ಣವನ್ನು ಹೊಂದಿದ್ದು, 267 ಮೀ ಉದ್ದ, ತಳದ ಅಗಲ 45.7 ಮೀ, ಮೇಲ್ಭಾಗದ ಅಗಲ 3.7 ಮೀ ಮತ್ತು 10 ಮೀ ಉದ್ದ ಹೊಂದಿತ್ತು. ಈ ಕೆರೆಗೆ ಅಲ್ಲೇ ಸಮೀಪದಲ್ಲಿ ಹರಿಯುವ ನದಿಯ ನೀರೇ ಮೂಲ ಆಧಾರವಾಗಿತ್ತು. ಇದೇ ಕೆರೆಯ ಹತ್ತಿರ ಸಿಕ್ಕಿರುವ ಶಾಸನದಲ್ಲಿ ಒಂದು ಕೆರೆ ನಿರ್ಮಿಸಲು ಅವಶ್ಯವಿರುವ ಅಂಶಗಳು ಮತ್ತು ಅದರ ದುರಸ್ತಿಯ ಬಗೆಗೆ ವಿಸ್ತಾರವಾಗಿ ಹೀಗೆ ಹೇಳಲಾಗಿದೆ :

* ಒಂದು ಕೆರೆ ನಿರ್ಮಿಸುವ ಮುನ್ನ ಒಳ್ಳೆಯ Hydrology ಬಗೆಗೆ ಬಲ್ಲ ತಜ್ಞನಿರಬೇಕು.
* ಕೆರೆಯ ತಳಭಾಗದಲ್ಲಿ ಗಟ್ಟಿಮಣ್ಣು
* ಸಿಹಿನೀರುಯುಕ್ತ ನದಿ ಮತ್ತು ಅದರ ಕನಿಷ್ಠ ಚಲನಾ ಮಾರ್ಗ 38.6 Km. ಹೊಂದಿರಬೇಕು.
* ಅಣೆಕಟ್ಟನ್ನು ಎರಡು ಗುಡ್ಡಗಳ ನಡುವೆ ಕಟ್ಟಬೇಕು, ಅದರಲ್ಲಿ ಕಲ್ಲುಗಳು ಒಂದಕ್ಕೊಂದು ಅಚ್ಚುಕಟ್ಟಾಗಿ ಕೂಡಿರಬೇಕು ಮತ್ತು ಇದರ ಸುತ್ತ ಯಾವುದೇ ಹಣ್ಣಿನ ಮರಗಳಿರಬಾರದು.
* ಕೆರೆ ತಳದಲ್ಲಿ ವಿಸ್ತಾರವಾಗಿ ಮತ್ತು ಆಳವಾಗಿರಬೇಕು.
* ಕೆರೆಯ ಸಮೀಪ ಕಲ್ಲಿನ ಗಣಿಯಿರಬೇಕು.
* ಉತ್ತಮ ಕೌಶಲ್ಯಹೊಂದಿದ ಕೆಲಸಗಾರರಿಂದ ಕೆರೆಯು ನಿರ್ಮಾಣವಾಗಬೇಕು.

ಕೆರೆಯ ನಿರ್ವಹಣೆ ಮತ್ತು ರಕ್ಷಣೆಗೆ ಗಮನಿಸಬೇಕಾದ ಅಂಶಗಳು

* ಅಣೆಕಟ್ಟಿನಿಂದ ನೀರು ಸೋರುವಿಕೆಯನ್ನು ತಡೆಗಟ್ಟಬೇಕು.
* ಕ್ಷಾರ/ಲವಣಯುಕ್ತ ಮಣ್ಣು ಪ್ರದೇಶದಲ್ಲಿರಬಾರದು.
* ಕೆರೆಯ ಸ್ಥಳ ಎತ್ತರದ ಪ್ರದೇಶದಲ್ಲಿರಬಾರದು.
* ನೀರುಹರಿಯುವ ಮಾರ್ಗ ಸರಾಗವಾಗಿರಬೇಕು.

ವಿಜಯನಗರ ಸಾಮ್ರಾಜ್ಯದ ಉದ್ದಗಲಕ್ಕೂ ನಮಗೆ ಇಂತಹ ಅನೇಕ ಕೆರೆ ನಿರ್ಮಾಣದ ಶಾಸನಗಳು ಸಿಗುತ್ತವೆ. ಬಯಕಾರ ರಾಮಾಮಾತ್ಯನು ಅನೇಕ ಕೆರೆಗಳನ್ನು, ಅಣೆಕಟ್ಟುಗಳನ್ನು ನಿರ್ಮಿಸಿದ ಬಗೆಗೆ ಅಪಾರ ಪ್ರಮಾಣದ ಶಾಸನಗಳು ಲಭ್ಯವಿವೆ. ಹಂಪೆಯ ಶಾಸನದ ವಿವರದಂತೆ ಲಕ್ಷ್ಮೀಧರ ಮಂತ್ರಿಯ ಶೈಶವದಲ್ಲಿ ಅವನ ತಾಯಿ ಹಾಲೂಡಿಸುವಾಗ ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು ಎಂದು ಹೇಳುವ ವಿವರಗಳು ಆ ಕಾಲದ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ.

ಬಾವಿ ನೀರಾವರಿ

ವಿಜಯನಗರ ಸಾಮ್ರಾಜ್ಯದ ಪ್ರದೇಶಗಳು ಅತಿಯಾಗಿ ಅಲ್ಪಾವಧಿಯ ಮುಂಗಾರು ಮಳೆಯ ಮೇಲೆ ಅವಲಂಬಿತವಾಗಿದ್ದಿತು. ಈ ಸಮಸ್ಯೆಗೆ ಪರಿಹಾರವಾಗಿ ಜನರು ಅನೇಕ ಮಾರ್ಗೋಪಾಯಗಳನ್ನು ಅನುಸರಿಸಿದರು ಇವುಗಳಲ್ಲಿ ಪ್ರಮುಖವಾದವು ಭೂಗರ್ಭದಲ್ಲಿನ ಅಂತರ್ಜಲವನ್ನು ಬಳಸಿಕೊಳ್ಳಲು ಬಾವಿಗಳನ್ನು ತೋಡಿದುದು. ಇಂತಹ ಹಲವಾರು ಬಾವಿಗಳನ್ನು ಇಂದಿಗೂ ಕಾಣಬಹುದು. ಇದರಲ್ಲಿ ಎರಡು ತರಹದ ಬಾವಿಗಳಿದ್ದು ಒಂದು ಶಾಶ್ವತವಾದ ಬಾವಿಗಳು ಮತ್ತು ಒಣಗಿರುವ ನದಿಯ ತೀರದಲ್ಲಿ ತೋಡಲಾದ ಬಾವಿಗಳು.

ಚಿಲುಮೆಬಾವಿಗಳು

ಒಣಗಿರುವ ನದಿಯ ತೀರದಲ್ಲಿ ಬಾವಿಗಳನ್ನು ಅಗೆದು ಕಾಲುವೆಗಳ ಮೂಲಕ ಕೃಷಿ ಭೂಮಿಗೆ ನೀರನ್ನು ಹರಿಸುತ್ತಿದ್ದರು. ಇಂತಹ ಚಿಲುಮೆಗಳನ್ನು ಜಲಪರ್ಗಿಸ್ ಎಂದು ಕರೆಯುತ್ತಿದ್ದರು. ಡೊಮಿಂಗೊ ಪಯಾಸ್ ಎಂಬ ವಿದೇಶಿ ಪ್ರವಾಸಿ ಇಂತಹ ಬಾವಿಗಳನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸಿದ್ದಾನೆ. ವಿಜಯನಗರದ ಅರಸರು ಹೊಸಹೊಸ ಚಿಂತನೆಗಳಿಗೆ ಹಾಗೂ ಹೆಚ್ಚು ಕೃಷಿ ಉತ್ಪನ್ನಗಳನ್ನು ಬೆಳೆಯಲು ಉತ್ತೇಜಿಸಿರುವುದು ಕಂಡುಬಂದಿದೆ.

ನೀರಾವರಿ ವ್ಯವಸ್ಥೆಯನ್ನು ಕಾಲದಿಂದ ಕಾಲಕ್ಕೆ ಪುನರುಜ್ಜೀವಿಸಲಾಗುತ್ತಿತ್ತು

* ಅಣೆಕಟ್ಟು ಮತ್ತು ಕಾಲುವೆಗಳನ್ನು ಕಾವಲು ಕಾಯುವುದು.
* ಕೆರೆ ಮತ್ತು ಕಾಲುವೆಗಳಿಂದ ಹೂಳೆತ್ತುವುದು.
* ಕಾಲುವೆ ಮತ್ತು ನೀರೇತಗಳ ದುರಸ್ತಿ.
* ಪ್ರವಾಹದ ಕಾಲದಲ್ಲಿ ಕೆರೆ, ಕಾಲುವೆಗಳ ಕೋಡಿಯನ್ನು ಬಲಪಡಿಸಿ ರಕ್ಷಿಸುವುದು.

ವಿಜಯನಗರದ ಕಾಲದ ಗಮನಾರ್ಹ ನೀರಾವರಿ ವ್ಯವಸ್ಥೆ ನೀರೇತಗಳು ಅಥವಾ ನೀರನ್ನು ಮೇಲೆತ್ತುವ ವ್ಯವಸ್ಥೆ, ಇದರ ಪರಿಣಿತರಿಗೆ ಜಲಸೂತ್ರಧಾರ, ದಶವಿದ್ಯಾ ಚಕ್ರವರ್ತಿ ಎಂದು ಕರೆಯುತ್ತಿದ್ದರು.

ಈ ನೀರಾವರಿ ವ್ಯವಸ್ಥೆಯಿಂದಾದ ಗಮನಾರ್ಹ ಬದಲಾವಣೆಗಳು

* ನೀರನ್ನು ಹೀರಿ ಗುರುತ್ವಾಕರ್ಷಣೆಯಿಂದ ಹರಿಸುವುದು.
* ಚಿಲುಮೆ ಬಾವಿಗಳು ಮತ್ತು ಕೆರೆಗಳ ಜೋಡಣೆ ಕಾಮಗಾರಿ.
* ತೆರೆದ ಕಾಲುವೆಗಳ ನಿರ್ಮಾಣ.
* ರಾಜಧಾನಿಯಲ್ಲಿ ನೀರನ್ನು ಪೂರೈಸಲು ಮಣ್ಣಿನ ಕೊಳವೆಗಳನ್ನು ಅಳವಡಿಸಿದ್ದರು.
* ಮಳೆನೀರನ್ನು ಸಂಗ್ರಹಿಸಲು ಅನೇಕ ಪ್ರದೇಶಗಳನ್ನು ಗುರುತಿಸಲಾಗಿತ್ತು.

ಇಂತಹ ಬೃಹತ್ ಯೋಜನೆಗಳಿಂದ ಹಂಪಿ ನಗರವು ಅತ್ಯುತ್ತಮ ನೀರು ಸರಬರಾಜಿನ ವ್ಯವಸ್ಥೆಯನ್ನು ಹೊಂದಿತ್ತು. ಡೊಮಿಂಗೊ ಪಯಾಸ್ ಹೇಳುವಂತೆ ಕೃಷ್ಣದೇವರಾಯನು ನಿರ್ಮಿಸಿದ ಹೊಸ ನಗರ ನಾಗಲಾಪುರಕ್ಕೆ ನಿರಂತರವಾಗಿ ನೀರು ಪೂರೈಸಲು ಅನೇಕ ದೊಡ್ಡ ಕೆರೆಗಳನ್ನು ನಿರ್ಮಿಸಿ ಎಲ್ಲ ಕೆರೆಗಳನ್ನು ಕೊಳವೆಗಳ ಮೂಲಕ ಜೋಡಿಸುವ ಕೌಶಲವನ್ನು ಬಳಸಲಾಗಿತು. ಇದರ ನಿರ್ಮಾಣ ಕಾರ್ಯಕ್ಕೆ ಪೋರ್ಚುಗೀಸರ ತಾಂತ್ರಿಕ ಸಹಾಯವನ್ನು ಪಡೆದಿತ್ತು.

ವಿಜಯನಗರ ಸಾಮ್ರಾಜ್ಯ ತನ್ನ ಉತ್ತುಂಗ ಸ್ಥಿತಿಯಲ್ಲಿ ದಕ್ಷಿಣ ಭಾರತವನ್ನು ಎರಡೂವರೆ ಶತಮಾನಗಳ ಕಾಲ ಆಳ್ವಿಕೆ ನಡೆಸಿತು. ಈ ಸಾಮ್ರಾಜ್ಯದ ಪ್ರಮುಖ ರಾಜರುಗಳಾದ ದೇವರಾಯ ಮತ್ತು ಕೃಷ್ಣದೇವ ರಾಯರುಗಳು ತುಂಗಭದ್ರಾ ನದಿಗೆ ಅನೇಕ ನೀರಾವರಿ ಯೋಜನೆಗಳನ್ನು ರೂಪಿಸಿ ಹೆಚ್ಚು ಪ್ರದೇಶವನ್ನು ಕೃಷಿ ಮತ್ತು ವಸತಿಗೆ ಸೂಕ್ತವಾಗುವಂತೆ ಮಾಡಿದ್ದರು ಮತ್ತು ರಾಜಧಾನಿಗೆ ನಿರಂತರ ನೀರು ಸರಬರಾಜಾಗುವ ವ್ಯವಸ್ಥೆಯನ್ನು ನಿರ್ಮಿಸಿದ್ದರು.

ಇಂದು ಈ ನೀರಾವರಿ ವ್ಯವಸ್ಥೆಗಳು ಶಿಥಿಲ ಸ್ಥಿತಿಯಲ್ಲಿದೆ. ಆದರೆ 1565ರ ರಕ್ಕಸತಂಗಡಿ ಯುದ್ಧದ ನಂತರ ಮುಸ್ಲಿಮರು ಅನೇಕ ಸ್ಮಾರಕಗಳನ್ನು, ದೇವಾಲಯಗಳನ್ನು, ಇತರ ಕಟ್ಟಡಗಳನ್ನು ಪಾಳುಗೆಡವಿದರು. ಆದರೆ ನೀರಾವರಿ ವ್ಯವಸ್ಥೆಗೆ ಯಾವ ಹಾನಿಯನ್ನು ಮಾಡಲಿಲ್ಲ. ಇವುಗಳಲ್ಲಿ ರಾಯ ಮತ್ತು ಬಸವಣ್ಣ ಕಾಲುವೆಯು ಹೊಸಪೇಟೆ ಮತ್ತು ಕಮಲಾಪುರದ ನೀರಾವರಿಗೆ ಇಂದಿಗೂ ಕಾರ್ಯ ನಿರ್ವಹಿಸುತ್ತಿದ್ದು ಬಳಕೆಯಲ್ಲಿದೆ. ಇದು ತುಂಗಭದ್ರಾ ನದಿಯ ಪಕ್ಕದಲ್ಲಿದೆ.

ಕಾಲುವೆಗಳ ವಿನ್ಯಾಸ

ಕಾಲುವೆಗಳನ್ನು ವಿನ್ಯಾಸ ಮಾಡುವಾಗ ನೈಸರ್ಗಿಕ ಭೂಪ್ರದೇಶ ಲಕ್ಷಣಗಳನ್ನು ಬಳಸಿಕೊಂಡು ನಿರ್ಮಾಣಮಾಡುತ್ತಿದ್ದರು. ಹೀಗೆ ಮಾಡುವುದರಿಂದ ಹಣದ ಉಳಿತಾಯ ಮತ್ತು ಭೂಪ್ರದೇಶದ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮವಾಗದೆ ದೀರ್ಘಕಾಲ ಬಾಳಿಕೆ ಬರುತ್ತಿತ್ತು. ಪ್ರಜೆಗಳು ಸುಖವಾಗಿರಬೇಕೆಂದು ಕಾಲುವೆಗಳನ್ನು ತೋಡಿಸುತ್ತಿದ್ದರು. ಇದರ ವಿವರ ಜಲಸೂತ್ರದ ಸಿಂಗಾಯ ಭಟ್ಟನ ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆ ಗೌರೀಬಿದನೂರು ತಾಲ್ಲೂಕು ಶಾಸನದಲ್ಲಿ ಉಕ್ತವಾಗಿದೆ.

ವಿಜಯನಗರದ ಅರಸರು ನೀರಾವರಿ ಕೃಷಿಗೆ ಬೇಕಿದ್ದ ಎಲ್ಲಾ ಸಂಪನ್ಮೂಲಗಳನ್ನು ಬಳಸಿ ಗರಿಷ್ಠ ಪ್ರಮಾಣದಲ್ಲಿ ನೀರನ್ನು ಸಂಗ್ರಹಿಸುವ ಎಲ್ಲಾ ಪ್ರಯತ್ನವನ್ನೂ ಮಾಡಿದ್ದರು.

ಈ ಬರಹದಲ್ಲಿ ಕಿರಿದಾಗಿ ಸಮೀಕ್ಷಾತ್ಮಕವಾಗಿ ವಿಜಯನಗರ ಸಾಮ್ರಾಜ್ಯದ ನೀರಾವರಿ ಮತ್ತು ಕೃಷಿ ವ್ಯವಸ್ಥೆಯ ಬಗೆಗೆ ಹೇಳಲಾಗಿದೆ. ಈ ವಿಷಯದ ಬಗೆಗೆ ಈಗಾಗಲೇ ಹಲವಾರು ಬರಹಗಳು ಪ್ರಕಟವಾಗಿವೆಯಾದರೂ ಪೂರ್ಣಪ್ರಮಾಣದ ಅಧ್ಯಯನಗಳು ನಡೆದಿಲ್ಲ. ಶಾಸನಗಳಲ್ಲಿನ ಮಾಹಿತಿಗಳನ್ನು ಸಂಶೋಧಕರು ತಕ್ಕ ಮಟ್ಟಿಗೆ ಬಳಸಿಕೊಂಡಿರುವರಾದರೂ ಸಾಹಿತ್ಯಕ ಮಾಹಿತಿಗಳನ್ನು ಸಮರ್ಪಕವಾಗಿ ಇದುವರೆಗೂ ಬಳಸಿಕೊಂಡಿರುವುದಿಲ್ಲ. ಶಾಸನಗಳು, ಸಾಹಿತ್ಯ, ಪುರಾತತ್ತ್ವೀಯ ಆಕರಗಳನ್ನು, ವಿದೇಶಿ ಪ್ರವಾಸಿಗಳ ಬರಹಗಳನ್ನು ಪೂರ್ಣವಾಗಿ ಬಳಸಿಕೊಂಡಲ್ಲಿ ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ ಮತ್ತು ಕೃಷಿ ಚಟುವಟಿಕೆಗಳ ಬಗೆಗೆ ಹೆಚ್ಚಿನ ಅಧ್ಯಯನ ಸಾಧ್ಯವಾಗುತ್ತದೆ. ಈ ಅಧ್ಯಯನವು ಪ್ರತಿಯೊಬ್ಬ ರಾಜನ ಕಾಲಾನುಸಾರಿಯಾಗಿ ನಡೆಯುವುದು ಉತ್ತಮ. ಇದರಿಂದ ಆ ಕಾಲದ ಧೋರಣೆಗಳು, ಸೋಲು-ಗೆಲುವುಗಳು, ತಂತ್ರಜ್ಞಾನ ಇತ್ಯಾದಿ ವಿವರಗಳು ತಿಳಿದುಬರುತ್ತವೆ. ಇದು ಆದಷ್ಟು ಜಾಗೃತೆಯಾಗಿ ಕೈಗೂಡಬೇಕು.

ಆಕರಸೂಚಿ

1. Kotraiah.C.T.M, *Irrigation System under Vijayanagara Empire,* Directorate of Archaeology & Museums , Governemnt of Karnataka, Mysore, 1995.
2. Dominic J. Davison-Jenkins, *The Irrigation and Water Supply Systems of Vijayanagara,* V.5, 1997.
3. *Water management and agriculture in the Palar and the Parambikulam Aliyar systems in Tamil Nadu,* Madras Institute of Development Studies, Chennai, 2004.
4. Translated by C.T.M Kotraiah, Edited by Anna L. Dallapiccola with a Foreword by John M. Fritz , King, *Court and Capital: An Anthology of Kannada Literary Sources From the Vijayanagara Period, V. 9,* American Institute of Indian Studies, 2003.
5. John M. Fritz and George Michell (Ed), *New Light on Hampi : Recent Research at Vijayanagara,* Marg Publications, 2001.
6. George Michell, (Ed), *Vijayanagara : Splendour in Ruins,* Mapin Publishing Pvt. Ltd, Usmanpura, Ahmedabad, 2008.
7. Ramachandraiya Oruganti, *Studies on Krishnadevaraya of Vijayanagara,* Andhra University, Waltair, 1953.
8. Robert Sewell, *A Forgotten Empire (Vijayanagar),* Swan Sonnenschein & Co., Ltd, 1900.

9. P. Shanmugam and Srinivasan (Ed), *Recent Advances in Vijayanagara Studies,* New Era Publications, 2006.
10. Kathleen D Morrison, *Fields of Victory Vijayanagara & the course of Intensification,* Munshiram Manoharlal Publishers Pvt. Ltd., 2000.
11. M.H. Rama Sharma, *The History of the Vijayanagar Empire Beginnings & Expansion (1308-1569).* V. 1&2, Popular Prakashan Private Limited, Bombay, 1978.
12. Subhadra Sen Gupta, *Hampi : Discover the Splendours of Vijayanagar,* Niyogi Books, New Delhi, 2010.
13. S.Krishnaswami Aiyangar, *Vijayanagara History and Legacy,* Aryan Books International, 2000.
14. K.R. Basava Raja (Ed), *The Vijayanagara Urbanity,* National Symposium on Urban Development, Hospet, 1978.
15. Venkatesham, *South Indian Feudatory Dynasties,* Sharada Publishing House, Delhi, 2000.
16. Bangalore Suryanarain Row, *A History of Vijayanagar The Never to be Forgotten Empire,* Jagadish Babu Publications, Bangalore, 1905.
17. Balasundaran A.K., *Relics of Vijayanagar or Never to be forgotten ruins as a relics of the magnificent Hindi Empire of South India in Medieval times in picture,* Rayalseem Krishnaraya Publishing Work, Anantapur, 1948.
18. Devakunjari. D., *Hampi,* A.S.I,1971.
19. Danvers F.C., *The Portuguese in India, being a history of the rise and decline of their eastern empire*, Vol-2, W.H.Allen, London, 1896, Reprint CESS, London, 1966.
19. Gopal.B.R.(Ed): *Vijayanagar Inscriptions,* Vol-1&2, Directorate of Archaeology & Museums, Governemnt of Karnataka, Mysore, 1986.
20. Longhrust A.H., *Hampi Ruins described and Illustrated,* Calcutta, 1917.
21. Dakshit G.S.(Ed), *Early Vijaynagara Studies in its History & Culture,* B.M.Sri. Prathistana, Bangalore, 1988.
22. Hayavadana Rao C., *Mysore Gazetter,* Vol-1, Part -2, 1930.
23. *Mysore Archaeological Report 1912-13,* 1919, 1936-37.
24. P.B. Desai, *History of Vijayanagar Empire,* 1936.
25. Henry Heras, *The Aravidu Dynasty of Vijayanagara,* 1927.
26. Saletore B.A., *Social and Political Life in the Vijayanagara Empire,* 1930.
27 B.S. Bhavanishankar, *Irrigation systems in Vijaynagar empire times and Irrigation structures in the old Mysore state,* International History Seminar on Irrigation and Drainage, Theran, Iran,2007.
28. ವಸುಂಧರ ಫಿಲಿಯೋಜ಼, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, 1980.
29. ಜಿ.ಎಸ್.ದೀಕ್ಷಿತ್ ಮತ್ತು ಎಂ.ವಿ.ವಿಶ್ವೇಶ್ವರ, ಸಂಗಮರ ಕಾಲದ ವಿಜಯನಗರ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, 1991.

30. ಷೇಕ್ ಅಲಿ ಮತ್ತು ಪ್ರೊ॥ ಎಸ್.ಶಿವಣ್ಣ (ಸಂ), *ಕರ್ನಾಟಕ ಚರಿತ್ರೆ, ಸಂಪುಟ–3*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997.

31. ಬಿ.ಎ. ವಿವೇಕ್ ರೈ, *ಪ್ರವಾಸಿ ಕಂಡ ವಿಜಯನಗರ*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005.

32. ದೇವರಕೊಂಡಾರೆಡ್ಡಿ (ಸಂ), *ಹಂಪಿ ಸಂಪುಟ, ಕಲೆ, ಕ್ರೀಡೆ* ಮತ್ತು ಕೌಶಲ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.

33. ವಿಜಯನಗರ ಅಧ್ಯಯನ, ಸಂಪುಟಗಳು 1–15, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 1999–2010.

34. ಜಿ.ಎಸ್. ದೀಕ್ಷಿತ್, ಕೆರೆಗಳ ಬಗ್ಗೆ ಐತಿಹಾಸಿಕ ಸಂಶೋಧನೆಯ ಆವಶ್ಯಕತೆ, ಮಧ್ಯಕಾಲೀನ ಕರ್ನಾಟಕ [ಜಿ.ಎಸ್. ದೀಕ್ಷಿತ್ ಅವರ ಕನ್ನಡ ಲೇಖನಗಳ ಸಂಕಲನ, (ಸಂ) ಶ್ರೀನಿವಾಸ ಹಾವನೂರ], ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು–2008, ಪುಟ 223–227.

35. ಜಿ.ಎಸ್. ದೀಕ್ಷಿತ್, *ಕೆರೆಗಳು : ಚಾರಿತ್ರಿಕ ಅಂಶಗಳು*, ಮಧ್ಯಕಾಲೀನ *ಕರ್ನಾಟಕ* [ಜಿ.ಎಸ್. ದೀಕ್ಷಿತ್ ಅವರ ಕನ್ನಡ ಲೇಖನಗಳ ಸಂಕಲನ, (ಸಂ) ಶ್ರೀನಿವಾಸ ಹಾವನೂರ], ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು–2008, ಪುಟ 229–235.

36. ಜಿ.ಎಸ್. ದೀಕ್ಷಿತ್, ಧಾರವಾಡದಲ್ಲಿ ನಡೆದ ಹತ್ತನೆಯ ಸಮ್ಮೇಳನ ಅಧ್ಯಕ್ಷರ ಭಾಷಣ [=ಕೆರೆಗಳ ಬಗೆಗೆ], ಇತಿಹಾಸ ದರ್ಶನ, ಸಂಪುಟ–12, (1997), ಪುಟ IX-XIII ; ಮಧ್ಯಕಾಲೀನ ಕರ್ನಾಟಕ [ಜಿ.ಎಸ್. ದೀಕ್ಷಿತ್ ಅವರ ಕನ್ನಡ ಲೇಖನಗಳ ಸಂಕಲನ, (ಸಂ) ಶ್ರೀನಿವಾಸ ಹಾವನೂರ], ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು–2008, ಪುಟ 237–245.

21

ಗಂಗಾವತಿ ತಾಲ್ಲೂಕಿನಲ್ಲಿ ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ

ಡಾ॥ ಶರಣಬಸಪ್ಪ ಕೋಲ್ಕಾರ

ನೀರು ಮಾನವನ ಮೂಲಭೂತ ಆವಶ್ಯಕತೆಗಳಲ್ಲಿ ಒಂದು. ನೀರಿಲ್ಲದೆ ಮನುಷ್ಯ, ಅಷ್ಟೇ ಏಕೆ, ಇಡೀ ಜೀವ ಸಂಕುಲ ಬದುಕಲಾರದು. ಹಾಗಾಗಿ ನೀರು ಭೂಮಿಯ ಮೇಲಿನ ಅತ್ಯಮೂಲ್ಯ ಸಂಪನ್ಮೂಲ. ನೀರು ಕೇವಲ ಮನುಷ್ಯ ಹಾಗೂ ಪ್ರಾಣಿ, ಪಕ್ಷಿ ಸಂಕುಲಕ್ಕೆ ಮಾತ್ರವಲ್ಲ ಸಸ್ಯಸಂಕುಲಕ್ಕೂ ಜೀವ ಸಂಜೀವಿನಿ. ಹಾಗಾಗಿ ಮನುಷ್ಯ ಭೂಮಿ ಮೇಲೆ ಕಾಣಿಸಿಕೊಂಡಾಗಿನಿಂದಲೂ ಅವನು ಸದಾ ನೀರಿನ ಮೂಲದ ನೆಲೆಗಳಲ್ಲೇ ವಾಸಿಸಲಾರಂಭಿಸಿದ. ಕ್ರಮೇಣ ನಾಗರಿಕತೆ ವಿಕಸಿಸಿದಂತೆ ಆದಿಮಾನವ ಬೇಟೆ ಸಂಸ್ಕೃತಿಯ ಜೊತೆಗೆ ಕೃಷಿ ಸಂಸ್ಕೃತಿಗೆ ಕಾಲಿರಿಸಿದಾಗ ಅವನಿಗೆ ನೀರಿನ ಆವಶ್ಯಕತೆ ಮತ್ತು ಮಹತ್ವ ಮತ್ತಷ್ಟು ಹೆಚ್ಚಾಯಿತು. ಮಳೆಗಾಲದಲ್ಲಿ ತನ್ನ ಸುತ್ತಮುತ್ತಲ ಪ್ರಕೃತಿ ಹಚ್ಚ ಹಸುರಿನಿಂದ ನಳನಳಿಸುವುದನ್ನು ಕಂಡುಕೊಂಡ. ತಾನು ಉತ್ತಿ ಬಿತ್ತಿದ ಬೆಳೆ ಹುಲುಸಾಗಿ ಬೆಳೆದು ಫಲವ ನೀಡಲು ನೀರು ಅವಶ್ಯವೆಂಬುದನ್ನು ಮನಗಾಣುತ್ತಾನೆ. ಬೆಳೆಯ ಬೆಳೆಯಲು ಈಗ ಅವನು ಬೆಟ್ಟದಿಂದ ಇಳಿದು ಬಯಲು ಪ್ರದೇಶಕ್ಕೆ ಬರುವುದು ಅನಿವಾರ್ಯವಾಯಿತು. ಅಲ್ಲಿ ಸುರಿಯುತ್ತಿದ್ದ ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು ಯೋಚಿಸಿದ. ಹರಿವ ಹಳ್ಳಗಳಿಗೆ ಒಡ್ಡುಗಳನ್ನು ಹಾಕಿಯೋ, ಇಲ್ಲವೇ ಗುಂಡಿಗಳನ್ನು ತೋಡಿ ನೀರನ್ನು ನಿಲ್ಲಿಸಿದ. ಹೀಗೆ ಸಂಗ್ರಹಿಸಿದ ನೀರು ಅವನ ದಿನಬಳಕೆಯ ಜೊತೆಗೆ ಕೃಷಿಗೂ ಉಪಯೋಗವಾಯಿತು. ನೀರಾವರಿ ಪದ್ಧತಿ ಮೊದಲಾಯಿತು.

ರಾಜಸತ್ತೆ ಪ್ರಾರಂಭಗೊಂಡ ಮೇಲೆ ಜನರಿಗೆ, ಪ್ರಾಣಿಗಳಿಗೆ ಮತ್ತು ಕೃಷಿಗೆ ನೀರಿನ ವ್ಯವಸ್ಥೆಯನ್ನು ಒದಗಿಸುವುದು ಅರಸರ ಒಂದು ಸಾಮಾಜಿಕ ಜವಾಬ್ದಾರಿಯಾಯಿತು. ಕೆರೆಗಳು, ಬಾವಿಗಳು, ಕೊಳಗಳು, ಕಟ್ಟೆಗಳು, ಕಾಲುವೆಗಳು, ಮುಂತಾದ ರೂಪಗಳಲ್ಲಿ ಜಲಸಂಗ್ರಹಣೆ ವಿಧಾನಗಳು ರೂಢಿಗೊಂಡವು. ಭಾರತ ದೇಶದ ಪ್ರಾರಂಭಿಕ ಅರಸರ ಕಾಲಗಳಲ್ಲೇ ಇಂಥ ಪ್ರಯತ್ನಗಳು ನಡೆದಿರುವುದಕ್ಕೆ ಸಾಕಷ್ಟು ಸಾಕ್ಷಿಗಳಿವೆ. ದಕ್ಷಿಣ ಭಾರತವನ್ನು ಬಹುಮಟ್ಟಿಗೆ ಒಳಗೊಂಡಿದ್ದ ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ನೀರಾವರಿ ಪ್ರಮುಖ ಆದ್ಯತಾ ಕ್ಷೇತ್ರಗಳಲ್ಲಿ ಒಂದಾಗಿದ್ದಿತು. ಈ ಅರಸರು ನೀರಾವರಿಗೆ ನೀಡಿದ್ದ ಆದ್ಯತೆ ಇಂದಿಗೂ ಅಚ್ಚರಿಯನ್ನುಂಟು ಮಾಡುವಂತದ್ದು. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ವಿಜಯನಗರ ಪಟ್ಟಣಸಹಿತ ಇಡೀ ಹಂಪಿ ಪ್ರದೇಶದಲ್ಲಿ ಇಂದಿಗೂ ಬಳಕೆಯಲ್ಲಿರುವ ವಿಜಯನಗರ ಕಾಲದ ನೀರಾವರಿಗಿದ್ದ ವ್ಯವಸ್ಥೆಯ ಮೂಲಗಳು ಆ ಕಾಲದಲ್ಲಿ ನೀರಾವರಿ ಮಹತ್ವವನ್ನು ಬಿಂಬಿಸುತ್ತವೆ. ಹಂಪಿಸಹಿತ ಸುತ್ತಲಿನ ಕಮಲಾಪುರ, ಹೊಸಪೇಟೆ, ಕಂಪ್ಲಿ, ರಾಮಸಾಗರ, ಹಿರೇಜಂತಕಲ್, ಹುಲಿಗಿ ಮತ್ತು ಆನೆಗೊಂದಿ ಪ್ರದೇಶಗಳಲ್ಲಿ ವಿಜಯನಗರ ಕಾಲದ ನೀರಾವರಿಯ ಕಾಲುವೆಗಳ ಜಾಲವನ್ನು ಕಾಣಬಹುದು. ಈ ಸ್ಥಳಗಳಲ್ಲಿ ಆನೆಗೊಂದಿಗೆ ಬಹು ವಿಶಿಷ್ಟವಾದ ಮಹತ್ವವಿದೆ. ಅದು ವಿಜಯನಗರದ ಮೊದಲ ರಾಜಧಾನಿಯಾಗಿದ್ದಿತಲ್ಲದೇ ವಿಜಯನಗರ ಪತನಾನಂತರವೂ ಅರವೀಡು ವಂಶಸ್ಥರ

ಆಡಳಿತ ಕೇಂದ್ರವಾಗಿ ವಿಜಯನಗರ ರಾಜಸತ್ತೆಯನ್ನು ಪೋಷಿಸಿದ ಕೀರ್ತಿಗೆ ಬಾಧ್ಯವಾಗಿದೆ. ಹಾಗಾಗಿ ಆನೆಗುಂದಿ ಪ್ರದೇಶದ ನೀರಾವರಿ ವ್ಯವಸ್ಥೆಯನ್ನು ವಿಜಯನಗರ ಕಾಲದ ನೀರಾವರಿ ಹಾಗೂ ವಿಜಯನಗರೋತ್ತರ ಕಾಲದ ನೀರಾವರಿ ಎಂಬ ಎರಡು ಕಾಲ ಘಟ್ಟಗಳಲ್ಲಿ ಗುರುತಿಸಬಹುದು.

ವಿಜಯನಗರ ಕಾಲದಲ್ಲಿ ಗಂಗಾವತಿ ಪ್ರದೇಶದ ನೀರಾವರಿ ವ್ಯವಸ್ಥೆ

ಕ್ರಿ.ಶ. 1336ರಲ್ಲಿ ವಿಜಯನಗರ ಸ್ಥಾಪನೆಯಾದಾಗ ಆನೆಗೊಂದಿ ಅದರ ಮೊದಲ ರಾಜಧಾನಿಯಾಯಿತು. ವಿದೇಶಿ ಯಾತ್ರಿಕ ಫೆರ್ನೋ ನ್ಯೂನಿಜ್ ಆನೆಗೊಂದಿಯನ್ನು ವಿಜಯನಗರದ ಮಾತೃಸ್ಥಾನವೆಂದು ಹೇಳಿದ್ದಾನೆ. ವಿಜಯನಗರದ ಮೊದಲ ದೊರೆಯಾದ ಒಂದನೇ ಹರಿಹರನು ಆನೆಗೊಂದಿಯಿಂದಲೇ ಆಡಳಿತ ನಡೆಸುತ್ತಾನೆ. ಇವನ ನಂತರ ಬಂದ ಒಂದನೇ ಬುಕ್ಕನು ರಾಜಕೀಯ ಹಾಗೂ ಭೌಗೋಳಿಕ ಕಾರಣಗಳಿಂದ ರಾಜಧಾನಿಯನ್ನು ಆನೆಗೊಂದಿಯಿಂದ ಹಂಪಿ ಬಳಿ ನಿರ್ಮಿಸಿದ 'ವಿಜಯನಗರ' ಎಂಬ ನೂತನ ಪಟ್ಟಣಕ್ಕೆ ವರ್ಗಾಯಿಸಿದನು.

ತದನಂತರ ಆನೆಗೊಂದಿ ವಿಜಯನಗರದ ಹೊರ ಸೇನಾ ಠಾಣ್ಯವಾಯಿತು. ಇಲ್ಲಿ ರಾಜಕೀಯ ಖೈದಿಗಳನ್ನು ಇಡಲು ಒಂದು ಸೆರೆಮನೆಯನ್ನು ಸ್ಥಾಪಿಸಲಾಯಿತು. ಬೆಂಗಳೂರಿನ ಸಂಸ್ಥಾಪಕ ಯಲಹಂಕ ನಾಡಪ್ರಭು ಕೆಂಪೇಗೌಡ ಹಾಗೂ ಕೃಷ್ಣದೇವರಾಯನ ಮಂತ್ರಿ ಸಾಳ್ವ ತಿಮ್ಮ ಹಾಗೂ ಅವನ ಮಕ್ಕಳು ಅಪರಾಧಕ್ಕಾಗಿ ಶಿಕ್ಷೆಗೊಳಗಾದಾಗ ಆನೆಗೊಂದಿಯ ಸೆರೆಮನೆಯಲ್ಲಿಯೇ ಬಂಧನದಲ್ಲಿದ್ದರು.

ವಿಜಯನಗರದರಸರು ವಿಜಯನಗರ ಪಟ್ಟಣದ ಸುತ್ತಮುತ್ತಲಿನಂತೆ ಆನೆಗೊಂದಿ ಪ್ರದೇಶವನ್ನು ನೀರಾವರಿ ಸೌಲಭ್ಯಕ್ಕೆ ಒಳಪಡಿಸಿದರು. ಇಲ್ಲಿ ಪ್ರಧಾನವಾಗಿ ಅಣೆಕಟ್ಟೆಗಳನ್ನು ಮತ್ತು ಕೆರೆಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ತುಂಗಭದ್ರಾ ನದಿಗೆ ಆನೆಗೊಂದಿ ಪ್ರದೇಶವು ಎಡದಂಡೆಗೆ ಬರುತ್ತದೆ. ತುಂಗಭದ್ರಾ ಎಡದಂಡೆಯಲ್ಲಿ ನಿರ್ಮಿಸಿರುವ ಆನೆಗೊಂದಿ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಅಣೆಕಟ್ಟೆಗಳು ಇಂತಿವೆ.

ಅಣೆಕಟ್ಟುಗಳು

ಕೋರಗಲ್ಲು ಅಣೆಕಟ್ಟು : ಬಲದಂಡೆಯ ವಲ್ಲಭಾಪುರ ಅಣೆಕಟ್ಟೆಯ ಎಡ ಭಾಗದ ಈ ಅಣೆಕಟ್ಟೆಗೆ ಕೋರಗಲ್ಲು ಕಟ್ಟೆ ಎಂದು ಹೆಸರು. ಇದನ್ನು ಕ್ರಿ.ಶ. 1521 ರಲ್ಲಿ ನಿರ್ಮಿಸಲಾಯಿತು. ಸದ್ಯಕ್ಕೆ ಈ ಅಣೆಕಟ್ಟು ತುಂಗಭದ್ರಾ ಜಲಾಶಯದಲ್ಲಿ ಮುಳುಗಡೆಯಾಗಿದೆ.

ಹುಲಗಿ ಅಣೆಕಟ್ಟು : ತುಂಗಭದ್ರಾ ನದಿಯಲ್ಲಿ ಸುಮಾರು 4000 ಅಡಿಗಳಷ್ಟು ಉದ್ದವಾಗಿ ಈ ಕಟ್ಟೆಯನ್ನು ಕಟ್ಟಲಾಗಿದೆ. ಈ ಕಟ್ಟೆಯಿಂದ ನಿರ್ಮಿಸಿರುವ ಕಾಲುವೆಗೆ ಹುಲಗಿ ಕಾಲುವೆ ಎಂದು ಕರೆಯುತ್ತಾರೆ. ಹುಲಗಿ, ಅಗಳಕೇರಿ ಗ್ರಾಮಗಳ ಸುಮಾರು 655 ಎಕರೆ ಜಮೀನಿಗೆ ಇದು ನೀರನ್ನು ಒದಗಿಸುತ್ತದೆ.

ಶಿವಪುರ ಅಣೆಕಟ್ಟು : ಕೊಪ್ಪಳ ತಾಲೂಕಿನ ಶಿವಪುರದ ಹತ್ತಿರ ನದಿಯಲ್ಲಿ ಈ ಕಟ್ಟೆಯನ್ನು ನಿರ್ಮಿಸಲಾಗಿದೆ. ಈ ಅಣೆಕಟ್ಟೆಯಿಂದ ಹೊರಡುವ ಶಿವಪುರ ಕಾಲುವೆಯು ಒಂಬತ್ತು ಮೈಲುಗಳು ಹರಿದು 667 ಎಕರೆ ಜಮೀನಿಗೆ ನೀರನ್ನೊದಗಿಸುತ್ತದೆ.

ಸಣಾಪುರ ಅಣೆಕಟ್ಟು : ಗಂಗಾವತಿ ತಾಲ್ಲೂಕಿನ ಸಾಣಾಪುರದ ಹತ್ತಿರ ನದಿಯ ಎಡಬದಿಯ ಶಾಖೆಗೆ ಇದನ್ನು ನಿರ್ಮಿಸಲಾಗಿದೆ. ಇದರ ಕಾಲುವೆಯನ್ನು ಆನೆಗೊಂದಿ ಕಾಲುವೆ ಎಂದು ಕರೆಯುತ್ತಾರೆ. ಈ ಕಾಲುವೆಯು ಸುಮಾರು ಹನ್ನೆರಡು ಮೈಲುಗಳವರೆಗೆ ಹರಿದು ಸಾಣಾಪುರ, ವಿರುಪಾಪುರಗಡ್ಡೆ, ಹನುಮನಹಳ್ಳಿ, ಅಂಜನಹಳ್ಳಿ, ಆನೆಗೊಂದಿ, ರಾಮದುರ್ಗ, ಬಸವನದುರ್ಗ, ಕೃಷ್ಣಾಪುರ, ಸಂಗಾಪುರ, ಸಿಂಗನಗುಂಡು ಮತ್ತು ರಾಜಾಪುರಗಳ 2220 ಎಕರೆ ಭೂಮಿಗೆ ನೀರನ್ನು ಒದಗಿಸುತ್ತದೆ. ಎಡದಂಡೆ ಅಣೆಕಟ್ಟೆಗಳಲ್ಲಿ ಇದು ಮುಖ್ಯವಾದುದು.

ಹಿರೇಜಂತಕಲ್ ಅಣೆಕಟ್ಟು : ನದಿಯ ಬಲದಂಡೆಯ ರಾಮಸಾಗರ ಅಣೆಕಟ್ಟೆಯ ಎಡದಂಡೆಯ ಭಾಗವೇ ಇದು. ಈ ಅಣೆಕಟ್ಟೆಗೆ 'ಮೋತಿಕಟ್ಟೆ' ಎಂತಲೂ ಕರೆಯುತ್ತಾರೆ. ಇಲ್ಲಿಂದ ಹೊರಡುವ ಕಾಲುವೆಯನ್ನು ಮೇಲ್ಮಟ್ಟದ ಕಾಲುವೆ ಎಂದು ಕರೆಯುತ್ತಾರೆ. ಈ ಕಾಲುವೆಯು ಹಿರೇಜಂತಕಲ್, ಹೊಸಳ್ಳಿ ಹಾಗೂ ಅಚಲಾಪುರ ಗ್ರಾಮಗಳ ಜಮೀನುಗಳಿಗೆ ನೀರನ್ನು ಒದಗಿಸುತ್ತದೆ.

ಚಿಕ್ಕಜಂತಕಲ್ ಅಣೆಕಟ್ಟು : ಇದನ್ನು ಹಿರೇಜಂತ್‌ಗಲ್ ಬಳಿಯ ದೇವಘಾಟ ಎಂಬ ಸ್ಥಳದ ಹತ್ತಿರ ನಿರ್ಮಿಸಲಾಗಿದೆ. ಈ ಕಟ್ಟೆಯಿಂದ ಹೊರಡುವ ಕಾಲುವೆಯನ್ನು ಕೆಳಮಟ್ಟದ ಕಾಲುವೆ ಎಂದು ಕರೆಯುತ್ತಾರೆ. ಈ ಕಾಲುವೆಯು ಚಿಕ್ಕಜಂತಗಲ್, ಅಯೋಧ್ಯಾ ಹಾಗೂ ಢಣಾಪುರ ಗ್ರಾಮಗಳ ಜಮೀನುಗಳಿಗೆ ನೀರನ್ನು ಒದಗಿಸುತ್ತದೆ. ಬೆನ್ನೂರಿನ ಬಸವನ ಅಣೆಕಟ್ಟು ಎಡದಂಡೆಯ ಕೊನೆಯ ಅಣೆಕಟ್ಟಾಗಿದೆ. ಇದರ ಕಾಲುವೆಗಳು ಪೂರ್ಣ ನಿರ್ಮಾಣವಾಗಿಲ್ಲ. ವಿಜಯನಗರ ಕಾಲದ ಈ ಅಣೆಕಟ್ಟೆಗಳು ಮತ್ತು ಕಾಲುವೆಗಳು ಇಂದಿಗೂ ಬಳಕೆಯಲ್ಲಿದ್ದು, ಆ ಕಾಲದ ನಿರ್ಮಾಣ, ತಾಂತ್ರಿಕ ಕೌಶಲಕ್ಕೆ ಸಾಕ್ಷಿಯಾಗಿವೆ.

ಕೆರೆಗಳು : ಆನೆಗೊಂದಿ ಪ್ರದೇಶದಲ್ಲಿ ಅಣೆಕಟ್ಟುಗಳು ನೀರಾವರಿಯ ಪ್ರಧಾನ ಮೂಲಗಳಾಗಿದ್ದರೂ, ಕಾಲುವೆಗಿಂತ ಮೇಲ್ಮಟ್ಟದ ಜಮೀನುಗಳಿಗೆ ನೀರನ್ನು ಒದಗಿಸಲು ವಿಜಯನಗರದ ಅರಸರು ಅಲ್ಲಲ್ಲಿ ಕೆರೆಗಳನ್ನು ನಿರ್ಮಿಸಿ ನೀರಾವರಿ ಪ್ರದೇಶವನ್ನು ವಿಸ್ತೃತಗೊಳಿಸಿದರು. ಆನೆಗೊಂದಿ ಭಾಗದ ಪ್ರಧಾನ ಕೆರೆಗಳ ವಿವರ ಇಂತಿದೆ.

ಚಿಕ್ಕಬೆಣಕಲ್ ಕೆರೆ : ಗಂಗಾವತಿ ತಾಲೂಕಿನ ಚಿಕ್ಕಬೆಣಕಲ್ ಗ್ರಾಮದ ದಕ್ಷಿಣ ದಿಕ್ಕಿನಲ್ಲಿ ಬೆಟ್ಟಗಳ ಅಂಚಿಗೆ ಹೊಂದಿಕೊಂಡಂತೆ ಈ ಕೆರೆಯನ್ನು ನಿರ್ಮಿಸಲಾಗಿದೆ. ಇದು ವಿಶಾಲವಾದ ಕೆರೆಯಾಗಿದ್ದು 150 ಎಕರೆ ವಿಸ್ತಾರದಲ್ಲಿದೆ. 45 ಅಡಿ ಆಳವನ್ನು ಹೊಂದಿರುವ ಈ ಕೆರೆಗೆ ಸುತ್ತಲಿನ ಗುಡ್ಡದ ಕಣಿವೆಗಳಿಂದ ನೀರು ಸಂಗ್ರಹವಾಗುತ್ತದೆ. ಕೆರೆಯ ಕೋಡಿಯ ಭಾಗವು ಪಶ್ಚಿಮ ದಿಕ್ಕಿನಲ್ಲಿದೆ. ಕೆರೆಯ ಬದಿಯ ಗುಂಡಿನಲ್ಲಿ ನಾಲ್ಕು ಸಾಲಿನ ಅಪೂರ್ಣ ಶಾಸನವಿದ್ದು,

> **ಸ್ವಸ್ತಿ ಶ್ರೀ ಜಯಾಭ್ಯುದಯ ಶಕವರುಷ 1262ನೆಯ**
> **ರೌದ್ರಿ ಸಂವತ್ಸರ ಶ್ರಾವಣ ಶು. 10ರ ಲು**
>
> **ಶ್ರೀಮಂನಮರಾಜಾದಿರಾಜ ರಾಜಪರಮೇಶ್ವರ**
> **ಗಂಡಬೇರುಂಡ ಗಜಬೆಂಟೆಕಾರ ಘೋಡ ಮಹೋದಾನದಿ.**
> **ಸಮದ ಶ್ರೀ ವಿರಪ್ರತಾಪ ದೇವರಾಯ ಮಹಾರಾಯರು**

ಎಂದು ವಿಜಯನಗರದ ದೊರೆ ಎರಡನೆಯ ದೇವರಾಯನನ್ನು ಉಲ್ಲೇಖಿಸುತ್ತದೆ. ಈ ಶಾಸನದ ಆಧಾರದ ಮೇಲೆ ಪ್ರಸ್ತುತ ಕೆರೆಯನ್ನು ಕ್ರಿ.ಶ. 1440ರಲ್ಲಿ ಎರಡನೆಯ ದೇವರಾಯನು ನಿರ್ಮಿಸಿದನೆಂದು ಹೇಳಬಹುದು. ಸ್ಥಳೀಯವಾಗಿ ಈ ಕೆರೆಗೆ 'ಸೂರ್ಯರಾಯನ ಕೆರೆ' ಎಂದು ಕರೆಯುತ್ತಾರೆ. ಈ ಕೆರೆಯಿಂದ ಹಿರೇಬೆಣಕಲ್, ಚಿಕ್ಕಬೆಣಕಲ್, ಮುಕ್ಕುಂಪಿ, ಲಿಂಗದಹಳ್ಳಿ ಗ್ರಾಮಗಳಿಗೆ ಸಾಕಷ್ಟು ಅನುಕೂಲವಿದೆ. ಕೆರೆಯ ಹೆಚ್ಚುವರಿ ನೀರನ್ನು ಕೆಳಭಾಗದಲ್ಲಿರುವ ತಾಯಮ್ಮನ ಕೆರೆಯಲ್ಲಿ ಸಂಗ್ರಹಿಸಲಾಗುತ್ತಿದೆ.

ಬಸಾಪಟ್ಟಣ ಕೆರೆ : ಗಂಗಾವತಿಯ ಬಸಾಪಟ್ಟಣದ ಹತ್ತಿರ ಈ ಕೆರೆ ಇದ್ದು, ವಾನಭದ್ರೇಶ್ವರ ಬೆಟ್ಟದ ಸಾಲಿನಲ್ಲಿ ಉತ್ತರದ ಕೊನೆಯ ಬೆಟ್ಟದ ಕೆಳಭಾಗದಲ್ಲಿ ಇದೆ. ಇದು ವಿಶಾಲವಾದ ಕೆರೆಯಾಗಿದ್ದು, ಹೀರೆ ಬೆಣಕಲ್ ಬೆಟ್ಟಗಳಿಂದ ಬರುವ ಮಳೆಯ ನೀರು ಈ ಕೆರೆಯಲ್ಲಿ ಸಂಗ್ರಹವಾಗುತ್ತದೆ. ಈ ಕೆರೆಯ ನೀರನ್ನು ಬಸವಾಪಟ್ಟಣದ ಜಮೀನುಗಳಿಗೆ ಬಳಸಲಾಗುತ್ತಿತ್ತು. ಸದ್ಯ ಈ ಕೆರೆ ಬಳಕೆಯಲ್ಲಿ ಇರುವುದಿಲ್ಲ.

ವೆಂಕಟಗಿರಿ ಕೆರೆ : ಈ ಕೆರೆಯನ್ನು ಕೂಡ ರಾಮರಾಯರ ಕೆರೆಯೆಂದು ಕರೆಯುತ್ತಾರೆ. ವೆಂಕಟಗಿರಿ ಗ್ರಾಮದ ಉತ್ತರದಿಕ್ಕಿನಲ್ಲಿ ಕೆರೆಯನ್ನು ನಿರ್ಮಿಸಲಾಗಿದ್ದು ಇಂದಿಗೂ ನೂರಾರು ಎಕರೆ ಭೂಮಿಗೆ ನೀರನ್ನು ಒದಗಿಸುತ್ತದೆ. ಚಂದ್ರಗಿರಿ ಕೆರೆಯು ಕುಮ್ಮಟದುರ್ಗದ ಹತ್ತಿರವಿದ್ದು ಇದನ್ನು ವಿಜಯನಗರ ಪೂರ್ವ ಕಾಲದ ನೀರಾವರಿಗೆ ಸೇರಿಸಬಹುದಾಗಿದೆ.

ಆನೆಗೊಂದಿ ಅರಸರು ಮತ್ತು ನೀರಾವರಿ ವ್ಯವಸ್ಥೆ

1565ರಲ್ಲಿ ವಿಜಯನಗರ ಪತನವಾಗಲು ಅಳಿಯ ರಾಮರಾಯನ ಸಹೋದರರಾದ ತಿರುಮಲ ಮತ್ತು ವೆಂಕಟಾದ್ರಿ ಇವರು ಪೆನುಗೊಂಡ ಮತ್ತು ಚಂದ್ರಗಿರಿಗಳಿಗೆ ತೆರಳಿ ಅಲ್ಲಿಂದ ಆಡಳಿತವನ್ನು ಮುಂದುವರೆಸಿದರು. ಈ ವಂಶದ ಶ್ರೀರಂಗನು 1646ರಲ್ಲಿ ನಡೆದ ಬಿಜಾಪುರ ಗೋಲ್ಕೊಂಡಗಳ ಜಂಟಿ ದಾಳಿಯಿಂದ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ. ಅಲ್ಲಿಗೆ ವಿಜಯನಗರ ಅರಸರ ಆಳ್ವಿಕೆ ಸಂಪೂರ್ಣಗೊಳ್ಳುತ್ತದೆ.

1644ರ ಸಂದರ್ಭದಲ್ಲಿ ಅರವೀಡು ವಂಶದ ಶ್ರೀರಂಗರಾಯನನ್ನು ಆದಿಲ್‌ಷಾಯಿಗಳು ಚಂದ್ರಗಿರಿಯಿಂದ ಕರೆಸಿ ಆನೆಗೊಂದಿ ಪ್ರದೇಶವನ್ನು ಪುನಃ ಬಿಟ್ಟುಕೊಟ್ಟು ದೊರೆ ಎಂದು ಮಾನ್ಯಮಾಡಿದರು. ಶ್ರೀರಂಗದೇವರಾಯನ ನಂತರ 14 ಜನ ಅರಸರು ಆನೆಗೊಂದಿಯಲ್ಲಿ ಆಡಳಿತ ನಡೆಸಿದರು. ಭಾರತದ ಸ್ವಾತಂತ್ರ್ಯಾನಂತರ 1948ರಲ್ಲಿ ನಡೆದ ಹೈದರಾಬಾದ್ ರಾಜ್ಯ ವಿಮೋಚನೆಯೊಂದಿಗೆ ಆನೆಗೊಂದಿ ರಾಜ್ಯ ಭಾರತ ಸರಕಾರದಲ್ಲಿ ವಿಲೀನವಾಯಿತು. ಅಲ್ಲಿಗೆ ಆನೆಗೊಂದಿಗೆ ಅರಸೊತ್ತಿಗೆ ಕೊನೆಗೊಂಡಿತು.

ಆನೆಗೊಂದಿ ರಾಜ್ಯದಲ್ಲಿ ಗಂಗಾವತಿ ಪರಗಣೆ, ಕಂಪಲಿ ಸಮತ, ಕಮಲಾಪುರ ಸಮತ, ತೆಕ್ಕಲಕೋಟೆ ಪರಗಣೆ, ಹೊಸೂರು ಪರಗಣೆ, ದರೋಜಿ ಸಮತ, ಬಾಣಾರವಿ ಮತ್ತು ಕುರುಗೋಡು ಪರಗಣೆಯಲ್ಲಿ ಕೆಲವು ಗ್ರಾಮಗಳು ಇದ್ದವು. ಬಹುಮಟ್ಟಿಗೆ ಈ ಎಲ್ಲಾ ಪ್ರದೇಶವು ತುಂಗಭದ್ರಾ ನದಿಯ ಇಕ್ಕೆಲಗಳಲ್ಲಿ ಇದ್ದಿತು. ಹಾಗಾಗಿ ಇಲ್ಲಿಯ ಕೃಷಿ ಭೂಮಿಗೆ ವಿಜಯನಗರ ಕಾಲದ ಅಣೆಕಟ್ಟುಗಳು, ಕಾಲುವೆಗಳು ಮತ್ತು ಕೆರೆಗಳು ನೀರನ್ನು ಒದಗಿಸುತ್ತಿದ್ದವು. ಆದಾಗ್ಯೂ ಆನೆಗೊಂದಿ ರಾಜ್ಯದ ಅರಸರು ಅಲ್ಲಲ್ಲಿ ಕೆರೆಗಳನ್ನು ನಿರ್ಮಿಸಿ ಮತ್ತಷ್ಟು ಭೂಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿದರು. ಆನೆಗೊಂದಿ ಅರಸರು ನಿರ್ಮಿಸಿದ ಪ್ರಮುಖ ಕೆರೆಗಳು ಇಂತಿವೆ.

ಭಾಗರಾಜನ ಕೆರೆ : ಈ ಕೆರೆಯು ಆನೆಗೊಂದಿ ಸಮೀಪದ ಅಂಜನಹಳ್ಳಿ ಮಾಗಾಣಿಯಲ್ಲಿ ಇದ್ದು, ಅಂಜನಹಳ್ಳಿಯಿಂದ ಸುಮಾರು ಮೂರು ಕಿ.ಮೀ ದೂರದಲ್ಲಿದೆ. ಸಂಪೂರ್ಣವಾಗಿ ಬೆಟ್ಟಗಳಿಂದ ಸುತ್ತುವರಿದ ಪ್ರದೇಶದಲ್ಲಿ ಈ ಕೆರೆ ಇದೆ. ಕೆರೆಯ ಹಿಂಭಾಗದಲ್ಲಿ ಅಂದರೆ ದಕ್ಷಿಣ ಬದಿಗೆ ಬೆಟ್ಟಗಳು ಇವೆ. ಈ ಬೆಟ್ಟಗಳ ಕಣಿವೆಯಿಂದ ಬರುವ ನೀರನ್ನು ಸಂಗ್ರಹಿಸಲು ಕೆರೆಯನ್ನು ನಿರ್ಮಿಸಲಾಗಿದೆ. ಕೆರೆಯು ಸುಮಾರು ಐದು ಎಕರೆ ವಿಸ್ತಾರದಲ್ಲಿದೆ. ಕೆರೆಯ ಏರಿಯನ್ನು ಕಪ್ಪುಗುಂಡುಗಳಿಂದ (Black Boulders) ನಿರ್ಮಿಸಲಾಗಿದೆ.

ಭಾಗರಾಜನ ಕೆರೆಯಿಂದ ಆನೆಗೊಂದಿ, ಅಂಜನಹಳ್ಳಿ, ಜಂಗ್ಲಿಯ ಮಾಗಾಣಿಯ ಕೆಲವು ಜಮೀನುಗಳಿಗೆ ನೀರನ್ನು ಒದಗಿಸಲಾಗುತ್ತಿತ್ತು. ಇದೀಗ ಕೆರೆಯಲ್ಲಿ ನೀರಿನ ಸಂಗ್ರಹವಿಲ್ಲ. ಕೆರೆಯ ಏರಿಯು ಮಧ್ಯಭಾಗದಲ್ಲಿ ಒಡೆದುಹೋಗಿದೆ.

ಲಕ್ಷ್ಮೀನಾರಾಯಣ ಕೆರೆ : ಗಂಗಾವತಿ ತಾಲ್ಲೂಕಿನ ಸಂಗಾಪುರ ಗ್ರಾಮದ ಹತ್ತಿರ ಈ ಕೆರೆಯನ್ನು ನಿರ್ಮಿಸಲಾಗಿದೆ. ಕೆರೆಯು 42 ಎಕರೆ ವಿಸ್ತಾರವಾಗಿದ್ದು, ಇಂದಿಗೂ ಸುಮಾರು 465 ಎಕರೆ ಭತ್ತದ ಗದ್ದೆಗಳಿಗೆ ನೀರನ್ನು ಒದಗಿಸುತ್ತದೆ.

ಕೆರೆಯ ಹತ್ತಿರ ಚಿಕ್ಕ ಲಕ್ಷ್ಮೀನಾರಾಯಣ ದೇವಾಲಯವಿದೆ. ಗರ್ಭಗೃಹದಲ್ಲಿ ವಾಸ್ತವಿಕವಾಗಿ ಮಲಗಿದ ಭಂಗಿಯ ಅನಂತಶಯನ ಅಥವಾ ರಂಗನಾಥನ ಶಿಲ್ಪವಿದೆ. ಅನಂತಶಯನನ ಪ್ರಭಾವಳಿಯಲ್ಲಿ ಬುದ್ಧನಸಹಿತ ದಶಾವತಾರದ ಶಿಲ್ಪಗಳಿರುವುದು ವಿಶೇಷ. ಇದೇ ದೇವಾಲಯದಲ್ಲಿ ದೇವಿ, ಗಜಾನನ, ಭೈರವ, ಗರುಡರ ಶಿಲ್ಪಗಳಿವೆ.

ದೇವಾಲಯ ಸಹಿತ ಶಿಲ್ಪಗಳೆಲ್ಲಾ 19ನೇ ಶತಮಾನದವು. ಕೆರೆಯ ಸನಿಹದಲ್ಲಿ ಕಾಲುವೆಯ ಬದಿಯಲ್ಲಿ ಒಂದು ಶಿಲಾಶಾಸನವಿದೆ. ಅದರಲ್ಲಿ

ಶ್ರೀ ॥ ಶ್ರೀ ರಂಗದೇವರಾಯ
ರ ಅಪ್ಪಣೆ ಪ್ರ (ಕಾರ) ॥ ನಂ ॥

ನಾರಾಯಣ ರಾಜರು
ಕಟಿಶಿದು ಸನ್ 1318
ತಾ ॥ 5–5–18

ಎಂದಿದೆ. ಈ ಶಾಸನದ ಪ್ರಕಾರ ದೇವಾಲಯಸಹಿತ ಕೆರೆಯನ್ನು ಆನೆಗೊಂದಿ ಅರಸರಾದ ಶ್ರೀ ರಂಗದೇವರಾಯರ ಅಪ್ಪಣೆ ಪ್ರಕಾರ ನಾರಾಯಣರಾಜರು ಕಟ್ಟಿಸಿರುವುದು ಎಂದು ತಿಳಿಯುತ್ತದೆ. ಆದರೆ ಶಾಸನದಲ್ಲಿ ಸೂಚಿಸಿದ ಕಾಲ ಸಮಂಜಸವಾಗಿಲ್ಲ. ಪ್ರಾಯಶಃ ಇದು ಶಾಲಿವಾಹನ ಶಕೆ 1818ನ್ನು ಮತ್ತು ಕ್ರಿ.ಶ. 5–5–1896ನ್ನು ಸೂಚಿಸುತ್ತದೆ. ಅಂದರೆ 19ನೇ ಶತಮಾನದಲ್ಲಿ ಆನೆಗೊಂದಿ ಸಂಸ್ಥಾನದ ಅರಸರು ಈ ಕೆರೆಯನ್ನು ನಿರ್ಮಿಸಿರುವುದು ಸ್ಪಷ್ಟವಾಗುತ್ತದೆ. ಇಂದಿಗೂ ಈ ಕೆರೆಯು ಸಂಗಾಪುರ ಭಾಗದ ರೈತರ ಜೀವನಾಡಿಯಾಗಿದೆ.

ಗಂಗಾವತಿಯ ರಾಮಲಿಂಗನ ಕೆರೆ : ಗಂಗಾವತಿ ನಗರದ ದಕ್ಷಿಣದ ಕೊನೆಯಲ್ಲಿ ಈ ಕೆರೆ ಇದೆ. ಕೆರೆಯ ಹಿಂಭಾಗದಲ್ಲಿ ಪುರಾತನ ರಾಮಲಿಂಗೇಶ್ವರ ದೇವಾಲಯವಿದೆ. ಈ ದೇವಾಲಯವನ್ನು ಕಲ್ಯಾಣ ಚಾಲುಕ್ಯರ ಮಾಂಡಲಿಕರಾದ ನೊಳಂಬಪಲ್ಲವರು ನಿರ್ಮಿಸಿದ್ದಾರೆ. ಈ ದೇವಾಲಯದಿಂದಾಗಿ ಕೆರೆಗೆ ರಾಮಲಿಂಗನ ಕೆರೆ ಎಂದು ಹೆಸರು ಬಂದಿದೆ.

ರಾಮಲಿಂಗನ ಕೆರೆಯ ಇತಿಹಾಸ ಪುರಾತನವಾಗಿದ್ದರೂ, ಅದು ವ್ಯವಸ್ಥಿತವಾದ ನಿರ್ಮಾಣ ಹಾಗೂ ನಿರ್ವಹಣೆಯನ್ನು ಕಂಡದ್ದು ಆನೆಗುಂದಿ ಅರಸರ ಕಾಲದಲ್ಲಿ. ಈ ಕೆರೆಗೆ ಎತ್ತರವಾದ ಏರಿಯನ್ನು ತೂಬನ್ನು, ಆನೆಗುಂದಿ ಅರಸರ ಕಾಲದಲ್ಲಿ ನಿರ್ಮಿಸಲಾಗಿದೆ.

ರಾಮಲಿಂಗನ ಕೆರೆಯು ಗಂಗಾವತಿ–ಸಂಗಾಪುರ ಗುಡ್ಡಗಳ ಕಣಿವೆಯಿಂದ ಬರುವ ನೀರನ್ನು ಆಧರಿಸಿ ನಿರ್ಮಿಸಲಾಗಿದೆ. ಇದೊಂದು ಸುಮಾರು 20 ಎಕರೆ ವಿಸ್ತಾರವುಳ್ಳ ಬೃಹತ್ ಕೆರೆಯಾಗಿದೆ. ಕೆರೆಯ ಒಡ್ಡನ್ನು ಎರಡು ಬದಿಯ ಗುಡ್ಡಗಳಿಗೆ ಹೊಂದಿಕೊಂಡಂತೆ ನಿರ್ಮಿಸಲಾಗಿದೆ. ಮಧ್ಯದಲ್ಲಿರುವ ತೂಬಿನಿಂದ ಒಂದೇ ಕಾಲುವೆಯನ್ನು ರಚಿಸಲಾಗಿದೆ. ಈ ಕಾಲುವೆಯಿಂದ ಗಂಗಾವತಿ ಹಿರೇಜಂತಕಲ್ ಗ್ರಾಮಗಳ ಜಮೀನುಗಳಿಗೆ ನೀರು ದೊರೆಯುತ್ತಿತ್ತು. ಈಚೆಗೆ ಸುರಿದ ಭಾರಿ ಮಳೆಯಿಂದ ಈ ಕೆರೆಯ ಏರಿ ಒಡೆದುಹೋಗಿದೆ.

ಸಾಣಾಪುರ ಕೆರೆ : ಆನೆಗೊಂದಿ ಅರಸರ ಕಾಲದಲ್ಲಿ ನಿರ್ಮಾಣವಾಗಿರುವ ಪ್ರಮುಖ ಕೆರೆಗಳಲ್ಲಿ ಇದು ಒಂದಾಗಿದೆ. ಸಾಣಾಪುರ ಗ್ರಾಮದ ಉತ್ತರ ದಿಕ್ಕಿನಲ್ಲಿ ಇದನ್ನು ನಿರ್ಮಿಸಲಾಗಿದೆ. ಈ ಕೆರೆಯೂ ಕೂಡ ಅತ್ಯಂತ ವಿಶಾಲವಾದ ಕೆರೆಯಾಗಿದ್ದು, ಇದರಿಂದ ಅಂಜನಹಳ್ಳಿ, ಮಲ್ಲಾಪುರ, ರಾಂಪುರ, ಆನೆಗೊಂದಿ ಗ್ರಾಮಗಳ ಜಮೀನುಗಳಿಗೆ ನೀರು ದೊರಕುತ್ತಿತ್ತು. ಇಂದು ಈ ಕೆರೆಗೆ ತುಂಗಭದ್ರಾ ಎಡದಂಡೆ ನಾಲೆಯನ್ನು ಜೋಡಿಸಲಾಗಿದ್ದು, ಪಿಕ್ ಅಪ್ ಆಗಿ ಪರಿವರ್ತಿಸಲಾಗಿದೆ.

ಆನೆಗೊಂದಿ ಪ್ರದೇಶ ತುಂಗಭದ್ರಾ ನದಿ ತೀರದ ಪ್ರದೇಶವಾಗಿರುವುದರಿಂದ ಬಹು ಪ್ರಾಚೀನ ಕಾಲದಿಂದಲೂ ನೀರಾವರಿ ಕೃಷಿಯ ಸೌಲಭ್ಯವನ್ನು ಪಡೆಯುತ್ತಾ ಬಂದಿದೆ. ಹನ್ನೊಂದನೆ ಶತಮಾನದಲ್ಲೇ ಚಾಲುಕ್ಯರು ಇಲ್ಲಿ ನೀರಾವರಿ ಸೌಲಭ್ಯವನ್ನು ಕಲ್ಪಿಸಿದ್ದರೆನ್ನುವುದು ತಿಳಿಯುತ್ತದೆ. ಮುನಿರಾಬಾದ್‌ನ ಕ್ರಿ.ಶ. 1088ರ ಶಾಸನದ ಪ್ರಕಾರ ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನಿಂದ ಆದಿತ್ಯ ಭಟಾರನೆಂಬವನು ಪುಲಿಗೆ ಎಂಬ ಗ್ರಾಮವನ್ನು ಪಡೆದುಕೊಂಡು, ಅಲ್ಲಿಯ ತುಂಗಭದ್ರಾ ನದಿಯ ದಂಡೆಯನ್ನು ಸಮೀಕ್ಷಿಸಿ ಸೀಳುಕಾಲುವೆಯೊಂದನ್ನು ಹಾಗೂ ಅದಕ್ಕೆ ಅನೇಕ ಉಪಕಾಲುವೆಗಳನ್ನು ನಿರ್ಮಿಸಿದನೆಂದು ತಿಳಿಯುತ್ತದೆ.

ನಂತರದ ದಿನಗಳಲ್ಲಿ ಇಂಥ ಕಾಲುವೆಗಳು ಇಲ್ಲಿ ಅಸ್ತಿತ್ವದಲ್ಲಿದ್ದವೆನ್ನುವುದು ಸ್ಪಷ್ಟ. ಆದರೆ ಆನೆಗೊಂದಿ ಪ್ರದೇಶದ ನೀರಾವರಿ ವ್ಯವಸ್ಥೆಯನ್ನು ನದಿಗೆ ಅಣೆಕಟ್ಟು ಹಾಗೂ ಕೆರೆಗಳ ಮೂಲಕ ವಿಸ್ತೃತ ಗೊಳಿಸಿದವರೆಂದರೆ ವಿಜಯನಗರದರಸರು. ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿದ್ದ ಅವರು ತುಂಗಭದ್ರಾ ನದಿಯಗುಂಟ ಅಲ್ಲಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಿ ಕಾಲುವೆಗಳ ಮೂಲಕ ಸುಮಾರು 50 ಕಿ.ಮೀ ಉದ್ದಕ್ಕೂ ಜಮೀನುಗಳಿಗೆ ನೀರನ್ನು ಒದಗಿಸಿದರು. ಅಷ್ಟೇ ಅಲ್ಲ, ಕಾಲುವೆಗಳು ತಲುಪದ ಪ್ರದೇಶಗಳಲ್ಲಿ ಹಳ್ಳಿಗಳಿಗೆ ಕೆರೆಗಳನ್ನು ನಿರ್ಮಿಸಿ ಅಲ್ಲಿಯೂ ನೀರಾವರಿ ಸೌಲಭ್ಯವನ್ನು ಕಲ್ಪಿಸಿದರು. ವಿಜಯನಗರದ ಈ ನೀರಾವರಿ ವ್ಯವಸ್ಥೆಯನ್ನು ಅಷ್ಟೇ ಪ್ರಾಮಾಣಿಕವಾಗಿ ಆನೆಗುಂದಿ ಅರಸರು ಮುಂದುವರೆಸಿಕೊಂಡು ಹೋದರು. ಇವರು ತಮ್ಮ ಅವಧಿಯಲ್ಲಿ ವಿಜಯನಗರ ಕಾಲದ ಅಣೆಕಟ್ಟುಗಳು ಮತ್ತು ಕಾಲುವೆ, ಕೆರೆಗಳನ್ನು ಕಾಲಕಾಲಕ್ಕೆ ದುರಸ್ತಿ ಮಾಡಿದ ಸಾಕಷ್ಟು ಉದಾಹರಣೆಗಳಿವೆ. ಜೊತೆಗೆ ಆನೆಗೊಂದಿ ಅರಸರು ಕೂಡ ಸ್ವತಂತ್ರವಾಗಿ ಅಲ್ಲಲ್ಲಿ ಕೆರೆಗಳನ್ನು ನಿರ್ಮಿಸಿ ಈ ಪ್ರದೇಶದ ನೀರಾವರಿ ವ್ಯವಸ್ಥೆಯನ್ನು ಮತ್ತಷ್ಟು ವಿಸ್ತೃತಗೊಳಸಿದರು. ಅವರು ನಿರ್ಮಿಸಿದ ಕೆರೆಗಳಲ್ಲಿ ಬಹಳಷ್ಟು ಕೆರೆಗಳು ಇಂದಿಗೂ ನೂರಾರು ಹೆಕ್ಟೇರ್ ಭೂಮಿಗಳಿಗೆ ನೀರನ್ನು ಉಣಿಸುತ್ತಲಿವೆ.

ಹೀಗೆ ಚಾಲುಕ್ಯ, ಕುಮ್ಮಟದುರ್ಗದರಸರು ವಿಜಯನಗರ ಹಾಗೂ ಆನೆಗೊಂದಿ ಅರಸರ ಕಾಲದಿಂದಲೂ ನೀರಾವರಿ ಸೌಲಭ್ಯವನ್ನು ಪಡೆದಿರುವ ಗಂಗಾವತಿ ಪ್ರದೇಶ ಇಂದಿಗೂ ಆ ಸೌಲಭ್ಯವನ್ನು ಅನುಭವಿಸುತ್ತಾ ನಡೆದಿದೆ. ಹೀಗಾಗಿ ಇಲ್ಲಿಯ ರೈತಾಪಿ ಜನ ಮೊದಲಿನಿಂದಲೂ ಅಧಿಕ ನೀರನ್ನು ಬಯಸುವ ಭತ್ತ, ಬಾಳೆ ಮತ್ತು ಕಬ್ಬಿನಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾ ಬಂದಿದ್ದಾರೆ. ಇವೆಲ್ಲ ಸಾಕಷ್ಟು ಲಾಭದಾಯಕ ಬೆಳೆಗಳಾಗಿರುವುದರಿಂದ ರೈತಾಪಿ ಜನ ಸಮೃದ್ಧಿಯ ಜೀವನವನ್ನು ನಡೆಸುತ್ತಲಿದ್ದಾರೆ. ಇಲ್ಲಿಯ ಕಾಲುವೆಗಳ ಮತ್ತೊಂದು ವೈಶಿಷ್ಟ್ಯವೆಂದರೆ ಅವು ನೇರವಾಗಿ ನದಿಯಿಂದ ಬರುತ್ತಿರುವುದರಿಂದ ವರ್ಷದ ಹನ್ನೆರಡು ತಿಂಗಳು ನೀರನ್ನು ಪೂರೈಸುತ್ತಿವೆ. ಈ ಕಾಲುಗಳಿಂದ ನೀರನ್ನು ಪಡೆಯುತ್ತಿರುವ ಭೂಮಿಗಳಿಗೆ ಇಂದು 'ಹಳೇ ಮಾಗಾಣಿ' ಎಂದು ಕರೆಯುತ್ತಾರೆ. ಈ ಭೂಮಿಗಳು ಇಂದು ಲಕ್ಷಾಂತರ ರೂ. ಬೆಲೆಬಾಳುತ್ತಲಿವೆ. ಆನೆಗೊಂದಿ ಮತ್ತು ಸುತ್ತಲಿನ ಪ್ರದೇಶದಲ್ಲಿ ಬೆಳೆಯುವ ಸುಗಂಧಿ ಬಾಳೆ ರಾಜ್ಯದಲ್ಲೇ ಪ್ರಸಿದ್ಧವಾಗಿದೆ. ಇಲ್ಲಿಯ ಹಿರೇಜಂತಗಲ್ ಮತ್ತು ಚಿಕ್ಕಜಂತಗಲ್‌ಗಳು ಕಬ್ಬು ಬೆಳೆ ಮತ್ತು ಬೆಲ್ಲದ ಉದ್ಯಮಕ್ಕೆ ಹೆಸರಾಗಿದ್ದವು. ನಮ್ಮನ್ನಾಳಿದ ರಾಜರ ದೂರದರ್ಶಿತ್ವದ ಯೋಜನೆಗಳು ಹೇಗೆ ಬಹುಕಾಲದವರೆಗೆ ಪ್ರಜೆಗಳ ಕಲ್ಯಾಣಕ್ಕೆ ಕಾರಣವಾಗುತ್ತವೆ ಎನ್ನುವುದು ಆನೆಗೊಂದಿ ಪ್ರದೇಶದ ನೀರಾವರಿ ವ್ಯವಸ್ಥೆ ನಿದರ್ಶಿಸುತ್ತದೆ. ಇಲ್ಲಿಯ ಪ್ರಾಚೀನ ನೀರಾವರಿ ವ್ಯವಸ್ಥೆ ಇಂದಿನ ರಾಜಕಾರಣಿಗಳಿಗೆ ಮಾದರಿ. ಅದರಿಂದ ಅವರು ಕಲಿಯಬೇಕಾದದ್ದು ಬಹಳಷ್ಟಿದೆ. ಅವುಗಳಲ್ಲಿ ಒಂದು ವಿಜಯನಗರದ ಕಾಲುವೆಗಳು ಸುಮಾರು ಐದು ನೂರು ವರ್ಷಗಳಿಂದ ನಿರಂತರವಾಗಿ ನೀರನ್ನು ಹರಿಸುತ್ತಿದ್ದರೂ ಅವು ಒಂದು ಬಾರಿ ಕೂಡ ಒಡೆದಿಲ್ಲ.

ಅಡಿಟಿಪ್ಪಣಿಗಳು

1. ಡಾ॥ ಶರಣಬಸಪ್ಪ ಕೋಲ್ಕಾರ, 2008, ಆನೆಗುಂದಿ, ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಮ್.
2. ಸಿ.ಟಿ.ಎಂ. ಕೊಟ್ರಯ್ಯ, 2006, 'ವಿಜಯನಗರಕಾಲದ ತುಂಗಭದ್ರಾ ನದಿಯ ಅಣೆಕಟ್ಟೆಗಳು', ಹಂಪಿ ಸಂಪುಟ, ಪು. 427–447, ಕವಿವಿ ಹಂಪಿ; ಡಾ॥ ಶರಣಬಸಪ್ಪ ಕೋಲ್ಕಾರ, 1997 'ಬೆನ್ನೂರಿನ ಬಸವನ ಅಣೆ', ಸುಧಾ ವಾರಪತ್ರಿಕೆ, ಬೆಂಗಳೂರು.
3. ಕ್ಷೇತ್ರ ಕಾರ್ಯ ಕೈಗೊಂಡು ಮಾಹಿತಿ ಸಂಗ್ರಹಿಸಲಾಗಿದೆ.
4. ಡಾ॥ ಶರಣಬಸಪ್ಪ ಕೋಲ್ಕಾರ, 2004 'ಗಂಗಾವತಿ ತಾಲೂಕಿನಲ್ಲಿ ಹೊಸದಾಗಿ ಪತ್ತೆಯಾದ 14 ಶಿಲಾಶಾಸನಗಳು', ನಾಡನುಡಿ ವಿಶೇಷಾಂಕ, ಗಂಗಾವತಿ.
5. ಕಲಬುರ್ಗಿ, ಎಂ.ಎಂ.(ಸಂ), 1994, ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಡಾ॥ ದೇವರ ಕೊಂಡಾರೆಡ್ಡಿ, 1999, ಕನ್ನಡ ವಿ.ವಿ. *ಶಾಸನ ಸಂಪುಟ 2*, ಕೊಪ್ಪಳ ಜಿಲ್ಲೆ, ಕನ್ನಡ ವಿ.ವಿ.ಹಂಪಿ. ಈ ಶಾಸನದ ಪಾಠವನ್ನು ಪರಿಷ್ಕರಿಸಿದ್ದೇನೆ.
7. ಅದೇ.

22

ಅರಸೀಕೆರೆ ತಾಲೂಕಿನ ವಿಜಯನಗರ ಕಾಲದ ಕೆರೆಗಳು

ಪದ್ಮ ಬಿ.ಎಸ್.

ಅರಸೀಕೆರೆ ಹಾಸನ ಜಿಲ್ಲೆಯ ಒಂದು ತಾಲೂಕು ಮತ್ತು ಮುಖ್ಯ ಪಟ್ಟಣ. ಹಾಸನದಿಂದ ಸುಮಾರು 41 ಕಿ.ಮೀ., ಬೆಂಗಳೂರಿನಿಂದ 176 ಕಿ.ಮೀ. ದೂರದಲ್ಲಿದೆ. ಬೆಂಗಳೂರು ಮೀರಜ್ ರೈಲು ಮಾರ್ಗದಲ್ಲಿ ಹಾಗೂ ಬೆಂಗಳೂರು, ಹೊನ್ನಾವರ ಹೆದ್ದಾರಿಯಲ್ಲಿದೆ. ಅರಸೀಕೆರೆಗೆ ಪ್ರಾಚೀನ ಕಾಲದಲ್ಲಿ ಉದ್ಭವ ಸರ್ವಜ್ಞ ವಿಜಯ ಹಾಗೂ ಬಲ್ಲಾಳಪುರ ಎಂದು ಕರೆಯಲಾಗಿತ್ತು.

ತಾಲೂಕಿನ ವಿಸ್ತೀರ್ಣ 777 ಚ.ಕಿ.ಮೀ. ಜನಸಂಖ್ಯೆ 3,03,000. ಸುತ್ತಲೂ ಕಡೂರು, ಚಿಕ್ಕನಾಯಕನಹಳ್ಳಿ, ಹಾಸನ, ಚನ್ನರಾಯಪಟ್ಟಣ, ತಿಪಟೂರು, ಚಿಕ್ಕಮಗಳೂರು ಮತ್ತು ಬೇಲೂರು ತಾಲೂಕುಗಳಿವೆ. ಇದು ಬೆಟ್ಟಗುಡ್ಡಗಳ ಪ್ರದೇಶ. ತಾಲೂಕಿನ ದಕ್ಷಿಣ ಭಾಗದಲ್ಲಿ ಸಾಧಾರಣವಾದ ಅನೇಕ ಕಾಡುಗಳೂ, ಕುರುಚಲೂ ಹುಲ್ಲು ಬೆಳೆದ ಪ್ರದೇಶಗಳೂ ಇವೆ. ಈ ಪ್ರದೇಶವು ಫಲವತ್ತಾದ, ಗಡುಸಾದ ಕೆಂಪು ಮತ್ತು ಬೂದು ಬಣ್ಣದ ಮಣ್ಣಿನಿಂದ ಕೂಡಿದೆ. ಭೂಮಿ ದಕ್ಷಿಣದಿಂದ ಉತ್ತರ ಕಡೆಗೆ ಇಳಿಜಾರಾಗಿದೆ. ವೇದಾವತಿ ಉತ್ತರಕ್ಕೆ ಹರಿಯುತ್ತದೆ. ಮಳೆ ಪ್ರಮಾಣ ಕಡಿಮೆ ಇರುವುದರಿಂದ ಬೆಳೆಗಳಿಗೆ ಮೀಸಲಾದ ಪ್ರದೇಶವೂ ಕಡಿಮೆ. ರಾಗಿ, ತೆಂಗು, ಮೆಣಸಿನಕಾಯಿ, ಎಣ್ಣೆಕಾಳುಗಳು, ಜೋಳ ಇವು ಇಲ್ಲಿನ ಮುಖ್ಯ ಬೆಳೆಗಳು. ಕೆರೆಗಳ ಆಶ್ರಯದಿಂದ ಅಲ್ಪಪ್ರಮಾಣದಲ್ಲಿ ಭತ್ತವನ್ನು ಬೆಳೆಯುತ್ತಿರುವುದು ಕಂಡುಬಂದಿದೆ.[1]

ಇತಿಹಾಸಪ್ರಸಿದ್ಧ ಅರಸೀಕೆರೆ ತಾಲೂಕಿನಲ್ಲಿ ಅನೇಕ ರಾಜಮನೆತನಗಳು ಆಳ್ವಿಕೆ ಮಾಡಿವೆ. ಇಲ್ಲಿರುವ ಈಶ್ವರ ದೇವಸ್ಥಾನ ಹೊಯ್ಸಳ ವಾಸ್ತುಶಿಲ್ಪಕ್ಕೆ ಪ್ರಸಿದ್ಧವಾಗಿದೆ. ವಿಜಯನಗರ ಅರಸರ ಕಾಲದಲ್ಲಿ ಅರಸೀಕೆರೆ ಚನ್ನಪಟ್ಟಣದಿಂದ ಜಗದೇವರಾಯನ ಆಡಳಿತದ ಹತೋಟಿಯಲ್ಲಿತ್ತು. ಅನಂತರ ತರೀಕೆರೆಯ ತಿಮ್ಮಪ್ಪನಾಯಕನ ಕೈಗೆ ಬಂದಿತು. ಕೊನೆಗೆ ಇಕ್ಕೇರಿ ಶಿವನಾಯಕನ ಆಳ್ವಿಕೆಗೆ ಬಂದು 1690ರಲ್ಲಿ ಮೈಸೂರು ಒಡೆಯರ ಕಾಲದಲ್ಲಿ ಮರಾಠರ ದಾಳಿಗೆ ತುತ್ತಾಗಿ ಹಾನಿಗೊಳಗಾಯಿತು. ಅನಂತರ ಮೈಸೂರು ಒಡೆಯರು ತಾವು ಸಲ್ಲಿಸಬೇಕಾದ ಪೊಗದಿಗೆ ಒತ್ತೆಯಾಗಿ ಮರಾಠರಿಗೆ ಇದನ್ನು ಒಪ್ಪಿಸಿದರು. ಈ ತಾಲೂಕಿನಲ್ಲಿ ದೊರಕಿರುವ ಶಾಸನಗಳು, ವೀರಗಲ್ಲುಗಳು ಮತ್ತು ದೇವಾಲಯಗಳು ತಾಲೂಕಿನ ಇತಿಹಾಸವನ್ನು ತಿಳಿಸುತ್ತವೆ. ಅಲ್ಲದೆ ಇವರ ಆಳ್ವಿಕೆ ಅವಧಿಯಲ್ಲಿ ನಿರ್ಮಾಣ ಮಾಡಿದ ಕೆರೆಗಳ ಇತಿಹಾಸವನ್ನು ವಿಶ್ಲೇಸಲಾಗಿದೆ. ಈ ಪ್ರದೇಶದ ಪ್ರಮುಖ ಜಲಸಂಪನ್ಮೂಲಗಳೆಂದರೆ ಕೆರೆಗಳು, ಕಟ್ಟೆಗಳು ಮತ್ತು ಬಾವಿಗಳು. ಪ್ರಾಚೀನ ಕಾಲದಿಂದಲೂ ನೀರಿನ ಆಸರೆಯಾಗಿ ಇಲ್ಲಿನ ಕೆರೆಗಳು ಪ್ರಮುಖ ಪಾತ್ರವಹಿಸುತ್ತಿವೆ. ಇವುಗಳ ಒಟ್ಟು ಅಚ್ಚುಕಟ್ಟು 44.42 ಹೆಕ್ಟೇರ್, ಜಲವಿಸ್ತೀರ್ಣ 90.22 ಹೆಕ್ಟೇರ್.[2]

ಕೆರೆಗಳ ಪರಿಕಲ್ಪನೆಯು ಇಂದು ನೆನ್ನೆಯದಲ್ಲ ಬಹುಪ್ರಾಚೀನವಾದುದು. ಭಾರತದ ಸಾಹಿತ್ಯ ಕೃತಿಗಳಾದ ರಾಮಾಯಣ, ಮಹಾಭಾರತ, ಕೌಟಿಲ್ಯನ ಅರ್ಥಶಾಸ್ತ್ರ, ಪದ್ಮಪುರಾಣ, ಜಾತಕ ಕಥೆಗಳು, ಶುಕ್ರನ ನೀತಿಸಾರ, ಅಮರಕೋಶ, ತಮಿಳು ಸಂಗಮ್ ಸಾಹಿತ್ಯಗಳು ಸಹ ಕೆರೆ ನೀರಾವರಿಯ ಅನೇಕ ವಿಚಾರಗಳನ್ನು ಕುರಿತು ಪ್ರಸ್ತಾಪಿಸಿವೆ. ಹಾಗೆಯೇ ಶಾಸನಗಳು ಸಹ ಕೆರೆ ನೀರಾವರಿಯ ಮೇಲೆ ಬೆಳಕು ಚೆಲ್ಲುತ್ತವೆ. ಉದಾಹರಣೆಗೆ ಮೌರ್ಯರ ಕಾಲದ ಚಂದ್ರಗುಪ್ತ ಮೌರ್ಯನ ರಾಜ್ಯಪಾಲ ಪುಷ್ಯ ಗುಪ್ತ ನಿರ್ಮಿಸಿದ ಸುದರ್ಶನ ಸರೋವರ.

ಕರ್ನಾಟಕದ ಪ್ರಮುಖ ರಾಜ ಮನೆತನಗಳಲ್ಲಿ ಕದಂಬರು, ಗಂಗರು, ಕಲ್ಯಾಣ ಚಾಲುಕ್ಯರು ಮತ್ತು ಹೊಯ್ಸಳರು ಹಾಗೂ ಇತರೆ ಅರಸು ಮನೆತನಗಳವರು ಅನೇಕ ಕೆರೆ, ಕಾಲುವೆ, ತೂಬು ಕೋಡಿ ಮತ್ತು ಅಣೆಕಟ್ಟುಗಳನ್ನು ನಿರ್ಮಿಸಿದ್ದಾರೆ.

ವಿಜಯನಗರ ಪ್ರೌಢ ಪ್ರತಾಪ ದೇವರಾಯನ ಮಂತ್ರಿ ಲಕ್ಷ್ಮೀಧರನು ಕೂಸಾಗಿದ್ದಾಗ ಅವನ ತಾಯಿ 'ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಗಾರಮಂ ಮಾಡಿಸು' ಎಂದು ಹಾಡಿ ಹಾಲೆರೆಯುತ್ತಿದ್ದಳೆಂದು ಹಂಪೆಯ ಕಡಲೆಕಾಳು ಗಣೇಶನ ಗುಡಿಯ ಮುಂದಿನ ಅಗಸೆಯಲ್ಲಿರುವ ಶಾಸನವು ತಿಳಿಸುತ್ತದೆ.

ವಿಜಯನಗರ ಸಾಮ್ರಾಜ್ಯದ ಸಾಮ್ರಾಟನಾದ ಕೃಷ್ಣದೇವರಾಯ ತನ್ನ 'ಅಮುಕ್ತಮಾಲ್ಯದ' ಕೃತಿಯಲ್ಲಿ ಕೆರೆ ಕಾಲುವೆಗಳನ್ನು ಕಟ್ಟಿಸುವುದರಿಂದ ಕೇವಲ ಪಾರಮಾರ್ಥ ಸಾಧನೆಯಲ್ಲಿ ಲೌಕಿಕ ಅರ್ಥಸಾಧನೆಯೂ ಆಗುತ್ತದೆ ಎಂದು ಹೇಳಿದ್ದಾನೆ.

ಅರಸೀಕೆರೆ ತಾಲೂಕಿನಲ್ಲಿ ಹೆಚ್ಚಾಗಿ ಹೊಯ್ಸಳರು ಆಳ್ವಿಕೆ ನಡೆಸಿ ನಂತರ ವಿಜಯನಗರದ ಅಧೀನಕ್ಕೆ ಒಳಪಟ್ಟಿದೆ. ಇವರ ಕಾಲದಲ್ಲಿ ದೊರೆತ ಅನೇಕ ಕೆರೆಗಳು ಜೀವಂತ ಸಾಕ್ಷಿಗಳಾಗಿವೆ. ಅವುಗಳನ್ನು ಶಾಸನಾಧಾರಗಳಿಗೆ ವಿಶ್ಲೇಷಿಸಲಾಗಿದೆ. ಅರಸೀಕೆರೆ ತಾಲೂಕಿನ ಮುರಂಡಿಯ 14ನೇ ಶತಮಾನದ ಶಾಸನದಲ್ಲಿ ಬೊಮ್ಮಣನಾಯಕ ಮುರುಂಡಿಯ ಹಿರಿಯ ಕೆರೆಯ ಕೆಳಗಿನ ಭೂಮಿಯನ್ನು ಮೊಳೆಯ ಭಟ್ಟರ ತಮ್ಮ ಕೇಶವ ಭಟ್ಟರಿಗೆ ದಾನ ಕೊಟ್ಟದರ ಉಲ್ಲೇಖವಿದೆ.[3]

ಗಂಡಸಿಯ ಕ್ರಿ.ಶ. 1324ರ ಶಾಸನದಲ್ಲಿ ಹಿರಿಯ ಗಂಡಸಿಯ ಬಲ್ಲಾಳಪುರ ಅಗ್ರಹಾರವೆಂದು ಉಲ್ಲೇಖಿತವಾಗಿದೆ. ಹಿರಿಯ ಗಂಡಸಿಯ ಅಶೇಷ ಮಹಾಜನರು ಕೆರೆ ಕಟ್ಟಿಸಿ ಕಂಚಿನಾಯಕನಿಗೆ ಭೂದಾನಗಳನ್ನು ನೀಡಿರುವುದು ದಾಖಿಸಲಾಗಿದೆ.[4]

ಕೆಲ್ಲಂಗೆರೆಯ ಕ್ರಿ.ಶ. 1367ರ ಶಾಸನದಲ್ಲಿ ಕೆಲ್ಲಂಗೆರೆ ಗ್ರಾಮವನ್ನು 'ಹರಿಹರಪುರ' ಅಗ್ರಹಾರವೆಂದು ಕರೆಯಲಾಗಿದ್ದು, ಇಲ್ಲಿನ ಕೆರೆಯ ಭಂಡಿಯ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದ ವ್ಯಕ್ತಿಯೊಬ್ಬನ ಜೀವಿತಕ್ಕೆ ಮಹಾಜನರು ಅವಕಾಶ ಕಲ್ಪಿಸಿ ಕೊಟ್ಟಿದ್ದನ್ನು ಈ ಶಾಸನ ತಿಳಿಸುತ್ತದೆ. ಅಲ್ಲಿನ ಕೆರೆ ನಿರ್ವಹಣೆ ಮಾಡುವವರು, ದಾನ ಪಡೆದವರು ಹೆರೆಯ ಎಣ್ಣೆ, ಹಾರೆ, ಗುದ್ದಲಿ ಮುಂತಾದ ಕೆರೆಯ ಭಂಡಿಯಲ್ಲಿ ಅಡಕವಾಗಿರುವ ಸಾಮಾಗ್ರಿಗಳನ್ನು ಇಟ್ಟಿರಬೇಕಾಗಿತ್ತು. ಮೂಲ ಒಕ್ಕಲುಗಳಲ್ಲಿ ಪ್ರತಿಯೊಬ್ಬನೂ ಹೆರಿಗೆ ಎರಡು ತಾರಗಳನ್ನು (ಬೆಳ್ಳಿನಾಣ್ಯ) ನೀಡಬೇಕೆಂಬ ನಿಬಂಧನೆಯೂ ಇತ್ತು. ಅಂದರೆ ಅಡಿಕೆ, ವೀಳೆಯದೆಲೆ, ಕಿತ್ತಲೆ ಹಣ್ಣು ಮುಂತಾದ ಸಾಮಗ್ರಿಗಳ ಪ್ರತಿ ಹೆರಿಗೆ ಎರಡು ತಾರ (ಬೆಳ್ಳಿ ನಾಣ್ಯ)ಗಳನ್ನು ತೆರಬೇಕಾಗಿತ್ತೆಂಬುದಾಗಿ ದಾಖಲಿಸಲಾಗಿದೆ.[5]

ಕೆಲ್ಲಂಗೆರೆಯ ಕೆರೆಯು ಹಿಂದಿನಿಂದಲೂ ಮಳೆಯ ನೀರನ್ನು ಆಶ್ರಯಿಸಿದೆ. 64.40 ಎಂ.ಸಿ.ಎಫ್.ಟಿ. ನೀರಿನ ಸಂಗ್ರಹಣ ಸಾಮರ್ಥ್ಯವನ್ನು ಹೊಂದಿದೆ. ಕೆರೆಯ ಜಲಾನಯನ ಪ್ರದೇಶವು 99.54 ಹೆಕ್ಟೇರುಗಳು ಮತ್ತು ಅಚ್ಚುಕಟ್ಟು ಪ್ರದೇಶವು 111.66 ಹೆಕ್ಟೇರ್‌ಗಳು. ಈ ಕೆರೆಯ ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿದ್ದು, ಇದರ ಉದ್ದ 1410.00 ಮೀ. ಅಗಲ 4.00 ಮೀ. ಇದೆ. ಪೂರ್ವ ದಿಕ್ಕಿನ ಏರಿಯ ಹಿಂಭಾಗದಲ್ಲಿ ಉಡಸಲಮ್ಮ ದೇವಸ್ಥಾನ ಇದೆ. ಏರಿಯ ಮಧ್ಯದಲ್ಲಿ ಪೂರ್ವಕ್ಕೆ ಮುಖ ಮಾಡಿರುವ ಏಳು ಮಕ್ಕಳ ತಾಯಿ ಎಂದು ಕರೆಯುವ ಗಂಗಮ್ಮನ ಗುಡಿ ಇದೆ. ಈ ಕೆರೆಗೆ ಎರಡು ತೂಬು, ಎರಡು ಕಾಲುವೆ ಮತ್ತು ಒಂದು ಕೋಡಿಯನ್ನು ಅಳವಡಿಸಲಾಗಿದೆ. ತೂಬಿನ ಹೊರಭಾಗದ

ಏರಿಯ ಇಳಿಜಾರಿನಲ್ಲಿ ತೊಟ್ಟಿಯನ್ನು ನಿರ್ಮಿಸಿ ಕಾಲುವೆಗೆ ಸೇರಿಸಲಾಗಿದೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಭತ್ತ, ಕಬ್ಬು, ರಾಗಿ, ಜೋಳ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆ ನಿರ್ಮಾಣವಾದ ಅಂದಿನಿಂದಲೂ ನೀರ್ಗಂಟಿಗಳು ತೂಬಿನ ನಿರ್ವಹಣೆಯನ್ನು ಮಾಡುತ್ತಾ ಬಂದಿದ್ದಾರೆ. ಈ ಜನರನ್ನು ಗಂಗಾಮತಸ್ಥರು ಎಂದು ಕರೆಯುತ್ತಾರೆ. ಗ್ರಾಮದ ಜನರು ಹಿಂದೆ ತಾವು ಬೆಳೆದ ಬೆಳೆಗಳಲ್ಲಿ ಸ್ವಲ್ಪ ಭಾಗವನ್ನು ದಾನದ ರೂಪದಲ್ಲಿ ನೀರ್ಗಂಟಿಗಳಿಗೆ ನೀಡುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ನೀರ್ಗಂಟಿಗಳು ಸರ್ಕಾರದಿಂದ ವೇತನ ಪಡೆಯುತ್ತಿದ್ದಾರೆ.

ಗಂಡಸಿಯ ಕ್ರಿ.ಶ. 1403ರ ಶಾಸನದಲ್ಲಿ ಬಾಯಣ್ಣನೆಂಬಾತನು ತನ್ನ ತಾಹಿಯ ಹೆಸರಿನಲ್ಲಿ ಮಹಾಪುರವೆಂಬ ಗ್ರಾಮವನ್ನು ನಿರ್ಮಿಸಿ ಅಲ್ಲಿ ಮಂಗಸಮುದ್ರವೆಂಬ ಕೆರೆಯನ್ನು ಕಟ್ಟಿಸಿದ. ಆ ಕೆರೆಯ ದಕ್ಷಿಣ ಭಾಗದಲ್ಲಿ ಕೋಡಿಯನ್ನು ನಿರ್ಮಿಸಿ ಹಿರಿಯ ಗಂಡಸಿಯ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿ ಅಲ್ಲಿನ ಹಿರಿಯ ಕೆರೆಗೆ ನಿರ್ಮಿಸಿದ ಕಾಲುವೆಗೆ ರಕ್ಷಣಾರ್ಥವಾಗಿ ಊರ ಮುಂದೆ ಹನುಮಂತನ ದೇವರ ಪ್ರತಿಷ್ಠೆಯನ್ನು ಮಾಡಿಸಿದ.[6]

ಗಂಡಸಿಯ ಕೆರೆಯು 41.62 ಎಂ.ಸಿ.ಎಫ್.ಟಿ. ನೀರಿನ ಸಂಗ್ರಹಣ ಸಾಮರ್ಥ್ಯವನ್ನು ಹೊಂದಿದೆ. ಕೆರೆಯ ಜಲಾನಯನ ಪ್ರದೇಶ 70.81 ಹೆಕ್ಟೇರ್ ಮತ್ತು ಅಚ್ಚುಕಟ್ಟು ಪ್ರದೇಶ 93.26 ಹೆಕ್ಟೇರ್‌ಗಳು. ಕೆರೆಯು ಹಿಂದಿನಿಂದಲೂ ಮಳೆಯ ನೀರನ್ನು ಆಶ್ರಯಿಸಿದೆ. ಪ್ರಸ್ತುತ ದಿನಗಳಲ್ಲಿ ಜನರು ಇದರ ಉಪಯೋಗಗಳನ್ನು ಪಡೆಯುತ್ತಿದ್ದಾರೆ.

ಈ ಕೆರೆಯ ಏರಿಯು ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿ ರಚನೆಯಾಗಿದೆ. ಏರಿಯ ಉದ್ದ 1290 ಮೀ., ಅಗಲ 5 ಮೀ. ಇದ್ದು, ಇದರ ಮೇಲೆ ವಾಹನಗಳು ಚಲಿಸುತ್ತವೆ. ಏರಿಯ ಮಧ್ಯಭಾಗದಲ್ಲಿ ಗಂಗರ ಕಾಲಕ್ಕೆ ಸೇರಿದ ಒಂದು ಹಾಳುಮಂಟಪವಿದ್ದು, ಇದರ ಪಕ್ಕದಲ್ಲಿ ಸುಮಾರು 25 ಮೀ. ಉದ್ದದ ಕೋಡಿ ಇದೆ. ಸುಮಾರು 30 ಮೀ. ಉದ್ದದ ಮತ್ತೊಂದು ಕೋಡಿಯನ್ನು ಕೆರೆಯ ಪೂರ್ವ ದಿಕ್ಕಿನಲ್ಲಿ ನಿರ್ಮಿಸಲಾಗಿದೆ. ಕೆರೆಯ ಅಂಗಳದಲ್ಲಿ ಕಾಲಭೈರವೇಶ್ವರ ದೇವಸ್ಥಾನ ಇದೆ. ಈ ದೇವಾಲಯದ ಎಡಬದಿಯಲ್ಲಿ ಹೊಯ್ಸಳ ಕಾಲದ ಒಂದು ಶಾಸನ ಕಲ್ಲು ಇದ್ದು, ಬಲ ಬದಿಯಲ್ಲಿ ಒಂದು ಮಹಾಸತಿಯ ಕಲ್ಲು ಬಿದ್ದಿದೆ. ಈ ಕೆರೆಯು ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದಿದೆ.

ನೇರ್ಲಿಗೆಯ ಕ್ರಿ.ಶ. 1429ರ ಶಾಸನದಲ್ಲಿ ವಿರೂಪಣ್ಣ ನಾಯಕನು ನೇರ್ಲಿಗೆಯ ಹಿರಿಯ ಕೆರಿಯ ಭಂಡಿಯ ನಿರ್ವಹಣೆಗಾಗಿ ಚತುಸೀಮೆಯೊಳಗೊಂಡ ಗದ್ದೆಬೆದ್ದಲು, ತೋಟ ತುಡಿಕೆಗಳನ್ನು ದಾನ ನೀಡಿರುವುದು ದಾಖಲಿಸಲಾಗಿದೆ.[7]

ತಿಮ್ಮನಹಳ್ಳಿ ಗ್ರಾಮದ ಕ್ರಿ.ಶ. 1432ರ ಶಾಸನದಲ್ಲಿ ಬಸವಶೆಟ್ಟಿನಾಯಕ ಎಂಬುವನು ನೇರ್ಲಿಗೆಯ ದೊಡ್ಡ ಕೆರೆಯ ಕೆರೆಯ ಭಂಡಿ ನಿರ್ವಹಣೆಗಾಗಿ ಚತುಸೀಮೆಯನ್ನು ಒಳಗೊಂಡ ಭೂಮಿಯನ್ನು ದಾನ ನೀಡಿರುವುದು ಉಲ್ಲೇಖಿಸಲಾಗಿದೆ.[8]

ನೇರ್ಲಿಗೆ ಕೆರೆಯು ನೇರ್ಲಿಗೆ ಗ್ರಾಮದಿಂದ ಪೂರ್ವಕ್ಕೆ ಮತ್ತು ತಿಮ್ಮನಹಳ್ಳಿ ಗ್ರಾಮದಿಂದ ಪಶ್ಚಿಮಕ್ಕೆ ಇದೆ. ಕೆರೆಯ ಏರಿಯು ಉತ್ತರ ದಕ್ಷಿಣಾಭಿಮುಖವಾಗಿದ್ದು, ಏರಿಯ ಉದ್ದ ಸುಮಾರು 750 ಮೀ, ಅಗಲ 4.50 ಮೀ ಇದೆ. ಕೆರೆಯಲ್ಲಿ ಎರಡು ತೂಬುಗಳು, ಎರಡು ಕಾಲುವೆಗಳು ಮತ್ತು ಎರಡು ಕೋಡಿಗಳು ಇವೆ. ದಕ್ಷಿಣ ದಿಕ್ಕಿನ ಕೋಡಿ ಸಮೀಪ ಇರುವ ತೂಬಿನ ಮೇಲೆ ಜಲಸಮೃದ್ಧಿಯ ಸಾಂಕೇತಿಕವಾಗಿ ಗಜಲಕ್ಷ್ಮೀ ಶಿಲ್ಪ, ಕಲಶ, ಮೀನು ಮತ್ತು ಆಮೆಗಳ ಚಿತ್ರಗಳನ್ನು ಕೆತ್ತಿರುವುದು ಕಂಡುಬಂದಿದೆ.

ಕೆರೆ ಸುತ್ತಲಿನ ಅಚ್ಚುಕಟ್ಟು ಪ್ರದೇಶವು ಲಿಂಗಾಯಿತ, ಒಕ್ಕಲಿಗ, ಮರಾಠಿ (ಕ್ಷತ್ರಿಯ) ಜನಾಂಗಕ್ಕೆ ಸೇರಿದ್ದು, ವಿವಿಧ ಬೆಳೆಗಳನ್ನು ಬೆಳೆಯಲು ಅನುಕೂಲಕರವಾಗಿದೆ. ಕೆರೆಯು 143.75 ಎಂ.ಸಿ.ಎಫ್.ಟಿ. ನೀರಿನ ಸಂಗ್ರಹಣ ಸಾಮರ್ಥ್ಯವನ್ನು ಹೊಂದಿದೆ.

ಅರಸೀಕೆರೆ ತಾಲೂಕಿನ ಜಾವಗಲ್‌ನ ಕ್ರಿ.ಶ. 1515ರ ಶಾಸನದಲ್ಲಿ ಗ್ರಾಮದ ಮುಖ್ಯಸ್ಥ ಭೈರಭೂಪನು ಗ್ರಾಮದ ಸಮಸ್ತ ಪ್ರಾಣಿಗಳಿಗೂ ಉಪಕಾರವಾಗುವ ಹಾಗೆ ಜಾವಗಲ್ಲಿನ ದಕ್ಷಿಣ ಭಾಗಕ್ಕೆ ಬಯಿರ ಸಮುದ್ರವೆಂಬ ಮಹಾತಟಾಕವನ್ನು ಕಟ್ಟಿಸಿ ಆ ತಟಾಕದ ಕೆಳಗೆ ಹಲವು ಕೆರೆಗಳನ್ನು ನಿರ್ಮಿಸಿ ಪೂರ್ವದ ಕೆರೆಗೆ ಕಾಲುವೆ ತೋಡಿಸಿದ್ದನ್ನು ದಾಖಲಿಸಲಾಗಿದೆ.[9]

ಜಾವಗಲ್ ಗ್ರಾಮದ ಪೂರ್ವಕ್ಕೆ ಕೆರೆ ಮತ್ತು ಹೊಯ್ಸಳ ಕಾಲದ ಗಂಗಾಧರೇಶ್ವರ ದೇವಸ್ಥಾನ ಹಾಗೂ ನಾಲ್ಕು ಕಂಬಗಳಿಂದ ಕೂಡಿದ ಮಂಟಪ ಇದೆ. ಈ ಕೆರೆಯ ಏರಿಯು ಪಶ್ಚಿಮದಿಂದ ಉತ್ತರದ ಕಡೆಗೆ ತಿರುಗಿದೆ. ಏರಿಯ ಮಧ್ಯ ಭಾಗದಲ್ಲಿ ಕೆಂಚಪ್ಪ ಎಂಬ ಹೆಸರಿನ ಚಿಕ್ಕ ಗುಡಿ ಇದೆ. ಈ ಗುಡಿಯ ಒಳಭಾಗದಲ್ಲಿ ಎರಡು ಗುಂಡುಕಲ್ಲುಗಳಿವೆ. ಇದೇ ರೀತಿಯ ಗುಡಿಗಳು ಅರಸೀಕೆರೆಯ ಚಿಕ್ಕಯರಗನಾಳು, ಹುಲ್ಲೇಕೆರೆ ಮತ್ತು ಮೇಣೆಕೆರೆ ಇತರ ಕೆರೆಗಳ ಏರಿಯ ಮೇಲೆ ಕಂಡುಬಂದಿದೆ. ಗ್ರಾಮಗಳಲ್ಲಿ ಈ ಗುಡಿಗಳಿಗೆ ಬೊಮ್ಮಪ್ಪ, ಭೂತಪ್ಪ, ಬ್ರಹ್ಮಪ್ಪ ಮತ್ತು ಬ್ರಹ್ಮೇಶ್ವರ ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಾರೆ.

ಈ ಕಲ್ಲುಗುಂಡುಗಳನ್ನು ಗಮನಿಸಿದಾಗ ಕೆರೆಗಳಿಗೆ ಬಳಸಿದ ಕಲ್ಲುಗಳ ರೀತಿ ಇವೆ. ಗ್ರಾಮದ ಜನರು ಕೆರೆಗೆ ಬಳಸಿದ ಕಲ್ಲುಗಳನ್ನು ಸಾಂಕೇತಿಕವಾಗಿ ಇಟ್ಟು ದೇವರು ಎಂಬ ಭಾವನೆಯಿಂದ ಪೂಜಿಸುವ ಪದ್ಧತಿ ಬೆಳೆದುಬಂದಿರಬಹುದು. ಕೆರೆಯ ಅಂಗಳದಲ್ಲಿ ಒಂದು ಸಮುದಾಯಭವನ ಇದೆ. ಇದರ ಪಕ್ಕದಲ್ಲಿ ಒಂದು ರಾಜನ ಶಿಲ್ಪವನ್ನು ಕೆತ್ತಲಾಗಿದೆ. ಈ ಶಿಲ್ಪವನ್ನು ಅಲ್ಲಿಯ ಸ್ಥಳೀಯ ಜನರು ಕೆರೆ ಕಟ್ಟಿಸಿದ ರಾಜನ ಶಿಲ್ಪ ಎಂದು ಹೇಳುತ್ತಾರೆ.

ಕೆರೆಯು 67.28 ಎಂ.ಸಿ.ಎಫ್.ಟಿ. ನೀರಿನ ಸಂಗ್ರಹಣ ಸಾಮರ್ಥ್ಯವನ್ನು ಹೊಂದಿದೆ. ಕೆರೆಯ ನೀರು ಇಂದು ಬಟ್ಟೆ ತೊಳೆಯಲು, ಜಾನುವಾರುಗಳಿಗೆ ಮತ್ತು ಮೀನುಗಾರಿಕೆಗೆ ಹೆಚ್ಚು ಬಳಕೆಯಾಗುತ್ತಿದೆ. ಕೆರೆಯಲ್ಲಿ ಇರುವ ಜಲಚರ ಪ್ರಾಣಿಗಳಿಗೆ ಆಸರೆಯಾಗಿದೆ. ಈ ಕೆರೆಯು ವಾರ್ಷಿಕವಾಗಿ ವಿಲೇವಾರಿಯಾಗುತ್ತಿದ್ದು, ಸಣ್ಣ ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದಿದೆ.

ಅರಸೀಕೆರೆ ತಾಲೂಕಿನ ಸಿಂಗನಹಳ್ಳಿ ಗ್ರಾಮದ ಕ್ರಿ.ಶ. 1555ರ ಶಾಸನದಲ್ಲಿ ವಿಜಯನಗರದ ರಾಮರಾಜನ ಆಳ್ವಿಕೆಯ ಅವಧಿಯಲ್ಲಿ ಹೊಳೆಯಗೊಂಡ ಗಾವುಂಡ ಮಾತಾಪಿತೃಗಳಿಗೆ ಪುಣ್ಯವಾಗಬೇಕೆಂದು ಕಣುವೆಯ ರಾಮೇಶ್ವರ ದೇವಾಲಯವನ್ನು ಕಟ್ಟಿಸಿ ಕೋಳುಗುಂದದ ಹಿರಿಯ ಕೆರೆಯ ಕೆಳಗಿನ ಭೂಮಿಯನ್ನು ದಾನಬಿಟ್ಟ ಉಲ್ಲೇಖವಿದೆ.[10]


ಅರಸೀಕೆರೆ ತಾಲೂಕಿನ ಹೆಚ್ಚಿನ ಕೆರೆಗಳು ವಿಜಯನಗರಪೂರ್ವದಲ್ಲಿ ನಿರ್ಮಾಣವಾದಂತಿವೆ. ಕೆಲವು ಕೆರೆಗಳು ವಿಜಯನಗರ ಕಾಲದಲ್ಲಿ ರಚನೆಯಾಗಿರುವುದನ್ನು ಶಾಸನಾಧಾರಗಳಿಂದ ಗುರುತಿಸಬಹುದು. ಹಾಗೆಯೇ ವಿಜಯನಗರ ಪೂರ್ವದಲ್ಲಿ ನಿರ್ಮಾಣವಾದ ಕೆಲವು ಕೆರೆಗಳ ನಿರ್ವಹಣೆಯನ್ನು ವಿಜಯನಗರದ ಕಾಲದಲ್ಲಿ ಮಾಡಿರುವುದನ್ನು ಇಲ್ಲಿ ಗಮನಿಸಬಹುದು.

ಈ ಪರಿಸರದ ದೊಡ್ಡ ಕೆರೆಗಳು ದಾಖಲೆಯಲ್ಲಿದ್ದು, ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿವೆ. ಕೆಲವು ಸಣ್ಣ ಕೆರೆಗಳು ದಾಖಲೆಯಲ್ಲಿ ಇದ್ದು, ಇಲ್ಲದಂತಾಗಿದೆ. ಶಾಸನೋಕ್ತವಾಗಿರುವ ಕೆರೆಗಳು ಮತ್ತು ಇಂದಿಗೂ ಜೀವಂತವಾಗಿದ್ದು, ಕೃಷಿ ಚಟುವಟಿಕೆಗಳಿಗೆ, ಧಾರ್ಮಿಕ ಆಚರಣೆಗಳಿಗೆ ನೆರವಾಗಿರುವುದು ಕಂಡುಬಂದಿದೆ. ಈ ಕೆರೆಗಳು ಹಿಂದಿನಿಂದಲೂ ಮಳೆ ನೀರನ್ನು ಅವಲಂಬಿಸಿದ್ದವು. ಕೆರೆಗಳ ನೀರನ್ನು ಬಳಸಿಕೊಂಡು ವಿವಿಧ ಬೆಳೆಗಳನ್ನು ಬೆಳೆಯುತ್ತಿದ್ದರು. ಇಲ್ಲಿನ ಶಾಸನಗಳಲ್ಲಿ ಕೆರೆ ಕೆಳಗಿನ ಗದ್ದೆ ಬೆದ್ದಲು, ಮತ್ತು ತೋಟ ತುಡಿಕೆಗಳ ಉಲ್ಲೇಖವಿದೆ. ಕೆರೆಗಳ ನೀರನ್ನು ಬಳಸಿಕೊಂಡು ಮುಂಗಾರು ಬೆಳೆಗಳನ್ನು ಬೆಳೆಯುತ್ತಿದ್ದರು. ಬೇಸಿಗೆಕಾಲದಲ್ಲಿ ಕೆರೆಯಲ್ಲಿ ನೀರು ಸಂಗ್ರಹವಾಗುವಂತೆ ತೂಬುಗಳನ್ನು ಮುಚ್ಚುತ್ತಿದ್ದರು. ಈ ಕೆರೆಗಳ ನೀರನ್ನು ಮೀನುಗಳ ಸಾಕಾಣಿಕೆಗೆ ಮತ್ತು ಜಾನುವಾರುಗಳ ಕುಡಿಯುವ ನೀರಿಗಾಗಿ ಬಳಸುತ್ತಿದ್ದರು.

ಅರಸೀಕೆರೆ ತಾಲೂಕಿನ ಕೆರೆಗಳು ಮಳೆಯಾಶ್ರಿತ ಕೆರೆಗಳಾಗಿವೆ. ಸಣ್ಣ ಕೆರೆಗಳು ರಕ್ಷಣೆ ಇಲ್ಲದೆ ನಾಶವಾಗುವ ಅಂಚಿನಲ್ಲಿವೆ. ಇಂತಹ ಕೆರೆಗಳತ್ತ ಕೆರೆಗೆ ಸಂಬಂಧಿಸಿದ ಇಲಾಖೆ ಮತ್ತು ತಾಲೂಕಿನ ಗ್ರಾಮ ಪಂಚಾಯತಿ ಗಮನ ಹರಿಸಬೇಕು.

ಅಡಿಟಿಪ್ಪಣಿಗಳು

1. ಅಂಬಳಿಕೆ ಹಿರಿಯಣ್ಣ (ಪ್ರಸಂ), 2009; ಕನ್ನಡ ವಿಷಯ ವಿಶ್ವಕೋಶ, ಭೂಗೋಳವಿಜ್ಞಾನ, ಪು. 36.
2. ಸಣ್ಣ ನೀರಾವರಿ ಇಲಾಖೆಯ ವರದಿ, 2012, ಅರಸೀಕೆರೆ.
3. *EC.*, X, ಮುರುಂಡಿ, ನಂ. 228, (V 139), ಪು. 28, ಅರಸೀಕೆರೆ (ತಾ), ಹಾಸನ (ಜಿ).
4. *Ibid.*, ಗಂಡಸಿ, ನಂ. 197, (V 158), ಪು. 252, ಅರಸೀಕೆರೆ (ತಾ), ಹಾಸನ (ಜಿ).
5. *Ibid.*, ಕೆಲ್ಲಂಗೆರೆ, ನಂ. 153, (V 115), ಪು. 199, ಅರಸೀಕೆರೆ (ತಾ), ಹಾಸನ (ಜಿ).
6. *Ibid.*, ಗಂಡಸಿ, ನಂ. 198, (V 159), ಪು. 253, ಅರಸೀಕೆರೆ (ತಾ), ಹಾಸನ (ಜಿ).
7. *Ibid.*, ನೇರ್ಲಿಗೆ, ನಂ. 285, (V 238), ಪು. 348, ಅರಸೀಕೆರೆ (ತಾ), ಹಾಸನ (ಜಿ)
8. *Ibid.*, ತಿಮ್ಮನಹಳ್ಳಿ, ನಂ. 280, (XV 239), ಪು. 344, ಅರಸೀಕೆರೆ (ತಾ), ಹಾಸನ (ಜಿ)
9. *Ibid.*, ಜಾವಗಲ್, ನಂ. 273, ಪು. 388, ಅರಸೀಕೆರೆ (ತಾ), ಹಾಸನ (ಜಿ).
10. *Ibid.*, ಸಿಂಗನಹಳ್ಳಿ, ನಂ. 261, (XV 245), ಪು. 389, ಅರಸೀಕೆರೆ (ತಾ), ಹಾಸನ (ಜಿ)
11. ಕ್ಷೇತ್ರಕಾರ್ಯ



ಕೆಲ್ಲಂಗೆರೆ ಕೆರೆ



ಗಂಡಸಿ ಕೆರೆ



ನೇರ್ಲಿಗೆ ಕೆರೆಯ ತೂಬಿನ ಮೇಲಿರುವ ಗಜಲಕ್ಷ್ಮಿ ಶಿಲ್ಪ



ಜಾವಗಲ್ ಕೆರೆ ಏರಿ ಮೇಲಿರುವ ಕೆಂಚಪ್ಪನ ಗುಡಿ



ಜಾವಗಲ್ ಕೆರೆ ಪಕ್ಕದಲ್ಲಿರುವ ರಾಜನ ಶಿಲ್ಪ

23

ವಿಜಯನಗರ ಆಡಳಿತ ಕಾಲದ ಮುಳುಬಾಗಿಲು ರಾಜ್ಯ

ಸುಂಕಂ ಗೋವರ್ಧನ

ಕೋಲಾರ ಜಿಲ್ಲೆಯ ಮುಳಬಾಗಿಲು: ರಾಮಾಯಣ, ಮಹಾಭಾರತ ಪ್ರಸಂಗಗಳೊಂದಿಗೆ ತಳುಕು ಹಾಕಿಕೊಂಡಿರುವ ಈ ಪ್ರದೇಶ ಪ್ರಾಗ್ಯೈತಿಹಾಸಿಕ ನೆಲೆಗಳಿಂದಲೂ ಪ್ರಸಿದ್ಧವಾಗಿದೆ. ಐತಿಹಾಸಿಕವಾಗಿ ಪ್ರಸಿದ್ಧ ವ್ಯಾಪಾರೀ ಕೇಂದ್ರವಾಗಿ ಹಲವಾರು ರಾಜಕೀಯ ಘಟನೆಗಳಿಗೆ ಸಾಕ್ಷಿಯಾಗಿದೆ.

ಅತ್ಯಂತ ಪ್ರಾಚೀನ ದಾಖಲೆಗಳ ಪ್ರಕಾರ ಬಾಣ, ಗಂಗ, ನೊಳಂಬರ ಆಳ್ವಿಕೆಯ 9ನೆಯ ಶತಮಾನದ ಹೊತ್ತಿಗೆ ಮುಳುವಾಯ್‌ನಾಡಾಗಿ ಅಸ್ತಿತ್ವದಲ್ಲಿತ್ತು. ಚೋಳರ ಆಳ್ವಿಕೆಯಲ್ಲಿ ಈ ಪ್ರದೇಶ "ನಿಗರಿಲಿ ಚೋಳ ಮಂಡಲ"ದಲ್ಲಿದ್ದ ಮುಳಬಾಗಿಲು ನಂತರ ಮುಮ್ಮಡಿ ಬಲ್ಲಾಳನು, ಹೊಯ್ಸಳರ ಆಳ್ವಿಕೆಗೆ ಒಳಪಡುವ ಎಲ್ಲಾ ಅಳಿದುಳಿದ ಪ್ರದೇಶಗಳನ್ನು ಒಟ್ಟುಗೂಡಿಸಿ 'ಹೆಸರ್ ಕುಂದಾಣಿ ರಾಜ್ಯ'ವನ್ನು ಕಟ್ಟಿದಾಗ ಆ ರಾಜ್ಯದ ಸೆರಗಿನಲ್ಲಿ ಸೇರಿಹೋಯಿತು. ನಂತರ ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯ ವಿಸ್ತರಣೆಯ ಸಂದರ್ಭದಲ್ಲಿ ಮುಳಬಾಗಿಲನ್ನು ತಮ್ಮ ಉಪರಾಜಧಾನಿಗಳಲ್ಲಿ ಒಂದನ್ನಾಗಿ ಮಾಡಿಕೊಂಡು ಮುಳಬಾಗಿಲ ಸುತ್ತಮುತ್ತಲ ವಿಸ್ತಾರವಾದ ಭೂಪ್ರದೇಶವನ್ನು **ಮುಳಬಾಗಿಲ ರಾಜ್ಯ**ವನ್ನಾಗಿ ಕಟ್ಟಿದರು.

ಮುಳವಾಯ್ ಹಾಗೂ ಮುಳಬಾಗಿಲು ಎಂಬ ಪದಗಳು ಸಮಾನಾರ್ಥಕ ಪದಗಳಾಗಿದ್ದು ಕನ್ನಡ ನಾಡನ್ನು ಪ್ರವೇಶಿಸಲು ಇದು ಮೂಡಣ ಬಾಗಿಲಾಗಿಲು ಎಂಬುದಾಗಿ ಜನಜನಿತವಾಗಿದೆ.

ಮುಳಬಾಗಿಲು ರಾಜ್ಯವು ಇಂದಿನ ಬಹುತೇಕ ಕೋಲಾರ ಜಿಲ್ಲೆಯ ಪೂರ್ತಿಭಾಗದ ಜೊತೆಗೆ ಬೆಂಗಳೂರು ಜಿಲ್ಲೆಯ ಹೊಸಕೋಟೆ ಹಾಗೂ ಆನೇಕಲ್ ತಾಲ್ಲೂಕುಗಳ ಕೆಲವು ಪ್ರದೇಶ, ತಮಿಳುನಾಡಿನ ಕೃಷ್ಣಗಿರಿ, ಧರ್ಮಪುರಿ ಹಾಗೂ ವೇಲೂರು ಜಿಲ್ಲೆಗಳ ಕೆಲ ಪ್ರದೇಶ ಹಾಗೂ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕೆಲವು ಭಾಗಗಳನ್ನು ಒಳಗೊಂಡಿದೆ.

ಈ ಭಾಗದ ಕನ್ನಡ, ತಮಿಳು ಹಾಗೂ ತೆಲುಗು ಶಾಸನಗಳು ಮುಳಬಾಗಿಲು ರಾಜ್ಯವನ್ನು ಪ್ರಸ್ತಾಪಿಸುತ್ತವೆಯಾದರೂ ಈ ರಾಜ್ಯದಲ್ಲಿ ಅಂತರ್ಗತವಾಗಿದ್ದ ಎಲ್ಲಾ ನಾಡುಗಳ ಸಮಗ್ರ ಮಾಹಿತಿ ದೊರೆಯುವುದಿಲ್ಲ. ಪ್ರಸ್ತುತ ಲಭ್ಯವಿರುವಂತೆ **ಮುಳವಾಯ್ ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ನಾಡುಗಳೆಂದರೆ ಯಳವಂಜಿನಾಡು, ಹದಿನಾಡು, ಹೊದೆನಾಡು, ಆವನಿನಾಡು, ಬಿಲಿಸೋಣೆನಾಡು, ಕೈವಾರನಾಡು, ತೇಕಲ್‌ನಾಡು. ಪೊನ್‌ಮಣಿಕ್ಕನಾಡು, ಪುಲಿನಾಡು, ಬೆಳ್ಳೂರು ಸೀಮೆ, ಕುಂದಾಣಿಸೀಮೆ, ಮಂಜಿನಾಡ ಪೆಂಣ್ಣಗರರ ಸೀಮೆಗಳು** ಅಸ್ತಿತ್ವದಲ್ಲಿ ಇದ್ದುದಕ್ಕೆ ಸ್ಪಷ್ಟವಾದ ಶಾಸನಾಧಾರಗಳಿವೆ. ಈ ನಾಡುಗಳ ಮಧ್ಯದಲ್ಲಿರುವ ಇನ್ನಿತರ ನಾಡುಗಳು ಸಹ ಇದೇ ರಾಜ್ಯದಲ್ಲಿ ಅಂತರ್ಗತವಾಗಿದ್ದವು ಎಂದು ಸುಲಭವಾಗಿ ಊಹಿಸಬಹುದಾಗಿದೆ.

ಮುಳಬಾಗಿಲು ಒಂದು ನಾಡಿನ ಕೇಂದ್ರವಾಗಿ 'ಮುಳಬಾಗಿಲು ನಾಡು' ಎಂದು 9ನೆಯ ಶತಮಾನದಲ್ಲಿಯೇ ಅಸ್ತಿತ್ವದಲ್ಲಿದ್ದರೂ ಈ ನಾಡನ್ನು ಹಾಗೂ ಸುತ್ತಮುತ್ತಲ ಹಲವಾರು ನಾಡುಗಳನ್ನು ಒಳಗೊಂಡ ಒಂದು ರಾಜ್ಯವಾದದ್ದು ವಿಜಯನಗರದ ಅರಸರ ಕಾಲದಲ್ಲಿಯೇ. ಮುಳುಬಾಗಿಲು ರಾಜ್ಯದ ಅತ್ಯಂತ ಪ್ರಾಚೀನ ದಾಖಲೆ ಸಿಕ್ಕಿರುವುದು ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಹೊಸೂರು ತಾಲ್ಲೂಕಿನ ಒನ್ನಲವಾಡಿ ಗ್ರಾಮದ ಕ್ರಿ.ಶ. 1379ರ ಶಾಸನ. ಆದರೆ ಮುಳವಾಯ್ ರಾಜ್ಯಕ್ಕೆ ಸಂವಾದಿಯಾಗಿ ಆಗ **ಮುಳವಾಯ್ ಚಾವಡಿ**ಯ ಉಲ್ಲೇಖ ಹೊಯ್ಸಳರ ಕಡೆಯ ಕಾಲಕ್ಕೆ ಪ್ರಚಲಿತವಾಗಿತ್ತು. ಮುಂದೆ 15 ಹಾಗೂ 16ನೆಯ ಶತಮಾನದವರೆಗೂ ಅಲ್ಲಲ್ಲಿ ಈ 'ಚಾವಡಿ'ಯನ್ನು ಉಪಯೋಗಿಸಿದ್ದಾರೆ. ಈ **'ಮುಳವಾಯಿ ಚಾವಡಿ'**ಯ ಪ್ರಾಚೀನ ದಾಖಲೆ ಸಿಕ್ಕಿರುವುದು ಮುಳಬಾಗಿಲ ಸೋಮೇಶ್ವರ ದೇವಾಲಯದ ಕ್ರಿ.ಶ. 1261ರ ಶಾಸನದಲ್ಲಿ.[2] ಈ ಶಾಸನದಲ್ಲಿ ಮುಳವಾಯಿ ಚಾವಡಿಯಲ್ಲಿದ್ದ ಯಿಂಡ್ಲಹಳ್ಳಿ, ಗುಮ್ಮಕಲ್ಲು ಗ್ರಾಮ, ಮಾರಂಡಹಳ್ಳಿ, ಕೊಂಡೇನಹಳ್ಳಿ, ಗಡಿಪಲ್ಲಿ, ನೆಲ್ಲಿಕುಂಟೆ ಗ್ರಾಮ, ಕಗ್ಗನಹಳ್ಳಿ, ತಿರುಮಲಹಳ್ಳಿ, ಪಾಲೇನಹಳ್ಳಿ, ತೊಲಡಿ ಗ್ರಾಮ ಹಾಗೂ ಮೇಲುತಾಯಲೂರು ಗ್ರಾಮಗಳನ್ನು ಪ್ರಸ್ತಾಪಿಸುತ್ತದೆ ಹಾಗೂ ಇದರ ಜೊತೆಗೆ ತ್ಯಾಕಲ್ಲು ಸೀಮೆಯ ಕಂಪಸಮುದ್ರ ಗ್ರಾಮವನ್ನು ಒಳಗೊಂಡ ಈ ಮೇಲಿನ ಊರುಗಳನ್ನು ಮುಳಬಾಗಿಲ ಸೋಮೇಶ್ವರ ದೇವಾಲಯಕ್ಕೆ ಯಳವಂಜಿರಾಯರು ನೀಡಿದ ಕಾಣಿಕೆಯಾಗಿದೆ.

ನಂತರ ಮುಳಬಾಗಿಲು ತಾಲ್ಲೂಕಿನ ಯೆಲ್ದೂರು ಹೋಬಳಿಯ ಉತ್ತನೂರಿನ ಕ್ರಿ.ಶ. 1332ರ ಶಾಸನವೊಂದು[3] ಮುಳಬಾಗಿಲ ರಾಜ್ಯದಲ್ಲಿದ್ದ ಹೊದೆನಾಡ ಉತ್ತನೂರ ಮಡವಾಳದ ಕಾವಬ್ಬದೇವಿಯರ ಸ್ತಾನೀಕರನ್ನು ಪ್ರಸ್ತಾಪಿಸುತ್ತದೆ.

ಮೇಲೆ ಹೇಳಿದ ಕೃಷ್ಣಗಿರಿ ಜಿಲ್ಲೆಯ ಒನ್ನಲವಾಡಿ ಗ್ರಾಮದ ಕ್ರಿ.ಶ. 1379ರ ಶಾಸನವು ವೀರಬುಕ್ಕರಾಯರ ಮಗ ಕುಮಾರ ಹರಿಯಪ್ಪ ಒಡೆಯರ ಕಾಲದಲಿ, ಅವರ ಮಹಾಪ್ರಧಾನಿಯೂ ಮುಳುವಾಯಿ ರಾಜ್ಯ ಪ್ರಧಾನರೂ ಆಗಿದ್ದ ಮುದೆಯದಂಡನಾಯಕರು ಶಾಂತಿನಾಥ, ಶ್ರೇಯನಾಥ, ಭೂತನಾಥ ದೇವಾಲಯಗಳಿಗೆ ಸಂಬಂಧಿಸಿದ ಹಾಗೆ ಕೆಲವು ದಾನಗಳನ್ನು ನೀಡಿದ್ದಾನೆ. ಮುಳಬಾಗಿಲಿನ ಶಂಕರ ತೀರ್ಥದ ಬಳಿ ಇರುವ ಪಾಬದೇವಾಲಯದ ಗೋಡೆಯ ಮೇಲಿರುವ 1360ರ ಶಾಸನದಲ್ಲಿ[4] ಮುಳವಾಯಿ ರಾಜ್ಯದ ಆವನಿನಾಡಿನ ಕುಂಮಾದೇವಿಯ ಹಳ್ಳಿಯನ್ನು ಬುಕ್ಕಣ್ಣ ಒಡೆಯನು ವಿದ್ಯಾಶಂಕರ ದೇವರಿಗೆ ದತ್ತಿ ಬಿಟ್ಟುದನ್ನು ದಾಖಲಿಸಿದೆ.

ಶ್ರೀನಿವಾಸಪುರ ತಾಲ್ಲೂಕಿನ ಸೋಮಯಾಜನಪಳ್ಳಿ ತಾಲ್ಲೂಕಿನ ಹೊದಲಿ ಗ್ರಾಮದ ವೆಂಕಟರಮಣನ ದೇವಾಲಯದ ಶಾಸನವೊಂದು ವೀರಹರಿಹರರಾಯನು ವಿಜಯನಗರದಲ್ಲಿ ಆಳುತ್ತಿರುವಾಗ ಆತನ ಮಗನಾದ ಇಮ್ಮಡಿ ಬುಕ್ಕರಾಯನು ಮುಳುಬಾಗಿಲಲ್ಲಿ ರಾಜ್ಯವಾಳುವಾಗ ಮುಳಬಾಗಿಲ ರಾಜ್ಯದ ಬಿಲುಸೋಣಿನಾಡಿನ ಹೊದಲಿ ಗ್ರಾಮವನ್ನು ಪ್ರಸ್ತಾಪಿಸಿ ಆ ಗ್ರಾಮದ ನಾಡಪ್ರಭು ತಿಂಣಲ ಚೊಕ್ಕಪ್ಪನು ಹೊದಲಿಯ ಮಾರಪ್ಪ ಹಾಗೂ ಚಿನ್ನಣ್ಣರು ತಮ್ಮ ತಂದೆ-ತಾಯಿಯಾದ ಮಾಚಗಾವುಂಡ ಹಾಗೂ ಮಲೆಯಕ್ಕರಿಗೆ ಪುಣ್ಯವಾಗಲೆಂದು ವಿಘ್ನೇಶ್ವರನಿಗೆ ದೀಪಮಾಲೆಯ ನಿಲ್ಲಿಸಿದ ಸಂದರ್ಭದಲ್ಲಿ ಹಲವಾರು ದಾನಗಳನ್ನು ನೀಡಿದ್ದಾನೆ. ಈ ಶಾಸನದ ಕಾಲ ಕ್ರಿ.ಶ. 1395.[5]

ಮುಳಬಾಗಿಲು ಹೋಬಳಿ ಕಾವುತ್ತನ ಹಳ್ಳಿಯ ಸೋಮೇಶ್ವರ ದೇವಾಲಯದ ಮುಂದೆ ಇರುವ ಕ್ರಿ.ಶ. 1396ರ ಶಾಸನವೊಂದು[6] ಆವನಿನಾಡಿನ ಕಾವುತ್ತನಹಳ್ಳಿ, ಯಡಲು ಕಚುವನಹಳ್ಳಿ, ಗೋಡಿಯಹಳ್ಳಿ ಗ್ರಾಮಗಳನ್ನು ಈ ಸೋಮೇಶ್ವರ ದೇವರ ಪ್ರತಿಷ್ಠಾ ಕಾಲದಲ್ಲಿ ನೀಡಲಾದ ದತ್ತಿಗಳನ್ನು ದಾಖಲಿಸುತ್ತದೆ. ಇದೇ ವರ್ಷದ ಇನ್ನೊಂದು ಶಾಸನದಲ್ಲಿ[7] ವೀರ ಬುಕ್ಕಣ್ಣ ಒಡೆಯರಿಗೆ ಧರ್ಮವಾಗಲೆಂದು ಆವನಿನಾಡ ಕಾವುತ್ತರಪಳ್ಳಿಯನ್ನು ವ್ಯಾಪಾರಿಗಳು ಇದೇ ದೇವಾಲಯಕ್ಕೆ ದಾನ ನೀಡಿದ್ದಾರೆ.

ಕ್ರಿ.ಶ. 1407ರ ವಾಣಿಗರಹಳ್ಳಿಯ ಶಾಸನವು[8] ಉತ್ತನೂರು ಮಡವಳದ ಗೌರಿದೇವಿಯ ಸ್ಥಾನಿಕರು ಹಾಗೂ ನಗರ್ತರು ಮಂಗರಸನಿಗೆ ಕೊಟ್ಟ ಕೊಡುಗೆಯಾಗಿ ಮುಳಬಾಗಿಲು ರಾಜ್ಯದ ಹೊದೆನಾಡಿನಲ್ಲಿರುವ ಹಿರೇಮಂಗಸಮುದ್ರ

ಕೆರೆಯಲ್ಲಿ ಹಾಗೂ ಆ ಊರಿನ ಒಳಗೆರೆಯಲ್ಲಿ ಆದಂತಹ ಗದ್ದೆಯನ್ನು ನೀಡಿ ಹೊದೆನಾಡ ವಾಣಿಯರ ಹಳ್ಳಿಯನ್ನು ದಾನ ನೀಡಿದ್ದಾರೆ.

ಕ್ರಿ.ಶ. 1417ರ ಮುಳಬಾಗಿಲ ನಾಚಾರಮ್ಮನ ದೇವಾಲಯದ ಬಳಿ ಇರುವ ಶಾಸನವು[9] ಮುಳಬಾಗಿಲು ರಾಜ್ಯದ ಹೊದೆನಾಡ ಕತರಿಯಹಳ್ಳಿಯನ್ನು ಮುಳುವಾಯಿ ನಾಚಿಪುರವಾಗಿ ಪರಿವರ್ತಿಸಿ ಮುಳುಬಾಗಿಲು ಬೆಟ್ಟದ ಮೇಲೆ ಮುಳುವಾಯಿ ನಾಚಿದೇವಿಯನ್ನು ಪುನಃ ಪ್ರತಿಷ್ಠೆ ಮಾಡಿ ಅಗ್ರಹಾರವೊಂದನ್ನು ದಾನವಾಗಿ ನೀಡಿದ್ದಾನೆ. ಇದಕ್ಕೆ ಕಾರಣಕರ್ತನು ದೇವರಾಯ ಮಹಾರಾಯನ ಮಹಾಪ್ರಧಾನ ನಾಗಣ್ಣದಣ್ಣಾಯಕ ಹಾಗೂ ಅನ್ನದಾನಿ ಒಡೆಯ.

ಕ್ರಿ.ಶ. 1428ರ ಅಚಟ್ಟಹಳ್ಳಿಯ ಶಾಸನವು[10] ಮುಳುವಾಯ್ ರಾಜ್ಯದ ಬೆಳ್ಳೂರು ಸೀಮೆಯ ಬೆಳ್ಳೂರಿನಲ್ಲಿ ದನಿಕದೇವಿಕೆರೆಯೊಂದನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1429ರ ಉಳುವಾಡಿಯ ಶಾಸನವು[11] ಮುಳುವಾಯಿ ರಾಜ್ಯದಲ್ಲಿ ಮಂನೆ, ಗೊಂಡೇನಹಳ್ಳಿ, ಕಾಲುವಳ್ಳಿ, ವೋಬಸಮುದ್ರ ಗ್ರಾಮಗಳು ಇದ್ದುದನ್ನು ತಿಳಿಸುತ್ತದೆ.

ಕ್ರಿ.ಶ. 1431ರಲ್ಲಿ[12] ವಿಜಯರಾಯನ ಧರ್ಮವಾಗಿ ಹೆಗ್ಗಡೆ ದೇವಣ್ಣಗಳ ಮಗನಾದ ಅಕ್ಕಣ್ಣ ದಂಡನಾಯಕರು ಪ್ರಸನ್ನ ವಿರೂಪಾಕ್ಷ ದೇವರಿಗೆ ಮುಳುವಾಯಿ ಸೀಮೆಗೆ ಸಲ್ಲುವ ವಿರೂಪಾಕ್ಷಪುರ, ಗುಟ್ಟಹಳ್ಳಿ, ಸೂರಾದೇವಿಹಳ್ಳಿ, ಮಹಾದೇವನಹಳ್ಳಿ, ಕುಮುದೇವನಹಳ್ಳಿ ಗ್ರಾಮಗಳನ್ನು ದತ್ತಿಯಾಗಿ ನೀಡಿದನು.

ಕ್ರಿ.ಶ. 1465ರ ಕ್ಯಾಸಂಬಳ್ಳಿ ಮಡಿವಾಳದ ಶಾಸನವು[13] ಮುಳುವಾಯ್ ರಾಜ್ಯದ ಎಳವಂಜಿನಾಡಿನ ಕೆಸಂಬಳಿ ಹಾಗೂ ಮಡಿವಾಳದ ಗ್ರಾಮವನ್ನು ಉಲ್ಲೇಖಿಸುತ್ತದೆ.

ಕ್ರಿ.ಶ. 1428ರ ಮುದುವಾಡಿಯ ಶಾಸನವು[14] ದೇವರಾಯ ಮಹಾರಾಯರ ದಿವ್ಯ ನೆನಪಿನಲ್ಲಿ ಮುಳುಬಾಗಿಲು ರಾಜ್ಯದ ಮುದುವಾಡಿಯನ್ನು ದೇವರಾಯ ಪುರವೆಂದಾಗಿ ಪುನರ್ನಾಮಕರಣ ಮಾಡಿ ಅಗ್ರಹಾರವೊಂದನ್ನು ಸ್ಥಾಪಿಸುವುದಾಗಿ ತಿಳಿಸಿದೆ.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಡೆಂಕಣಿಕೋಟೆ ತಾಲ್ಲೂಕಿನ ಗುಮ್ಮಳಾಪುರ ಊರಿನ ಕ್ರಿ.ಶ. 1487ರ ಶಾಸನವೊಂದು[15] ದೇವರಾಯನ ಕಾಲದಲ್ಲಿ ಲಕ್ಕಣ್ಣ ಒಡೆಯನು ಮುಳುವಾಯಿ ರಾಜ್ಯವನ್ನು ಆಳುತ್ತಿದ್ದಾಗ ಮುಳುವಾಯ್ ರಾಜ್ಯಕ್ಕೆ ಸಲ್ಲುವ ಗುಮ್ಮಳಾಪುರ ಗ್ರಾಮವನ್ನು ಪ್ರಸ್ತಾಪಿಸುವಂತೆ ತೋರುತ್ತದೆ. ದೇವರಾಯನಸಮುದ್ರವನ್ನು ಗೌಡ ಆದಂಣ್ಣನ ದಂಡಿನ ಜೀವಿತಕೆ ಕೊಟ್ಟುದನ್ನು ತಿಳಿಸುತ್ತದೆ.

ಕ್ರಿ.ಶ. 1497ರ ರಾಜಗುಂಡ್ಲಹಳ್ಳಿಯ ಶಾಸನವು[16] ಅಲ್ಲಪ್ಪಗಳ ಮಕ್ಕಳು ಕದಿರಿ ಲಕ್ಷ್ಮೀನರಸಿಂಹ ದೇವರಿಗೆ ಸಮನಾದ ಮುಳುಬಾಗಿಲು ರಾಜ್ಯದ ಹೊದೆನಾಡಿನಲ್ಲಿರುವ ಗುಂಡಲಹಳ್ಳಿಯ ನರಸಿಂಹದೇವರ ದೇವಾಲಯವನ್ನು ಮಾಡಿ ಈ ಗ್ರಾಮವನ್ನು ನರಸಿಂಹಪುರ ಎಂದು ಪ್ರತಿನಾಮಕರಣ ಮಾಡಿದರು ಎಂದು ತಿಳಿಸುತ್ತದೆ. ಅಗರದ ಇದೇ ಕಾಲದ ಶಾಸನವೊಂದು[17] ಹೊದೆನಾಡಿನಲ್ಲಿ ಇದ್ದಂತಹ ಅಬಾಚಲಿ ಅಗರದ ಜೊತೆಗೆ ಇನ್ನೆರಡು ಊರುಗಳನ್ನು ಪ್ರಸ್ತಾಪಿಸುತ್ತದೆ.

ಕ್ರಿ.ಶ. 1499ರ ತೇಕಲ್ಲಿನ ಶಾಸನವು[18] ನರಸನಾಯಕನ ಕಾಲದಲ್ಲಿ ಅವನ ಮಹಾಮಂಡಲೇಶ್ವರನೂ ಮಂಡಳೀಕ ರವಿರಾಹುತ ಬಿರುದಾಂಕಿತನೂ ಆದ ರಾಮರಾಹುತನೂ ಮುಳುವಾಯಿಚಾವಡಿಗೆ ಸಲ್ಲುವ ತೇಕಲ್ ನಾಡಿನ ತಮ್ಮಟ್ಟಕುನ್ಟ ಗ್ರಾಮವನ್ನು ತೇಕಲ್ಲಿನ ಅರುಳಾಳನಾಥನಿಗೆ ದತ್ತಿಯನ್ನು ನೀಡಿದ್ದಾನೆ.

ಕ್ರಿ.ಶ. 1505ರ ಕೋಡಿಹಳ್ಳಿಯ ಶಾಸನವು[19] ಮುಳುವಾಯ್ ನಾಡಿನ ಚಿಂತಾ . . ಯ (?) ಗ್ರಾಮವನ್ನು ಉಲ್ಲೇಖಿಸುತ್ತದೆ.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಡೆಂಕಣಿಕೋಟೆ ತಾಲ್ಲೂಕಿನ ಕೊತ್ತಪಾಡಿ ಗ್ರಾಮದ ಶಾಸನವೊಂದು[20] ಮುಳಬಾಗಿಲಚಾವಡಿಯ ಡೆಂಕಣಿಕೋಟೆಯ ನಾಯಕತನಕ್ಕೆ ಸಲ್ಲುವ ಮಂಜಿನಾಡ ಪೆಂಣ್ಣಾಗರದ ಸೀಮೆಯ ಕೂತಪಾಡಿಯ

ಗ್ರಾಮವನ್ನು ಏಕಭೋಗ್ಯ ಸರ್ವಮಾನ್ಯವಾಗಿ ತಿಮ್ಮ . . . ರಸನಿಗೆ ಧರ್ಮವಾಗಲೆಂದು ದತ್ತಿಯನ್ನು ನೀಡಲಾಗಿದೆ. ಈ ಶಾಸನದ ಕಾಲ ಕ್ರಿ.ಶ. 1509.

ಮುಳಬಾಗಿಲು ಹೋಬಳಿ ಸೋಮೇಶ್ವರ ಪಾಳ್ಯದ ದೇವಾಲಯದ ಶಾಸನವು[21] ಕ್ರಿ.ಶ. 1518ರ ಕಾಲಕ್ಕೆ ಸೇರಿದ್ದು, ಕೃಷ್ಣರಾಯಮಹಾರಾಯನಿಂದ ನೇರವಾಗಿ ಕರಣಿಕ ನಾಗಣ್ಣನ ಮೂಲಕ ಸಲಗೆಯ ದೇವನು ಮುಳುವಾಯ್ ರಾಜ್ಯಕ್ಕೆ ಸಲ್ಲುವ ಎಳವಂಜಿನಾಡಿನಲ್ಲಿರುವ ಮಂದರಗೋಂಟೆ ಎಂಬ ಗ್ರಾಮವನ್ನು ಕೇಳಿ ಪಡೆದು ಮುಳಬಾಗಿಲು ಸೋಮೇಶ್ವರ ದೇವಾಲಯಕ್ಕೆ ದಾನವನ್ನು ನೀಡಿದ್ದಾನೆ.

ಕ್ರಿ.ಶ. 1520ರ ಶಾಸನವು[22] ಕೃಷ್ಣದೇವರಾಯನು ರಾಜ್ಯಭಾರ ಮಾಡುವಾಗ ರಾಯದುರ್ಗದ ತಿಪ್ಪರಸರ ಮಕ್ಕಳು ಭೋಗರಸರು ತಮ್ಮ ಒಡೆಯರಾದ ತಿಮ್ಮರಾಜ ಒಡೆಯರಿಗೆ ಧರ್ಮವಾಗಲೆಂದು ಮುಳುವಾಯಿಚಾವಡಿಗೆ ಸಲ್ಲುವ ಕುಂದಾಣಿಸೀಮೆಯಲ್ಲಿರುವ ಮುಕುಂದಸಾಗರ ಹಾಗೂ ಕಳವೆಕಲ್ಲಿಗೆ ಪ್ರತಿನಾಮವಾದ ತಿಪ್ಪಸಮುದ್ರ ಗ್ರಾಮವನ್ನು ಭಟ್ಟವೃತ್ತಿಯಾಗಿ ಬಿಟ್ಟನು. 1521ರ ಶಾಸನವೊಂದು[23] ಮುಳವಾಯ್ ಮೂಡಣ ಪರಿಶಿಯ ಹನುಮಂತ ದೇವರ ಗುಡಿಗೆ ಮುಳುವಾಯ್ ಚಾವಡಿಯ ಮುಳುವಾಯ್‌ಸೀಮೆಗೆ ಸಲ್ಲುವ ತಾತಗಟ್ಟ ಗ್ರಾಮವನ್ನು ಕೊಂಡುಕೊಂಡು ಮುಳುಬಾಗಿಲ ಹನುಮಂತದೇವರ ಗುಡಿಯಲ್ಲಿ ರಾಮಾಲಯ ಮಾಡಿಸಿ ರಾಮಾಲಯದಲ್ಲಿ ರಾಮ, ಲಕ್ಷ್ಮಣ, ಸೀತೆಯರನ್ನು ಪ್ರತಿಷ್ಠಾಪಿಸಿ ಸಿಂಗಣ್ಣ ಒಡೆಯನು ಕೆಲವು ದಾನಗಳನ್ನು ನಡೆಸಿದ್ದಾನೆ.

ಕ್ರಿ.ಶ. 1525ರ[24] ಮುಳುಬಾಗಿಲ ರಾಜ್ಯದ ಹೊರೆನಾಡಿನಲ್ಲಿರುವ ಶಾಸನವು ಪ್ರತಾಪದೇವರಾಯಪುರವಾದ ಗುಡಿಪಲ್ಲಿಯ ಸರ್ವ ಮಹಾಜನಗಳು ದೇವಾಲಯವೊಂದಕ್ಕೆ ದತ್ತಿ ಬಿಟ್ಟುದನ್ನು ಹೇಳುತ್ತದೆ.

ಕ್ರಿ.ಶ. 1533ರ ಬಳವನಹಳ್ಳಿಯ ಶಾಸನವೊಂದು[25] ಮುಳುಬಾಗಿಲಿಗೆ ಸಲುವ ಬಳೂರನಹಳ್ಳಿಯನ್ನು ಪ್ರಸ್ತಾಪಿಸುತ್ತದೆ. ಕ್ರಿ.ಶ. 1547ರ ಸದಾಶಿವರಾಯನ ಕಾಲದ ಶಾಸನವು[26] ಮುಳುಬಾಗಿಲು ರಾಜ್ಯದ ಹದಿನಾಡಿನ ಮಹಾಮಂಡಲೇಶ್ವರನಾದ ನಂದ್ಯಾಲರ ವೀರರಾಜ ಶ್ರೀರಂಗರಾಜಗಳ ಮಕ್ಕಳು ತಮ್ಮ ನಾಯಕತನಕೆ ಸಲ್ಲುವ ಮುಳಬಾಗಿಲು ರಾಜ್ಯದ ಹರಿನಾಡಿನ ಹಲವು ಗ್ರಾಮಗಳನ್ನು ದಾನವಾಗಿ ನೀಡಿದ್ದಾನೆ.

ಕ್ರಿ.ಶ. 1552ರ ಶಾಸನವೊಂದು[27] ಮುಳುಬಾಗಿಲು ಸೀಮೆಯ ಬಯಿರಸಮುದ್ರ ಸ್ಥಳದ ಮೈಲಾಂಡಿಹಳ್ಳಿಯನ್ನು ಉಲ್ಲೇಖಿಸುತ್ತದೆ. ಕ್ರಿ.ಶ. 1645ರ ರಾಮಸಾಗರ ವಿರೂಪಾಕ್ಷೇಶ್ವರ ದೇವಾಲಯದ ಶಾಸನವು[28] ಮುಳುವಾಯಿ ರಾಜ್ಯದ ಬುಕ್ಕಸಾಗರವನ್ನು ಹಾಗೂ ಕ್ರಿ.ಶ. 1674ರ ಶಾಸನವೊಂದು[29] ಮುಳವಾಯಿ ಸೀಮೆಯ ಆವನಿನಾಡಿನ ಕುಪ್ಪಸಮುದ್ರಂ ಗ್ರಾಮವನ್ನು ದಾಖಲಿಸುತ್ತದೆ.

ಒಟ್ಟಿನಲ್ಲಿ ಈ ಮೇಲಿನ ಮಾಹಿತಿಯಂತೆ ವಿಜಯನಗರದ ಅರಸರಾದ ಹರಿಹರರಾಯನಿಂದ ಹಿಡಿದು ಬುಕ್ಕಣ್ಣ ಒಡೆಯ, ಇಮ್ಮಡಿ ಹರಿಹರರಾಯ, ಕಂಪಣ್ಣ ಒಡೆಯ, ಎರಡನೇ ಬುಕ್ಕರಾಯ, ಎರಡನೇ ದೇವರಾಯ, ವಿಜಯರಾಯ, ಮೂರನೇ ವಿರೂಪಾಕ್ಷ, ನರಸಿಂಹನಾಯಕ, ನರಸನಾಯಕ, ಕೃಷ್ಣದೇವರಾಯ ಹಾಗೂ ಅರವೀಡು ವಂಶದ ಸಿಂಗರಾಜ, ರಾಮರಾಜ, ಶ್ರೀರಂಗರಾಯನಿಂದ ಹಿಡಿದು ವೆಂಕಟರಾಯನವರೆಗಿನ ಶಾಸನಗಳು ಮುಳುಬಾಗಿಲು ರಾಜ್ಯದಲ್ಲಿ ಲಭ್ಯವಿದ್ದು ಮುಳುವಾಯಿ ರಾಜ್ಯದ ವಿಸ್ತಾರವನ್ನು ಸ್ಥೂಲವಾಗಿ ಖಚಿತವಾಗಿಯಲ್ಲದಿದ್ದರೂ ಎಲ್ಲೆಗಳನ್ನು ಗುರುತಿಸಬಹುದಾಗಿದೆ.

ಈ ಅರಸರ ಮಾಂಡಳೀಕರಾಗಿ ಆಳಿದವರಲ್ಲಿ ಪ್ರಮುಖರೆಂದರೆ ಮುಳಬಾಗಿಲಿನ ಲಕ್ಕಣ್ಣ ದಂಡನಾಯಕ, ಮಾರಣ್ಣ ಒಡೆಯ, ನಾಗಣ್ಣ ದಣ್ಣಾಯಕ ಸಿಂಧಣ್ಣ ಒಡೆಯ, ಆವನಿಯಲ್ಲಿ ಸೋಮಪ್ಪ ಒಡೆಯ, ರಾಮದುರ್ಗದಲ್ಲಿ ತಿಪ್ಪರಸ, ತೇಕಲ್ಲಿನಲ್ಲಿ ಗೋಪರಾಜ ಮತ್ತು ರಾಮರಾಹುತರು ಶಾಸನೋಕ್ತ ಪ್ರಮುಖರು.

ವಿಜಯನಗರದ ಅರಸರ ಅಧೀನರಾಗಿ ಮುಳುಬಾಗಿಲು ಅರಸರು ಮುಳುಬಾಗಿಲನ್ನು ಕೇಂದ್ರವಾಗಿಟ್ಟುಕೊಂಡು ಬೈರಕೂರನ್ನು ನೆಲೆವೀಡಾಗಿ ಮಾಡಿಕೊಂಡು ಕೆಲವು ಕಾಲ ಆಳಿದರು.[30] ವಿಜಯನಗರದ ಕೊನೆ ಕೊನೆಗೆ ಸಾಮ್ರಾಜ್ಯ ಪತನವಾದಾಗ ಮುಳುಬಾಗಿಲು ರಾಜ್ಯವು ಹರಿದು ಹಂಚಿಹೋಗಿ ಒಂದು ಭಾಗವನ್ನು ಸುಗಟೂರಿನ ಅರಸರು[31] ಇನ್ನು ಹಲವಾರು ಭಾಗಗಳನ್ನು ಉಳಿದ ಪಾಳೆಯಗಾರರು ಪಾಲುಮಾಡಿಕೊಂಡು ಆಳಲು ಶುರುವಾಗಿ ವಿಸ್ತಾರವಾದ ಮುಳುಬಾಗಿಲು ರಾಜ್ಯವು ಗೊತ್ತೇ ಆಗದ ಹಾಗೆ ಕರಗಿಹೋಗಿ ಇವತ್ತಿನ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡಿನ ಭಾಗಗಳಲ್ಲಿ ಹಂಚಿಕೆಯಾಗಿದೆ.

ಅನುಬಂಧ

ಮುಳುವಾಯಿ ರಾಜ್ಯದ ಶಾಸನೋಕ್ತ ನಾಡುಗಳು ಹಾಗೂ ಊರುಗಳು

ಕ್ರ ಸಂ.	ಶಾಸನ ಸಂಪುಟ	ಶಾಸನ ಸಂಖ್ಯೆ	ಕಾಲ ಕ್ರಿ.ಶ.	ರಾಜ್ಯ	ವಿಭಾಗ	ನಾಡು	ಗ್ರಾಮಗಳು
1	E.C., X	MB 28	1261 A.D.	ಮುಳವಾಯ್ ಚಾವಡಿ	–	–	ಯಿಂಡ್ಲಹಳ್ಳಿ ಗುಮ್ಮಕಲ್ಲು ಗ್ರಾಮ ಮಾರಂಡಹಳ್ಳಿ ಕೊಂಡೇನಹಳ್ಳಿ ಗಡಿಪಲ್ಲಿ ನೆಲ್ಲಿಕುಂಟೆ ಗ್ರಾಮ ಕಗ್ಗನಹಳ್ಳಿ ತಿರುಮಲಹಳ್ಳಿ ಪಾಲೇನಹಳ್ಳಿ ತೊಲಡಿ ಗ್ರಾಮ ಮೇಲು ತಾಯಲೂರು
2	E.C., X	MB 115	1332 A.D.	–	–	ಹೊದೆನಾಡು	ಉತ್ತನೂರು ಮಡವಳ
3	ಕ.ವಿ.ಶಾ.ಸಂ. 4	ಒನ್ನಲವಾಡಿ	1379 A.D.	ಮುಳವಾಯಿ ರಾಜ್ಯ	–	ಬಿಲುಸೋಣಿ ನಾಡು	ಹೊದಲಿ
4	E.C., X	MB 11	1390 A.D.	ಮುಳವಾಯಿ ರಾಜ್ಯ	–	ಆವನಿನಾಡು	ಕುಯಾದೇವಿಯ ಹಳ್ಳಿ
5	E.C., X	SP 54	1395 A.D.	ಮುಳವಾಯಿ ರಾಜ್ಯ	–	ಬಿಲುಸೋಣಿ ನಾಡು	ಹೊದಲಿ
6	E.C., X	MB 29	1395 A.D.	–	ಮುಳವಾಯಿ ಸೀಮೆ	ಆವನಿನಾಡು	ಕಾಲುತ್ತನಹಳ್ಳಿ ಯೆಡಲು ಕಚುವನಹಳ್ಳಿ ಗೋಡಿಯಹಳ್ಳಿ


ಕ್ರ ಸಂ.	ಶಾಸನ ಸಂಪುಟ	ಶಾಸನ ಸಂಖ್ಯೆ	ಕಾಲ ಕ್ರಿ.ಶ.	ರಾಜ್ಯ	ವಿಭಾಗ	ನಾಡು	ಗ್ರಾಮಗಳು
7	E.C., X	MB 131	1407 A.D.	–	–	ಹೊದೆನಾಡು	ವಾಣಿಯರಹಳ್ಳಿ
8	E.C., X	MB 7	1417 A.D.	–	–	ಹೊದೆನಾಡು	ಕತರಿಯಹಳ್ಳಿ ಮುಳುವಾಯಿ ನಾಚಿಪುರ
9	E.C., X	KL 104	1428 A.D.	–	ಬೆಳ್ಳೂರು ಸೀಮೆ	–	ಬೆಳ್ಳೂರು
10	E.C., X	CT 29	1429 A.D.	ಮುಳುವಾಯಿ ಚಾವಡಿ	–	–	ಮಂನೆ ಗೊಂಡನಹಳ್ಳಿ ಕಾಲುವಳ್ಳಿ ವೋಬಸಮುದ್ರ
11	E.C., X	MB 2	1431 A.D.	–	ಮುಳುವಾಯಿ ಸೀಮೆ	–	ವಿರೂಪಾಕ್ಷನಪುರ ಗುಟ್ಟಿಹಳ್ಳಿ ಸೂರಾದೇವಿಹಳ್ಳಿ ಮಹಾದೇವನಹಳ್ಳಿ ಕುಮುದೇವನಹಳ್ಳಿ ಕುಂಚಿ ಬಂಡೆ ತರಘು
12	E.C., X	BP 18	1485 A.D.	ಮುಳುವಾಯಿ ರಾಜ್ಯ	–	ಎಳವಂಜಿ ನಾಡು	ಕೆಸಂಬಳಿ ಮಡವಳಿ
13	E.C., X	KL 194	1482 A.D.	–	–	–	ಮುದುವಾಡಿ
14	ಕ.ವಿ.ಶಾ.ಸಂ. 4	ಕಮ್ಮಲೂರು 57	1487 A.D.	–	–	–	ದೇವರಾಯ ಸಮುದ್ರ
15	E.C., X	MB 172	1497 A.D.	–	–	ಹೊದೆನಾಡು	ನರಸಿಂಹಪುರ ಗುಡಲಹಳ್ಳಿ
16	E.C., X	MB 5	1499 A.D.	ಮುಳವಾಯಿ ಚಾವಡಿ	–	ತೇಕಲ್‌ನಾಡು	ತಮ್ಮಟ್ಟಿ ಕುನ್ಟ
17	E.C., X	MB 242	1505 A.D.	–	–	ಮುಳುಬಾಗಿಲು ನಾಡು	ಚಿಂತಾಯ

ಕ್ರ. ಸಂ.	ಶಾಸನ ಸಂಪುಟ	ಶಾಸನ ಸಂಖ್ಯೆ	ಕಾಲ ಕ್ರಿ.ಶ.	ರಾಜ್ಯ	ವಿಭಾಗ	ನಾಡು	ಗ್ರಾಮಗಳು
18	E.C., XVII	MB 19	1518 A.D.	ಮುಳವಾಯಿ ರಾಜ್ಯ	–	ಯಳವಂಜಿ ನಾಡು	ಮಂದರ ಗೋಂಟೆ
19	E.C., X	MB 97	1520 A.D.	ಮುಳವಾಯಿ ಚಾವಡಿ	ಕುಂದಾಣಿ ಸೀಮೆ	–	ಮುಕುಂದ ಸಾಗರ ಕಳವೆ ಕಲ್ಲು ತಿಪ್ಪ ಸಮುದ್ರ
20	ಕ.ವಿ.ಶಾ.ಸಂ.4	ಕೂ–81	1509 A.D.	ಮುಳವಾಗಿಲ ಚಾವಡಿ	ಡೆಂಕಣಿ ಕೋಟೆ ನಾಯಕ ತನಕ ಡೆಂಣ್ಣಗರ ಸೀಮೆ	ಮಂಜಿನಾಡು	ಕೂತವಾಡಿ
21	E.C., X	MB 3	1521 A.D.	ಮುಳವಾಯಿ ಚಾವಡಿ	ಮುಳವಾಯಿ ಸೀಮೆ	–	ತಾತಗಟು
22	E.C., X	MB 238	1525 A.D.	ಮುಳವಾಗಿಲ ಚಾವಡಿ	–	ಹೊದೆನಾಡು	ಗುಡುಪಲ್ಲಿ
23	E.C., X	BP 39	1533 A.D.	–	ಮುಳಬಾಗಿಲ ಸೀಮೆ	ಮುಳಬಾಗಿಲ	ಬಳೂರನ ಹಳ್ಳಿ
24	E.C., XVII	BP 114	1552 A.D.	–	–	ಬಯಿರ ಸಮುದ್ರ ಸ್ಥಳ	ಮೈಲಾಂಡಿ ಹಳ್ಳಿ
25	E.C., X	MB 21	1674 A.D.	–	–	ಆವನಿನಾಡು	ಕುಪ್ಪ ಸಮುದ್ರ
26	E.C., X	MB 18	1261 AD	ಮುಳಬಾಗಿಲು ಚಾವಡಿ	ತ್ಯಾಕಲ್ಲು ಸೀಮೆ	ತ್ಯಾಕಲ್ಲು ನಾಡು	ಕಂಪ ಸಮುದ್ರ

ಆಧಾರಸೂಚಿ

1. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–4*, ಶಾ.ಸಂ. 129, ಒನ್ನಲವಾಡಿ.
2. ಎಪಿಗ್ರಾಫಿಯಾ ಕರ್ನಾಟಿಕಾ (ರೈಸ್ ಸಂಪುಟ), ಸಂ. 10, ಮುಳಬಾಗಿಲು–18.
3. ಎ.ಕ., 10, ಮು.ಬಾ. 115.
4. ಅದೇ, ಮು.ಬಾ. 11.
5. ಅದೇ, ಶ್ರೀನಿವಾಸಪುರ. 54.
6. ಅದೇ. ಮು.ಬಾ. 29.

7. ಅದೇ, ಮು.ಬಾ. 30.
8. ಅದೇ, ಮು.ಬಾ. 131
9. ಅದೇ, ಮು.ಬಾ. 7.
10. ಅದೇ, ಕೋಲಾರ. 104
11. ಅದೇ, ಚಿಂತಾಮಣಿ. 39
12. ಅದೇ, ಮು.ಬಾ. 2.
13. ಅದೇ, ಮು.ಬಾ. 257.
14. ಅದೇ, ಕೋಲಾರ. 194
15. *ಕ.ವಿ.ಶಾ.ಸಂ.* 4, ಶಾ.ಸಂ. 57, ಕುಮ್ಮಲಂ.
16. ಎ.ಕ. 10, ಮು.ಬಾ. 172.
17. ಅದೇ, ಮು.ಬಾ. 175.
18. ಅದೇ, ಮಾಲೂರು. 5.
19. ಅದೇ, ಮು.ಬಾ. 242.
20. *ಕ.ವಿ.ಶಾ.ಸಂ.* 4, ಶಾ.ಸಂ. 81, ಕೊತ್ತಪಾಡಿ.
21. ಎ.ಕ. 10, ಮು.ಬಾ. 19.
22. ಅದೇ, ಮು.ಬಾ. 97
23. ಅದೇ, ಮು.ಬಾ. 3.
24. ಅದೇ, ಮು.ಬಾ. 238
25. ಅದೇ, ಬಂಗಾರಪೇಟೆ. 39
26. ಅದೇ, ಮು.ಬಾ. 4.
27. ಎ.ಕ., ಬಂಗಾರಪೇಟೆ. 114.
28. ಎ.ಕ. 10, ಬಂಗಾರಪೇಟೆ. 11.
29. ಅದೇ, ಮು.ಬಾ. 21.
30. ಸ್ಮಿತಾರೆಡ್ಡಿ, ದೇ., 'ಮುಳಬಾಗಿಲು ಅರಸರು', *ದಕ್ಷಿಣ ಕರ್ನಾಟಕದ ಅರಸು ಮನೆತನಗಳು*, ಡಾ॥ ವಸು ಎಂವಿ. (ಸಂ.), ಹಂಪಿ, 2001.
31. ಡಾ॥ ಪಿ.ವಿ. ಕೃಷ್ಣಮೂರ್ತಿ, 1994, *ಸಗಟೂರು ವೀರಶೈವ ಅರಸು ಮನೆತನ*, ಧಾರವಾಡ.


ಮುಳಬಾಗಿಲು ರಾಜ್ಯ
ನಂದಿ
ಚಿಂತಾಮಣಿ
ಕೋಲಾರ ಜಿಲ್ಲೆ
ಮುಂಗನೂರು
ಶ್ರೀನಿವಾಸಪುರ
ಮುಳಬಾಗಿಲು
ಕೋಲಾರ
ಜಿಲ್ಲೆ
ಪಲಮನೇರು
ಬೆಂಗಳೂರು
ಮಾಲೂರು
ಬಂಗಾರಪೇಟೆ
ಬೆಂಗಳೂರು
ಆನೆಕಲ್
ಹೊಸೂರು
ಡೆಂಕಣಿಕೋಟೆ
ಮಂಜನಾಡು
ಕೃಷ್ಣಗಿರಿ
ಕೃಷ್ಣಗಿರಿ
ಜಿಲ್ಲೆ
ವೆಲ್ಲೂರು
ಧರ್ಮಪುರಿ
ನಾ ಡು
ಉ

24

ವಿಜಯನಗರ ಆಡಳಿತ ಕಾಲದಲ್ಲಿ ಮಧುವಂಕ ನಾಡು

ಸುಂಕಂ ಗೋವರ್ಧನ

ವಿಜಯನಗರದ ಅರಸರು ಸಾಮ್ರಾಟರಾಗಿ ಆಡಳಿತವನ್ನು ಆರಂಭಿಸಿದ ನಂತರ ತಮ್ಮ ಒಟ್ಟೂ ಸಾಮ್ರಾಜ್ಯವನ್ನು ಹಲವಾರು ರಾಜ್ಯಗಳಾಗಿ ವಿಂಗಡಿಸಿ ಅಧಿಕಾರದ ವಿಕೇಂದ್ರೀಕರಣವನ್ನು ಮಾಡಿದರು. ಸಂಗಮರೇ ಈ ರೀತಿಯ ರಾಜ್ಯಗಳನ್ನು ರೂಢಿಸಿದರು. ಇದರಿಂದ ಐದೂ ಜನ ಸಂಗಮ ಸೋದರರು ಬೇರೆ ಬೇರೆ ಪ್ರಾಂತ್ಯಗಳ ಅಧಿಕಾರದಲ್ಲಿದ್ದು ಸಾಮ್ರಾಜ್ಯದ ಬಲವು ನೂರ್ಮಡಿಗೊಳ್ಳಲು ಸಹಕಾರಿಯಾಯಿತು.

ಹೀಗೆ ರೂಪುಗೊಂಡ ರಾಜ್ಯಗಳಲ್ಲಿ ಮಲೆನಾಡಿನ ಸಂಪೂರ್ಣ ಭಾಗವನ್ನು ಆರಗ ರಾಜ್ಯವೆಂದು ಕರೆದು ತೀರ್ಥಹಳ್ಳಿಯ ಬಳಿ ಇರುವ ಆರಗವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಸಂಗಮರ ಪಂಚ ಸಹೋದರರಲ್ಲಿ ಒಬ್ಬನಾದ ಮಾರಪ್ಪನು ಆಡಳಿತ ನಡೆಸಿದನು. ಆರಗದ 18 ಕಂಪಣಗಳು ಹಾಗೂ ಗುತ್ತಿಯ (ಚಂದ್ರಗುತ್ತಿ) 18 ಕಂಪಣಗಳನ್ನು ಒಳಗೊಂಡ ಆರಗ-ಗುತ್ತೀ ರಾಜ್ಯವು ಈತನ ಆಡಳಿತಕ್ಕೆ ಒಳಪಟ್ಟಿತ್ತು. ಆರಗ ಹಾಗೂ ಚಂದ್ರಗುತ್ತಿಗಳು ಇವುಗಳ ರಾಜಧಾನಿಯಾಗಿದ್ದವು.

ಆರಗ ರಾಜ್ಯದಲ್ಲಿ ಇಂದಿನ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಭಾಗಗಳು ಅಂತರ್ಗತವಾಗಿದ್ದರೆ ಗುತ್ತೀ ರಾಜ್ಯದಲ್ಲಿ ಇಂದಿನ ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಯ ಮೇಲಿನ ಭಾಗಗಳು ಅಂತರ್ಗತವಾಗಿದ್ದವು.

ಆರಗವು ಭೌಗೋಳಿಕವಾಗಿ ತುಂಗಾ ನದಿಗೆ ಸನಿಹದಲ್ಲಿಯೇ ಇದ್ದು ಸಣ್ಣ ತೊರೆಗಳಾದ ಕುಶಾವತಿ ಮತ್ತು ಗೋಪಿನಾಥವು ಆರಗದ ಬಳಿಯೇ ಹರಿಯುತ್ತದೆ. ಶ್ರೀಮಂತ ಜಲಸಂಪತ್ತಿನ ಜೊತೆಗೇ ಇರುವ ಅಪಾರ ವೃಕ್ಷಸಂಪತ್ತು, ಸುತ್ತಲೂ ಹರಡಿಕೊಂಡಿರುವ ದಟ್ಟವಾದ ಪರ್ವತ ಶ್ರೇಣಿಯಿಂದ ಲಭ್ಯವಾಗಿದೆ. ಆದುದರಿಂದಲೇ ವ್ಯಾಪಾರಕ್ಕೆ ಪೂರಕವಾದ ವಾತಾವರಣ ಆರಗದಲ್ಲಿ ಸಿದ್ಧಿಸಿದೆ.

ಮೂಲತಃ ಈ ಪ್ರದೇಶವು ಸಾಂತಳಿಗೆ 1000 ಪ್ರಾಂತ್ಯದ ಸಾಂತರರ ಆಡಳಿತ ಪ್ರದೇಶ. ಆದರೆ ಈ ಕಾಲದಲ್ಲಿ ಆರಗಕ್ಕೆ ಅಂತಹ ಪ್ರಾಮುಖ್ಯತೆಯಿರಲಿಲ್ಲ. ಶಾಂತರರ ನಂತರ ಆಡಳಿತ ನಡೆಸಿದ ಹೊಯ್ಸಳರ ಅವಧಿಯಲ್ಲಿಯೂ ಆರಗಕ್ಕೆ ವಿಶೇಷ ಪ್ರಾಶಸ್ತ್ಯವಿರಲಿಲ್ಲ. ಆದರೆ ಸಂಗಮದೊರೆ ಮಾರಪ್ಪನಿಂದ ಅರಗವು ಆರಗ ರಾಜ್ಯವಾಗಿ ಪರಿವರ್ತಿತವಾಯಿತು.

ಈ ಆರಗ ರಾಜ್ಯದಲ್ಲಿ ಸರಿಸುಮಾರು 50 ನಾಡುಗಳೂ ಹಾಗೂ 60 ಪ್ರಮುಖ ಅಗ್ರಹಾರಗಳು ಅಸ್ತಿತ್ವದಲ್ಲಿದ್ದವು. ಈ ನಾಡುಗಳಲ್ಲಿ ಅತ್ಯಂತ ಪ್ರಮುಖವಾದ ನಾಡಾಗಿ ರಾಜಧಾನಿಯ ಸಮೀಪದಲ್ಲಿಯೇ ಇದ್ದ ನಾಡೆಂದರೆ ಮಧುವಂಕ ನಾಡು. ಈ ನಾಡಿನ ಇತಿಹಾಸವು ಆರಗ ರಾಜ್ಯದ ಪ್ರಮುಖ ಘಟನಾವಳಿಗಳನ್ನು ಹೊಂದಿದೆ.

ಆರಗ ರಾಜ್ಯವನ್ನು ಕ್ರಿ.ಶ. 1362ರಿಂದ ಆರಂಭವಾಗಿ ವಿಜಯನಗರದ ಅರಸರು ಇವರ ನಂತರದ ಕೆಳದಿಯ ಅರಸರು ಕ್ರಿ.ಶ. 1695ರವರೆಗೆ ಆಳಿದುದಕ್ಕೆ ಶಾಸನಾಧಾರಗಳಿವೆ ಹಾಗೂ ಮಧುವಂಕ ನಾಡಿನ ಉಲ್ಲೇಖ ಸಹ ಇದೇ ಕಾಲಾವಧಿಯಲ್ಲಿಯೇ ಇರುತ್ತದೆ.

ಮಧುವಂಕ ನಾಡಿನ ಕೇಂದ್ರಭಾಗ ಯಾವುದು ಎಂಬ ಪ್ರಶ್ನೆಗೆ ಸುಲಭವಾಗಿ ಉತ್ತರ ದೊರಕುವುದಿಲ್ಲ. ಬೇರೆ ನಾಡುಗಳಂತೆ ಆ ನಾಡಿನ ಹೆಸರಿನಲ್ಲಿಯೇ ಒಂದು ಪ್ರತ್ಯೇಕ ಗ್ರಾಮವಿದ್ದು ಅದು ಕೇಂದ್ರವಾಗಿರುವಂತೆ ಮಧುವಂಕ ನಾಡಿನ ವಿಷಯದಲ್ಲಿ ಹೇಳಲು ಬರುವುದಿಲ್ಲ. ಶಾಸನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಧುವಂಕನಾಡಿನ ಕೇಂದ್ರಭಾಗವು ಆರಗ ಹಾಗೂ ತೀರ್ಥಹಳ್ಳಿಗಳೇ ಆಗಿರಬೇಕೆಂದು ತೋರುತ್ತದೆ. ಈ ಎರಡೂ ಸ್ಥಳಗಳಲ್ಲಿ ಆರಗವನ್ನೇ ಮಧುವಂಕನಾಡಿನ ಕೇಂದ್ರಭಾಗವೆಂದು ಸ್ಥಳಗಳಲ್ಲಿ ಆರಗವನ್ನೇ ಮಧುವಂಕ ನಾಡಿನ ಕೇಂದ್ರಭಾಗವೆಂದು ಗುರುತಿಸುವುದಕ್ಕೆ ಹೆಚ್ಚಿನ ಆಧಾರಗಳು ಸಿಗುತ್ತದೆ.

ಆದರೆ ಮಧುವಂಕ ನಾಡಿನ ಭೌಗೋಳಿಕ ವಿಸ್ತಾರದ ಬಗ್ಗೆ ಯಾವುದೇ ಅನುಮಾನಗಳಿಲ್ಲ. ಮಧುವಂಕ ನಾಡಿನಲ್ಲಿ ಅಂತರ್ಗತವಾಗಿದ್ದವು ಎಂದು ಸ್ಪಷ್ಟವಾಗಿ ಹೇಳಲಾಗುವ 48ಕ್ಕೂ ಹೆಚ್ಚು ಗ್ರಾಮಗಳು ಶಾಸನೋಕ್ತವಾಗಿದೆ. ಇವುಗಳಲ್ಲಿ ಹಲವಾರು ಗ್ರಾಮಗಳು ತನ್ನ ಹೆಸರನ್ನು ಅಲ್ಪ ಸ್ವಲ್ಪ ರೂಪಾಂತರದೊಂದಿಗೆ ಇಂದಿಗೂ ಉಳಿಸಿಕೊಂಡು ಬಂದಿದೆ.

ಈ ಮಧುವಂಕ ನಾಡಿನಲ್ಲಿ ಪ್ರಧಾನವಾಗಿ ತುಂಗಾ ನದಿಯು ಹರಿಯುತ್ತದೆ. ಈ ತುಂಗಾನದಿಯ ಎರಡೂ ಕಡೆಗಳಲ್ಲಿ ಮಧುವಂಕ ನಾಡು ಹರಡಿದ್ದು ಈ ನಾಡಿನ ಇನ್ನಿತರ ಪ್ರಮುಖ ತೊರೆಗಳೆಂದರೆ ಮಾಲತಿಹೊಳೆ, ಮೀನಹೊಳೆ, ಬ್ಲಾರೆ ಹೊಳೆ, ಕುಶಾವತಿ ಹೊಳೆ ಹಾಗೂ ಗೋಪಿನಾಥ ಹೊಳೆಗಳು. ಇವು ಮಧುವಂಕ ನಾಡನ್ನು ಶ್ರೀಮಂತಗೊಳಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ.

ಮಧುವಂಕ ನಾಡಿನಲ್ಲಿ ಭೌಗೋಳಿಕ ವ್ಯಾಪ್ತಿಯ ತೀರ್ಥಹಳ್ಳಿಯ ಸುತ್ತಮುತ್ತಲ ಗ್ರಾಮಗಳೇ ಆಗಿದ್ದು ಇವೆಲ್ಲವೂ ಇಂದಿನ ತೀರ್ಥಹಳ್ಳಿ ತಾಲ್ಲೂಕಿನಲ್ಲಿಯೇ ಅಂತರ್ಗತವಾಗಿದೆ. ಈ ನಾಡಿನ ಪ್ರಮುಖ ಗ್ರಾಮಗಳಾಗಿ ಅತ್ತಿಗಾರು, ಅಲುಗವಳ್ಳಿ, ಬಾಳಗೋಡು, ಮಳಲಿ, ಬಸವನಕಲ್ಲು, ಜಂಬೆ, ನೆರಟೂರು, ಹೊರಣಿ, ಶಿವರಾಜಪುರ, ಯಡೆಹಳ್ಳಿ, ಸಾಲೂರು, ಕೊಡಸಗೊಳಿ, ಬಳ್ಳೂರು, ಸೂರಳಿ, ಮರಗಳಲೆ, ಜೆಗಟಿಗಾರೆ, ಮಹಿಷಿ, ಕೂಳೂರು, ಬಿಕ್ಕನೂರು, ಬಸವಾನಿ, ಮತ್ತೂರು ಮುಂತಾದ ಗ್ರಾಮಗಳು ಅಸ್ತಿತ್ವದಲ್ಲಿದ್ದವು.

ಈ ನಾಡಿನ ವಿಶೇಷವೆಂದರೆ ಈ ನಾಡಿನಲ್ಲಿಯೇ ಕೆಲವು ಗ್ರಾಮಗಳ ಸಮುಚ್ಚಯವನ್ನು 'ಬಾಗೆ'ಗಳಲ್ಲಿ ಸೇರಿಸುವುದು. ಇದು ಶಿವಮೊಗ್ಗ ಜಿಲ್ಲೆಯ ಆಡಳಿತ ವಿಭಾಗಗಳಲ್ಲಿ ಬರುವ ವಿಶೇಷತೆ. ಈ 'ಬಾಗೆ' ಎಂಬುದಕ್ಕೆ ಕೇವಲ ಭಾಗಗಳೆಂದೇ ಅರ್ಥ. ಅಂತಹ ಕೆಲವು ಬಾಗೆಗಳು ಮಧುವಂಕ ನಾಡಿನಲ್ಲಿ ಅಂತರ್ಗತವಾಗಿತ್ತು.

ಮೇಲು ಬಾಗೆಯಲ್ಲಿದ್ದ ಗ್ರಾಮಗಳೆಂದರೆ ಬೊಂದಿಕಲ್ಲಿನಾಥಪುರ, ತೊರಗಲೆ.

ಸಾಲೂರು ಬಾಗೆಯಲ್ಲಿದ್ದ ಗ್ರಾಮಗಳೆಂದರೆ ಸಿಂಗಪೊಟ್ಟಣ ಹಾಗೂ ಕೋಳೂರು ಗ್ರಾಮಗಳು.

ಬಳ್ಳೂರು ಬಾಗೆಯಲ್ಲಿ ಭಾರತೀಪುರ ಹಾಗೂ ಭಾವರಸನ ಕೊಪ್ಪ ಗ್ರಾಮಗಳಿದ್ದವು.

ಇದಲ್ಲದೆ ಮಧುವಂಕ ನಾಡಿನಲ್ಲಿ ಪಟ್ಟಡಿಗಳ ಅಧಿಕಾರ ವ್ಯಾಪ್ತಿಯಲ್ಲಿ ಕೆಲವು ಗ್ರಾಮಗಳಿದ್ದವು. ಇವುಗಳಲ್ಲಿ ಮುಂದಿನ ಕೆಲವನ್ನು ಉದಾಹರಣೆಯಾಗಿ ಗಮನಿಸಬಹುದು. ಬಹುಶಃ ಈ ಗ್ರಾಮಗಳ ಕಂದಾಯ ವ್ಯವಸ್ಥೆಯ ಕೇಂದ್ರಭಾಗ ಈ ಪಟ್ಟಡಿಗಳಾಗಿರಬಹುದು.

ಕೊಡಸಗೊಳಿ ಪಟ್ಟಡಿಯಲ್ಲಿ ಬೊಬ್ಬಳ್ಳಿ, ವಡದಕೆರೆ ಗ್ರಾಮ, ಹಿಂಡಚನಳ್ಳಿ, ಕುಕ್ಕರಿ ಗ್ರಾಮ, ಮಾವಕೋಡು ಗ್ರಾಮ ಹಾಗೂ ಕೇದಗೆ ಬಯಲು ಗ್ರಾಮಗಳಿದ್ದವು.

ಜಂಬೆ ಪಟ್ಟಡಿಯಲ್ಲಿ ಮರಗಳಲೆ, ನಿರಜವಳ್ಳಿ ಹಾಗೂ ಬಸವನಕಲ್ಲು ಗ್ರಾಮಗಳಿದ್ದವು.

ವಂಬೀ ಪಟ್ಟಡಿಯಲ್ಲಿ ಬಸವನಕಲ್ಲು ಗ್ರಾಮವಿತ್ತು.

ನೆರಟೂರು ಪಟ್ಟಡಿಯಲ್ಲಿ ಸೂರಳಿ ಗ್ರಾಮವಿತ್ತು.

ಮಧುವಂಕ ನಾಡಿನ ಇತಿಹಾಸ

ಆರಗ ರಾಜ್ಯದ ಅಧೀನದಲ್ಲಿದ್ದ ಮಧುವಂಕನಾಡನ್ನು ಆರಗದ ಅರಸರೇ ಆಳಿರುತ್ತಾರೆ. 1362ರಿಂದ 1381ರ ವರೆಗಿನ ಶಾಸನಗಳಲ್ಲಿ ವಿರುಪಣ್ಣ ಒಡೆಯ ಉತ್ತಮವಾಗಿರುವ ಮಧುವಂಕ ನಾಡನ್ನು ಆಳಿದವರಲ್ಲಿ ಮೊದಲಿಗನು. ಈತ ವಿರೂಪಾಕ್ಷರಾಯನೆಂದು ಕೂಡ ಹೆಸರುವಾಸಿಯಾಗಿದ್ದ. ಈತನು ವಿಜಯನಗರದ ಅರಸ ವೀರಬುಕ್ಕಣ್ಣ ಒಡೆಯನ ಮಗ. ಈತನ ಹೆಸರಿನಲ್ಲಿ ಮಧುವಂಕ ನಾಡಿನ ವ್ಯಾಪ್ತಿಯಲ್ಲಿಯೇ ಬರುವ 'ವಿರೂಪಾಕ್ಷಪುರ'ವೆಂಬ ಗ್ರಾಮವೊಂದಿದೆ. ಈ ವಿರೂಪಣ್ಣ ಒಡೆಯನ ಅಧೀನನಾಗಿ ಕ್ರಿ.ಶ. 1369ರಿಂದ 1387ರ ವರೆಗೆ ಸೋರಣ್ಣ ಒಡೆಯನು ಮಧುವಂಕ ನಾಡನ್ನು ಆಳುವುದರಲ್ಲಿ ಸಹಕಾರಿಯಾಗಿದ್ದನು. ಕ್ರಿ.ಶ. 1387ರ ಶಾಸನವೊಂದು (ತೀ. 120) ಸೋರಣ್ಣ ಒಡೆಯನು ಹರಿಹರ ಮಹಾರಾಯನ ಅಧೀನವಾಗಿ ಆರಗವನ್ನು ಆಳುತ್ತಿದ್ದುದನ್ನು ದಾಖಲಿಸಿದೆ. 1401ರ ಬಿಕ್ಕಹಳ್ಳಿಯ ಶಾಸನವು (ತೀ. 183) ಜನ್ನರಸನು ಆರಗ ರಾಜ್ಯವನ್ನು ಆಳುತ್ತಿದ್ದುದನ್ನು ತಿಳಿಸುತ್ತದೆ. ಕ್ರಿ.ಶ. 1404–1405ರ ಅವಧಿಯಲ್ಲಿ ಆರಗ ರಾಜ್ಯವನ್ನು ಬೊಮ್ಮಣ್ಣ ಒಡೆಯನ ಮಗನಾದ ವಿಠ್ಠಣ್ಣ ಒಡೆಯನು ಆಳುತ್ತಿದ್ದನು. ವಿಠ್ಠಣ್ಣ ಒಡೆಯ ಹಾಗೂ ವೀರಪ್ಪ ಒಡೆಯರು ಒಬ್ಬರೇ ಆಗಿದ್ದಾರೆ. ಇವನ ಅಧೀನನಾಗಿ ಸಿಂಗಣ್ಣ ಅಥವಾ ಸಿಂಗರಸ ಹಾಗೂ ಹರಿಯಪ್ಪ ಎನ್ನುವವರು ಸೇನಬೋವರಾಗಿ ಈ ನಾಡಿನಲ್ಲಿ ಆಳುತ್ತಿದ್ದರು. ಈ ಇಬ್ಬರೂ ಮಧುವಂಕನಾಡಿನ ಸೇನಬೋವರು. ಇವರ ಆಜ್ಞೆಯಂತೆಯೇ ಇಲ್ಲಿನ ಶಾಸನಗಳು ಬರೆದಿರುವುದು. ಕ್ರಿ.ಶ. 1413ರಲ್ಲಿ ಲಿಂಗಣ್ಣ ಒಡೆಯನು ಆರಗದ ರಾಜ್ಯವನ್ನು ಆಳುತ್ತಿರುವ ವಿಷಯ ಕರಡಿಕೋಡಿನ ಶಾಸನವೊಂದು (ತೀ. 34) ತಿಳಿಸುತ್ತದೆ. ಕ್ರಿ.ಶ. 1424ರಿಂದ 1437ರ ವರೆಗಿನ ಶಾಸನಗಳು ಸಿರಿಗಿರಿನಾಥ ಒಡೆಯನು ಆರಗ ರಾಜ್ಯವನ್ನು ಆಳುತ್ತಿದ್ದುದನ್ನು ತಿಳಿಸುತ್ತದೆ. ಕ್ರಿ.ಶ. 1468ರ ಶಾಸನವೊಂದು (ತೀ. 177) ದೇವಪ್ಪ ದಣ್ಣಾಯಕನು ಆರಗ ರಾಜ್ಯವನ್ನು ಆಳುತ್ತಿದ್ದುದನ್ನು ತಿಳಿಸುತ್ತದೆ.

ಈ ನಾಡಿನ ಹಲವಾರ ಶಾಸನಗಳನ್ನು ನಾಡಿನ ಸೇನಬೋವರು ರಚಿಸಿರುತ್ತಾರೆ. ಇವರು ಕಾವ್ಯಶಕ್ತಿಯನ್ನು ಪಡೆದಿದ್ದವರು. ಇವರಲ್ಲಿ ಬಹಳ ಮುಖ್ಯನಾದವನು ಮಧುವಂಕ ನಾಡಿನ ಹಲವಾರು ಶಾಸನಗಳನ್ನು ಬರೆದ ಸೇನಬೋವ ಸಿಂಗರಸ ಅಥವಾ ಸಿಂಗಣ್ಣ.

ಈ ಲೇಖನದುದ್ದಕ್ಕೂ ಕಂಸದಲ್ಲಿ ಕೊಟ್ಟಿರುವ ಸಂಖ್ಯೆಗಳನ್ನು ಎಪಿಗ್ರಾಫಿಯಾ ಕರ್ನಾಟಿಕ ಸಂ. 13ರಲ್ಲಿರುವ (ಪರಿಷ್ಕೃತ ಆವೃತ್ತಿ) ತೀರ್ಥಹಳ್ಳಿಯ ಶಾಸನಗಳೆಂದು ಓದಿಕೊಳ್ಳುವುದು.

ವಿಜಯನಗರದ ಅರಸರ ನಂತರ ಕೆಳದಿ ಅರಸರು ಪ್ರವರ್ಧಮಾನರಾಗಿ ಕೆಳದಿಯಿಂದ ಕೆಳದಿ ರಾಜ್ಯವನ್ನು ಆಳುವಾಗ ಸಹ ಆರಗಕ್ಕೆ ಈ ಹಿಂದಿನಂತೆಯೇ ಪ್ರಾಮುಖ್ಯತೆಯನ್ನು ನೀಡಿ ಆರಗ ರಾಜ್ಯವೆಂದೇ ವ್ಯವಹರಿಸಿದ್ದಾರೆ. ಸರಿಸುಮಾರು ಪ್ರತಿಯೊಬ್ಬ ಕೆಳದಿಯ ಅರಸರೂ ಆರಗ ರಾಜ್ಯದ ವ್ಯವಹಾರದಲ್ಲಿ ಒಂದಿಲ್ಲ ಒಂದು ರೀತಿಯಲ್ಲಿ ಭಾಗಿಗಳಾಗಿದ್ದಾರೆ.

ಮಧುವಂಕ ನಾಡಿನ ಪ್ರಮುಖ ರಾಜಕೀಯ ಸಂಗತಿಗಳು

ಆರಗದ ಶಾಸನವೊಂದು (ತೀ. 23) ಶ್ರೀ ವೀರ ಹರಿಹರರಾಯನ ರಾಜ್ಯಾಭ್ಯುದಯದಲ್ಲಿ ವಾಸುಕಾರ ರಾಮದೇವನ ಮಗಳಾದ ಪದುಮಲಾದೇವಿ ಹಾಗೂ ವೀರ ಬುಕ್ಕರಾಯನಿಗೆ ಹುಟ್ಟಿದ ಮಗನಾದ ವೇದಗಿರಿ ವಿರೂಪರಾಯನು

ಮಂಜಾದೇವಿಯನ್ನು ಮದುವೆಯಾದ ದಿನವನ್ನು ದಾಖಲಿಸುತ್ತದೆ. ಅದು 18–5–1377. ಈ ಶಾಸನದಲ್ಲಿ ವಿರುಪಣ್ಣ ಒಡೆಯರನ್ನು ಕೂಡಿ ಮುಂಜಾದೇವಿಯು ಸ್ವರ್ಗವನ್ನು ಸೂರೆಗೊಂಡಳು ಎಂದಿದೆ.

ವೀರಬುಕ್ಕಣ್ಣ ಒಡೆಯರ ಕುಮಾರನಾದ ವಿರುಪಣ್ಣ ಒಡೆಯರು ಆರಗ ರಾಜ್ಯವನ್ನು ಆಳುತ್ತಿದ್ದಾಗ ವಿರುಪಣ್ಣ ಒಡೆಯರ ಮನೆಯ ಪ್ರಧಾನ ರಾಮರಸರಿಗೆ ಆರಗದ ಗೌಡಪ್ರಜೆಗಳು ಸೇರಿ ಹುತ್ತದ ಹಳ್ಳಿಯನ್ನು ದಾನ ನೀಡಿದರು. ಈ ಹುತ್ತದ ಹಳ್ಳಿಗೆ ಹರಿಹರಪುರವೆಂದು ಪುನರ್ನಾಮಕರಣ ಮಾಡಿ ಅಗ್ರಹಾರವನ್ನಾಗಿ ಮಾಡಿದರು. (ತೀ. 233)

ಇನ್ನೊಂದು ಪ್ರಮುಖ ಸಂಗತಿಯೆಂದರೆ ಆರಗದ ವೇಂಠೆಯ ಮಧುವಂಕ ನಾಡೊಳಗಣ ಬಳ್ಳೂರು ಬಾಗೆಗೆ ಸೇರಿದ ಭಾರತೀಪುರವನ್ನು ಇಮ್ಮಡಿ ಹರಿಹರರಾಯನ ನೆನಪಿನಲ್ಲಿ ಮುಕ್ತ ಹರಿಹರಪುರವನ್ನಾಗಿ ನಾಮಕರಣ ಮಾಡಿದರು. ಈ ಶಾಸನದ (ತೀ. 205) ಪ್ರಮುಖ ಸಂಗತಿಯೆಂದರೆ ಇದು 15–9–1404ರಂದು ಎರಡನೇ ಹರಿಹರನು ಮಡಿದುದನ್ನು ದಾಖಲಿಸುತ್ತದೆ.

ಅಗ್ರಹಾರಗಳು

ಇಡೀ ಆರಗ ರಾಜ್ಯದಲ್ಲಿ ವಿಜಯನಗರದ ಆಡಳಿತಾವಧಿಯಲ್ಲಿ ರೂಪಗೊಂಡ ಅಗ್ರಹಾರಗಳು ಆ ಕಾಲದ ಧಾರ್ಮಿಕ ಪ್ರಾಮುಖ್ಯತೆಯನ್ನು ತಿಳಿಸುವಂತಿದೆ. ಇವುಗಳಲ್ಲಿ ಮಧುವಂಕನಾಡಿನ ಕೆಲವು ಅಗ್ರಹಾರಗಳನ್ನು ಪರಿಚಯ ಮಾಡಿಕೊಳ್ಳಬಹುದಾಗಿದೆ.

ಬೋಯಾಪುರ ಅಗ್ರಹಾರ

28–7–1407ರ ಅಲಗವಳ್ಳಿಯ ಶಾಸನವು (ತೀ. 10) ವಿಠ್ಠಣ್ಣ ಒಡೆಯನು ಆರಗ ರಾಜ್ಯವನ್ನು ಆಳುತ್ತಿದ್ದಾಗ ಮಧುವಂಕ ನಾಡಿನ ಅಲುಗವಳ್ಳಿ ಗ್ರಾಮವನ್ನು (ಇದು ಕಉರಿಯ ಭಾಗೆಯಲ್ಲಿತ್ತು). ಹರವರಿಯ ಬಾಗೆಯ ಸಮಸ್ತ ಗೌಡವನ್ನು, ಕಉರ್ಯ್ಲ ಬಾಗೆಯ ತೈಲಪ್ಪಹೆಗ್ಗಡೆಯ ಪಾಲಿನ ಭೂಮಿಸಹಿತವಾಗಿ ಬೊಯಾಪುರವೆಂದು ಅಗ್ರಹಾರವನ್ನು ಮಾಡಿ 15 ವೃತ್ತಿಗಳಾಗಿ ವಿಂಗಡಿಸಿ ದಾನ ನೀಡಿದುದನ್ನು ಉಲ್ಲೇಖಿಸುತ್ತದೆ.

ಚೌಡೇಶ್ವರಿಪುರ

8–7–1405 ಶಾಸನವೊಂದು (ತೀ. 15) ಅರಗಪಟ್ಟಣದ ಹಿರಿಯಂಗಡಿಯ ಬನದ ದೇವಿಯರಿಗೆ ಮಧುವಂಕನಾಡಿನ ಸಂಕುಹಳ್ಳಿಯನ್ನು ದಾನ ನೀಡಲಾಗಿದೆ. ನಿತ್ಯವೂ ದೇವಿಗೆ ಶ್ರೀಸೂಕ್ತ ಅಭಿವ್ಯಕ್ತಿಯನ್ನು ಮಾಡಬೇಕು ಎಂದು ಈ ಶಾಸನ ತಿಳಿಸುತ್ತದೆ. ಈ ಹಿಂದೆ 27–10–1404ರಂದೇ ಮಧುವಂಕ ನಾಡೊಳಗಣ .ಂಮರಿಯ ಗ್ರಾಮವನ್ನು ವಿಠ್ಠಣ್ಣ ಒಡೆಯನು ಚೌಡೇಶ್ವರಿಪುರವಾಗಿ ಮಾಡಿ ಅಗ್ರಹಾರವನ್ನಾಗಿಸಿದ್ದನು. (ತೀ. 20)

ಅಭಿನವ ಗೋಪೀನಾಥಪುರ

16–2–1398ರ ಆಲಗೇರಿ ಶಾಸನವು (ತೀ. 25) ಆಲಗೇರಿ ಗ್ರಾಮವನ್ನು ಸರ್ವಜ್ಞಪುರಿ ಶ್ರೀಪಾದಂಗಳಿಗಾಗಿ ಆರಗದ ಹದಿನೆಂಟು ಕಂಪಣದ ನಾಡವರೂ ಮೂರು ಪಟ್ಟಣದ ಹಲರೂ ಸೇರಿ ಅಭಿನವ ಗೋಪೀನಾಥಪುರವನ್ನಾಗಿ ಮಾಡಿದರು.

ತೀರ್ಥರಾಜಪುರ

ಮಧುವಂಕನಾಡಿನ ಪ್ರಮುಖ ಸ್ಥಳವಾದ ತೀರ್ಥಹಳ್ಳಿಯ ತೀರ್ಥರಾಜಪುರವೆಂಬ ಅಗ್ರಹಾರವಾಗಿತ್ತು. ಈ ಸ್ಥಳದಲ್ಲಿ ಅನೇಕ ಬ್ರಾಹ್ಮಣರು ಅನೇಕ ಯಾಗ-ಯಜ್ಞಗಳನ್ನು ಮಾಡಿದ ಉದಾಹರಣೆಗಳು ಶಾಸನವಲ್ಲಿ ದೊರೆಯುತ್ತದೆ.

ಮುಕ್ತ ಹರಿಹರಪುರ

8–2–1377ರ ಹುತ್ತವಳ್ಳಿ ಶಾಸನವು (ತೀ. 233) ಬುಕ್ಕರಾಯನ ಕುಮಾರ ಉದೆಯಗಿರಿಯ ವಿರುಪಣ್ಣ ಒಡೆಯರು ಆರಗ ರಾಜ್ಯವನ್ನು ಆಳುತ್ತಿದ್ದಾಗ ಅವರ ಮನೆಯ ಪ್ರಧಾನ ರಾಮರಸನಿಗೆ ಆರಗದ ಗೌಡಪ್ರಜೆಗಳು ಗೌರಿ ಹುತ್ತದಹಳ್ಳಿ ಗ್ರಾಮವನ್ನು ಹರಿಹರಪುರವೆಂದು ನಾಮಕರಣ ಮಾಡಿ ದಾನ ನೀಡಿದರು.

ಆರಗದ ವೇಂಠೆಯ ಮಧುವಂಕ ನಾಡೊಳಗಿದ್ದ ಬಳ್ಳೂರು ಬಾಗೆಯ ಭಾರತೀಪುರವನ್ನು ಇಮ್ಮಡಿ ಹರಿಹರರಾಯರು ಇಹಲೋಕವನ್ನು ತ್ಯಜಿಸಿದ ಸಂದರ್ಭದಲ್ಲಿ ಮುಕ್ತ ಹರಿಹರಪುರ ಎಂದು ನಾಮಕರಣ ಮಾಡಿ ಅಗ್ರಹಾರವನ್ನಾಗಿ ಮಾಡಿದ್ದನ್ನು 15–9–1404ರ ಶಾಸನ (ತೀ. 205) ತಿಳಿಸುತ್ತದೆ.

ಲಕ್ಷ್ಮೀ ಗೋವಿಂದಪುರ

ತೀರ್ಥಹಳ್ಳಿಯ ತಾಮ್ರಶಾಸನವೊಂದು (ತೀ. 159) ತೀರ್ಥರಾಜಪುರದಿಂದ ಶಿವರಾಜಪುರದ ಅಗ್ರಹಾರಕ್ಕೆ ಹೋಗುವ ಮಾರ್ಗದಲ್ಲಿರುವ ಮಧುವೆಂಕನಾಡ ಸೀಮೆಯ ಬಾಳೇಬಯಲು ಗ್ರಾಮದಲ್ಲಿ ತುಂಗಭದ್ರಾ ನದೀ ತೀರದಲ್ಲಿ ಲಕ್ಷ್ಮೀ ಗೋವಿಂದಪುರವೆಂಬ ಅಗ್ರಹಾರವನ್ನು ಮಾಡಿದ ಶಾಸನ ವಿವರವಿದೆ.

ಕಲ್ಲಿನಾಥಪುರ

14–10–1404ರ ಶಾಸನವು (ತೀ. 18) ಆರಗದಲ್ಲಿದ್ದು, ಅದು ಆರಗದ ವೇಂಠೆಯಲ್ಲಿರುವ ಮಧುವೆಂಕ ನಾಡಿನಲ್ಲಿರುವ ಬೊಂದಿಯರ ಗ್ರಾಮವನ್ನು ಆರಗದ ಮೂಲಸ್ಥಾನ ಶ್ರೀ ಕಲ್ಲಿನಾಥದೇವರ ಅಮೃತಪಡಿಗೆಂದು ಕಲ್ಲಿನಾಥಪುರವೆಂಬ ಅಗ್ರಹಾರವನ್ನಾಗಿ ಮಾಡಿ ದಾನ ನೀಡಲಾಗಿದೆ. ದಾನ ನೀಡಿದವನು ವಿಠ್ಠಣ್ಣ ಒಡೆಯ. ಈ ಕಲ್ಲಿನಾಥ ದೇವರು ಆರಗದ ಪ್ರಮುಖ ದೇವತೆ.

ಆಧಾರಸೂಚಿ

1. *ಎಪಿಗ್ರಾಫಿಯಾ ಕರ್ನಾಟಿಕಾ* (ಪರಿಷ್ಕೃತ), ಸಂ. 13, ಮೈಸೂರು, 2006.
2. *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು* (ಸಂ.), ಎಂ.ಎಂ. ಕಲಬುರ್ಗಿ, 1999, ಹಂಪಿ.
3. *ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ* (ಸಂ.), ಆರ್. ಗೋಪಾಲ್, 2008, ಮೈಸೂರು.
4. *ಮಲೆ ಕರ್ನಾಟಕದ ಅರಸು ಮನೆತನಗಳು* (ಸಂ.), ರಾಜಾರಾಮ ಹೆಗಡೆ, ಅಶೋಕ ಶೆಟ್ಟರ, 2001, ಹಂಪಿ.
5. *ವಿಜಯನಗರ ಸಾಮ್ರಾಜ್ಯ*, ಪಿ.ಬಿ. ದೇಸಾಯಿ, 2007, ಧಾರವಾಡ.

25

ಮೂಡಬಿದಿರೆಯ ಸಾವಿರಕಂಬದ ಬಸದಿ: ಒಂದು ವಾಸ್ತುವಿಶ್ಲೇಷಣೆ

ಡಾ॥ ಕೂ.ಸ. ಅಪರ್ಣ

ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಪ್ರದೇಶಗಳನ್ನಾಳಿದವರೆಂದರೆ ಕಾರ್ಕಳದ ಭೈರರಸವೊಡೆಯರು. ಇವರು ಜೈನಮತೀಯರಾಗಿದ್ದು, ಅನೇಕ ಬಸದಿಗಳ ನಿರ್ಮಾಣಕ್ಕೆ ಕಾರಣರಾದರು. ಇಂತಹ ಬಹುಮುಖ್ಯ ಬಸದಿಗಳನ್ನು ಕಾರ್ಕಳ, ವೇಣೂರು, ಮೂಡಬಿದಿರೆಗಳಲ್ಲಿ ಕಾಣಬಹುದಾಗಿದೆ. ಮೂಡಬಿದಿರೆಯ ಸಾವಿರಕಂಬದ ಬಸದಿಯಂತೂ ಜೈನವಾಸ್ತುಶಿಲ್ಪದ ಅನನ್ಯ ಕೊಡುಗೆಯಾಗಿದೆ. ಈ ಬಗ್ಗೆ ಇರುವ Wall House ಅವರ ಮೆಚ್ಚುಗೆಯ ಒಂದು ಉಲ್ಲೇಖವನ್ನು ಇಲ್ಲಿ ಗಮನಿಸಬಹುದಾಗಿದೆ. "No Cisterician brotherhood was wiser in choosing a dwelling place than the Jains that their villages are evermarked by natural beauty and shade and seclusion brood over the peaceful neighbourhood and in the midst stands the greatest Jaina Temples built nearly five centuries ago."[1] ಪ್ರತಿಷ್ಠಾ ಸಾರೋದ್ಧಾರ ಎಂಬ ಗ್ರಂಥವು ಸುಂದರವಾದ ಪ್ರಶಾಂತವಾದ ಸುಗಂಧದಿಂದ ಕೂಡಿದ ಶುಚಿಯಾದ ಸ್ಥಳದಲ್ಲಿ 'ಜಿನವಾಸ'ವನ್ನು ಕಟ್ಟಬೇಕೆಂದು ಹೇಳಿರುವುದಾಗಿ ತಿಳಿದುಬರುತ್ತದೆ.[1a]

ಹೊಸಬಸದಿ ಎಂದೂ ಕರೆಯಲ್ಪಡುವ ಈ ಬಸದಿಯು ವಿಜಯನಗರ ಕಾಲದ ರಚನೆಗಳಲ್ಲಿ ಎದ್ದುಕಾಣುವಂತಿದೆ. ಚಂದ್ರನಾಥ ಬಸದಿ, ತ್ರಿಭುವನ ಚೂಡಾಮಣಿ ಬಸದಿ ಎಂದೂ ಶಾಸನಗಳಲ್ಲಿ ಉಲ್ಲೇಖಿತಗೊಂಡಿದೆ. ಈ ಬಸದಿಯು ಕ್ರಿ.ಶ. 1429ರಲ್ಲಿ ನಿರ್ಮಾಣಗೊಂಡಿದೆ. ಸಂಗಮದೊರೆ ಎರಡನೇ ದೇವರಾಯನ (ಕ್ರಿ.ಶ. 1424–46) ಆಜ್ಞೆಯಂತೆ, ಮಂಗಳೂರಿನ ರಾಜ್ಯಪಾಲನಾಗಿದ್ದ ದೇವರಾಜ ಒಡೆಯನು, ಅಭಿನವ ಚಾರುಕೀರ್ತಿ ಪಂಡಿತರಿಗೆ, ಬಸದಿ ನಿರ್ಮಾಣಕ್ಕೆಂದು ನೀಡಿದ ದಾನದ ಸೀಮೆಯಲ್ಲಿ 'ಹಲರು' ಸೇರಿ ಈ ಬಸದಿಯನ್ನು ನಿರ್ಮಿಸಿದ್ದಾರೆ. ಈ ಬಸದಿಯ ನಿರ್ಮಾಣದಲ್ಲಿ ಚಾರುಕೀರ್ತಿಗಳ ಶಿಷ್ಯರಾದ ವೇಣುಪುರದ ಎಂಟು ಪ್ರಜೆಸೆಟ್ಟಿಕಾರರು, ನಾಲ್ವರು ಎಳಮೆಗೊಳಗಾದ ಸಮಸ್ತ ಹಲರು, ಶಾಲಿಕೆ ನಾಡಚೌಟರು, ಬಲ್ಲಾಳರು, ಸಮಸ್ತ ಶ್ರಾವಕರು ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಮೂಲ ಬಸದಿಯು ಕ್ರಿ.ಶ. 1429ರಲ್ಲಿ ಮೂರು ನೆಲೆಗಳೊಂದಿಗೆ ನಿರ್ಮಾಣವಾಯಿತಲ್ಲದೆ,[2] ಚಂದ್ರಪ್ರಭ ತೀರ್ಥಂಕರನ ಪ್ರತಿಷ್ಠಾಪನೆಯಾಯಿತು;[3] ಈ ಬಸದಿಯ ಎರಡನೆಯ ನೆಲೆಯನ್ನು 12 ಭಾಗೆಗಳಾಗಿ ಹಂಚಿಕೊಂಡು 12 ಜನ ಜಿನಭಕ್ತರು ನಿರ್ಮಿಸಿದರು[4] ಹಾಗೂ ಮೂರನೇ ನೆಲೆಗೆ ತಾಮ್ರದ ಹೊದಿಕೆಯನ್ನು ಭೈರವನೃಪಾಲನು ಮಾಡಿಸಿಕೊಟ್ಟನು; ಇವನ ರಾಣಿಯಾದ ನಾಗಲದೇವಿಯು ಇದಕ್ಕೆ ಮಾನಸ್ತಂಭವನ್ನು ಮಾಡಿಸಿಕೊಟ್ಟಳು.[5] ಕ್ರಿ.ಶ. 1451ರಲ್ಲಿ ಮೂಡಬಿದಿರೆಯ ಭವ್ಯ ಜನರು ಮುಖಮಂಟಪವನ್ನು ಮಾಡಿಸಿಕೊಟ್ಟರೆ,[6] ಕ್ರಿ.ಶ. 1477ರಲ್ಲಿ ಹಲರು ಗಂಧಕುಟಿಗಳನ್ನು ದಾನಮಾಡಿದರು.[7] ಅಲ್ಲದೆ, ಅನೇಕ ದಾನಗಳೂ ಈ ಬಸದಿಗೆ ಬಂದಿವೆ. ಹೀಗೆ ವಿವಿಧ ಹಂತಗಳಲ್ಲಿ ಈ ಬಸದಿಯು ಅಭಿವೃದ್ಧಿಗೊಂಡಿದ್ದರೂ, ಎಲ್ಲವೂ ಸಂಗಮ ಅರಸರ ಕಾಲದಲ್ಲೇ ನಿರ್ಮಾಣವಾಗಿರುವುದನ್ನಿಲ್ಲಿ ಗಮನಿಸಬಹುದು. ಇಲ್ಲಿ, ಶಾಸನೋಕ್ತವಾಗಿರದ ರಚನೆಗಳೂ ಇವೆ. ಈ ಬಸದಿಯು, ಸ್ಥಾಪನೆಯಾದ

225–60 ವರ್ಷಗಳ ನಂತರ ಜೀರ್ಣೋದ್ಧಾರಗೊಂಡಿತೆಂಬ ವಿಷಯವು ಈ ಬಸದಿಯ ಬಗ್ಗೆ ಇರುವ, ಕ್ರಿ.ಶ. 1756ರ ನಂತರ ಕಾಲದ ಜೀರ್ಣೋದ್ಧಾರ ಚರಿತೆಯಲ್ಲಿ ಇರುವುದಾಗಿ ತಿಳಿದುಬರುತ್ತದೆ;[8] ಇದು ಕನಿಷ್ಠ ನಾಲ್ಕು ಬಾರಿ ಜೀರ್ಣೋದ್ಧಾರಗೊಂಡಿದ್ದಕ್ಕೆ ದಾಖಲೆ ಇದೆ ಎಂದೂ ಹೇಳಲಾಗಿದೆ.[9] ಕಾಲಕಾಲಕ್ಕೆ ಈ ಬಸದಿಯು ಜೀರ್ಣೋದ್ಧಾರಗೊಂಡಿರಬಹುದಾದರೂ, ಅದರ ವಾಸ್ತುರಚನೆಯ ರಮ್ಯತೆಗೆ ಯಾವುದೇ ಧಕ್ಕೆ ಬಂದಿಲ್ಲ ಎಂದು ಹೇಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಈ ಬಸದಿಯ ಬಗ್ಗೆ ಬರೆಯುತ್ತಾ, Fergusson ಅವರು "it is neither Dravidian, nor Indo-Aryan" ಎಂದು ಹೇಳಿದ್ದಾರೆ.[10] ಅಂತೆಯೇ, ಇದರ ಶಿಖರದ ವೈವಿಧ್ಯತೆಯ ಕಾರಣವಾಗಿ ಇದರ ರಚನೆ ವಿಶೇಷವಾಗಿದೆ. 'ವಿಮಾನಾರ್ಚನ ಕಲ್ಪ'ವು ಹೇಳುವಂತೆ[10ಅ] ಈ ರೀತಿಯ ಶಿಖರವು 'ಲುಪಾ' ಮಾದರಿಯ ಶಿಖರವಾಗಿದ್ದು, ಈ ರೀತಿಯ ರಚನೆಯಲ್ಲಿ ಅಧಿಷ್ಠಾನ, ಭಿತ್ತಿಯ ನಂತರ ಪ್ರಸ್ತರ ಭಾಗವಿರುವುದಿಲ್ಲ; ಬದಲಿಗೆ, ಕೊನೆಯಲ್ಲಿರುವ ಕಲಶದ ಕೆಳಗಿನ ಶಿಖರ (–ಮಾಡಿನ) ಭಾಗವು (ಲುಪಾ) ಇಳಿಜಾರಾಗಿದ್ದು ಭಿತ್ತಿ/ಕಂಬಗಳ ಮೇಲೆ ನಿಂತಿರುತ್ತದೆ. ಇವು 'ಚತುರ್ವರ್ಗ' ರೀತಿಯದಾಗಿದ್ದು ಇದರಲ್ಲಿ, ಷಡ್ವರ್ಗಕ್ಕಿಂತ ಭಿನ್ನವಾಗಿ, ಅಧಿಷ್ಠಾನ, ಭಿತ್ತಿ, ಶಿಖರ ಮತ್ತು ಕಲಶ – ಎಂದು ನಾಲ್ಕು ಭಾಗಗಳಿರುತ್ತವೆ. ಇವು ಏಕತಲ, ದ್ವಿತಲ – ಇತ್ಯಾದಿಯಾಗಿರಬಹುದು. ಈ ರೀತಿಯ ಶಿಖರಗಳು ಹಿಮಾಲಯ–ನೇಪಾಳ ಪ್ರದೇಶದಲ್ಲಿದ್ದು, ಭಾರತದಲ್ಲಿ ಕೇರಳ ಮತ್ತು ಕರ್ನಾಟಕದಲ್ಲಿ ಅದೂ ದಕ್ಷಿಣಕನ್ನಡ ಜಿಲ್ಲೆಯಂತಹ ಹೆಚ್ಚು ಮಳೆಬೀಳುವ ಪ್ರದೇಶದಲ್ಲಿ ಇವೆ. ಇಲ್ಲಿ ಆ ರೀತಿ ರಚನೆಯನ್ನು ಮಾಡಲು ಅತೀವ ಮಳೆಯು ಕಾರಣವೆಂದೂ ಊಹಿಸಲಾಗಿದೆ.[11]

ಪೂರ್ವಾಭಿಮುಖವಾಗಿರುವ[11ಅ] ಈ ಬಸದಿಯು ಆಯತಾಕಾರವಾಗಿದೆ; ಹಾಗೂ ಭೈರಾದೇವಿ ಮಂಟಪವು ನಕ್ಷತ್ರಾಕಾರದಲ್ಲಿದೆ. ಇದರಲ್ಲಿ ಗರ್ಭಗೃಹ ಮತ್ತು ಅದಕ್ಕೇ ಸೇರಿಕೊಂಡಂತೆ ಇನ್ನೊಂದು ಮಂಟಪ, ಅದರಿಂದ ಮುಂದೆ ಮೂರು ಮಂಟಪಗಳೂ, ನಂತರ ಮುಖಮಂಟಪವೂ, ಮಾನಸ್ತಂಭ ಮತ್ತು ಎರಡು ಪ್ರಾಕಾರಗಳೂ ಇವೆ. ಈ ಮಂಟಪಗಳನ್ನು ಕ್ರಮವಾಗಿ ತೀರ್ಥಂಕರ ಮಂಟಪ, ನಮಸ್ಕಾರ ಮಂಟಪ ಅಥವಾ ಗದ್ದಿಗೆ ಮಂಟಪ, ಚಿತ್ರಾದೇವಿ ಮಂಟಪ ಮತ್ತು ಭೈರಾದೇವಿ ಮಂಟಪಗಳೆಂದು ಗುರುತಿಸಲಾಗುತ್ತದೆ. ಇವುಗಳಲ್ಲಿ ಭೈರಾದೇವಿ ಮಂಟಪ ಎನಿಸಿರುವ ಮುಖಮಂಟಪಕ್ಕೆ ಮಾತ್ರ ಶಾಸನವಿದ್ದು,[12] ಬಹುಶಃ ಗೇರುಸೊಪ್ಪೆಯ ರಾಣಿಯಾದ ಭೈರಾದೇವಿಯ ಹೆಸರಿನಲ್ಲಿ ಕಾಲಾನುಕ್ರಮದಲ್ಲಿ ಭೈರಾದೇವಿ ಮಂಟಪ ಎನಿಸಿದೆ.

ಈ ಬಸದಿಯು 'ತ್ರಿತಲ' ರಚನೆಯದಾಗಿದ್ದು[12ಅ], ಇದನ್ನು ಮೊದಲಿಗೆ ಊರ್ಧ್ವಮುಖ ಕ್ರಮದಲ್ಲಿ, ಅಂದರೆ, ಅಧಿಷ್ಠಾನದಿಂದ ಶಿಖರ–ಕಲಶದವರೆಗೆ ಗಮನಿಸಬಹುದು. ಇಲ್ಲಿ ಅಧಿಷ್ಠಾನದ ಕೆಳಗೆ ಉಪಪೀಠವಿದ್ದು, ಬಸದಿಯ ಎತ್ತರವನ್ನು ಸೂಚಿಸಿದೆ. ಇದು 'ಮಂಚಕ' ರೀತಿಯ ಉಪಪೀಠವಾಗಿದ್ದು, ನಿರಲಂಕೃತವಾಗಿದೆ. ಇದರ ಮೇಲೆ ಪಾದಬಂಧ ಅಧಿಷ್ಠಾನವಿದ್ದು, ಇದು ಕೂಡ ನಿರಲಂಕೃತವಾಗಿದೆ; ಅಲ್ಲಲ್ಲಿ ದೂರದೂರಕ್ಕೆ ಕೀರ್ತಿಮುಖ, ವಲ್ಲೀ, ಕುದುರೆ, ಮಂಡಲ ಇತ್ಯಾದಿ ಕೆತ್ತನೆಗಳಿವೆ. ಭೈರಾದೇವಿ ಮಂಟಪಕ್ಕೇ ಪ್ರತ್ಯೇಕವಾದ ಉಪಪೀಠ, ಅಧಿಷ್ಠಾನಗಳಿವೆ. ಈ ಉಪಪೀಠವು ಕೆಲಮಟ್ಟಿಗೆ ಅಲಂಕೃತಗೊಂಡಿದ್ದು, ಜಗತೀ ಮೇಲೆ ಬಳ್ಳಿಯ ಅಲಂಕರಣವಿದೆ. ಮಧ್ಯದ 'ಗಲ' ಭಾಗದಲ್ಲಿ 'ಗಲಪಟ್ಟಿಕಾ' ಇದ್ದು ಅಲ್ಲಿ ಪ್ರಾಣಿ, ಪದ್ಮದಳಗಳನ್ನು ಕೆತ್ತಿದೆ; ಇದರ ಮೇಲೆ 'ಪಟ್ಟಿಕಾ' ಇದೆ. ಉಪಪೀಠದ ಮೇಲೆ ಮತ್ತೆ ಅಧಿಷ್ಠಾನವಿದ್ದು, ಅದು ನಿರಲಂಕೃತ.

ಬಸದಿಯ 'ಭಿತ್ತಿ' ಭಾಗ ಕೂಡ ಸರಳವಾಗಿದೆ. ಚಿತ್ರಾದೇವಿ ಮಂಟಪದ ಭಿತ್ತಿಯನ್ನು ಎರಡು ಭಾಗಗಳಾಗಿ ಮಾಡಿದ್ದು, ಕೈಭಾಗದಲ್ಲಿ ಅಪೂರ್ಣ ರೂಪದ 'ನಕುಲಪಾದ'(ಸಣ್ಣಸಣ್ಣ)ಗಳಿವೆ. (ಆದರೆ, ಪೂರ್ವದ 'ಲಾಂಗುಲಭಿತ್ತಿ'ಯು ಈ ರೀತಿ ಇಲ್ಲ); ಮೇಲಿನ ಭಾಗದಲ್ಲಿ ಸುತ್ತಲೂ ಜಾಲಂದ್ರಗಳಿವೆ; ಇವು ಪುಷ್ಪಬಂಧ, ವಜ್ರಬಂಧ ರೀತಿಯಾಗಿದ್ದು,

ಮಿಶ್ರಣ ರೀತಿಯದೂ ಇವೆ. ಜಾಲಂದ್ರದ ಹೊರಚೌಕಟ್ಟುಗಳಲ್ಲಿ ಒಂದು 'ದ್ವಾರಶಾಖೆ'ಯೂ ಇದ್ದು, ಅದರ ಕೆಳಗೆ ದ್ವಾರಪಾಲಕ ಶಿಲ್ಪಗಳೂ, ಮೇಲ್ಭಾಗದಲ್ಲಿ ತೀರ್ಥಂಕರ ಶಿಲ್ಪವೂ ಪ್ರತಿ ಜಾಲಂದ್ರದಲ್ಲೂ ಇದೆ (ಒಂದೆರಡು ಬಿಟ್ಟು). ದೇವಾಲಯದ ಮುಖ್ಯ ದ್ವಾರದಂತೇ ಜಾಲಂದ್ರವನ್ನೂ ಪರಿಗಣಿಸಿರುವುದು ಗಮನಾರ್ಹವಾಗಿದೆ. ಸುತ್ತ ಭಿತ್ತಿಗೆ ಸಮಾನಾಂತರವಾಗಿ ಎರಡು ಸಾಲು ಕಂಬಗಳಿದ್ದು, ಅವುಗಳ ಮೇಲೆ ಇಳಿಜಾರು ಮಾಡು ನಿಂತಿದೆ (ಈ ಕಂಬಗಳು ಮಿಶ್ರಿತ ರೀತಿಯವು). ಈ ಬಗ್ಗೆ ಬರೆಯುತ್ತಾ, ಕಸಿನ್ಸ್ ಅವರು, "....it was necessary to protect the interiors from driving rain, and at the same time allow plenty of fresh air which was so necessary to counteract the hot steamy atmosphere of closed interiors" ಎಂದಿದ್ದಾರೆ. ಹೀಗೆ ಈ ಶಿಖರ/ಮಾಡು ಮತ್ತು ವಾತಾಯನಗಳು ಹವಾಗುಣಕ್ಕೆ ತಕ್ಕಂತೆ ರೂಪುಗೊಂಡಿರುವುದನ್ನಿಲ್ಲಿ ಕಾಣಬಹುದು.

'ಚತುರ್ವರ್ಗ' ರೀತಿಯ ದೇವಾಲಯಗಳ ಮೂರನೇ ಭಾಗವೇ ಶಿಖರ. ಈ ಬಸದಿಯ ಶಿಖರ ಭಾಗದ ವಿಶೇಷತೆಯೆಂದರೆ ಅದು 'ಲುಪಾ' ಮಾದರಿಯಲ್ಲಿರುವುದು. ಬಸದಿಯ ಮೊದಲ ನೆಲೆಯ ಮೇಲೆ ನಿಂತಿರುವ ಶಿಖರ ಭಾಗವು, ಪದರಪದರವಾಗಿದ್ದು, ಮೇಲೆ ಬಿದ್ದ ನೀರು ಇಳಿದುಹೋಗಲು ಸಹಾಯಕವಾಗಿದೆ. ಶಿಖರದ ಈ ಭಾಗವು ಭೈರಾದೇವಿ ಮಂಟಪದವರೆಗೂ ಇದ್ದು, ದೇಗುಲದ ಹಿಂಚಾಚು–ಮುಂಚಾಚುಗಳಿಗೆ ಅನುಗುಣವಾಗಿ ಮುಂದುವರೆದಿದೆ. ಇದರ ಮೇಲಿನ ಎರಡನೇ ನೆಲೆಯು ಸಾಧಾರವಾಗಿರುವ ಚೌಕಾಕಾರದ ಪಟ್ಟಿಕೆಯ ಮೇಲೆ ನಿಂತಿದೆ. ಇದರ ನಂತರ ಅರ್ಧ ಭಿತ್ತಿಭಾಗವಿದ್ದರೆ, ಅದರ ಮೇಲೆ, ಭಿತ್ತಿ ಮತ್ತು ಮೇಲಿನ ಮಾಡನ್ನು ಸೇರಿಸುವಂತಹ ಮರದಿಂದಾದ ಶಿಲ್ಪಯುಕ್ತ 'ವಕ್ರ' ರೀತಿಯ (Cross-angled) ಜೋಡಣೆ ಇದೆ. ಒಟ್ಟಾರೆ ಈ ನೆಲೆಯನ್ನು ತಾಮ್ರದ ಆಚ್ಛಾದನವು ಪೂರ್ಣಗೊಳಿಸಿದೆ. ಈ ರಚನೆಯು ಭೈರಾದೇವಿ ಮಂಟಪದವರೆಗೂ ಇದ್ದು, ಶಿಖರವು ಈ ಭಾಗದಲ್ಲಿ ಕೆಳಮಂಟಪದ ತಳವಿನ್ಯಾಸವನ್ನೇ ಹೋಲುತ್ತದೆ. ಮುಂಭಾಗದಲ್ಲಿ ತ್ರಿಕೋನಾಕಾರದ ಕೋಷ್ಠ ರಚನೆ ಇದೆ. ಈ ಹಂತದಲ್ಲಿ, ಕೆಳಗಿರುವ 'ಪಾರ್ಶ್ವ–ಚತುಷ್ಕಿ'ಗಳ ಮೇಲಕ್ಕೆ ಹೊಂದುವಂತೆ ಪೂರ್ಣರೂಪದ ಲುಪಾಕಾರದ ಗುಡಿಗಳಂತಹ ರಚನೆ ಇದೆ. ಈ ಎರಡನೇ ನೆಲೆಯೂ ಒಂದು ಗಿಡಿಯಾಗಿದ್ದು, ಗರ್ಭಗೃಹದ ಮೇಲೆ ಗರ್ಭಗೃಹ, ರಚನೆಯ ಪ್ರಾಚೀನ ಪರಂಪರೆಯನ್ನು ಮುಂದುವರಿಸಿದೆ.[13ಅ] ಈ ಗುಡಿಯನ್ನು 'ಗಂಧಗೋಡಿ' ಮಂಟಪ ಎನ್ನುವರು.[14] ಗರ್ಭಗೃಹದಲ್ಲಿ ಸುಪಾರ್ಶ್ವನಾಥಸ್ವಾಮಿಯೂ, ಅದರ ಮುಂದಿನ ಮಂಟಪದಲ್ಲಿ, ಎಡಭಾಗದಲ್ಲಿ 24 ತೀರ್ಥಂಕರ ಹಾಗೂ ಬಲಭಾಗದಲ್ಲಿ ಪಾರ್ಶ್ವನಾಥ ಸ್ಥಾಪಿತರಾಗಿದ್ದಾರೆ. ಅದರ ಎದುರಿಗೆ ಸಹಸ್ರಕೂಟ ಚೈತ್ಯಾಲಯವಿದೆ. ಈ ಮಂಟಪದಲ್ಲಿ ಪುಷ್ಪಬಂಧ, ಸ್ವಸ್ತಿಕ – ಮುಂತಾದ ವಾತಾಯನಗಳೂ ಇವೆ.

ಬಸದಿಯ ಮೂರನೇ ನೆಲೆಯೂ (=ತಲ/ಹಂತ) ಕೂಡ ಕೆಳಗಿನ ಎರಡನೇ ನೆಲೆಯಂತೇ ಇದೆ; ಆದರೆ ಅದರಂತೆ, ಮುಂದೆ ಉದ್ದ ಮಂಟಪವಾಗಲೀ, ಅಕ್ಕಪಕ್ಕ ಇತರ ದೇವತೆಗಳಾಗಲೀ ಇಲ್ಲ. ಇದನ್ನು 'ಸಿದ್ಧಕೂಟ ಚೈತ್ಯಾಲಯ' ಎನ್ನುವರು. ಇಲ್ಲಿ ಜಿನಬಿಂಬಗಳಿವೆ; ಇಲ್ಲಿ 15ನೇ ಶತಮಾನದ ಕಂಚಿನ ನಂದೀಶ್ವರ ದ್ವೀಪವಿರುವುದಾಗಿ ತಿಳಿದುಬರುತ್ತದೆ.[15] ಇದು ಕೂಡ ತಾಮ್ರಾಚ್ಛಾದನಗೊಂಡಿದ್ದು,[16] ಈ ನೆಲೆಯು ಕೆಲ ವರುಷಗಳ ಹಿಂದೆ ಜೀರ್ಣೋದ್ಧಾರಗೊಂಡಿದೆ. ಈ ನೆಲೆಯು ಮೊದಲನೆಯ ನೆಲೆಯಿಂದ ಪಿರಮಿಡ್ ಆಕಾರದಲ್ಲಿ ಚಿಕ್ಕದಾಗುತ್ತಾ ಬಂದಿದ್ದು, ನಮಸ್ಕಾರ ಮಂಟಪದವರೆಗೆ ಮಾತ್ರ ಇದೆ. ಈ ತಲದ ಮುಂಭಾಗದಲ್ಲಿ, ಇಳಿಜಾರು ಮಾಡಿನ ಮೇಲೆ ಮಧ್ಯದಲ್ಲಿ ಎದ್ದುಕಾಣುವಂತೆ ಒಂದು ತ್ರಿಕೋಣ ಕೋಷ್ಠವಿದ್ದು, ಇದು ಈ ಮಾದರಿಯ ದೇವಾಲಗಳ ವಿಶೇಷತೆಯಾಗಿದೆ. ಮೂಲ ಬಸದಿ ಮತ್ತು ಇತರ ಮಂಟಪಗಳ ಮೇಲಿನ ಶಿಖರದ ತುದಿಯಲ್ಲಿ 'ಕಲಶ'ವಿದೆ.

ತಿರ್ಯಙ್ಮುಖ ಕ್ರಮದಲ್ಲಿ ಗಮನಿಸಿದರೆ, ಈ ಹೊಸಬಸದಿಯಲ್ಲಿ ಗರ್ಭಗೃಹ ಮತ್ತು ಲಕ್ಷ್ಮೀಮಂಟಪ (ಗರ್ಭಗೃಹದೊಂದಿಗೇ ಸೇರಿರುವ ಮಂಟಪ), ತೀರ್ಥಂಕರ ಮಂಟಪ, ನಮಸ್ಕಾರ ಮಂಟಪ, ಚಿತ್ರಾದೇವಿ ಮಂಟಪ ಮತ್ತು ಭೈರಾದೇವಿ ಮಂಟಪಗಳಿವೆ.

ಈ ಬಸದಿಯ *ಗರ್ಭಗೃಹದಲ್ಲಿ* ಚಂದ್ರನಾಥನ ಬಿಂಬವಿದೆ; ಎಡಗಡೆ ಶ್ಯಾಮಯಕ್ಷ ಮತ್ತು ಜ್ವಾಲಮಾಲಿನಿಯ ಶಿಲ್ಪಗಳಿವೆ. 8ನೇ ತೀರ್ಥಂಕರನಾದ ಚಂದ್ರನಾಥನ ಬಿಂಬವು ಕಾಯೋತ್ಸರ್ಗ ಭಂಗಿಯಲ್ಲಿರುವ ಪಂಚಲೋಹದ ಬಿಂಬ. ಇದು ದಕ್ಷಿಣ ಭಾರತದಲ್ಲೇ ಹೆಚ್ಚು ಎತ್ತರವಾಗಿರುವ ಬಿಂಬವೆಂದೂ,[17ಅ] ಕೆತ್ತನೆಯು ಬಹಳ ಸುಂದರವಾಗಿದೆಯೆಂದೂ ಹೇಳಲಾಗಿದೆ.[17ಆ] ಶಾಸನದಲ್ಲಿ ಈ ಬಿಂಬವು 'ದಶತಾಲ'ದಲ್ಲಿರುವ ಅಷ್ಟಮಹಾಪ್ರತಿಹಾರ್ಯರಿಂದ ಕೂಡಿದ ಕಂಚಿನ ಬಿಂಬವೆಂದೂ ಸ್ಪಷ್ಟಪಡಿಸಲಾಗಿದೆ.[17ಇ] ಗರ್ಭಗೃಹಕ್ಕೆ ಸಂಬಂಧಿಸಿದಂತೆ ಪ್ರನಾಳವೂ ಇದ್ದು, ಇದು ಹೊರ ಅಧಿಷ್ಠಾನದ ಕುಮುದದ ಮೇಲಿದೆ; ಆಲಂಕಾರಿಕವಾಗಿರುವ ಈ ಪ್ರನಾಳದ ಕೆಳಚಾಚಿನಲ್ಲಿ ಕಮಲದ ಮೊಗ್ಗನ್ನು ಬಿಡಿಸಿದೆ. ಗರ್ಭಗೃಹಕ್ಕೆ ಸೇರಿದಂತಿರುವ ಲಕ್ಷ್ಮೀಮಂಟಪದಲ್ಲಿ ಗರ್ಭಗೃಹದ ಗೋಡೆಯೇ ಮುಂದುವರಿದಿದ್ದು, ಮುಂದೆ ಬಾಗಿಲಿದೆ; ಅದರ ಲಲಾಟ ಫಲಕದಲ್ಲಿ ತೀರ್ಥಂಕರನ (?) ಬಿಂಬವಿದೆ.

ಇದರ ಮುಂದಿನ **ತೀರ್ಥಂಕರ ಮಂಟಪ** ಅಥವಾ ಅಂತರಾಳದಲ್ಲಿ 24 ತೀರ್ಥಂಕರರ ಕಂಚಿನ ಪ್ರತಿಮೆಗಳೂ, ಬಾಹುಬಲಿಯ ಕಂಚಿನ ಪ್ರತಿಮೆಯೂ ಇದೆ. ಇದನ್ನು 'ಮುಚ್ಚಿದ ಅಂತರಾಳ'ವೆಂದು ಹೇಳಬಹುದು. ಈ ಮಂಟಪದಲ್ಲಿ ನಾಲ್ಕು ಮಿಶ್ರಕ ರೀತೀಯ ಸ್ತಂಭಗಳಿವೆ. ಈ ಸ್ತಂಭಗಳಲ್ಲಿ 'ಪಾದ'ದ ಮೇಲೆ 16 ಮುಖದ ಮಧ್ಯಪಟ್ಟವೂ 'ಚದುರಂ'ನಲ್ಲಿ ನವಿಲು ಇತ್ಯಾದಿ ಕೆತ್ತನೆಗಳೂ ಇವೆ. ಮೇಲಿನ 'ಕಲಶ'ವು 16 ಮುಖದಲ್ಲಿದ್ದು 'ಪಾದ' ಭಾಗಕ್ಕೆ ಅನುನಯವಾಗಿದೆ. 'ಕುಂಭ'ವು ಉಬ್ಬಿದಂತಿದ್ದು ಗಂಗರ ಕಾಲವನ್ನು ನೆನಪಿಸಿದರೂ, ಅದಕ್ಕಿಂತಲೂ ದೊಡ್ಡದಾಗಿದೆ. ಅಂತ್ಯದಲ್ಲಿರುವ ಸುರುಳಿಬೋದಿಗೆಯು ಸಾಲಂಕೃತವಾಗಿದೆ. ಇಲ್ಲಿನ ನಾಲ್ಕು ಕಂಬಗಳೂ ಒಂದೇ ರೀತಿಯಾಗಿವೆ. ಕಂಬದ ಮೇಲಿನ 'ತುಲಾ' ಭಾಗದಲ್ಲೂ ಅಲಂಕರಣೆ ಇದೆ. 'ಕಮಲ ವಿತಾನ'ವಿದ್ದು ಮೂರು ಸುತ್ತು ಕಮಲಮಂಡಲದ ಮಧ್ಯದಿಂದ ಕಮಲದ ಮೊಗ್ಗು ಇಳಿಬಿದ್ದಿದೆ. ಇದು ಒಂದು ಚೌಕದೊಳಗಿರುವ ಸಮತಲ ವಿತಾನವಾಗಿದ್ದು, ವಿಜಯನಗರ ಕಾಲದ ಲಕ್ಷಣವನ್ನೇ ಸೂಚಿಸುತ್ತದೆ.

ಇದರ ಮುಂದಿರುವ ಮಂಟಪವೇ 'ನಮಸ್ಕಾರ ಮಂಟಪ'. ಇದನ್ನು ನವರಂಗ ಎಂದೂ ಹೇಳಬಹುದು. ಮಂಟಪದ ಅಕ್ಕಪಕ್ಕ 'ಪಾರ್ಶ್ವ ಚತುಷ್ಕಿ'ಗಳಲ್ಲಿ ಇಲ್ಲಿಂದ ಹೊರಹೋಗಿ ಬಸದಿಯ ಸುತ್ತ ಪ್ರದಕ್ಷಿಣೆ ಬರಬಹುದು.[18] ಮಂಟಪದ ಮಧ್ಯೆ ನಾಲ್ಕು ಕಂಬಗಳಿವೆ. ಪ್ರವೇಶದಲ್ಲಿ ಮೆಟ್ಟಿಲುಗಳಿದ್ದು, ದ್ವಾರವು ಸುಂದರವಾಗಿದೆ. ಪದ್ಮ, ವಲ್ಲೀ, ಸ್ತಂಭ, ವಜ್ರ ಹಾಗೂ ಪದ್ಮಶಾಖೆಗಳಿರುವ ಈ ದ್ವಾರದಲ್ಲಿ ಮಧ್ಯೆ 'ಶಾಖಾವಿಭಕ್ತಿ'ಗಳೂ ಇವೆ. ಸ್ತಂಭಶಾಖೆಯ ಕೆಳಗೆ ಕೀರ್ತಿಮುಖ ಮತ್ತು ವಜ್ರಶಾಖೆಯ ಕೆಳಗೆ ಚಿಗುರು/ಹೂವನ್ನು ಎದ್ದುಕಾಣುವಂತೆ ಬಿಡಿಸಲಾಗಿದೆ; ವಲ್ಲೀಶಾಖೆಯು ಅಗಲವಾಗಿದೆ. ಇವೆಲ್ಲವೂ ಸೇರಿದಂತೆ 'ಪೇದ್ಯಾ' ಭಾಗದಲ್ಲಿರುವ 'ಘಟಪಲ್ಲವ'ವು ತುಂಬಾ ಸುಂದರವಾಗಿದೆ ಮತ್ತು ಸಾಲಂಕೃತವಾಗಿದೆ. ಇದು ಒಂದು ಪೀಠದ ಮೇಲಿದ್ದು, 'ಘಟ'ವನ್ನು ಪದರಪದರವಾಗಿ ಬಿಡಿಸಿದೆ ಹಾಗೂ ಅದರಿಂದ ಚಿಗುರು ಹೊರಟಂತೆ ಸುಂದರವಾಗಿ ಬಿಡಿಸಿದೆ. ಘಟದ ಮೇಲ್ತಿದಿಯಲ್ಲಿ ಮತ್ತೊಂದು ಕಲಶವೂ, ಅಕ್ಕಪಕ್ಕ ಚಿಗುರು ಮತ್ತು ಗಿಣಿಯೂ ಇದೆ. ಈ ಘಟಪಲ್ಲವದಲ್ಲಿ ಮಧ್ಯೆ ಒಂದು ಅಗಲವಾದ ರತ್ನಮಾಲಾ ಪಟ್ಟಿಯೂ, ಪಟ್ಟಿಯ ಮಧ್ಯೆ ಸಣ್ಣ ಕಂಬವೂ ಇದ್ದು, ಅದರ ಮೇಲೆ ಕೀರ್ತಿಮುಖವಿದೆ. ಈ ಪಟ್ಟಿಯ ಮೇಲೆ, ಕಂಬದ ಅಕ್ಕಪಕ್ಕ ಹಂಸವನ್ನು ಬಿಡಿಸಿದ್ದು, ಕಲಶದಲ್ಲಿ ನೀರಿರುವುದನ್ನು ಸೂಚಿಸುತ್ತಿದೆ. ಇದಕ್ಕೂ ಕೆಳಭಾಗದಲ್ಲಿ ಕೋಷ್ಠದೊಳಗೆ ಆನೆ ಮತ್ತು ಮಂಡಲ ಬಿಡಿಸಿದೆ. ದ್ವಾರಬಂಧದ 'ಮಂಗಳಫಲಕ'ದಲ್ಲಿ ಮಧ್ಯೆ ಒಂದು ಕೋಷ್ಠದಲ್ಲಿ ತೀರ್ಥಂಕರನ ಶಿಲ್ಪವೂ, ಅಕ್ಕಪಕ್ಕಗಳಲ್ಲಿ ಕೀರ್ತಿಮುಖವೂ ಇದ್ದು, ಅದರ ಕೆಳಗೆ ಕಮಲದ ಮೊಗ್ಗು ಇಳಬಿದ್ದಿದೆ. ಈ ಮಂಟಪದ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಪ್ರವೇಶದ್ವಾರಗಳಿದ್ದು, ಅಲ್ಲಿ 'ಪಾರ್ಶ್ವ ಚತುಷ್ಕಿ'ಗಳಿವೆ. ಇದು 8–10 ಸೋಪಾನಗಳಿಂದ ಕೂಡಿದ್ದು, ದೇವಾಲಯವು ಎತ್ತರದಲ್ಲಿರುವುದನ್ನು ಸೂಚಿಸುತ್ತದೆ. ಸೋಪಾನದ ಪಕ್ಕ ಹಸ್ತಿಹಸ್ತವಿದ್ದು, ಅದರಲ್ಲಿ ಮಧ್ಯೆ ಕಮಲದ ಮೊಗ್ಗಿದೆ. ದ್ವಾರವು ಸರಳವಾಗಿದ್ದು, 'ಲಲಾಟ ಫಲಕ'ದಲ್ಲಿ ತೀರ್ಥಂಕರನ ಶಿಲ್ಪವಿದೆ. ಇಲ್ಲೂ ದ್ವಾರದಲ್ಲಿ ವೇದಿಕೆಯಂತಹ ರಚನೆ ಇದೆ. ಇದು ನಾಲ್ಕು ಕಂಬಗಳಿಂದಾದ ಮಂಟಪವಾಗಿದ್ದು, ಮುಂದಿನ ಎರಡು ಕಂಬಗಳು ಸೀಳುಬೋದಿಗೆ ಇರುವ 'ಇಂದ್ರಕಾಂತಸ್ತಂಭ'ಗಳಾಗಿವೆ. ಕೆತ್ತನೆಗಳಿದ್ದರೂ, ಒಳಗಿರುವ

ಕಂಬಗಳಷ್ಟು ಅಲಂಕೃತವಾಗಿಲ್ಲ. ಇಳಿಬಿದ್ದ ಕಮಲವಿರುವ 'ಸಮತಲ ಪದ್ಮವಿತಾನ'ವಿದೆ. ಈ ಮಂಟಪಕ್ಕೆ ಮತ್ತೆ ಅಕ್ಕಪಕ್ಕ ನಾಲ್ಕು ಕಂಬಗಳ ಆಸರೆ ಇದೆ.

ಈ ಮಂಟಪದ ಮೂಲದ್ವಾರದ ಪಕ್ಕದಲ್ಲಿರುವ ಕಂಬವು ಸಾಲಂಕೃತವಾಗಿದೆ. ಹಾಗೂ ವಿಶೇಷವಾಗಿದೆ. ಕಂಬದ ಪೀಠದಲ್ಲಿ ಒಂದು ಕೋಷ್ಠದೊಳಗೆ ಗಂಧರ್ವರನ್ನು ಬಿಡಿಸಿದೆ. ಅದರ ಮೇಲಿನ ಎತ್ತರವಾದ 'ಪಾದ'ದಲ್ಲಿ ಚಾಮರಧಾರಿ ಮತ್ತು ಅದರ ಮೇಲೆ ಕೀರ್ತಿಮುಖ ಇದೆ. 'ದಂಡ'ದ ಮಧ್ಯಭಾಗದಲ್ಲಿ ಉಬ್ಬಿದ ಸ್ತಂಭದಂತಿದ್ದು, ಅದರ ಅಕ್ಕಪಕ್ಕ ಹಿಂಸರಿದ ಭಾಗದಲ್ಲಿ ಪದ್ಮದಳ ಹಾಗೂ ವೃತ್ತ ಮತ್ತು ವಜ್ರಾಲಂಕಾರಗಳಿಂದ ಕೂಡಿದ ಎರಡು ಲಂಬಸಾಲುಗಳಿವೆ. ಉಬ್ಬಿದ ಸ್ತಂಭ ಭಾಗದಲ್ಲಿ ಯಕ್ಷ-ಗಂಧರ್ವರ ಸಾಲಂಕೃತ ಪಟ್ಟಿ, ಮೂಲಾಸ್ಥಾನ, ಪದ್ಮಬಂಧ, ಇತ್ಯಾದಿ ಅಲಂಕರಣಗಳು ಹಂತಹಂತವಾಗಿ ಮೂಡಿಬಂದಿವೆ. ಇದನ್ನೇ ಒಂದು ಪ್ರತ್ಯೇಕ ಸ್ತಂಭದಂತೆ ಬಿಡಿಸುವ ಯೋಚನೆ ಇಲ್ಲಿ ಕಾಣಬರುತ್ತದೆ. ಒಟ್ಟಾರೆ, ಇದು ಭದ್ರಕ ರೀತಿಯ ಸ್ತಂಭವನ್ನು ನೆನಪಿಸುತ್ತದೆ. ಸ್ತಂಭಾಗ್ರದಲ್ಲಿ ಕುಬ್ಜನು ಬೋದಿಗೆಯನ್ನು ಹೊತ್ತುಕೊಂಡಿದ್ದು, ಅಂತ್ಯದಲ್ಲಿ ವೇಣುಗೋಪಾಲನನ್ನು ಬಿಡಿಸಿದೆ. ಎಡಭಾಗದ ಕಂಬದಲ್ಲಿ ಮಧ್ಯೆ ವಲ್ಲೀ ಅಲಂಕಾರವಿದ್ದು ಸಿಂಹಪೀಠವಿರುವ ವಿಮಾನವನ್ನು ಕುಬ್ಜ ಎರಡೂ ಕೈಗಳಿಂದ ಎತ್ತಿಹಿಡಿದಿದ್ದಾನೆ; ಅದೇ ಭಂಗಿಯಲ್ಲಿ ಮೇಲೆ ಗಂಧರ್ವನು ಬೋದಿಗೆಯನ್ನು ಹಿಡಿದಿದ್ದಾನೆ. ಕೊನೇ ಹಂತದಲ್ಲಿ ನಾಟ್ಯಭಂಗಿಯಲ್ಲಿ ನಿಂತ ಇಂದ್ರನು (?) ಎರಡೂ ಕೈಗಳಿಂದ ಮಾಡನ್ನು ಎತ್ತಿ ಹಿಡಿದಿದ್ದಾನೆ.

ನಮಸ್ಕಾರ ಮಂಟಪದ ಮುಂದಿನ ಮಂಟಪವನ್ನು ಚಿತ್ರಾದೇವಿ ಮಂಟಪ ಎಂದು ಕರೆಯಲಾಗುತ್ತದೆ. ವಿಜಯನಗರ ಕಾಲದಲ್ಲಿ ಕೆಲವೆಡೆ ಕಾಣಬರುವ ಎರಡು ಮಂಟಪಗಳ ರಚನೆಯನ್ನು ಇಲ್ಲಿಯೂ ಕಾಣಬಹುದಾಗಿದೆ. ಇಲ್ಲಿ ಮುಖ್ಯವಾಗಿ ನಾಲ್ಕು ಕಂಬಗಳೂ, ಉಳಿದಂತೆ ಬಹುಶಃ ಆಧಾರರೂಪವಾಗಿರುವ ಕಂಬಗಳೂ ಇವೆ. ಆ ನಾಲ್ಕು ಕಂಬಗಳು ಸುಂದರ ಕಂಬಗಳಾಗಿದ್ದರೂ, ಒಂದೊಂದೂ ಬೇರೆ ಬೇರೆ ರೀತಿ ಅಲಂಕೃತಗೊಂಡಿವೆ. ಮೊದಲಿಗೆ, ಮಂಟಪದ ಎಡಭಾಗದ ಹಿಂದಿನ ಕಂಬವನ್ನು ಗಮನಿಸಬಹುದು. ಇದೂ ಒಮ್ಮೆ ಬಿದ್ದುಹೋಗಿದ್ದು, ಮತ್ತೆ ಸೇರಿಸಿದಂತಿದೆ. 'ಪಾದ'ದಲ್ಲಿ ಸರ್ವಾಹ್ಣ, ಸಿದ್ಧಾಯಿಕೆ ಇತ್ಯಾದಿ ಶಿಲ್ಪಗಳಿವೆ. 'ಪಾದ'ದ ಮೂಲೆಯಲ್ಲಿ ಸಾಮಾನ್ಯವಾಗಿ ಚಿಕ್ಕಮೊಗ್ಗು ಚಿಗುರನ್ನು ಬಿಡಿಸಲಾಗಿರುತ್ತದೆಯಾದರೂ, ಇಲ್ಲಿ ಅದು ಇನ್ನೂ ಹೆಚ್ಚು ಅಗಲ ಮತ್ತು ಎತ್ತರವಾಗಿದೆ; ಅದರ ಮಧ್ಯದಲ್ಲಿ ಜಿನ, ಗುರು-ಶಿಷ್ಯರನ್ನು ಬಿಡಿಸಿರುವುದು ವಿಶೇಷವಾಗಿದೆ. ಇವೆಲ್ಲಕ್ಕೂ ಮೇಲೆ ಸುತ್ತ ಒಂದು ಪಟ್ಟಿ ಇದೆ. 32 ಮುಖದ ದಂಡ ಭಾಗದಲ್ಲಿ ವಲ್ಲೀ ಪಟ್ಟಿಗಳು, ಅದರ ಮೇಲೆ ಕೀರ್ತಿಮುಖ ಮತ್ತು ರತ್ನಮಾಲೆಯಿಂದ ಕೂಡಿದ ಇತರ ಪಟ್ಟಿಕೆಗಳೂ ಮೂರು ಹಂತಗಳಲ್ಲಿವೆ. 'ಲಶುನಾಲಂಕರಣ'ವು ನಾಗರಹಾವಿನ ಹೆಡೆಯಂತಿದ್ದು, ಎಂಟು ಮುಖದಲ್ಲಿದೆ; ತಾಟಿ, ಕುಂಭ – ಇವು ಕಮಲದಳಗಳ ಸಾಲಿನಿಂದಲೂ, ಕುಂಭವು ವಜ್ರಪಟ್ಟಿಗಳಿಂದಲೂ ಅಲಂಕೃತವಾಗಿವೆ; 'ಕಂಠ'ದ ಮೇಲೆ 'ನಾಗಮಂಡಿ'ಯೂ ಕಮಲದ ಮೊಗ್ಗಿನಿಂದ ಕೂಡಿದ ಫಲಕವೂ, ಹೆಚ್ಚು ಎತ್ತರವಿಲ್ಲದ ವೀರಕಂಠವೂ, ಅಂತ್ಯದಲ್ಲಿ ಸುರುಳಿ ಬೋದಿಗೆಯೂ ಇದೆ.

ಬಲಭಾಗದ ಹಿಂದಿನ ಕಂಬರಚನೆಯಲ್ಲೂ ಇದೇ ವಿನ್ಯಾಸವನ್ನು ಕಾಣಬಹುದು. ಪೀಠದಲ್ಲಿ ಹಿಂಚಾಚು-ಮುಂಚಾಚುಗಳಿದ್ದು, ಭದ್ರ ಭಾಗದಲ್ಲಿ ಕುಬ್ಜ, ಕೀರ್ತಿಮುಖ ಬಿಡಿಸಿದೆ. 'ಪಾದ'ದ ಮೇಲೆ ಗರುಡ, ನವಿಲು ಚಿತ್ತಾರಗಳೂ, ತುದಿಯಲ್ಲಿ ರತ್ನಮಾಲಾಪಟ್ಟಿಯೂ, ಮೂಲೆಯಲ್ಲಿ ಮೊಗ್ಗೂ ಇದೆ. ಈ ಭಾಗದ ಪಟ್ಟಿಯ ಮೇಲೆ ಹನುಮಂತ, ದರ್ಪಣಸುಂದರಿ ಇತ್ಯಾದಿ ಉಬ್ಬುಶಿಲ್ಪಗಳಿವೆ. ದಂಡವು 16 ಮುಖದಲ್ಲಿದ್ದು, 'ಇಂದ್ರಕಾಂತ' ರೀತಿಗೆ ಸೇರುತ್ತದೆ. 'ದಂಡ'ದ ಎಲ್ಲ ಮುಖಗಳಲ್ಲೂ ಲಂಬಸಾಲಿನ ವಲ್ಲೀ ಪಟ್ಟಿ ಇದೆ. ಅವುಗಳ ಮಧ್ಯಪಟ್ಟಿಯಲ್ಲೂ ಇದೇ ಅಲಂಕರಣವಿದೆ. ಲಶುನ (=ಕಲಶ), ತಾಟೀ, ಘಟ (–ಕುಂಭ), ಮಂಡಿ – ಎಲ್ಲವೂ 16 ಮುಖದಲ್ಲೇ ಮುಂದುವರಿದಿದ್ದು, ಇದನ್ನು 'ಪೂರ್ಣ ಇಂದ್ರಕಾಂತ ಸ್ತಂಭ' ಎನ್ನಬಹುದು. ಫಲಕದ ತಳಭಾಗದಲ್ಲಿ ಎಂಟು ಮುಖದ ಚಿತ್ತಾರಪಟ್ಟಿ ಇದೆ. ಇದರ 'ಕಂಠ' ಎತ್ತರವಾಗಿದ್ದು, ಬೋದಿಗೆ ಕೆಳಗಿನ ವೀರಕಂಠವಿಲ್ಲ.

ಬಲಭಾಗದ ಕಂಬವು (ಮುಂದಿನದು) ಈ ಹಿಂದಿನ ಎರಡು ಕಂಬಗಳಿಗಿಂತ ಸರಳವಾಗಿದೆ. ಪೀಠದ ಹಿಂಚಾಚು-ಮುಂಚಾಚುಗಳು ಇಲ್ಲೂ ಇವೆ. 'ಪಾದ'ವೂ ಸಾಲಂಕೃತಗೊಂಡಿದ್ದು, ಇದರ ಮೇಲೆ ವಿವಿಧ ವಾದ್ಯ ಮತ್ತು ನೃತ್ಯಗಾರರ ಶಿಲ್ಪಗಳಿವೆ. 'ದಂಡ'ದ ಆರಂಭದಲ್ಲಿ ಕಮಲದ ಮೊಗ್ಗು ಬಿಡಿಸಿರುವುದು ಗಮನಾರ್ಹ. ಇಲ್ಲೂ ಹಿಂದಿನದರಂತೆ 'ದಂಡ'ವನ್ನು ಎರಡು ಹಂತಗಳಾಗಿ ಮಾಡಿದ್ದರೂ, ಕೆಳಗಿನ ಹಂತದಲ್ಲಿ 16 ಮುಖ ಮತ್ತು ಮೇಲಿನ ಹಂತದಲ್ಲಿ 32 ಮುಖ ಇರುವುದು ವಿಶೇಷವಾಗಿದೆ; ಮಧ್ಯೆ 'ವಲ್ಲೀ'ಪಟ್ಟಿಯೂ ಇದೆ. 'ಕಲಶ'ವೂ 16 ಮುಖದಲ್ಲಿದ್ದು, ಇದು ಪ್ರಧಾನವಾಗಿ 'ಇಂದ್ರಕಾಂತಸ್ತಂಭ'ವೇ ಎನಿಸುತ್ತದೆ. ಪದ್ಮಾಲಂಕೃತ ತಾಟೀ, ಉಬ್ಬಿದ ಘಟ, ಪದ್ಮಮಂಡಿ, ಅಲಂಕೃತ ಫಲಕ ಸುರುಳಿ ಬೋದಿಗೆ ಇವೆಲ್ಲವೂ ಇದರಲ್ಲಿವೆ.

ಎಡಭಾಗದ ಮುಂದಿನ ಕಂಬದಲ್ಲಿ ಪೀಠವು ಹಿಂದಿನದರಂತೇ ಇದ್ದು, ಕೋಷ್ಠದಲ್ಲಿ ಹನುಮಂತನ ಶಿಲ್ಪವಿದೆ. 'ಪಾದ'ದಲ್ಲಿ ಆನೆ, ಸ್ತ್ರೀ, ಜಿಂಕೆ, ಮೊದಲಾದ ಶಿಲ್ಪಗಳಿವೆ. ಪಾದಾಂತ್ಯದ ಪಟ್ಟಿಕೆಗಳಲ್ಲಿ ರಾಣಿ, ಕೋಲಾಟದ ಚಿತ್ರಣವಿದೆ. 'ದಂಡ'ದ ಆರಂಭದಲ್ಲಿ ಪದ್ಮಪಟ್ಟಿ ಇದೆ. ಇದನ್ನು ಹಿಂದಿನದರಂತೆ ಎರಡು ಹಂತ ಮಾಡಿದ್ದರೂ, ಭಾಗ ಸಮನಾಗಿಲ್ಲ. ಇವುಗಳ ಮಧ್ಯೆ ವಲ್ಲೀಪಟ್ಟಿಕಾ ಇದೆ; ಹಾಗೂ ಅಂತ್ಯದಲ್ಲಿ ಮಾಲಾಸ್ಥಾನವಿದೆ. 'ಲಶುನ'ವು 16 ಮುಖದಲ್ಲಿದೆ. ಘಟ ಅಥವಾ ಕುಂಭದಲ್ಲಿ ರತ್ನಮಾಲಾ ಪಟ್ಟಿಯೂ, 'ಮಂಡಿ'ಯಲ್ಲಿ ಎರಡು ಸಾಲು ಪದ್ಮವೂ ('ಪದ್ಮಮಂಡಿ') ಇದ್ದು, ಫಲಕವು ನಿರಲಂಕೃತವಾಗಿದೆ. ಬೋದಿಗೆ ಸರಳವಾಗಿದೆ. ಈ ಮಂಟಪದ 'ತುಲಾ'ಭಾಗದಲ್ಲೂ 'ಪದ್ಮಮಂಡಲ' ಬಿಡಿಸಿದೆ.

ನಮಸ್ಕಾರ ಮಂಟಪದಂತೆ ಇಲ್ಲೂ ಚೌಕಾಕಾರದ 'ಸಮತಲ ಪದ್ಮವಿತಾನ'ವಿದೆ. ಸುತ್ತಲಿರುವ ವಜ್ರಾಕೃತಿ ಮತ್ತು ಚೌಕಾಕೃತಿಯ ಮಧ್ಯ ಭಾಗದಲ್ಲಿ ನವಿಲು ಇತ್ಯಾದಿ ಚಿತ್ರಗಳಿವೆ. ಮತ್ತೆ ಸುತ್ತ ಅಷ್ಟಾಕೃತಿಯೊಳಗೆ 'ಪದ್ಮಮಂಡಲ' ಬಿಡಿಸಿದೆ. ವಿತಾನದ ಕೊನೇ ಪಟ್ಟಿಕೆಯಲ್ಲಿ ಅಷ್ಟದಿಕ್ಪಾಲಕರನ್ನೂ, ಅದರ ಹೊರಪಟ್ಟಿಕೆಯಲ್ಲಿ ನಾಲ್ಕು ದಿಕ್ಕಿನಲ್ಲಿ ತೀರ್ಥಂಕರರನ್ನೂ ಬಿಡಿಸಿದೆ.

ಈ ಚಿತ್ರಾದೇವಿ ಮಂಟಪದ ದ್ವಾರವು ಸರಳವಾಗಿದೆ. ಇದು ತ್ರಿಶಾಖಾ ದ್ವಾರದಂತೆನಿಸುವುದಾದರೂ, ಕೆತ್ತನೆ ಪೂರ್ಣಗೊಂಡಂತಿಲ್ಲ;[19] 'ಮಂಗಳ ಫಲಕ'ವೂ ಶಿಲ್ಪರಹಿತವಾಗಿದೆ. ದ್ವಾರದ 'ಉತ್ತರಾಂಗ'ದಲ್ಲಿ ವೃತ್ತ, ಹೂಗಳನ್ನು ಬಿಡಿಸಿದೆ; ಉಳಿದಂತೆ ಎಲ್ಲವೂ ನಿರಲಂಕೃತ. ಇಲ್ಲಿ ಪ್ರವೇಶಭಾಗದಲ್ಲಿ ಸೋಪಾನಗಳಿವೆ. ಈ ದ್ವಾರದ ಮುಂಭಾಗದಲ್ಲಿ ಒಂದು ವೇದಿಕೆ ಇದ್ದು ಅದಕ್ಕೆ ಆಧಾರವಾಗಿ ಕಂಬದಂತಹ ಪಟ್ಟಿಕೆಯೂ, ಇನ್ನೊಂದು ಚಿಕ್ಕ ಕಂಬವೂ ಇದೆ; ಈ ಕಂಬದ ಮೇಲೆ 'ಕುಂಭಲತಾ' ಇದೆ ಹಾಗೂ ಅದು 'ಕೂಟ'ದಿಂದ ಅಲಂಕೃತವಾಗಿದೆ. ಅದೇ ರೀತಿಯ ಪಕ್ಕದ ಕಂಬದಲ್ಲಿ 'ಕೂಟ'ದ ಬದಲು ಕೀರ್ತಿಮುಖವಿದೆ. ಈ ವೇದಿಕೆಯ ಉದ್ದೇಶ ಸ್ಪಷ್ಟವಾಗಿಲ್ಲ.

ಇಲ್ಲಿ ಕಾಣುವ ಅಧಿಷ್ಠಾನದ 'ಜಗತೀ' ಭಾಗದಲ್ಲಿ ಆನೆ ಮತ್ತಿತರ ಕೆತ್ತನೆಗಳಿವೆ. ಈ ದ್ವಾರದ ಬಳಿ ಅಧಿಷ್ಠಾನದ ಮುಂಭಾಗವು ಕಾಣುತ್ತಿದ್ದು, ಇಲ್ಲಿಯವರೆಗಿನ ರಚನೆ ಒಂದು ಕಾಲಕ್ಕೆ ಸೇರುವಂತೆ ತೋರುತ್ತದೆ. ಇಲ್ಲಿನ, 'ಲಾಂಗುಲ ಭಿತ್ತಿ'ಯೂ ನಿರಲಂಕೃತ. ಈ ಚಿತ್ರಾದೇವಿ ಮಂಟಪ ಮತ್ತು ಮುಂದಿನ ಭೈರಾದೇವಿ ಮಂಟಪದ ಮಧ್ಯೆ ಓಡಾಡುವಷ್ಟು ಸ್ಥಳವಿದೆ; ಅಕ್ಕಪಕ್ಕದಿಂದ ಒಳಕ್ಕೆ ಬರಲೂ ಅವಕಾಶವಿದೆ. ಇಲ್ಲಿಂದ ಮುಂದಕ್ಕೆ ಸೋಪಾನಗಳನ್ನೇರಿ ಭೈರಾದೇವಿ ಮಂಟಪಕ್ಕೆ ಹೋಗಬೇಕು. ಇಲ್ಲಿ ಮಧ್ಯದ ಸ್ಥಳದಲ್ಲಿ ಸರಳವಾದ ಚಿಕ್ಕ ಬಲಿಪೀಠವಿದೆ.

ಚಿತ್ರಾದೇವಿ ಮಂಟಪದ ಮುಂದಿನ **ಭೈರಾದೇವಿ ಮಂಟಪ**ವು ವಿಶಾಲವಾಗಿದೆ. ಇದರ ತಳವಿನ್ಯಾಸವು ನಕ್ಷತ್ರಾಕಾರದಲ್ಲಿದ್ದು, ಪ್ರತ್ಯೇಕ ಮಂಟಪವಾಗಿದೆ. ಇದರೊಳಗೆ 24 ಕಂಬಗಳನ್ನು ಸುತ್ತ ರಚಿಸಿದ್ದು, ಹೊರಸುತ್ತಿನಲ್ಲೂ 24 ಕಂಬಗಳಿವೆ. ಇವು ವಿವಿಧ ರೀತಿಯಲ್ಲಿ ರಚನೆಗೊಂಡಿದ್ದು, ಕೆಲಕೆಲವು ಮಾತ್ರ ಒಂದೇ ರೀತಿಯಲ್ಲಿವೆ. ಇವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ. (ಕಂಬಸಂಖ್ಯಾನುಸಾರ)[20]

ಕಂಬ–5: ಇದೊಂದು ವಿಶೇಷವಾದ ಸ್ತಂಭದ ರೀತಿಯಾಗಿದೆ ಮತ್ತು ಈ ಕಂಬದ ಎಲ್ಲಾ ಭಾಗಗಳೂ ತುಂಬು ಅಲಂಕೃತಗೊಂಡಿವೆ. ಇದಕ್ಕೆ ಚೌಕಾಕಾರದ ಪೀಠವಿದ್ದು ಪೀಠವು ಮುಂಚಾಚು–ಹಿಂಚಾಚುಗಳಿಂದ ಕೂಡಿದೆ. ಅಲ್ಲಿಯೇ ತೋರಣದ ಕೆಳಗೆ ಸಣ್ಣ ಸಣ್ಣ ಉಬ್ಬುಶಿಲ್ಪಗಳಿವೆ. ಅವು – ಚಾವಟಿಧಾರಿ, ಡೋಲುಭಾಜಕ ಇತ್ಯಾದಿ ಶಿಲ್ಪಗಳು. 'ಪಾದ'ದಲ್ಲೂ ಚಿಕಣಿ ರೀತಿಯ ಉಬ್ಬು ಶಿಲ್ಪಗಳಿದ್ದು, ಮೂರು ಸಾಲು ಕೋಷ್ಠಗಳಂತಹ ರಚನೆ ಇದೆ. 'ಪಾದ'ದ ಮೂಲೆಗಳಲ್ಲಿ ಕಮಲದ ಮೊಗ್ಗಿನ ಬದಲು ಕಲಶವನ್ನೇ ಬಿಡಿಸಿದೆ. 'ಪಾದ' ಮಧ್ಯೆ ಕೋಷ್ಠದಲ್ಲಿ, ಅಭಿಷೇಕ ಮಾಡಿಸಿಕೊಳ್ಳುತ್ತಿರುವ ತೀರ್ಥಂಕರನ ಬಿಂಬವಿದೆ. ಈ ಭಾಗವೇ ಸಾಕಷ್ಟು ಅಗಲವಾಗಿದ್ದು, ಮಹತ್ವದ್ದಾಗಿದೆ. ಇದರ ಮೇಲೆ ಮತ್ತೆ ಒಂದು ಸಣ್ಣ ಪಟ್ಟಿ ಇದ್ದು, ಅದರಲ್ಲಿ ಸುತ್ತ ಕೀರ್ತಿಮುಖ ಬಿಡಿಸಿರುವುದು ವಿಶೇಷವಾಗಿದೆ. ಇದರ ನಂತರದ ಭಾಗವು ಗಮನಾರ್ಹವಾಗಿದೆ. ಇಲ್ಲಿ ರುದ್ರಕಾಂತ ರೀತಿಯ ಸ್ತಂಭಭಾಗವು ಒಳಭಾಗದಲ್ಲಿದ್ದು, ಅದರ ಸುತ್ತ 16 ಸಣ್ಣ ಸಣ್ಣ ಸ್ತಂಭಗಳೂ ಇವೆ. ಈ ಸಣ್ಣ ಸ್ತಂಭಗಳು ಇಲ್ಲಿರುವ ಕಂಬಗಳ ಸಂಕ್ಷಿಪ್ತರೂಪ ಎನಿಸುತ್ತದೆ. ಇವುಗಳ 'ಪಾದ'ದಲ್ಲಿ ಒಂದು ಪಟ್ಟಿಕೆ ಇದೆ. ಈ ಕಂಬಗಳ ಮೇಲ್ಭಾಗದಲ್ಲಿ ಸುತ್ತ ಶಾಲಾಕೋಷ್ಠಗಳ ಸಾಲುಗಳಿದ್ದು, ಮತ್ತೆ ಒಂದೊಂದು ಕಂಬದ ಮೇಲೂ ಕೋಷ್ಠದೊಳಗೆ ತೀರ್ಥಂಕರರ ಶಿಲ್ಪಗಳಿವೆ. ಇದರ ಮೇಲಿನ ಭಾಗದಲ್ಲಿ ಉಬ್ಬಿದ 'ರುದ್ರಕಾಂತ'ದಂತಹ ರಚನೆಯೂ ಇದರ ಕೆಳಭಾಗದಲ್ಲಿ ರಜ್ಜು ಪಟ್ಟಿಯೂ, ಮಧ್ಯದಲ್ಲಿ ಹೂಬಳ್ಳಿ ಪಟ್ಟಿಯೂ ಇದೆ. 'ತಾಟೀ' ಭಾಗದಲ್ಲೂ ಪಟ್ಟಿಕೆಗಳಿವೆ. ಇದರ ಮುಂದಿನ ಕಲಶ/ಲಶುನ ಇತ್ಯಾದಿ ಭಾಗಗಳು ತುಂಬಾ ಕೆತ್ತನೆಗಳಿಂದ ಕೂಡಿವೆ. ಕಲಶವೊಂದನ್ನೇ ಪದ್ಮ ಇತ್ಯಾದಿಗಳಿಂದ ಎರಡು ರೀತಿಯಲ್ಲಿ ಅಲಂಕರಿಸಿದೆ. ಈ ರಚನೆಯು ಕಲಶದ ಕಂಠದವರೆಗೂ ಮುಂದುವರಿದಿದೆ. 'ತಾಟೀ' ಭಾಗದಲ್ಲೂ ಪಟ್ಟಿಕೆಗಳಿವೆ. ಘಟ/ಕುಂಭ ಭಾಗವು ಹೆಚ್ಚು ಉಬ್ಬಿಂತಿಲ್ಲದಿದ್ದರೂ ಹೊಯ್ಸಳರಷ್ಟು ತೆಳುವಾಗಿಲ್ಲ. ಕುಂಭದಲ್ಲಿ ಕೆಳಭಾಗದಲ್ಲಿ ಪದ್ಮವನ್ನು ಬಿಡಿಸಿದ್ದರೂ, ಅದನ್ನು ಮಣಿಮಣಿಯಾಗಿ ಬಿಡಿಸಿದೆ. ಕುಂಭದ ಮಧ್ಯ ಪಟ್ಟಿಕೆಯಲ್ಲಿ ಮಣಿಸಾಲನ್ನೇ ಬಿಡಿಸಿದೆ. ತಾಟೀ, ಕುಂಭ–ಎರಡನ್ನೂ ಸೇರಿಸುವಂತೆ ಚಿಕಣಿ ಶಿಲ್ಪಗಳಿದ್ದು, ಆಲದೆಲೆಯ ಮೇಲೆ ಕೃಷ್ಣನನ್ನು ಬಿಡಿಸಿರುವುದು ಗಮನಾರ್ಹವಾಗಿದೆ. 'ಪದ್ಮಮಂಡಿ'ಯ ಕೆಳಗೆ ಮತ್ತೆ ಸಣ್ಣ ಪದ್ಮಗಳನ್ನೇ ಬಿಡಿಸಿದೆ. 'ಫಲಕ'ವು ಚೌಕಾಕಾರವಾಗಿದ್ದು, ಅದೂ ಪೂರ್ಣಾಲಂಕೃತ, ಇದರ ತಳಭಾಗದಲ್ಲಿ ಮಣಿಮುತ್ತಿನ ಸಾಲು, ವಲ್ಲೀ ಅಲಂಕಾರ, ಫಲಕದ ಸುತ್ತ ವಜ್ರಾಕೃತಿಯ ಅಲಂಕಾರ, ಅದರ ಮೂಲೆಗಳಲ್ಲಿ ಇಳಿಬಿದ್ದಂತಿರುವ ಭಾಗದಲ್ಲಿ ಕೆಳಮುಖದಲ್ಲಿ ವಸ್ತ್ರಾಲಂಕಾರ – ಎಲ್ಲವೂ ಇವೆ. ಪುಷ್ಪ ಬೋದಿಗೆಯು ನಾಲ್ಕು ಮುಖದಲ್ಲಿದ್ದು, ಒಂದೆಡೆ ಮಧ್ಯೆ ಕುದುರೆ ಏರಿ ಈಟಿ ಹಿಡಿದಿರುವ ವ್ಯಕ್ತಿ, ಹೆಗಲ ಮೇಲೆ ಭಾರಹೊತ್ತಿರುವ ವ್ಯಕ್ತಿ ಮತ್ತು ತಾಳ/ಕಂಜರ ಬಡಿಯುತ್ತಿರುವುದು – ಮುಂತಾದ ಶಿಲ್ಪಗಳಿವೆ. ಇಷ್ಟೇ ಅಲ್ಲದೆ, ಕುದುರೆ ಸವಾರ, ಕೋಲು ಕೆಳಮುಖವಾಗಿ ಕಾವಲುಗಾರನಂತೆ ಹಿಡಿದಿರುವವ, ಕೈ ಎತ್ತಿ ಸ್ತುತಿಸುತ್ತಿರುವವ ದ್ವಾರಪಾಲಕ ಮುಂತಾದ ಶಿಲ್ಪಗಳೂ ಬೋದಿಗೆಯ ಉಳಿದ ಪಕ್ಕಗಳಲ್ಲಿವೆ. ಪುಷ್ಪಬೋದಿಗೆಯ ಪೂರ್ಣರೂಪ ಇಲ್ಲಿದೆ. ಕಂಬದಿಂದ ಮುಂದೆ ಚಾಚಿದಂತೆ ಬೋದಿಗೆಯು ಇದ್ದು, ಪುಷ್ಪದ ಹಿಂದೆ ಬಿಡಿಸಿದ ದಳಗಳು ಮತ್ತು ಅದರ ಮೊಗ್ಗಿನಲ್ಲಿ ಹಂತಹಂತವಾಗಿ ಬಿಡಿಸಿರುವ ದಳಗಳೂ ಇವೆ. ಇದು ವಿಜಯನಗರ ಕಾಲದ ಪೂರ್ಣ ಲಕ್ಷಣವನ್ನು ಹೇಳುತ್ತಿದೆ. ಈ ಕಂಬದ ರಚನೆಯನ್ನು ಗಮನಿಸಿದರೆ, ಇದು ಸಂಯೋಗಸ್ತಂಭ ಮತ್ತು ಕೋಷ್ಠಸ್ತಂಭಗಳ ಮಾದರಿಯನ್ನು ಸಂಮಿಶ್ರಣವಾಗಿ ಸಂಕ್ಷಿಪ್ತವಾಗಿ ತೋರಿಸುತ್ತಿರುವಂತಿದೆ.

ಇದೇ ಸಾಲಿನಲ್ಲಿ ಮೂಲೆಯಲ್ಲಿರುವ ಎಂಟನೇ ಕಂಬವೂ ಇದೇ ರೀತಿಯಾಗಿದ್ದು, ಅಲ್ಪವ್ಯತ್ಯಾಸವಿದೆ. ಪೀಠದಲ್ಲಿ ಹಂಸ ಇತ್ಯಾದಿ ಕೆತ್ತನೆ ಇದೆ ಹಾಗೂ ಸಳಲಾಗಿ ಮನೆ–ಮನೆಯಂತೆ ಕೆತ್ತಿದ್ದು, ಅದರಲ್ಲಿ ಹೂಗಳ ಕೆತ್ತನೆ ಇದೆ. 'ಪಾದ'ದಲ್ಲಿ ರೇಖಾಚಿತ್ರಗಳನ್ನೂ (ಯಂತ್ರ?), ನಂತರದ ಮೂಲೆಗಳಲ್ಲಿ ಯಾಳಿಗಳನ್ನೂ, ಮಧ್ಯೆ ಗಣಪತಿ, ರಾಜ, ತೀರ್ಥಂಕರ ಇತ್ಯಾದಿ ಉಬ್ಬುಶಿಲ್ಪಗಳನ್ನೂ ಕೆತ್ತಿದೆ. (ಹಿಂದಿನದರಂತೆ ಸಣ್ಣ ಸ್ತಂಭಗಳಂತಹ ಕೋಷ್ಠಗೊಳಗೆ ತೀರ್ಥಂಕರ ಶಿಲ್ಪ ಕೆತ್ತನೆ ಇಲ್ಲಿಲ್ಲ). 'ಕಲಶ'ದ ಮೇಲೆ ಸರ್ಪದಂತೆಯೂ, 'ಕುಂಭ'ದ ತಳಭಾಗದಲ್ಲಿ ಹಂಸ ಇತ್ಯಾದಿ ಚಿಕಣಿ ಶಿಲ್ಪಗಳೂ, 'ಮಂಡಿ'ಯಲ್ಲಿ

ದೊಡ್ಡ ದೊಡ್ಡ ಪದ್ಮದಳದೊಳಗೆ ನೃತ್ಯಗಾರರ ಶಿಲ್ಪಗಳೂ, 'ಫಲಕ'ದಲ್ಲಿ ಎಲೆಯೊಂದಿಗೆ ಇಳಿಬಿದ್ದ ಮೊಗ್ಗಿನ ಕೆತ್ತನೆಯೂ ಇಲ್ಲಿದ್ದು, ವಿಶೇಷವಾಗಿದೆ (ಪುಷ್ಪಬೋದಿಗೆ ಸರಳವಾಗಿದೆ).

ಕಂಬ 17: ಇದರ 'ಪೀಠ' ಮತ್ತು 'ಪಾದ'ವು ಹಿಂದೆ ಹೇಳಿದ ಕಂಬದಂತಿದೆ. 'ಪಾದ'ದ ಮೂಲೆಗಳಲ್ಲಿ ಕೋಲು ಹಿಡಿದಿರುವವನ ಉಬ್ಬುಶಿಲ್ಪವಿದೆ. ಅವುಗಳ ಮಧ್ಯೆ ತಾಳ, ವಾದಕಿ, ನರ್ತಕಿ, ಚಾಮರಧಾರಿ, ವಾದ್ಯಗಾರ ಶಿಲ್ಪಗಳಿವೆ. 'ದಂಡ' ಭಾಗದಲ್ಲಿ ಹಿಂದೆ ಹೇಳಿದ ಸಣ್ಣ ಸಣ್ಣ ಸ್ತಂಭಗಳ ಬದಲಿಗೆ ಕೋಷ್ಠದಂತೆ ಬಿಡಿಸಿದೆ. 'ರುದ್ರಕಾಂತ' ರೀತಿಯ ಈ ಸ್ತಂಭದ ಮೇಲೆ ಎಂಟು ಕೋಷ್ಠಗಳಿದ್ದು, ಒಂದೊಂದರಲ್ಲೂ ನಿಂತಿರುವ ತೀರ್ಥಂಕರನ ಬಿಂಬವಿದೆ. ಇದರ ಮೇಲೆ ಮತ್ತೆ ಕೂಟಕೋಷ್ಠ ಮತ್ತು ಕಲಶ ಬಿಡಿಸಿದ್ದು, ಅದರಲ್ಲಿ ತೀರ್ಥಂಕರನ ಚಿಕಣಿ ಶಿಲ್ಪವಿದೆ. ಈ ಕೋಷ್ಠಗಳ ಪಕ್ಕದಲ್ಲೂ ಕುಳಿತಿರುವ ಜಿನನ ಬಿಂಬವಿದೆ; ಅದರ ಮೇಲೆ ಮತ್ತೆ ಅಪೂರ್ಣ ಅಲಂಕಾರ. ಇದರ ಮೇಲಿಂದ ಸ್ತಂಭದ 'ಗ್ರೀವ' ಭಾಗವು ಆರಂಭವಾಗಿದ್ದು, ಅದರಲ್ಲಿ ಲಶುನ, ತಾಟೀ, ಘಟ, ಮಂಡಿ (ಪದ್ಮಮಂಡಿ) – ಈ ಭಾಗಗಳವೆ. ಲಶುನ ಬಿಟ್ಟು ಇವೆಲ್ಲವೂ ಪದ್ಮಾಲಂಕೃತವಾಗಿದೆ. 'ಘಟ'ದಲ್ಲಿ ಇದು ತಳಭಾಗದಲ್ಲಿದೆ. ಕುಂಭ ಮತ್ತು ಫಲಕವನ್ನು ಸೇರಿಸುವಂತೆ ಮಧ್ಯೆ ಚಾಮರಧಾರಿ, ವಾದಕಿ, ವಾದ್ಯಧಾರಿ, ವಿಸ್ಮಯ ಭಂಗಿ, ಭಾರಹೊತ್ತವ, ಪುಷ್ಪಧಾರಿಣಿ, ಕಂಜಿರ ವಾದಕಿ – ಮುಂತಾದ ಶಿಲ್ಪಗಳಿರುವುದು ಗಮನಾರ್ಹವಾಗಿದೆ. ಇದರ ಫಲಕದಲ್ಲಿ ಇಳಿಬಿದ್ದಂತೆ ಮೊಗ್ಗುಗಳ ಮೇಲಿನ ಪುಷ್ಪಬೋದಿಗೆಯನ್ನೂ ಬಿಡಿಸಿದೆ (ಇದೇ ಸಾಲಿನ ಮೂಲೆಯಲ್ಲಿರುವ 20ನೇ ಕಂಬವೂ ಅಪೂರ್ಣ ಕೆತ್ತನೆಯಿಂದ ಕೂಡಿದ್ದು ಇದರ 'ಪಾದ'ದ ಮೂಲೆಗಳಲ್ಲಿರುವ ಜೋಡಿನವಿಲು ಹಾಗೂ ಮೇಲೆ ಘಟದ ಮೇಲಿರುವ 'ಕಟಕಾವೃತ' ಕೆತ್ತನೆಯೂ ವಿಶೇಷವಾಗಿದೆ. ಒಟ್ಟಾರೆ ಈ ಕಂಬಗಳ ಕೆತ್ತನೆಯು ಕೋಷ್ಠಸ್ತಂಭದ ಮೇಲಿನ ಕೆತ್ತನೆಯನ್ನು ನೆನಪಿಗೆ ತರುತ್ತದೆ.

ಈ ಮಂಟಪದ ವಿತಾನವು ಪ್ರಧಾನವಾಗಿ 'ಪದ್ಮವಿತಾನ'ವೇ ಆಗಿದೆ. (ಹಾಗೂ ಎಲ್ಲ ಅಂಕಣಗಳಲ್ಲೂ ಇದೇ ಅಲಂಕಾರವಿದೆ.) ವಿತಾನ ರಚನಾದೃಷ್ಟಿಯಿಂದ ಇದು 'ಕ್ಷಿಪ್ತವಿತಾನ' ಎನಿಸುತ್ತದೆ. ಇದರೊಳಗೆ ಎರಡು ಸಾಲು ಪಟ್ಟಿಕೆ ಇದ್ದು, ಕಮಲ ಮಂಡಲವೂ ಇದೆ. ಇದರೊಳಗಿಂದ ಕಮಲವು ಕೆಳಚಾಚಿದೆ. ಇದರ ಮೊದಲ ಸುತ್ತಿನಲ್ಲಿ ಸುತ್ತ ತೀರ್ಥಂಕರನ ಶಿಲ್ಪಗಳಿವೆ. ಈ ಮಂಟಪದಲ್ಲಿ ಸುತ್ತ ಕಕ್ಷಾಸನವಿದೆ. 'ಮಾಡಿ'ಗೆ ಆಸರೆಯಾಗುವಂತೆ 'ತುಲಾ' ಮತ್ತು ಮಾಡಿಗೆ ಸೇರಿದಂತೆ ಕಂಬಗಳನ್ನು ಒತ್ತುಕೊಡಲಾಗಿದೆ. ಮುಂಭಾಗದಲ್ಲಿ ಪ್ರವೇಶದ ಅಕ್ಕ–ಪಕ್ಕ ಆನೆಗಳು ಇವೆ. ಇದೂ ಸೇರಿದಂತೆ, ಭೈರಾದೇವಿ ಮಂಟಪದ ಕಂಬ ಮತ್ತು ವಿತಾನಗಳೂ ಆಕರ್ಷಣೀಯವಾಗಿವೆ.

ಈ ಚೈತ್ಯಾಲಯದ ಮುಂದೆ ಒಂದು ಧ್ವಜಸ್ತಂಭವಿದ್ದು (ಕಾಲ ಗೊತ್ತಿಲ್ಲ), ಅದರಿಂದ ಮುಂದೆ ಎತ್ತರವಾದ ಮಾನಸ್ತಂಭವಿದೆ. ಈ ಸ್ತಂಭಕ್ಕೆ ಒಂದು ಪೀಠ ಹಾಗೂ ಎರಡು ಅಧಿಷ್ಠಾನಗಳಿವೆ. ಇವು ಒಂದರಿಂದೊಂದು ಚಿಕ್ಕದಾಗುತ್ತಾ ಹೋಗಿವೆ. ಪೀಠದಲ್ಲಿ ಉಪಾನ, ಪದ್ಮ, ಕಂಠ, ಪದ್ಮವಾಜನ – ಈ ಅಂಗಗಳಿವೆ.

ಇದರ ಮೇಲಿನ 'ಪಾದಬಂಧ' ಅಧಿಷ್ಠಾನದಲ್ಲಿ 'ಧಾರಾಕುಮುದ'ವಿರುವುದು ವಿಶೇಷವಾಗಿದೆ. ಇದರ ನಂತರ ಮತ್ತೊಂದು ಅಧಿಷ್ಠಾನವಿದ್ದು, ಅದರಲ್ಲಿ ಮತ್ತೆ, ಉಪಾನ ಪದ್ಮದಳ, ಕಂಠ ಮತ್ತು ಕಪೋತ ಇವೆ. ಇವಿಷ್ಟೂ ಸ್ತಂಭಕ್ಕೆ 'ಪೀಠ'ದಂತಿವೆ. ಮೇಲಿನ 'ಪಾದ'ದ ಮೇಲೆ ಎಲ್ಲೆಡೆ ಚಿತ್ರಗಳಿವೆ; ಅಂತ್ಯದಲ್ಲಿ ಮಾಲಾಸ್ಥಾನವಿದೆ. ಇದು 'ಪದ್ಮಬಂಧ'ದ ಮೂರು ಸಾಲಿನೊಂದಿಗಿದ್ದು, ಅವುಗಳಲ್ಲಿ 'ಪದ್ಮಮಂಡಲ' ಅಲಂಕಾರವಿದೆ. ಇಲ್ಲಿ ತೀರ್ಥಂಕರನ ಬಿಂಬವೂ ಇದೆ. ಪೀಠ ಅಧಿಷ್ಠಾನದಲ್ಲಿರುವಂತೆಯೇ ಇದರ ಮೇಲಿನ ಸ್ತಂಭದ 'ದಂಡ'ವು ಅಷ್ಟಮುಖ, ಷೋಡಶಮುಖ ಹಾಗೂ 32 ಮುಖಗಳಲ್ಲಿ ಅಂದರೆ ಮೂರು ಹಂತಗಳಲ್ಲಿ ಮುಂದುವರಿದಿದೆ. 16 ಮುಖದ ಭಾಗವು ಎರಡು ಹಂತಗಳಲ್ಲಿದ್ದು, ಎಲೆ ಅಲಂಕಾರದ ಎರಡು ಸಾಲಿನ ಮಧ್ಯೆ ಮಣಿಮಾಲೆಯ ಅಲಂಕಾರವಿದೆ. ಇದರ ತುದಿಯಲ್ಲೂ ಮೂಲಾಸ್ಥಾನವಿದೆ. ಮುಂದಿನ 32 ಮುಖದ ಭಾಗದಲ್ಲಿ ವಲ್ಲೀ ಅಲಂಕಾರವಿದೆ. ಸ್ತಂಭದ ಅಂತ್ಯದಲ್ಲಿರುವ 16 ಮುಖದ ಲಶುನ, ಉಬ್ಬಿದ 'ಘಟ', ಪದ್ಮಮಂಡಿ ಎಲ್ಲವೂ ಇದ್ದು, ಸರಳವಾಗಿದೆ. ಘಟ ಮತ್ತು ಫಲಕದ ನಡುವೆ ಮೂಲೆಗಳಲ್ಲಿ ಸಿಂಹವನ್ನು ಬಿಡಿಸಿದೆ;

ಸಿಂಹದ ಬಾಯಿಂದ ಗಂಟೆ ಹೊರಟಂತಿದೆ. ಫಲಕದ ತುದಿಯಲ್ಲಿ ಕಲಶವಿದ್ದು, ಅದರ ಮೇಲೆ ಮಂಟಪ ಮತ್ತು ಕಲಶವಿದೆ.

ಈ ಬಸದಿಯ ಸುತ್ತು ಪ್ರಾಕಾರವಿದ್ದು, ಅದರ ಮೇಲೆ 'ಛತ್ರಶೀರ್ಷಾ'ಲಂಕರಣವಿದೆ. ಪ್ರಾಕಾರದ ಮುಂಭಾಗದಲ್ಲಿ 'ಪ್ರತೋಲಿ' ಇದೆ. ಮಹಾದ್ವಾರದಲ್ಲಿ ಸ್ತಂಭಾಲಂಕರಣವೂ, ಸ್ತ್ರೀಶಿಲ್ಪವೂ, ಅದರ ಮೇಲೆ ಕೀರ್ತಿಮುಖ ಹಾಗೂ ಪದ್ಮಾಲಂಕರಣವೂ ಇದೆ. ದ್ವಾರಮಧ್ಯೆ ಗಜಲಕ್ಷ್ಮಿ ಇದೆ. ಈ ಪ್ರಾಕಾರದ ಎಡಭಾಗದಲ್ಲಿ ಅಲ್ಲಲ್ಲಿ ಕೋಣೆಗಳಿದ್ದು, ಅವು ಪರಸ್ಪರ ಎದುರುಬದುರಾಗಿದ್ದು, ಬಸದಿಯ ಕಡೆಗೆ ಮುಖಮಾಡಿಲ್ಲ; ಈ ರಚನೆಯ ಉದ್ದೇಶ ಸ್ಪಷ್ಟವಾಗಿಲ್ಲ. ಇಲ್ಲಿ ಒಂದು ಕ್ಷೇತ್ರಪಾಲನ ಗುಡಿ ಇದೆ.

ಹೀಗೆ ಈ ಬಸದಿಯ ಒಳಭಾಗ ಆಕರ್ಷಕವಾಗಿದ್ದರೂ, ಹೊರಭಾಗ ಸರಳವಾಗಿದೆ. ಅನೇಕ ಕಡೆಗಳಲ್ಲಿ ಹೊರಭಾಗ ಮತ್ತು ಒಳಭಾಗ ಎರಡೂ ಸುಂದರವಾಗಿ ರಚನೆಗೊಂಡಿರುವುದುಂಟು. ಆದರೆ, ಇಲ್ಲಿ ಹೊರಭಾಗ ಸರಳವಾಗಿರುವುದು ಗಮನಾರ್ಹವಾಗಿದೆ.

ಹಿಂದೂ ದೇವಾಲಯಗಳಿಗೆ ಹೋಲಿಸಿದರೆ, ಅವುಗಳಿಗೂ ಈ ಬಸದಿಗಳ ರಚನೆಗೂ ಹೆಚ್ಚು ವ್ಯತ್ಯಾಸವಿದ್ದಂತೆ ತೋರುವುದಿಲ್ಲ. ಉಪಾ ರೀತಿಯ ರಚನೆಗಳು ಎರಡೂ ಧರ್ಮದ ದೇವಾಲಯಗಳಲ್ಲಿವೆ. ಭೈರಾದೇವಿ ಮಂಟಪದಂತಹ ಕಂಬಗಳನ್ನು ಶೀರ್ವದ ಮಹಾಲಿಂಗೇಶ್ವರ ದೇವಲಯದಲ್ಲೂ, ಮೇಲ್ಕೋಟೆಯ ಚೆಲುವನಾರಾಯಣ ದೇವಾಲಯದಲ್ಲೂ ಕಾಣುತ್ತೇವೆ. ಗುರುರಾಜಭಟ್ ಅವರು ತಮ್ಮ 'ಪ್ರಾಚೀನ ಲಕ್ಷಣಗಳನ್ನು ಉಳಿಸಿಕೊಂಡಿರುವ ಬಸದಿಗಳು ಹಿಂದೂ ದೇವಾಲಯಗಳೊಂದಿಗೆ ಇರುವ ಹೋಲಿಕೆಯನ್ನು ಸೂಚಿಸುತ್ತವೆ' ಎಂದೇ ಹೇಳಿದ್ದಾರೆ.[21] ಈ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳೂ[21ಅ] ಇದ್ದು, ಇದಕ್ಕೆ ಸಂಬಂಧಿಸಿದಂತೆ ವಿಸ್ತೃತ ಅಧ್ಯಯನ ನಡೆಯಬೇಕಿದೆ. ಈ ಬಸದಿಯಲ್ಲಿರುವ ಹಿಂದೂ ಧರ್ಮದ ಉಬ್ಬು ಶಿಲ್ಪಗಳನ್ನೂ ಈ ದೃಷ್ಟಿಯಲ್ಲಿ ಗಮನಿಸಬೇಕಾಗುತ್ತದೆ.

ಈ ಬಸದಿಯಲ್ಲಿರುವ ಪಾದಬಂಧ ಅಧಿಷ್ಠಾನ, ಮೂರು ಪೀಠಗಳಿಂದ ಕೂಡಿದ ಮಾನಸ್ತಂಭ, ಶಿಖರ-ಸ್ತಂಭ-ವಿತಾನ-ಇವುಗಳ ಪ್ರಕಾರಗಳೂ – ಇವು ಇಲ್ಲಿನ ಸುತ್ತಲಿನ ದೇವಾಲಯಗಳಲ್ಲಿಯೂ ಇದ್ದು, ಈ ಬಸದಿಯು ಸ್ಥಳೀಯ ಪದ್ಧತಿಯೊಂದಿಗೆ ವಿಜಯನಗರ ಕಾಲದ ಲಕ್ಷಣಗಳನ್ನು ಹೊಂದಿರುವುದು ಕಂಡುಬರುತ್ತದೆ. ಅಲ್ಲದೆ ರಚನೆಗೆ ಸಂಬಂಧಿಸಿದಂತೆ ವಾಸ್ತುಶಾಸ್ತ್ರವು ಹೇಳುವ ಬಹುಪಾಲು ಎಲ್ಲ ಅಂಗಭಾಗಗಳನ್ನು ಇಲ್ಲಿ ಕಾಣಬಹುದಾಗಿದ್ದು, ಈ ಬಸದಿಯ ವೈಶಾಲ್ಯತೆಯನ್ನೂ, ವೈವಿಧ್ಯವನ್ನೂ ಸೂಚಿಸುತ್ತಿದೆ. ಒಳಭಾಗದ ಕಂಬಗಳಂತೂ ವಿಶಿಷ್ಟವಾಗಿದ್ದು ಚಿತ್ತರಮಣೀಯವಾಗಿವೆ. ಸಾವಿರ ಕಂಬದ ಬಸದಿ ಎಂದು ಗುರುತಿಸುವುದು ಇಲ್ಲಿ ಕಂಬಗಳಿಗಿರುವ ಪ್ರಾಮುಖ್ಯತೆಯನ್ನು ಸೂಚಿಸುತ್ತಿದೆ.[22] ಅಂತೇ 'ಲಲಿತಸ್ತಂಭಕದಂಬ', 'ಮನಸಿಜನ ಜಯಸ್ತಂಭ'ಗಳಿಂದ ಕೂಡಿ 'ಜಗದಾಶ್ಚರ್ಯಮಪ್ಪ' ಈ ಬಸದಿಯನ್ನು ಶಾಸನಗಳೇ ಬಣ್ಣಿಸಿವೆ.

ಅಡಿಟಿಪ್ಪಣಿಗಳು

1. *(Qtd.) South Kanara Gazetteer,* p. 74.

1ಅ. ವಸಂತಲಕ್ಷ್ಮೀ ಕೆ. (ಉದ್ಧೃತ) *ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು*, ಪು. 66.

2. *SII,* VII, (ಮೂಡಬಿದುರೆ) 204, ಕಾರ್ಕಳ ತಾ. 1476 ಮತ್ತು 196, ಕ್ರಿ.ಶ. 1429, 'ನಿಜನಿಲಯತ್ರಯ ಸುರಚಿತ ರತ್ನತ್ರಯ' ಎಂದೂ, 'ನೆಲೆಮೂರುಂ ನೆಲೆಮೂರು ಲೋಕದ ಮಹಾಶ್ರೀಗೆಂಬವೋಲ್ತೋರ್ಪುದಂ' ಎಂದೂ ಈ ಶಾಸನಗಳು ಬಣ್ಣಿಸಿವೆ.

3. *SII,* VII, (ಮೂಡಬಿದುರೆ) 196, ಕ್ರಿ.ಶ. 1429.

4. ಅದೇ, 204, ಕ್ರಿ.ಶ. 1476 [ಕ್ರಿ.ಶ. 1476ಕ್ಕೆ ಮೊದಲೇ ಇದರ ನಿರ್ಮಾಣವಾಗಿತ್ತೆಂಬುದನ್ನು ಕ್ರಿ.ಶ. 1430ರ ಶಾಸನವೂ (202) ಪರೋಕ್ಷವಾಗಿ ತಿಳಿಸಿದೆ.] ಇದೇ, ಶಾಸನದ ವಿವರಗಳನ್ನು ನೀಡುವ ಇನ್ನೊಂದು ಶಾಸನದಲ್ಲಿ (ಅದೇ, 206), '3ನೇ ನೆಲೆ' ಎಂದು ಹೇಳಿದ್ದು, ಅದು '2ನೇ ನೆಲೆ' ಎಂದಿರಬೇಕಾಗಿದೆ.

5. *SII,* VII, (ಮೂಡಬಿದುರೆ) 202.
6. ಅದೇ, 197.
7. ಅದೇ, 209
8. ಪಂಡಿತ ದೇವಕುಮಾರ ಜೈನಶಾಸ್ತ್ರಿ (ಲೇಖನ), (ಸಂ.), ಪೂರ್ವೋಕ್ತ, ಅದೇ, ಪು. 76.
9. ಪುಂಡಿಕ್ಕಾ ಗಣಪಯ್ಯ ಭಟ್ (ಉದ್ಧೃತ) (ಲೇಖನ), ಪೂರ್ವೋಕ್ತ, ಪು. 86.
10. Fergusson, *Indian and Eastern Architecture,* p. 75.

10ಅ. ವಿಮಾನಾರ್ಚನಕಲ್ಪ, ಪ. 9, ಪು. 33; ಕಾಮಿಕಾಗಮ 35.69; ರೌರವಾಗಮ 42.4

11. Percy Brown, *Indian Architecture - Buddhist & Hindu,* p. 132.

11ಅ. ಒಂದು ಲೇಖನದಲ್ಲಿ ಸಾಮಾನ್ಯವಾಗಿ ಬಸದಿಗಳು ಉತ್ತರಾಭಿಮುಖವಾಗಿರುತ್ತದೆಂದು ಹೇಳಿರುವ ಪಿ.ಆರ್. ಶ್ರೀನಿವಾಸನ್ ಅವರು, ಅದಕ್ಕೆ 'ಮುಕ್ತಿ'ಯೊಂದಿಗಿರುವ ಸಂಬಂಧವನ್ನೂ ಸೂಚಿಸಿದ್ದಾರೆ. *"Jaina Art and Architecture"* - (Ed.) Ghosh, p. 368; ಈ ಬಗ್ಗೆ ನಿರ್ದಿಷ್ಟ ನಿಯಮವನ್ನು ಅನುಸರಿಸಿದಂತೆ ತೋರುವುದಿಲ್ಲ ಎಂದು ಪುಂಡಿಕ್ಕಾ ಗಣಪಯ್ಯ ಭಟ್ ಅವರು ಹೇಳಿದ್ದಾರೆ. (ಲೇಖನ) (ದೇವರಕೊಂಡಾರೆಡ್ಡಿ ಮತ್ತು ಜಯಪ್ರಕಾಶ್ ಮಾವಿನಕುಳಿ), ತುಳುನಾಡಿನ ಜೈನ ಶಾಸನಗಳು, ಪು. 90.

12. *SII,* VII, 197 (ಮೂಡಬಿದಿರೆ), ಕ್ರಿ.ಶ. 1451.

12ಅ. ಶಾಸನಗಳೂ ಇದನ್ನು 'ಮೂರು ನೆಲೆ'ಯ ಬಸದಿ ಎಂದೇ ಗುರುತಿಸಿದ್ದು, ಮೂರು ತಲಗಳಲ್ಲೂ ಗರ್ಭಗೃಹವು ಇರುವುದರಿಂದ ಇದು ಸೂಕ್ತವಾಗಿದೆ.

13. Henry Cousens, *Chalukyan Architecture,* pp. 134-35.

13ಅ. ಕೂ.ಸ. ಅಪರ್ಣ (ಲೇಖನ) ತುಳುನಾಡಿನ ಜೈನಶಾಸನಗಳು, ಪು. 99.

14. *SII,* VII, 197 (ಮೂಡಬಿದಿರೆ), 209, ಕ್ರಿ.ಶ. 1477.
15. ಎಸ್.ಡಿ. ಶೆಟ್ಟಿ, *ದ.ಕ. ಜಿಲ್ಲೆಯ ಜೈನಧರ್ಮ ಪರಂಪರೆ ಮತ್ತು ಅದರ ವಿಶಿಷ್ಟ ಸಂಪ್ರದಾಯಗಳು,* ಪು. 62.
16. ಈ ತಾಮ್ರ ಹೊದಿಕೆಯಿಂದ ಮುಚ್ಚುವ ಪದ್ಧತಿಗೆ ಕಾರಣ – ವೈಭವ, ರಕ್ಷಣೆ, ತಾಳುವಿಕೆ ಎಂದು ಗುರುರಾಜ ಭಟ್ ಅವರು ವಿವರಿಸಿದ್ದಾರೆ. *Studies in Tuluva History and Culture,* p. 416.
17. K.V.Ramesh (Article) (Ed.), U.P. Shah and M.A. Dhaky, *Aspects of Jaina Art and Architecture,* p. 116, (*Qtd.,* from *A.R. 1901,* p. 3)

17ಅ. *Ibid.*

17ಆ. *South Kanara Gazetteer,* p. 76.

17ಇ. *SII,* VII, 197 (ಮೂಡಬಿದಿರೆ), 196, ಕ್ರಿ.ಶ. 1429.

18. ಸಾಮಾನ್ಯವಾಗಿ ಅಂತರಾಳದ ಬಳಿ ಇರುವ ಪ್ರದಕ್ಷಿಣಾಪಥವು ಗರ್ಭಗೃಹದ ಸುತ್ತ ಪ್ರದಕ್ಷಿಣೆ ಬರಲು ಅನುಕೂಲವಾಗಿರುತ್ತದೆ. ಆದರೆ, ಇಲ್ಲಿ ನವರಂಗವು ಆ ಕಾರ್ಯವನ್ನು ನಿರ್ವಹಿಸುತ್ತಿದೆ.
19. ಇದರ ಪಕ್ಕದ ಕಂಬಗಳಲ್ಲೂ ಕೂಡ ಯಾವುದೇ ಕೆತ್ತನೆಗಳಿಲ್ಲ.
20. ಇಲ್ಲಿ, ಕಂಬಸಂಖ್ಯೆಯನ್ನು ಮಂಟಪದೊಳಗೆ ಹಿಂದಿನಿಂದ ಆರಂಭಿಸಿ, ಸಾಲಾಗಿ ಸಂಖ್ಯೆಯನ್ನು ಮುಂದುವರಿಸಲಾಗಿದೆ. ಯಾವುದೇ ಎರಡು ಕಂಬಗಳು ಒಂದೇ ರೀತಿಯಾಗಿಲ್ಲವೆಂದೂ ಹೇಳಲಾಗಿದೆ.
21. ಇಲ್ಲಿನ ಸಣ್ಣ–ದೊಡ್ಡ ಕಂಬಗಳನ್ನು ಎಣಿಸಿದರೆ, ಅವುಗಳ ಒಟ್ಟು ಸಂಖ್ಯೆ ಸಾವಿರವಾಗಬಹುದೇನೋ.

21ಅ. ಗುರುರಾಜಭಟ್ ಪಿ, ಪೂರ್ವೋಕ್ತ, ಪು. 443.


22. ವಸಂತಲಕ್ಷ್ಮಿ ಕೆ. ಪೂರ್ವೋಕ್ತ, ಪು. 65; ಪುಂ. ಗಣಪಯ್ಯಭಟ್, ಪೂರ್ವೋಕ್ತ, ಪು. 89. ಈ ಬಗ್ಗೆ ಇನ್ನೂ ಅಧ್ಯಯನ ನಡೆಯಬೇಕಿದೆ.

ಗ್ರಂಥಋಣ

1. ಶೆಟ್ಟಿ ಎಸ್.ಡಿ., *ತುಳುನಾಡಿನ ಜೈನಧರ್ಮ: ಒಂದು ಸಾಂಸ್ಕೃತಿಕ ಅಧ್ಯಯನ*, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, 2002.
2. ರಘುನಾಥ ಚಕ್ರವರ್ತಿ ಭಟ್ಟಾಚಾರ್ಯ ಮತ್ತು ಸೇತುಮಾಧವಾಚಾರ್ಯ (ಸಂಸ್ಕೃತ) (ಸಂ.) – *ಶ್ರೀ ವಿಮಾನಾರ್ಚನ ಕಲ್ಪ*, ಮದ್ರಾಸು, 1926.
3. ದೇವರಕೊಂಡಾರೆಡ್ಡಿ ಮತ್ತು ಜಯಪ್ರಕಾಶ್ ಮಾವಿನಕುಳಿ (ಸಂ.), *ತುಳುನಾಡಿನ ಜೈನ ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004.
4. ಶೆಟ್ಟಿ ಎಸ್.ಡಿ., *ದಕ್ಷಿಣ ಕನ್ನಡ ಜಿಲ್ಲೆಯ ಜೈನಧರ್ಮ, ಪರಂಪರೆ ಮತ್ತು ಅದರ ವಿಶಿಷ್ಟ ಸಂಪ್ರದಾಯಗಳು*, ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ, 2000.
5. ವಸಂತಲಕ್ಷ್ಮಿ ಕೆ., *ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು*, ಸುಮುಖ ಪ್ರಕಾಶನ, ಬೆಂಗಳೂರು, 2006.
6. ಅಪರ್ಣ ಕೂ.ಸ., *ದೇವಾಲಯ ವಾಸ್ತುಶಿಲ್ಪ ಪರಿಚಯ*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.
7. Fergusson, *Indian and Eastern Architecture.*
8. Gururaja Bhatt, P., *Studies in Tuluva History and Culture,* Kallianpur, 1975.
9. George Michell and U.S. Moorti (Ed.), *Encyclopaedia of Indian Temple Architecture, Upper Dravidadesa,* Vol. I, pt. 4A, American Institute of Indian Studies, New Delhi, 2001.
10. S.N. Shivarudraswamy, *Vijayanagara Temples,* Mysore, 1996.
11. Percy Brown, *Indian Architecture, Buddhist and Hindu,* D.B. Taraporewala and Sons Pvt. Ltd., Bombay, 1983.
12. U.P. Shah and M.A. Dhaky - (Ed.) *Aspects of Jaina Art and Architecture,* Ahmedabad, 1975.
13. *South Kanara Gazetteer* and *South Indian Inscriptions,* Vol. VII.

ಲೇಖನಗಳು

1. ಕೂ.ಸ. ಅಪರ್ಣ, ತುಳುನಾಡಿನ ಬಸದಿಗಳ ವಾಸ್ತುಶಿಲ್ಪದ ಕೆಲವು ವಿಶೇಷ ಅಂಶಗಳು, ಪು. 96–106.
2. ಪುಂಡಿಕ್ಯಾ ಗಣಪಯ್ಯ ಭಟ್, ಮೂಡುಬಿದಿರೆಯ ಜಿನಾಲಯಗಳು: ಒಂದು ಅವಲೋಕನ, ಪು. 85–95.
3. ಪಂಡಿತ ದೇವಕುಮಾರ ಜೈನಶಾಸ್ತ್ರಿ, ಮೂಡುಬಿದಿರೆಯ ತ್ರಿ.ತಿ.ಚೂ. ಬಸದಿಯ ಜೀರ್ಣೋದ್ಧಾರ ಚರಿತೆ, ಪು. 73–84. (ಕೃತಿ : *ತುಳುನಾಡಿನ ಜೈನ ಶಾಸನಗಳು*)
4. K.V. Ramesh, Jaina Art and Architecture of Tulunadu, p. 109-122(*Aspects of Jaina Art and Architecture*)




ಪೂರ್ಣನೋಟ ಹೊಸಬಸದಿ, ಮೂಡಬಿದಿರೆ



ಮುಂಭಾಗದ ನೋಟ ಹೊಸಬಸದಿ, ಮೂಡಬಿದಿರೆ



ಪಾರ್ಶ್ವನೋಟ ಹೊಸಬಸದಿ, ಮೂಡಬಿದಿರೆ



ಭೈರಾದೇವಿ ಮುಖಮಂಟಪದ ಕಂಬಗಳು,
ಹೊಸಬಸದಿ, ಮೂಡಬಿದಿರೆ

26

ಹಂಪಿಯ ವಿರೂಪಾಕ್ಷ ದೇಗುಲದ ರಾಯಗೋಪುರ ಮತ್ತು ರಥವೀಧಿ

ಡಾ॥ ಎಸ್.ಎನ್. ಶಿವರುದ್ರಸ್ವಾಮಿ

ಹದಿನಾಲ್ಕನೇ ಶತಮಾನದಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವು ಎರಡೂವರೆ ಶತಮಾನಗಳ ಕಾಲ ಜನರ ಬದುಕಿನಲ್ಲಿ ಚೈತನ್ಯಪೂರ್ಣವಾದ ಹೊಸಯುಗವನ್ನಾರಂಭಿಸಿತು. ರಾಜಧಾನಿ ವಿಜಯನಗರವು (ಅಥವಾ ಇಂದಿನ ಹಂಪಿ) ಸಾಮ್ರಾಜ್ಯದ ಚಟುವಟಿಕೆಗಳ ಕೇಂದ್ರವಾದಂತೆ, ಅಲ್ಲಿನ ವಿರೂಪಾಕ್ಷ ದೇಗುಲವು ನಗರದ ಮಹತ್ವಪೂರ್ಣ ಕೇಂದ್ರವಾಯಿತು. ಈ ದೇಗುಲವು ಒಂದು ನಿರ್ದಿಷ್ಟ ಕಾಲದಲ್ಲಿ ನಿರ್ಮಾಣವಾಗಲಿಲ್ಲ. ಸಾಮ್ರಾಜ್ಯದ ಕಾಲಾವಧಿಯ ಉದ್ದಕ್ಕೂ ಇದು ವಿಸ್ತೃತವಾಗಿ ಬೆಳೆಯುತ್ತಾ ಹೋಯಿತು. ಈ ಲೇಖನದಲ್ಲಿ ವಿರೂಪಾಕ್ಷ ದೇವಾಲಯದ ಪ್ರಮುಖ ಭಾಗಗಳಲ್ಲಿ ಒಂದಾದ ಪೂರ್ವದ ದೊಡ್ಡ ದ್ವಾರಗೋಪುರ ಮತ್ತು ಅದರ ಮುಂದಿನ ರಥವೀಧಿಯ ಬಗ್ಗೆ ವಿವೇಚಿಸಲಾಗಿದೆ.

ಹಂಪಿಯ ವಿರೂಪಾಕ್ಷ, ವಿಠ್ಠಲ, ಕೃಷ್ಣ, ತಿರುವೆಂಗಳನಾಥ, ಕಮಲಾಪುರದ ರಘುನಾಥ (ಅಥವಾ ಪಟ್ಟಾಭಿರಾಮ), ಅನಂತಶಯನ ಗುಡಿಯ ಅನಂತಪದ್ಮನಾಭ – ಹೀಗೆ ವಿಜಯನಗರದ ಉನ್ನತ ದೇವಾಲಯಗಳ ಮುಂದೆ ದ್ವಾರಗೋಪುರಗಳಿವೆ. ಇವು ಉನ್ನತ ಆಕರ್ಷಕ ವಾಸ್ತುರಚನೆಗಳು. ಇವುಗಳ ಮುಂದೆ ದೇವಾಲಯದ ರಥೋತ್ಸವಕ್ಕಾಗಿ ವಿಶಾಲವಾದ ರಥವೀಧಿಗಳು ಆರಂಭವಾಗುತ್ತವೆ.[1] ಈ ಬೀದಿಗಳ ಇಕ್ಕೆಡೆಗಳಲ್ಲೂ ಎರಡು ಸ್ತಂಭಪಂಕ್ತಿಯ ಮಂಟಪವು ಬೀದಿಯ ಆರಂಭದಿಂದ ಕೊನೆಯವರೆಗೂ ಮುಂದುವರೆಯುತ್ತದೆ. ಈ ದೇಗುಲಗಳ ಉತ್ಸವಮೂರ್ತಿಯ ಮೆರವಣಿಗೆಯನ್ನು ಭಕ್ತಾದಿಗಳು ನೋಡಿ ಆನಂದಿಸಲು ರಥವೀಧಿಯ ಮಂಟಪಗಳಲ್ಲಿ ನೆರೆಯುತ್ತಿದ್ದರು ಹಾಗೂ ರಥೋತ್ಸವದಲ್ಲಿ ಭಕ್ತರಿಗೆ ಬೇಕಾಗುವ ವಸ್ತುಗಳನ್ನು ಮಾರಾಟ ಮಾಡಲು ಅಂಗಡಿಗಳು ಅಲ್ಲಿ ಸ್ಥಾಪನೆಯಾಗುತ್ತಿದ್ದವು. ಗೋಪುರ ಮತ್ತು ಪ್ರಾಕಾರಗಳು ವಿಜಯನಗರ, ದೇಗುಲಗಳ ಪ್ರಮುಖ ಜೈವಿಕ ಅಂಗಗಳು. ರಥೋತ್ಸವಗಳು ಜನಪ್ರಿಯ ಹಬ್ಬವಾದಂತೆ, ತೇರುಬೀದಿಗಳು ದೇಗುಲದ ಸಂಕೀರ್ಣದ ವೈಭವವನ್ನೂ ಮಹತ್ವವನ್ನೂ ಹೆಚ್ಚಿಸಿದವು. ಹಂಪಿಯ ಹೊರಗೂ ರಥೋತ್ಸವವು ಜನಪ್ರಿಯವಾದ ಹಬ್ಬವಾಯಿತು. ಇದರ ಬಗ್ಗೆ ಶಾಸನಗಳು ಸಾಕಷ್ಟು ಮಾಹಿತಿಯನ್ನು ನೀಡುತ್ತವೆ. ಗೋಪುರನಿರ್ಮಾಣದಲ್ಲಿ ವಿಜಯನಗರದ ವಾಸ್ತುಕಾರರು ಚೋಳ ಮತ್ತು ಪಾಂಡ್ಯರ ಪರಂಪರೆಯನ್ನು ಅನುಸರಿಸಿದರು.[2] ಚೋಳಗೋಪುರಗಳು ಕುಳ್ಳಾಗಿ ಆಯತಾಕಾರವಾಗಿದ್ದರೆ, ಪಾಂಡ್ಯಗೋಪುರ ಎತ್ತರವಾಗಿ ಸಪೂರವಾಗಿರುತ್ತದೆ. ಗೋಪುರದ ಔನತ್ಯವನ್ನು ಸಾದಿಸಲು, ಒಳಗಡೆ ಮರದ ಪಂಜರವನ್ನು ರೂಪಿಸಿದ್ದರು. ವಿರೂಪಾಕ್ಷ ದೇವಾಲಯದ ಗೋಪುರ ನಿರ್ಮಾಣದಲ್ಲಿ ಈ ತಂತ್ರವನ್ನು ಪರಿಪೂರ್ಣವಾಗಿ ಅಳವಡಿಸಿಕೊಳ್ಳಲಾಗಿದೆ. ರಾಜಧಾನಿಯಲ್ಲಿ ವಿರೂಪಾಕ್ಷ ದೇವಾಲಯವೇ ಅತ್ಯಂತ ಪ್ರಾಚೀನವಾದುದು. ಉಳಿದ ಉನ್ನತ ದೇಗುಲಗಳು ಹದಿನಾರನೇ ಶತಮಾನದಲ್ಲಿ ರಚನೆಯಾಗಿವೆ. ಇದರ ಗರ್ಭಗೃಹ ವಿಜಯನಗರ ಪೂರ್ವಕಾಲದ ನಿರ್ಮಾಣ. ಹದಿನಾಲ್ಕನೇ ಶತಮಾನದಲ್ಲಿ ಇದರ ಸುತ್ತಲೂ ಗೋಡೆಯನ್ನು ನಿರ್ಮಿಸಿ, ಪ್ರದಕ್ಷಿಣಪಥವನ್ನು

ರಚಿಸಲಾಯಿತು. ಅನಂತರ ಅದೇ ಹದಿನಾಲ್ಕನೇ ಶತಮಾನದಲ್ಲಿ ಅಥವಾ ಹದಿನೈದನೇ ಶತಮಾನದ ಆರಂಭದಲ್ಲಿ ಈ ಗರ್ಭಗೃಹಕ್ಕೆ ಅಂತರಾಳ, ಮುಖಮಂಟಪ ಮತ್ತು ರಂಗಮಂಟಪವನ್ನು ನಿರ್ಮಿಸಿ ಜೋಡಿಸಲಾಯಿತು. ಸುಂದರ ಸ್ತಂಭರಾಜಿಯ ಮಹಾರಂಗ ಮಂಟಪವನ್ನು ಇದರ ಮುಂದೆ ಹದಿನಾರನೇ ಶತಮಾನದಲ್ಲಿ ನಿರ್ಮಿಸಲಾಯಿತು. ಹೀಗೆ ವಿರೂಪಾಕ್ಷ ದೇಗುಲವು ಸಾಮ್ರಾಜ್ಯದ ಕಾಲಾವಧಿಯಲ್ಲಿ ನಿರ್ಮಾಣವಾಗಿ ಇಂದಿನ ರೂಪವನ್ನು ಪಡೆದುಕೊಂಡಿತು. ಆದ್ದರಿಂದ ಈ ದೇಗುಲವು ವಿಜಯನಗರ ವಾಸ್ತು ಮತ್ತು ಕಲೆಯ ಉದಯಾರಂಭದ ಕೇಂದ್ರವಾಯಿತು. ಈ ದೇಗುಲವು ಕೇವಲ ವಾಸ್ತುಕ್ಷೇತ್ರದಲ್ಲಿ ಮಾತ್ರವೇ ಅಲ್ಲ, ಸಮ್ರಾಜ್ಯದ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲೂ ಮಹತ್ತರವಾದ ಪ್ರಭಾವವನ್ನು ಬೀರಿತು. ವಿರೂಪಾಕ್ಷ ದೇವತೆಯು ಸಾಮ್ರಾಜ್ಯದ ರಕ್ಷಾದೇವ ಹಾಗೂ ಅರಸರ ಕುಲದೈವ. ಪ್ರಾಯಶಃ ಭಾರತದ ಉಪಖಂಡದಲ್ಲೇ ನಾಡಿನ ಮೇಲೆ ಅಪಾರ ಪ್ರಭಾವ ಬೀರಿದ, ಜನರ ಬದುಕಿನೊಂದಿಗೆ ಮಿಳಿತವಾದ ಏಕೈಕ ದೇಗುಲವೆಂದರೆ ಇದೊಂದೇ. ವಿರೂಪಾಕ್ಷ ದೇಗುಲದ ಇತಿಹಾಸವು ಸಂಕ್ಷಿಪ್ತವಾಗಿ ಸಾಮ್ರಾಜ್ಯದ ಇತಿಹಾಸವೇ ಆಗುತ್ತದೆ. ಅರಸರು ತಮ್ಮ ದಾನದತ್ತಿಗಳನ್ನು, ಆಡಳಿತದ ನಿರೂಪಗಳನ್ನು ವಿರೂಪಾಕ್ಷನ ಸನ್ನಿಧಿಯಲ್ಲಿ ಹಾಗೂ ಅವನ ಹೆಸರಿನಲ್ಲಿ ನೀಡಿದರು. ಜನತೆಯೂ ವಿರೂಪಾಕ್ಷ ದೇವರ ಹೆಸರಿನಲ್ಲಿ ಅರಸರ ಆಜ್ಞೆ ಆದೇಶಗಳನ್ನು ಸ್ವೀಕರಿಸಿದರು. ವಿಜಯನಗರದ ವಾಸ್ತು, ಶಿಲ್ಪ ಕಲೆಗಳು ವಿರೂಪಾಕ್ಷ ದೇವಾಲಯದಿಂದ ಆರಂಭವಾಗಿ ಸಮಗ್ರ ದಕ್ಷಿಣ ಭಾರತಕ್ಕೆ ಪ್ರಸಾರವಾದವು.

ವಿಜಯನಗರ ದೇವಾಲಯಗಳಲ್ಲಿ ಗೋಪುರವು ಪ್ರಧಾನವಾಗಿ ಕಾಣುವ ಅಂಶವಾದಂತೆ, ದೇಗುಲಗಳ ವಿಮಾನವು ಅವುಗಳ ಸಂಕೀರ್ಣದಲ್ಲಿ ಗೌಣವಾಯಿತು. ಈ ಅಂಶದ ಮೊದಲ ಅನುಕರಣೆಯು ಹಂಪಿಯ ವಿರೂಪಾಕ್ಷ ದೇವಾಲಯದಲ್ಲೇ ಆಯಿತು. ಉಳಿದ ದೇವಾಲಯಗಳಲ್ಲೂ ಈ ಸಂಗತಿಯನ್ನೇ ಅನುಸರಿಸಲಾಗಿದೆ. ವಿರೂಪಾಕ್ಷ ದೇಗುಲದ ಪೂರ್ವದಿಕ್ಕಿನ ಎರಡು ಪ್ರಾಕಾರಗಳ ಮಧ್ಯದಲ್ಲಿ ಎರಡು ಗೋಪುರಗಳಿವೆ. ಉತ್ತರ ಪ್ರಾಕಾರದಲ್ಲೂ ಮತ್ತೊಂದು ಗೋಪುರವಿದ್ದು, ಅದನ್ನು ಕನಕಗಿರಿ ಗೋಪುರವೆಂದು ಕರೆಯಲಾಗಿದೆ. ಇದು ಮನ್ಮುಖ ಹೊಂಡ ಮತ್ತು ತುಂಗಭದ್ರಾ ನದಿಗೆ ಪ್ರವೇಶಾವಕಾಶವನ್ನು ನೀಡುತ್ತದೆ. ಇವುಗಳಲ್ಲೆಲ್ಲ ಎತ್ತರವೂ ಸಪೂರವೂ ಆದ ಪೂರ್ವದ ಬಾಹ್ಯಗೋಪುರ ದೊಡ್ಡದು. ಇದೊಂದು ಅಪೂರ್ವವೂ ಅನನ್ಯವೂ ಆದ ವಾಸ್ತು ನಿರ್ಮಾಣವಾಗಿದೆ.

ಈ ಗೋಪುರದ ನಿರ್ಮಾಣದ ಬಗ್ಗೆ ಯಾವುದೇ ಖಚಿತವಾದ ಮಾಹಿತಿ ದೊರೆತಿಲ್ಲ. ದೊರೆತಿರುವುದೂ ವಾದಗ್ರಸ್ತವಾಗಿದೆ. ಇದರ ಬಗ್ಗೆ ಬೆಳಕು ಚೆಲ್ಲುವ ಮಾಹಿತಿಯನ್ನು ಮುಂದೆ ಪರಿಶೀಲಿಸಲಾಗುವುದು. ತುಳುವವಂಶದ ಪ್ರಸಿದ್ಧ ಅರಸನಾದ ಕೃಷ್ಣದೇವರಾಯನು (1509–1529) ಮಹಾರಂಗಮಂಟಪ ಮತ್ತು ಗೋಪುರವನ್ನು ಕಟ್ಟಿಸಿ, ಮುಂದಿರುವ ಹಿರಿಯ ಗೋಪುರವನ್ನು ಕ್ರಿ.ಶ. 1513ರಲ್ಲಿ ಜೀರ್ಣೋದ್ಧಾರಗೊಳಿಸಿದನೆಂದು ಶಾಸನವೊಂದು ತಿಳಿಸುತ್ತದೆ.[3] ಈ ಜೀರ್ಣೋದ್ಧಾರವಾದ ಗೋಪುರವೇ ನಮ್ಮ ಆಸಕ್ತಿಯನ್ನು ಕೆರಳಿಸಿರುವ ಪೂರ್ವದ ಗೋಪುರ. ಕೆಲ ವಿದ್ವಾಂಸರು ತಪ್ಪುಗ್ರಹಿಕೆಯಿಂದ ಈ ಗೋಪುರವನ್ನು ಒಬ್ಬ ಬಿಷ್ಟಪ್ಪಯ್ಯ ಎಂಬ ವ್ಯಕ್ತಿ ಕಟ್ಟಿಸಿದನೆಂದು, ಆದ್ದರಿಂದ ಇದನ್ನು ಬಿಷ್ಟಪ್ಪಯ್ಯ ಗೋಪುರ ಎಂದು ಕರೆದಿದ್ದಾರೆ.[4] ಹದಿನೈದನೇ ಶತಮಾನದ ಸಂಸ್ಕೃತ ಕವಿಯಾದ ಅಹೋಬಲನು 'ವಿರೂಪಾಕ್ಷ ವಸಂತೋತ್ಸವ ಚಂಪು' ಎಂಬ ಸಂಸ್ಕೃತ ಕಾವ್ಯವನ್ನು ರಚಿಸಿದ್ದಾನೆ.[5] ಇದನ್ನು ಆರ್.ಎಸ್. ಪಂಚಮುಖಿಯವರು ಪ್ರಕಟಿಸಿದ್ದಾರೆ. ಅಹೋಬಲನು ವಿಜಯನಗರ ನಿವಾಸಿ. ವಿರೂಪಾಕ್ಷ ದೇಗುಲದ ರಥೋತ್ಸವವನ್ನು ಕಣ್ಣಾರೆ ಕಂಡು, ಅದರಲ್ಲಿ ಭಾಗವಹಿಸಿದ ಇವನು ಈ ಗೋಪುರವನ್ನು 'ವಿಷ್ಟಪೇಶಗೋಪುರ' ಅಥವಾ 'ಶ್ರೀ ವಿಷ್ಟಪೇಶಗುರುಗೋಪುರ' ಎಂದು ತನ್ನ ಗ್ರಂಥದಲ್ಲಿ ಕರೆದಿದ್ದಾನೆ. ಇದರಿಂದ ಗೋಪುರವನ್ನು ವಿಷ್ಟಪ ಅಥವಾ ಬಿಷ್ಟಪಯ್ಯ ಕಟ್ಟಿಸಿದನೆಂದು ಆಗುವುದಿಲ್ಲ. ಆದರೆ 'ವಿರೂಪಾಕ್ಷ ವಸಂತೋತ್ಸವ ಚಂಪು' ಗ್ರಂಥದ ಸಂಪಾದಕರೂ ಸೇರಿದಂತೆ ಅನೇಕರು ತಪ್ಪಾಗಿ ಇದನ್ನು ಬಿಷ್ಟಪಯ್ಯ ಗೋಪುರವೆಂದು ಕರೆದಿದ್ದಾರೆ. ವಿಷ್ಟಪೇಶ ಅಥವಾ ತ್ರಿವಿಷ್ಟಪೇಶ ಎಂದರೆ ಲೋಕದ ಅಥವಾ ಮೂರು ಲೋಕಗಳ ಅಧಿಪತಿ ಎಂದರ್ಥ. ಇವನು ಮಹಾವಿಷ್ಣುವೇ ಆಗಿದ್ದಾನೆ. ಇಲ್ಲಿ ಅಹೋಬಲನು ವಿರೂಪಾಕ್ಷನನ್ನು

ವಿಷ್ಣುವಿನ ಗುರು ಅಥವಾ ಅಧಿಪತಿ ಎಂಬ ಅರ್ಥದಲ್ಲಿ ಸಂಬೋಧಿಸಿದ್ದಾನೆ. ಈ ಅರ್ಥದಲ್ಲಿ ಕೃತಿಕಾರರು ವಿಷ್ಣುಪೇಶಗೋಪುರವೆಂದು ಕರೆದಿದ್ದಾನೆ. ಆದ್ದರಿಂದ ಇದನ್ನು ಬಿಷ್ಟಪಯ್ಯ ಗೋಪುರವೆಂದು ಅರ್ಥೈಸಲಾಗದು.

ಹರಿಭದ್ರನ ತೆಲುಗು ಗ್ರಂಥವಾದ ಉತ್ತರನರಸಿಂಹ ಪುರಾಣವು ಎರಡನೇ ದೇವರಾಯನ (1423–46) ಅಧಿಕಾರಿಯಾದ ಪ್ರೋಲುಗಂಟಿತಿಪ್ಪನು ವಿರೂಪಾಕ್ಷ ದೇವಾಲಯದ ಹಿರಿಯ ಗೋಪುರ ಮತ್ತು ವಿಠ್ಠಲ ದೇಗುಲದ ಭೋಗಮಂಟಪವನ್ನು ಕಟ್ಟಿಸಿದನೆಂದು ಹೇಳುತ್ತದೆ.[6] ವಿಠ್ಠಲ ದೇವಾಲಯವು ಹದಿನಾರನೇ ಶತಮಾನದ ಮೊದಲ ದಶಕದಲ್ಲಿ ನಿರ್ಮಾಣವಾಯಿತು. ಅದರ ಸಂಕೀರ್ಣದ ವಿವಿಧ ಕಟ್ಟಡಗಳನ್ನು ಹದಿನಾರನೇ ಶತಮಾನದ ಮಧ್ಯಭಾಗದ ವೇಳೆಗೆ ಕಟ್ಟಲಾಯಿತು. ಉತ್ತರನರಸಿಂಹ ಪುರಾಣವು ಹದಿನಾರನೇ ಶತಮಾನದ ಅಂತ್ಯದಲ್ಲಿ ರಚನೆಯಾದ ಕೃತಿಯಾದ್ದರಿಂದ ಅದರಲ್ಲಿ ವ್ಯಕ್ತವಾಗಿರುವ ಅಂಶಗಳು ವಿಶ್ವಸನೀಯವಾದುದಲ್ಲ. ಇದಲ್ಲದೆ, ದೇವದಾನ ಅಧಿಕಾರಿಗಳಲ್ಲಿ ಪ್ರೋಲುಗಂಟಿತಿಪ್ಪನ ಹೆಸರೇ ಬರುವುದಿಲ್ಲ.

ಲಕ್ಕಣ್ಣ ದಂಡೇಶ ಇಮ್ಮಡಿ ದೇವರಾಯನ ಮಿತ್ರನೂ ಮತ್ತು ಅವನ ಮಂತ್ರಿಗಳಲ್ಲಿ ಪ್ರಮುಖನೂ ಆಗಿದ್ದಾನೆ. ಇವನು ಸಾಮ್ರಾಜ್ಯದ ಮುಳಬಾಗಿಲು, ಟೇಕಲ್, ಬಾರಕೂರು ಮತ್ತು ಮದುರೈ ಪ್ರಾಂತಗಳಲ್ಲಿ ಹಿರಿಯ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾನೆ.[7] ಇವನು ಸಾಮ್ರಾಜ್ಯದ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾನೆ. ಪರ್ಶಿಯದ ರಾಯಭಾರಿ ಅಬ್ದುಲ್ ರಜಾಕನ ಬರವಣಿಗೆಯಲ್ಲೂ ಇವನ ಬಗ್ಗೆ ಉಲ್ಲೇಖ ಬರುವುದುಂಟು.[8] ಎರಡನೇ ದೇವರಾಯನ ಕಾಲದಲ್ಲಿ ಸಾಮ್ರಾಜ್ಯದಲ್ಲಿ ನಡೆದ ಘಟನಾವಳಿಗಳಿಗೆ ಇವನು ಸಾಕ್ಷಿಯಾಗಿದ್ದಾನೆ. ಕನ್ನಡ ಮತ್ತು ಸಂಸ್ಕೃತದಲ್ಲಿ ವಿದ್ವಾಂಸನಾದ ಇವನು ಶಿವತತ್ವ ಚಿಂತಾಮಣಿ ಎಂಬ ಕಾವ್ಯವನ್ನು ಕನ್ನಡದಲ್ಲಿ ರಚಿಸಿದ್ದಾನೆ.[9] ಲಕ್ಕಣ್ಣ ದಂಡೇಶನು ವಿರೂಪಾಕ್ಷ ದೇಗುಲದ ಗೋಪುರದ ನಿರ್ಮಾಣದ ಬಗ್ಗೆ ತನ್ನ ಕಾವ್ಯದಲ್ಲಿ ತಿಳಿಸಿದ್ದಾನೆ. ಇಮ್ಮಡಿ ದೇವರಾಯನ ಸಮಕಾಲೀನನೂ ಅವನ ಆಸ್ಥಾನದ ಪ್ರಮುಖ ಪ್ರಭಾವಿ ವ್ಯಕ್ತಿಯೂ ಆದ ಇವನು ನೀಡಿರುವ ಮಾಹಿತಿ ಅತ್ಯಂತ ವಿಶ್ವಾಸಪೂರ್ಣವಾದುದು. ಇವನು ತನ್ನ ಕಾವ್ಯದಲ್ಲಿ ವೀರದೇವರಾಜೇಂದ್ರನು (ಇಮ್ಮಡಿ ದೇವರಾಯನು) ವಿರೂಪಾಕ್ಷ ದೇಗುಲದ ಪ್ರಾಕಾರಗಳು, ಗೋಪುರ, ಸುಂದರವಾದ ಕೊಳ ಮತ್ತು ರಥಪಥವನ್ನು ನಿರ್ಮಿಸಿದನೆಂದು ತಿಳಿಸುತ್ತಾನೆ.[10] ಇದಷ್ಟೇ ಅಲ್ಲದೇ ಫಲಭರಿತ ವೃಕ್ಷಗಳನ್ನು ರಥಪಥದ ಇಕ್ಕೆಡೆಯಲ್ಲೂ ನೆಡಿಸಿದ ಹಾಗೂ ಆರಾಮವನ್ನು ನಿರ್ಮಿಸಿದನೆಂದು ಹೇಳುತ್ತಾನೆ. ಇದರ ಜೊತೆಗೆ, ವಿರೂಪಾಕ್ಷ, ಪಂಪಾಂಬಿಕೆ ಮತ್ತು ಗಣಾಧಿಪ ದೇವತೆಗಳಿಗೆ ರಥಗಳನ್ನು ಮಾಡಿಸಿ ಅರ್ಪಿಸಿದನೆಂದು ತಿಳಿಸುತ್ತಾನೆ.[11]

ವಿರೂಪಾಕ್ಷ ದೇಗುಲದ ವಾಸ್ತುವಿನ ವಿವಿಧ ಭಾಗಗಳ ನಿರ್ಮಾಣದ ಕಾಲಕ್ರಮವನ್ನು ವಿಶ್ಲೇಷಿಸಿದರೆ, ಲಕ್ಕಣ್ಣ ದಂಡೇಶನ ಹೇಳಿಕೆಗಳು ಐತಿಹಾಸಿಕ ಸತ್ಯಸಂಗತಿಯೆಂದು ಅರಿವಾಗುತ್ತದೆ. ಈ ನಿರ್ಮಾಣಗಳನ್ನು ಕಣ್ಣಾರೆ ಕಂಡವನು ಹಾಗೂ ರಥೋತ್ಸವದಲ್ಲಿ ಭಾಗಿಯಾದವನು ಎಂಬುದು ಪೂರಕವಾದ ಅಂಶವಾಗುತ್ತದೆ.

ಮೇಲಿನ ವಿಶ್ಲೇಷಣಾತ್ಮಕ ಚಿಂತನೆಯಿಂದ ಇಮ್ಮಡಿ ದೇವರಾಯನು ವಿರೂಪಾಕ್ಷ ದೇವಾಲಯದ ಪೂರ್ವದ ದಿಕ್ಕಿನ ಭವ್ಯ ಗೋಪುರ ಮತ್ತು ರಥಪಥವನ್ನು ತನ್ನ ಕಾಲಾವಧಿಯಲ್ಲಿ (1423–1446) ನಿರ್ಮಿಸಿರುವುದು ದೃಢಪಡುತ್ತದೆ. ಇವುಗಳ ನಿರ್ಮಾಣದಿಂದ 'ರಥವೀಧಿ' ಅಥವಾ 'ತೇರುಬೀದಿ'ಗಳ ಪರಂಪರೆ ಆರಂಭವಾಯಿತು. ವಿರೂಪಾಕ್ಷ ದೇಗುಲದ ತೇರುಬೀದಿಯ ಇಕ್ಕೆಡೆಗಳಲ್ಲೂ ಎರಡು ಪಂಕ್ತಿಯ ಸ್ತಂಭರಾಜಿಯ ಮಂಟಪವನ್ನು ಕಾಣಬಹುದು. ಇದನ್ನೇ ಲಕ್ಕಣ್ಣ ದಂಡೇಶನು 'ಆರಾಮ' ಎಂಬ ಅರ್ಥದಲ್ಲಿ ಕರೆದಿದ್ದಾನೆ. ಇಲ್ಲಿ ನಡೆಯುವ ರಥೋತ್ಸವವನ್ನು ನೋಡಿ ಆನಂದ ಪಡೆಯಲು ಸ್ತಂಭಪಂಕ್ತಿಯ ಮಂಟಪದಲ್ಲಿ ನೆರೆಯುತ್ತಿದ್ದರು. ರಥೋತ್ಸವದ ಹಬ್ಬದ ದಿನಗಳಲ್ಲಿ ಅಂಗಡಿಗಳು ಸ್ಥಾಪನೆಯಾಗುತ್ತಿದ್ದವು. ಹದಿನೈದನೇ ಶತಮಾನದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದ ಪ್ರವಾಸಿಯೊಬ್ಬನ ಬರವಣಿಗೆಯಿಂದ ಈ ಅಂಶ ವ್ಯಕ್ತವಾಗುತ್ತದೆ.[12] ವಿರೂಪಾಕ್ಷ ದೇಗುಲದ ತೇರುಬೀದಿಯು ಮತಂಗಪರ್ವತದ ಹಿಂದೆ ಇರುವ ಬಸವಣ್ಣನ

ಮಂಟಪದಲ್ಲಿ ಕೊನೆಗೊಳ್ಳುತ್ತದೆ. ಇದು 35 ಮೀಟರ್ ಅಗಲವಾಗಿಯೂ 720 ಮೀಟರ್ ಉದ್ದವಾಗಿಯೂ ಇದೆ. ಈ ರಥಪಥವು ಹಂಪಿ ಅಥವಾ ವಿರೂಪಾಕ್ಷ ಬಜಾರ್ ಎಂದು ಜನಪ್ರಿಯವಾಗಿದೆ. ಹದಿನಾರನೇ ಶತಮಾನದಲ್ಲಿ ಹಿರಿಯ ಭವ್ಯ ದೇಗುಲಗಳು ನಿರ್ಮಾಣವಾದಾಗ, ರಥಬೀದಿಗಳು ಆ ದೇಗುಲಗಳ ಪ್ರದೇಶದ ಮಾರುಕಟ್ಟೆ ಅಥವಾ ಪೇಟೆಗಳಾದವು. ಕೃಷ್ಣಾಪುರದ ಪೇಟೆ ಅಂತಹ ಪೇಟೆಗಳಲ್ಲೊಂದು.[13] ಇದು ಕೃಷ್ಣದೇವಾಲಯದ ಮುಂದೆ ವ್ಯಾಪಕವಾಗಿ ಬೆಳೆದಿತ್ತು. ಹೀಗೆ ರಥಬೀದಿಗಳು ಭವ್ಯ ದೇಗುಲಗಳ ಸಂಕೀರ್ಣದ ಪ್ರಮುಖ ಭಾಗವೇ ಆದವು. ಬೀದಿಗಳಿಗೆ ಕಲ್ಲುಚಪ್ಪಡಿಯನ್ನು ಹಾಕಿ ಭದ್ರಪಡಿಸಲಾಗಿದೆ.[14] ಇವುಗಳ ಎಡಭಾಗದಲ್ಲಿ ದೊಡ್ಡ ಕಲ್ಯಾಣಿಯೊಂದಿದ್ದು ಅದರ ಮಧ್ಯದಲ್ಲಿ ನಾಲ್ಕು ಸ್ತಂಭಗಳ ತೆರೆದ ಮಂಟಪವನ್ನು ಕಟ್ಟಲಾಗಿದೆ. ಇದನ್ನು ವಸಂತಮಂಟಪವೆಂದು ಕರೆಯಲಾಗಿದೆ.[15] ಇದರಲ್ಲಿ ದೇಗುಲದ ತೆಪ್ಪೋತ್ಸವವನ್ನು ಆಚರಿಸಲಾಗುತ್ತಿತ್ತು. ಗೋಪುರಗಳು ದೇಗುಲದ ಸಂಕೀರ್ಣದ ವೈಭವವನ್ನು ನೂರ್ಮಡಿಗೊಳಿಸಿದರೆ, ತೇರುಬೀದಿಗಳು ದೇಗುಲಗಳ ಧಾರ್ಮಿಕ ಮತ್ತು ಆರಾಧನಾ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದವು.

ವಿಜಯನಗರದ ಸಾಮ್ರಾಟರನ್ನು ಸಾಮಾನ್ಯವಾಗಿ 'ರಾಯ'ರೆಂದು ಕರೆಯಲಾಗಿದೆ. ದೇಗುಲಗಳ ಮುಂದಿನ ಗೋಪುರಗಳನ್ನು ಸಾಮ್ರಾಟರು ಕಟ್ಟಿಸುತ್ತಿದ್ದರಿಂದ ಅವುಗಳನ್ನು ರಾಯಗೋಪುರಗಳೆಂದು ಕರೆಯಲಾಗಿದೆ. ರಾಯಗೋಪುರಗಳ ನಿರ್ಮಾಣದ ಪರಂಪರೆ ಕೃಷ್ಣದೇವರಾಯನಿಂದ ಆರಂಭವಾಯಿತೆಂಬುದು ಕೆಲ ವಿದ್ವಾಂಸರ ಅಭಿಪ್ರಾಯ. ಇವನಿಗಿಂತ 80 ವರ್ಷಗಳ ಹಿಂದೆ ಇದ್ದ ಇಮ್ಮಡಿ ದೇವರಾಯನು ವಿರೂಪಾಕ್ಷ ದೇವಾಲಯದ ಗೋಪುರವನ್ನು ಕಟ್ಟಿಸುವುದರ ಮೂಲಕ ರಾಯಗೋಪುರದ ರಚನೆಯ ಪರಂಪರೆಯನ್ನು ಅನಾವರಣ ಮಾಡಿದ. ಇದರಿಂದ ವಿದ್ವಾಂಸರ ಅಭಿಪ್ರಾಯ ತಪ್ಪುಕಲ್ಪನೆಯಾಗುತ್ತದೆ. ಕೃಷ್ಣದೇವರಾಯ ಅಧಿಕ ಸಂಖ್ಯೆಯ ಗೋಪುರವನ್ನು ಅನೇಕ ದೇಗುಲಗಳಿಗೆ ನಿರ್ಮಿಸಿದ್ದುಂಟು. ಕೃಷ್ಣದೇವರಾಯ ಮತ್ತು ಅನಂತರದ ಅರಸರ ಕಾಲಕ್ಕೆ ದೇಗುಲಗಳ ಗೋಪುರಗಳು ನೂತನ ಭವ್ಯ ಆಯಾಮವನ್ನು ಪಡೆದುಕೊಂಡವು.

ವಿರೂಪಾಕ್ಷ ದೇಗುಲದ ಗೋಪುರ ವಿಜಯನಗರ ಸಾಮ್ರಾಜ್ಯದ ಆರಂಭ ನಿರ್ಮಾಣವೇನಲ್ಲ. ಬೇಲೂರಿನ ಚೆನ್ನಕೇಶವ ದೇಗುಲದ ಮುಂದೆ ಕಟ್ಟಿರುವ ಗೋಪುರವು ಆರಂಭದ ಗೋಪುರಗಳಲ್ಲೊಂದು.[16] ಆದರೆ ವಿರೂಪಾಕ್ಷ ದೇಗುಲ ಗೋಪುರ ಮಾಡಿರುವ ಪ್ರಭಾವದಿಂದ ಅದು ಮಹತ್ವವನ್ನು ಪಡೆದುಕೊಂಡಿದೆ. ಅದು ದೇಗುಲಗಳು ಮತ್ತು ಗೋಪುರಗಳ ನಿರ್ಮಾಣದಲ್ಲಿ ಒಂದು ಚಳವಳಿಯನ್ನೇ ಹುಟ್ಟಿಹಾಕಿತು. ಈ ಚಳವಳಿಯು ಅರಸರು ಅಧಿಕಾರಿಗಳು ಮತ್ತು ಜನಸಾಮಾನ್ಯರಿಗೆ ಪ್ರಚೋದನೆ ಮತ್ತು ಪ್ರಭಾವವನ್ನು ಬೀರಿ, ನಿರ್ಮಾಣಕಾರ್ಯದಲ್ಲಿ ತಮ್ಮನ್ನು ತೊಡಗಿಕೊಳ್ಳುವಂತೆ ಮಾಡಿತು. ದೇಗುಲಗಳು ಅಗಾಧ ಪ್ರಮಾಣದಲ್ಲಿ ನಿರ್ಮಾಣವಾದವು. ಇದರಿಂದ ಪ್ರಚೋದಿತನಾದ ಲಕ್ಕಣ್ಣ ದಂಡೇಶನೇ ತನ್ನ ಹುಟ್ಟೂರಾದ ವಿರೂಪಾಕ್ಷಿಯಲ್ಲಿ ಪ್ರಸನ್ನ ವಿರೂಪಾಕ್ಷ ದೇಗುಲವನ್ನು ಕಟ್ಟಿಸಿದ.[17] ಹಂಪಿಯ ವಿರೂಪಾಕ್ಷ ದೇಗುಲವನ್ನು ಮಾದರಿಯಾಗಿಟ್ಟುಕೊಂಡು ಇಲ್ಲೂ ಗೋಪುರ ಮತ್ತು ಮನ್ಮುಖಹೊಂಡವನ್ನು ನಿರ್ಮಿಸಿದ. ಇವನ ಮಂತ್ರಿ ನಾಗರಸನು ತಿರುವಾಯೂರಿನ ತ್ಯಾಗರಾಜಸ್ವಾಮಿ ದೇಗುಲಕ್ಕೆ ಎರಡನೇ ಪ್ರಕಾರವನ್ನೂ ಪಶ್ಚಿಮದಲ್ಲಿ ಗೋಪುರವನ್ನೂ ಕಟ್ಟಿಸಿದ.[18] ಅರಸನ ಸೇವಕರಲ್ಲೊಬ್ಬನಾದ ತಿರುಮಲರಾಯನು ಮ್ರೊಪುರಿಯ ಭೈರವ ದೇವಸ್ಥಾನದ ಗೋಪುರವನ್ನು ಕಟ್ಟಿಸಿದ. ಈ ತೆರನಾದ ನಿರ್ಮಾಣಗಳು ಅಸಂಖ್ಯಾತ. ಅವುಗಳಲ್ಲಿ ಇವು ಕೆಲವೇ ಮಾತ್ರ. ಎರಡನೇ ದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಸಾರ್ವತ್ರಿಕ ಶಾಂತಿ ಮತ್ತು ಭದ್ರತೆ ನೆಲೆಸಿತ್ತು. ಆದ್ದರಿಂದ ಇವನ ಕಾಲದಲ್ಲಿ ನಿರ್ಮಾಣ ಕಾರ್ಯವು ಅತ್ಯಂತ ಕ್ರಿಯಾಶೀಲವಾಗಿ ವ್ಯಾಪಕವಾಗಿ ಹಾಗೂ ಅಧಿಕ ಪ್ರಮಾಣದಲ್ಲಿ ನಡೆದವು. ರಾಯಗೋಪುರಗಳು ಮತ್ತು ತೇರುಬೀದಿಗಳನ್ನು ನಿರ್ಮಿಸುವ ಪರಂಪರೆಯನ್ನು ಆರಂಭಿಸಿದ ಕೀರ್ತಿ ಸಂಗಮವಂಶದ ಹಾಗೂ ಭಾರತದ ಪ್ರಖ್ಯಾತ ಚಕ್ರವರ್ತಿಗಳಲ್ಲಿ ಒಬ್ಬನಾದ ಇಮ್ಮಡಿ ದೇವರಾಯನಿಗೆ ಸಲ್ಲುತ್ತದೆ.

ಆಧಾರಸೂಚಿ

1. *ARSIE,* 1889, 26; *SII,* IV, 255; *VPR,* 1984-87, 72.
2. Shivarudraswamy S.N., 1996, *Vijayanagara Temples in Karnataka,* Mysore, p. 124.
3. *ARSIE,* 1889, 29; *EI,* I, pp. 361; *SII,* IV, 258
4. ಶಾಮರಾವ್ ಪುಲುಮತಿ, 1956, *ವಿಜಯನಗರದ ಕಲೆ ಮತ್ತು ಸಾಹಿತ್ಯ*, ಬೆಂಗಳೂರು, ಪು. 56.
5. ಪಂಚಮುಖಿ ಆರ್.ಎಸ್. (ಸಂ.), *ವಿರೂಪಾಕ್ಷ ವಸಂತೋತ್ಸವ ಚಂಪು*, 1953, ಧಾರವಾಡ.
6. Shastri, K.A.N. and Venkataramanayya N., 1946, *Further Sources of Vijayanagara History,* Vol. I, Madras, pp. 108-9.
7. *AR Mar,* 1913, p. 26; *ASIAR,* 1907-08, p. 249; *EC,* IX (Bangalore Suppl.), Ht. 130; *MER,* 1903, p. 191.
8. *ASIAR,* 1907-08, p. 249.
9. ಬಸಪ್ಪ ಎಸ್. (ಸಂ.), *ಶಿವತತ್ವ ಚಿಂತಾಮಣಿ*, 1960, ಮೈಸೂರು, ಪು. 38, 251–52.
10. ಅದೇ, ಪು. 38, 253.
11. ಅದೇ, ಪು. 38, 254
12. ಸೀವೆಲ್ ರಾಬರ್ಟ್, *A Forgotten Empire,* pp. 84-90.
13. *SII,* IV, 255.
14. *VPR,* 1979-83, pp. 9-10.
15. Shivarudraswamy S.N., *Op.cit.,* p. 130.
16. *EC,* V, Bl. 3; *EC,* IX (Rev.), Bl. 144.
17. *EC,* X, Mb. 96.
18. *ARSIE,* 1904, 566-567.
19. *MAR,* 1907, 496.

ತಿರುಮಲಾದೇವಿಯರ ಪಟ್ಟಣ–ನಾಗಲಾಪುರ ಹೊಸಪೇಟೆ : ಒಂದು ಪರಿಶೀಲನೆ

ಡಾ॥ ಸಿ. ಮಹದೇವ

ಹೊಸಪೇಟೆ ನಗರ ಬಳ್ಳಾರಿ ಜಿಲ್ಲೆಯ ತಾಲ್ಲೂಕು ಹಾಗೂ ಉಪವಿಭಾಗ ಕೇಂದ್ರವಾಗಿದೆ. ಕೃಷಿ ಮತ್ತು ಕೈಗಾರಿಕಾ ಸಂಪನ್ಮೂಲ ಹೊಂದಿರುವ ಈ ಪರಿಸರವು ನಗರದ ನಿರಂತರ ಬೆಳವಣಿಗೆಗೆ ಕಾರಣವಾಗಿದೆ. ರೇಖಾಂಶ 76^0 26' 13" ಮತ್ತು ಅಕ್ಷಾಂಶ 15^0 15' 36' ರಲ್ಲಿ ಇರುವ ಹೊಸಪೇಟೆ ಸಮುದ್ರಮಟ್ಟದಿಂದ 467 ಮೀಟರ್ ಎತ್ತರದಲ್ಲಿದ್ದು ದಕ್ಷಿಣದಿಂದ ಉತ್ತರಕ್ಕೆ ಪೂರ್ವದಿಂದ ಪಶ್ಚಿಮಕ್ಕೆ ಇಳಿಜಾರಾಗಿರುವ ಪ್ರದೇಶದಿಂದ ಕೂಡಿದೆ. ಇಲ್ಲಿಗೆ ಕೇವಲ ಹದಿಮೂರು ಕಿ.ಮೀ.ಗಳ ಅಂತರದಲ್ಲಿ ವಿಜಯನಗರ ಸಾಮ್ರಾಜ್ಯದ ಭಗ್ನಾವಶೇಷಗಳನ್ನು ಹೊಂದಿರುವ ಹಂಪೆ ಇದ್ದು ಪ್ರವಾಸಿಗಳೆಲ್ಲ ಸಾಮಾನ್ಯವಾಗಿ ಈ ಪಟ್ಟಣದ ಮೂಲಕವೇ ಹೋಗುತ್ತಾರೆ.

ಹೊಸಪೇಟೆಯ ಇತಿಹಾಸ ಕುರಿತು ಆಲೋಚಿಸುವಾಗ ನಾವು ಮುಖ್ಯವಾಗಿ ಶಾಸನಗಳನ್ನು ಮತ್ತು ವಿಜಯನಗರ ಕಾಲದಲ್ಲಿ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರ ಬರಹಗಳನ್ನು ಆಶ್ರಯಿಸುತ್ತೇವೆ. ಅವು ನಿರ್ದಿಷ್ಟ ಆಕರಗಳು ಸಹ ಆಗಿವೆ. ಅಲ್ಲದೆ ಸ್ಥಳೀಯ ಮಾಹಿತಿಗಳು ಸಹ ಅಲ್ಪಸ್ವಲ್ಪ ಲಭ್ಯವಾಗುತ್ತವೆ. ರಾಬರ್ಟ್ ಸ್ಯುಯೆಲ್ ಅವರು ಹೊಸಪೇಟೆಯ ಇತಿಹಾಸ ಹೇಳುವ ಸಂದರ್ಭಗಳಲ್ಲಿ ವಿದೇಶಿ ಪ್ರವಾಸಿಗರ ಬರಹಗಳನ್ನು ಮಾತ್ರ ಆಧರಿಸಿ ನಾಗಲಾಪುರವೇ ಇಂದಿನ ಹೊಸಪೇಟೆ ಎಂದು ತಿಳಿಸುತ್ತಾರೆ.[1] ಈ ಅಭಿಪ್ರಾಯ ಎಷ್ಟರಮಟ್ಟಿಗೆ ಸಮಂಜಸವಾದುದು ಎಂಬುದನ್ನು ಕುರಿತಂತೆ ಇಲ್ಲಿನ ಶಾಸನಗಳು ಮತ್ತು ವಿದೇಶಿ ಪ್ರವಾಸಿಗಳ ಬರಹಗಳ ಸಹಾಯದಿಂದ ಪರಿಶೀಲಿಸುವ ಒಂದು ಪ್ರಯತ್ನವೇ ಈ ಲೇಖನದ ಉದ್ದೇಶ.

ವಾಸ್ತವವಾಗಿ ಹೊಸಪೇಟೆಯ ಚಾರಿತ್ರಿಕ ಮಹತ್ವ ಕಳಚೂರಿ ಬಿಜ್ಜಳದೇವನ ಕಾಲದಿಂದ ಅಥವಾ ಅದಕ್ಕೂ ಪೂರ್ವದಿಂದ ಪ್ರಾರಂಭವಾಗುತ್ತದೆ. ಸುಮಾರು 12ನೇ ಶತಮಾನಕ್ಕೆ ಸೇರುವ ಒಡೆದ ಶಾಸನವೊಂದು[2] ಹೊಸಪೇಟೆಯ ಸಣ್ಣಕ್ಕಿ ವೀರಭದ್ರ ದೇವಾಲಯದ ಹಿಂಭಾಗದ ಮರದ ಬುಡದಲ್ಲಿ ಬಿದ್ದಿದೆ. ಈ ಶಾಸನ ಕಳಚೂರಿ ಬಿಜ್ಜಳದೇವನ ಕಾಲಕ್ಕೆ ಸೇರಿದ್ದು ಕನ್ನಡ ಲಿಪಿ ಮತ್ತು ಭಾಷೆಯಲ್ಲಿದೆ. ಶ್ಲೋಕಗಳಿಂದ ಕೂಡಿದ ಶಾಸನದಲ್ಲಿ ಹನ್ನೊಂದು ಸಾಲುಗಳು ಲಭ್ಯವಾಗುತ್ತವೆ. ಮೇಲ್ಭಾಗದಲ್ಲಿ ಜಿನ ಬಿಂಬ, ಅದರ ಮೇಲೆ ಮುಕ್ಕೊಡೆ, ಇಕ್ಕೆಲಗಳಲ್ಲಿ ಚಾಮರ, ಬಲಭಾಗದಲ್ಲಿ ಕಠಾರಿ, ಎಡಭಾಗದಲ್ಲಿ ಹಸು–ಕರುವಿನ ಉಬ್ಬುಶಿಲ್ಪಗಳಿವೆ. ಇದರಿಂದಾಗಿ ಈ ಶಾಸನ ಜೈನರಿಗೆ ಸಂಬಂಧಿಸಿದ್ದು, ಇಲ್ಲಿ ನೆಲೆಯೊಂದು ಇದ್ದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಈ ಪ್ರದೇಶವನ್ನು ಈಗ ನೆಹರು ಸಹಕಾರ ಕಾಲೋನಿ ಎಂದು ಕರೆಯಲಾಗುತ್ತೆ.

ವಿಜಯನಗರಕ್ಕೂ ಪೂರ್ವದಲ್ಲೇ ಈ ಭಾಗದಲ್ಲಿ ಜೀವಂತ ಗ್ರಾಮವೊಂದಿತ್ತೆಂದು ಸ್ಪಷ್ಟ. ಆದರೆ, ಅದರ ಹೆಸರ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ. ಇದಕ್ಕೆ ಅಬ್ದುರ್ ರಜಾಕನ ವಿವರಣೆ ಆಧಾರವಾಗಿ ನಿಲ್ಲುತ್ತದೆ.

ಕ್ರಿ.ಶ. 1443ರ ಏಪ್ರಿಲ್ ತಿಂಗಳ ಕೊನೆಯಿಂದ ಡಿಸೆಂಬರ್ 5ರ ವರೆಗೆ ವಿಜಯನಗರದಲ್ಲಿದ್ದ ಪರ್ಷಿಯ ದೇಶದ ರಾಯಭಾರಿ ಅಬ್ದುರ್ ರಜಾಕ್ ಪಶ್ಚಿಮ ಕರಾವಳಿಯಿಂದ ವಿಜಯನಗರಕ್ಕೆ ತಲುಪುವವರೆಗಿನ ವಿವರಗಳನ್ನು ನೀಡುತ್ತಾನೆ. ಆತನ ವಿವರಣೆಯನ್ನು ಆಧರಿಸಿ ಸ್ಯುಯೆಲ್ ಅವರು ಈ ರೀತಿ ಊಹೆ ಮಾಡುತ್ತಾರೆ. 'ಪ್ರವಾಸಿ ನೈಋತ್ಯದಿಂದ ಬಳಿಸಾರಿದ ಮತ್ತು ಅವನು ನೋಡಿದ ಗೋಡೆಯ ಪ್ರಥಮ ಸುತ್ತು ಹೊಸಪೇಟೆಯ ನೈಋತ್ಯಕ್ಕಿರುವ ಎರಡು ಗುಡ್ಡಗಳ ಮಧ್ಯವಿರುವ ಭೂಕಂಠದ ಮೇಲಿರುವದಾಗಿರಬೇಕು. ಈ ಬಾಹ್ಯ ರಕ್ಷಣಾ ಕಟ್ಟಡವನ್ನು ಕರಾವಳಿಯಿಂದ ಬಂದ ಪ್ರವಾಸಿಗರಿಗೆಲ್ಲ ಮೊಟ್ಟಮೊದಲು ಕಣ್ಣಿಗೆ ಬೀಳುವಂಥದೆಂದು ಡೊಮಿಂಗೊಪಾಯಿಸ್ ಕೂಡ ವರ್ಣಿಸಿದ್ದಾನೆ. ಈ ಪ್ರವೇಶದ್ವಾರದಲ್ಲಿ ಬರಮಾಡಿಕೊಳ್ಳಲಾದ ರಜಾಕ್ 'ಸಾಗುವಳಿ ಮಾಡಿದ ಜಮೀನುಗಳು, ಮನೆಗಳು ಮತ್ತು ಉದ್ಯಾನಗಳ ಮಾರ್ಗವಾಗಿ ಕೆಳಗೆ ಹೊಸಪೇಟೆಯ ದ್ವಾರ ತಲುಪಿರಬೇಕು. ಅಲ್ಲಿ ಕೋಟೆಯ ಎರಡನೆಯ ಸುತ್ತು ಅಡ್ಡಗಟ್ಟಿತು. ಆ ಪಟ್ಟಣ ಆಗ ಜನಸಾಂದ್ರವಾಗಿರಲಿಲ್ಲ. ಅವನು ನಗರದ ಉತ್ತರ ಬದಿಯಲ್ಲಿರುವ ಮೂರನೇ ಸುತ್ತಿನ ಗೋಡೆ ದಾಟುವವರೆಗೆ ಅದೇ ಲಕ್ಷಣಗಳು ಅವನ ಕಣ್ಣಿಗೆ ಬೀಳುತ್ತವೆ.[3]

ಈ ವಿವರಣೆಯಲ್ಲಿ ಬರುವ ಎರಡು ಮತ್ತು ಮೂರನೇ ಸುತ್ತಿನ ನಡುವಿನ ಪಟ್ಟಣದ ಉಲ್ಲೇಖ ಮತ್ತು ಅದು ಅಷ್ಟೇನು ಜನಸಾಂದ್ರವಾಗಿರಲಿಲ್ಲ ಎಂಬ ಸ್ಯುಯೆಲ್ಲರ ಊಹೆ ನಿಜವಾಗಿದ್ದಲ್ಲಿ ಆ ಪಟ್ಟಣ ಈಗಿನ ಸಣ್ಣಕ್ಕಿ ವೀರಭದ್ರ ದೇವಾಲಯದ ಪರಿಸರದಲ್ಲಿತ್ತು. ಆದರೆ, ಅದರ ಹೆಸರು ತಿಳಿದುಬರುವುದಿಲ್ಲ. ಮುಂದೆ ವಿಜಯನಗರದ ತುಳುವ ಮನೆತನದ ಶ್ರೀಕೃಷ್ಣದೇವರಾಯನು ಇದೇ ಪರಿಸರದಲ್ಲಿ ತನ್ನ ಪಟ್ಟಮಹಾದೇವಿಯಾದ ತಿರುಮಲಾದೇವಿಯ ಹೆಸರಿನಲ್ಲಿ ತಿರುಮಲಾದೇವಿಯರ ಪಟ್ಟಣವನ್ನು ನಿರ್ಮಿಸಿ[4] ಅಲ್ಲಿ ತಿರುವೆಂಗಳನಾಥನ ದೇವಾಲಯವನ್ನು ಕಟ್ಟಿಸಿದನು. ಕ್ರಿ.ಶ. 1513ರ ಕೃಷ್ಣದೇವರಾಯನ ಶಾಸನವೊಂದು ಮುದಲಾಪುರವನ್ನು (ಇಂದಿನ ಹೊಸಪೇಟೆಗೆ ಹೊಂದಿಕೊಂಡಿರುವ ಮುದ್ಲಾಪುರ) ತಿರುಮಲದೇವಿಯರ ಪಟ್ಟಣದ ಮಾಗಣೆಗೆ ಸೇರಿಸಿ ಹಂಪೆಯ ಕೃಷ್ಣಸ್ವಾಮಿ ದೇವರಿಗೆ ಸಮರ್ಪಿಸಿದನೆಂದು ತಿಳಿಸುತ್ತದೆ.[5] ಸಣ್ಣಕ್ಕಿ ವೀರಭದ್ರ ದೇವಾಲಯದ ಸಮೀಪವಿರುವ ಶಾಸನವೊಂದು[6] ತಿರುಮಲದೇವಿಯರ ಪಟ್ಟಣದ ಗೌರೇಶ್ವರ ದೇವರನ್ನು ಪ್ರಸ್ತಾಪಿಸುತ್ತದೆ. ಇದೇ ಪ್ರದೇಶದ ಮತ್ತೊಂದು ಶಾಸನವು[7] ಅಯ್ಯಾವಳಿ ಮುಖ್ಯನಾದ ತಿರುಮಲಾದೇವಿಯರ ಪಟ್ಟಣದ ಸೆಟ್ಟಿ ಪಟ್ಟಣಸ್ವಾಮಿಗಳ ಸಮ್ಮುಖದಲ್ಲಿ ಪ್ರಧಾನ ತಿರುಮಲರಾಜನ ಪ್ರತಿನಿಧಿಯಾದ ಅಬ್ಬರಾಜ ತಿಮ್ಮಪ್ಪನು ಕೆಲವು ಗ್ರಾಮಗಳ ಮೂಲವೀಸವನ್ನು ಅಲ್ಲಿಯ ತಿರುವೆಂಗಳನಾಥದೇವರಿಗೆ ದತ್ತಿಬಿಡುತ್ತಾನೆಂದು ಹೇಳುತ್ತದೆ.

ಈ ಮೇಲಿನ ಶಾಸನಗಳಿಂದ ತಿರುಮಲದೇವಿಯರ ಪಟ್ಟಣದ ಪ್ರಾಮುಖ್ಯ ಅರಿವಾಗುತ್ತದೆ. ಇಲ್ಲಿ ಬಹು ಸಂಖ್ಯೆಯ ವರ್ತಕರಿದ್ದು, ದೇವಾಲಯಗಳ ನಿರ್ಮಾಣವನ್ನು ಕಾಣುತ್ತೇವೆ. ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗ ಡೊಮಿಂಗೊ ಪಾಯಿಸ್ (ಬಹುಶಃ ಕ್ರಿ.ಶ. 1520–21ರಲ್ಲಿ ಬರೆದುದು) ತನ್ನ ಬರಹದಲ್ಲಿ 'ಪಶ್ಚಿಮಕ್ಕೆ ಮುಖ್ಯ ಮತ್ತು ಗೋವಾದಿಂದ ಬರುವವರು ಹಾಯುವ ಹೊರಬಾಗಿಲಾಗಿರುವುದರ ಪ್ರದೇಶದಲ್ಲಿ ರಾಜ ಅದರೊಳಗೆ ಗೋಡೆ ಮತ್ತು ಗೋಪುರಗಳಿಂದ ಬಲವಾದ ನಗರವನ್ನು ಕಟ್ಟಿದ್ದಾನೆ. ಗಟ್ಟಿ ಕಲ್ಲುಗಳಿಂದ ಮತ್ತು ಸಪಾಟಾದ ಮಾಳಿಗೆಗಳುಳ್ಳ ಕಟ್ಟಡಗಳ ಅತಿ ಸುಂದರ ಸಾಲುಗಳಿದ್ದು ಅದರಲ್ಲಿ ಅನೇಕ ಗಣ್ಯವರ್ತಕರು ವಾಸವಾಗಿದ್ದಾರೆ ಮತ್ತು ರಾಜ ಇಲ್ಲಿ ಅನೇಕ ವಿಗ್ರಹಗಳುಳ್ಳ ದೇವಾಲಯ ಕಟ್ಟಿಸಿದ' ಎಂದು ಹಾಗೂ ಈ ನಗರವನ್ನು ಹಿಂದೆ ವಾರಾಂಗನೆಯಾಗಿದ್ದ ತನ್ನ ಪ್ರೀತಿಯ ಪತ್ನಿಯ ಗೌರವಾರ್ಥ ನಿರ್ಮಿಸಿದನೆಂದು ಹೇಳುತ್ತಾನೆ.[8]

ಪಾಯಿಸ್ ಕೊಡುವ ವಿವರಗಳು ಮತ್ತು ತಿರುಮಲಾದೇವಿಯರ ಪಟ್ಟಣದ ಬಗೆಗೆ ಶಾಸನಗಳು ಹೇಳುವ ವಿವರಗಳ ನಡುವೆ ಸಾಮ್ಯವಿದೆ. ವಾಸ್ತವವಾಗಿ ಇಲ್ಲಿ ಪಾಯಿಸ್ ತಿರುಮಲದೇವಿಯರ ಪಟ್ಟಣವನ್ನು ವರ್ಣಿಸಿದ್ದು,

ಇದನ್ನು ತನ್ನ ಪ್ರೀತಿಯ ವಾರಾಂಗನೆ ಪತ್ನಿಯ ಹೆಸರಿನಲ್ಲಿ ಕಟ್ಟಿಸಿದ್ದನೆಂದು ತಪ್ಪುಗ್ರಹಿಕೆ ಮಾಡುತ್ತಾನೆ. ಕ್ರಿ.ಶ. 1513ರ ವೇಳೆಗಾಗಲೇ ಕೃಷ್ಣದೇವರಾಯನು ತನ್ನ ವಾರಾಂಗನೆ ಪತ್ನಿಯಾದ ಚಿನ್ನಾದೇವಿಯ ಹೆಸರಿನಲ್ಲಿ ತಿರುಮಲಾದೇವಿಯರ ಪಟ್ಟಣದ ಪೂರ್ವಕ್ಕೆ ನಗರವೊಂದನ್ನು ನಿರ್ಮಿಸಿ ನಾಗಲಾಪುರವೆಂಬ ಹೆಸರಿನಲ್ಲಿ ಕರೆಯಲಾಗಿತ್ತು. ಇದಕ್ಕೆ ಆಧಾರವಾಗಿ ಪರ್ನಾವ್ ನೂನಿಜ್‌ನು (ಪ್ರಾಯಶಃ ಕ್ರಿ.ಶ. 1535–37ರಲ್ಲಿ ಬರೆದದ್ದು) ರಾಜ ನಿರ್ಮಿಸಿದ ನಗರವು ಗಚ್ಚು ಗಾರೆಗಳಿಂದ ಕಟ್ಟಿದ ಮನೆಗಳು, ಉದ್ದ ಮತ್ತು ವಿಶಾಲವಾದ ರಸ್ತೆ ಹಾಗೂ ಈ ಹೊಸ ನಗರದ ಸುತ್ತ ಗೋಡೆಯೊಂದನ್ನು ನಿರ್ಮಿಸಲಾಯಿತೆಂದು ತಿಳಿಸುತ್ತಾನೆ. ಇಲ್ಲಿ ಅರಮನೆಗಳನ್ನು ಕಟ್ಟಿಕೊಳ್ಳುವಂತೆ ತನ್ನ ರಾಜ್ಯದ ದೊರೆಗಳಿಗೆ ಆಜ್ಞೆಯಿತ್ತನು ಮತ್ತು ಅವರು ಹಾಗೆಯೇ ಮಾಡಿದರು. ಇದನ್ನು ತನ್ನ ಪ್ರೀತಿಯ ಪತ್ನಿಯಾದ ಚಿನ್ನಾದೇವಿಯ ಗೌರವಾರ್ಥ ನಿರ್ಮಿಸಿ ಇದನ್ನು ನಾಗಲಾಪುರವೆಂದು ಕರೆದನು. ಮದುವೆಗೆ ಮುಂಚೆ ಇವಳಲ್ಲಿ ಗುಪ್ತಪ್ರಣಯ ಹೊಂದಿದ್ದು ಅವಳು ವಾರಾಂಗನೆಯಾಗಿದ್ದಳೆಂದು ತಿಳಿಸುತ್ತಾನೆ. ಕ್ರಿ.ಶ. 1513ರ ಸಂಕ್ಲಾಪುರದ ಶಾಸನವು[10] ಸಂಕ್ಲಾಪುರದ ಪಶ್ಚಿಮಕ್ಕೆ ನಾಗಲಾಪುರವಿತ್ತೆಂದು ತಿಳಿಸುತ್ತದೆ.[11] ಈ ಶಾಸನದ ಹಿನ್ನೆಲೆಯಲ್ಲಿ ನ್ಯೂನಿಜ್ ಹೇಳಿಕೆಯನ್ನು ಪರಿಶೀಲಿಸಲಾಗುತ್ತದೆ.

ಈ ಮೇಲಿನ ವಿವರಗಳಿಂದ ತಿರುಮಲಾದೇವಿಯರ ಪಟ್ಟಣ ಮತ್ತು ನಾಗಲಾಪುರವೆಂಬ ಎರಡು ಪಟ್ಟಣಗಳನ್ನು ಕೃಷ್ಣದೇವರಾಯನು ತನ್ನ ಇಬ್ಬರು ಪ್ರಧಾನ ಪತ್ನಿಯರಾದ ತಿರುಮಲಾದೇವಿ ಮತ್ತು ಚಿನ್ನದೇವಿಯರ ಹೆಸರಿನಲ್ಲಿ ಕ್ರಿ.ಶ. 1513ರ ವೇಳೆಗಾಗಲೇ ನಿರ್ಮಿಸಿದ್ದ ಸಂಗತಿ ಸ್ಪಷ್ಟವಾಗುತ್ತದೆ. ಪಾಯಿಸ್ ಕೃಷ್ಣದೇವರಾಯನ ಪ್ರೀತಿಯ ಹೆಂಡತಿಯ ಹೆಸರನ್ನಾಗಲಿ ಪಟ್ಟಣದ ಹೆಸರನ್ನಾಗಲಿ ಹೇಳುವುದಿಲ್ಲ. ನ್ಯೂನಿಜ್ ಆತನ ಪ್ರೀತಿಯ ಹೆಂಡತಿಯ ಹೆಸರು ಚಿನ್ನಾದೇವಿಯೆಂದು ಆಕೆಯ ಹೆಸರಿನಲ್ಲಿ ನಿರ್ಮಿಸಿದ ಪಟ್ಟಣದ ಹೆಸರು ನಾಗಲಾಪುರವೆಂದು ವಿಭಿನ್ನ ಹೆಸರುಗಳನ್ನು ನೀಡಿ ಸ್ವಲ್ಪ ಗೊಂದಲವನ್ನುಂಟುಮಾಡುತ್ತಾನೆ. ಈ ಕುರಿತು ಸ್ಯುವೆಲ್‌ರು ಸಮರ್ಪಕ ವಿವರಣೆ ನೀಡುವುದಿಲ್ಲ. ಆದರೆ, ಪರಿಶೀಲಿಸಿದಾಗ ಚಿನ್ನಾದೇವಿಯ ನಿಜ ಹೆಸರು ನಾಗಲಾದೇವಿಯೆಂದು ತಿಳಿಯುತ್ತದೆ.[12] ಅವಳ ಗೌರವಾರ್ಥ ನಿರ್ಮಿಸಿದ ನಗರಕ್ಕೆ ನಾಗಲಾಪುರವೆಂದು ಕರೆಯಲಾಯಿತು. ಸ್ಯುವೆಲ್‌ರವರು ವಿದೇಶಿ ಪ್ರವಾಸಿಗರ ಬರಹಗಳನ್ನಾಧರಿಸಿ ನಾಗಲಾಪುರವೇ ಇಂದಿನ ಹೊಸಪೇಟೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ಆದರೆ, ಅಲ್ಲಿನ ಅವಶೇಷಗಳು ವಿದೇಶಿ ಪ್ರವಾಸಿಗರಾದ ರಜಾಕ್, ಪಾಯಿಸ್ ಮತ್ತು ನೂನಿಜರ ಬರಹಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕೆಲವು ಅಂಶಗಳು ವ್ಯಕ್ತವಾಗುತ್ತವೆ.

ಪಾಯಿಸ್ ವಾಸ್ತವವಾಗಿ ತಿರುಮಲಾದೇವಿಯವರ ಪಟ್ಟಣದ ವಿವರ ನೀಡುತ್ತಾನೆ. ನ್ಯೂನಿಜ್ ನಾಗಲಾಪುರವನ್ನು ಕುರಿತು ವರ್ಣಿಸುತ್ತಾನೆ. ತಿರುಮಲಾದೇವಿಯವರ ಪಟ್ಟಣದ ನಿರ್ಮಾಣಕ್ಕೂ ಮುಂಚೆ ಅದೇ ಸ್ಥಳದಲ್ಲಿ (ಸಣ್ಣಕ್ಕಿ ವೀರಭದ್ರ ದೇವಾಲಯದ ಪ್ರದೇಶ) ಕಲ್ಯಾಣದ ಚಾಲುಕ್ಯ ಅಥವಾ ಕಳಚೂರಿ ಅರಸರ ಕಾಲಕ್ಕೆ ಸೇರುವ ಊರಿತ್ತು ಮತ್ತು ಅದು ಜೈನರ ನೆಲೆಯಾಗಿದ್ದಿರಬಹುದು. ಇದೇ ಊರು ಇಂದಿನ ಹೊಸಪೇಟೆಯ ಮೂಲನೆಲೆ. ಕೃಷ್ಣದೇವರಾಯನ ಕಾಲಕ್ಕೆ ನಿರ್ಮಾಣವಾದ ತಿರುಮಲಾದೇವಿಯವರ ಪಟ್ಟಣದ ತಿರುವೆಂಗಳನಾಥ ದೇವಾಲಯ ಬಹುಶಃ ವಿಜಯನಗರದ ಪತನದ ನಂತರ ಸಣ್ಣಕ್ಕಿ ವೀರಭದ್ರನ ದೇವಾಲಯವಾಗಿ ಪರಿವರ್ತನೆಯಾಗಿರುವ ಸಾಧ್ಯತೆ ಇದೆ. ಸಣ್ಣಕ್ಕಿ ವೀರಭದ್ರ ದೇವಾಲಯದ ಸುಖನಾಸಿಯ ದ್ವಾರಪಾಲಕರ ಉಬ್ಬುಶಿಲ್ಪಗಳು ವೈಷ್ಣವ ಸಂಪ್ರದಾಯಕ್ಕೆ ಸೇರಿವೆ. ದೇವಾಲಯದ ಹಿಂಭಾಗದಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪವಿರುವ ದ್ವಾರಾವಶೇಷಗಳು ಕಂಡುಬರುತ್ತವೆ. ಶಾಸನಗಳು ಮತ್ತು ದೇವಾಲಯಗಳ ಅವಶೇಷಗಳಿಂದಾಗಿ ಹೊಸಪೇಟೆಯ ನೈಋತ್ಯ ಭಾಗವೇ ತಿರುಮಲದೇವಿಯರ ಪಟ್ಟಣವೆಂದು, ಸಂಕ್ಲಾಪುರದಿಂದ ಪಶ್ಚಿಮಕ್ಕಿರುವ ಹೊಸಪೇಟೆಯ ಹಳೇ ವಸತಿ ಪ್ರದೇಶ (ಇಂದಿನ ವಡಕರಾಯಸ್ವಾಮಿ ದೇವಾಲಯದ ಪ್ರದೇಶ) ನಾಗಲಾಪುರವೆಂದು ಸ್ಪಷ್ಟವಾಗುತ್ತದೆ. ಹೆಚ್ಚು ಶಾಸನಗಳು ತಿರುಮಲಾದೇವಿಯ ಪಟ್ಟಣವನ್ನು ಪ್ರಸ್ತಾಪಮಾಡುತ್ತವೆ. ನಾಗಲಾಪುರವನ್ನು ಕುರಿತು ಸಂಕಲಾಪುರದ ಒಂದೇ ಒಂದು ಶಾಸನ ಗಡಿ ಕುರಿತು ಹೇಳುವಾಗ ಮಾತ್ರ ಪ್ರಸ್ತಾಪಿಸುತ್ತದೆ. ಸಣ್ಣಕ್ಕಿ ವೀರಭದ್ರ ದೇವಾಲಯದಿಂದ ನೈಋತ್ಯಕ್ಕೆ ಒಂದು ಫರ್ಲಾಂಗ್ ಅಂತರದಲ್ಲಿ ಹೆಚ್ಚು ಕಡಿಮೆ ವಿಜಯನಗರ

ಕಾಲಕ್ಕೆ ಸೇರುವ ಮುಸ್ಲಿಮರಿಗೆ ಸಂಬಂಧಿಸಿದ ಎರಡು ಗುಮ್ಮಟಗಳಿವೆ. ಇದು ತಿರುಮಲಾದೇವಿಯರ ಪಟ್ಟಣದ ಒಂದು ಭಾಗದಲ್ಲಿ ಮುಸ್ಲಿಮರು ವಾಸ್ತವ್ಯ ಹೂಡಿದ್ದರೆಂದು ಸ್ಪಷ್ಟವಾಗುತ್ತದೆ.

ಇನ್ನು ಸ್ಥಳೀಯ ಮಾಹಿತಿಗಳನ್ನು ಗಮನಿಸಿದಾಗ ದ್ವಾರಸಮುದ್ರದ ಅರಸನಾದ ಮೂರನೆಯ ಬಲ್ಲಾಳನು ತನ್ನ ಕೋಟೆಯ ರಕ್ಷಣೆಗಾಗಿ ಸುತ್ತಲೂ ಕಿರಾತ ಪಡೆಗಳನ್ನು ಸ್ಥಾಪಿಸಿದನೆಂದು ಅವೇ ಕಾಲಾನುಕ್ರಮದಲ್ಲಿ ಗ್ರಾಮಗಳಾದವೆಂದು ತಿಳಿದುಬರುತ್ತದೆ.[13] ಅವುಗಳೆಂದರೆ ಶ್ರೀ ಜಗಳೀಕಟ್ಟೆರಾಯನೆಂಬ ಆಂಜನೇಯ ಗುಡಿಯ ಹತ್ತಿರ ಜಗಳೀಕಟ್ಟೆ, ಬೈಲು ಹನುಮಪ್ಪನ ಗುಡಿಯ ಹತ್ತಿರ ಹಂದಿಗನೂರು, ಉತ್ತರಾದಿ ಮಠದ ಹತ್ತಿರ ವಿರೂಪಾಕ್ಷಪುರ, ಸಣ್ಣಕ್ಕಿ ವೀರಭದ್ರನ ಗುಡಿಯ ಹತ್ತಿರ ತಿರುಮಲಾಪುರ ಮತ್ತು ಶ್ರೀ ವೇಣುಗೋಪಾಲಕೃಷ್ಣ ದೇವಾಲಯದ ಹತ್ತಿರ ವಿಜಯಪುರ ಗ್ರಾಮಗಳು. ಮತ್ತೊಂದು ಮಾಹಿತಿಯಂತೆ ಹರಪನಹಳ್ಳಿಯ ಸೋಮಶೇಖರನಾಯ್ಕನ (1742–66) ಕಾಲದಲ್ಲಿ ಜಗಳೀಕಟ್ಟೆ, ವಿರೂಪಾಕ್ಷಪುರ, ವಿಜಯಪುರ, ನಾಗಲಾಪುರ ಮತ್ತು ಹಂದಿಗನೂರು ಗ್ರಾಮಗಳನ್ನು ಒಂದುಗೂಡಿಸಿ ಹೊಸ ಪೇಟೆಯನ್ನಾಗಿ ಪರಿವರ್ತಿಸಲಾಯಿತೆಂದು ತಿಳಿದುಬರುತ್ತದೆ.[14] ಹೊಸಪೇಟೆಯ ಹಳೆಯ ವಸತಿ ಸ್ಥಾನಗಳಲ್ಲಿ ಕೋಟೆಯ ಪ್ರದೇಶ ಮುಖ್ಯವಾಗಿದ್ದು ಬಹುಶಃ ವಿಜಯನಗರ ಕಾಲದ ನಾಗಲಾಪುರವೇ ಇದಾಗಿದೆ. ಇದರ ಮೇರೆಗಳು ಪೂರ್ವಕ್ಕೆ ಮುದಿಯಪ್ಪನಗುಡಿ ಉತ್ತರಕ್ಕೆ ಬಳ್ಳಾರಿ ದುರ್ಗಮ್ಮನ ಗುಡಿ, ಪಶ್ಚಿಮ ಮತ್ತು ದಕ್ಷಿಣದಲ್ಲಿ ಪ್ರಾಕಾರ ಗೋಡೆಯಿದ್ದು ಉತ್ತರದಲ್ಲಿ ಗೋಡೆಯ ಹೊರಗೆ ಕಬ್ಬೇರ, ಅಗಸ ಮತ್ತು ಕುರುಬರ ಕೇರಿಗಳಿವೆಯೆಂದು ಹೇಳಲಾಗುತ್ತದೆ. ಇಲ್ಲಿನ ದೇಸಾಯಿ ಮನೆತನದ ನರಸಪ್ಪನಿಗೆ ಸಹಾಯಕರಾಗಿದ್ದ 7000 ಬೇಡರಿಗೆ ಹೊಸಪೇಟೆ ಕೋಟೆಯ ಸುತ್ತಲೂ ವಾಸಿಸಲು ನಿವಾಸಗಳನ್ನು ಏರ್ಪಡಿಸಲಾಯಿತು. ನಂತರದ ಕಾಲದಲ್ಲಿ ಸಂಭವಿಸಿದ ಮಲೇರಿಯಾ ಕಾಯಿಲೆ ಪರಿಣಾಮವಾಗಿ ಸಮೀಪದ ಗ್ರಾಮಗಳಿಂದ ಎತ್ತರದ ಹೊಸಪೇಟೆಗೆ ಜನರ ವಲಸೆ ಬಂದಿತು ಹಾಗೂ ಪ್ಲೇಗ್‌ನಂತಹ ಕಾಯಿಲೆ ನಿಯಂತ್ರಣಕ್ಕೆ ಇಲ್ಲಿನ ಕೋಟೆಗಳನ್ನು ಕೆಡವಿ ಹಳ್ಳಕೊಳ್ಳಗಳನ್ನು ಮುಚ್ಚಲಾಯಿತು. ಇದರಿಂದಾಗಿ ಊರು ವಿಶಲವಾಗಿ ಬೆಳೆಯಲು ಅವಕಾಶವಾಯಿತು. ಸಮೀಪದ (ಮೇಲೆ ಹೇಳಿದ ಸ್ಥಳೀಯ ಮಾಹಿತಿಯಂತೆ) ವಿಜಯಪುರ ವಿರೂಪಾಕ್ಷಪುರ, ಹಂದಿಗನೂರು, ಮುದ್ದಲಾಪುರ, ಚಿತ್ತವಾಡ್ಗಿ, ಅಮರಾವತಿ ಗ್ರಾಮಗಳನ್ನು ಒಳಗೊಂಡು ಹೊಸಪೇಟೆ ವಿಶಾಲವಾಗಿ ಬೆಳೆಯಿತು.

ಸಣ್ಣಕ್ಕಿ ವೀರಭದ್ರ ದೇವಾಲಯದ ಪ್ರದೇಶದಲ್ಲಿ ವಿಜಯನಗರ ಪೂರ್ವದಿಂದಲೂ ಇದ್ದ ಊರು, ಅಲ್ಲಿಯೇ ವಿಜಯನಗರ ಕಾಲದಲ್ಲಿ ನಿರ್ಮಿಸಿದ ತಿರುಮಲಾದೇವಿಯರ ಪಟ್ಟಣ ಹಾಗೂ ಅದರ ಪೂರ್ವಕ್ಕೆ ನಿರ್ಮಿಸಿದ ನಾಗಲಾಪುರ ಪಟ್ಟಣಗಳು ಇಂದಿನ ಹೊಸಪೇಟೆಯ ಪ್ರಮುಖ ನೆಲೆಗಳೆಂದು ತಿಳಿಸುವುದೇ ಪ್ರಸ್ತುತ ಲೇಖನದ ಉದ್ದೇಶ. ನಂತರದ ಶತಮಾನಗಳಲ್ಲಿ ಕೋಟೆಯಾಚೆಗೆ ಬೆಳೆದ ಪೇಟೆಯು ಪ್ರಾಮುಖ್ಯ ಪಡೆಯಲಾಗಿ ಹೊಸದಾದ ಪೇಟೆಯನ್ನು ಹೊಸಪೇಟೆಯೆಂದು ಕರೆಯಲಾಯಿತು. ಮುಂದೆ ಇದೇ ಹೆಸರು ಇಡೀ ಊರಿಗೇ ಅನ್ವಯಿಸಿತು.

ಆಕರಸೂಚಿ

1. Robert Sewell, *A Forgotten Empire* (Vijayanagara), Asian Educational Services, Madras, 1992.
2. *Annual Report on Indian Epigraphy,* No. 122, 1980-81, Date about 12th century A.D., Hospet.
3. ರಾಬರ್ಟ್ ಸಿವೆಲ್: ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ, ಅನು: ಸದಾನಂದ ಕನವಳ್ಳಿ, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ, 1992, ಪು. 95–96.
4. ಈ ಭಾಗ ಇಂದಿನ ಹೊಸಪೇಟೆಯ ನೈಋತ್ಯ ಭಾಗವಾಗಿದ್ದು 'ನೆಹರು ಸಹಕಾರ ಕಾಲೋನಿ' ಎಂದು ಕರೆಯಲಾಗುತ್ತದೆ.
5. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂಪುಟ 4, ಸಂಖ್ಯೆ 255, ಕ್ರಿ.ಶ. 1513, ಹಂಪೆ. ಮುದಲಾಪುರವು ಮೊದಲಿಗೆ ಹೊಸೂರಿನ ಮಾಗಣೆಗೆ ಸೇರಿತ್ತು. ಮಾಗಣೆ ಎಂದರೆ ವಿಜಯನಗರ ಕಾಲದಲ್ಲಿನ ಆಡಳಿತದ ಸಣ್ಣ ಘಟಕವನ್ನು ಸೂಚಿಸುವ ಪದವಾಗಿದೆ.

6. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್. ಸಂಪುಟ 9, ಭಾಗ–2, ಸಂಖ್ಯೆ 539, ಕ್ರಿ.ಶ. 1531, ಹೊಸಪೇಟೆ.
7. ಅದೇ, ಸಂಖ್ಯೆ 573, ಕ್ರಿ.ಶ. 1535, ಹೊಸಪೇಟೆ.
8. ರಾಬರ್ಟ್ ಸಿವೆಲ್: ಪೂರ್ವೋಕ್ತ, ಪು. 264–266.
9. ಅದೇ, ಪು. 386–87.
10. ಎಪಿಗ್ರಾಫಿಯ ಇಂಡಿಕಾ, ಸಂಪುಟ 4, ಸಂಖ್ಯೆ 38, ಪು. 266, ಸಂಕಲಾಪುರ, ಹೊಸಪೇಟೆ ತಾಲ್ಲೂಕು.
11. ಸಂಕಲಾಪುರವು ಇಂದಿನ ಹೊಸಪೇಟೆಯ ಪೂರ್ವಕ್ಕಿದ್ದು ಬಳ್ಳಾರಿ ರಸ್ತೆಗೆ ಸಮೀಪದಲ್ಲಿದೆ.
12. ತೆಲುಗಿನ ಚಿನ್ನ ಎಂದರೆ ಕನ್ನಡದಲ್ಲಿ ಚಿಕ್ಕ ಎಂದರ್ಥ. ಕಿರಿಯ ರಾಣಿಯಾದ ನಾಗಲಾದೇವಿಯನ್ನು ಪ್ರೀತಿಯಿಂದ ಚಿನ್ನದೇವಿ (ಚಿಕ್ಕದೇವಿ) ಎಂದು ಕರೆದಿರಬಹುದು.
13. ಸುವರ್ಣ ಪುಷ್ಪಾಂಜಲಿ, ಹೊಸಪೇಟೆಯ ಪುರಸಭೆ ಸುವರ್ಣ ಮಹೋತ್ಸವ ನೆನಪಿನ ಸಂಪುಟ, 1964, ಪು. 15.
14. ಅದೇ, ಪು. 17.

28

ಹಂಪೆಯ ಶಾಸನೋಕ್ತ ಬಾವಿಗಳು

ಡಾ॥ ಹನಮಂತ ಮೇಲಿನಮನಿ

ವಿಜಯನಗರ ಸಾಮ್ರಾಜ್ಯದ ಬಹುಪಾಲು ಭೂಪ್ರದೇಶವು ಅಲ್ಪಾವಧಿಯ ಮುಂಗಾರು ಮಳೆಯ ಮೇಲೆ ಅವಲಂಬಿಸಿದುದಾಗಿತ್ತು. ತುಂಗಭದ್ರೆ ಹಾಗೂ ಕಾವೇರಿ ಎರಡೇ ಸರ್ವಋತು ನದಿಗಳಾಗಿದ್ದು, ಮಿಕ್ಕ ನದಿಗಳು, ಹಳ್ಳಗಳು ಕೇವಲ ಮಳೆಗಾಲದಲ್ಲಿ ಹರಿಯುತ್ತಿದ್ದವು. ಈ ಕಾರಣದಿಂದಾಗಿ ನೀರಾವರಿ ಕಾರ್ಯಗಳಿಗಾಗಿ ಅಂದಿನವರು ಅಂತರ್ಜಲ ಮೂಲಗಳನ್ನು ಅವಲಂಬಿಸಬೇಕಾಯಿತು. ಪ್ರಾದೇಶಿಕ ವೈಶಿಷ್ಟ್ಯಗಳಿಗೆ ಅನುಗುಣವಾಗಿ ಬಾವಿಗಳನ್ನು ಅಗೆದು ಬೇಸಾಯಕ್ಕೆ ಬಳಸಿಕೊಂಡರು. ಈ ವಿಧವಾದ ಬಾವಿ ನೀರಾವರಿಯಿಂದ ಒಂದರಿಂದ ಇಪ್ಪತ್ತು ಎಕರೆ ಭೂಮಿಗೆ ನೀರುಣಿಸಬಹುದಾಗಿತ್ತು. ಹೀಗಾಗಿ ನದಿ ಮತ್ತು ಕಾಲುವೆಗಳಿಂದ ದೂರದಲ್ಲಿರುವ ಪ್ರದೇಶಗಳಲ್ಲಿ ನೂರಾರು ಬಾವಿಗಳು ತಲೆ ಎತ್ತಿದವು.

ಬಾವಿ ಕಟ್ಟಿಸುವುದು ಪುಣ್ಯದ ಕೆಲಸವೆಂಬ ಭಾವನೆ ಅಂದಿನ ಜನರಲ್ಲಿತ್ತು. ಅದಕ್ಕಾಗಿ ಲಕ್ಷ್ಮೀಧರಾಮಾತ್ಯನ ಶಾಸನ[1]ದಲ್ಲಿ –

"ಕೆಱೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿ ಸಜ್ಜೆಱೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ..." ಎಂಬ ಮಾತಿದೆ. ಈ ಮಾತಿಗೆ ಅನುಗುಣವಾಗಿ ಜನರ ಉಪಯೋಗಕ್ಕಾಗಿ ಇಲ್ಲಿ ಹಲವಾರು ಬಾವಿಗಳು ನಿರ್ಮಾಣವಾಗಿವೆ. ಬಾವಿಗಳ ರಚನೆಯ ಉದ್ದೇಶ: (ಅ) ನೀರಾವರಿ, (ಆ) ಜನರಿಗೆ ಕುಡಿಯಲು, ಮತ್ತು (ಇ) ದೇವರ ಪೂಜೆಗೆ.

(ಅ) ನೀರಾವರಿ: ವ್ಯವಸಾಯಕ್ಕಾಗಿ ಹಂಪೆ ಪ್ರದೇಶದಲ್ಲಿ ಬಾವಿಗಳು ನಿರ್ಮಾಣಗೊಂಡಿರುವುದನ್ನು ಅಲ್ಲಿನ ಶಾಸನಗಳು ಹೀಗೆ ಉಕ್ತ ಮಾಡಿವೆ:

ಏತದ ಬಾವಿ/ಹೊಲ ಸೀಮೆಬಾವಿ: ಕಪಿಲೆಯ ಇನ್ನೊಂದು ರೂಪ ಏತ. ಇವು ಹಲವಾರು ರೂಪದಲ್ಲಿ ವ್ಯವಸಾಯಕ್ಕೆ ನೀರುಣಿಸುವ ಕಾರ್ಯಮಾಡುತ್ತಿದ್ದವು. ಹೀಗಾಗಿ "ಬಾವಿ ನೀರಾವರಿಯ ವ್ಯವಸ್ಥೆಯಲ್ಲಿ ಏತಗಳು ಅನಿವಾರ್ಯವಾಗಿದ್ದವು."[2] ವಿಜಯನಗರ ಕಾಲದಲ್ಲಿಯೂ ಏತಗಳ ಮೂಲಕ ನೀರಾವರಿ ಚಟುವಟಿಕೆಗಳು ನಡೆಯುತ್ತಿದ್ದವೆಂಬುದನ್ನು ಕಪಿಲಾಶ್ರಮದ ಬಳಿಯ ಒಂದು ಶಾಸನ ತಿಳಿಸುತ್ತದೆ. ಈ ತ್ರುಟಿತ ಶಾಸನದಲ್ಲಿ '.....ದೆಸೆಯಲು ಮಲ್ಲನ ಮೆದೆ ಯೇತದ ಬಾವಿ.......'[3] ಎಂಬುದು ಮೇಲಿನ ಮಾತಿಗೆ ಪುಷ್ಟಿಯನ್ನೀಯುತ್ತದೆ.

ಈ ಶಾಸನದಲ್ಲಿ ಏತದ ಬಾವಿಯಲ್ಲದೆ ಹೊಲ ಸೀಮೆಯ ಬಾವಿ, ಕಪಿಲೆಯ ಬಾವಿ ಮತ್ತು ಇನ್ನೂ ಕೆಲವು ಹೆಸರಿಲ್ಲದ ಬಾವಿಗಳ ಉಲ್ಲೇಖ ಕಂಡುಬರುತ್ತವೆ. ಈ ಬಾವಿಗಳಿಂದ ನೀರನ್ನು ವ್ಯವಸಾಯಕ್ಕೆ ಬಳಸುತ್ತಿದ್ದರೆಂದು ತಿಳಿಯುತ್ತದೆ. ಆದರೆ ಈ ಬಾವಿಗಳು ಈಗ ಅಸ್ತಿತ್ವದಲ್ಲಿಲ್ಲ.

(ಅ) **ಕುಡಿಯುವ ನೀರಿಗಾಗಿ** : ಸಾರ್ವಜನಿಕರ ಉಪಯೋಗಕ್ಕಾಗಿ ಹಂಪೆ ಪ್ರದೇಶದಲ್ಲಿ ಕೆಲವು ಬಾವಿಗಳು ನಿರ್ಮಾಣಗೊಂಡಿದ್ದವು. ಅಲ್ಲಿಯ ಶಾಸನಗಳು ಅವುಗಳನ್ನು ಪ್ರಸ್ತಾಪಿಸಿವೆ. ಅವು:

ಮಹಾದೇವಿಯಕ್ಕ ಬಾವಿ: ವಿರೂಪಾಕ್ಷ ಪೇಟೆಯ ಕೊನೆ; ನಂದಿ ಮಂಟಪದ ದಕ್ಷಿಣಕ್ಕೆ ಬಂಡೆಯ ಮೇಲಿನ ಒಂದು ಶಾಸನ[4] "ಮಹಾದೇವಿಯಕ್ಕ ಬಾವಿ" ಮತ್ತು "ಕೆಳಬಾವಿ"ಯನ್ನು ಉಲ್ಲೇಖಿಸಿದೆ. "ದೊಡ್ಡ ಗುಂಡೊಂದು ಈ ಬಾವಿಯನ್ನು ಭಾಗಶಃ ಮುಚ್ಚಿದೆ"[5] ಎಂದು ಹೇಳಲಾಗಿದೆಯಾದರೂ ಈಗ ಈ ಬಾವಿ ಪೂರ್ತಿ ಮುಚ್ಚಿಹೋಗಿದೆ. ಮೊದಲ ಬಾವಿಯನ್ನು ಮಹಾದೇವಿಯಕ್ಕ ಎಂಬುವಳು ಕಟ್ಟಿಸಿರಬೇಕು. ಆದ್ದರಿಂದ ಅದಕ್ಕೆ ಆ ಹೆಸರು ಬಂದಿರಬಹುದು. ಇದರ ಕೆಳಗೆ ಇದ್ದಿರಬಹುದಾದ ಬಾವಿಯನ್ನು 'ಕೆಳಬಾವಿ' ಎಂದು ಶಾಸನದಲ್ಲಿ ಕರೆಯಲಾಗಿದೆ. ಇದು ಇಂದು ಕಾಣಸಿಗುವುದಿಲ್ಲ.

ಬಿಳಿಯ ಬಾವಿ: ವಿಠಲಸ್ವಾಮಿದೇವಾಲಯದ ಮುಂದಿರುವ ಮಂಟಪದ ದಕ್ಷಿಣ ಗೋಡೆಯಲ್ಲಿ ಕ್ರಿ.ಶ. 1513ರ ಒಂದು ಶಾಸನ[6] '...ಕಂಪಿಲೆಯ ಮಾಗಣೆಯಲ್ಲೂ ಸಾಯಣಾಪುರದ ಗ್ರಾಮ ೧ ಗುಡದ ಸೀಮೆಲೂ ಬಿಳಿಯ ಬಾ[ವಿ]ಯ....' ಎಂದು ಉಲ್ಲೇಖಿಸುತ್ತದೆ. ಈ ಬಾವಿ ಇಂದು ಕಾಣಸಿಗುವುದಿಲ್ಲ.

ನಾಡದ ಬಾವಿ/ಕಪಿಲೆಯ ಬಾವಿ: ಕಮಲಾಪುರದಲ್ಲಿರುವ ಕೇಂದ್ರ ಪ್ರಾಚ್ಯವಸ್ತು ಸಂಗ್ರಹಾಲಯದ ಬಳಿ ರಸ್ತೆ ಬದಿಯಲ್ಲಿರುವ ಗುಂಡಿನಲ್ಲಿರುವ ಕ್ರಿ.ಶ. 1531ರ ಒಂದು ಶಾಸನ[7] ".....ಕುಂತೂರ ಎತಿರಾಯ ದೇವಗಳ ಮಕ್ಕಳು ವಲ್ಲಭಯಗಳೂ ಅಗಸಿದ ನಾಡದ ಬಾವಿ ಕೊಂಡ[ಮರ] ಸಯನವರು ಅಗಸಿದ ಕಪಿಲೆಯ ಭಾವಿ...." ಎಂದಿದೆ. ಇದರಿಂದ 'ನಾಡದ ಬಾವಿ'ಯನ್ನು ಕುಂತೂರ ಯತಿರಾಜ ದೇವನ ಮಗ ವಲ್ಲಭಯ ಕಟ್ಟಿಸಿದರೆ, 'ಕಪಿಲೆಯ ಬಾವಿ'ಯನ್ನು ಕೊಂಡಮರಸಯ್ಯ ಕಟ್ಟಿಸಿದನೆಂದು ತಿಳಿಯುತ್ತದೆ. ಕಪಿಲಾಶ್ರಮ ಬಳಿಯ ಶಾಸನ[8]ವು ಕೂಡ 'ಕಪಿಲೆಯ ಬಾವಿ'ಯನ್ನು ಉಲ್ಲೇಖಿಸುತ್ತದೆ. ಬಹುಶಃ ಈ ಬಾವಿ ಕಪಿಲಾಶ್ರಮದ ಪಕ್ಕದಲ್ಲೇ ಇದ್ದಿರಬೇಕು. ಹೀಗಾಗಿ ಆಶ್ರಮದ ಹೆಸರೇ ಈ ಬಾವಿಗೆ ಬಂದಿರಬಹುದು. ಈ ಬಾವಿಯೂ ಈಗ ಕಾಣಸಿಗುವುದಿಲ್ಲ.

ಅಗಸರ ಬಾವಿ : ಕ್ರಿ.ಶ. 1559ರ ಒಂದು ಶಾಸನ (ಹಂಪಿ 191) ".... ವಿಠಲಕ್ಕೆ ಬಹದಾರಿ ಮೇರೆ ಪಡವಲೂ ತೇರಬೀದಿ ಮೇರೆ ಬಡಗಲೂ ಅಗಸರ ಬಾವಿ ಬಳಿಯ......" ಎಂದು ಉಲ್ಲೇಖಿಸಿದೆ. ವಿಠಲ ದೇವಾಲಯದ ತೇರು ಬೀದಿಯ (ಬಡಗಲೂ) ಉತ್ತರಕ್ಕೆ ಈ ಬಾವಿ ಇತ್ತೆಂದು ಶಾಸನದಿಂದ ತಿಳಿದುಬರುತ್ತದೆ. ಬಹುಶಃ ಅಗಸರು ಬಟ್ಟೆಯನ್ನು ತೊಳೆಯಲು ಈ ಬಾವಿ ನೀರನ್ನು ಬಳಸುತ್ತಿದ್ದರೆಂದು ತೋರುತ್ತದೆ. ಹೀಗಾಗಿ ಈ ಬಾವಿಗೆ ಅಗಸರ ಬಾವಿ ಎಂಬ ಹೆಸರು ಬಂದಿರಬಹುದು. ಆದರೆ ಈ ಬಾವಿ ಈಗ ಕಾಣಸಿಗುವುದಿಲ್ಲ.

(ಇ) **ದೇವಪೂಜೆಗೆ** ಬೇಕಾಗುವ ನೀರಿಗಾಗಿ ಹಲವು ಬಾವಿಗಳು ಹಂಪೆ ಪ್ರದೇಶದಲ್ಲಿ ನಿರ್ಮಾಣಗೊಂಡಂತೆ ತೋರುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿಯ ಶಾಸನಗಳು ಪ್ರಸ್ತಾಪಿಸುತ್ತವೆ.

ಅಶ್ವತ್ಥ ಬಾವಿ: ಈಗಿನ ಗಾಯತ್ರೀಪೀಠದ ದಕ್ಷಿಣಕ್ಕಿರುವ ದಾರಿಯ ಪಕ್ಕದಲ್ಲಿರುವ ಗುಂಡಿನ ಮೇಲಿನ ಕ್ರಿ.ಶ. 1390ರ ಒಂದು ಶಾಸನ[9] "....... ಕ್ರಿಯಾಶಕ್ತಿವೊಡೆಯರ ಸಿಷ್ಯ ಭಕ್ತರ ನಾಗಪ್ಪಗಳು ಮಾಡಿಸಿದಂಥಾ ವಿನಾಯಕ ಅಶ್ವತ್ಥ ಬಾಪಿಯನೂ....." ಎಂದಿದೆ. ಈ ಬಾವಿಯನ್ನು ಕ್ರಿಯಾಶಕ್ತಿವೊಡೆಯರ ಶಿಷ್ಯ ಭಕ್ತರ ನಾಗಪ್ಪ ಎಂಬುವವನು ಕಟ್ಟಿಸಿದನೆಂದು ಶಾಸನ ಹೇಳುತ್ತದೆ. ಈ ಬಾವಿಯಲ್ಲದೆ ಇವನು ವಿನಾಯಕನ ಮೂರ್ತಿಯನ್ನು ಮಾಡಿಸಿದನೆಂದು ತಿಳಿಸುತ್ತದೆ. ಈ ಬಾವಿ ವಿನಾಯಕನ ಪೂಜೆಗಾಗಿ ಭಕ್ತರ ನಾಗಪ್ಪ ಮಾಡಿಸಿರಬಹುದು. ಆದರೆ ಈ ಬಾವಿ ಈಗ ಕಾಣಸಿಗುವುದಿಲ್ಲ.

ಅರೆ ಶಂಕರ ಬಾವಿ: ಈತ ತಳವಾರ ಘಟ್ಟ ಬಾಗಿಲೆಂದು ಕರೆಯುವ ಬಾಗಿಲಿನ ಮೂಲ ಹೆಸರು 'ಅರೆಶಂಕರ ಬಾಗಿಲು'. ವಿಠಲದೇವಾಲಯದ ಗರ್ಭಗೃಹದ ಪಶ್ಚಿಮ ಅಧಿಷ್ಠಾನದಲ್ಲಿರುವ ಕ್ರಿ.ಶ. 1559ರ ಒಂದು ಶಾಸನ[10]

'..... ವಿಜಯ ನಾಗರಕ್ಕೆ ಬಹ ದಾರಿ ಮೇರೆ ತೆಂಕಲೂ' ಅಜೆ ಶಂಖರನ ಬಾವಿ ಬಾಗಿಲಿಂದ...' ಎಂದಿದೆ. ಮೇರೆಯನ್ನು ಹೇಳುವ ಸಂದರ್ಭದಲ್ಲಿ ಈ ಬಾವಿಗಳ ಪ್ರಸ್ತಾಪ ಬಂದಿದೆ. ಅರೆಶಂಕರನ ಪೂಜೆಗಾಗಿ ಈ ಬಾವಿ ನಿರ್ಮಿತವಾಗಿರಬೇಕು. ಈ ಬಾವಿಗೆ ಬಾಗಿಲಿತ್ತೆಂದು ಶಾಸನ ಹೇಳುತ್ತದೆ. ಆದರೆ ಇಂದು ಈ ಬಾವಿ ಕಂಡುಬರುವುದಿಲ್ಲ.

ಬೆನಕನ ಬಾವಿ: ಅರಮನೆಯ ಪ್ರದೇಶದಿಂದ ಮಾತಂಗ ಪರ್ವತಕ್ಕೆ ಹೋಗುವ ಕಾಲುದಾರಿಯ ಕಣಿವೆಯಲ್ಲಿ ದೇವಾಲಯದ ಹಿಂಬದಿಗೆ ದೊಡ್ಡ ಗುಂಡಿನಲ್ಲಿರುವ ಕ್ರಿ.ಶ. 1411ರ ಒಂದು ಶಾಸನ[11] "...ರುಕು ಶಾಖೆಯ ಭಾರದ್ವಾಜ ಗೋತ್ರದ ನಿರಾಕಾರದ ನರಹರಿದೇವಗಳ ಮಕ[ಳು] ದೇವರಾಯರು ಕಟಿಸಿದ ಬ್ಯನಕನ್ನ ಬಾವಿ ಧರ್ಮಾ..." ಎಂದು ಉಲ್ಲೇಖಿಸಿದೆ. ಈ ಬಾವಿ ಚಿಕ್ಕದಿದ್ದು, ಮೆಟ್ಟಿಲುಗಳನ್ನು ಹೊಂದಿದೆ. ಶಾಸನದ ಪಕ್ಕದಲ್ಲಿ ಗಣೇಶನ ಅಪೂರ್ಣವಾದ ಶಿಲ್ಪವಿದೆ. ಹೀಗಾಗಿ ಈ ದೇವರ ಹೆಸರೇ ಈ ಬಾವಿಗೆ ಬಂದಿರಬೇಕು. ಈ ಬಾವಿ ಬೆನಕನ ಪೂಜೆಗಾಗಿ ನೀರು ತರಲು ನಿರ್ಮಾಣವಾಗಿರಬೇಕು. ಈಗ ಈ ಬಾವಿ ಜೀರ್ಣಾವಸ್ಥೆಯಲ್ಲಿ ಇಂದಿಗೂ ಅಸ್ತಿತ್ವದಲ್ಲಿದೆ.

ಲಿಂಗ ಬಾವಿ : ಬೇಟೆಕಾರರ ಹೆಬ್ಬಾಗಿಲಿನ ಈಶಾನ್ಯಕ್ಕೆ ಶಿಥಿಲವಾದ ದೇವಸ್ಥಾನದ ಉತ್ತರಗೋಡೆಯಲ್ಲಿರುವ ಗುಂಡಿನ ಮೇಲಿರುವ ತೆಲುಗು ಭಾಷೆಯ ಒಂದು ಶಾಸನ[12] 'ಲಿಂಗ್ಗಬಾವಿ ಬಸವಂಣೊಡೆಯಲಸ್ಥರಂ ಸ್ವರಜನಲಕುಂನು ಮೇಲುಕೊರು ಕಟಿಪಾದ' ಎಂದು ಲಿಂಗ ಬಾವಿಯನ್ನು ಉಲ್ಲೇಖಿಸುತ್ತದೆ. ಇದೇ ಶಾಸನದ ಹತ್ತಿರ ಬಾವಿಗೆ ಕಟ್ಟಲಾದ[5] ಕಲ್ಲಿನ ಮೇಲಿರುವ ಶಾಸನವು ಕೂಡ 'ಲಿಂಗಬಾವಿ'ಯನ್ನು ಉಲ್ಲೇಖಿಸುತ್ತದೆ. ಬಹುಶಃ ಈ ಬಾವಿ ತಾನು ಹೊಂದಿದ ದೇವರನ್ನು ಸೂಚಿಸುತ್ತದೆ. ಈ ಬಾವಿ ಈಗ ಕಾಣಸಿಗುವುದಿಲ್ಲ.

ರಂಗನಾಥ ಬಾವಿ : ಮಾಲ್ಯವಂತ ದೇವಾಲಯದ ಉತ್ತರಕ್ಕಿರುವ ಗುಂಡಿನ ಮೇಲಿನ ಒಂದು ತೆಲುಗು ಶಾಸನ[13] 'ರುದಿರೋದ್ಗಾರಿ ತಿರಿವಿದಿ ಚೆಟಿನಾಗಿನೆನಿ ಕೊಮಾರುಂಡು ಚಿಂನಪನಾಯಂಡು ಕಟಿಂಚಿನ ರಂಗನಾತನಿ ಬಾವಿ ಶ್ರೀ', ಎಂದು "ರಂಗನಾಥನ ಬಾವಿ"ಯನ್ನು ಉಲ್ಲೇಖಿಸುತ್ತದೆ. ಇದನ್ನು ತಿರಿವಿದಿ ಚೆಟಿನಾಗಿನೇನಿಯ ಮಗ ಚಿನ್ನನಾಯಂಡು ಕಟ್ಟಿಸಿದನೆಂದು ಆ ಶಾಸನ ಹೇಳುತ್ತದೆ. ಈ ಶಾಸನದ ಆಗ್ನೇಯಕ್ಕಿರುವ ಬಾವಿಯೇ 'ರಂಗನಾಥ ಬಾವಿ'ಯಾಗಿರಬೇಕು.[14] ಬಹುಶಃ ಈ ಬಾವಿ ರಂಗನಾಥ ದೇವರ ಪೂಜೆ ಪುನಸ್ಕಾರಕ್ಕಾಗಿಯೇ ಕಟ್ಟಿಸಿದಾಗಿರಬೇಕು. ಈಗ ಈ ಬಾವಿ ಸಂಪೂರ್ಣವಾಗಿ ಹಾಳಾಗಿದೆ. ಅದರ ಅವಶೇಷಗಳು ಮಾತ್ರ ಕಾಣಸಿಗುತ್ತವೆ.

ಮೇಲ್ಕಾಣಿಸಿದ ಹೆಸರುಳ್ಳ ಬಾವಿಗಳಲ್ಲದೆ ಇನ್ನೂ ಕೆಲವು ಹೆಸರಿಲ್ಲದ ಬಾವಿಗಳು ಹಂಪೆಯ ಶಾಸನಗಳಲ್ಲಿ ಕಂಡುಬರುತ್ತವೆ. ಅಹಮದ್‌ಖಾನ್ ಧರ್ಮಶಾಲೆಯ ಮುಂಭಾಗದ ತೊಲೆಯ ಮೇಲಿನ ಒಂದು ಶಾಸನವು ಧರ್ಮಶಾಲೆ ಮತ್ತು ಪಕ್ಕದಲ್ಲಿರುವ ಬಾವಿಯನ್ನು ಉಲ್ಲೇಖಿಸುತ್ತದೆ.[15] ಈ ಧರ್ಮ ಶಾಲೆ ಹಾಗೂ ಬಾವಿಯ ಕಾರ್ಯಕ್ಕೆ ದಾನ ನೀಡಿದವನು ಅಹಮದಖಾನ್ ಎಂಬ ಓರ್ವ ಮುಸ್ಲಿಂ ಅಧಿಕಾರಿ. ಇದನ್ನು ಸಾರ್ವಜನಿಕ ಸೌಖ್ಯಕ್ಕಾಗಿ ಹಾಗೂ ಅವನ ಒಡೆಯನಾದ ಎರಡನೆಯ ದೇವರಾಯನ ಪುಣ್ಯಸ್ಮರಣೆಗಾಗಿ ಕ್ರಿ.ಶ. 1439ರಲ್ಲಿ ನಿರ್ಮಿಸಿದ. ಈ ಬಾವಿ ಇಂದಿಗೂ ಅಸ್ತಿತ್ವದಲ್ಲಿದೆ.

ಅಹಮದ್‌ಖಾನ್ ಧರ್ಮಶಾಲೆಯ ಪಶ್ಚಿಮಕ್ಕೆ ಬೆಟ್ಟದ ಮೇಲಿರುವ ಬಾವಿಯನ್ನು ದೇವರಪಲ್ಲಿ ಮುಮ್ಮಡಿಸೆಟ್ಟಿಗೆ ಪುಣ್ಯವಾಗಲೆಂದು ನಂಜೆದೇವರ ನಿರಾಸಿಮಠಕ್ಕೆ ದಾನ ಮಾಡಿದ್ದು ಬಾವಿಯ ಪಕ್ಕದಲ್ಲಿರುವ ಶಾಸನದಿಂದ ತಿಳಿಯುತ್ತದೆ.[16]

ಅಹಮದ್‌ಖಾನ್ ಧರ್ಮಶಾಲೆ ಮತ್ತು ಕೃಷ್ಣದೇವಾಲಯದ ದಾರಿ ಮಧ್ಯದ ಬಂಡೆಯ ಮೇಲಿನ ಶಾಸನವು ಮತ್ತೊಂದು ಬಾವಿಯನ್ನು ಕಬಿರಾವುತನ ಮಗ ಪಿಲಿಕುಂಚಲಕನು ಬಯಿರಾವುತನಿಗೆ ಕೊಟ್ಟದ್ದನ್ನು ಉಲ್ಲೇಖಿಸುತ್ತದೆ.[17]

ಮಾಲ್ಯವಂತ ಪರ್ವತದ ಈಶಾನ್ಯಕ್ಕೆ ತುರ್ತು ಕಾಲುವೆಯ ಬಲದಂಡೆಯ ಒಡ್ಡಿನ ಮೇಲಿನ ಗುಂಡಿನ ಮೇಲಿರುವ ಶಾಸನ[18] (ಕ್ರಿ.ಶ. 1558) ಒಂದು ಬಾವಿಯನ್ನು ಉಲ್ಲೇಖಿಸುತ್ತದೆ.

ಒಟ್ಟಾರೆ, ಹಂಪೆ ಪ್ರದೇಶದ ಬಾವಿಗಳು ನೀರಾವರಿಗಾಗಿ, ಕುಡಿಯುವ ನೀರಿಗಾಗಿ, ದೇವರ ಪೂಜಾದಿಗಳಿಗಾಗಿ ನಿರ್ಮಿಸಲಾಗಿದ್ದವು. ಹಂಪೆಯ ಗಣೇಶ ಗುಡಿಯ ಮುಂಭಾಗದ ಮಂಟಪದಲ್ಲಿರುವ ನಿಲ್ಲಿಸಿರುವ ಶಾಸನವು ಬಾವಿಗಳನ್ನು ಕಟ್ಟಿಸುವುದು ಒಂದು ಪುಣ್ಯ ಕಾರ್ಯವೆಂದೇ ನಿರೂಪಿಸಿದೆ.

ಆಧಾರಸೂಚಿ

1. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 3* (ಹಂಪಿ ಶಾಸನಗಳು), ದೇವರಕೊಂಡಾರೆಡ್ಡಿ (ಸಂ.), ಶಾ.ಸಂ. 69, ಸಾಲು 46–47.
2. ಸಿ.ಟಿ.ಎಂ. ಕೊಟ್ರಯ್ಯ (ಮೂಲ), ಎಂ. ಧ್ರುವ ನಾರಾಯಣ (ಅನು.): ವಿಜಯನಗರ ಸಾಮ್ರಾಜ್ಯ ನೀರಾವರಿ ವ್ಯವಸ್ಥೆ, ಪು. 91.
3. ದೇವರಕೊಂಡಾರೆಡ್ಡಿ (ಸಂ.): ಅದೇ, ಪು. 282, ಶಾ.ಸಂ. 398.
4. ಅದೇ, ಪು. 93, ಶಾ.ಸಂ. 106.
5. ವಿಜಯನಗರ ಅಧ್ಯಯನ ಸಂಪುಟ 1, (ಸಂ.), ಡಾ. ಡಿ.ವಿ. ದೇವರಾಜ್, ಡಾ. ಸಿ.ಎಸ್. ಪಾಟೀಲ, ಪು. 68.
6. ಪೂರ್ವೋಕ್ತ, ಪು. 162, ಶಾ.ಸಂ. 208.
7. ಅದೇ, ಪು. 233, ಶಾ.ಸಂ. 322.
8. ಅದೇ.
9. ಅದೇ, ಪು. 52, ಶಾ.ಸಂ. 61.
10. ಅದೇ, ಪು. 146, ಶಾ.ಸಂ. 191.
11. ಅದೇ, ಪು. 217, ಶಾ.ಸಂ. 296.
12. ಅದೇ, ಪು. 262, ಶಾ.ಸಂ. 366.
13. ಅದೇ, ಪು. 263, ಶಾ.ಸಂ. 369.
14. D.V. Devaraj: *Vijayanagar Progress of Research,* 1984-87, I, No. 110, P.No. 51. "To the South-East of the inscription is a small well, which can be identified as the well of Ranganath."
15. ಪೂರ್ವೋಕ್ತ, ಪು. 224, ಶಾ.ಸಂ. 311.
16. ಅದೇ, ಪು. 249, ಶಾ.ಸಂ. 342.
17. ಅದೇ, ಪು. 223, ಶಾ.ಸಂ. 309.
18. ಅದೇ, ಪು. 269, ಶಾ.ಸಂ. 382.

ಹಂಪಿ ಪ್ರದೇಶದ ಲೋಹಶಾಸ್ತ್ರ ಕಲೆ

ಡಾ॥ ವಾಸುದೇವ ಬಡಿಗೇರ

ಭೂಮಿಯ ಮೇಲೆ ಮಾನವ ಜೀವಿ ಉಗಮಗೊಂಡು ಕ್ರಮೇಣ ಆತನ ಕಾರ್ಯಚಟುವಟಿಕೆಗಳು ಅಭಿವೃದ್ಧಿಹೊಂದುತ್ತಾ ಬಂದವು. ಈ ಕಾರ್ಯದಲ್ಲಿ ಬರವಣಿಗೆಯ ಹಂತಕ್ಕೆ ತಲುಪಿದಾಗ ಅದನ್ನು ಇತಿಹಾಸ ಕಾಲವೆಂದೂ, ಅದರ ಮೊದಲಿನ ಹಂತವನ್ನು ಪ್ರಾಗಿತಿಹಾಸ ಕಾಲವೆಂದೂ ಕರೆಯಲಾಯಿತು. ಪ್ರಾಗಿತಿಹಾಸ ಕಾಲದಲ್ಲಿ ಮಾನವನು ನದಿ–ಹಳ್ಳಗಳ ಪಕ್ಕದಲ್ಲಿ, ಕಾಡು ಬೆಟ್ಟಗಳಲ್ಲಿ ವಾಸವಾಗಿದ್ದನು. ಆತನ ಜ್ಞಾನ, ಉತ್ಪಾದಿಸುವ ವಸ್ತುಗಳು ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ಈ ಸುದೀರ್ಘವಾದ ಅವಧಿಯನ್ನು ಆದಿಶಿಲಾಯುಗ, ಮಧ್ಯಶಿಲಾಯುಗ, ನವಶಿಲಾಯುಗ, ಶಿಲಾ ತಾಮ್ರಯುಗ ಹಾಗೂ ಕಬ್ಬಿಣ–ಬೃಹತ್ ಶಿಲಾಯುಗವೆಂದು ವಿಂಗಡಿಸಲಾಯಿತು. ನವಶಿಲಾಯುಗ ಸಂಸ್ಕೃತಿಯಲ್ಲಿ, ತಾವು ವಾಸವಾಗಿರುವ ಭೌಗೋಳಿಕ ಲಕ್ಷಣಗಳಿಗೆ ಹೊಂದಿಕೊಂಡಂತೆ ಒಂದು ಗುಂಪಿನವರು ಪಶುಪಾಲನೆಯನ್ನು ಮತ್ತೊಂದು ಗುಂಪಿನವರು ಕೃಷಿಯನ್ನು ಆರಂಭಿಸಿದರು. ಈ ಯುಗದ ಕೊನೆಯ ಹಂತದಲ್ಲಿ ಅದಿರಿನಿಂದ ತಾಮ್ರವನ್ನು ತಯಾರಿಸುವ ಕಲೆಯನ್ನು ಕಂಡುಕೊಂಡರು. ಅನಂತರ ಕಬ್ಬಿಣದ ಉತ್ಪಾದನೆಯು ಆರಂಭವಾಯಿತು. ತಾಮ್ರ, ಕಬ್ಬಿಣದ ತಯಾರಿಕೆಯಿಂದ ಜನಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು.

ಕಬ್ಬಿಣ ಉತ್ಪಾದನೆಯ ಪ್ರಾಚೀನತೆ

ಅದಿರನ್ನು ಕರಗಿಸಿ ತಾಮ್ರ, ಚಿನ್ನವನ್ನು ಪಡೆಯುವ ಕಲೆ, ಕಬ್ಬಿಣಕ್ಕಿಂತಲೂ ಪ್ರಾಚೀನವಾದುದು. ಇದಕ್ಕೆ ಕಾರಣ ತಾಮ್ರವನ್ನು 1200 ಡಿಗ್ರಿ ಸೆಲ್ಸಿಯಸ್ ಕಡಿಮೆ ಶಾಖದಲ್ಲಿ ಕರಗಿಸಬಹುದು. ಆದರೆ ಕಬ್ಬಿಣವನ್ನು ಕರಗಿಸಲು 1800 ಡಿಗ್ರಿ ಸೆಲ್ಸಿಯಸ್ ಶಾಖ ಬೇಕಾಗುತ್ತದೆ. ಇಷ್ಟೊಂದು ಶಾಖವನ್ನು ಉತ್ಪನ್ನಗೊಳಿಸಬಲ್ಲಂತಹ ತಿದಿಗಳನ್ನು ತಯಾರಿಸುವುದು ಆ ಜನರಿಗೆ ಸಾಧ್ಯವಿರಲಿಲ್ಲ. ಈ ಕಲೆ ಅನಂತರ ಬಂದುದು.

ಒಂದು ಹೇಳಿಕೆಯ ಪ್ರಕಾರ ಕ್ರಿ.ಪೂ. 4000 ವರ್ಷಗಳ ಹಿಂದೆಯೇ ಕಬ್ಬಿಣದ ಬಳಕೆ ಇತ್ತು. ಇದಕ್ಕೆ ಸಂಬಂಧಿಸಿದ ಕೆಲವು ಸಾಕ್ಷ್ಯಗಳು ದೊರಕಿವೆ. ದಕ್ಷಿಣ ಆಫ್ರಿಕೆಯಲ್ಲಿ ವರ್ಣದ್ರವ್ಯ ಪಡೆಯಲು ಕಬ್ಬಿಣದ ಅದಿರನ್ನು ತೋಡಿ ತೆಗೆಯುವ ಗಣಿಕೆಲಸ ನಡೆಯುತ್ತಿತ್ತೆಂದು ತೋರುತ್ತದೆ. ಮಧ್ಯಶಿಲಾಯುಗದಲ್ಲಿ ಪ್ರಾರಂಭವಾದ ಈ ಕಲೆ ಕ್ರಮೇಣ ಜಗತ್ತಿನಾದ್ಯಂತ ಹರಡಿತ್ತು.

ಕಬ್ಬಿಣವನ್ನು ಅದಿರಿನಿಂದ ಒಂದು ರೀತಿಯ ಒರಟು ಕುಲುಮೆಗಳಲ್ಲಿ ತಯಾರಿಸುತ್ತಿದ್ದರು. ಕಬ್ಬಿಣದ ಅದಿರನ್ನು ಇದ್ದಿಲಿನೊಡನೆ ಮಿಶ್ರಮಾಡಿ, ಈ ರಾಶಿಯ ಮೂಲಕ ಗಾಳಿ ಬೀಸುವಂತೆ ತಳದಲ್ಲಿ ಒಂದು ರಂಧ್ರ ಮತ್ತು ಮೇಲ್ಭಾಗ ಮತ್ತೊಂದು ರಂಧ್ರವನ್ನಿಟ್ಟು ಅನಂತರ ಇದ್ದಿಲನ್ನು ಹೊತ್ತಿಸುತ್ತಿದ್ದರು. ಒಂದು ಭಾಗ ಇದ್ದಿಲು ಉರಿದು ಕಾರ್ಬನ್ ಡೈ ಆಕ್ಸೈಡ್ ಆಗುತ್ತಿತ್ತು. ಇದು ಮೇಲೇರಿ ಇದ್ದಿಲಿನಿಂದ ಅಪಕರ್ಷಣವಾಗಿ ಕಾರ್ಬನ್ ಮಾನಾಕ್ಸೈಡ್ ಆಗಿ ಕಬ್ಬಿಣದ ಆಕ್ಸೈಡನ್ನು ಕಬ್ಬಿಣವನ್ನಾಗಿ ಪರಿವರ್ತಿಸುತ್ತಿತ್ತು.

ಇತ್ತೀಚಿನ ಕೆಲವು ಶೋಧಗಳಿಂದ ಗಣಿಗಾರಿಕೆಯ ಮೇಲೆ ಹೊಸ ಬೆಳಕು ಚೆಲ್ಲುವಂತಹ ಅಂಶಗಳು ಕಂಡುಬಂದಿವೆ. ಸ್ಥಳಪರಿಶೀಲನೆಯ ಸಮಯದಲ್ಲಿ ಅದರ ಬಣ್ಣವನ್ನು ನೋಡಿ ಕಬ್ಬಿಣಕ್ಕಾಗಿ ಗಣಿ ಪ್ರದೇಶವನ್ನು ಆಯ್ಕೆ ಮಾಡುವ ಕಲೆಯನ್ನು ಮಧ್ಯ ಭಾರತದ **ಅಗಾರಿಯಾ** ಎಂಬ ಜನರು ಬಲ್ಲವರಾಗಿದ್ದರು. ಅವರು ಕಂದು, ಕೆಂಪು ಅಥವಾ ಕಪ್ಪು ಬಣ್ಣದ (Haematite) ಅದಿರನ್ನಾಗಲಿ ಇಲ್ಲವೇ ಕಾಂತಾಕರ್ಷಣೆಯುಳ್ಳ ಅಯಸ್ಸಿಂಧೂರ ಅಥವಾ ಪುಡಿಯನ್ನಾಗಲಿ (Magnetite) ಬಳಸುತ್ತಿದ್ದರು. ಕೆಲವು ಸಲ ಜಂಬುಮಣ್ಣಿನೊಂದಿಗೆ (Laterite) ಕೂಡಿಸುತ್ತಿದ್ದುದು ಉಂಟು. ಈ ತಂತ್ರ ಕಬ್ಬಿಣಯುಗದಲ್ಲಿ ಎಲ್ಲಾ ಕಡೆಯೂ ಬಳಕೆಯಲ್ಲಿದ್ದಿರಬಹುದು.

ಕಬ್ಬಿಣದ ಬಳಕೆ ಉತ್ತರ ಭಾರತದಿಂದ ದಕ್ಷಿಣಕ್ಕೆ ಹರಡಿತೆಂದೂ ಇದು ಗಂಗಾನದಿಯ ಬಯಲಿನಲ್ಲಿ ವರ್ಣರಂಜಿತ ಬೂದು ಮಡಿಕೆಗಳ ಮತ್ತು ಮಧ್ಯಭಾರತದಲ್ಲಿ ಕಪ್ಪು-ಕೆಂಪು ಮಡಿಕೆಗಳನ್ನು ಬಳಸುತ್ತಿದ್ದ ಜನರಿಂದ ಪ್ರಾರಂಭವಾಯಿತೆಂದು ಕೆಲವರ ಅಭಿಪ್ರಾಯವಾಗಿದೆ. ಆದರೆ ಬ್ರಹ್ಮಗಿರಿಯಲ್ಲಿ ಉತ್ಖನನ ಮಾಡಿದ ಮಾರ್ಟಿಮಾರ್‌ವೀಲರ್ ಅವರು ಇಲ್ಲಿ ದೊರೆತ ಅವಶೇಷಗಳಿಂದ ಕಬ್ಬಿಣದ ಬಳಕೆ ಉತ್ತರ ಭಾರತದಲ್ಲಿ ರೂಢಿಯಲ್ಲಿರುವ ಮೊದಲೇ ಬಳಕೆಯಲ್ಲಿತ್ತೆಂದು ಹೇಳುತ್ತಾರೆ. ಇದನ್ನು ಗಮನಿಸಿದರೆ ಹಳ್ಳೂರಿನ (ಧಾರವಾಡ ಜಿಲ್ಲೆ) ಉತ್ಖನನದಿಂದ ಅಲ್ಲಿ ತಯಾರಾದ ಕಬ್ಬಿಣದ ಉಪಕರಣಗಳ ಕಾಲ ಕಾರ್ಬನ್ 14 ರಿಂದ ಕ್ರಿ.ಪೂ. 11ನೇ ಶತಮಾನದಲ್ಲಿ ತಯಾರಾದವೆಂದು ತಿಳಿದುಬಂದಿದೆ. ಇದರಿಂದ ಕಬ್ಬಿಣದ ಉತ್ಪಾದನೆ ಭಾರತದಲ್ಲಿ ಏಕಕಾಲದಲ್ಲಿ ಪ್ರಾರಂಭವಾದುದನ್ನು ಸೂಚಿಸುತ್ತದೆ.

ಕರ್ನಾಟಕದಲ್ಲಿ ಬ್ರಹ್ಮಗಿರಿ, ಹಳ್ಳೂರು, ಹೆರಕಲ್, ಕೋಮಾರಹಳ್ಳಿ, ಕುಡುತಿನಿ ಮುಂತಾದ ಸ್ಥಳಗಳಲ್ಲಿ ಕ್ರಿ.ಪೂ. 11ನೇ ಶತಮಾನದಿಂದ ಮೂರನೇ ಶತಮಾನದವರೆಗೆ ಬೃಹತ್ ಶಿಲಾಸಂಸ್ಕೃತಿಯಲ್ಲಿ ಕಬ್ಬಿಣದ ಉತ್ಪಾದನೆ ಕಂಡುಬಂದಿದೆ. ಈ ಯುಗದಲ್ಲಿ ಚಿಕ್ಕಮಟ್ಟ ಅದಿರನ್ನು ಹೊಂದಿದ ಬೆಟ್ಟಗಳ ಆಶ್ರಯದಲ್ಲಿಯೂ ಸಣ್ಣ ಪ್ರಮಾಣದಲ್ಲಿ ಕಬ್ಬಿಣವನ್ನು ಉತ್ಪಾದಿಸಲಾಗುತ್ತಿತ್ತು. ಅಲ್ಲದೆ ಹೊಸಪೇಟೆ, ಸಂಡೂರು-ಬಳ್ಳಾರಿಯವರೆಗೆ ಹರಡಿರುವ ಕಬ್ಬಿಣದ ಅದಿರನ್ನು ಹೊಂದಿದ ಬೆಟ್ಟದ ಆಶ್ರಯದಲ್ಲಿ ಬೃಹತ್ ಪ್ರಮಾಣದ ಕಬ್ಬಿಣದ ಕಾರ್ಯಾಗಾರವೇ ಬೆಳೆದು ಬಂದಿತ್ತು. ಇಲ್ಲಿ ತಯಾರಾದ ಕಬ್ಬಿಣದ ಉಪಕರಣಗಳು ಸುತ್ತಮುತ್ತಲಿನ ಸ್ಥಳಗಳಿಗೆ ರಫ್ತಾಗುತ್ತಿದ್ದವು.

ಹಿರೇಬೆಣಕಲ್, ಹಂಪಿ ಪ್ರದೇಶದ ಬೃಹತ್ ಶಿಲಾಗೋರಿಗಳಲ್ಲಿ ಕಬ್ಬಿಣದ ಉಪಕರಣಗಳು ದೊರಕಿವೆ. ಇಲ್ಲಿಯ ಬೆಟ್ಟಗಳ ಕಲ್ಲಾಶ್ರಯದಲ್ಲಿ ಹೇರಳವಾಗಿರುವ ಗವಿವರ್ಣ ಚಿತ್ರಗಳು ಈಟಿ, ಭರ್ಚಿ, ಬಾಣ ಮುಂತಾದ ಆಯುಧಗಳನ್ನು ತಯಾರಿಸುತ್ತಿದ್ದುದಕ್ಕೆ ಸಾಕ್ಷಿಯಾಗಿವೆ. ಇಲ್ಲಿಯ ಬೃಹತ್ ಶಿಲಾಗೋರಿಗಳಲ್ಲಿ ದೊರೆತ ಕಬ್ಬಿಣ ಉಪಕರಣಗಳ ವೈಜ್ಞಾನಿಕ ಅಧ್ಯಯನದಿಂದ ಅವುಗಳನ್ನು ಕುಡಿತಿನಿ, ಸಂಡೂರು ಬೆಟ್ಟದ ಅದಿರಿನಿಂದ ಕ್ರಿ.ಪೂ. 1000ರಲ್ಲಿ ತಯಾರಿಸಿದವೆಂದೂ ತಿಳಿದುಬಂದಿದೆ.

ಹಂಪಿ ಪ್ರದೇಶ: ಪ್ರಾಗಿತಿಹಾಸ ಕಾಲದಿಂದಲೂ ನಡೆದುಬಂದ ಕಬ್ಬಿಣದ ಉತ್ಪಾದನೆ ಈ ಪ್ರದೇಶದ ಕುಡತಿನಿ, ಲಿಂಗನಬಂಡಿ, ಗೊಲ್ಲರಹಳ್ಳಿ, ನಂದಿಬಂಡಿ, ಚಿಲಕನಹಟ್ಟಿ, ಇಂಗಳದಾಳ, ಕಮಲಾಪುರ ಮುಂತಾದ ಕಡೆಗಳಲ್ಲಿ ಇದಕ್ಕೆ ಸಂಬಂಧಿಸಿದಂತೆ ಅವಶೇಷಗಳು ಕಂಡುಬರುತ್ತವೆ. ಈ ವ್ಯವಸ್ಥೆ ವಿಜಯನಗರ ಕಾಲದವರೆಗೂ ಭರದಿಂದ ಸಾಗಿ ಕ್ರಮೇಣ ಕಡಿಮೆಯಾಗುತ್ತ ಬಂತು.

ಲಿಂಗನಬಂಡಿ: ದೊಡ್ಡ ದೊಡ್ಡ ಬಂಡೆಗಳಿಂದ ಕೂಡಿದ ಬೆಟ್ಟದ ಆಶ್ರಯದಲ್ಲಿರುವ ಲಿಂಗನಬಂಡಿಯಲ್ಲಿ (ಕೊಪ್ಪಳ ತಾ.) ಹಾಳು ಮಣ್ಣಿನಿಂದ ಮಿಶ್ರಿತವಾದ ಸು. 4 ಎಕರೆ ಪ್ರದೇಶದಲ್ಲಿ ಸೂಕ್ಷ್ಮಶಿಲಾಯುಗದ ಆಯುಧಗಳು ಕಬ್ಬಿಣ ಬೃಹತ್ ಶಿಲಾಯುಗದ ಕಪ್ಪು, ಕೆಂಪು ಮಡಿಕೆಗಳು ಕಬ್ಬಿಣದ ಕಿಟ್ಟ ಕಬ್ಬಿಣ ತಯಾರಿಸುವ ಕ್ರಿಯೆಯಲ್ಲಿ ಅದರ ರಸ ಸೋರಿ ಮಣ್ಣಿನಲ್ಲಿ ಗಟ್ಟಿಗೊಂಡ ಅವಶೇಷಗಳಿವೆ. ಇವುಗಳನ್ನು ಗಮನಿಸಿದರೆ ಕಬ್ಬಿಣಯುಗದ ಆರಂಭಕಾಲದಲ್ಲಿಯೇ ಅದಿರನ್ನು ಕರಗಿಸುವ ಕಲೆ ಇಲ್ಲಿ ನಡೆಯುತ್ತಿತ್ತೆಂದು ತಿಳಿಯುತ್ತದೆ. ವಿಜಯನಗರ, ಅವರನಂತರದ ಕಾಲದಲ್ಲಿ ಕಮ್ಮಾರಿಕೆ ಲಿಂಗನಬಂಡಿಯಲ್ಲಿ ನಡೆದು ಬಂದಿತು. ಆ ವೇಳೆಯಲ್ಲಿ ಕಮ್ಮಾರಿಕೆಯಲ್ಲಿ ಪರಿಣಿತನಾದ **ಮಾನಪ್ಪಯ್ಯ** ಈ ಗ್ರಾಮಕ್ಕೆ ಬಂದು ಬೆಟ್ಟದಲ್ಲಿ ತಂಗಿದ್ದನೆಂದು ಪ್ರತೀತಿ. ಪಾಳೆಗಾರರ ಕಾಲದಲ್ಲಿ ನಿರ್ಮಾಣವಾದ ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ಸಾರುವ ಮಾನಪ್ಪಯ್ಯನ ಗುಡಿ ಬೆಟ್ಟದ ಮೇಲಿದೆ. ಇಂದಿಗೂ ಗುಡಿಯಲ್ಲಿರುವ ಅವಶೇಷಗಳು ಜನರಿಂದ ಪೂಜೆಗೊಳ್ಳುತ್ತಿವೆ.

ಕುಡತಿನಿ: ಬಳ್ಳಾರಿ ಜಿಲ್ಲೆಯ ಕುಡತಿನಿ ಗ್ರಾಮವು ಸುದೀರ್ಘವಾದ ಚರಿತ್ರೆಯನ್ನು ಹೊಂದಿದೆ. ಇಲ್ಲಿ ನವಶಿಲಾಯುಗದಲ್ಲಿ ಜನವಸತಿ ಬೆಳೆದು ಬಂತು. ಇತಿಹಾಸ ಕಾಲದಲ್ಲಿ ಎಪ್ಪತ್ತು ಹಳ್ಳಿಗಳ ಆಡಳಿತ ಕೇಂದ್ರವಾದ ಈ ಗ್ರಾಮ "ಸಬಾಳ ಎಳ್ಪತ್ತು" ಎಂದು ಹೆಸರುವಾಸಿಯಾಗಿತ್ತು. ಪೌರಾಣಿಕ ಹಿನ್ನೆಲೆಯಂತೆ, ಮೊದಲು ಕುಮಾರಸ್ವಾಮಿ ಈ ಸ್ಥಳದಲ್ಲಿ ಬಂದು ಕುಳಿತನೆಂಬ ನಂಬಿಕೆಯಿಂದ 'ಕುಳಿತನೋ' ಎಂಬ ಅಗ್ರಹಾರ ಗ್ರಾಮನಾಮವಾಯಿತು. ಈ ಪ್ರದೇಶದಲ್ಲಿ ಹೇರಳವಾಗಿರುವ ಕಬ್ಬಿಣದ ಅದಿರನ್ನು ಬಳಸಿ ಕಬ್ಬಿಣದ ಉತ್ಪಾದನೆಯಲ್ಲಿ ತೊಡಗಿದರು. ಇಲ್ಲಿ ಪ್ರಾರಂಭವಾದ ಕಬ್ಬಿಣದ ಕಾರ್ಯಾಗಾರ ವಿಜಯನಗರ ಕಾಲದವರೆಗೂ ಮುಂದುವರೆಯಿತು. ನಿರಂತರವಾಗಿ ನಡೆದು ಬಂದ ಈ ಕಾರ್ಯಾಗಾರದಲ್ಲಿ, ಅರಸರಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸುತ್ತ, ಇತರ ಉಪಕರಣಗಳನ್ನು ಗ್ರಾಮದ ಕಮ್ಮಾರ, ಕಂಚುಗಾರ ಪೇಟೆಗಳಲ್ಲಿ ಮಾರಾಟ ಮಾಡುತ್ತಿದ್ದುದಲ್ಲದೇ, ಸುತ್ತಮುತ್ತಲಿನ ಪ್ರದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು.

ಗೊಲ್ಲರಹಳ್ಳಿ: ಗೊಲ್ಲರಹಳ್ಳಿಯಲ್ಲಿ (ಹೊಸಪೇಟೆ ತಾ) ಸು. 15 ಅಡಿ ಎತ್ತರದ ಕಬ್ಬಿಣ ಕರಗಿಸಿದ ಅವಶೇಷಗಳ ದಿಬ್ಬವಿದೆ. ವಿಜಯನಗರ ಕಾಲದಲ್ಲಿ ಇಲ್ಲಿರುವ ಕಮ್ಮಾರರಿಗೆ ಕಾಳಿಕಾ ದೇವಾಲಯವನ್ನು ಕಟ್ಟಿಸಿ ದತ್ತಿ ಬಿಡಲಾಯಿತು. ಈ ದಿಬ್ಬದಲ್ಲಿ ದೊರಕಿರುವ ಕೊಳವೆ, ಕಬ್ಬಿಣದ ಕಿಟ್ಟ, ಕುಲುಮೆ ತಯಾರಿಕೆಯಲ್ಲಿ ಬಳಸಿದ ಇಟ್ಟಿಗೆ ಮುಂತಾದ ವಸ್ತುಗಳನ್ನು ಗಮನಿಸಿದರೆ, ಕುಲುಮೆಗಳನ್ನು ಸುಮಾರು ಐದು ಅಡಿ ಎತ್ತರವಾಗಿ (ವೃತ್ತಾಕಾರದಲ್ಲಿ) ನಿರ್ಮಿಸಿ ಗಾಳಿ ಹಾಕಲು ಎರಡು ತಿದಿಗಳನ್ನು ಕೂಡಿಸುತ್ತಿದ್ದರು. ಆಗ ಬಳಸಿದ ಇಕ್ಕಳ, ಭರ್ಚಿ, ಅಡಿಗಲ್ಲು ಈ ದಿಬ್ಬದಲ್ಲಿ ಕಂಡುಬಂದಿವೆ. ಅಡಿಗಲ್ಲನ್ನು ಕಾಳಿಕಾ ದೇವಾಲಯದಲ್ಲಿಟ್ಟು **ತಮಟೇಶ್ವರನೆಂದು** ಆರಾಧಿಸಲಾಗುತ್ತದೆ.

ಬೆಲಕ್‌ನಟ್ಟಿ (ಹೊಸಪೇಟೆ ತಾ.) ಗ್ರಾಮದಲ್ಲಿ ಕೂಡ ಗೊಲ್ಲರಹಳ್ಳಿಯಲ್ಲಿರುವಂತೆ ಕಬ್ಬಿಣದ ಉತ್ಪಾದನೆಗೆ ಸಂಬಂಧಿಸಿದಂತೆ ದೊಡ್ಡ ಪ್ರಮಾಣದ ದಿಬ್ಬ ಉಂಟಾಗಿದೆ. ಇಲ್ಲಿಯ ಕಮ್ಮಾರರು ಹೇಳುವಂತೆ ಈ ಉತ್ಪಾದನೆಯಲ್ಲಿ ಒಂದೊಂದು ಕುಲುಮೆಗಳಲ್ಲಿ ದಿನಕ್ಕೆ ಎರಡು ಕಬ್ಬಿಣ ಮುದ್ದೆಗಳನ್ನು ತಯಾರಿಸಿ, ಅವನ್ನು ಉಪಕರಣಗಳ ತಯಾರಿಕೆಗೆ ಬಳಸಲಾಗುತ್ತಿತ್ತು.



ನಂದಿಬಂಡಿ : ಇದಕ್ಕೆ ಹತ್ತಿರದಲ್ಲಿರುವ ನದಿಬಂಡೆ ಗ್ರಾಮದಲ್ಲಿ ಈ ಕಾರ್ಯ ನಡೆಯುತ್ತಿತ್ತು. ಇಲ್ಲಿ ಪ್ರಾಕೃತಿಕವಾಗಿರುವ ನಂದಿ ಆಕಾರದ ದೊಡ್ಡ ಬಂಡೆಯಿಂದ 'ನಂದಿ ಬಂಡೆ' ಎಂದು ಗ್ರಾಮನಾಮವಾಯಿತು. ಬೆಟ್ಟದ ಆಶ್ರಯದಲ್ಲಿ ಮೊದಲಿದ್ದ ಹಾಳು ಗ್ರಾಮದಲ್ಲಿ ಅಲ್ಲಲ್ಲಿ ಸುಮಾರು 100ಕ್ಕೂ ಹೆಚ್ಚು ಕುಲುಮೆಗಳಿವೆ. ವೃತ್ತಾಕಾರದಲ್ಲಿರುವ ಕುಲುಮೆಗಳ ತಳ 14x14 ಅಳತೆಯನ್ನು ಗಮನಿಸಿದರೆ ಎರಡು ಅಡಿ ಎತ್ತರವಾಗಿರಬಹುದೆಂದು ಅಂದಾಜು ಮಾಡಬಹುದಾಗಿದೆ. ಇಲ್ಲಿ ನಡೆಯುತ್ತಿದ್ದ ಸಣ್ಣ ಪ್ರಮಾಣದ ಕಬ್ಬಿಣ ತಯಾರಿಕೆಯಲ್ಲಿ ಬೆಟ್ಟದಲ್ಲಿರುವ ಅದಿರನ್ನು ತಂದು ಪುಡಿ ಮಾಡಿ ಎತ್ತರ ಬಂಡೆಗಳ ಮಧ್ಯ ಹಾಕಲಾಗುತ್ತಿತ್ತು. ಅದರಲ್ಲಿರುವ ಮಣ್ಣು ನೀರಿನೊಂದಿಗೆ ಹರಿದು ಹೋಗಿ ಪುಡಿ ಅದಿರು ಮುಂದೆ ಬಂದು ನಿಲ್ಲುತ್ತಿತ್ತು. ಅದನ್ನು ಇದ್ದಿಲಿನೊಡನೆ ಕುಲುಮೆಗೆ ಹಾಕಿ ಗಾಳಿ ಹಾಕಲಾಗುತ್ತಿತ್ತು. ಅದಕ್ಕೆ ಕೆಳಗೆ ಒಂದು ರಂಧ್ರ ಬಿಟ್ಟು ನಳಿಕೆ ಕೂಡಿಸಲಾಗುತ್ತಿತ್ತು. ಈ ನಳಿಕೆಯಿಂದ ಅದಿರು ಕರಗಿ ಸೋರುತ್ತಿದ್ದ ಕಬ್ಬಿಣದ ರಸವನ್ನು ಮುಶಿಗಳಲ್ಲಿ ತುಂಬಿ ಇಡಲಾಗುತ್ತಿತ್ತು. ಇಂಥ ಮುಶಿಗಳು ಈ ಪ್ರದೇಶದಲ್ಲಿ ಹೇರಳವಾಗಿ ದೊರೆಯುತ್ತವೆ.

ಈ ರೀತಿಯಾಗಿ ಹಂಪಿ ಪ್ರದೇಶದಲ್ಲಿ ನಡೆದು ಬಂದ ಕಬ್ಬಿಣ ಉತ್ಪಾದನೆಯ ನೆಲೆಗಳ ವರದಿಯನ್ನು ಈ ಲೇಖನದಲ್ಲಿ ಪ್ರಸ್ತುತಪಡಿಸಲಾಗಿದೆ. ಇಲ್ಲಿಯ ಭೌಗೋಳಿಕ ಹಿನ್ನೆಲೆ, ಕಬ್ಬಿಣ ಉತ್ಪಾದನೆಯ ತಂತ್ರದಲ್ಲಾದ ಬದಲಾವಣೆ, ಹೊಳಪುಳ್ಳ ಕಬ್ಬಿಣ ಮತ್ತು ಉಕ್ಕು ತಯಾರಿಸಲು ಬಳಸುತ್ತಿದ್ದ ಗಿಡಮೂಲಿಕೆ ಮುಂತಾದವುಗಳ ಬಗ್ಗೆ ವೈಜ್ಞಾನಿಕ ಅಧ್ಯಯನ ಮುಂದುವರಿಸಲಾಗಿದೆ.

30

ವಿಜಯನಗರ ಸಾಮ್ರಾಜ್ಯ ಮತ್ತು ಮಾಗಡಿ ಕೆಂಪೇಗೌಡರ ಸಂಬಂಧಗಳು

ಡಾ॥ ಬಿ.ಎಸ್. ಪುಟ್ಟಸ್ವಾಮಿ

ದಕ್ಷಿಣ ಭಾರತದಲ್ಲಿ ಆಳಿದ ಅತ್ಯಂತ ಪ್ರಖ್ಯಾತ ಸಾಮ್ರಾಜ್ಯವಾದ ವಿಜಯನಗರವು ಅತ್ಯಲ್ಪ ಕಾಲದಲ್ಲಿ ದಕ್ಷಿಣ ಭಾರತವನ್ನೆಲ್ಲಾ ಆಕ್ರಮಿಸಿಕೊಂಡು ಬಲಿಷ್ಠವಾದ ಸಾಮ್ರಾಜ್ಯವನ್ನು ಕಟ್ಟಿತು. ಅಷ್ಟು ಶೀಘ್ರವಾಗಿ ದಕ್ಷಿಣದಲ್ಲಿ ಬೆಳೆದುಕೊಂಡು ಹೋಗಲು ಹಲವಾರು ರೀತಿಯ ಮಾರ್ಗಗಳನ್ನು ಅನುಸರಿಸಲಾಯಿತು. ವಿಜಯನಗರವು ತನ್ನ ಸಾಮಂತರ ಹಾಗೂ ಅಮರನಾಯಕರ ಸಹಾಯವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಂಡು ಮುನ್ನೆಡೆಯಿತು. ಈ ಲೇಖನದಲ್ಲಿ ವಿಜಯನಗರವು ಯಲಹಂಕ ನಾಡಪ್ರಭುಗಳೊಂದಿಗೆ ಹೊಂದಿದ್ದ ರಾಜತಾಂತ್ರಿಕ ಸಂಬಂಧದ ಸ್ವರೂಪವನ್ನು ನಿರೂಪಿಸಲಾಗಿದೆ. ಕರ್ನಾಟಕದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಆಡಳಿತ ಕಾಲ ಸುವರ್ಣ ಅಧ್ಯಾಯ. ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯ ಕಾಲವೆಂದರೆ ಶ್ರೀಕೃಷ್ಣದೇವರಾಯನ ಆಡಳಿತದ ಕಾಲವೆಂದೇ ಹೇಳಬಹುದು. ವಿಜಯನಗರದ ಅರಸರ ಆದರ್ಶ, ಆಡಳಿತ ವಿಧಾನ ಜನೋಪಕಾರಿ ಕೆಲಸ ಕಾರ್ಯಗಳ ಹಿನ್ನೆಲೆಯಲ್ಲಿ ಇವರ ಸಾಮಂತರು, ಮಾಂಡಲಿಕರು, ನಾಡಪ್ರಭುಗಳು ಬೇರೆ ಬೇರೆ ಕಡೆಗಳಲ್ಲಿ ರಾಜ್ಯಭಾರ ಮಾಡುತ್ತಿದ್ದರು ಹಾಗೂ ವಿಜಯನಗರ ಸಾಮ್ರಾಜ್ಯಕ್ಕೆ ನಿಷ್ಠರಾಗಿದ್ದರು. ಇಂತಹ ದಕ್ಷ, ಅಧೀನ ಮಾಂಡಲಿಕರಾದ ಯಲಹಂಕ ನಾಡಪ್ರಭುಗಳು ಅತ್ಯಂತ ಪ್ರಮುಖರು. ವಿಜಯನಗರ ಸಾಮ್ರಾಟರು ಇವರ ವಿಧೇಯತೆಯನ್ನು ಮೆಚ್ಚಿಕೊಂಡು ಹಲವು ನಾಡುಗಳನ್ನು ಇವರಿಗೆ ನೀಡಿ ನೆಮ್ಮದಿಯಿಂದ ರಾಜ್ಯಭಾರ ಮಾಡುತ್ತಿದ್ದರು.

ಹದಿನಾಲ್ಕನೇ ಶತಮಾನದಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವು ಪ್ರಾರಂಭದಲ್ಲಿ ಒಂದು ಸಣ್ಣ ಪ್ರದೇಶಕ್ಕೆ ಸೀಮಿತವಾಗಿತ್ತು. ಅದು ಬೆಳೆಯುತ್ತಾ ಹೋಗಿ ದಕ್ಷಿಣ ಭಾರತದ ಬಹುತೇಕ ಭಾಗವನ್ನು ಆಕ್ರಮಿಸಿಕೊಂಡಿತು. ಈ ರೀತಿಯಲ್ಲಿ ಹೊಸ ಹೊಸ ಪ್ರದೇಶಗಳನ್ನು ಗೆಲ್ಲುತ್ತಾ ಹೋದಾಗ ವಿಜಯನಗರ ಅರಸರು ಈ ನೂತನ ಭಾಗಗಳಲ್ಲಿ ಆಡಳಿತ ನಿರ್ವಹಿಸಲು ಸೂಕ್ತ ನಾಯಕರನ್ನು ನೇಮಿಸುವುದು ಅಗತ್ಯವಾಗಿದ್ದಿತು. ಇಂತಹ ನಾಯಕರು ವಿಜಯನಗರ ಸಾಮ್ರಾಜ್ಯಕ್ಕೆ ಅಧೀನರಾಗಿದ್ದುಕೊಂಡು ತಮ್ಮ ನಿರ್ದಿಷ್ಟ ಪ್ರದೇಶಗಳಲ್ಲಿ ಸ್ವಾಯತ್ತತೆಯನ್ನು ಹೊಂದಿ ಆಳ್ವಿಕೆಯನ್ನು ನಡೆಸುತ್ತಾ ಹೋದರು. ಅಂತಹ ಪಾಳೆಯಪಟ್ಟು ಅಥವಾ ನಾಯಕರಲ್ಲಿ ಯಲಹಂಕ ನಾಡಪ್ರಭುಗಳು ಬಹು ಮುಖ್ಯ ಪಾತ್ರ ವಹಿಸಿದ್ದಾರೆ. ನಾಡಪ್ರಭುಗಳು ವಿಜಯನಗರ ಪೂರ್ವದಲ್ಲೇ ಆಳ್ವಿಕೆ ನಡೆಸುತ್ತಿದ್ದು ತಮ್ಮ ಆಳ್ವಿಕೆಯ ಕೊನೆಯವರೆಗೂ ನಿಷ್ಠೆಯಿಂದಿದ್ದರು. ಬೆಂಗಳೂರು ಕೆಂಪೇಗೌಡನ (ಒಂದನೇ ಕೆಂಪೇಗೌಡ ಅಥವಾ ಹಿರಿಯ ಕೆಂಪೇಗೌಡ) ಮಗ ಮಾಗಡಿ ಕೆಂಪೇಗೌಡನ (ಇಮ್ಮಡಿ ಕೆಂಪೇಗೌಡ) ಆಡಳಿತಾವಧಿ ಹಲವು ಕಾರಣಗಳಿಗಾಗಿ ಪ್ರಾಮುಖ್ಯ ಪಡೆದುಕೊಂಡಿದೆ. ಈ ಲೇಖನದಲ್ಲಿ ಮಾಗಡಿ ಕೆಂಪೇಗೌಡನು ವಿಜಯನಗರದೊಂದಿಗೆ ಹೊಂದಿದ್ದ ರಾಜತಾಂತ್ರಿಕ ಸಂಬಂಧಗಳ ವಿವರಣೆಗಳನ್ನು ನೀಡುವ ಪ್ರಯತ್ನ ಮಾಡಲಾಗಿದೆ.

ಪೆನುಗೊಂಡೆಯ ವೆಂಕಟಪತಿ ಮತ್ತು ಇಮ್ಮಡಿ ಕೆಂಪೇಗೌಡ (1597–1640)

ಕವಿ ಹೊನ್ನನಿಂದ ಯಕ್ಷಗಾನ ರೂಪದಲ್ಲಿ ರಚಿಸಲ್ಪಟ್ಟ, ಕರ್ಲಮಂಗಲ ಶ್ರೀಕಂಠಯ್ಯನವರಿಂದ ಸಂಪಾದಿತ ಕೃತಿ 'ಕೆಂಪೇಗೌಡ ಜಯಪ್ರಶಸ್ತಿ'ಯ ಎರಡನೇ ಭಾಗದ 14 ಮತ್ತು 15ನೆಯ ಪದ್ಯಗಳಲ್ಲಿ ಇಮ್ಮಡಿ ಕೆಂಪೇಗೌಡನು ತನ್ನ ಅಧಿರಾಜನಾದ ವೆಂಕಟಪತಿಯ ರಾಜಧಾನಿಯಾದ ಪೆನುಗೊಂಡ ದುರ್ಗಕ್ಕೆ ಹಲವು ಮಂದಿ ಶತ್ರುಗಳು ಮುತ್ತಿಗೆ ಹಾಕಿದ್ದಾಗ, ವೆಂಕಟಪತಿಯ ಆದೇಶದಂತೆ ನೆರೆಹೊರೆಯ ಕೆಲವು ಪಾಳೆಯಗಾರರನ್ನು ಹಲವಾರು ಮಂದಿ ವೀರಸೈನಿಕರನ್ನು ಸೇರಿಸಿಕೊಂಡು, ಸಾಹಸದಿಂದ ಮುನ್ನುಗ್ಗಿ, ಶತ್ರುಗಳನ್ನು ಸಂಹರಿಸಿ, ವೆಂಕಟಪತಿರಾಜನನ್ನು ರಕ್ಷಿಸಿನೆಂದೂ, ಪುಂಡಾಟ ನಡೆಸಿದ ಹಲವು ರಾಜರನ್ನು ಬಗ್ಗಿಸಿ, ವೆಂಕಟರಾಜನಿಗೆ ಶರಣು ಬರಿಸಿದನೆಂದೂ ಉಲ್ಲೇಖಿಸಿ ಈ ದಿಗ್ವಿಜಯದ ವೃತ್ತಾಂತವನ್ನು ಸುರಸವಾಗಿ ಮೈನವಿರೇಳುವಂತೆ ವರ್ಣಿಸಲಾಗಿದೆ.

ಇಮ್ಮಡಿ ಕೆಂಪೇಗೌಡನ ಕಾಲಕ್ಕೆ ವಿಜಯನಗರವು ತಾಳಿಕೋಟೆ ಯುದ್ಧದಲ್ಲಿ ನಿರ್ನಾಮವಾಗಿ ವಿಜಯನಗರದ ಅರಸರು ತಮ್ಮ ರಾಜಧಾನಿಯನ್ನು ಪೆನುಗೊಂಡೆಗೆ ಬದಲಾಯಿಸಿದ್ದರಷ್ಟೆ. ವೆಂಕಟಪತಿರಾಯ ಅಳಿದುಳಿದ ಪ್ರಾಂತ್ಯಕ್ಕೆ ರಾಜನಾಗಿದ್ದ. ಬಿಜಾಪುರ ಸುಲ್ತಾನನ ಯುದ್ಧ ಸಂಭವಿಸಿದಾಗ ಬೆಂಗಳೂರಿನ ಇಮ್ಮಡಿ ಕೆಂಪೇಗೌಡನು ಸುತ್ತಮುತ್ತಲಿನ ಅನೇಕ ಪಾಳೆಯಗಾರರನ್ನು ಒಂದುಗೂಡಿಸಿ ಪೆನುಗೊಂಡೆಯ ಸಾಮ್ರಾಟರಿಗೆ ಪಟ್ಟ ಶ್ರಮ, ಧೈರ್ಯ, ಸಾಹಸಗಳನ್ನು ಸಮಕಾಲೀನವಾದ ಕವಿ ಹೊನ್ನನು ತಮ್ಮ ಜಯಪ್ರಶಸ್ತಿಯಲ್ಲಿ ಹೀಗೆ ವರ್ಣಿಸಿದ್ದಾನೆ. (ಯಕ್ಷಗಾನ ವೀರಗಾಥೆ: ಕರ್ಲಮಂಗಲ ಶ್ರೀಕಂಠಯ್ಯನವರ ಸರಳಗನ್ನಡದ ಭಾವಾರ್ಥ ಆಯ್ದ ಕೆಲವು ಭಾಗಗಳು.)

ಆಗ ವೆಂಕಟಪತಿರಾಜನು ತನ್ನ ಮದ್ದಾನೆ, ಕುದುರೆ, ಕಾಲಾಳುಗಳನ್ನು ಮುನ್ನುಗ್ಗಿಸಿದ. ಹಗೆಗಳ ಕುದುರೆಗಳನ್ನೆಲ್ಲಾ ಮಗ್ಗುಳಿಗೆ ತಳ್ಳಿದ. ಜಯ ಜಯವೆಂದು ಅಬ್ಬರಿಸುತ್ತಾ ಮುನ್ನುಗ್ಗಿ ಬಾಣದ, ಕೋವಿಗಳ ಕಬ್ಬೊಗೆಯು ತುಂಬಿಕೊಂಡಿತು. ಆಗ ಎಲ್ಲಾ ದಳವನ್ನು ನುಗ್ಗಿಸಿ ಇರಿಸಿದ, ರಣಗಬ್ಬಿಗರನ್ನು ಒದರಿ ಹಾಕಿಬಿಟ್ಟ, ಹಗೆಗಳ ಗರ್ಭದಲ್ಲಿ ಭೀತಿಯನ್ನು ಹುಟ್ಟಿಸಿದ, ಕಾಳಗದ ಕಣದಲ್ಲಿ ಒಬ್ಬರೂ ಇಲ್ಲದಂತೆ ಓಡಿಸಿಬಿಟ್ಟ, ಭೂತಪ್ರೇತಗಳಿಗೆ ಸಂತೋಷದ ಹಬ್ಬವನ್ನು ಮಾಡಿಸಿದ.

* ಈ ಕಡೆ ಸುಖದಿಂದ ಇರಲಾಗಿ ರಾಯರು ಚಿಂತಿಸುತ್ತಾ ಈ ಸುದ್ದಿಯನ್ನು ಕೇಳಿದನು.
* ಆಗ ಅನಂತರಾಜ, ಮಾಕರಾಜ, ಯಾಚಮನಾಯಕ, ಜಗ್ಗರಾಜ, ಜಗದೇವರಾಯ, ತಿಮ್ಮೇಂದ್ರ, ಸೀರ್ಯದ ರಂಗಪ್ಪ, ಇಮ್ಮಡಿ ಭೈರಪಟ್ಟದ ದಳವಾಯಿ, ಚುಂಚಣ್ಣ ಮುಂತಾದ ರಣಗಲಿಗಳೂ ಕೂಡಿಕೊಂಡು ಬೆಂಗಳೂರಿಗೆ ಬಂದರು. ದೂರದಲ್ಲಿ ನಿಂತು ಮುತ್ತಿಗೆ ಹಾಕಬೇಕೆನ್ನುವಷ್ಟರಲ್ಲಿ ಕೋಟೆಗೆ ಎದುರು ತೋರಿಸಿ ಅವರನ್ನು ಮುಂತಡೆದು ನಿಲ್ಲಿಸಿದೆ.
* ಕಡಿದು ಕೆಳಗೆ ಬಿದ್ದಾನೆಗಳ ಕುದುರೆಗಳ ಕಾಲಾಳುಗಳ ರುಂಡ ಮುಂಡಗಳು ಕುಣಿದಾಡಿದವು. ರಕ್ತ ಕರುಳು ಕಾಳಜಿಗಳು ಗುಡ್ಡೆ ಬಿದ್ದಿದ್ದವು. ಕಾಳಗದಲ್ಲಿ ಕಣದಲ್ಲಿ ಶಾಕಿನಿ ಡಾಕಿನಿಗಳು ಇದನ್ನುಂಡು ದಣಿದವು. ಹೆಣದ ತುಂಡುಗಳು ಕುಣಿ ಕುಣಿದಾಡಿ "ಚಂಡಿ ವಿಕ್ರಮ ಇಮ್ಮಡಿ ಕೆಂಪ" ಬಾಳು ! ಬಾಳು !! ಎಂದು ಹರಸುತ್ತಿದ್ದಾಗಲೇ ಯುದ್ಧದಲ್ಲಿ ಜಯಹೊಂದಿದ. ಮಂಕೊಂಡು ಏಕಾಂಗವೀರನಾಗಿ ಮರೆಹೊಕ್ಕವರನ್ನು ರಕ್ಷಿಸಿದೆ. ಸಮುದ್ರದಂತೆ ಗಂಭೀರನೇ ಸೂರ್ಯನಂತೆ ಘನ ತೇಜಸ್ವಿಯೇ ನಿಶ್ಶಂಕ ಶೂರನೇ ಸತ್ಕೀರ್ತಿ ಕರಂಡನೇ ಸಂಗ್ರಾಮಧೀರನೇ ಭಾಪು ಎನ್ನಿಸಿಕೊಂಡೆ.
* ನಿನ್ನ ಸಾಹಸವನ್ನು ನೋಡಿ ಮನವೊಲಿದ ಮೂಕರಾಯ ಮಝು ! ಭಾಪೆಂದ, ಜನಪತಿ ಜನಪತಿ ಜಗ್ಗರಾಜ ಧಣಿರೇ ! ಎಂದು ಕುಮಾರ ರಾಯ ಮೊನೆಕಾರನೆಂದ, ಜಗದೇವರಾಯ ಶೌಭಾಷು ! ಎಂದು. ಅನಂತರಾಜ ಮೆಚ್ಚಿ ಅಧಿಕ ಬಲ್ಲಿದನೆಂಬ, ತಿಮ್ಮರಾಜ ಸುಪ್ರೀತಾಪಿಯೆಂದ. ದಳವಾಯಿ ಚುಂಚಣ್ಣ ಮೈನಿಗುರಿಸಿ ಭಳಿರೇ ಎಂದ. ಭೈರೇಂದ್ರನು ಗುಣಕ್ಕೆ ಮತ್ಸರವೇ ಪುಣ್ಯವಂತನೆಂದ.

* ಹಿಂದು ಮುಂದು ನೋಡದೇ ನಾವು ಇಲ್ಲಿಗೆ ಬಂದದೇಕೆ? ಬೆಂಗಳೂರೆಂದರೇನು? ನಾವೆಂದರೇನು? ವಿಧಿಯು ನಂಬಿಸಿ ನಮ್ಮನ್ನಿಲ್ಲಿಗೆ ತಂದಿತಲ್ಲ ! ಬಂಧು ಬಳಗ ಆನೆ ಕುದುರೆ ಜನಗಳನ್ನೆಲ್ಲಾ ಕಳೆದುಕೊಂಡೆವಲ್ಲ ಅಯ್ಯಯ್ಯೋ ! ನಾವು ಇಲ್ಲಿಗೆ ಬಂದು ತಲುಪಿದೆವು. ನಮ್ಮನ್ನು ಪಾರುಮಾಡೆಂದು ರಾಜದೂತರನ್ನು ಕಳುಹಿಸಿ ದೈನ್ಯದಿಂದ ಬೇಡಿದರು. ಆಮೇಲೆ ಅವರು ಬೆಳಗಿನ ಜಾವದಲ್ಲೆ ಬಂದ ದಾರಿ ಹಿಡಿದು ಹೊರಟರು. ಇಮ್ಮಡಿ ಕೆಂಪರಾಯನೇ

* – ಆಲೆ ಸವರಿಕೊಳ್ಳುತ್ತಾ ಬದುಕಿಕೊಂಡೆವೆಂದುಕೊಂಡರು. ನಸುಗತ್ತಲಿನಲ್ಲೇ ಅವರ ರಾಯನಿಗೆ ಹೇಳಿದರು. ಆಗವನು ಇವರನ್ನು ನೋಡಿ ಕೋಪಿಸಿಕೊಂಡು ಒಬ್ಬನಿಗೆ ಸೋತ "ಬಡಿಹೋರಿ"(ಬೀಜ ತೆಗೆದ ಎತ್ತು)ಗಳಿರಾ ! ಹೋಗಿರಿ ಎಂದು ಇಮ್ಮಡಿ ಕೆಂಪನೃಪಾಲನನ್ನೂ ಕೊಂಡಾಡಿದರು. ಆಗ ನರಪತಿಗಳೂ ಅಶ್ವಪತಿಗಳೂ ಉಡುಗೊರೆ ವಿಜಯ ಪತ್ರಗಳನ್ನು ಬರೆಸಿ ಕಳುಹಿಸಿದರು ಮತ್ತು ಕಾಣಿಕೆಗಳನ್ನೂ ಕೊಟ್ಟು ನಿನ್ನನ್ನು ಮೆಚ್ಚಿಸಿದರು. ನೀನು ಅದನ್ನೆಲ್ಲಾ ಪಡೆದು ಲೋಕದಲ್ಲಿ ಅತ್ಯಧಿಕವಾದ ಖ್ಯಾತಿಯನ್ನು ಸಂಪಾದಿಸಿದೆ. ಯಲಹಂಕ ನಾಡಿನ ದೊರೆಯೇ, ಸುಂದರ ರೂಪನೇ, ಮಹಾಪ್ರತಾಪಿಯೇ "ನಾಚಯ ಕೆಂಪ ದೊರೆಯ" ಮಗನಾದ ಇಮ್ಮಡಿ ಕೆಂಪಭೂಪತಿಯೇ ಸುಖವಾಗಿ ಸುಸ್ಥಿರವಾಗಿ ಬಾಳು.

ಭಲಾ ! ಭಲಾ ! ವೀರ ವಿಕ್ರಮ ಇಮ್ಮಡಿ ಕೆಂಪದೊರೆ ರಾಯ ನಿನಗೆ ಈ ಪ್ರಪಂಚದಲ್ಲಿ ಎದಿರಾರು ....

ಇಮ್ಮಡಿ ಕೆಂಪೇಗೌಡನು ಹೀಗೆ ಎಲ್ಲರನ್ನೂ ಜಯಿಸಿದ ಮೇಲೆ ಈತನ ಕೀರ್ತಿಯು ಬೆಳೆದು ಬೆಳಕಾಯಿತು. ಈ ಕಾಳಗದಲ್ಲಿ ಇಮ್ಮಡಿ ಕೆಂಪೇಗೌಡನ ವಿಜಯಗಾಥೆಯನ್ನು "ಜೆಂಚಿ, ಮಧುರೆ, ತಂಜಾವೂರು, ಬೇಲೂರು, ಚಂದ್ರಗಿರಿ, ಚನ್ನಪಟ್ಟಣ, ಶ್ರೀರಂಗಪುರ, ನಂಜರಾಯಪಟ್ಟಣ, ಪಿರಿಯಾಪಟ್ಟಣ, ಸೋದೆ, ಸೊನ್ನಲಾಪುರ, ಜಡೆಯಯಿಕ್ಕೇ(?) ಮೇಳಿಗೆ(?) ಬಂಕಾಪುರ, ಹಾನಗಲ್ಲು, ರಾಯಚೂರು, ವಿಜಯಪುರ, ಡಿಳ್ಳಿ, ಕಾಶಿ, ರಾಮೇಶ್ವರ" ಇಲ್ಲೆಲ್ಲ ಹಾಡಿ ಹೊಗಳಿದರೆಂದು ಜಯಪ್ರಶಸ್ತಿಯಲ್ಲಿ ವರ್ಣಿಸಲಾಗಿದೆ.

ಕವಿ ಹೊನ್ನ ಬರೆದ ಕೆಂಪೇಗೌಡ ಜಯಪ್ರಶಸ್ತಿಯಿಂದ ನಮಗೆ ಇಮ್ಮಡಿ ಕೆಂಪೇಗೌಡನು ಹೇಗೆ ಅನೇಕ ಪಾಳೆಯಗಾರರನ್ನು ಸದೆ ಬಡಿದು ವಿಜಯನಗರದ ವೆಂಕಟದೊರೆಗಳಿಗೆ ತಲೆಬಾಗುವಂತೆ ಮಾಡಿದರೆಂದು ತಿಳಿಯುತ್ತದೆ. ಇಮ್ಮಡಿ ಕೆಂಪೇಗೌಡನು ಅಪ್ರತಿಮ ಸಾಹಸದಿಂದ ವೆಂಕಟದೊರೆಗಳನ್ನು ರಕ್ಷಿಸಿ ಕರ್ನಾಟಕದ ವಿಜಯಪತಾಕೆಯನ್ನು ದಿಗಂತದಲ್ಲಿ ಹಾರಾಡಿಸುವಂತೆ ಮಾಡಿದನು.

ವಿಜಯನಗರ – ಇಮ್ಮಡಿ ಕೆಂಪೇಗೌಡ ಮತ್ತು ಸಮಕಾಲೀನ ರಾಜಕೀಯ ಸ್ಥಿತಿ

ಇಮ್ಮಡಿ ಕೆಂಪೇಗೌಡನು ಅಧಿಕಾರ ವಹಿಸಿಕೊಂಡಾಗ ವಿಜಯನಗರ ಮತ್ತು ದಕ್ಷಿಣಾಪಥದಲ್ಲಿ ಒಂದು ರೀತಿಯ ರಾಜಕೀಯ ಅಸ್ಥಿರತೆ ಇತ್ತು. ಇದಕ್ಕೆ ಹಲವು ಕಾರಣಗಳಿವೆ. ಬಹಮನಿ ಸುಲ್ತಾನರೆಲ್ಲಾ ಒಟ್ಟುಗೂಡಿ ಕ್ರಿ.ಶ. 1565ರ ತಾಳಿಕೋಟೆ ಯುದ್ಧದಲ್ಲಿ ವಿಜಯನಗರದ ಅರಸರನ್ನು ಸೋಲಿಸಿ ಭೀಕರವಾದ ಪೆಟ್ಟನ್ನು ಕೊಡುತ್ತಾರೆ. ಒಂದು ಕಡೆ ಗೋಲ್ಕೊಂಡದ ಸುಲ್ತಾನದ ಜೊತೆಯಲ್ಲಿ ಹಗೆತನ, ಬಸವಾಪಟ್ಟಣ, ಇಕ್ಕೇರಿ, ನಾಗಮಂಗಲ, ಸುಮಕಿ, ಬೇಗೂರು, ಚೆನ್ನಪಟ್ಟಣ, ಸೋಲೂರು ಮೊದಲಾದ ಸ್ಥಳಗಳಲ್ಲಿ ಪಾಳೆಗಾರರು ಬಲವಾಗಿ ಬೇರೂರಿಕೊಂಡಿದ್ದರು. ಆದರೆ ಈ ಪಾಳೆಯಗಾರರು ಪರಸ್ಪರ ಪ್ರೀತಿವಿಶ್ವಾಸಗಳ ಕೊರತೆ ಹಾಗೂ ಅಸೂಯೆಗಳಿಂದಾಗಿ ಆಗಾಗ್ಗೆ ಕಾದಾಡುತ್ತಿದ್ದರು. ಮೈಸೂರು ಒಡೆಯರು ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದರು. ಬೆಟ್ಟದ ಚಾಮರಾಜ ಒಡೆಯರು ಮತ್ತು ರಾಜ ಒಡೆಯರು ದೊರೆಗಳಾಗಿದ್ದರು. ಈ ರಾಜರುಗಳಲ್ಲಿ ಐಕಮತ್ಯವಿಲ್ಲದೆ ತಂತಮ್ಮ ರಾಜ್ಯಗಳನ್ನು ತಾವೇ ಕಳೆದುಕೊಳ್ಳುವ ಸ್ಥಿತಿಗೆ ತಲುಪಿದ್ದರು. ಇನ್ನೊಂದು ಕಡೆ ಮಧುರಾದ ವೀರಪ್ಪ ನಾಯಕನು ಮತ್ತು ಮೈಸೂರಿನ

ರಾಜ ಒಡೆಯರು ವಿಜಯನಗರದ ವಿರುದ್ಧ ದಂಗೆ ಎದ್ದು ತಮಗೆ ತಾವೇ ಸ್ವಾತಂತ್ರ್ಯ ಘೋಷಿಸಿಕೊಂಡರು, ಮೊದಲೇ ಸಂಕಷ್ಟಕ್ಕೆ ಸಿಲುಕ್ಕಿದ್ದ ವಿಜಯನಗರದ ಸಾಮ್ರಾಜ್ಯ ಮತ್ತಷ್ಟು ಕುಗ್ಗಿಹೋಯಿತು. ಇಂತಹ ರಾಜಕೀಯ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಇಕ್ಕೇರಿಯ ನಾಯಕರು, ಜಿಂಜಿ, ತಂಜಾವೂರು ಇನ್ನು ಹಲವು ಪಾಳೆಗಾರರು ಕೂಡ ತಮಗೆ ತಾವೇ ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು.

ತಾಳಿಕೋಟೆ ಯುದ್ಧಾನಂತರ ಸುಮಾರು ಐವತ್ತು ವರ್ಷಗಳ ಕಾಲ ವಿಜಯನಗರದ ಅರಸನಾದ ಎರಡನೇ ವೆಂಕಟಪತಿ ಮತ್ತು ಮೂರನೆಯ ಶ್ರೀರಂಗರಾಯ ಕೆಲವೇ ಕೆಲವು ದೃಢನಿಷ್ಠೆಯುಳ್ಳ ಪಾಳೆಗಾರರ ಬೆಂಬಲದಿಂದ ವಿಜಯನಗರದ ಅಳಿದುಳಿದ ಅಧಿಪತ್ಯವನ್ನು ಆಳಿದರು. ಅಂತಹ ಸಾಮಂತ ರಾಜರಲ್ಲಿ ದೇಶಾಭಿಮಾನಿಯೂ ಸ್ವಾಮಿನಿಷ್ಠೆಯುಳ್ಳವನೂ ಆದ ಇಮ್ಮಡಿ ಕೆಂಪೇಗೌಡನು ಒಬ್ಬನಾಗಿದ್ದನು.

ಇಮ್ಮಡಿ ಕೆಂಪೇಗೌಡನು ತನ್ನ ಧೈರ್ಯ, ಸಾಹಸದಿಂದ ವಿಜಯನಗರ ಅರಸರ ಗಮನಕ್ಕೆ ಬಂದು ಅವರ ಅಂತರಂಗದ ಮೆಚ್ಚುಗೆಗೆ ಪಾತ್ರನಾಗಿರುತ್ತಾನೆ. ಇವನು ಹೊಸಕೋಟೆ ಪಾಳೆಯಗಾರನಾದ ಚಿಕ್ಕರಾಯನ ಪ್ರದೇಶವನ್ನು ಲೂಟಿಮಾಡಿ ಅವನ ಪ್ರಜೆಗಳ ಮೇಲೆ ಪ್ರತೀಕಾರವನ್ನು ಮಾಡಿ ತನ್ನ ನಂಬಿಕೆಯನ್ನು ದೃಢಪಡಿಸಿದ. ಈ ಘಟನೆಯಿಂದ ಪೆನುಗೊಂಡದ ವೆಂಕಟಪತಿರಾಯನು ಕೆರಳಿ ಮೇಲೆ ಹೇಳಿದ ಪಾಳೆಯಗಾರರನ್ನು ಆಕ್ರಮಣ ಮಾಡಲು ಉದ್ರೇಕಿಸಿದ ಕ್ಷಣಮಾತ್ರದಲ್ಲೆ ಇಮ್ಮಡಿ ಕೆಂಪೇಗೌಡನಿಂದ ಕೋಟೆಯನ್ನು ಮುತ್ತಿಗೆ ಹಾಕಿಸಿದನು. ಆದರೆ ಇಮ್ಮಡಿ ಕೆಂಪೇಗೌಡ ತಮ್ಮ ಚಾಣಾಕ್ಷತನದಿಂದ ಅವರವರಲ್ಲೆ ನಂಬಿಕೆದ್ರೋಹ ಮಾಡಿಸಿ ಎಲ್ಲರನ್ನೂ ಬೇರ್ಪಡಿಸಿ ಯುದ್ಧವನ್ನು ಗೆದ್ದನು. ಪುನಃ ಹೊಸಕೋಟೆಯ ಮೇಲೆ ಮುತ್ತಿಗೆ ಹಾಕಿ ಅದನ್ನು ನೆಲಸಮ ಮಾಡಿದನು. ಇಷ್ಟರಿಂದಲೇ ಬೆಂಗಳೂರು ಎರಡನೇ ಕೆಂಪೇಗೌಡನು ತೃಪ್ತನಾಗದೆ ಆ ಪಾಳೆಯಗಾರರಿಂದ ವಿಜಯನಗರದ ಅರಸರಿಗೆ ಕಪ್ಪಕಾಣಿಕೆ ಕೊಡುವಂತೆ ಮಾಡುತ್ತಾನೆ. ವಿಜಯನಗರದ ಅರಸನಾದ ವೆಂಕಟಪತಿರಾಯನ ಕಿರೀಟಧಾರಣೆಯಲ್ಲಿ ಇಮ್ಮಡಿ ಕೆಂಪೇಗೌಡ ಕೂಡ ಆ ಪಾಳೆಗಾರರೊಂದಿಗೆ ಪಾಲ್ಗೊಂಡಾಗ ಅವನ ಸ್ವಾಮಿನಿಷ್ಠೆಯಿಂದ ಸಂತೋಷಗೊಂಡ ಅರಸನು ವಿಜಯನಗರದ ಅಧಿಕಾರ ರಕ್ಷಕನೆಂದು ಬಿರುದನ್ನು ಕೂಡ ದಯಪಾಲಿಸುತ್ತಾನೆ.

ಮೈಸೂರು ರಾಜ್ಯ – ಶ್ರೀರಂಗರಾಯ – ಮಾಗಡಿ ಕೆಂಪೇಗೌಡ

ವಿಜಯನಗರ ಸಾಮ್ರಾಟ ಕೃಷ್ಣದೇವರಾಯನ ಕಾಲದಲ್ಲಿ ಮೈಸೂರು ರಾಜ್ಯ ಮತ್ತು ಯಲಹಂಕನಾಡ ಪ್ರಭುಗಳು ಅವರಿಗೆ ಅಧೀನರಾಗಿದ್ದರು. ಉಮ್ಮತ್ತೂರಿನ ಪಾಳೇಯಗಾರನನ್ನು ಸೋಲಿಸಿದ ವಿಜಯನಗರ ಸಾಮ್ರಾಟರು ದಕ್ಷಿಣದಲ್ಲಿ ಯಾವುದೇ ವಿರೋಧಗಳಿಲ್ಲದೆ ಇದ್ದರೂ ವಿಜಯನಗರ ಪತನಾನಂತರ ನಿಷ್ಠೆಯನ್ನು ಬದಲಿಸಿದ ಕೆಲವರು ಸ್ವಾತಂತ್ರ್ಯ ಘೋಷಿಸಿಕೊಳ್ಳತೊಡಗಿದರು. ಮಾಗಡಿ ಕೆಂಪೇಗೌಡನು ವಿಜಯನಗರಕ್ಕೆ ನಿಷ್ಠನಾಗಿದ್ದದ್ದು ಮೈಸೂರು ಪಾಳೇಪಟ್ಟುಗಳಿಗೆ ಹಿಡಿಸುತ್ತಿರಲಿಲ್ಲ. ಕೆಂಪೇಗೌಡನ ದಿಗ್ವಿಜಯವನ್ನು ಕೇಳಿ ಅಸೂಯೆಗೊಂಡ ಶ್ರೀರಂಗಪಟ್ಟಣ ಶ್ರೀರಂಗರಾಯನು ಗೌಡನನ್ನು ಕೆಣಕಿ ಈ ರಾಜ್ಯದ ಮೇಲೆರಗಿದನು. ಆದರೆ ಗೌಡನು ಹೆದರಲಿಲ್ಲ. ಬಲಶಾಲಿಯೆನಿಸಿದ್ದ ಶ್ರೀರಂಗರಾಯನ ದಂಡನ್ನು ಹಾರು ಹೊಡೆದು ಸೋಲಿಸಿದ್ದಲ್ಲದೆ ಅವನ ಆನೆ–ಕುದುರೆಗಳನ್ನೆಲ್ಲಾ ಸೆಳೆದುಕೊಂದನು. ಹೀಗೆ ಸೋತು ಎಲ್ಲವನ್ನೂ ಕಳೆದುಕೊಂಡು ಕಂಗಾಲಾಗಿದ್ದ ಶ್ರೀರಂಗರಾಯನನ್ನು ಮೈಸೂರಿನ ರಾಜ ಒಡೆಯರು ಎದುರಿಸಿ, ಶ್ರೀರಂಗಪಟ್ಟಣವನ್ನು ತನ್ನ ವಶಪಡಿಸಿಕೊಂಡನು.

ವಿಜಯನಗರದ ವೆಂಕಟಪತಿರಾಯನಿಗೂ ಶ್ರೀರಂಗಪಟ್ಟಣದ ಶ್ರೀರಂಗರಾಯನಿಗೂ ವೈಮನಸ್ಯವಿದ್ದುದರಿಂದ ಈ ಸಮಯದಲ್ಲಿ ವೆಂಕಟಪತಿರಾಯ ರಾಜ ಒಡೆಯರ ವಿರುದ್ಧ ಹೋರಾಡಲಿಲ್ಲ ಎಂದು ಊಹಿಸಬಹುದು. ಈ ರಹಸ್ಯವನ್ನರಿತೇ ಕೆಂಪೇಗೌಡ ಶ್ರೀರಂಗಪಟ್ಟಣದ ಮೇಲೆ ಯುದ್ಧ ಹೂಡಿದ್ದನೆನ್ನಬಹುದು. ಇಮ್ಮಡಿ ಕೆಂಪೇಗೌಡನು ಶ್ರೀರಂಗರಾಯನನ್ನು ಗೆದ್ದು ಆನೆ ಕುದುರೆಗಳನ್ನು ವಶಪಡಿಸಿಕೊಂಡ ವೃತ್ತಾಂತವನ್ನು ಏಕಾಂಬರಶಾಸ್ತ್ರಿಯು ತನ್ನ ವೀರಭದ್ರ

ವಿಜಯದ ಕಾವ್ಯ 4ನೇ ಉಲ್ಲಾಸದಲ್ಲಿ ವರ್ಣಿಸಿದ್ದಾನೆ. ಇದು ಐತಿಹಾಸಿಕ ಸತ್ಯವಾದುದೆಂದು ತಿಳಿದುಕೊಳ್ಳಬಹುದಾಗಿದೆ. ಇಮ್ಮಡಿ ಕೆಂಪೇಗೌಡನ ಈ ವಿಜಯವು ಕೆಂಪೇಗೌಡ ಜಯಪ್ರಶಸ್ತಿಯ ಮೊದಲನೆಯ ಭಾಗ ರಚನೆಯಾದ ಮೇಲೆ (ಕ್ರಿ.ಶ. 1512) ಸುಮಾರು ಎರಡು ವರ್ಷಗಳಲ್ಲಿ (ಕ್ರಿ.ಶ. 1514ರಲ್ಲಿ) ನಡೆದದ್ದಾಗಿರಬಹುದೆಂದು ಇದರ ಕಾಲವನ್ನು ಊಹಿಸಬಹುದಾಗಿದೆ.

ಬೆಡಗಿನ ತೇಜಿಯವೇರಿ ಚಾಮರಗಳ
ಬಿಡದೆ ಢಾಳಿಸಿಕೊಳ್ಳುನಾರೆ ॥
ಮಡದಿರನ್ನಳೆ ಕೇಳು 'ಕುಣಿಗಿಲ ನಾಳುವ ।
ದೊಡ್ಡ ಕೆಂಪೇಗೌಡ'ನೆ ಕೇಳು ॥
ಮುತ್ತಿನ ಕುಚ್ಚಿನಂದಣವೇರಿ ಸುಭಟರ ।
ಮೊತ್ತದೆ ಬಹ ದೊರೆಯಾರೆ
ಉತ್ತಮ "ಮಾಗಡಿಯಧಿಪತಿ ಚಿಕಗೌಡ"
ಚಿತ್ತ ಜರೂಪನಬ್ಜಾಕ್ಷಿ ॥

ಈ ಪದ್ಯಗಳಲ್ಲಿ (ಗೋವಿಂದ ವೈದ್ಯನ 'ಕಂಠೀರವ ನರಸರಾಜೇಂದ್ರ ವಿಜಯ') ಬಣ್ಣಿಸಿರುವ ಸೊಗಸನ್ನು ನೋಡಿದರೆ ಅವನಿಗೆ ಮಾಗಡಿ ದೊರೆಗಳ ವೈಭವದ ವಿಷಯದಲ್ಲಿ ಇದ್ದ ಆದರವನ್ನು ತೋರಿಸುತ್ತದೆ.

ಮುಮ್ಮಡಿ ಕೆಂಪೇಗೌಡ (ಮಳೆ ಕೆಂಪರಾಯ) (1633–1678)

ಇಮ್ಮಡಿ ಕೆಂಪೇಗೌಡನ ಮಗ ಮೂರನೇ ಕೆಂಪೇಗೌಡನು 1633ರಲ್ಲಿ ಅಧಿಕಾರಕ್ಕೆ ಬಂದು 1678ರವರೆಗೂ ಆಳ್ವಿಕೆ ನಡೆಸಿದನು. ಈತ ವಿಜಯನಗರದ ಅರಸ ಮೂರನೆಯ ವೆಂಕಟಪತಿಯ (1630–42) ವಿರುದ್ಧ ದಂಗೆ ಎದ್ದ ಪಾಳೆಯಗಾರರನ್ನು ಸದೆಬಡಿಯುವುದರಲ್ಲಿ ಸಹಾಯ ಮಾಡಿದನೆಂದು ಹೇಳಲಾಗಿದೆ. ಈ ರೀತಿ ಸಹಾಯ ಮಾಡಿದುದಕ್ಕೆ ಮುಮ್ಮಡಿ ವೆಂಕಟನಿಂದ 'ಸ್ವಾಮಿ ದ್ರೋಹದ ಗಂಡ' ಎಂಬ ಬಿರುದನ್ನು ಪಡೆದನು. ವಿಜಯನಗರದ ಮೂರನೇ ಶ್ರೀರಂಗರಾಯನ ಮರಣದನಂತರವೂ ಅವನ ಸಾಮಂತರೆಂದೇ ಹೇಳಿಕೊಂಡಿದ್ದಾನೆ. ಮೂರನೇ ಕೆಂಪೇಗೌಡನ ಕಾಲದ ಶಾಸನಗಳು ಮಾಗಡಿ ಸೀಮೆಗೆ ಮಾತ್ರ ಸೀಮಿತವಾಗಿದೆ. 1667ರ ಮೂರನೇ ಕೆಂಪೇಗೌಡನ ಅರಳುಕುಪ್ಪೆ ಶಾಸದ ವಾರಣಾಸಿಯಲ್ಲಿ ಒಂದು ಮಠವನ್ನು ಸ್ಥಾಪಿಸಿ ಒಂದು ಲಿಂಗವನ್ನು ಪ್ರತಿಷ್ಠಾಪಿಸಿ ಅದರ ನಿರ್ವಹಣೆಗೆ ಅರಳುಕುಪ್ಪೆ ಗ್ರಾಮವನ್ನು ನೀಡಿದನೆಂದು ತಿಳಿದುಬರುತ್ತದೆ.

ಮುಮ್ಮಡಿ ಕೆಂಪೇಗೌಡನ ಹಾಲಶೆಟ್ಟಿಹಳ್ಳಿ ಶಾಸನ ಕೆಂಪಸಾಗರ ಎಂಬ ಕೆರೆಯನ್ನು ನಿರ್ಮಿಸಿದುದರ ಬಗ್ಗೆ ತಿಳಿಸುತ್ತದೆ. ಅದನ್ನು ನೋಡಿಕೊಳ್ಳಲು ತನ್ನ ಕೆರೆಯ ಹೂಳನ್ನು ಎತ್ತಿಹಾಕಲು ದಾಸೇಬೋವಿಗೆ ಭೂಮಿಯನ್ನು ನೀಡಲಾಯಿತೆಂದು ತಿಳಿಸುತ್ತದೆ.

ವಿಜಯನಗರದ ಅರಸ ಶ್ರೀರಂಗರಾಯನು ಪೆನುಗೊಂಡೆಯಿಂದ ರಾಜ್ಯಭಾರಮಾಡುತ್ತಿದ್ದಾಗ ಯಲಹಂಕ ನಾಡಪ್ರಭು ಮುಮ್ಮಡಿ ಕೆಂಪೇಗೌಡನು ತನ್ನ ಆಳ್ವಿಕೆಗೆ ಸೇರಿದ ಮಾಗಡಿ ಹೋಬಳಿಯ ಹೆರಳಿಗನಹಳ್ಳಿ ಎಂಬ ಗ್ರಾಮಕ್ಕೆ ಪ್ರತಿನಾಮಧೇಯವಾದ ಮುಮ್ಮಡಿ ಕೆಂಪಸಾಗರದ ಚತಲದಾಸ ಬೋಯಿಗೆ ಹಾಲಶೆಟ್ಟಿಹಳ್ಳಿಯಲ್ಲಿ ಒಂದು ಖಂಡುಗ ಹೊಲ, ಶ್ರೀಪತಿ ಹಳ್ಳಿಯಲ್ಲಿ ಮೂರು ಖಂಡುಗ ಧಾನ್ಯ ಬೆಳೆಯಬಹುದಾದಷ್ಟು ಹೊಲವನ್ನು ದಾನವಾಗಿ ಕೊಟ್ಟ ವಿವರಗಳಿವೆ. ಶಾಸನದ ಮುಂದಿನ ಭಾಗದಲ್ಲಿ ಒಂದು ಕೋಣಕ್ಕೆ ನಾಲ್ಕು ಗೋಣಿ ಚೀಲದಂತೆ ನಾಲ್ಕು ಕೋಣಕ್ಕೆ 48 ಗೋಣಿಚೀಲ ಧಾನ್ಯ ಬೆಳೆಯಬಹುದಾದಷ್ಟು ಭೂಮಿಯನ್ನು ದಾನವಾಗಿ ಕೊಟ್ಟರು" ಎಂಬ ವಿವರಗಳಿವೆ. (ಹಾಲಶೆಟ್ಟಿಹಳ್ಳಿ ಕೆರೆ ಕೋಡಿಯ ಬಳಿ ವಿಘ್ನೇಶ್ವರ ದೇವಸ್ಥಾನದ ಪಕ್ಕದಲ್ಲಿನ ಶಿಲಾಶಾಸನ *EC*, Vol. - IX ಮಾಗಡಿ 30).

ಕೆಂಪಸಾಗರ ಶಾಸನ ಒಂದು ಅಗ್ರಹಾರವನ್ನು ಸ್ಥಾಪಿಸಿ 12 ಜನ ವಿದ್ವಾಂಸರಿಗೆ ಭೂಮಿಯನ್ನು ದಾನ ಮಾಡಿದುದನ್ನು ವಿವರಿಸುತ್ತದೆ. ವಿಜಯನಗರ ಅರಸ ಶ್ರೀರಂಗರಾಯನು ಪೆನುಗೊಂಡೆಯಿಂದ ರಾಜ್ಯಭಾರ ಮಾಡುತ್ತಿದ್ದಾಗ ಯಲಹಂಕ ನಾಡಪ್ರಭು ಮುಮ್ಮಡಿ ಕೆಂಪೇಗೌಡನು ತನ್ನ ಆಳ್ವಿಕೆಗೆ ಸೇರಿದ ಮಾಗಡಿ ಹೋಬಳಿಯ ಹೆರಗನಹಳ್ಳಿ ಎಂಬ ಗ್ರಾಮಕ್ಕೆ ಪ್ರತಿನಾಮಧೇಯವಾದ ಮುಮ್ಮಡಿ ಕೆಂಪಸಾಗರದಲ್ಲಿ ನರಸಂಭಟ್ಟ, ಅಯ್ಯಂಭಟ್ಟ, ಕಾಳಂಭಟ್ಟ, ನರಸಿಂಹ ದೀಕ್ಷಿತ, ನಾರಾಯಣಭಟ್ಟ, ತಿಮ್ಮಾವಧಾನಿ, ಕಪಿನಿಭಟ್ಟ, ನಂಜುಂಡಯ್ಯ, ಲಿಂಗನ ಸೋಮಯಾಜಿ, ಭಾಗಂಭಟ್ಟ, ಕೋನಪ್ಪ ಶಿಖಾಮಣಿ, ಮುಂತಾದ 12 ಮಂದಿ ಬ್ರಾಹ್ಮಣರಿಗೆ ಒಂದು ಕ್ಷೇತ್ರಕ್ಕೆ 30 ಕೊಳಗ ಹೊಲ, ಮುವತ್ತು ಕೊಳಗ ಗದ್ದೆ, ಅಡಿಕೆ ಮರಗಳು ಸೇರಿದಂತೆ 12 ಕ್ಷೇತ್ರಗಳನ್ನು ಏರ್ಪಡಿಸಿ ಕೆಂಪಸಾಗರದಲ್ಲಿ ಭೂಮಿ ಸಾಲದೆ ಇದ್ದಾಗ ಹಾಲಶೆಟ್ಟಿಹಳ್ಳಿಯಲ್ಲಿ ಹೊಲ 30 ಕೊಳಗ, ಸಾತನೂರಲ್ಲಿ ಗದ್ದೆ 30 ಕೊಳಗವನ್ನು ಸೇರಿಸಿ ಧಾರಾಪೂರ್ವಕವಾಗಿ ದಾನ ಮಾಡಿದ ವಿವರಗಳಿವೆ.

ವಿಜಯನಗರ ಸಾಮ್ರಾಜ್ಯಪದ್ಧತಿಯಂತೆ ಕನ್ನಡ-ತೆಲುಗು ಭಾಷಾ ಕವಿಗಳಿಗೆ ಆಶ್ರಯ, ಪ್ರೋತ್ಸಾಹ ಕೊಡುತ್ತಿದ್ದಂತೆ ಈತ ಕೂಡ ಸಾಮ್ರಾಜ್ಯ ಪದ್ಧತಿಯನ್ನು ಮುಂದುವರಿಸಿರಬಹುದು. ಹೀಗೆ ತನ್ನ ಪೂರ್ವಿಕರ ಆದರ್ಶ, ಪ್ರಜಾಕಲ್ಯಾಣ ವಿಶೇಷವಾಗಿ ರೈತರಿಗೆ ಪ್ರೋತ್ಸಾಹ ನೀಡಿದ್ದ ಮುಮ್ಮಡಿ ಕೆಂಪೇಗೌಡ 1678ರಲ್ಲಿ ನಿಧನನಾದನು.

ಯಲಹಂಕ ನಾಡಪ್ರಭುಗಳು ಆಳುತ್ತಿದ್ದ ಪ್ರದೇಶ ಬೆಂಗಳೂರು, ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಅನೇಕ ಭಾಗಗಳಲ್ಲಿ ಜನರು ದ್ವಿಭಾಷಿಗಳಾಗಿದ್ದು, ತೆಲುಗು ಮತ್ತು ಕನ್ನಡ ಎರಡು ಭಾಷೆಗಳನ್ನು ಉಪಯೋಗಿಸುತ್ತಿದ್ದರು. ವಿಜಯನಗರದ ದೊರೆಗಳ ಆಸ್ಥಾನದಲ್ಲಿ ಎರಡು ಭಾಷೆಗಳ ಕವಿಗಳು ಇರುತ್ತಿದ್ದರು. ಅದರಂತೆ ಕೆಂಪೇಗೌಡ ಮತ್ತು ಅವನ ವಂಶದವರು ಕನ್ನಡ ತೆಲುಗು ಎರಡು ಭಾಷೆಗಳಿಗೂ ಸಮಾನ ಪ್ರೋತ್ಸಾಹ ನೀಡಿದ್ದರು. ಈ ಸಂತತಿಯ ಅರಸರು ತೆಲುಗಿನಲ್ಲಿ ಕೃತಿ ರಚನೆ ಮಾಡಿದರು ಎಂದು ಹೇಳಲಾಗಿದೆ.

ಕೆಂಪವೀರಪ್ಪಗೌಡ (1705-1728) (ಮುಮ್ಮಡಿ ಕೆಂಪವೀರಪ್ಪಗೌಡ)

ದೊಡ್ಡ ವೀರಪ್ಪಗೌಡನ ಉತ್ತರಾಧಿಕಾರಿ ಕೆಂಪವೀರಪ್ಪಗೌಡ ಅಧಿಕಾರಕ್ಕೆ ಬಂದನು. ಕೆಂಪವೀರಪ್ಪ ತನ್ನ ತಂದೆಯ ಆಳ್ವಿಕೆಯ ಕಾಲದಿಂದಲೂ ಆಡಳಿತದಲ್ಲಿ ಭಾಗವಹಿಸಿದ್ದನು. ಯಲಹಂಕ ನಾಡ ಪ್ರಭುಗಳ ವಂಶಸ್ಥರಲ್ಲಿ ಕೊನೆಯವನಾದ ಈತ ತನ್ನ ಪೂರ್ವಿಕರಂತೆಯೇ ಖ್ಯಾತಿ ಪಡೆದಿದ್ದನು. ಇವನ ಕಾಲಕ್ಕೆ ವಿಜಯನಗರಸಾಮ್ರಾಜ್ಯ ಸಂಪೂರ್ಣವಾಗಿ ಅಳಿದುಹೋಗಿತ್ತು. ಒಂದು ಸುಭದ್ರ ಸಾಮ್ರಾಜ್ಯ ಹಾಗೂ ಸಾಮ್ರಾಟನಿಲ್ಲದೆ ದಕ್ಷಿಣ ಭಾರತದಲ್ಲಿ ಅನೇಕ ಪ್ರಾಂತಗಳು / ಪಾಳೆಪಟ್ಟುಗಳು ಸ್ವತಂತ್ರವಾಗಿ ಪ್ರತಿಯೊಬ್ಬ ಸಾಮಂತ-ಮಾಂಡಳಿಕರು ತಮ್ಮ ಪ್ರಾಂತಕ್ಕೆ ತಾವೇ ರಾಜರೆಂದು ಘೋಷಿಸಿಕೊಂಡರು. ನೆರೆ ಹೊರೆಯ ಪ್ರಾಂತಗಳ ಮೇಲೆ ಸಣ್ಣಪುಟ್ಟ ಯುದ್ಧಗಳನ್ನು ಮಾಡುತ್ತಾ ಸ್ವೇಚ್ಛಾಚಾರಿಗಳಾಗಿ ತಮ್ಮ ತಮ್ಮ ಶಕ್ತಿಯನ್ನು ಕಳೆದುಕೊಳ್ಳುವ ಹಂತಕ್ಕೆ ತಲುಪಿದ್ದರು.

ಕೆಂಪ ವೀರಪ್ಪಗೌಡನು ಇಂತಹ ರಾಜಕೀಯ ಅತಂತ್ರ ಪರಿಸ್ಥಿತಿಯಲ್ಲಿ ಮಾಗಡಿ ಸೀಮೆಯ ಮಟ್ಟಿಗೆ ಉತ್ತಮ ಆಡಳಿತ ನೀಡಿ ಪ್ರಜಾಪ್ರೀತಿಗೆ ಪಾತ್ರವಾಗಿದ್ದನು. ತನ್ನ ಧಾರ್ಮಿಕ ಕಾರ್ಯಗಳನ್ನು ಮುಂದುವರಿಸಿದ್ದನು.

ವಿಜಯನಗರ ಮತ್ತು ಯಲಹಂಕನಾಡಿನ ಆಡಳಿತಾತ್ಮಕ ಪರಿಣಾಮಗಳು/ಸಂಬಂಧಗಳು

ಆಡಳಿತ ವ್ಯವಸ್ಥೆ

ಯಲಹಂಕ ನಾಡ ಪ್ರಭುಗಳು (ರಣಭೈರೇಗೌಡನ ಕಾಲದಿಂದ) ವಿಜಯನಗರದ ಅಧೀನ ಅಧಿಕಾರಿಗಳಾಗಿ ನಾಡ ಪ್ರಭುಗಳಾಗಿ ಆಳ್ವಿಕೆ ನಡೆಸಿದರು. ಇವರ ಆಡಳಿತ ವ್ಯವಸ್ಥೆ ವಿಜಯನಗರ ಆಡಳಿತ ವ್ಯವಸ್ಥೆಯ ತಳಹದಿಯ ಮೇಲೆ ನಿಂತಿದ್ದಿತು. ಇವರ ಕಾಲದಲ್ಲಿ ರಾಜಕೀಯ ಅಸ್ಥಿರತೆ ಇಡೀ ದಕ್ಷಿಣ ಭಾರತವನ್ನೇ ವ್ಯಾಪಿಸಿದ್ದರಿಂದ ಆಡಳಿತ ಧೋರಣೆ ಮಾತ್ರ ಆಯಾ ರಾಜರ, ಅಧಿಕಾರಿಗಳ, ಸಾಮಂತರ, ಪಾಳೆಗಾರರ ವೈಯಕ್ತಿಕ ಸಾಮರ್ಥ್ಯ, ಶಕ್ತ್ಯಾನುಸಾರಗಳ

ಮೇಲೆ ಆಳ್ವಿಕೆ ಅವಲಂಬಿತವಾಗಿತ್ತು. ಈ ಯಲಹಂಕ ನಾಡ ಪ್ರಭುಗಳು ಸುಮಾರು 150 ವರ್ಷಗಳ ಕಾಲ ವಿಜಯನಗರದ ನೇರ ಅಧೀನದಲ್ಲಿ ಆಡಳಿತ ನಡೆಸಿದರು. ಇವರ ಆಡಳಿತ ಪದ್ಧತಿಯನ್ನು ಅರಿಯಲು ಕೆಲವೇ ಆಕರಗಳು ಲಭ್ಯವಾಗಿದ್ದು, ಇವರ ಕಾಲದ ಕೇಂದ್ರ ಪ್ರಭುತ್ವದ ಆಡಳಿತ ಪದ್ಧತಿಯನ್ನು ತಿಳಿಯಬೇಕಾಗುತ್ತದೆ.

ವಿಜಯನಗರ ಕಾಲದ ಶ್ರೇಣೀಕೃತ ಆಡಳಿತದ ಹಂತಗಳು

ಸಾಮ್ರಾಟ ಅಥವಾ ಮಹಾರಾಜ
|
ಮಹಾಮಂಡಲೇಶ್ವರ ಅಥವಾ ಮಂಡಲೇಶ್ವರ
|
ಸಾಮ್ರಾಟನ ಪ್ರತಿನಿಧಿ
|
ಸಾಮಂತ ಅಥವಾ ಪಾಳೆಯಗಾರ
|
ಸ್ಥಳದ ಗೌಡ ಅಥವಾ ಮಂದೇಗೌಡ
|
ಗ್ರಾಮ ಗೌಡ

ಕೇಂದ್ರ ಪ್ರಭುತ್ವದ ಪರಿಣಾಮವಾಗಿ ಯಲಹಂಕ ನಾಡು ಕೂಡ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಈ ರೀತಿಯಾಗಿ ರಚಿಸಿಕೊಂಡು ವಿಜಯನಗರ ಸಾಮ್ರಾಜ್ಯಕ್ಕೆ ವಿಧೇಯರಾಗಿ ಆಳ್ವಿಕೆ ನಡೆಸುತ್ತಿದ್ದರು.

ನಾಡಪ್ರಭುಗಳ ಶ್ರೇಣೀಕೃತ ಆಡಳಿತ ವ್ಯವಸ್ಥೆ

ಮಹಾರಾಜ (ಸಾಮ್ರಾಟ-ವಿಜಯನಗರ)
|
ನಾಡಪ್ರಭು (ಸಾಮಂತರಾಜ-ಯಲಹಂಕ ನಾಡು)

ಮಂತ್ರಿಗಳು
|
ಪ್ರಧಾನ ಗುರಿಕಾರರು
|
ಗುರಿಕಾರರು
|
ಆಯಗಾರರು
(ಪಟೇಲ, ಶ್ಯಾನುಭೋಗ, ತೋಟಿ, ತಳವಾರ, ನೀರುಗಂಟಿ, ಜೋಯಿಸ, ಕಮ್ಮಾರ, ಬಡಗಿ, ಕುಂಬಾರ, ಅಗಸ, ಅಕ್ಕಸಾಲಿಗ, ನಾಯಿಂದ)

ಸೇನಾಪತಿಗಳು
|
ಪ್ರಧಾನ ದಳಪತಿ, ಉಪದಳಪತಿ
(ಕುದುರೆ ಸವಾರರು, ಕಾಲಾಳು, ಓಲೆಕಾರರು)

ಯಲಹಂಕ ನಾಡ ಪ್ರಭುಗಳ ಕಾಲದಲ್ಲಿ ಆಡಳಿತ ಶ್ರೇಣಿಯ ಮೂಲ ವ್ಯವಸ್ಥೆ ಗ್ರಾಮದಿಂದ ಆರಂಭವಾಗುತ್ತಿದ್ದಿತು. ಪುಟ್ಟಗ್ರಾಮದಲ್ಲಿ ಕನಿಷ್ಠ 20–30 ಕುಟುಂಬಗಳಿರುತ್ತಿದ್ದವು. ದೊಡ್ಡ ಗ್ರಾಮಗಳು 100ಕ್ಕೂ ಹೆಚ್ಚು ಕುಟುಂಬಗಳಿಂದ ಕೂಡಿದ್ದು ಗ್ರಾಮಕ್ಕೆ ಒಂದು ಪ್ರಾದೇಶಿಕ ಎಲ್ಲೆ ಇರುತ್ತಿತ್ತು. ಗ್ರಾಮ ಆಡಳಿತದ ಆರಂಭಿಕ ಘಟಕವಾಗಿದ್ದು ಇದರ ಮುಖ್ಯಸ್ಥ 'ಗೌಡ'. ಈತ ಗ್ರಾಮದ ಮುಖಂಡನಾಗಿದ್ದು ಸರ್ಕಾರದ ಮಧ್ಯವರ್ತಿಯಾಗಿದ್ದು ಕಾರ್ಯನಿರ್ವಹಿಸುತ್ತಿದ್ದನು. 'ಗೌಡಿಕೆ' ವಂಶಪಾರಂಪರ್ಯವಾಗಿ ಸಾಮಾನ್ಯವಾಗಿ ಮುಂದುವರೆಯುತ್ತಿತ್ತು. ಗ್ರಾಮದ ಮುಖ್ಯಸ್ಥರಾದ 'ಗೌಡ'ನ ಪ್ರಮುಖ ಕರ್ತವ್ಯಗಳೆಂದರೆ ಗ್ರಾಮದಲ್ಲಿನ ಭೂಮಿಯ ಮೇಲೆ ಕಂದಾಯ ನಿಗದಿಪಡಿಸಿ ರೈತರಿಂದ ವಸೂಲಿಮಾಡುವುದು, ವಿವಿಧ ವೃತ್ತಿಪರ ನಿರತ ವ್ಯಾಪಾರಿಗಳ ಮೇಲೆ ತೆರಿಗೆ ವಿಧಿಸಿ ಸರ್ಕಾರಕ್ಕೆ ಸಂದಾಯ ಮಾಡುವುದು, ಗ್ರಾಮದ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದು, ವ್ಯಾಜ್ಯಗಳನ್ನು ಪಂಚಾಯಿತಿ ಮೂಲಕ ತೀರ್ಮಾನಮಾಡುವುದು, ಗ್ರಾಮಸ್ಥರ ಕಷ್ಟನಷ್ಟಗಳನ್ನು ಗಮನಿಸುವುದು ಈತನ ಜವಾಬ್ದಾರಿಯಾಗಿತ್ತು. ಗೌಡಿಕೆ ಆನುವಂಶಿಕವಾದ ಮೇಲೆ ಕ್ರಮೇಣ ಅದಕ್ಕೆ ಜಾತಿಯ ಬಣ್ಣ ಬಂದಿತು. ಗೌಡಿಕೆಯನ್ನು ಬಹುತೇಕ ಸಮುದಾಯದ ಜನರು ಅವರವರ ಪ್ರಾಮುಖ್ಯತೆ ಪ್ರದೇಶಗಳಲ್ಲಿ ನಡೆಸುತ್ತಿದ್ದುದು ಕಂಡುಬರುತ್ತದೆ. ಗೌಡಿಕೆ ವಂಶಪಾರಂಪರ್ಯವಾಗಿದ್ದಿತು.

ವಿಜಯನಗರಕ್ಕೆ ನಾಡಪ್ರಭುಗಳು ಎಷ್ಟು ನಿಷ್ಠರಾಗಿದ್ದರೆಂದರೆ ಬೆಂಗಳೂರಿನ ಜಕ್ಕರಾಯನ ಕೆರೆ ನಿರ್ಮಾಣದ ಬಗ್ಗೆ ಒಂದು ಸಣ್ಣ ಉದಾಹರಣೆಯನ್ನು ನೀಡಬಹುದು. ಕೃಷ್ಣದೇವರಾಯನ ನಿಧನಾನಂತರ ಅಧಿಕಾರಕ್ಕಾಗಿ ಅಂತಃಕಲಹ ಆರಂಭವಾಗಿ, ಮಗ ತಿರುಮಲರಾಯನಿಗೆ ಅಧಿಕಾರ ಪಾತ್ರವಾಗಬೇಕಾಗಿತ್ತು. ಈತನಿಗೆ ವಿಷ ಹಾಕಿ ಕೊಲ್ಲಲಾಯಿತು. ಉಳಿದಿಬ್ಬರು ಮಕ್ಕಳು ಜಕ್ಕರಾಯ ಮತ್ತು ಅಚ್ಯುತರಾಯ. ಅಳಿಯರಾಮರಾಯ ಚಿಕ್ಕವಯಸ್ಸಿನ ಅಚ್ಯುತರಾಯನ ಪರ ನಿಂತ. ನಿಜವಾದ ಸಿಂಹಾಸನದ ಹಕ್ಕುದಾರ ಜಕ್ಕರಾಯ, ಈತನ ಪರ ಕೆಂಪೇಗೌಡ ಸೇರಿದಂತೆ ಹಲವು ಸಾಮಂತರು ನ್ಯಾಯಯುತ ಪದ್ಧತಿ ಎತ್ತಿಹಿಡಿದರು. ಅಂತಿಮವಾಗಿ ಯಾವುದಕ್ಕೂ ಬಗ್ಗದ ರಾಜರಾಯ ಜಕ್ಕರಾಯನನ್ನು ಸೆರೆಮನೆಗೆ ತಳ್ಳಿ ಕೊಲ್ಲಿಸಿದ. ಅಚ್ಯುತರಾಯನನ್ನು ಸಿಂಹಾಸನಕ್ಕೆ ಕೂರಿಸಿದ. ಯಲಹಂಕದ ಪ್ರಭುಗಳು ನಿಷ್ಠೆ, ಪ್ರಾಮಾಣಿಕತೆಗೆ ಹೆಸರಾದವರು. ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿ ವಿಫಲರಾದ ಮೇಲೆ ವಿಜಯನಗರ ಸಾಮ್ರಾಜ್ಯದ ಬಗ್ಗೆ ಇದ್ದ ನಿಷ್ಠೆ ಹಾಗೂ 'ಜಕ್ಕರಾಯನ ಕೆರೆ' ಎಂಬ ಊರನ್ನು, ತಾನು ಕಟ್ಟಿಸಿದ ಕೆರೆಗೆ 'ಜಕ್ಕರಾಯನ ಕೆರೆ' ಎಂದು ಹೆಸರಿಡುವ ಮೂಲಕ ಕೆಂಪೇಗೌಡ ತನ್ನ ನಿಷ್ಠೆಯನ್ನು ಮೆರೆದನು. ಬೆಂಗಳೂರು ಕೋಟೆಯ ಪಶ್ಚಿಮ ಭಾಗದಲ್ಲಿದ್ದ ಕೆರೆ ಇಂದು ಅಸ್ತಿತ್ವದಲ್ಲಿಲ್ಲ.

ಇಂತಹ ಉತ್ತಮ ಆಡಳಿತವನ್ನು ಹೊಂದಿದ್ದು ಕೆಂಪೇಗೌಡ ಪ್ರಭುಗಳು 220 ವರ್ಷಗಳ ಕಾಲ ಆಳ್ವಿಕೆ ನಡೆಸಿ ಶಾಂತಿ ಮತ್ತು ನೆಮ್ಮದಿಯಿಂದ ರಾಜ್ಯವಾಳಿದರು. ನಾಡ ಪ್ರಭುಗಳ ರಾಜ್ಯವನ್ನು 'ವಿಜಯನಗರ ಸಾಮ್ರಾಜ್ಯದ ದಕ್ಷಿಣದ ಕೋಟೆ' ಎಂದು ಕರೆಯಲಾಗುತ್ತಿತ್ತು. ಈ ದೊರೆಗಳು ವಿಜಯನಗರದ ಅರಸರಿಗೆ ನಿಷ್ಠೆಯಿಂದ ಇದ್ದು ತಮ್ಮ ಪ್ರಜೆಗಳನ್ನು ವಿಶ್ವಾಸದಿಂದ ನೋಡಿಕೊಂಡು ಅವರ ಕ್ಷೇಮವನ್ನು ವೃದ್ಧಿಸಲು ಕ್ರಮಕೈಗೊಂಡಿದ್ದರು.

ಕೆಂಪೇಗೌಡ ಪ್ರಭುಗಳ ರಾಜ್ಯವು ದಕ್ಷಿಣ ಭಾರತದಲ್ಲಿ 15ನೆಯ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದು ಅನಂತರ ಹಂತ ಹಂತವಾಗಿ ಬೆಳೆದು ಎರಡೂವರೆ ಶತಮಾನಗಳ ಕಾಲ ಮೈಸೂರು ಪ್ರದೇಶದ ಒಂದು ಪ್ರಮುಖ ಶಕ್ತಿಯಾಗಿ ಇತಿಹಾಸದಲ್ಲಿ ಮೆರೆದು ಕಣ್ಮರೆಯಾಯಿತು. ವಿಜಯನಗರದ ಸಾಮಂತ ರಾಜ್ಯವಾಗಿದ್ದು ನೆರೆಹೊರೆಯ ಸಂಸ್ಥಾನಗಳೊಂದಿಗೆ ಸಮಾನ ಸ್ಥಾನವನ್ನು ಪಡೆದಿದ್ದ ಕೆಂಪೇಗೌಡರ ರಾಜ್ಯವು ವಿಜಯನಗರದ ಪತನಾನಂತರ ಅದರಲ್ಲಿಯೂ 17ನೇ ಶತಮಾನದಲ್ಲಿ ನಡೆದ ಹಲವಾರು ರಾಜಕೀಯ ಬೆಳವಣಿಗೆಗಳ ಪರಿಣಾಮವಾಗಿ ಅವನತಿ ಹೊಂದುತ್ತಾ ಹೋಗಿ 18ನೇ ಶತಮಾನದಲ್ಲಿ ಆದಿಭಾಗದಲ್ಲಿ ಇತಿಹಾಸದಿಂದ ಕಣ್ಮರೆಯಾಯಿತು.

31

ಮುದಗಲ್ಲಿನ ದುರ್ಗಾಧಿಕಾರಿ ವೆಂಗಳಪ್ಪ

ಡಾ॥ ಅಮರೇಶ ಯತಗಲ್

ಐತಿಹಾಸಿಕ ಪ್ರಸಿದ್ಧ ಸ್ಥಳವಾದ ಮುದಗಲ್ಲು ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನಿಂದ ಗಂಗಾವತಿಗೆ ಹೋಗುವ ಮಾರ್ಗದಲ್ಲಿ 18 ಕಿ.ಮೀ. ಅಂತರದಲ್ಲಿದೆ. ಗ್ರೀಕ್ ದೇಶದ ಪ್ರವಾಸಿ ಹಾಗೂ ಭೂಗೋಳತಜ್ಞ ಟಾಲೆಮಿಯು ಕ್ರಿ.ಶ. 150ರಲ್ಲಿ ಬರೆದ *Indian Geography* ಎಂಬ ಕೃತಿಯಲ್ಲಿ ಕರ್ನಾಟಕದ ಕೆಲವು ಪ್ರಮುಖ ಐತಿಹಾಸಿಕ ಸ್ಥಳಗಳನ್ನು ಉಲ್ಲೇಖಿಸಿದ್ದಾನೆ. ಅದರಲ್ಲಿ ಮುದಗಲ್ಲನ್ನು "Modogallu" (ಮೊಡೊಗಲ್ಲು) ಎಂದು ಹೆಸರಿಸುತ್ತಾನೆ. ಹೀಗಾಗಿ ಆ ಕಾಲಕ್ಕೆ ಇದೊಂದು ಇತಿಹಾಸ ಮತ್ತು ಸಂಸ್ಕೃತಿಯ ಪ್ರದೇಶವಾಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ. ಇತಿಹಾಸಪೂರ್ವಕಾಲಕ್ಕೆ ಸಂಬಂಧಿಸಿದ ಪಿಕಳಿಹಾಳ ಎಂಬ ಗ್ರಾಮವು ಇಲ್ಲಿಂದ ಮೂರು ಕಿ.ಮೀ. ಅಂತರದಲ್ಲಿದೆ. ಅಲ್ಲದೆ ಮುದಗಲ್ಲು ಇತಿಹಾಸಪೂರ್ವಕಾಲದ ಮಾನವನ ವಾಸಸ್ಥಳದ ನೆಲೆಯಾಗಿತ್ತು.

ಮುದಗಲ್ಲು 13ನೆಯ ಶತಮಾನದ ಆರಂಭಕ್ಕೆ ಕರಡಿಕಲ್ಲು-300ರ ರಾಜಧಾನಿಯಾಗಿದ್ದು, ಕರಡಿಕಲ್ಲು ಕದಂಬರು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದರೆಂಬುದನ್ನು ಕರಡಿಕಲ್ಲು ಹಾಗೂ ಮುದಗಲ್ಲಿನಲ್ಲಿರುವ ಶಾಸನಗಳು ಉಲ್ಲೇಖಿಸುತ್ತವೆ. ಕ್ರಿ.ಶ. 1190ರ ಕರಡಿಕಲ್ಲು ಶಾಸನವು ಮುದಗಲ್ಲು ಪಟ್ಟಣ[1] ಎಂದು ಹೆಸರಿಸಿದೆ. ನಂತರದಲ್ಲಿ ಈ ಪ್ರದೇಶದಲ್ಲಿ ಕಲ್ಯಾಣ ಚಾಲುಕ್ಯರು, ಯಾದವರು ಹಾಗೂ ಕಾಕತೀಯರು ಆಳ್ವಿಕೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ಇಲ್ಲಿಯ ಕೋಟೆಯು ಕಟ್ಟಲ್ಪಟ್ಟಿತು. ನಂತರದಲ್ಲಿ ವಿಜಯನಗರದ ಅರಸರ ಕಾಲದಲ್ಲಿ ಕೋಟೆಯನ್ನು ಅಭಿವೃದ್ಧಿಗೊಳಿಸಲಾಯಿತು. ಇದು ಕೃಷ್ಣಾ-ತುಂಗಭದ್ರಾ (ದೋ-ಆಬ್) ನದಿಗಳ ಪ್ರದೇಶದ ಮಧ್ಯದ ಫಲವತ್ತಾದ ಪ್ರದೇಶವೆಂದು ಗುರುತಿಸಿಕೊಂಡಿತು. ಈ ಫಲವತ್ತಾದ ಪ್ರದೇಶಕ್ಕಾಗಿ ಬಿಜಾಪುರದ ಆದಿಲ್‌ಶಾಹಿಗಳು ಮತ್ತು ವಿಜಯನಗರದ ಅರಸರ ನಡುವೆ ಸುಮಾರು 13 ಯುದ್ಧಗಳು ಮುದಗಲ್ಲು ಭಾಗದಲ್ಲಿ ನಡೆದಿವೆ. ಇಲ್ಲಿನ ಕೋಟೆಯಲ್ಲಿ 80ಕ್ಕಿಂತ ಹೆಚ್ಚು ಶಾಸನಗಳು ಲಭ್ಯವಾಗಿವೆಯಲ್ಲದೆ, ಇಲ್ಲಿ ಅನೇಕ ಸ್ಮಾರಕಗಳು, ಕೆರೆ-ಬಾವಿಗಳು, ಅರಮನೆಯ ಅವಶೇಷಗಳು, ಮದ್ದುಗುಂಡಿನ ಉಗ್ರಾಣ ಮುಂತಾದವನ್ನು ಕಾಣಬಹುದಾಗಿದೆ. ಹೀಗೆ ಅನೇಕ ಐತಿಹಾಸಿಕ ಸಂಗತಿಗಳನ್ನು ಮುದಗಲ್ಲು ತನ್ನ ಗರ್ಭದಲ್ಲಿರಿಸಿಕೊಂಡಿದೆ.

ಎರಡನೇ ದೇವರಾಯನ (ಕ್ರಿ.ಶ. 1426-1446) ಆಳ್ವಿಕೆಯಲ್ಲಿ ಮುದಗಲ್ಲು ವರದಣ್ಣ ನಾಯಕನ ನಾಯಕತನದಲ್ಲಿತ್ತೆಂದು ಮುದಗಲ್ಲು ಕೋಟೆಯ ಕ್ರಿ.ಶ. 1436ರ ಮುಳ್ಳಗಸಿಯ ಶಾಸನ[2] ತಿಳಿಸುತ್ತದೆ. ಕ್ರಿ.ಶ. 1502ರಲ್ಲಿ ವಿಜಯನಗರ ಅರಸ ಸಾಳುವ ನರಸಿಂಹನ ಆಳ್ವಿಕೆಯಲ್ಲಿ ಸಾಳುವ ತಿಮ್ಮಯ್ಯನು ಮುದಗಲ್ಲು ಕೋಟೆಯೊಳಗಿನ ಬಾವಿಯನ್ನು ಕಟ್ಟಿಸಿದನು. ಅದನ್ನು ಇಂದು "ಚಾರ್‌ಮಹಲ್ ಬಾವಿ" ಎಂದು ಕರೆಯುತ್ತಾರೆ. ಕ್ರಿ.ಶ. 1543ರಲ್ಲಿ ಅಳಿಯ ರಾಮರಾಯನು ವಿಜಯನಗರವನ್ನು ಆಳ್ವಿಕೆ ಮಾಡುತ್ತಿದ್ದಾಗ ಆತನ ಮಗನಾದ ಕೃಷ್ಣರಾಜನ ಅಧೀನದಲ್ಲಿ ವೆಂಗಳಪ್ಪ ನಾಯಕನಿದ್ದನು. ಈತನು ಮುದಗಲ್ಲಿನ ದುರ್ಗಾಧಿಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದನು.

ದುರ್ಗಾಧಿಕಾರಿ ವೆಂಗಳಪ್ಪ ನಾಯಕನ ಕೆಲಸಕಾರ್ಯಗಳ ಕುರಿತಂತೆ ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಈತನು ಮುದಗಲ್ಲಿನ ಜನತೆಯ ಮನಸ್ಸಿನಲ್ಲಿ ಸದಾ ಅಚ್ಚಳಿಯದೆ ಉಳಿದ ವ್ಯಕ್ತಿಯಾಗಿದ್ದಾನೆಂಬ ಅಂಶವು ಗಮನಕ್ಕೆ ಬಂದಿತು. ಅಲ್ಲದೇ ಮುದಗಲ್ಲಿನಲ್ಲಿರುವ ನಾಲ್ಕು ಶಾಸನಗಳು, ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ದೊರೆತ ಒಂದು ಶಾಸನ, ಮುದಗಲ್ಲಿನಲ್ಲಿರುವ ಅನೇಕ ಸ್ಮಾರಕಗಳು, ವಾಕೀಯತ್-ಎ-ಮುಮಲಿಕತ್-ತಾರೀಕ್-ಎ-ಬಿಜಾಪುರ ಕೃತಿ ಹಾಗೂ ಇನ್ನೂ ಅನೇಕ ಮೌಖಿಕ ಮಾಹಿತಿಗಳು ಮುಂತಾದ ಆಕರಗಳು ವೆಂಗಳಪ್ಪನ ಜನಸೇವಾ ಕಾರ್ಯಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡುತ್ತವೆ.

ಮುದಗಲ್ ಮುಳ್ಳಗಸಿಯ ಮಂಟಪದ ಎಡಗೋಡೆಯಲ್ಲಿರುವ ಶಾಸನವು "ರಾಜರಾಜನ್ವಯಾಭರಣ ಮುಂತಾದ ವಿಶೇಷಣಗಳನ್ನು ಧರಿಸಿದ್ದ ಅಳಿಯ ರಾಮರಾಜನ ಮಗನಾದ ಕೃಷ್ಣಪರಾಜಯದೇವನ ಸೇವಕನಾದ ರಣರಂಗಧೀರನಾದ ವೆಂಗಳಪರಾಯನು ಮೊಗಸಾಲೆಯನ್ನು ಕಟ್ಟಿಸಿದನು"[3] ಎಂದು ಹೇಳುತ್ತದೆ. ಈ ಶಾಸನವು ಈತನಿಗೆ "ರಣರಂಗಧೀರ" ಎಂಬ ಬಿರುದಿತ್ತು ಎಂಬುದನ್ನು ಸೂಚಿಸುತ್ತದೆ.

ಕ್ರಿ.ಶ. 2-5-1560ರ ಶಾಸನವು ಮುಳ್ಳಗಸಿಯ ಮಂಟಪದ ಮರದ ಬಾಗಿಲಿನ ಮೇಲಿದೆ. ಅದರ ಸಾರಾಂಶ ಇಂತಿದೆ, "ವೆಂಗಳಪ್ಪ ನಾಯಕನು ಮಂಟಪದ ಈ ಕದವನ್ನು (ಬಾಗಿಲು) ಮಾಡಿಸಿದನು."[4] ಮುದಗಲ್ ಕೋಟೆಯ ನೈರುತ್ಯ ಬುರುಜಿನ ಸ್ಥಳದಲ್ಲಿಯ ಕ್ರಿ.ಶ. 1560ರ ಶಾಸನದ ಸಾರಾಂಶ ಇಂತಿದೆ: "ತುರುಕದಳದ ವಿನಾಶಕನಾದ ವೆಂಗಳಪ್ಪ ನಾಯಕನು ಕೊತ್ತಳವನ್ನು ಕಟ್ಟಿಸಿದನು."[5]

ಒಳಕೋಟೆಯ ಮೀನದಿಡ್ಡಿಯ ಬಳಿಯ ಕ್ರಿ.ಶ. 1560ರ ಶಾಸನದಲ್ಲಿ "ವೆಂಗಳಪ್ಪ ನಾಯಕರು ಕಟ್ಟಿಸಿದ ಕೊತ್ತಳವು"[6] ಎಂದಿದೆ. ಈ ಕೊತ್ತಳವನ್ನು ಬಸವನ ಕೊತ್ತಳವೆಂದು ಕರೆಯುತ್ತಾರೆ. ಸಿಂಧನೂರಿನ ಸಂಶೋಧಕರಾದ ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠರು ಇತ್ತೀಚೆಗೆ ಶೋಧಿಸಿದ ಕ್ರಿ.ಶ. 1560ರ ಶಾಸನವು ಸಿಂಧನೂರು ನಗರದಿಂದ ನೈರುತ್ಯಕ್ಕೆ ಸುಮಾರು ಐದು ಕಿ.ಮೀ. ದೂರದಲ್ಲಿರುವ ಮುಲ್ಲಾರ ಹೊಲದಲ್ಲಿದೆ. ಈ ಶಾಸನವು "ಶಕ ವರ್ಷ 1482ರ ರೌದ್ರಿ ಸಂವತ್ಸರದ ಶ್ರಾವಣ ಬಹುಳ ಸೋಮವಾರದಂದು ಅಳಿಯ ರಾಮರಾಯನು ವಿಜಯನಗರವನ್ನು ಆಳುತ್ತಿದ್ದು, ಆತನ ಮಗ ಕುಮಾರಕೃಷ್ಣಪರಾಜನು ಮುದಗಲ್ಲು ಪ್ರದೇಶದ ಅಧಿಪತಿ. ಈತನ ಕೆಳಗಿನ ದುರ್ಗಾಧಿಪತಿ ವೆಂಗಳಪ್ಪ ನಾಯಕನು ಮುದಗಲ್ಲಿನಿಂದ ಜಾಲಿಹಾಳ ಅಗ್ರಹಾರಕ್ಕೆ ಹೋಗುವ ದಾರಿಯಲ್ಲಿ ಅರವಟ್ಟಿಗೆಯನ್ನು ಮಾಡಿಸಿ, ಸಿಂಧನೂರು ಸೀಮೆಯಲ್ಲಿ ಭೂಮಿಯನ್ನು ದಾನ ಮಾಡಿದ"[7] ಎಂಬ ಮಾಹಿತಿಯನ್ನು ನೀಡುತ್ತದೆ.

"ಸುರಪುರ ಸಂಸ್ಥಾನದ ಅವಧಿಯಲ್ಲಿ ಬರೆಯಲ್ಪಟ್ಟ ಕೈಫಿಯತ್ತು ಮತ್ತು ಮುಸ್ತಫಾಖಾನ್‌ನೆಂಬ ಮುದಗಲ್ಲಿನ ದುರ್ಗಾಧಿಪತಿಯು ಕಲ್ಲಪ್ಪ ನಾಯಕನನ್ನು ಕರೆತಂದು ಮುದಗಲ್ಲಿನಲ್ಲಿ ಇರಿಸಿದನು. ಮುದಗಲ್ಲಿನಲ್ಲಿ ಬೇಡರ ವಸತಿಯಿರುವ ಗೋಸಲಪೇಟೆಯೆಂಬ ಓಣಿ ಇದ್ದು, ಅಲ್ಲಿ 'ಗೋಸಲರಾಯ'ನೆಂಬ ಮಾರುತಿ ದೇವಾಲಯವಿದೆ. ಈ ದೇವಾಲಯದ ಹಿಂಭಾಗದಲ್ಲಿ ಕ್ರಿ.ಶ. 1560ರ ಶಾಸನವಿದೆ. ಅಳಿಯ ರಾಮ ಕಿಷ್ಕಿಂಧಕುಮಾರ ಕೃಷ್ಣರಾಯ ಯಾದವ ಮಹಾರಾಜನ ಸೇವಕ ರಣಶೂರನಾದ ವೆಂಗಳಪ್ಪ ನಾಯಕನು ಈ ದೇವಾಲಯವನ್ನು ಕಟ್ಟಿಸಿದನು. ಅಲ್ಲದೆ ವೆಂಗಳಪ್ಪ ನಾಯಕನು ಮುದಗಲ್ಲಿನ ಸುತ್ತಲು ಕೋಟೆ-ಕೊತ್ತಲುಗಳನ್ನು, ಬಾವಿಗಳನ್ನು ಕಟ್ಟಿಸಿರುವ ಶಾಸನಗಳಿವೆ. ಮತ್ತು ಈತನ ಕುರಿತಾಗಿ ವಾಕೆಯತ್-ಎ-ಮುಮಲಿಕತ್-ತಾರೀಕ್-ಎ-ಬಿಜಾಪುರ ಎಂಬ ಗ್ರಂಥದಲ್ಲಿದೆ" ಎಂದು ಕಪಟರಾಳ ಕೃಷ್ಣರಾವ್ ಅವರು ಹೇಳುತ್ತಾರೆ.[8]

ಈ ಕೃತಿಯು ವೆಂಗಳಪ್ಪ ನಾಯಕನ ಕುರಿತಾಗಿ ಇರುವ ಶಾಸನಗಳ ವಿವರಣೆಯನ್ನು ನೀಡುತ್ತದೆ. ಅಲ್ಲದೆ ಪುರಾನಿ ಪೇಟೆ (ಹಳೇಪೇಟೆ) ಬಾವಿಯಲ್ಲಿ ಅಲಂಗಳನ್ನು (ಪೀರಲು ದೇವರು) ಮೊಹರಂ ತಿಂಗಳ ಹತ್ತನೇ ತಾರೀಖಿನಂದು

ಶಾಂತಗೊಳಿಸುತ್ತಾರೆ. ಈ ಬಾವಿಯನ್ನು ವೆಂಗಳಪ್ಪ ನಾಯಕನು ಶಾಲಿವಾಹನ ಶಕೆ 1482ರಲ್ಲಿ ಅರ್ಥಾತ್ ಹಿಜರಿ ಶಕೆ 978ರಲ್ಲಿ ಕಟ್ಟಿಸಿದನು[9] ಎಂಬ ಮಾಹಿತಿಯನ್ನು ನೀಡುತ್ತದೆ.

ವೆಂಗಳಪ್ಪನು ಮುಳ್ಳಗಸಿ ಹಾಗೂ ಅಲ್ಲಿಯ ಮೊಗಸಾಲೆಯನ್ನು ಕಟ್ಟಿಸಿದ ಕುರಿತಾದ ಮಾಹಿತಿಯು ಇದರಲ್ಲಿದೆ. ಈತ ಕಟ್ಟಿಸಿದ ಬಾವಿ ಮುದಗಲ್ಲಿನಲ್ಲಿಯ ಪೂರ್ವದಿಕ್ಕಿನ ಹಳೇಪೇಟೆಯಲ್ಲಿದೆ.[10] ಇದನ್ನು "ದೇವರ ಬಾವಿ"ಯೆಂದು ಕರೆಯುತ್ತಾರೆ. ಧಾರ್ಮಿಕ ಚಟುವಟಿಕೆಗಳಿಗಾಗಿ ಇದು ಬಳಕೆಯಾಗುತ್ತಿತ್ತು. ಅಂದು ಹೊಕ್ಕು ತುಂಬುವ ಬಾವಿಯಾಗಿದ್ದ ಇದನ್ನು ಲಿಯೋನಾರ್ಡ್ ಮನ್‌ನು ಗಿರಕಿ ಬಾವಿಯಯನ್ನಾಗಿ ಮಾರ್ಪಡಿಸಿದನು. ಈತನು ಹೈದರಾಬಾದ್ ನಿಜಾಮ ಸರ್ಕಾರದಲ್ಲಿ ಗಣಿ ಇಂಜಿನೀಯರನಾಗಿದ್ದನು. ಈತನನ್ನು ನಿಜಾಮ ಸರ್ಕಾರ ಏಪ್ರಿಲ್ 1928 ರಿಂದ ಅಕ್ಟೋಬರ್ 1935ರ ವರೆಗೆ ಭೌಗೋಳಿಕ ಸಮೀಕ್ಷೆಯ ನಿರ್ದೇಶಕ ಮತ್ತು ಬಾವಿಕೊರೆತ ವಿಭಾಗದ ವಿಶೇಷಾಧಿಕಾರಿಯಾಗಿ ಎರವಲು ಸೇವೆಯ ಮೇಲೆ ರಾಯಚೂರು ಜಿಲ್ಲೆಗೆ ನಿಯುಕ್ತಿಗೊಳಿಸಿತು. ಸಾವಿರ ಬಾವಿಯ ಸರದಾರನೆಂದು ಹೆಸರಾದ ಈತನು ಅಂದು ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯಲ್ಲಿ ಬರಗಾಲ ಬಿದ್ದಾಗ ಸುಮಾರು 1200 ಬಾವಿಗಳನ್ನು ತೋಡಿಸಿದನು.[11] ಆ ಸಂದರ್ಭದಲ್ಲಿ ಮುದಗಲ್ಲಿನ ದೇವರ ಬಾವಿಗೆ ಗಿರಕಿಯನ್ನು ಕೂಡಿಸಿದನು. ಅದರ ಮೇಲೆ H.E.H. NIZAMS-W.S.D, L-8/185, 1340 F ಎಂದು ಬರೆಯಿಸಿದನು.

ವೆಂಗಳಪ್ಪ ತೋಡಿಸಿದ ಹೊಕ್ಕು ತುಂಬುವ ಈ ಬಾವಿಯು ಇಂದಿಗೂ ಅನೇಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳಿಗಾಗಿ ಬಳಕೆಯಾಗುತ್ತಿರುವುದು ವಿಶೇಷವಾಗಿದೆ. ಹಳೇಪೇಟೆಯ ರಸ್ತೆ, ರಾಮಲಿಂಗ ದೇವಾಲಯ, ಹಳೇಮಠ, ಹಳೇಪೇಟೆ ಕೆರೆ ಮುಂತಾದವುಗಳನ್ನು ವೆಂಗಳಪ್ಪನು ನಿರ್ಮಿಸಿದ ಕುರಿತು ಅಲ್ಲಿನ ಜನರು ಹೇಳುತ್ತಾರೆ.

ಇನ್ನೂ ಈ ಭಾಗದಲ್ಲಿ ಸಂಪೂರ್ಣವಾದ ಕ್ಷೇತ್ರಕಾರ್ಯವನ್ನು ಕೈಗೊಂಡರೆ, ಅನೇಕ ಮಾಹಿತಿಗಳು, ಶಾಸನಗಳು, ಮೌಖಿಕ ವಿವರಗಳು, ಐತಿಹ್ಯಗಳು ಸಿಗಬಹುದು. ಅವುಗಳನ್ನು ಸಂಗ್ರಹಿಸಿ ಇತರ ಆಕರಗಳೊಂದಿಗೆ ತಾಳೆನೋಡುವ, ವಿಶ್ಲೇಷಿಸುವ ಅವಶ್ಯಕತೆಯೂ ಇದೆ. ಇಂತಹ ಮಾಹಿತಿಗಳೆಲ್ಲವೂ ದುರ್ಗಾಧಿಪತಿ ವೆಂಗಳಪ್ಪನ ಜನ ಸೇವಾಕಾರ್ಯಗಳ ಕುರಿತಾಗಿ ಬೆಳಕನ್ನು ಚೆಲ್ಲುತ್ತವಲ್ಲದೆ, ಅಲ್ಲಿನ ಜನ ಇಂದಿಗೂ ಈತನನ್ನು ಸ್ಮರಿಸುವದು, ಈತನ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಒಬ್ಬ ದುರ್ಗದ ಅಧಿಪತಿಯಾದ ವೆಂಗಳಪ್ಪನು ಅನೇಕ ಜನೋಪಯೋಗಿ ಕಾರ್ಯಗಳನ್ನು ಮಾಡುವುದರ ಮೂಲಕ ಚರಿತ್ರೆಯಲ್ಲಿ ತನ್ನ ಸ್ಥಾನವನ್ನು ಉಳಿಸಿಕೊಂಡಿದ್ದಾನೆ.

ಆಕರಸೂಚಿ


1. ಡಾ. ದೇವರಕೊಂಡಾರೆಡ್ಡಿ ಹಾಗೂ ಇತರರು (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–7, ರಾಯಚೂರು ಜಿಲ್ಲೆ*, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 2003, ಪು. 131.
2. ಅದೇ, ಪು. 186.
3. ಅದೇ, ಪು. 187–188. ತೆಲುಗು ಭಾಷೆಯ ಕನ್ನಡ ಲಿಪಿಯ ಶಾಲಿವಾಹನ ಶಕ ೧೪೮೨, ರೌದ್ರಿ, ವೈಶಾಖ, ಶು–೫ರ ಉಲ್ಲೇಖದ (ಕ್ರಿ.ಶ. 1–5–1560) ಈ ಶಾಸನ ಪಾಠ ಇಂತಿದೆ:
    1. ೦॥ ಶುಭಮಸ್ತು । ಸ್ವಸ್ತಿಶ್ರೀ ಜಯಾದುಬುದಯ ಶಲಿವಾಹನ ಶಕವರುಷ
    2. ೦॥ ಂಬಲು 1482 ಅಗುನೇಟಿ ರಉದ್ರಿ ಸಂವತ್ಸರದ ವಯಿಶಾಖ ಶು 5
    3. ಅನಿರುದಾನಕು ನೆಲಲು 10ಕಿ ರಾಜರಾಜಾನ್ವಯಾಭರಣ ರಾಜ ತೇಜೋನಿಧಿ ರಾಜ ಕರಿ
    4. ಕಂಠಿರಉ ಅಳಿಯ ರಾಮಕ್ಷಿತೇಂದ್ರ ಕೊಮಾರ ಕೃಷ್ಣಪರಾಜಯದೇವ ಮಹಾರಾಜ
    5. ಅಷ್ಟಾದಶ ಸೇವಕುಡು ಸ್ವಾಮಿಕಾರ್ಯ್ಯ ಹೇತುಡು ಸ್ವಾಮಿ ದ್ರೋಹರ ಗಂಡಡು ಪ್ರದ

6. .... ಕುಡು ಸತ್ಯಸಂದುಡು ರಣರಂಗ ಧೀರುಡು ವೆಂಗಲಪರಾಯಡು ಕಂಟಿಂಚಿನ ಮೊಗ
7. ಸಲಕು ಅಯಿಶ್ವರ್ಯ್ಯಮಸ್ತು ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಸಂಪೂರ್ಣಮು.


4. ಅದೇ, ಪು. 188. ಶಾಲಿವಾಹನ ಶಕ 1482ರ, ರವುದ್ರಿ, ವೈಶಾಖ,ಶು.5ರ ಉಲ್ಲೇಖದ ಈ ಶಾಸನದ ಪಾಠ ಇಂತಿದೆ.
   1. ಶುಭಮಸ್ತು ಶಾಲಿವಾ
   2. ಹನ ಶಕವರುಷ
   3. 1482ನೆ ರಉದ್ರಿ
   4. ಸಂವತ್ಸರದ ವೈ
   5. ಶಾಖ ಶು 5ಯಲು
   6. ವೆಂಗಳಪ್ಪ ನಾಯಕ
   7. ರು ಮಾಡಿಸಿದ ಕದಲು

5. ಅದೇ, ಪು. 201 ಮತ್ತು Channabasappa S.Patil and Vinoda C. Patil, *Inscriptions of Karnataka,* Vol. 4, *Inscriptions of Raichur District,* Inscription No. 146, Directorate of Archaeology and Museums, Mysore, 1998, p. 44. ಈ ಶಾಸನದ ಪಾಠ ಇಂತಿದೆ:
   1. ತುರುಕದಳ ವಿಭಾಂಡ ವೆಂಗಳಪ
   2. ನಾಯ್ಕ ಕಟ್ಟಿಸಿದ ಕೊತ್ತಳ

6. ಅದೇ, ಪು. 218.
7. ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, *ಸಿಂಧನೂರು ದರ್ಶನ*, ಶ್ರೀಬಸವ ಪ್ರಕಾಶನ, ಗುಲಬರ್ಗಾ, 2010, ಪು. 11.
8. ಕಪಟರಾಳ ಕೃಷ್ಣರಾವ್, *ಸುರಪುರ ಸಂಸ್ಥಾನ ಇತಿಹಾಸ*, 1977, ಪು. 5.
9. ಬಷೀರುದ್ದೀನ್ ಅಹ್ಮದ್, *ವಾಕೀಯತ್-ಎ-ಮುಮಲಿಕತ್-ತಾರೀಕ್-ಎ-ಬಿಜಾಪುರ*, 1916. ಈ ಕೃತಿಯು ಬಿಜಾಪುರ ರಾಜ್ಯದ ಸಂಗತಿ ಭಾಗ 3, 23ನೇ ಅಧ್ಯಾಯವು ಮುದಗಲ್ಲು ಎಂದಿದ್ದು, ಈ ಅಧ್ಯಾಯದ ಪುಟ 578ರಲ್ಲಿ ಈ ಮಾಹಿತಿ ಇದೆ. (ಈ ಉರ್ದು ಕೃತಿಯ ಭಾಗವನ್ನು ರಾಯಚೂರಿನ ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕಿಯರಾದ ಶ್ರೀಮತಿ ಅಜೀಜಾ ಸುಲ್ತಾನಾ ಅವರು ಕನ್ನಡಕ್ಕೆ ಭಾಷಾಂತರ ಮಾಡಿ ಉಪಕರಿಸಿದ್ದಾರೆ. ಅವರಿಗೆ ಅನಂತ ಕೃತಜ್ಞತೆಗಳು.)
10. ಮುದಗಲ್ಲಿನಲ್ಲಿ ಐದು ಪೇಟೆಗಳಿದ್ದವು, ಸೋಮವಾರ ಪೇಟೆ, ಹಳೇಪೇಟೆ, ವೆಂಕಟರಾಯ ಪೇಟೆ, ಗೋಸಲರಾಯ ಪೇಟೆ ಹಾಗೂ ಮೇಗಳ ಪೇಟೆ (ಉಪರ್ ಪೇಟೆ).
11. ಲಿಂಗಸೂಗೂರಿನ ಲಿಯೋನಾರ್ಡ್ ಮನ್‌ನ ಸಮಾಧಿಯ ಮೇಲಿನ ಬರಹದಿಂದ




ಮುದಗಲ್ಲಿನ ದುರ್ಗಾಧಿಪತಿ ವೆಂಗಳಪ್ಪ ನಾಯಕನು ಕಟ್ಟಿಸಿದ ಮೊಗಸಾಲೆ.




ಮುದಗಲ್ಲಿನ ದುರ್ಗಾಧಿಪತಿ ವೆಂಗಳಪ್ಪ ನಾಯಕನು ನಿರ್ಮಿಸಿದ ಮೊಗಸಾಲೆಯ ಒಳನೋಟ.



ದುರ್ಗಾಧಿಪತಿ ವೆಂಗಳಪ್ಪ ನಾಯಕನು ಕಟ್ಟಿಸಿದ ಮುದಗಲ್ಲಿನ ಹಳೇಪೇಟೆಯಲ್ಲಿರುವ ದೇವರ ಬಾವಿ




ಮುದಗಲ್ಲಿನ ದುರ್ಗಾಧಿಪತಿ ವೆಂಗಳಪ್ಪ ನಾಯಕನು ಕಟ್ಟಿಸಿದ ಮೊಗಸಾಲೆಯ ಪ್ರವೇಶದ್ವಾರ




ಮುದಗಲ್ಲಿನ ದುರ್ಗಾಧಿಪತಿ ವೆಂಗಳಪ್ಪ ನಾಯಕನು ಮಾಡಿಸಿದ ಕದ.



ದುರ್ಗಾಧಿಪತಿ ವೆಂಗಳಪ್ಪ ನಾಯಕನು ನಿರ್ಮಿಸಿದ ಮುದಗಲ್ಲಿನ ಹಳೇಪೇಟೆ.



ಮುದಗಲ್ಲಿನ ದುರ್ಗಾಧಿಪತಿ ವೆಂಗಳಪ್ಪ ನಾಯಕನ ಕುರಿತಾದ ಸಿಂಧನೂರಿನಲ್ಲಿ ದೊರೆತ ಶಾಸನ



ದುರ್ಗಾಧಿಪತಿ ವೆಂಗಳಪ್ಪ ನಾಯಕನು ನಿರ್ಮಿಸಿದ ಮುದಗಲ್ಲಿನ ಹಳೇಪೇಟೆ ಕೆರೆ.

32

ವಿಜಯನಗರದರಸರ ಕಾಲದ ಮಂಡ್ಯ ಜಿಲ್ಲೆಯ ಶಾಸನೋಕ್ತ – ಅಗ್ರಹಾರಗಳು

ಲಿಂಗರಾಜು, ತಂಡಸನಹಳ್ಳಿ

ಪೀಠಿಕೆ

ಅಗ್ರಹಾರಗಳನ್ನು ದೇವರ ಸನ್ನಿಧಿಯಲ್ಲಿ ದೇವರಿಗೆ ಮಹಾಜನರಿಗೆ ಸ್ಥಾನಪತಿಗೆ, ರಾಜಗುರುವಿಗೆ ವೇದವಿದ ಬ್ರಾಹ್ಮಣರಿಗೆ ನೀಡಲಾಗುತ್ತಿದ್ದಿತು. ಇಂದ್ರ ಪರ್ವದ ಧರ್ಮಕ್ಕೆ, ಆರಣ ಪೂಜೆಗೆ, ಹೇಮಾಶ್ವಮಹಾದಾನದ ಅಂಗವಾಗಿ, ಬ್ರಾಹ್ಮಣೋತ್ತಮರ ನಿರುಪಾಧಿಕ ಜೀವನಕ್ಕಾಗಿ, ತಂದೆತಾಯಿಗಳಿಗೆ ಪುಣ್ಯವಾಗಲೆಂದು ರಾಜ, ರಾಣಿಯರಿಗೆ ಭಕ್ತಿ, ಪ್ರೀತಿ, ನಿಷ್ಠೆ ತೋರಿಸುವ ಸಲುವಾಗಿ ಅಗ್ರಹಾರ ದಾನಗಳನ್ನು ನೀಡಲಾಗಿದೆ. ವಿಶೇಷವಾಗಿ ಬ್ರಾಹ್ಮಣರ ಜೀವನಾಧಾರಕ್ಕಾಗಿ ಬಿಟ್ಟುಕೊಡುತ್ತಿದ್ದ ಗ್ರಾಮಗಳನ್ನು ಅಗ್ರಹಾರಗಳೆಂದು ಕರೆಯುತ್ತಿದ್ದರು. ಇವುಗಳನ್ನು ಚತುರ್ವೇದಿ ಮಂಗಳ, ಶ್ರೋತ್ರೀಯ ಗ್ರಾಮಗಳು, ಪುರವರ್ಗಗಳೆಂದು ಶಾಸನಗಳಲ್ಲಿ ಕರೆಯಲಾಗಿದೆ. ಅಗ್ರಹಾರಗಳಲ್ಲಿ ಬ್ರಾಹ್ಮಣರಿದ್ದು ಅವರೇ ಅಗ್ರಹಾರಗಳ ಸಂಪೂರ್ಣ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇಂತಹ ಆಡಳಿತದಲ್ಲಿ ರಾಜ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಅಗ್ರಹಾರಗಳನ್ನು ಉಡುಗೊರೆಯಾಗಿ ಪಡೆದ ಬ್ರಾಹ್ಮಣರನ್ನು ಮಹಾಜನರೆಂದು ಕರೆಯುತ್ತಿದ್ದರು. ಅಗ್ರಹಾರಗಳು ಶಿಕ್ಷಣ ಕೇಂದ್ರಗಳಾಗಿ ಕಾರ್ಯನಿರ್ವಸಿರುವುದಕ್ಕೂ ನಿದರ್ಶನಗಳಿವೆ. ಈ ಹಿನ್ನಲೆಯಲ್ಲಿ ವಿಜಯನಗರದರಸರ ಕಾಲದ ಮಂಡ್ಯ ಜಿಲ್ಲೆಯ ಶಾಸನೋಕ್ತ ಅಗ್ರಹಾರಗಳ ಬಗ್ಗೆ ತಿಳಿದುಕೊಳ್ಳುವುದು ಈ ಲೇಖನದ ಉದ್ದೇಶವಾಗಿದೆ. ಅಲ್ಲದೆ ಪ್ರಾದೇಶಿಕ ನೆಲಗಟ್ಟಿನ ಅಡಿಯಲ್ಲಿ ಇತಿಹಾಸವನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕೆನ್ನುವ ಕೂಗು ಎಲ್ಲೆಡೆ ಇತಿಹಾಸಕಾರರಿಂದ ಕೇಳಿಬರುತ್ತಿರುವುದರಿಂದ, ಯುವ ಇತಿಹಾಸ ಸಂಶೋಧಕರು ಪ್ರಾದೇಶಿಕ ನೆಲಗಟ್ಟಿನಡಿಯಲ್ಲಿ ವಸ್ತುವಿಷಯವನ್ನು ಆಯ್ಕೆಮಾಡಿಕೊಂಡು ಅಧ್ಯಯನ ಮಾಡಲು ಆಸಕ್ತಿಯಿರುವವರಿಗೆ ಈ ಸಂಶೋಧನ ಲೇಖನದ ವಸ್ತು ವಿಷಯ ನೆರವಾಗಲಿದೆ.

ಅಗ್ರಹಾರ ಪದದ ಅರ್ಥ ಮತ್ತು ಸ್ವರೂಪ

ಅಗ್ರಹಾರ: 'ಶ್ರೋತ್ರೀಯ ಗ್ರಾಮ' (*E.C.* III, NJ.164, 1092 A.D.) ಇದರ ಮೂಲ ರೂಪ 'ಅಗ್ರಹಾರ' ಎಂದಿರಬೇಕೆಂದೂ, ಅದು ಅಗ್ರ + ಆಹಾರ ಎಂಬ ಎರಡು ಪದಗಳ ಸಮಾಸವೆಂದೂ ಪ್ರೊ॥ ಡಿ.ಎಲ್.ನರಸಿಂಹಾಚಾರ್ಯರ ಅಭಿಪ್ರಾಯ. 'ಅಗ್ರ' ಎಂದರೆ ಶ್ರೇಷ್ಠ. 'ಆಹಾರ' ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು ಎಂದರ್ಥ. (ಶಬ್ದ ವಿಹಾರ, ಪುಟ 55–61) ಆದ್ದರಿಂದ ಶ್ರೇಷ್ಠರಾದ ಬ್ರಾಹ್ಮಣರು ನೆಲೆಗೊಂಡ

ಗ್ರಾಮವೇ ಅಗ್ರಹಾರ. ಅಗ್ರಹಾರದಲ್ಲಿ ಬ್ರಾಹ್ಮಣರೇ ಇರಬೇಕಿಲ್ಲ, ಬೇರೆ ಜಾತಿಯ ಜನಾಂಗಗಳೂ ಇರಬಹುದು. ಆದರೆ ಊರಿನ ಜನರು ಉತ್ಪತ್ತಿಯೆಲ್ಲವೂ ಬ್ರಾಹ್ಮಣರಿಗೆ ಸಲ್ಲುತ್ತದೆ. ಎಂದರೆ, ಆ ಊರಿನಿಂದ ರಾಜಾದಾಯಕ್ಕೆ ಸಲ್ಲಬೇಕಾಗಿದ್ದ ಐಶ್ವರ್ಯವನ್ನು ಬ್ರಾಹ್ಮಣರು ಅನುಭವಿಸುತ್ತಿದ್ದರು. ಅಗ್ರಹಾರವನ್ನು ದಾನವಾಗಿ ಪಡೆದ ಬ್ರಾಹ್ಮಣರೇ 'ಮಹಾಜನ'ಗಳು. ಅವರೇ ಆ ಅಗ್ರಹಾರದ ಪ್ರಭುಗಳು. ಮಹಾಜನಗಳು ಬ್ರಾಹ್ಮಣರೇ ಅಗಬೇಕಿಲ್ಲವೆಂದೂ ಮಹಾಜನಗಳಲ್ಲಿ ಬ್ರಾಹ್ಮಣೇತರರೂ ಕಡಿಮೆ ಸಂಖ್ಯೆಯಲ್ಲಾದರೂ ಇದ್ದಿರಬಹುದೆಂದೂ ಡಾ॥ ಆಲ್ಟೇಕರರು ಅಭಿಪ್ರಾಯಪಟ್ಟಿದ್ದಾರೆ.[1] ವಿಶೇಷವಾಗಿ ಬ್ರಾಹ್ಮಣರ ಜೀವನಾಧಾರಕ್ಕಾಗಿ ಬಿಟ್ಟುಕೊಡುತ್ತಿದ್ದ ಗ್ರಾಮಗಳನ್ನು ಅಗ್ರಹಾರಗಳೆಂದು ಕರೆಯುತ್ತಿದ್ದರು. ಇವುಗಳನ್ನು 'ಚತುರ್ವೇದಿ ಮಂಗಳ', 'ಶ್ರೋತ್ರೀಯ ಗ್ರಾಮಗಳು' ಹಾಗೂ 'ಪುರವರ್ಗಗ'ಳೆಂದು ಶಾಸನಗಳಲ್ಲಿ ಕರೆಯಲಾಗಿದೆ. ನಾನಾ ಗೋತ್ರಗಳಿಗೆ ಸೇರಿದ ನಿರ್ದಿಷ್ಟ ಸಂಖ್ಯೆಯ ಬ್ರಾಹ್ಮಣರಿಗೆ ಮತ್ತು ಅವರು ಗೃಹಸ್ಥಾಶ್ರಮದ ನೀತಿ ನಿಯಮಗಳಾದ ಯಜನ (ಯಜನವೆಂದರೆ ದೇವಪೂಜೆ, ಇದು ಸ್ವಾರ್ಥ ಮತ್ತು ಪರಾರ್ಥಕ್ಕಾಗಿ ನಡೆಯುತ್ತಿತ್ತು. ತಮ್ಮ ಜೀವನಕ್ಕೆ ನೆರವಾದ ರಾಜನಿಗೂ ಮತ್ತು ತಮ್ಮ ಕುಟುಂಬದ ಏಳಿಗೆಗಾಗಿ 'ಯಜನ'ವನ್ನು ಮಾಡುತ್ತಿದ್ದರು) (ಪು. 80, ರಾಜೇಶ್ ಹಂ.ಗು. (ಸಂ), ಇತಿಹಾಸ ದರ್ಪಣ ವಿಶೇಷ ಸಂಚಿಕೆ, ಜನವರಿ–ಮಾರ್ಚ್ 2010), ಯಾಜನ, (ಯಾಜನವೆಂದರೆ ಯಾಗ, ಯಜ್ಞಗಳು ಇವುಗಳಲ್ಲಿ ನಿತ್ಯವಿಧಿಯಾಗಿ ತಮ್ಮ ಇಹಪರ ಸೌಖ್ಯಕ್ಕಾಗಿ ಮಾಡುತ್ತಿದ್ದ ಸಣ್ಣ ಯಾಗಗಳನ್ನು ನಡೆಸುತ್ತಿದ್ದರು. ಯಾಜ್ಞವಲ್ಕಯ ಸ್ಮೃತಿಯು "ಅಭಿವೃದ್ಧಿ, ವಿಪತ್ತು, ಪರಿಹಾರ, ಮಳೆ ಮತ್ತು ದೀರ್ಘಾಯುಸ್ಸು, ಶತ್ರುವಿನ ನಾಶ ಮುಂತಾದವನ್ನು ಆಶಿಸುವವನು ಯಾಗ ಮಾಡಬೇಕೆಂದು ತಿಳಿಸಿದೆ." ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಣ ಎಂಬ ಸ್ಮೃತಿಸಮ್ಮತವಾದ ಷಟ್ಕರ್ಮ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗಲೆಂದು ಒಂದು ಗ್ರಾಮವನ್ನು ಅಥವಾ ಮನೆಯ ನಿವೇಶನವನ್ನು ವೃತ್ತಿಯಾಗಿ ವಿಂಗಡಿಸಿ ಸಾಮೂಹಿಕವಾಗಿ ದಾನಕೊಟ್ಟಾಗ ಅಗ್ರಹಾರವೊಂದರ ಸೃಷ್ಟಿಯಾದಂತೆ. ಕೆಲವು ಶಾಸನಗಳು ಈ ಪಾರಿಭಾಷಿಕ ಪದವನ್ನು 'ಅಗ್ರಹಾರ' ಎಂದು ಉಲ್ಲೇಖಿಸಲಾಗಿದೆ.[2] ಈ ಪ್ರದೇಶದಿಂದ ಬರುತ್ತಿದ್ದ ರಾಜಾದಾಯದ ಭಾಗವು ಆ ಪ್ರದೇಶವನ್ನು ದಾನ ಪಡೆದ ಬ್ರಾಹ್ಮಣರಿಗೆ ಸಲ್ಲುತ್ತಿತ್ತು. ಅಗ್ರಹಾರವಾಗಿ ಗ್ರಾಮಗಳನ್ನು ಕೊಡುವಾಗ ಆ ಭೂಭಾಗದಲ್ಲಿ ಲಭ್ಯವಾಗಬಹುದಾದ "ನಿಧಿ, ನಿಕ್ಷೇಪ, ಪಾಷಾಣ, ಸಿದ್ದ, ಸಾಧ್ಯ, ಜಲ ಮತ್ತು ಅನಾಮಿ ಪ್ರಾಪ್ತಿಯೂ ಪ್ರತಿಗ್ರಹಿಸಿ ಸಲ್ಲುತ್ತದೆಂದು" ತಿಳಿಸಲು ಶಾಸನಗಳಲ್ಲಿ 'ಅಷ್ಟತೇಜ ಸ್ವಾಮ್ಯ ಭೋಗ' ಎಂದೂ ದಾಖಲಿಸಿರುತ್ತದೆ. ಇದರಂತೆ ದಾನವನ್ನು ಪ್ರತಿಗ್ರಹಿಗೆ ವಂಶಪರಂಪರೆಯಾಗಿ ಪುತ್ರ ಪೌತ್ರಾದಿಗಳೂ ಅನುಭವಿಸಲೆಂದೂ ಹರಸಿದೆ. ಹೀಗೆ ದಾನ ನೀಡಿದ ಭೂಭಾಗಕ್ಕೆ ಯಾವ ಕರವೂ (ತೆರಿಗೆ) ಇರದೆ ಅದು ಸರ್ವಮಾನ್ಯವಾಗಿ ನೀಡಿರುತ್ತಾರೆ. ಇದರಿಂದ 'ಅಗ್ರಹಾರ'ವನ್ನು ಪಡೆದ ವಿಪ್ರವೃಂದವೇ ಆ ಗ್ರಾಮದ ಒಡೆಯರಾದಂತಾಗುತ್ತದೆ. ಇವರನ್ನು ಮಹಾಜನರೆಂದು ಶಾಸನಗಳು ಕರೆದಿವೆ.[3]

ಗ್ರಾಮಗಳನ್ನು ಅಗ್ರಹಾರಗಳಾಗಿ ಪರಿವರ್ತಿಸಿ ವೇದಶಾಸ್ತ್ರಪಾರಂಗತರಾದ ಬ್ರಾಹ್ಮಣರಿಗೆ ದಾನ ನೀಡಿದರೆ ಪುಣ್ಯ ಲಭಿಸುವುದೆಂಬ ಭಾವನೆಯಿಂದ ರಾಜರೂ, ರಾಣಿಯರೂ, ಅಧಿಕಾರಿಗಳೂ, ಶ್ರೀಮಂತರೂ, ಅಗ್ರಹಾರಗಳ ನಿರ್ಮಾಣಕ್ಕೆ ಕಾರಣಕರ್ತೃಗಳಾದರು. ಡಾ॥ ಸರ್ಕಾರ್‌ರ ಪ್ರಕಾರ ಶಿಕ್ಷಣ ಮುಗಿಸಿ ಗುರುಕುಲದಿಂದ ಹಿಂದಿರುಗಿದ ಬ್ರಾಹ್ಮಣರು ಗೃಹಸ್ಥ ಜೀವನ ಪ್ರಾರಂಭಿಸಲು ಗ್ರಾಮಗಳನ್ನು ವೃತ್ತಿಗಳಾಗಿ ವಿಂಗಡಿಸಿ ಅಗ್ರಹಾರಗಳನ್ನು ನಿರ್ಮಿಸಿ ದಾನವಾಗಿ ಬ್ರಾಹ್ಮಣರಿಗೆ ನೀಡಲಾಯಿತು. ಹೀಗಾಗಿ ವಾಸಕ್ಕಾಗಿ, ಯಜನ–ಯಾಜನ, ಅಧ್ಯಯನ–ಅಧ್ಯಾಪನ, ದಾನ–ಪ್ರತಿಗ್ರಹ ಎಂಬ ಷಟಕ್ಕರ್ಮ ಆಚರಣೆಗಾಗಿ: ಹವನ–ಹೋಮ–ಚರುತರ್ಪಣ–ಬಲಿ–ಅತಿಥಿಸತ್ಕಾರಗಳಿಂದ ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ನರಯಜ್ಞ, ಭೂತಯಜ್ಞಗಳೆಂಬ ಕರ' ವಿನಾಯಿತಿ ಅಥವಾ ಕರವಿನಿಯೋಗಾಧಿಕಾರಸಹಿತವಾಗಿ ಬ್ರಾಹ್ಮಣರಿಗೆ ದಾನವಾಗಿ ನೀಡಲಾಗುತ್ತಿದ್ದ ಬ್ರಹ್ಮದೇಯ ಗ್ರಾಮಗಳೇ ಅಗ್ರಹಾರಗಳು. ಅಗ್ರಹಾರ ಗ್ರಾಮಗಳಿಗೆ 'ಪುರ'ಎಂಬ ಅಭಿದಾನವು ಕೆಲವೊಮ್ಮೆ ಅನ್ವಯಗೊಳ್ಳುತ್ತಿದ್ದು, ಅಂತಹವುಗಳನ್ನು 'ಪುರಧರ್ಮ ಅಗ್ರಹಾರಗಳೆಂದು' ಕರೆಯಲಾಗುತ್ತಿದ್ದಿತು. ಉನ್ನತ ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದ ಅಗ್ರಹಾರಗಳು ಘಟಿಕಸ್ಥಾನಗಳಾಗಿದ್ದವು. ಅಗ್ರಹಾರದ ಆಧಾಯವನ್ನು ಅದರ ವಿನಿಯೋಗಾಧಿಕಾರವನ್ನು ಪಡೆದ ಬ್ರಾಹ್ಮಣರನ್ನು 'ಮಹಾಜನ'ರೆಂದು ಕರೆಯಲಾಗುತ್ತಿದ್ದಿತು. ಮಹಾಜನರು ದಾನಿಗಳಿಂದ ಹಣ, ಭೂಮಿ ವಸ್ತುಗಳನ್ನು

ದಾನವಾಗಿ ಸ್ವೀಕರಿಸಿ ಅಗ್ರಹಾರಗಳ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಅಗ್ರಹಾರದ 'ವೃತ್ತಿ' ಭೂಮಿಪಾಲುಗಳನ್ನು ಪಡೆದ ಬ್ರಾಹ್ಮಣರು ತಮ್ಮ ಭೂಮಿಯನ್ನು ಶೂದ್ರನಿಗೆ ಮಾರಿದರೆ ಅಥವಾ ಗುತ್ತಿಗೆಗೆ ನೀಡಿದರೆ ಅಂತಹ ಬ್ರಾಹ್ಮಣರನ್ನು ಅಗ್ರಹಾರದಿಂದ ಬಹಿಷ್ಕರಿಸಲಾಗುತ್ತಿದ್ದಿತು.[4]

ಅಗ್ರಹಾರವೆಂಬುದು ಬ್ರಾಹ್ಮಣರ ವಾಸಕ್ಕಾಗಿ ಮೀಸಲಿರಿಸಿದ್ದ ಗ್ರಾಮವನ್ನು ತಿಳಿಸಿದರೆ, ಬ್ರಹ್ಮಪುರಿ ಎಂಬುದು ನಗರ, ಪಟ್ಟಣಗಳಲ್ಲಿ ಬ್ರಾಹ್ಮಣರ ವಾಸಕ್ಕಾಗಿ ಮೀಸಲಿರಿಸಿದ್ದ ಕೇರಿಗಳನ್ನು ಸೂಚಿಸುತ್ತದೆ. ಅಲ್ಲದೆ ಶೈವಧರ್ಮಾವಲಂಬಿಗಳ ಅದರಲ್ಲೂ ಮುಖ್ಯವಾಗಿ ವೀರಶೈವ ವಾಸಕ್ಕೆಂದು ಸೃಷ್ಟಿಸಲಾದ ಅಗ್ರಹಾರಗಳನ್ನು 'ಶಿವಪುರಗಳೆಂದು', 'ಪುರವರ್ಗ'ಗಳೆಂದು ಶಾಸನಗಳಲ್ಲಿ ಹೆಸರಿಸಲಾಗಿದೆ.[5] ಹೀಗೆ ಅಗ್ರಹಾರಗಳಲ್ಲಿ ಬ್ರಾಹ್ಮಣರು ವಾಸ ಮಾಡುತ್ತಿದ್ದು ಅವರೇ ಅಗ್ರಹಾರಗಳ ಸಂಪೂರ್ಣ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇಂತಹ ಆಡಳಿತದಲ್ಲಿ ರಾಜ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಅಗ್ರಹಾರವನ್ನು ಉಡುಗೊರೆಯಾಗಿ ಪಡೆದ ಬ್ರಾಹ್ಮಣರನ್ನು ಮಹಾಜನರೆಂದು ಕರೆಯುತ್ತಿದ್ದರು. ಸಾಮಾನ್ಯವಾಗಿ ಒಂದು ಹಳ್ಳಿಯಲ್ಲಿ ಅಥವಾ ಹಳ್ಳಿಗಳ ಒಂದು ಗುಂಪಿನಲ್ಲಿ ಅಗ್ರಹಾರವೆಂಬ ಹೆಸರಿನಲ್ಲಿ ಭೂಮಿಯನ್ನು ದಾನ ಮಾಡಲಾಗುತ್ತಿತ್ತು. ಈ ಅಗ್ರಹಾರಗಳು ಶಿಕ್ಷಣದ ಕೇಂದ್ರಗಳಾಗಿದ್ದವು.

ಅಗ್ರಹಾರಗಳನ್ನು ದೇವರ ಸನ್ನಿಧಿಯಲ್ಲಿ ದೇವರಿಗೆ ಮಹಾಜನರಿಗೆ ಸ್ಥಾನಪತಿಗೆ, ರಾಜಗುರುವಿಗೆ ವೇದಾಂತ ಪಾರಂಗತರಾದ ಬ್ರಾಹ್ಮಣರಿಗೆ ನೀಡಲಾಗುತ್ತಿದ್ದಿತು. ಇಂದ್ರಪರ್ವದ ಧರ್ಮಕ್ಕೆ, ಆರಣ ಪೂಜೆಗೆ, ಹೇಮಾಶ್ವಮಹಾದಾನದ ಅಂಗವಾಗಿ, ಬ್ರಾಹ್ಮಣೋತ್ತಮರ ನಿರುಪಾಧಿಕ ಜೀವನಕ್ಕಾಗಿ, ತಂದೆತಾಯಿಗಳಿಗೆ ಪುಣ್ಯವಾಗಲೆಂದು ರಾಜ, ರಾಣಿಯರಿಗೆ ಭಕ್ತಿ, ಪ್ರೀತಿ, ನಿಷ್ಠೆ ತೋರಿಸುವ ಸಲುವಾಗಿ ಅಗ್ರಹಾರ ದಾನಗಳನ್ನು ನೀಡಲಾಗಿದೆ.

ಕರ್ನಾಟಕದಲ್ಲಿ ಅಗ್ರಹಾರಗಳ ಪ್ರಾಚೀನತೆ

ವೇದಾಂಗ ಪಾರಂಗತರಾದ ಷಟ್ಕರ್ಮನಿರುತರಾದ ಬ್ರಾಹ್ಮಣರಿಗೆ ಅರಸರು ಭೂಮಿಯನ್ನು ಬ್ರಹ್ಮದೇಯವಾಗಿ ದಾನಕೊಡುವ ಪದ್ಧತಿ ಕರ್ನಾಟಕವೂ ಸೇರಿದಂತೆ ಭಾರತದ ಇತರೆ ಕಡೆಗಳಲ್ಲಿ ಪ್ರಾಚೀನ ಕಾಲದಿಂದಲೂ ವಾಡಿಕೆಯಲ್ಲಿತ್ತೆಂದು ತಿಳಿದುಬರುತ್ತದೆ.[6]

ಸುಮಾರು ಕ್ರಿ.ಶ. 420ರಿಂದ 445ರವರೆಗೆ ಆಳಿದ ಶಾಲಂಕಾಯನ ದೊರೆ ಎರಡನೆಯ ನಂದಿವರ್ಮನ ತಾಮ್ರಪಟವೊಂದರಲ್ಲಿ ಕುರವಕ ಶ್ರೀವರ ಎಂಬ ಹೆಸರಿನ ಅಗ್ರಹಾರದ ಹೆಸರಿರುವುದರಿಂದ ಬ್ರಾಹ್ಮಣರಿಗೆ ಊರುಗಳನ್ನು ದತ್ತಿಯಾಗಿ ಬಿಟ್ಟುಕೊಡುವ ಸಂಪ್ರದಾಯವು ಸಾಕಷ್ಟು ಪ್ರಾಚೀನವೆಂದೇ ಹೇಳಬೇಕು. ಕ್ರಿ.ಶ. 5ನೇ ಶತಮಾನದಲ್ಲಿಯೇ ಕರ್ನಾಟಕದಲ್ಲಿ ಅಗ್ರಹಾರಗಳು ಕಾಣಿಸಿಕೊಂಡಿದ್ದವು ಎಂದೂ ನಂಬಲು ಆಧಾರಗಳಿವೆ. ಕದಂಬರ ಅನೇಕ ತಾಮ್ರಪಟಗಳು ವೈದಿಕರಿಗೆ ಕೊಟ್ಟ ದಾನ-ದತ್ತಿಗಳನ್ನು ಹೇಳುತ್ತವೆ.[7]

ಕರ್ನಾಟಕದಲ್ಲಿ ಹೆಚ್ಚು ಪರಿಚಿತವಾದ ಅಗ್ರಹಾರಗಳ ಕಡೆಗೆ ಗಮನಿಸಿ ನೋಡಿದಾಗ, ಶಿವಮೊಗ್ಗ ಜಿಲ್ಲೆಯ ತಾಳಗುಂದ (ಎ.ಕ. 07, ಎಸ್.ಕೆ. 176) ಅಗ್ರಹಾರವೇ ಪ್ರಾಚೀನ ಅಗ್ರಹಾರಗಳಲ್ಲಿ ಒಂದೆಂದು ಕಂಡುಬರುತ್ತದೆ. ಇದನ್ನು ಸ್ಥಾಪಿಸಿದವನು ಮಯೂರಶರ್ಮನ ಪೂರ್ವಿಕನಾದ ಮುಕ್ಕಣ್ಣ ಕದಂಬನು. ಅವನು ಉತ್ತರದ ಅವಿಚ್ಛತ್ರ ಎಂಬ ಅಗ್ರಹಾರದಿಂದ 32 ಬ್ರಾಹ್ಮಣರ ಕುಟುಂಬಗಳನ್ನು ಕರೆದುಕೊಂಡು ಬಂದು, ತಾಳಗುಂದದ ಅಗ್ರಹಾರದಲ್ಲಿ ನೆಲೆಸುವಂತೆ ಮಾಡಿದನು.[8]

ಕರ್ನಾಟಕದಲ್ಲಿ ಗೌತಮಗೋತ್ರದ ಶುಕ್ಲಯಜುರ್ವೇದದಲ್ಲಿ ಪಾರಂಗತರಾದ ಬದಿರಕುಲದ ಮವಿಷ ವಿಷಯದ ಪೆರ್ಬಟ ಗ್ರಾಮವನ್ನು 'ಬ್ರಹ್ಮದೇಯನ್ಯಾಯದ' ರೀತ್ಯ ಅಗ್ರಹಾರವನ್ನಾಗಿ ಕೊಡಲಾಯಿತ್ತೆಂದು ಕ್ರಿ.ಶ. 5ನೇ ಶತಮಾನದ ಉತ್ತರಾರ್ಧದ್ದೆನ್ನಬಹುದಾದ ಕದಂಬ ಕೃಷ್ಣವರ್ಮನ ಹೆಬ್ಬಟ ತಾಮ್ರಶಾಸನ ಹೇಳುತ್ತದೆ. 10-11ನೇ ಶತಮಾನಗಳ

ಶಾಸನಗಳಿಂದ ತಿಳಿದುಬರುವಂತೆ ಸ್ಥಾನಕುಂದೂರು (ಇಂದಿನ ತಾಳಗುಂದ) ನಿಷ್ಠಾವಂತ ವೈದಿಕ ಬ್ರಾಹ್ಮಣರ ವಾಸಸ್ಥಾನವಾಗಿತ್ತು. ವಾತಾಪಿಯ 200 ಸದಸ್ಯರನ್ನೊಳಗೊಂಡ ಮಹಾಚಾತುರ್ವಿದ್ಯಾ ಸಮುದಾಯದ (ವೈದಿಕ ಬ್ರಾಹ್ಮಣ ಸಂಘ) ನೇರ ಆಡಳಿತಕ್ಕೆ ಒಳಪಟ್ಟಿದ್ದು 'ಚತುರ್ದಶ ವಿದ್ಯಾಸ್ಥಾನ' ಎಂದು ಹೆಸರಾಗಿತ್ತು. ಅದರಂತೆ ಆರ್ಯಪುರವೆಂದು ಕರೆಯುತ್ತಿದ್ದ ಇಂದಿನ ಐಹೊಳೆ ಸ್ಪಷ್ಟವಾಗಿ ಹೇಳಿಲ್ಲವಾದರೂ ಈ ಮೂರು ಪ್ರಸಿದ್ದ ಕೇಂದ್ರಗಳೂ ಅಗ್ರಹಾರಗಳೇ ಆಗಿರಬೇಕು. ಕಾಲಕಳೆದಂತೆ ಇಂತಹ ಪ್ರಾಚೀನ ಅಗ್ರಹಾರಗಳ ನಿಜವಾದ ಇತಿಹಾಸ ಅಳಿಸಿಹೋಗಿ, ಮಧ್ಯಯುಗದ ಶಾಸನಗಳಲ್ಲಿ ಇವನ್ನು 'ಅನಾದಿಅಗ್ರಹಾರ', 'ಜನಮೇಜಯದತ್ತಿಯಮಹಾಗ್ರಹಾರ', 'ಶ್ರೀರಾಮದತ್ತಿ ಮಹಾಗ್ರಹಾರ' ಎಂದು ಕರೆಯಲಾಗಿದೆ.[9] ನಾಡಿನ ಪ್ರಸಿದ್ಧ ಸಂಶೋಧಕರಾದ ಎಂ.ಚಿದಾನಂದ ಮೂರ್ತಿ ತಮ್ಮ ಸಂಶೋಧನ ಪ್ರಬಂಧದಲ್ಲಿ ಈ ಹೆಸರಿನಲ್ಲಿ ಅಗ್ರಹಾರಗಳನ್ನು ಕರೆಯಲು ಕಾರಣವೇನೆಂಬುದನ್ನು ವಿಶ್ಲೇಷಿಸಿದ್ದಾರೆ. ಒಂದು ಊರನ್ನು ಬಹು ಹಿಂದೆಯೇ ಒಬ್ಬ ರಾಜನು ಕೆಲವು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟಿರುವನೆಂದು ಭಾವಿಸೋಣ. ಬಹಳ ಕಾಲವಾದ ಮೇಲೆ ದಾನವನ್ನು ಕೊಟ್ಟ ರಾಜನ ಹೆಸರು ಮರೆತು ಹೋಗುವುದು ಸಹಜವೇ. ಅಂತಹ ಸಮಯಗಳಲ್ಲಿ ಆ ಊರನ್ನು 'ಶ್ರೀಮದನಾದಿ ಅಗ್ರಹಾರ' ಎಂದೋ, 'ಜನಮೇಜಯದತ್ತಿಯ ಅಗ್ರಹಾರ'ವೆಂದೋ, ಶ್ರೀರಾಮ ನಿರ್ಮಿಸಿದ 'ಶ್ರೀರಾಮದತ್ತಿ ಅಗ್ರಹಾರ' ಎಂದೋ ಮುಂತಾದ ಪೌರಾಣಿಕ ವ್ಯಕ್ತಿಗಳು ಮಾಡಿದ ಅಗ್ರಹಾರವೆಂದೋ ಕರೆಯುತ್ತಿದ್ದರೆಂದು ತಿಳಿಸಿದ್ದಾರೆ. ಅಲ್ಲದೆ ಸಾಮಾನ್ಯವಾದ ಊರುಗಳನ್ನು ಅಗ್ರಹಾರಗಳಾಗಿ ಪರಿವರ್ತಿಸಿದ ಹಲವು ನಿದರ್ಶನಗಳೂ ನಮಗೆ ದೊರಕುತ್ತವೆ. ಉದಾ. ಬೀರವೂರು ಮತ್ತು ಬಿದಿರ್ವಳ್ಳಿಗಳನ್ನು 'ಒಂದು ಅಗ್ರಹಾರಮಾಡಿ'ದ ವಿಷಯ ಶಾಸನವೊಂದರಲ್ಲಿದೆ. ಕಾರಣ ಒಂದು ಊರನ್ನು ಅಗ್ರಹಾರವಾಗಿ ಮಾಡಿ ಬ್ರಾಹ್ಮರಿಗೆ ದಾನವಾಗಿ ಕೊಟ್ಟರೆ ಬಹಳ ಪುಣ್ಯ ಬರುತ್ತದೆಂದು ರಾಜರು ನಂಬಿದ್ದರು. ಹೀಗೆ ಅಗ್ರಹಾರವನ್ನು ದಾನವಾಗಿ ಪಡೆದ ಬ್ರಾಹ್ಮಣರೇ 'ಮಹಾಜನ'ಗಳು, ಅವರೇ ಅಗ್ರಹಾರದ ಪ್ರಭುಗಳು. ಮಹಾಜನಗಳು ಬ್ರಾಹ್ಮಣರೇ ಆಗಬೇಕಿಲ್ಲವೆಂದೂ ಮಹಾಜನಗಳಲ್ಲಿ ಬ್ರಾಹ್ಮಣೇತರರೂ ಕಡಿಮೆ ಸಂಖ್ಯೆಯಲ್ಲಾದರೂ ಇದ್ದಿರಬಹುದೆಂದು ಡಾ॥ ಆಲ್ಟೇಕರ್‌ವರು ಅಭಿಪ್ರಾಯಪಟ್ಟಿದ್ದಾರೆ.[10]

ಭಾರತದ ಇತರ ಭಾಗಗಳಂತೆಯೇ ಮಧ್ಯಯುಗದ ಕರ್ನಾಟಕ, ತಮಿಳುನಾಡು, ಮತ್ತು ಆಂಧ್ರ ಪ್ರದೇಶದಲ್ಲಿ ಅಗ್ರಹಾರಗಳು ಅಸ್ಥಿತ್ವದಲ್ಲಿದ್ದವು. ಬ್ರಾಹ್ಮಣ ಪಾಲುಗಾರರನ್ನು "ಮಹಾಜನ"ರೆಂದು ಕರೆಯುತ್ತಿದ್ದರು. "ಮಹಾಜನಸಭೆ" ಅಗ್ರಹಾರದ ವಿಷಯಗಳ ಮೇಲ್ವಿಚಾರಣೆ ಹೊಂದಿದ್ದಿತು.[11] ಕರ್ನಾಟಕದ ಇತಿಹಾಸದ ಮಧ್ಯಯುಗೀನ ಕಾಲದ ಹಲವು ಶಾಸನಗಳು ಅಗ್ರಹಾರಗಳನ್ನು ದೀರ್ಘವರ್ಣನೆ ಮಾಡಿವೆ. ಶಿವಮೊಗ್ಗ ಜಿಲ್ಲೆಯ 'ಸರ್ವನಮಸ್ಯದನಾದಿ ಅಗ್ರಹಾರ' ಕುಪ್ಪಟೂರನ್ನು ಶಾಸನದಲ್ಲಿ 'ವಿಪ್ರಸುರ ಚಿತ್ರನಿಕೇತನ ಮಾಳೆಯಿಂದ ಕಣ್ಗೊಳಿಪುದು ಕುಪ್ಪಟೂರ್ ಸರಳ ವಿದ್ಯೆಗೆ ತಾನೆನೆ ಜನ್ಮ ಭೂತಳಂ' ಎಂದು ಪ್ರಶಂಸಿಸಲಾಗಿದೆ.[12]

ವಿಜಯನಗರದರಸರ ಕಾಲದ ಅಗ್ರಹಾರಗಳು

ಮಂಡ್ಯ ಜಿಲ್ಲೆಯಲ್ಲಿ ಚೋಳ, ಹೊಯ್ಸಳ, ವಿಜಯನಗರದರಸರ ಹಾಗೂ ಮೈಸೂರು ಒಡೆಯರ ಕಾಲಕ್ಕೆ ಸಂಬಂಧಿಸಿದ ಅಗ್ರಹಾರಗಳು ಅಧಿಕ ಸಂಖ್ಯೆಯಲ್ಲಿ ಶಾಸನಗಳಲ್ಲಿ ಹೆಸರಿಸಲ್ಪಟ್ಟವೆ.

ವಿಜಯನಗರದರಸರ ಕಾಲದಲ್ಲಿ ಅಗ್ರಹಾರಗಳು ವಿವಿಧ ರೀತಿಯಲ್ಲಿ ಸ್ಥಾಪಿತವಾಗುತ್ತಿದ್ದವು. ರಾಜ ಅಥವಾ ಅವನ ಒಪ್ಪಿಗೆಯ ಮೇಲೆ ಅವನ ಅಧಿಕಾರಿಗಳು ಅಗ್ರಹಾರವನ್ನು ಸ್ಥಾಪಿಸುತ್ತಿದ್ದರು. ದಾನ ಪಡೆದವನು ಒಬ್ಬನೇ ಆಗಿರಬಹುದು ಅಥವಾ ದಾನ ಪಡೆದವನು ಗ್ರಾಮದಲ್ಲಿ ಇತರರಿಗೆ ಪಾಲುಗಳನ್ನು ಹಂಚುತ್ತಿದ್ದನು. ಅಥವಾ ದಾನಿಯೇ ಇತರ ಪಾಲುದಾರರಿಗೆ ಭೂಮಿಯನ್ನು ಹಂಚುತ್ತಿದ್ದನು. ಹೀಗೆ ಅಗ್ರಹಾರಗಳು ಸ್ಥಾಪಿತವಾಗುತ್ತಿದ್ದುದಕ್ಕೆ ಹಲವು ಉದಾಹರಣೆಗಳನ್ನು ಕೊಡಬಹುದು.[13]

ಮಂಡ್ಯ ಪ್ರದೇಶದಲ್ಲಿ ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ಆಳ್ವಿಕೆ ನಡೆಸಿರುವುದಕ್ಕೆ ಇಲ್ಲಿ ದೊರೆತಿರುವ ಶಾಸನಗಳೇ ಸಾಕ್ಷಿ. ಹೊಯ್ಸಳರ ನಂತರ ಈ ಪ್ರದೇಶವನ್ನು ಆಳಿದವರು ವಿಜಯನಗರದರಸರು ಒಂದನೆಯ ಬುಕ್ಕನಿಂದ ಮೂರನೆಯ ಶ್ರೀರಂಗನವರೆಗೆ ಸುಮಾರು ಮೂರು ಶತಮಾನಗಳ ಕಾಲ ಈ ಪ್ರದೇಶವನ್ನು ಆಳಿದವರು ವಿಜಯನಗರದರಸರು. ಇವರಿಗೆ ಸಂಬಂಧಿಸಿದಂತೆ ಸುಮಾರು 120 ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ದೊರೆತಿವೆ. ಇಲ್ಲಿ ದೊರೆತಿರುವ ಶಾಸನಗಳ ಆಧಾರದಿಂದ ಆ ಕಾಲದ ಇಲ್ಲಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ವಿಷಯಗಳನ್ನು ತಿಳಿದುಕೊಳ್ಳಬಹುದು. ಕ್ರಿ.ಶ. 1358ರ ಅರುವನಹಳ್ಳಿಯ (ಮಳವಳ್ಳಿ–93) ಶಾಸನ ಮೊದಲನೇ ಬುಕ್ಕನ ಶಾಸನವೇ ವಿಜಯನಗರದರಸರ ಮಂಡ್ಯ ಜಿಲ್ಲೆಯ ಪ್ರಾಚೀನ ಶಾಸನವಾಗಿದೆ.[14] ಆದರೆ ಸೂರ್ಯನಾಥ ಕಾಮತ್‌ರವರು ಸುವರ್ಣ ಮಂಡ್ಯ ಕೃತಿಯಲ್ಲಿ ಕ್ರಿ.ಶ. 1341ರ ಬುಕ್ಕನ ಶಾಸನ (ಬೀಚೇನಹಳ್ಳಿ) ಜಿಲ್ಲೆಯಲ್ಲಿನ ವಿಜಯನಗರದ ಮೊದಲ ಶಾಸನವಾಗಿದ್ದು ಬುಕ್ಕನು ಹರಿಹರನ ಜೊತೆ ಜಂಟಿ ಅರಸನಾಗಿದ್ದನೆಂಬ ಹೇಳಿಕೆಯನ್ನು ದೃಢಪಡಿಸುತ್ತದೆ.[15]

ಈ ಹಿನ್ನಲೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿರುವ ವಿಜಯನಗರಸರ ಕಾಲದ ಶಾಸನೋಕ್ತ ಅಗ್ರಹಾರಗಳನ್ನು ಈ ರೀತಿ ಪಟ್ಟಿ ಮಾಡಬಹುದು.

ಶಾಸನಗಳು ವಿಜಯನಗರದರಸರು ನೀಡಿದ ಅಗ್ರಹಾರ ದಾನಗಳನ್ನು ಸಂದರ್ಭೋಚಿತವಾಗಿ ದಾಖಲಿಸಿವೆ.

1. **ಹಾಗಲಹಳ್ಳಿ :** ಶ್ರೀರಂಗಪಟ್ಟಣದ ರಂಗನಾಥದೇವಸ್ಥಾನದ ಶ್ರೀ ಭಂಡಾರದಲ್ಲಿರುವ ತಾಮ್ರಶಾಸನವೊಂದರಲ್ಲಿ ಶಕ 1370ರಲ್ಲಿ ವಿಜಯನಗರದರಸನಾದ ಪ್ರೌಢದೇವರಾಯನು ಭಾರದ್ವಾಜ ಗೋತ್ರದ ನಾಗದೇವಭಟ್ಟನ ಮಗ ದೇವರೋಭಟ್ಟನಿಗೆ ಹೋಸಣಾದೇಶದ (ಹೊಯ್ಸಳ) ಕನ್ನಂಬಾಡಿ ಸ್ಥಳದ ಹಾಗಲಹಳ್ಳಿ ಗ್ರಾಮವನ್ನು ಸರ್ವಮಾನ್ಯದ ಅಗ್ರಹಾರ ಮಾಡಿ ಪುತ್ರ ಪೌತ್ರಪರಂಪರೆಯಾಗಿ ಸುಖಭೋಗ್ಯಕ್ಕಾಗಿ ಕೊಟ್ಟನೆಂದು ತಿಳಿಸುತ್ತದೆ.[16]

2. **ಬಾಚೇಹಳ್ಳಿ :** ಕೃಷ್ಣರಾಜ ಪೇಟೆ ತಾಲ್ಲೂಕಿನ ಬಾಚಹಳ್ಳಿಯ ಕ್ರಿ.ಶ.1377ರ ಒಂದು ಶಾಸನದಿಂದ ಎರಡನೇ ಹರಿಹರನು ಹೊಸಣ್ಣ ರಾಜ್ಯದ ಕಬಹು ಜಿಲ್ಲೆಗೆ ಸೇರಿದ ಬಾಚೆಹಳ್ಳಿಯನ್ನು ಅದರ ಹದಿಮೂರು ಪಾಳೆಯಗಳೊಡನೆ ಮತ್ತು ದಂಡೆಮರೆ ಗಟ್ಟ ಗ್ರಾಮವನ್ನು ಅದರ ಮೂರು ಪಾಳೆಯಗಳೊಡನೆ, **ಇಮ್ಮಡಿ ಬುಕ್ಕರಾಜಪುರವೆಂಬ ಹೆಸರಿನ ಅಗ್ರಹಾರ**ವನ್ನು ಮಾಡಿ, ಅದನ್ನು 60 ವೃತ್ತಿಗಳನ್ನಾಗಿ ವಿಂಗಡಿಸಿ ಅನೇಕ ಬ್ರಾಹ್ಮಣರಿಗೆ ದಾನ ಮಾಡಿದನೆಂದು ತಿಳಿದುಬರುತ್ತದೆ.[17]

3. **ಪ್ರಮುಖ ಅಗ್ರಹಾರ ನರಸಿಂಹ ಚತುರ್ವೇದಿ ಮಂಗಳ :** ವಿಜಯನಗರ ಕಾಲದ ಮಂಡ್ಯ ಜಿಲ್ಲೆಯ ಪ್ರಮುಖ ಅಗ್ರಹಾರವೆಂದರೆ ವಿಜಯನಗರ ಕಾಲದಲ್ಲಿ ಈಗಿನ ಮಂಡ್ಯ ಜಿಲ್ಲೆಯಲ್ಲಿರುವ **ಮದ್ದೂರು, ನರಸಿಂಹಚತುರ್ವೇದಿಮಂಗಳ ಎಂಬ ಹೆಸರುಳ್ಳ ಅಗ್ರಹಾರವಾಗಿದ್ದಿತು.** ಕ್ರಿ.ಶ.1406ರ ಒಂದು ಶಾಸನದಿಂದ ಮದ್ದೂರು, ನರಸಿಂಹಚತುರ್ವೇದಿಮಂಗಳವೆಂದು ಕರೆಯಲ್ಪಡುತ್ತಿದ್ದಿತ್ತೆಂದು ತಿಳಿಯುತ್ತದೆ. ದೇವಾಸ್ಥಾನಗಳಿಗೆ[18] ದಾನಗಳನ್ನು ಕೊಡುವುದು ಅಗ್ರಹಾರ ಸಭೆಯ ಒಂದು ಮುಖ್ಯ ಕರ್ತವ್ಯವಾಗಿದ್ದಿತು. ವೈದ್ಯನಾಥ ದೇವರ ಪೂಜೆಗೆ ಆ ಸ್ಥಳದ ಎಲ್ಲಾ ನಿವಾಸಿಗಳು ಹಲವು ತೆರಿಗೆಗಳನ್ನು ಬಿಟ್ಟು ಕೊಟ್ಟರು. (ಎ.ಕ. 3, ಮದ್ದೂರು 28) ಕ್ರಿ.ಶ. 1589ರಲ್ಲಿ ಮಹಾಮಂಡಲೇಶ್ವರ ತಿರುಮಲರಾಯನ ಮಕ್ಕಳು ರಾಮರಾಜಯ್ಯ ಮತ್ತು ತಿರುಮಲರಾಜಯ್ಯ ಮದ್ದೂರಿಗೆ ಸೇರಿದ ಕಬ್ಬರೆ ಗ್ರಾಮವನ್ನು ಇಬ್ಬರು ಬ್ರಾಹ್ಮಣರಿಗೆ ಅಗ್ರಹಾರವಾಗಿ ಕೊಟ್ಟರು. (ಎ.ಕ. 3. ಮದ್ದೂರು 25) ಕ್ರಿ.ಶ 1591ರಲ್ಲಿ ರಾಮರಾಜಯ್ಯನ ಪುಣ್ಯಕ್ಕೆ ನರಸಿಂಹ, ರಾಮಚಂದ್ರ ಮತ್ತು ಅಳ್ಳಾಲನಾಥ ದೇವರ ಪೂಜೆಗೆ ದಾನಗಳನ್ನು ಕೊಡಲಾಯಿತು. (ಎ.ಕ. 3, ಮದ್ದೂರು 5) ಕ್ರಿ.ಶ. 1622ರಲ್ಲಿ ರಾಮದೇವರಾಯ ಕಳಲೆ ನಾಡಿನಲ್ಲಿ ಮದ್ದೂರಿಗೆ ಸೇರಿದ ಹಲವು ಗ್ರಾಮಗಳನ್ನು ಮೂವರು ಬ್ರಾಹ್ಮಣರಿಗೆ ದಾನ ಮಾಡಿದನು. (ಎ.ಕ. 3, ಮದ್ದೂರು 17) ನರಸಿಂಹಚತುರ್ವೇದಿ ಮಂಗಳದ ಬಗ್ಗೆ ಹೇಳಿ ಮುಗಿಸುವ ಮೊದಲು ಈ ಅಗ್ರಹಾರ ವಿಜಯನಗರ ಕಾಲದ ನಂತರವೂ ಮುಂದುವರಿಯಿತೆಂಬುದಕ್ಕೆ ಶಾಸನಾಧಾರವೊಂದನ್ನು ಉಲ್ಲೇಖಿಸಬಹುದು. ಕ್ರಿ.ಶ.1663ರಲ್ಲಿ ದೇವರಾಜ

ಒಡೆಯರ ಮಗ ದೇವರಾಜ ತನ್ನ ವಿಜಯದಿಂದ ಪಡೆದಿದ್ದ ಮದ್ದೂರು ಗ್ರಾಮವನ್ನು ಅವನು ಸ್ಥಾಪಿಸಿದ್ದ ಕೂಡಲಿ ಅಥವಾ ದೇವರಾಜಪುರ ಅಗ್ರಹಾರಕ್ಕೆ ದಾನಮಾಡಿದನು. (ಎ.ಕ. 3, ಮದ್ದೂರು 14)[19]

4. ಚಂದಗಾಲ ಗ್ರಾಮ : ಶ್ರೀರಂಗಪಟ್ಟಣದ ರಂಗನಾಥ ದೇವಾಲಯದ ಶ್ರೀಭಂಡಾರದಲ್ಲಿನ ಐದನೇ ಶಾಸನ [ಎ.ಕ. 06, (ಪ) ಶ್ರೀರಂಗಪಟ್ಟಣ–25] ಕ್ರಿ.ಶ. 1430ರ ಅಕ್ಟೋಬರ್ 28ನೇ ಶನಿವಾರಕ್ಕೆ ಸರಿಯಾಗುತ್ತದೆ. ದಾನದ ಭಾಗ ಸಂಸ್ಕೃತದಲ್ಲಿಯೂ, ಮೇರೆಯನ್ನು ತಿಳಿಸುವ ಭಾಗ ಕನ್ನಡದಲ್ಲಿಯೂ ಇದೆ. ಪ್ರತಾಪದೇವರಾಯನು ತೋರಿನಾಡು ವೇಂಠೆಯ ಮೇನಾಪುರ ಮಾಗಣಿಯ ವ್ಯಾಪ್ತಿಯಲ್ಲಿದ್ದ ಚಂದಗಾಲ ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ **ಪ್ರತಾಪದೇವರಾಯಪುರವೆಂದು ಮರು ಹೆಸರಿಟ್ಟು** ಅನೇಕ ಬ್ರಾಹ್ಮಣರಿಗೆ ಅನೇಕ ವೃತ್ತಿಗಳನ್ನಾಗಿ ವಿಂಗಡಿಸಿ ದಾನವಾಗಿ ನೀಡಿರುವನು. ಈ ಶಾಸನದಲ್ಲಿ ರತ್ನದೇನು ಮಹಾದಾನದ ಶಾಸನ ಉಲ್ಲೇಖವಿದೆ.[20]

ಈ ತಾಮ್ರಶಾಸನವನ್ನು ಬರೆದವನು ವರದಾಪಾಚಾರ್ಯ, ಚಂದಗಾಲ ಅಗ್ರಹಾರದ ಸೀಮೆಯನ್ನು ಹೇಳುವ ಭಾಗದಲ್ಲಿ ಬೆಲವಾಡಿ ನಗುವನಹಳ್ಳಿ, ಆದಿಗೌಡನ ಕೆರೆ, ತಾಣಪನಹಳ್ಳಿ, ಮೇನಾಪುರ, ನೆಲಾಪುರ ಮುಂತಾದವುಗಳನ್ನು ಹೆಸರಿಸಿದೆ.[21]

5. ಕೆಳಗೆರೆ : ನಾಗಮಂಗಲ ತಾಲ್ಲೋಕಿನ ಕೆಳಗೆರೆ ಮಲ್ಲಿಕಾರ್ಜುನ ದೇವಾಲಯದ ನವರಂಗದ ಬಾಗಿಲುವಾಡದಲ್ಲಿರುವ [ಎ.ಕ. 07, (ಪ) ನಾಗಮಂಗಲ–58] ಈ ಶಾಸನದಲ್ಲಿಯೂ ಕಾಲದ ಉಲ್ಲೇಖವಿಲ್ಲ, ವೀರಪ್ರತಾಪ ದೇವರಾಯನೆಂಬ ಉಲ್ಲೇಖವಿರುವುದರಿಂದ ಇದರ ಕಾಲವನ್ನು ಸು. 1430 ಎಂದು ನಿರ್ಧರಿಸಬಹುದು. **ವರದರಾಜಪುರವೆಂದು ಹೆಸರಾದ ಕೆಲ್ಲಂಗರೆಯ** ಹಿರಿಯ ಹೊನ್ನೆಯನಾಯಕರ ಮಗ ವರದಯ್ಯನಾಯಕನು ಊರ ಮುಂದಣ ಮಲ್ಲಿಕಾರ್ಜುನನ ದೇವರ ದೇವಾಲಯವನ್ನು ಗರ್ಭಗೃಹ, ಸುಖನಾಸ, ರಂಗಮಂಟಪ, ಮುಂತಾದವನ್ನು ಮಾಡಿಸಿ ಶೂದ್ರವಡವಾಗಿದ್ದ ಈ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ ಊರಿನ ಕೆರೆಯನ್ನು ಜೀರ್ಣೋದ್ಧಾರ ಮಾಡಿ ವರದರಾಜ ಸಮುದ್ರವೆಂಬ ಹೆಸರಿಟ್ಟು ದಾನವಾಗಿ ನೀಡಿದ ವಿಷಯವಿದೆ.[22]

ನಾಗಮಂಗಲ ತಾಲ್ಲೋಕಿನ ಕೆಳಗೆರೆ ಮಲ್ಲಿಕಾರ್ಜುನ ದೇವಾಲಯದ ನವರಂಗದ ಬಾಗಿಲುವಾಡದಲ್ಲಿರುವ (ಎ.ಕ. 07, (ಪ) ನಾಗಮಂಗಲ–59) ಈ ಶಾಸನವು ಶಾಸನ ಸಂಖ್ಯೆ 178ರ ಮುಂದುವರಿದ ಭಾಗವಾಗಿದೆ. ಮಲ್ಲಿಕಾರ್ಜುನ ದೇವರ ಸೇವೆಗಾಗಿ ಬ್ರಾಹ್ಮಣರಿಗೆ ಗದ್ದೆಯನ್ನು ಮತ್ತು ತೋಟವನ್ನು ದಾನಬಿಟ್ಟಂತೆ ವಿವರವಿದೆ. ಶಾಸನದ ದಾನದ ಭಾಗ ತ್ರುಟಿತವಾಗಿದೆ. ಶಾಸನದ ಕೊನೆಯಲ್ಲಿ ವರದನಾಯಕನನ್ನೂ ಮತ್ತು ಅವನ ತಂದೆ ಹೊನ್ನೇಯನಾಯಕನನ್ನು ಉಲ್ಲೇಖಿಸಿದೆ.[23]

6. ಬಲ್ಲೇನಪಲ್ಲಿ, ಯಲವದಪಲ್ಲಿ : ಶ್ರೀರಂಗಪಟ್ಟಣದ 93ರ ಸಂಖ್ಯೆಯ ನೆಲಮನೆ ಶಾಸನದಲ್ಲಿ ವಿಜಯನಗರದರಸರ ಪ್ರೌಢದೇವರಾಯನು ಕ್ರಿ.ಶ. 1458ರ ಮಾರ್ಗ ಶೀರ್ಷ ಕೃಷ್ಣಪಕ್ಷದ ದ್ವಾದಶಿ ಭಾನುವಾರದಂದು ಕುರ್ವಂಕನಾಡವೇಂಟೇಯ ಮೇಲುಕೋಟೆರಾಜ್ಯಗತವಾದ ಬಲ್ಲೇನಪಲ್ಲಿ, ಯಲವದಪಲ್ಲಿ ಎಂಬ ಎರಡು ಗ್ರಾಮಗಳನ್ನು ಅಗ್ರಹಾರಗಳಾಗಿ ಮಾಡಿ ಚಂದ್ರಮೌಳೀಶ್ವರನ ಸನ್ನಿಧಿಯಲ್ಲಿ ದಾನಮಾಡಿದನೆಂದು ಹೇಳಿದೆ.[24]

7. ಸೀತಾಯೆಂಮ ಅಗ್ರಹಾರ : ವಿಜಯನಗರದರಸರು ಮಲ್ಲಿಕಾರ್ಜುನನು ಶಕ 1382 (ಕ್ರಿ.ಶ. 1460) ರಲ್ಲಿ ತಿರುನಾರಾಯಣಪುರ (ಮೇಲುಕೋಟೆ)ದ 20 ಮಂದಿ ಮಹಾಜನಂಗಳಿಗೆ 20 ವೃತ್ತಿಯಾಗಿ ತಮ್ಮ ತಾಯಿ ಸೀತಾಯಂಮನರ ಹೆಸರಿನಲ್ಲಿ ಧರ್ಮಾಗ್ರಹಾರವಾಗಿ ಮಾಡಿ ದಾನ ನೀಡಿದ ಬಗ್ಗೆ ಶಾಸನ ತಿಳಿಸುತ್ತಿದೆ.[25]

8. ಮೇಲುಕೋಟೆ : ಮೇಲುಕೋಟೆಯ ಪಾತಾಳಂಕಣದಲ್ಲಿರುವ ಕ್ರಿ.ಶ.1460–61ರ ಶಾಸನವು ಪ್ರೌಢದೇವರಾಯ ಅಥವಾ ಮಲ್ಲಿಕಾರ್ಜುನನ ಕಾಲಕ್ಕೆ ಸೇರಿದ್ದು, ಒಂದು ಗ್ರಾಮವನ್ನು **ತಿರುನಾರಾಯಣಪುರ** ಅಗ್ರಹಾರವನ್ನಾಗಿ ಪರಿವರ್ತಿಸಿದ ಬಗ್ಗೆ ಇದರಲ್ಲಿ ಉಲ್ಲೇಖವಿದೆ.[26]

9. ಸುಜ್ಜಲೂರು : ಮಳವಳ್ಳಿ 139ರ ಸಂಖ್ಯೆಯ ತಾಮ್ರಶಾಸನದಲ್ಲಿ ಕ್ರಿ.ಶ.1473ರಲ್ಲಿ ವಿಜಯನಗರದರಸ ಸಂಗಮವಂಶದ ವಿರೂಪಾಕ್ಷನು ನುಗ್ಗಿಲೂರು ಕಾಲುಪಲ್ಲಿ ಸಹವಾದ ಆಲುಗೋಡ ಶ್ರೋತ್ರಿಯ ಭಾಗವಾಗಿ ನೀರುಮಣ್ಣು ಸಹವಾದ ಪ್ರಸಂನ ಚೆನ್ನಕೇಶವಪುರವನ್ನು ಅಗ್ರಹಾರ ಮಾಡಿ ವಿವಿಧ ಬ್ರಾಹ್ಮರಿಗೆ ದಾನವಾಗಿ ನೀಡಿದನು. ಇವೇ ಅಲ್ಲದೆ ಅಗ್ರಹಾರ ಬಾಚಹಳ್ಳಿ, ಆರುವಳ್ಳಿಗಳೂ ಕೂಡ ಅಗ್ರಹಾರ ಗ್ರಾಮಗಳೇ ಆಗಿದ್ದವೆಂದು ಹೇಳಲು ಸಾಧ್ಯವಿದೆ.[27]

10. ಮುಟ್ಟಹಳ್ಳಿ : ಮಳವಳ್ಳಿ ಶಾಸನ ಸಂಖ್ಯೆ 106ರ ಪ್ರಕಾರ ಕ್ರಿ.ಶ. 1506ರಲ್ಲಿ ತುಳುವ ನರಸಿಂಹನ ಆಳ್ವಿಕೆಯಲ್ಲಿ ಉಮ್ಮತ್ತೂರ ದೇಪಂಣೊಡೆಯರ ಕುಮಾರರಾದ ಮಲ್ಲರಾಜ ಎಂಬ ಹೆಸರುಳ್ಳ ಚಿಕ್ಕರಾಯರು ಕಾಶ್ಯಪ ಗೋತ್ರದ ಅಪಸ್ಥಂಭ ಸೂತ್ರದ ಯಜುಶ್ಯಾಖಾಧ್ಯಾಯಿಗಳಾದ ಅದಿಕೊಂಡ ತಿರುಮಲಭಟ್ಟರ ಮಕ್ಕಳಾದ ಪದವಾಕ್ಯ ಪ್ರಮಾಣಜ್ಞರಾದ ಪ್ರತಿವಾದಿಗಜಕೇಸರಿಗಳಾದ ಅಲಂಕಾರಿಕ ಶಿರೋಮಣಿಗಳಾದ ನಾಗಭಟ್ಟರಿಗೆ ಮಾರ್ಗಶಿರ ಬಹುಳ ಅಮಾವಾಸ್ಯಾ ಸೋಮವಾರದಲ್ಲಿ ತಳಕಾಡನಡ ದನುಗೂರ ಸ್ತಲದ ಮೊನೆ ಮುಟ್ಟರಹಳ್ಳಿ ಎಂಬ ಗ್ರಾಮವನ್ನು ಅರಮನೆಗೆ ತೆರುವ ಕುಳವನು ತರಿದು **ಸರ್ವಮಾನ್ಯವಾಗಿ ಏಕಸ್ವಾಮ್ಯದ ಅಗ್ರಹಾರವಾಗಿ ಧಾರೆಯೆರೆದುಕೊಟ್ಟು ಆ ಗ್ರಾಮಕ್ಕೆ ತಮ್ಮ ಹೆಸರಲ್ಲಿ 'ಚಿಕ್ಕರಾಯ ಸಾಗರ'**ವೆಂಬ ಹೆಸರು ಮಾಡಿ ಶಾಸನದ ಕಲ್ಲನ್ನು ನೆಡಿಸಿದನು.[28]

11. ನಾಗಮಂಗಲ : ನಾಗಮಂಗಲದಲ್ಲಿ ದೊರೆತಿರುವ ಕ್ರಿ.ಶ.1511ರ 8ನೇ ಶಾಸನವು ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ನಾಗಮಂಗಲ ಅಥವಾ **ವೀರಬಲ್ಲಾಳ ಚತುರ್ವೇದಿ ಮಂಗಳ** ಭಟ್ಟರತ್ನಾಕರವೆಂದು ಕರೆಸಿಕೊಂಡಿದ್ದ ಅನಾದಿ ಅಗ್ರಹಾರದಲ್ಲಿದ್ದ ವೀರಭದ್ರ ದೇವಾಲಯದ ರಂಗಮಂಟಪ ದುರಸ್ತಿಯನ್ನು ಮಾಡಿ, ಮುಂಭಾಗದ ಗಂಧಗೋಡಿ ಮಂಟಪವನ್ನು ಗುಮ್ಮಲಾಪುರದ ಅಕ್ಕಣ್ಣ ಚೆನ್ನಿಸೆಟ್ಟಿಯ ಮಗನಾದ ಹೊನ್ನಿಸೆಟ್ಟಿಯು ನಿರ್ಮಿಸಿದನೆಂದು ಹಾಗೂ ಅರಮನೆಯ ಬೇಹಾರಿ(ವ್ಯವಸ್ಥಾಪಕ)ಯು ಈ ಕೈಂಕರ್ಯಕ್ಕೆ ಅವಶ್ಯಕವಾದ ಮಾರ್ಗದರ್ಶನ ಮಾಡಿದನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[29]

12. ಹಿರಿಜತ್ತಿಗ : ಕ್ರಿ.ಶ.1512ರ ನಾಗಮಂಗಲ ತಾಲ್ಲೂಕು ದೊಡ್ಡ ಜಾತಕದ ಒಂದು ತಾಮ್ರ ಶಾಸನದ ಪ್ರಕಾರ, ಕೃಷ್ಣದೇವರಾಯ ವೆಲ್ಲೂರು ಸೀಮೆಯ ಹಿರಿಜತ್ತಿಗದ ಸುತ್ತಲ ಗ್ರಾಮಗಳು ಸೇರಿದಂತೆ ಅದರ ನಾಲ್ಕು ಪಾಳೆಯಗಳೊಡನೆ **ಚಿನ್ನದೇವಿಪುರ**ವೆಂಬ ಹೆಸರನ್ನಿಟ್ಟು, ಇದನ್ನು ಅತಿರಾತ್ರ ಮಹಾಯಾಗವನ್ನು ಮಾಡಿ ಪ್ರಸಿದ್ಧನಾಗಿದ್ದ ಶ್ರೀನಿವಾಸಾಧ್ವರಿಗೆ ಬಿಟ್ಟ ದಾನವನ್ನು ದಾಖಲಿಸಿದೆ. ಕ್ರಿ.ಶ.1512ರಲ್ಲಿ ನೀಡಿರುವ ಈ ಅಗ್ರಹಾರ ದಾನವೂ ರಾಣಿ ಚಿನ್ನದೇವಿಗೆ ಪುಣ್ಯವಾಗಿಸಿ ಬಿಟ್ಟಿದ್ದನೆಂದು ಹೇಳಬಹುದು. ಶ್ರೀನೀವಾಸಾಧ್ವರಿ ಹತ್ತು ವೃತ್ತಿಗಳನ್ನು ಸ್ವಂತಕ್ಕೆ ಇಟ್ಟುಕೊಂಡು ಉಳಿದ ಇಪ್ಪತ್ತು ವೃತ್ತಿಗಳನ್ನು ಅರ್ಹರಾದ ನಾನಾ ಗೋತ್ರದ ಬ್ರಾಹ್ಮಣರಿಗೆ ಕೊಟ್ಟನು. ದಾನವನ್ನು ಶಿವಗಂಗೆಯ ಗಂಗಾಧರೇಶ್ವರನ ಸನ್ನಿಧಿಯಲ್ಲಿ ನೀಡಿರುವುದು ಗಮನಾರ್ಹವಾಗಿದೆ.[30]

13. ಮದನಪುರ ಮತ್ತು ಮಲ್ಲಿಗೆಪುರ : ನಾಗಮಂಗಲ ತಾಲ್ಲೂಕಿನ ದೇವಲಾಪುರದ ನಂಜುಂಡಯ್ಯನವರ ಬಳಿಯಿದ್ದ ತಾಮ್ರ ಶಾಸನ (ಎ.ಕ. 07, ನಾಗ. 160) ಶಾಸನದ ಕಾಲ ಸಂವತ್ಸರದ ಆಧಾರದಿಂದ ಮೇಲ್ಕಂಡ ಕಾಲವನ್ನು ಕ್ರಿ.ಶ.1513, ಏಪ್ರಿಲ್ 19 ಶುಕ್ರವಾರವೆಂದು ನಿರ್ಧರಿಸಬಹುದು. ಕೃಷ್ಣದೇವರಾಯನು ಮೇಲ್ಕಂಡ ದಿನದಂದು ಹೇಮಾಶ್ವದಾನ ಮಾಡಿದ ಅಂಗವಾಗಿ ಮದನಪುರ ಮತ್ತು ಮಲ್ಲಿಗೆರೆ ಎಂಬ ಎರಡು ಗ್ರಾಮಗಳನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ **ಕೃಷ್ಣರಾಯಪುರ**ಗಳೆಂದು ಹೆಸರಿಟ್ಟು ಪಂಪಾಕ್ಷೇತ್ರದ ವಿರೂಪಾಕ್ಷನ ಸನ್ನಿಧಿಯಲ್ಲಿ ಜಮದಗ್ನಿಗೋತ್ರರುಕುಶಾಖಾಧ್ಯಾಯಿ ಆಶ್ವಲಾಯನ ಸೂತ್ರದ ನಂಜಪದೇವರ ಪುತ್ರರಾದ ದೇವಭಟ್ಟರಿಗೆ ದಾನವಾಗಿ ನೀಡಿದ್ದಾನೆ. ಶಾಸನದಲ್ಲಿ ಈ ಎರಡೂ ಗ್ರಾಮಗಳ ಸೀಮಾ ವಿವರವನ್ನು ವಿವರವಾಗಿ ನೀಡಿದೆ.[31]

14. ಚಿಕ್ಕಬ್ಬೆಹಳ್ಳಿ : ಕ್ರಿ.ಶ.1516ರಲ್ಲಿ ಕೃಷ್ಣದೇವರಾಯ ನಾಗಮಂಗಲ ರಾಜ್ಯದಲ್ಲಿದ್ದ ಚಿಕ್ಕಬ್ಬೆಹಳ್ಳಿಯನ್ನು ಅದರ ಮೂರುಪಾಳೆಯಗಳೊಡನೆ ಹಾಗೂ ಚನ್ನಪಟ್ಟಣರಾಜ್ಯದ ಹಲವುಮರ, ಹೊಸಹಳ್ಳಿ ಮತ್ತು ಬಿಲ್ಲಗೊಂಡನಹಳ್ಳಿ ರಾಜ್ಯದ ವೆಂಗೇನಹಳ್ಳಿ ಈ ಮೂರು ಗ್ರಾಮಗಳನ್ನು ವ್ಯಾಸತೀರ್ಥರೆಂಬ ಸದ್ಗುಣಿ ತಪಸ್ವಿಗೆ ದಾನ ಕೊಟ್ಟನು.[32]

15. ಮಂಠೇಯ : ಇದು (ಎ.ಕ. 7, ಮಂಡ್ಯ 7) ಮಂಡ್ಯದ ಶ್ರೀನಿವಾಸಚಾರ್ಯರ ಬಳಿಯಿದ್ದ ತಾಮ್ರ ಶಾಸನ, ಶಾಸನದ ಕಾಲ ಕ್ರಿ.ಶ.1516ರ ನವಂಬರ್ 9ರ ಭಾನುವಾರಕ್ಕೆ ಸರಿಹೊಂದುತ್ತದೆ. ಕೃಷ್ಣದೇವರಾಯನು ಆಳುತ್ತಿರುವಾಗ ಹೊಯ್ಸಳ ದೇಶದ ಶ್ರೀರಂಗಪಟ್ಟಣ ಸೀಮೆಯ ಮಂಠೇಯ ಗ್ರಾಮವನ್ನು **ಕೃಷ್ಣರಾಯಪುರ**ವೆಂದು ಮರುಹೆಸರಿಟ್ಟು ಚಿಕ್ಕಮಂಠೆಯ, ಕಲ್ಲಹಳ್ಳಿ, ಹೊಸಹಳ್ಳಿ, ತಣ್ಣಸೇಹಳ್ಳಿ ಮತ್ತು ಕೋನೇಹಳ್ಳಿಯನ್ನು ಸೇರಿಸಿ, ಘನಪರ್ವತದಾನವನ್ನು ಮಾಡುವ ಸಂದರ್ಭದಲ್ಲಿ ತುಂಗಭದ್ರಾತೀರದ ವಿಠಲೇಶ್ವರನ ಸನ್ನಿಧಿಯಲ್ಲಿ ಧಾತು ಸಂವತ್ಸರದ ಕಾರ್ತಿಕ ಪೌರ್ಣಿಮೆ ಭಾನುವಾರದಂದು ಉಭಯವೇದಾಂತ ತಂತ್ರ ವಾಖ್ಯಾನಗಳಲ್ಲಿ ಪ್ರತಿಷ್ಠರಾದ ವರದಾಚಾರ್ಯರ ಮಕ್ಕಳಾದ ಗೋವಿಂದರಾಜರುಗಳಿಗೆ ದಾನ ನೀಡಿರುವನು. ಮಂಠೇಯ ಅಗ್ರಹಾರದ ಸೀಮೆಯನ್ನು ಹೇಳುವಾಗ ತಂಮ್ಮಡಿಗಟ್ಟೆ, ಯಡಗೋಡಿ, ಹಾಳೆಹಳ್ಳಿ ರಾಮನಹಳ್ಳಿ, ಕಾರಸವಾಡಿ, ಕೇತಮಗೆರೆ, ಕಲ್ಲಹಳ್ಳಿ, ಬೆಲದತಾಳಗುಡ್ಡ, ಇಡೆವಾಳ ತಂಡಸಹಳ್ಳಿ, ಕೊತ್ತಿವರದನಹಳ್ಳಿ, ಯಡಲಗೆರೆ, ಮುಚ್ಚಂದಿ, ಶೀರಾಲ, ಹೆಗ್ಗಡೆಹಾಳು, ಸಾತನೂರು ಆಲದಗೆರೆ, ಮುಂತಾದ ಹಳ್ಳಿಗಳ ಉಲ್ಲೇಖವಿದೆ. ಈ ಶಾಸನವನ್ನು ರಚಿಸಿದ ಕವಿ ಸಭಾಪತಿ, ಶಾಸನ ಬರೆದವನು ವೀರಣಾಚಾರ್ಯನ ಮಗನಾದ ಮಲ್ಲಣಾಚಾರ್ಯ. ಇವನಿಗೂ ಒಂದು ವೃತ್ತಿಯನ್ನು ದಾನವಾಗಿ ನೀಡಿದೆ.[33] 1516ರ ವಿಜಯನಗರದರಸ ಕೃಷ್ಣದೇವರಾಯನ ತಾಮ್ರಪಟ ಶಾಸನ ಶ್ರೀರಾಮಾನುಜಚಾರ್ಯರ ಶಿಷ್ಯರಾಗಿದ್ದ ಅನಂತಾಚಾರ್ಯಸ್ವಾಮಿಗಳ ವಂಶಜರಿಂದ ಗೋವಿಂದರಾಜ ಉಡ್ಯೆಯರ್ ವಿಜಯನಗರಕ್ಕೆ ಬಂದು ಅಲ್ಲಿ ನಡೆದ ಧರ್ಮಸಂವಾದದಲ್ಲಿ ಜಯಶೀಲರಾಗಿ ಶ್ರೀ ಕೃಷ್ಣದೇವರಾಯನಿಂದ 1516ರಲ್ಲಿ ಮಂಠೇಯ (ಮಂಡ್ಯ) ಮತ್ತು ಅದರ ಅಕ್ಕಪಕ್ಕದ ಗ್ರಾಮಗಳನ್ನು ಬಹುಮಾನವಾಗಿ ಪಡೆದು ಅದನ್ನು ಅಗ್ರಹಾರವನ್ನಾಗಿಸಿ 'ಕೃಷ್ಣರಾಯಪುರ' ಎಂದು ನಾಮಕರಣ ಮಾಡಿ ತಮ್ಮ ಪರಿವಾರದವರೊಂದಿಗೆ ಅಲ್ಲಿಯೇ ನೆಲೆಸಿದರೆಂದು ತಿಳಿಸುತ್ತದೆ. **ಈ ಗೋವಿಂದರಾಜ ಉಡ್ಯೆಯರ್ ವಂಶಸ್ಥರೇ ಮಂಡಯಂ ಐಯ್ಯಂಗಾರ**ರೆಂದು ಇಂದು ಕರೆಯಲ್ಪಡುತ್ತಿದ್ದಾರೆ. ಶಾಸನದಲ್ಲಿ 'ಮಂಠೆಯ' ಗ್ರಾಮಕ್ಕೆ ಪ್ರತಿನಾಮ 'ಕೃಷ್ಣರಾಯಪುರವೆಂಬ' ಸರ್ವ ಮಾನ್ಯದ ಅಗ್ರಹಾರ ಎಂದಿದೆ. **ಗುತ್ತಲು:** ಮಂಡ್ಯ ತಾಲ್ಲೋಕ್‌ನ ಗುತ್ತಲು (ಪೊದೆಗಳಿಂದ ಗುತ್ತಿಎಲೆಗಳಿಂದ ಕೂಡಿದ ಮರಗಳಿರುವ ಪ್ರದೇಶ) ಶಾಸನದಲ್ಲಿ 'ಶ್ರೀಮದನಾದಿ ಅಗ್ರಹಾರಂ ಮಲ್ಲಿಕಾರ್ಜುನಪುರವಾದ ಗುತ್ತಲು' ಎಂದು ಉಲ್ಲೇಖಗೊಂಡಿದೆ. (ಮಂಡ್ಯ *ಶಾಸನ* ಸಂಖ್ಯೆ 60)[33] ಇಲ್ಲಿ ಮಂಡ್ಯವನ್ನು 'ಮಂಠೆಯ' ಎಂದು ಕರೆದಿದ್ದು ಅದಕ್ಕೆ 'ಚಿಕ್ಕಮಂಠೆಯ' ಎಂಬ ಉಪಗ್ರಾಮವಿದ್ದುದು ಸ್ಪಷ್ಟವಾಗುತ್ತದೆ. ಈ ಮಂಠೆಯ ಈಗ 'ಮಂಡ್ಯ' ರೂಪವನ್ನು ಪಡೆದಿದೆ. 1276ರ ಹೊಯ್ಸಳ ದೊರೆ ಮುಮ್ಮಡಿ ನರಸಿಂಹನ ಹೊಸಬೂದನೂರಿನ ಅನಂತಪದ್ಮನಾಭ ಗುಡಿಯಲ್ಲಿನ ಶಾಸನದಲ್ಲಿ 'ಮಂಠೆಯ' ಗ್ರಾಮವನ್ನು 'ಅಗ್ರಹಾರಮಂಡೆಯ', 'ಚಿಕ್ಕಮಂಠೇಯ' ಎಂದು ಉಲ್ಲೇಖಿಸಲಾಗಿದೆ. ಹೀಗೆ ಮಂಡ್ಯದ ಹೆಸರು ಪ್ರಪ್ರಥಮವಾಗಿ ಕ್ರಿ.ಶ.1516ರ ಕೃಷ್ಣದೇವರಾಯನ ಕಾಲದ ತಾಮ್ರಶಾಸನದಲ್ಲಿ ಕಂಡುಬಂದಿದೆ.

16. ತಿಬ್ಬನಹಳ್ಳಿ : ನಾಗಮಂಗಲ ತಾಲ್ಲೂಕಿನ ತಿಬ್ಬನಹಳ್ಳಿ ಶಾಸನವು – ಚನ್ನಪಟ್ಟಣದ ಈರಪ್ಪ ದೇವರ ಅಮೃತಪಡಿಗೆಂದು ನಾಗಮಂಗಲಕ್ಕೆ ಸೇರಿದ ದೇವಲಪುರದ ಸ್ಥಾನವಾದ ತಿಬ್ಬನಹಳ್ಳಿಯನ್ನು ಕ್ರಿ.ಶ.1524ರಲ್ಲಿ 'ಕೃಷ್ಣರಾಯ ಸಮುದ್ರ'ವೆಂಬ ಹೆಸರಿಟ್ಟು ಸರ್ವಮಾನ್ಯವಾಗಿ ಬಿಟ್ಟದ್ದನ್ನು ಗಮನಿಸಬಹುದು. (ಎ.ಕ. 07, ಪು. 164)[35]

17. ಬಾಗೂರು : ನಾಗಮಂಗಲದ ಕ್ರಿ.ಶ.1544ರ ಇನ್ನೊಂದು ಶಾಸನವು ಸದಾಶಿವರಾಯನ ಆಳ್ವಿಕೆಯಲ್ಲಿ ಈ ಪ್ರದೇಶವನ್ನು ಆಳುತ್ತಿದ್ದ ಸಾಮಂತ ಚನ್ನರಾಜ ಮತ್ತು ತಿಮ್ಮಪ್ಪನಾಯಕರುಗಳು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ ಹಾಗೂ ಅಗ್ರಹಾರ ಬಾಗೂರು ಗ್ರಾಮದ ಉಲ್ಲೇಖವಿದೆ.[36]

18. ಕಬ್ಬರೆ : ಕ್ರಿ.ಶ.1589ರಲ್ಲಿ ತಿರುಮಲರಾಯನ ಮಕ್ಕಳು ರಾಜರಾಜಯ್ಯ ಮತ್ತು ತಿರುಮಲರಾಜಯ್ಯ ಮದ್ದೂರಿಗೆ ಸೇರಿದ ಕಬ್ಬರೆ ಗ್ರಾಮವನ್ನು ಅಗ್ರಹಾರವನ್ನಾಗಿ ಇಬ್ಬರು ಬ್ರಾಹ್ಮರಿಗೆ ದಾನಮಾಡಿದನು. (ಇ.ಸಿ. 111, ಮದ್ದೂರು ನಂ.25)[37]

ಕೃಷ್ಣದೇವರಾಯನು ಗ್ರಾಮಗಳನ್ನು ಅಗ್ರಹಾರವನ್ನಾಗಿ ಮಾಡಿ ದಾನ ನೀಡುವಾಗ ಆ ಗ್ರಾಮಗಳಿಗೆ ಪ್ರತಿನಾಮವಾಗಿ ಕೃಷ್ಣದೇವರಾಯಪುರ, ಕೃಷ್ಣರಾಯಪುರ, ಕೃಷ್ಣಾಪುರ, ಕೃಷ್ಣರಾಯಸಮುದ್ರ, ಕೃಷ್ಣಸಾಗರ, ಮುಂತಾದ ಹೆಸರುಗಳನ್ನಿಡಲಾಗಿದೆ.[38]

ವಿಜಯನಗರದರಸರು ಧಾರ್ಮಿಕ ಕರ್ತವ್ಯವೆಂದು ಭಾವಿಸಿ ಯಜ್ಞಯಾಗಗಳನ್ನು ನಡೆಸಿ ಲೋಕಕಲ್ಯಾಣವನ್ನು ಬಯಸುತ್ತಿದ್ದರು. ಕೃಷ್ಣದೇವರಾಯನ ಕಾಲದಲ್ಲಿ ಇಂತಹ ಅನೇಕ ಯಜ್ಞಯಾಗಗಳನ್ನು ನಡೆಸಿದ್ದು, ಅದರ ಒಂದು ಭಾಗವಾಗಿ ಮಹಾದಾನಗಳು ನಡೆಯುತ್ತಿದ್ದವು. ಹೀಗೆ ವೇದಾಂತ ಪಾರಂಗತರಾದ ಬ್ರಾಹ್ಮಣರಿಗೆ ನೀಡಿದ ಭೂದಾನಗಳೇ 'ಅಗ್ರಹಾರ' ವೆನಿಸಿದ್ದವು. ಅಗ್ರಹಾರ ದಾನಗಳನ್ನು ನೀಡಿರುವ ಸಂದರ್ಭಗಳ ಔಚಿತ್ಯವನ್ನು ಗಮನಿಸಿದಾಗ, ಕೆಲವಡೆ ಕೃಷ್ಣದೇವರಾಯನು ತಮ್ಮ ಆತ್ಮೀಯರಿಗೆ ಪುಣ್ಯವಾಗಬೇಕೆಂದು ಅಗ್ರಹಾರ ದಾನ ನೀಡಿರುವುದು ಕಂಡುಬರುತ್ತದೆ. ಹೀಗೆ ಕೃಷ್ಣದೇವರಾಯನು ವಿಸ್ತಾರವಾದ ಸಾಮ್ರಾಜ್ಯದಲ್ಲಿ ಹಲವು ಭಾಗಗಳಲ್ಲಿ ಅನೇಕ ಸಂದರ್ಭಗಳಲ್ಲಿ ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಮಾಡಿ ದಾನ ನೀಡಿದ್ದು, ಸಾಮ್ರಾಜ್ಯದಲ್ಲಿ ಧರ್ಮವು ಸ್ಥಿರವಾಗಿ ನೆಲೆಸಲು ಅನುವಾಗಿದೆ.

ಅಗ್ರಹಾರಗಳ ಅಧಿಕಾರಿಗಳು ಹಾಗೂ ಅವರ ಕರ್ತವ್ಯಗಳು.

ಕ್ರಿ.ಶ. 14ನೇ ಶತಮಾನದ ಪ್ರಾರಂಭದಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಹಲವು ಭಾಗಗಳಲ್ಲಿ ಗ್ರಾಮಗಳಲ್ಲಿದ್ದ ಗಾವುಂಡ ಅಥವಾ ಗೌಡಿಕೆಯನ್ನು ಹೋಲುವ "ಮಾಸವಗ್ಗಡೆ" ಪದ್ಧತಿಯ ಅಸ್ತಿತ್ವದಲ್ಲಿದ್ದಿತ್ತೆಂದು ತೋರುತ್ತದೆ. ಮಾಸವೆಗ್ಗಡೆಗಳು ತಮ್ಮ ಅಧಿಕಾರವನ್ನು ಅಗ್ರಹಾರಗಳಲ್ಲಿ ಪ್ರತಿ ತಿಂಗಳ ಸರದಿಯ ಮೇಲೆ ಚಲಾಯಿಸುತ್ತಿದ್ದರು. ಕ್ರಿ.ಶ.1327ರಲ್ಲಿ "ತಂತ್ರಮಂತ್ರಚಿಂತಾಮಣಿ" ಶ್ರವಣಪ್ಪಾಚಾರ್ಯ ವಿಘ್ನೇಶ್ವರ ದೀಕ್ಷಿತೋಪಾಧ್ಯಾಯರ ಮಾಸವೆಗ್ಗಡೆತನದಲ್ಲಿ ಮದ್ದೂರಿನ ಬ್ರಾಹ್ಮಣರು ಐವರಿಗೆ ಒಂದು ದಾನ ಮಾಡಿದರು. (ಎ.ಕ. 4, ವೈ.ಎಲ್. 40)[40]

ವಿಜಯನಗರ ಸಾಮ್ರಾಟರ ಆಳ್ವಿಕೆಯಲ್ಲಿ ಅಗ್ರಹಾರಗಳ ಒಂದು ವಿಶೇಷ ಲಕ್ಷಣವನ್ನು ಕಾಣಬಹುದು. ಮಹಾಜನರಿಗೆ ಸ್ವಾಯತ್ತತೆಯನ್ನು ಕೊಟ್ಟಿದ್ದರೂ ಅಗ್ರಹಾರಗಳ ಮೇಲೆ ಸರ್ಕಾರ ತನ್ನ ಅಧಿಕಾರಿಗಳನ್ನು ನೇಮಿಸುತ್ತಿದ್ದಿತು. ಕ್ರಿ.ಶ.1375ರಲ್ಲಿ ಹರಿಹರ, ಬುಕ್ಕರಾಜಪುರ ಅಗ್ರಹಾರದ ಪಾರುಪತ್ಯಗಾರನಾಗಿ ದೇವೇಶ್ವರ ಪಂಡಿತನನ್ನು ನೇಮಿಸಿದನು. (ಎ.ಕ. 4, ವೈ.ಡಿ. 46)[41]

ಮಹಾಜನಸಭೆ : ಅಗ್ರಹಾರ ಗ್ರಾಮಗಳ ಆಡಳಿತ ಮಹಾಜನರನ್ನೊಳಗೊಂಡ ಸಭೆಗೆ ಸೇರಿದ್ದಿತು. ಎರಡು ರೀತಿಯ ಸಭೆಗಳಿದ್ದವು. ಮೊದಲನೆಯದರಲ್ಲಿ ಮನೆಯ ಯಜಮಾನರು ಸಭೆಯ ಸದಸ್ಯರಾಗಿದ್ದರು. ಅವರು ವಿಧಿಬದ್ಧ ಸದಸ್ಯರಾಗಿದ್ದರು. ಉದಾ: ಕ್ರಿ.ಶ.1468ರಲ್ಲಿ ಶ್ರೀರಂಗಪಟ್ಟಣ ತಾಲ್ಲೂಕ್‌ನ ರಾಮಸೀತಾಪುರದಲ್ಲಿ 76 ಮಹಾಜನರಿದ್ದರು.[42]

ಅಗ್ರಹಾರಗಳ ಸಮಸ್ತ ನಿವಾಸಿಗಳು ಹಾಜರಿರುತ್ತಿದ್ದರು. ಎಲ್ಲರೂ ಇದ್ದರೆಂಬುದನ್ನು ಸೂಚಿಸಲು, ಶಾಸನಗಳಲ್ಲಿ 'ಅಶೇಷ' ಎಂಬ ಪದವನ್ನು ಉಪಯೋಗಿಸಲಾಗಿದೆ. ಉದಾ: ಕ್ರಿ.ಶ.1521ರಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲ ಅಗ್ರಹಾರದ 'ಅಶೇಷ' ಮಹಾಜನರು ಒಂದು ದಾನ ಮಾಡಿದರು. (ಎ.ಕ. 4, ನಾ.ಮಂ. 82) ಕ್ರಿ.ಶ.1549ರಲ್ಲಿ ಭಟ್ಟರತ್ನಾಕರ (ನಾಗಮಂಗಲ) ಅಗ್ರಹಾರದ 'ಅಶೇಷ' ಮಹಾಜನಗಳು ಒಂದು ದಾನಮಾಡಿದರು. (ಎ.ಕ. 4. ನಾ.ಮಂ. 5.)[43]

ಎರಡನೆಯದಾಗಿ ಮತ್ತೊಂದು ರೀತಿಯ ಸಭೆಯಲ್ಲಿ ಮಹಾಜನರಲ್ಲದೆ ಅದೇ ಗ್ರಾಮದ ಇತರರು ಅಥವಾ ನೆರೆಹೊರೆಗೆ ಸೇರಿದವರು ಹಾಜರಾಗುತ್ತಿದ್ದರು. ಉದಾ: ಕ್ರಿ.ಶ.1381ರಲ್ಲಿ ಮದ್ದೂರಿನ "ಅಶೇಷ ಮಹಾಜನಂಗಳು, ಸಮಸ್ತಹಲರು, ಸಮಸ್ತಗವುಡ ಪ್ರಜೆಗಳು" ಒಂದು ದಾನ ಮಾಡಿದರು. (ಎಂ.ಎ.ಆರ್. 1938, ನಂ. 42)[44]

ಮಹಾಜನ ಸಭೆಗಳ ಒಂದು ಮುಖ್ಯ ಕರ್ತವ್ಯ, ದೇವಸ್ಥಾನ ಮತ್ತು ಮಠಗಳೇ ಮುಂತಾದ ಮತೀಯ ಸಂಸ್ಥೆಗಳ ಆಡಳಿಕ್ಕೆ ಸಂಬಂಧಿಸಿದ್ದಿತು. ಅವು ಛತ್ರಗಳೇ ಮುಂತಾದ ದಾನ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿದ್ದವು. ಅವು

ದೇವಸ್ಥಾನಗಳಿಗೆ ದತ್ತಿಗಳನ್ನು ಕೊಡುತ್ತಿದ್ದವು. ಉದಾ: ಕ್ರಿ.ಶ.1549ರಲ್ಲಿ ಮಂಡ್ಯ ಜಿಲ್ಲೆಯ ಭಟ್ಟರತ್ನಾಕರದ (ನಾಗಮಂಗಲ) ಮಹಾಜನರು ವೀರಭದ್ರ ದೇವರಿಗೆ ಪ್ರತಿವರ್ಷವೂ ಆ ದೇವಸ್ಥಾನಕ್ಕೆ ಸಲ್ಲುತ್ತಿದ್ದ ಮೊದಲ ಐದು 'ಪಣ'ವನ್ನು ದಾನ ಮಾಡಿದರು. (ಎ.ಕ. 9, ನಾ.ಮಂ. 5)[45]

ಮಹಾಜನ ಸಭೆಯು ದೇವಸ್ಥಾನಗಳು ಮತ್ತು ಕೆರೆಗಳು ಮೊದಲಾದ ಲೋಕೋಪಯೋಗಿ ಕೆಲಸಗಳನ್ನು ನಿರ್ವಹಿಸುತ್ತಿದ್ದಿತು. ಉದಾ: ಕ್ರಿ.ಶ.1521ರಲ್ಲಿ ನಾಗಮಂಗಲದ ಸಮಸ್ತ ಮಹಾಜನರು ವಿಠಣ್ಣನೆಂಬುವನಿಗೆ ಹೊಸಹಳ್ಳಿಗೆ ಪೂರ್ವಕ್ಕೆ ನದಿಯ ಹತ್ತಿರ ಕೆರೆಯೊಂದನ್ನು ಕಟ್ಟಲು ಒಂದು ಓಲೆಯನ್ನು ಕೊಟ್ಟರು. ಕೆರೆಯನ್ನು ಕಟ್ಟಿದುದಕ್ಕೆ, ಅವರು ವಿಠಣ್ಣನಿಗೆ "ಕೆರೆಗೊಡಂಗೆ"ಯಾಗಿ ಮಾಯಿದೇವಿ ಕೆರೆಯ ಹತ್ತಿರ ಭೂಮಿಯನ್ನು ಮತ್ತು ತೂಬಿನ ಕೆಳಗಡೆ ಇದ್ದ ಹೊಲಗಳಲ್ಲಿ ಒಂದು ಭಾಗವನ್ನು ಕೊಟ್ಟರು. (ಎ.ಕ. 4, ನಾ.ಮಂ. 82)[46]

ಮಹಾಜನರು ಅಗ್ರಹಾರಗಳಲ್ಲಿ ತಮ್ಮ ಹತೋಟಿಯಲ್ಲಿದ್ದ ಭೂಮಿಯನ್ನು ಮಾರುವ ಅಥವಾ ದಾನಮಾಡುವ ಹಕ್ಕನ್ನು ಹೊಂದಿದ್ದರು. ಅವರು ಗ್ರಾಮದ ಪರವಾಗಿ ಭೂಮಿಯನ್ನು ಪಡೆಯಬಹುದಾಗಿದ್ದಿತು. ಅವರು ಭೂವಿನಿಮಯ ಮತ್ತು ಅದಕ್ಕೆ ಸಂಬಂಧಿಸಿದ ಒಪ್ಪಂದಗಳನ್ನು ಮಾಡಬಹುದಾಗಿದ್ದಿತು. ವ್ಯಕ್ತಿಗಳಿಗೆ ಭೂದಾನಮಾಡಬಹುದಾಗಿದ್ದಿತು. ಅಗ್ರಹಾರದ ಭೂಮಿಯನ್ನು ಪುನರ್‌ವಿಂಗಡಿಸಬಹುದಾಗಿತ್ತು.[47]

ಮಹಾಜನ ಸಭೆಗಳು ನಿರ್ವಹಿಸುತ್ತಿದ್ದ ಇನ್ನೂ ಅನೇಕ ಕರ್ತವ್ಯಗಳನ್ನು ಶಾಸನಗಳು ತಿಳಿಸುತ್ತವೆ. ಅವು ಪಾಂಡಿತ್ಯಕ್ಕೂ ಉತ್ತೇಜನ ಕೊಡುತ್ತಿದ್ದವು. ಉದಾ: ಕ್ರಿ.ಶ.1381ರ ಒಂದು ಶಾಸನವು ಮದ್ದೂರು ಗ್ರಾಮದ ಮಹಾಜನರು ಮತ್ತು ನಾಡಿನವರು, ದೇಶಿನಾಥದೇವಸ್ಥಾನದಲ್ಲಿ ಪುರಾಣ ಹೇಳಲು, ಯಾತ್ರಿಕರಿಗೆ ಆಹಾರ ಒದಗಿಸಲು ಮತ್ತು ವೇದಾಧ್ಯಯನಕ್ಕೆ ಆ ಗ್ರಾಮದ ಪೂರ್ವಕ್ಕೆ ಮಾಯಣ್ಣನೆಂಬುವನಿಗೆ ಸೇರಿದ ಎರಡು ಖಂಡುಗದಷ್ಟು ಬಿತ್ತನೆ ಮಾಡಬಹುದಾದ ತರೀ ಭೂಮಿಯನ್ನು, ಒಂದು ಒಣ ಭೂಮಿಯನ್ನು, ಒಂದು ತೋಟವನ್ನು ದಾನ ಮಾಡಿದರು. (ಎಂ.ಎ.ಆರ್. 1928, ಪುಟ 59)[48]

ವಿಜಯನಗರ ಕಾಲದಲ್ಲಿ, ಅವುಗಳ ಅಸ್ತಿತ್ವಕ್ಕೆ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಹೆಚ್ಚಿನ ಸಾಕ್ಷ್ಯವಿದೆ. ಅಗ್ರಹಾರ ಸಭೆಗಳು ಅಲ್ಲಿನ ಮೇಲ್ವಿಚಾರಣೆ ಮತ್ತು ಇತರ ಪೌರಕರ್ತವ್ಯಗಳನ್ನು ನಿರ್ವಹಿಸುತ್ತಿದ್ದವು. ಅವು ದೇವಸ್ಥಾನಗಳಿಗೆ ದತ್ತಿಗಳನ್ನು ಕೊಡುತ್ತಿದ್ದವು ಮತ್ತು ಸಾರ್ವಜನಿಕ ಹಿತಕಾರ್ಯಗಳನ್ನು ಕೈಗೊಳ್ಳುತ್ತಿದ್ದವು. ಅಗ್ರಹಾರಗಳು ಸಣ್ಣ ವಿಶ್ವವಿದ್ಯಾನಿಲಯ ಕೇಂದ್ರಗಳಾಗಿದ್ದವು. ಮಹಾಜನರು ವಿದ್ವಾಂಸರಾಗಿದ್ದರು. ಅಗ್ರಹಾರಗಳಿಗೆ ಸೈನಿಕರ ಮತ್ತು ತೆರಿಗೆ ವಸೂಲು ಮಾಡುವವರ ಅತಿಕ್ರಮಣವಿರಲಿಲ್ಲ. ರಾಜರು, ರಾಣಿಯರು, ಶ್ರೀಮಂತರು, ಮತ್ತು ಬಡವರು ಅಗ್ರಹಾರಗಳಿಗೆ ಆಸರೆ ಕೊಡುತ್ತಿದ್ದರು. ಈ ಸಂಸ್ಥೆಗಳು ಮಾಡುತ್ತಿದ್ದ ಸೇವೆ ನಿಜವಾಗಿಯೂ ಅದ್ಭುತವೂ ಪ್ರಖ್ಯಾತವೂ ಆಗಿತ್ತೆಂಬ ಅಭಿಪ್ರಾಯವನ್ನು ಕರ್ಮರ್‌ಕರ್ ವ್ಯಕ್ತಪಡಿಸಿದ್ದಾರೆ. ಒಟ್ಟಾರೆ ಶಾಸನಗಳ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ವಿಜಯನಗರ ಕಾಲದಲ್ಲಿ ಅಗ್ರಹಾರ ಸ್ವಯಮಾಧಿಕಾರವುಳ್ಳ ಸಂಸ್ಥೆಯಾಗಿದ್ದಿತು.[49]

ಉಪಸಂಹಾರ

ಅಗ್ರಹಾರಗಳು ಬ್ರಾಹ್ಮಣರಿಗೆ ನೀಡಿದ ಭೂದಾನಗಳಾದರೂ ಅಗ್ರಹಾರವಿದ್ದ ಸ್ಥಳಗಳಲ್ಲಿ ಬುದ್ಧಿಜೀವಿಗಳಾದ ಜನ ಕೃಷಿ, ನೀರಾವರಿಗಳ ಅಭಿವೃದ್ಧಿಗಾಗಿ ಶ್ರಮಿಸಿದ್ದು ಕಂಡುಬರುತ್ತದೆ. ಸ್ವತಃ ಕೃಷಿಯನ್ನು ಮಾಡದಿದ್ದರೂ ಅನೇಕ ಬಾರಿ ಸಾಗುವಳಿ ಆಗದ ಬರಡು ನೆಲವನ್ನು ಪಡೆದು ಅವುಗಳ ಅಭಿವೃದ್ಧಿಗೆ ಶ್ರಮಿಸಿದ್ದಿದೆ. ಅನೇಕ ಬಾರಿ ಅಗ್ರಹಾರಗಳ ಸ್ಥಾಪನೆ ಕೃಷಿಯ ವಿಸ್ತರಣೆಯ ಉದ್ದೇಶದಿಂದಲೇ (ಎಕ್ಸ್‌ಟೆನ್‌ಶನ್ ಆಫ್ ಅಗ್ರಿಕಲ್ಚರ್) ಆಗುತ್ತಿತ್ತು. ಕೆಲವು ಗ್ರಾಮಗಳ ಪರಿಸರದಲ್ಲಿ (5 ರಿಂದ 6) ಗ್ರಾಮದ ಗುಂಪಿಗೆ ಒಂದರಂತೆ ಇದ್ದಂಥ ಅಗ್ರಹಾರಗಳು ಕೇವಲ ಧಾರ್ಮಿಕ ಸಾಹಿತ್ಯದ ಅಧ್ಯಯನಕ್ಕೆ

ಮೀಸಲಾಗಿರದೆ, ವೈಜ್ಞಾನಿಕ ಅಧ್ಯಯನದ ಕೇಂದ್ರಗಳೂ ಆಗಿದ್ದವು. ಲೌಕಿಕ ವಿದ್ಯೆಗಳಿಗೂ ಅಗ್ರಹಾರದ ವಿದ್ವಾಂಸರು ಮಾರ್ಗದರ್ಶಕರಾಗಿದ್ದರು. ಇಂದಿಗೂ ಹಳ್ಳಿಯ ಜ್ಯೋತಿಷಿಯ ಬಳಿ ಮಳೆ ನಕ್ಷತ್ರವನ್ನು ವಿಚಾರಿಸುವ ಪರಿಪಾಠ ರೈತರಲ್ಲಿ ಇದೆ. ಹಿಂದಿನವರ ತಾಂತ್ರಿಕ ಮಾರ್ಗದರ್ಶನ ಇಂದು ಇಷ್ಟಕ್ಕಾದರೂ ಸೀಮಿತವಾಗಿ ಉಳಿದಿದೆ. ಬಾವಿ ತೋಡಲು ಶಾಸ್ತ್ರಾಧಾರದಿಂದ ಮಾರ್ಗದರ್ಶನ ಮಾಡುವ ಕೆಲವು ವಿದ್ವಾಂಸರು ಅಲ್ಲಿ ಇಲ್ಲಿ ಉಳಿದಿದ್ದಾರೆ. ಹೀಗೆ ಒಂದು ವಿಶಿಷ್ಟ ಸದುದ್ದೇಶದಿಂದ ಅಗ್ರಹಾರಗಳು ಸ್ಥಾಪನೆಗೊಂಡಿವೆ.

ಅಗ್ರಹಾರಗಳಲ್ಲಿ ಬ್ರಾಹ್ಮಣೇತರರೂ ಅದರಲ್ಲೂ ಮುಖ್ಯವಾಗಿ ಪರಂಪರಾಗತ ಕಸುಬುದಾರರು ತಮ್ಮ ಕೇರಿಗಳಲ್ಲಿ ವಾಸಮಾಡುತ್ತಿದ್ದರು. ಆದರೆ ಆ ಗ್ರಾಮಗಳ ಮೇಲಿನ ಅಧಿಕಾರ ಬ್ರಾಹ್ಮಣರದ್ದೇ ಆಗಿತ್ತು. ಅಗ್ರಹಾರದ ಆಡಳಿತಸೂತ್ರ ಅಲ್ಲಿಯ ಬ್ರಾಹ್ಮಣ ಗೃಹಪತಿಗಳನ್ನೊಳಗೊಂಡ ಮಹಾಜನರ ಕೈಲಿತ್ತು. ಈ ಮಹಾಜನರು ದೇವಸ್ಥಾನದಲ್ಲಿ ಅಥವಾ ಮಂಟಪದಲ್ಲಿ ಸಭೆ ಸೇರಿ ಗ್ರಾಮಾಡಳಿತಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುತ್ತಿದ್ದರು. ಸಾಮಾನ್ಯವಾಗಿ ಎಲ್ಲಾ ಮುಖ್ಯ ಗ್ರಾಮ ಕಾರ್ಯಗಳು ನಡೆಯುತ್ತಿದ್ದುದು ಅವರ ಸನ್ನಿಧಿಯಲ್ಲೇ, ಕೆರೆ, ಕಾಲುವೆಗಳ ನಿರ್ಮಾಣ ಮಾಡುವುದರ ಮೂಲಕ ವ್ಯವಸಾಯ ಅಭಿವೃದ್ಧಿಗೊಳಿಸುವುದು, ಮಠ, ದೇವಸ್ಥಾನಗಳ ಆಡಳಿತವನ್ನು ನಿರ್ವಹಿಸುವುದು, ದಾನಿಗಳು ನೀಡುವ ಹಣ ಅಥವಾ ಭೂಮಿಯನ್ನು ರಕ್ಷಿಸಿ ಧರ್ಮಕಾರ್ಯಗಳಿಗೆ ವಿನಿಯೋಗಿಸುವುದು ಅಗ್ರಹಾರದ ಮಹಾಜನಗಳ ಕರ್ತವ್ಯವಾಗಿದ್ದಿತು.

ಊರುಗಳಲ್ಲಿ ವಿವಾದ ತಲೆದೋರಿದಾಗ ಅದು ಮಹಾಜನರ ಸಮಕ್ಷಮದಲ್ಲಿ ಇತ್ಯರ್ಥವಾಗುತ್ತಿತ್ತು. ಅಗ್ರಹಾರಗಳು ಉನ್ನತ ಕೇಂದ್ರಗಳಾಗಿ ಕೆಲಸ ಮಾಡುತ್ತಿದ್ದುದು ಮಾತ್ರವಲ್ಲದೆ ಸ್ವಯಂ ಆಡಳಿತ ಪದ್ಧತಿಯ ಮಾದರಿಗಳೂ ಆಗಿದ್ದವು. ಪ್ರಾಚೀನ ಸಂಪ್ರದಾಯ ಮತ್ತು ವಿದ್ವತ್‌ಧಾರೆ ಅವಿಚ್ಛಿನ್ನವಾಗಿ ಹರಿದು ಬರಲು ಈ ಅಗ್ರಹಾರಗಳು ಬಹು ಸಹಾಯಕವಾಗಿದ್ದವು.

ಅಗ್ರಹಾರಗಳು ಸ್ವಾಯತ್ತತೆಯ ಹಕ್ಕುಗಳನ್ನು ಹೊಂದಿದ್ದ ಸಂಸ್ಥೆಯಾಗಿದ್ದಿತು. ಅಗ್ರಹಾರಗಳು ಮಹಾಜನರ ಸಾಮೂಹಿಕ ಜೀವನಕ್ಕೆ ಸಾಕ್ಷ್ಯವಾಗಿವೆ.

ಒಟ್ಟಾರೆ, ವಿಜಯನಗರದರಸರ ಕಾಲದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಅಗ್ರಹಾರಗಳನ್ನು ನಾನಾ ಉದ್ದೇಶಗಳನ್ನಿಟ್ಟುಕೊಂಡು ನಿರ್ಮಿಸುವುದರ ಮೂಲಕ ಇಲ್ಲಿಯೂ 'ಅಗ್ರಹಾರ ಸಂಸ್ಕೃತಿ'ಯನ್ನು ಪೋಷಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಆದ್ದರಿಂದ ಅಗ್ರಹಾರ ಸಂಸ್ಕೃತಿಗೆ ಮಂಡ್ಯ ಜಿಲ್ಲೆಯ ಪ್ರದೇಶ ವಿವಿಧ ಕನ್ನಡ ರಾಜಮನೆತನಗಳ ಕಾಲದಲ್ಲಿ ಎಷ್ಟರಮಟ್ಟಿಗೆ ಪ್ರಾಮುಖ್ಯತೆ ಪಡೆದುಕೊಂಡಿದೆ ಎಂಬುದನ್ನು ಅಧ್ಯಯನ ಮಾಡುವ ಇತಿಹಾಸ ಸಂಶೋಧನಾಕಾಂಕ್ಷಿಗಳಿಗೆ ಆಸಕ್ತಿದಾಯಕವಾದ ವಸ್ತುವಿಷಯವಾಗಲಿದೆ.

ಪರಾಮರ್ಶನಗಳು

1. ಚಿದಾನಂದ ಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, (ಕ್ರಿ.ಶ.450 ರಿಂದ ಕ್ರಿ.ಶ.1150), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1966, ಪು. 209–211.
2. ಗೋಪಾಲ್ ಆರ್. (ಸಂ), *ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, 2009, ಪು. 115.
3. ರಾಜೇಶ್ ಹಂ.ಗು. (ಸಂ), *ಇತಿಹಾಸ ದರ್ಪಣ ವಿಶೇಷ ಸಂಚಿಕೆ*, ಜನವರಿ–ಮಾರ್ಚ್ 2010, ಪು. 80–81.
4. ಗೋಪಾಲ್. ಆರ್. (ಸಂ), *ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, 2008, ಪು. 166.
5. ಗೋಪಾಲ್. ಆರ್. (ಸಂ), *ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, 2009, ಪು. 115.

6. ಅದೇ, ಪು. 115.

7. ಚಿದಾನಂದ ಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, (ಕ್ರಿ.ಶ.450 ರಿಂದ ಕ್ರಿ.ಶ.1150), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1966, ಪು. 209.

8. *ಕರ್ನಾಟಕದ ಪರಂಪರೆ*, ಸಂಪುಟ 01, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006, ಪು. 414.

9. ಗೋಪಾಲ್. ಆರ್. (ಸಂ), ತುಮಕೂರು *ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, 2009, ಪು. 115.

10. ಚಿದಾನಂದ ಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, (ಕ್ರಿ.ಶ.450 ರಿಂದ ಕ್ರಿ.ಶ.1150), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1966, ಪು. 210–211.

11. ವೆಂಕಟರತ್ನಂ. ಎ.ವಿ., ವಿಜಯನಗರ ಸಾಮ್ರಾಜ್ಯದಲ್ಲಿ *ಸ್ಥಳೀಯ ಸರ್ಕಾರ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974, ಪು. 51.

12. ಗೋಪಾಲ್ ಆರ್. (ಸಂ), ತುಮಕೂರು *ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, 2009, ಪು. 115.

13. ವೆಂಕಟರತ್ನಂ, ಎ.ವಿ., ವಿಜಯನಗರ ಸಾಮ್ರಾಜ್ಯದಲ್ಲಿ *ಸ್ಥಳೀಯ ಸರ್ಕಾರ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974, ಪು. 52.

14. ರಾಜೇಗೌಡ. ಹ.ಕ. (ಸಂ), *ಸಿಂಗಾರ*, ಕೆ.ಸಿಂಗಾರಿಗೌಡ ಅಭಿನಂದನಾ ಸಮಿತಿ., ಮಂಡ್ಯ, 1988, ಪು. 214.

15. ದೇಜಗೌ, (ಮೂಲ ಸಂಪು. ಸಂ.) ಜಯಪ್ರಕಾಶ್ ಗೌಡ, ಶಿವರಾಮು. ವ.ನಂ. (ಪರಿಷ್ಕೃತ ಆವೃತ್ತಿಯ ಸಂ.), ಸುವರ್ಣ ಮಂಡ್ಯ, ಪರಿಷ್ಕೃತ ಆವೃತ್ತಿ, ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, 2006, ಪು. 101.

16. ಗೋಪಾಲ್. ಆರ್. (ಸಂ), ಮಂಡ್ಯ *ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, 2008, ಪು. 172.

17. ವೆಂಕಟರತ್ನಂ. ಎ.ವಿ., ವಿಜಯನಗರ ಸಾಮ್ರಾಜ್ಯದಲ್ಲಿ *ಸ್ಥಳೀಯ ಸರ್ಕಾರ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974, ಪು. 54.

18. ಅದೇ, ಪು. 80.

19. ಅದೇ, ಪು. 81.

20. ಪರಶಿವಮೂರ್ತಿ ಡಿ.ವಿ. (ಸಂ), ಪ್ರೌಢದೇವರಾಯನ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 132.

21. ಅದೇ, ಪು. 133.

22. ಅದೇ, ಪು. 399.

23. ಅದೇ, ಪು. 340.

24. ಗೋಪಾಲ್. ಆರ್. (ಸಂ), ಮಂಡ್ಯ *ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, 2008, ಪು. 175.

25. ಅದೇ, ಪು. 175.

26. ಪಾರ್ಥಸಾರಥಿ, ಟಿ.ಎ. (ಮುಖ್ಯ ಸಂಪಾದಕರು), *ಭಾರತದ ಗ್ಯಾಸೆಟಿಯರ್*, ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆ, (ಪರಿಷ್ಕೃತ ಆವೃತ್ತಿ), ಕರ್ನಾಟಕ ರಾಜ್ಯ ಸರ್ಕಾರದ ಪ್ರಕಟಣೆ, 2003, ಪು. 66.

27. ಗೋಪಾಲ್, ಆರ್. (ಸಂ), ಮಂಡ್ಯ *ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, 2008, ಪು. 172.

28. ಅದೇ, ಪು. 172.

29. ಪಾರ್ಥಸಾರಥಿ. ಟಿ.ಎ. (ಮುಖ್ಯ ಸಂಪಾದಕರು), *ಭಾರತದ ಗ್ಯಾಸೆಟಿಯರ್*. ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆ, (ಪರಿಷ್ಕೃತ ಆವೃತ್ತಿ), ಕರ್ನಾಟಕ ರಾಜ್ಯ ಸರ್ಕಾರದ ಪ್ರಕಟಣೆ, 2003, ಪು. 68–69.

30. ವೆಂಕಟರತ್ನಂ. ಎ.ವಿ., *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974, ಪು. 55.

31. ಪರಶಿವಮೂರ್ತಿ ಡಿ.ವಿ. (ಸಂ), *ಕೃಷ್ಣದೇವರಾಯನ ಶಾಸನಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010, ಪು. 80.

32. ವೆಂಕಟರತ್ನಂ ಎ.ವಿ., *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974, ಪು. 55.

33. ಪರಶಿವಮೂರ್ತಿ ಡಿ.ವಿ. (ಸಂ), *ಕೃಷ್ಣದೇವರಾಯನ ಶಾಸನಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010, ಪು. 183.

34. ಗೋಪಾಲ್. ಆರ್. (ಸಂ), *ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, 2008, ಪು. 167–168.

35. ರಾಜೇಶ್ ಹಂ.ಗು. (ಸಂ), *ಇತಿಹಾಸ ದರ್ಪಣ ವಿಶೇಷ ಸಂಚಿಕೆ*, ಜನವರಿ–ಮಾರ್ಚ್ 2010, ಪು. 84.

36. ಪಾರ್ಥಸಾರಥಿ, ಟಿ.ಎ. (ಮುಖ್ಯ ಸಂಪಾದಕರು), *ಭಾರತದ ಗ್ಯಾಸೆಟಿಯರ್*. ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆ, (ಪರಿಷ್ಕೃತ ಆವೃತ್ತಿ), ಕರ್ನಾಟಕ ರಾಜ್ಯ ಸರ್ಕಾರದ ಪ್ರಕಟಣೆ, 2003, ಪು. 72.

37. ವೆಂಕಟರತ್ನಂ. ಎ.ವಿ., *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974, ಪು. 55.

38. ರಾಜೇಶ್ ಹಂ.ಗು. (ಸಂ), *ಇತಿಹಾಸ ದರ್ಪಣ ವಿಶೇಷ ಸಂಚಿಕೆ* ಜನವರಿ–ಮಾರ್ಚ್ 2010, ಪು. 83.

39. ಗೋಪಾಲ್. ಆರ್. (ಸಂ), *ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, 2008, ಪು. 175.

40. ವೆಂಕಟರತ್ನಂ. ಎ.ವಿ., *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974, ಪು. 59.

41. ಅದೇ, ಪು. 62.

42. ಅದೇ, ಪು. 63.

43. ಅದೇ, ಪು. 64.

44. ಅದೇ, ಪು. 65.

45. ಅದೇ, ಪು. 68.

46. ಅದೇ, ಪು. 71.

47. ಅದೇ, ಪು. 74.

48. ಅದೇ, ಪು. 77.

49. ಅದೇ, ಪು. 51–52.

33

ಹಂಪಿಯ ಶಾಸನದಲ್ಲಿ ಪರಿಸರ ಪ್ರಜ್ಞೆ

ಡಾ॥ ಸಿ. ಎಸ್. ವಾಸುದೇವನ್

ಶಾಸನಗಳು ಪ್ರಾಚೀನ ಕಾಲದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಅನೇಕ ಮಜಲುಗಳನ್ನು ಹಾಗು ವೈವಿಧ್ಯಮಯ ವಿಷಯಗಳನ್ನು ಶಾಸನಗಳ ಅಧ್ಯಯನದಿಂದ ತಿಳಿಯಬಹುದು. ಕೆಲವು ಅಪರೂಪದ ಮಾಹಿತಿಗಳನ್ನು ಶಾಸನಗಳು ಒಳಗೊಂಡಿರುತ್ತವೆ. ಅಂತಹ ಒಂದು ಶಾಸನವನ್ನು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ. ಹಂಪಿ ಪರಿಸರದಲ್ಲಿ ದೊರಕಿರುವ ಈ ಶಾಸನವು ಅಂದಿನ ಕಾಲದ ಸಸ್ಯವರ್ಗದ ಮೇಲೆ ಬೆಳಕು ಚೆಲ್ಲುವುದರೊಂದಿಗೆ ಅವುಗಳ ಪೋಷಣೆಗಾಗಿ ಕೈಗೊಂಡ ವಿವರಗಳನ್ನು ದಾಖಲಿಸಿದೆ. ಅಲ್ಲದೆ ಅಂದಿನ ಜನರಿಗೆ ಇದ್ದ ಪರಿಸರ ಪ್ರಜ್ಞೆಯನ್ನು ಪರಿಚಯಿಸುತ್ತದೆ. ಶಾಸನ ಹಂಪಿ ಪರಿಸರದ ಕೆಲವು ನಿರ್ಧಿಷ್ಟ ಸ್ಥಳ ನಿರ್ದೇಶನಗಳನ್ನು ಹಾಗೂ ಭೂಮೇಲ್ಮೈ ಲಕ್ಷಣಗಳನ್ನು ದಾಖಲಿಸಿದೆ.

ಹಂಪಿಯ ತಳವಾರಘಟ್ಟದ ಸಮೀಪ ನದಿ ದಡದ ಮೇಲೆ ಇರುವ ಶಾಸನವು ಕೃಷ್ಣದೇವರಾಯನ ಕಾಲಾವಧಿಯದ್ದಾಗಿದೆ. ಶಾಸನದಲ್ಲಿ ಕಾಲವನ್ನು ಆಂಗೀರಸ ಸಂವತ್ಸರ, ಫಾಲ್ಗುಣ, ಬಹುಳ 2, ಶನಿವಾರವೆಂದು ನೀಡಲಾಗಿದೆ. ಇದು ಕ್ರಿ.ಶ. 1512 ಮಾರ್ಚ್ 10 ಬುಧವಾರಕ್ಕೆ ಸರಿಹೊಂದುತ್ತದೆ. ಕೃಷ್ಣದೇವರಾಯನು ಆಳುತ್ತಿರುವಾಗ ಪ್ರಧಾನಿಯಾದ ತಿಮಪ್ಪಯ್ಯನ ಅವಧಿಯಲ್ಲಿ ನಾಗಬೋವನ ಮಗ ಹೊಂನೆಬೋವನು ಆರು ನೂರು ಪ್ರತಾಪ ಗದ್ಯಾಣಗಳನ್ನು ಮರಳಕೋಡಿ ಮುಲಾರದೇವರಿಗೆ ನೀಡುತ್ತಾನೆ. ಈ ಹಣವನ್ನು ಗಿಡಗಳನ್ನು ಬೆಳೆಸಿದವರಿಗೆ ಮತ್ತು ಕಾಲುವೆಯನ್ನು ತೋಡಿದವರಿಗೆ ಕೆಲವು ಪಾಲುಗಳನ್ನು ನೀಡಿರುವುದಾಗಿ ಶಾಸನವು ದಾಖಲಿಸುತ್ತದೆ. ಹೊಂನಯ ಮತ್ತು ಸೋಚಣ್ಣ ಎಂಬ ವ್ಯಕ್ತಿಗಳ ಹೆಸರುಗಳನ್ನು ಸಹ ಉಲ್ಲೇಖಿಸುತ್ತದೆ. ಶಾಸನದ ಕಲ್ಲಿನಲ್ಲಿ ನಂದಿ, ಸೂರ್ಯ, ಚಂದ್ರ, ತ್ರಿಶೂಲ, ಢಮರು, ಲಿಂಗಕ್ಕೆ ಹಾಲೆರೆಯುತ್ತಿರುವ ಹಸು ಮತ್ತು ಕರುವಿನ ಶಿಲ್ಪಗಳಿವೆ.[1]

ಹದಿನೇಳು ಸಾಲುಗಳನ್ನು ಒಳಗೊಂಡಿರುವ ಈ ಶಾಸನವು ಕುತೂಹಲಕಾರಿಯಾದ ಸಂಗತಿಗಳನ್ನು ದಾಖಲಿಸಿದೆ. ಮಧ್ಯಕಾಲೀನ ಯುಗದ ಜನರಿಗೆ ಮತ್ತು ಅರಸರಿಗೆ ಇದ್ದ ಪರಿಸರ ಕಾಳಜಿಯನ್ನು ಈ ಶಾಸನದ ಮೂಲಕ ಅರಿಯಬಹುದು. ವಿಜಯನಗರದ ಅರಸರು ಮತ್ತು ಅಧಿಕಾರಿಗಳು ಈ ನಿಟ್ಟಿನಲ್ಲಿ ಕಾರ್ಯಪ್ರವರ್ತಕರಾಗಿದ್ದರು ಎಂಬುದು ಅಂದಿನ ಕಾಲದ ಶಾಸನ ಮತ್ತು ಸಮಕಾಲೀನ ಸಾಹಿತ್ಯಗಳಿಂದ ತಿಳಿಯಬಹುದು. ರಾಜಧಾನಿ ಮತ್ತು ಅದರ ಸುತ್ತಲಿನ ಪರಿಸರದಲ್ಲಿ ಅನೇಕ ಮರಗಿಡಗಳನ್ನು ಮತ್ತು ಫಲವೃಕ್ಷಗಳನ್ನು ಬೆಳೆಸುತ್ತಿದ್ದರು ಎಂಬುದನ್ನು ವಿದೇಶಿಯರ ಬರಹಗಳು ಸಹ ಉಲ್ಲೇಖಿಸುವುದು ಗಮನಾರ್ಹ.

ಕೃಷ್ಣದೇವರಾಯನ ಆಳ್ವಿಕೆಯಲ್ಲಿ ತಿಮ್ಮಪ್ಪಯ್ಯನು ಮಂತ್ರಿಯಾಗಿದ್ದಾಗ ನಾಗಬೋವನ ಮಗ ಹೊಂನೆಬೋವನು ಮರಳಕೋಡಿಯ ಮೈಲಾರದೇವರ ಪೂಜೆಯ ವೆಚ್ಚಕ್ಕಾಗಿ 600 ಪ್ರತಾಪ ಗದ್ಯಾಣವನ್ನು ನೀಡುತ್ತಾನೆ. ಅದರೊಂದಿಗೆ ಕೋಟೆಯಿಂದ ಹಿರಿಯರ ಅಣತಿ ಅಥವಾ ಆದೇಶದಂತೆ ಆರು ನೂರು ಹೊನ್ನು ಸಸಿ ಅಂದರೆ ಹೊನ್ನೆಗಿಡದ ಸಸಿಯನ್ನು ನೆಡಿಸಲು ಕ್ರಮವನ್ನು ಕೈಗೊಳ್ಳುತ್ತಾರೆ. ಹೊನ್ನೆಗಿಡದ ಸಸಿಯನ್ನು ನೆಡೆಸುವುದು ಮಾತ್ರವಲ್ಲದೇ ಆ ಸಸಿಗಳನ್ನು ಬೆಳೆಸಲು ನೀರಿನ ಕಾಲುವೆಯನ್ನು ಅಗೆಸಿ ಸಸ್ಯಗಳನ್ನು ಸಾಲಾಗಿ ನೆಡುವವನಿಗೆ ಒಂದು ಪಾಲನ್ನು ಮತ್ತು ಅದೇ ಸಸಿಗಳನ್ನು ಬೆಳೆಸುವವನಿಗೆ 200 ಗದ್ಯಾಣವನ್ನು ನೀಡಲು ಕ್ರಮವಹಿಸುತ್ತಾರೆ. ಏಳನೇ ಸಾಲಿನಿಂದ ಹನ್ನೆರಡನೇ ಸಾಲುಗಳವರೆಗೆ ಶಾಸನವು

> ".... ಆಱು (8) ನೂರು ಹೊಂನು ಸಸಿಯ ಬೆಳಸಿದವರಿಗೆ (9) ಕಾಲುವೆಂ ಸವೆಸಿ ಹೊಂನಯಗೆ ಸಾ (10) ಲು 1 ಪಾಲು ಅದೇ ಸಸಿಯ ಬೆಳಸು (11) ವಗೆ 200 ಸೋಚಣ್ಣನ ಉದಯ ಬಿ" ....

ಎಂದು ಉಲ್ಲೇಖಿಸುತ್ತದೆ.

ಮೇಲೆ ಉಲ್ಲೇಖಿಸಿದ ಸಾಲುಗಳು ಹೊನ್ನೆಯ ಸಸಿಯನ್ನು ಸಾಲಾಗಿ ನೆಡೆಸುವುದು, ಅದಕ್ಕೆ ನೀರನ್ನು ಉಣಿಸಲು ಕಾಲುವೆ ತೋಡಿ ನೀರು ಹರಿಸಿ ಸಸಿಯನ್ನು ಬೆಳೆಸುವವರಿಗೆ ಇಂತಿಷ್ಟು ಪಾಲು ಹಣವನ್ನು ಒದಗಿಸುವುದರ ಮೂಲಕ ಪರಿಸರವನ್ನು ಹಸಿರುಮಯವಾಗಿಸಲು ಒತ್ತು ನೀಡಿರುವುದು ಸ್ಪಷ್ಟವಾಗುತ್ತದೆ. ಈ ಹೊನ್ನೆಯ ಗಿಡಗಳನ್ನು ಯಾವ ಸ್ಥಳದಲ್ಲಿ ನೆಡೆಸಿದರು ಎಂಬುದನ್ನು ನಿಖರವಾಗಿ ಸೂಚಿಸಿಲ್ಲ. ಆದರೆ ಸಸಿಗಳನ್ನು ಸಾಲಾಗಿ ನೆಡಸಲಾಗಿದೆಯೆಂದು ತಿಳಿಸಿರುವುದರಿಂದ ಬಹುಶ: ಅವುಗಳನ್ನು ರಸ್ತೆಯ ಎರಡೂ ಬದಿಗಳಲ್ಲಿ ನೆಡೆಸಿರಬಹುದು ಎಂಬುದನ್ನು ಸೂಚಿಸಿದರೆ ತಪ್ಪಾಗಲಾರದು. ಶಾಸನದ ಮುಂದಿನ ಸಾಲುಗಳಲ್ಲಿ ಉಲ್ಲೇಖಿತವಾಗಿರುವ ವಿಷಯವನ್ನು ನಿಖರವಾಗಿ ಅರ್ಥಮಾಡಿಕೊಳ್ಳಲು ಪ್ರಸ್ತುತ ಕಷ್ಟಸಾಧ್ಯ. ಅಂದಿನ ಕಾಲದ ಸಮಾಜದಲ್ಲಿ ಸಾಮಾನ್ಯರು, ಅರಸರು, ಆಡಳಿತಾಧಿಕಾರಿಗಳು ಮತ್ತು ಇತರರು ಪರಿಸರದ ಬಗೆಗೆ ಕಾಳಜಿಯನ್ನು ಹೊಂದಿದವರಾಗಿದ್ದರೆಂಬುದನ್ನು ಈ ಶಾಸನ ತೋರಿಸುತ್ತದೆ. ಇದಕ್ಕೆ ಪೂರಕವಾಗಿ ಅಂದಿನ ಸಮಕಾಲೀನ ಇತರ ಶಾಸನಗಳು ಜನರ ಹಸಿರು ಪ್ರಜ್ಞೆಯನ್ನು ಕುರಿತು ಉಲ್ಲೇಖಿಸುತ್ತವೆ.

ಪ್ರಸ್ತುತ ಶಾಸನವು ಹೊನ್ನೆಯ ಸಸಿಯ ಬಗೆಗೆ ಉಲ್ಲೇಖಿಸಿದೆ. ಹೊನ್ನೆಯ ಮರವು ಸಸ್ಯರಾಶಿಯಲ್ಲಿ ಮಹತ್ವ ಪಡೆದಿರುವ ಒಂದು ಸಸ್ಯ. ಇದು ದೊಡ್ಡದಾಗಿ ಬೆಳೆದು ಮರವಾಗುತ್ತದೆ. ಹೊನ್ನೆಯ ಮರ ಸಾಲು ಮರಗಳಾಗಿ ನೆಡುವುದರಿಂದ ನೆರಳನ್ನು ನೀಡುತ್ತದೆ ಮತ್ತು ಅದರ ಮರವನ್ನು ಬಳಸಿ ಕಟ್ಟಡ ಮತ್ತು ಇತರೆ ಪೀಠೋಪಕರಣಗಳನ್ನು ಮಾಡಬಹುದಾಗಿದೆ. ಹಂಪಿ ಪರಿಸರದಲ್ಲಿ ಹೊನ್ನೆಯ ಮರಗಳು ಇದ್ದವು ಮತ್ತು ಅವುಗಳನ್ನು ಬೆಳೆಸುತ್ತಿದ್ದರು ಎಂಬುದು ಪ್ರಸ್ತುತ ಶಾಸನವು ದೃಢಪಡಿಸುತ್ತದೆ. 600 ಹೊನ್ನೆಯ ಸಸಿಗಳನ್ನು ಇಲ್ಲಿ ನೆಡೆಸಿರುವುದರಿಂದ, ಅಷ್ಟು ಸಸಿಗಳನ್ನು ಬೆಳೆಸಲು ವ್ಯವಸ್ಥಿತ ತೋಟಗಾರಿಕೆಯ ಪಾಲನ ಕೇಂದ್ರಗಳು (Nursery) ಇದ್ದಿರಬಹುದು ಎಂದು ಸೂಚಿಸಿದರೆ ತಪ್ಪಾಗಲಾರದು.

ಇದರೊಂದಿಗೆ ಹಂಪಿಯ ಸಮಕಾಲೀನ ಕೆಲವು ಶಾಸನಗಳು ಮರಗಿಡಗಳ ಬಗೆಗೆ ಉಲ್ಲೇಖಿಸುವುದರೊಂದಿಗೆ ಅವುಗಳ ಮೇಲೆ ವಿಧಿಸಲಾಗುತ್ತಿದ್ದ ವಿಶಿಷ್ಟ ತೆರಿಗೆಗಳನ್ನು ಕುರಿತು ಉಲ್ಲೇಖಿಸುತ್ತವೆ. ಹಸಿರು ವೃಕ್ಷಗಳ ಮೇಲೆ ಕೆಲವು ತೆರಿಗೆಗಳನ್ನು ಅಂದು ವಿಧಿಸಲಾಗುತ್ತಿತ್ತು.[2] ಹಂಪಿಯಲ್ಲಿ ದೊರಕಿರುವ ಮೂರು ಶಾಸನಗಳು ಹಸಿರುವಾಣಿ ಸುಂಕ ಎಂಬ ತೆರಿಗೆಯ ಬಗ್ಗೆ ಉಲ್ಲೇಖಿಸುತ್ತವೆ. ಈ ಸುಂಕವನ್ನು ಕುರಿತ ಮೊದಲ ಪ್ರಸ್ತಾವವು ಕೃಷ್ಣದೇವರಾಯನ ಕಾಲಕ್ಕೆ ಸೇರಿದ್ದಾಗಿದೆ.[3] ಈ ತೆರಿಗೆಯನ್ನು ಅಚ್ಯುತರಾಯನ ಕಾಲದ ಮತ್ತೊಂದು ಶಾಸನವು ಉಲ್ಲೇಖಿಸಿದೆ.[4] ಪಟ್ಟಾಭಿರಾಮ ದೇವಾಲಯದಲ್ಲಿನ ಶಾಸನವು[5] ಈ ತೆರಿಗೆಯನ್ನು "ರಘುನಾಥದೇವರ ಅಮೃತಪಡಿಗೆ ಸಲುವ ದೊರವದಿ

ಸೋಮಲಾಪುರದ ಸೀಮೆಯಲು ಪುಟಿದಂಥ ತೆಂಗು, ಹಲಸು, ಎಲೆಬಳ್ಳಿ, ಹುಣಿಸೆ, ನಿಂಬೆ, ಮಾದಳ ಮೊದಲಾದ ಹಸಿರುವಾಣಿ ಅದಕ್ಕೆ ಸಲುವ ಸ್ವಾ(ಂ)ಮ್ಯ ಏನು ಉಂಟಾದನು ಅಚುತರಾಯ ಮಲ್ಲಪಂಣ ಅಯ್ಯನವರೂ ಯೀ ಹಸಿರುವಾಣಿಯನೂ ಕಂದಾಚಾರಕ್ಕೆ.... ಬದಲು ಸಲುವ.... ಮ ಹಡಪಗ 1050 ಯಿ 42 ಕಂದಾಚಾರದ ಪ್ರಾಕು.... ಸುಂಕಮಾನ್ಯ" ಎಂದು ವಿವರಿಸುತ್ತದೆ. ಈ ಶಾಸನಗಳಿಂದ ಹಸಿರು ಮರಗಳಿಗೆ, ಅದರಲ್ಲಿಯೂ ಸಮೃದ್ಧವಾಗಿ ಬೆಳೆ ಮತ್ತು ಫಲಗಳನ್ನು ನೀಡುವ ಸಸ್ಯರಾಶಿಗಳ ಹಸಿರು ಕೊಡೆ ಅಥವಾ ಚಪ್ಪರಕ್ಕೆ (ವಾಣಿ) ಹಸಿರುವಾಣಿ ಎಂದು ತೆರಿಗೆಗೆ ಸೂಚ್ಯವಾಗಿ ಹೆಸರಿಸಿರುವುದು ಗಮನಾರ್ಹ. ಇದರಂತೆ ಮತ್ತೆರಡು ಶಾಸನಗಳು[6] ಫಲವೃಕ್ಷಗಳ ಸುಂಕ ಮತ್ತು ಮತ್ತೊಂದು ಶಾಸನವು ಫಲಗುತ್ತಿಗೆ[7] ಎಂದು ಉಲ್ಲೇಖಿಸುತ್ತವೆ. ಇವೆಲ್ಲಾ ತೆರಿಗೆಗಳನ್ನು ಹಸಿರು ಸಸ್ಯಗಳ ಮೇಲೆ ವಿಧಿಸಲಾಗುತ್ತಿತ್ತು[8] ಎಂಬುದನ್ನು ದೃಢಪಡಿಸುತ್ತವೆ.

ವಿದೇಶಿ ಪ್ರವಾಸಿಗರು ವಿಜಯನಗರಕ್ಕೆ ಭೇಟಿ ನೀಡಿ ತಮ್ಮ ಅನುಭವಗಳನ್ನು ದಾಖಲಿಸಿದ್ದಾರೆ. "ರಾಜನು ಬಿಸ್ನಗ (ವಿಜಯನಗರ)ದಲ್ಲಿ ಗೋಡೆ ಮತ್ತು ಗೋಪುರಗಳನ್ನು ಕಟ್ಟಿಸಿ ನೀರಿನ ಸೌಲಭ್ಯವಿಲ್ಲದಿರುವಾಗ, ಐದು ಹರದಾರಿ ದೂರವಿದ್ದ ದೊಡ್ಡನದಿಯ ನೀರನ್ನು ತರಲು ಒಡ್ಡನ್ನು ನಿರ್ಮಿಸಿ, ನೀರನ್ನು ನಗರಕ್ಕೆ ಸರಬರಾಜು ಮಾಡಿಸಿದನೆಂದು" ತಿಳಿಸುತ್ತಾ ಪ್ಯಾಸನು "ಈ ನೀರಿನ ಸಹಾಯದಿಂದ ನಗರದ ಸುತ್ತ ಬಹಳ ತೋಟಗಳು, ಹಣ್ಣಿನ ತೋಟಗಳು, ಗಿಡಗಳ ತೋಪುಗಳು ಮತ್ತು ದ್ರಾಕ್ಷಿಯ ತೋಟಗಳನ್ನು ಬೆಳೆಸಲಾಯಿತು. ಈ ನಾಡಿನಲ್ಲಿ ಅವು ವಿಪುಲವಾಗಿವೆ. ಈ ನಾಡಿನಲ್ಲಿ ಒಳ್ಳೆಯ ಫಲ ನೀಡುವ ಲಿಂಬೆ, ಕಿತ್ತಳೆ, ಗುಲಾಬಿ ಮತ್ತು ಇತರ ಗಿಡಗಳನ್ನು ನೆಡಲಾಗಿದೆ. ಹೀಗೆ ತಿರುಗಿಸಲು ರಾಜ ತನ್ನ ತಂದೆಯಿಂದ ಬಂದ ದೊಡ್ಡ ಮೊತ್ತದಲ್ಲಿದ್ದ ಎಲ್ಲ ಸಂಪತ್ತನ್ನು ವ್ಯಯ ಮಾಡಿದನೆಂದು ಹೇಳಲಾಗುತ್ತದೆ" ಎಂದು ಬರೆದಿರುವನು.[9]

ಮತ್ತೊಬ್ಬ ಪ್ರವಾಸಿ ಫರ್ನಾಓ ನ್ಯೂನಿಜ್‌ನು ವಿಜಯನಗರದಲ್ಲಿದ್ದ ನೈಸರ್ಗಿಕ ಉತ್ಪನ್ನಗಳನ್ನು ವಿವರಿಸುತ್ತಾ "ಮಾರುಕಟ್ಟೆಗಳು, ದ್ರಾಕ್ಷಿ, ಕಿತ್ತಳೆ, ಲಿಂಬೆ, ದಾಳಿಂಬೆ, ಹಲಸು ಮತ್ತು ಎಲ್ಲವೂ ಬಹಳ ಅಗ್ಗವಾಗಿರುತ್ತವೆ" ಎಂದು ಬರೆದಿರುವನು.[10]

ಅಂದು ವಿಜಯನಗರಕ್ಕೆ ಭೇಟಿ ನೀಡಿದ ಪ್ರವಾಸಿಗರು ತಾವು ಕಂಡ ವಿಷಯಗಳನ್ನು ಕೂಲಂಕಷವಾಗಿ ದಾಖಲಿಸಿರುವುದು ಹಾಗೂ ಆ ವಿಷಯಗಳನ್ನೇ ಶಾಸನಗಳು ಉಲ್ಲೇಖಿಸಿರುವುದು ಗಮನಾರ್ಹ. ಉದಾಹರಣೆಗೆ ವಿದೇಶಿ ಪ್ರವಾಸಿಗರು ದಾಖಲಿಸಿರುವಂತೆ ಅಂದು ವಿಜಯನಗರದ ಪರಿಸರದಲ್ಲಿ ತೋಟಗಳಲ್ಲಿ ತೆಂಗು, ಹಲಸು, ದಾಳಿಂಬೆ, ನಿಂಬೆ, ಮಾವು ಮುಂತಾದವುಗಳನ್ನು ಬೆಳೆಯಲಾಗುತ್ತಿತ್ತು. ಈ ಫಲಗಳನ್ನು ಕುರಿತು, ಇನ್ನೂ ಅಧಿಕ ಮಾಹಿತಿಯೊಂದಿಗೆ, ಹಂಪಿ ಪರಿಸರದ ಶಾಸನಗಳು ಉಲ್ಲೇಖಿಸಿವೆ.

ಪ್ಯಾಸನು ತನ್ನ ಪ್ರವಾಸ ಕಥಾನಕದಲ್ಲಿ ಈ ರೀತಿಯಾಗಿ ಬರೆದಿರುವನು.[11] "ಈ ನಗರದ ಗಾತ್ರದ ಬಗೆಗೆ ನಾನಿಲ್ಲಿ ಬರೆಯುವುದಿಲ್ಲ. ಏಕೆಂದರೆ, ಯಾವ ಸ್ಥಳದಿಂದಲೂ ಅದು ಎಲ್ಲ ಕಾಣಸಿಗದು. ಆದರೆ ನಾನೊಂದು ಗುಡ್ಡ ಏರಿದೆ. ಅಲ್ಲಿಂದ ಅದರ ಬಹುಭಾಗವನ್ನು ನೋಡಲು ಶಕ್ಯವಾಯಿತು. ಅದನ್ನು ಎಲ್ಲ ನೋಡಲಾಗಲಿಲ್ಲವೇಕೆಂದರೆ ಅದು ಹಲವಾರು ಬೆಟ್ಟಸಾಲುಗಳ ಮಧ್ಯೆ ಇದೆ. ಅಲ್ಲಿಂದ ನಾನು ನೋಡಿದುದು ರೋಮ್‌ನಷ್ಟು ವಿಶಾಲವಾಗಿಯೂ ಮತ್ತು ಬಹಳ ಸುಂದರವಾಗಿಯೂ ಕಂಡಿತು. ಅದರೊಳಗೆ ಮತ್ತು ಮನೆಗಳ ತೋಟಗಳಲ್ಲಿ ಅನೇಕ ಗಿಡಗಳಿವೆ ಮತ್ತು ಅದರ ಮಧ್ಯೆ ಹರಿಯುವ ನೀರಿನ ಅನೇಕ ನಾಲೆಗಳಿವೆ. ಅಲ್ಲಲ್ಲಿ ಸರೋವರಗಳಿವೆ. ರಾಜ ತನ್ನ ಅರಮನೆಯ ಹತ್ತಿರವೇ ತೆಂಗಿನ ತೋಪು ಮತ್ತು ಇತರ ಸಂಪದ್ಭರಿತ ಹಣ್ಣಿನ ಗಿಡಗಳನ್ನು ಹೊಂದಿದ್ದಾನೆ. ಮೂರರ ವಾಸಸ್ಥಾನದ ಕೆಳಗಡೆ ಒಂದು ನದಿಯಿದೆ. ಅದರ ಈ ಬದಿಗೆ ಅನೇಕ ಹಣ್ಣಿನ ತೋಟಗಳು ಮತ್ತು ಅನೇಕ ಹಣ್ಣಿನ ಗಿಡಗಳುಳ್ಳ ತೋಟಗಳೂ ಇವೆ. ಅವುಗಳಲ್ಲಿ ಬಹುಮಟ್ಟಿಗೆ ಇರುವುದು ಮಾವು, ಅಡಿಕೆ, ಹಲಸು ಮತ್ತು ಅನೇಕ ನಿಂಬೆ ಕಿತ್ತಳೆ ಗಿಡಗಳು.

ಅವುಗಳು ಒಂದಕ್ಕೊಂದು ಎಷ್ಟು ಗುತ್ತಾಗಿ ಬೆಳೆದಿವೆಯೆಂದರೆ ಅದು ದಟ್ಟ ಅರಣ್ಯದಂತೆ ತೋರುತ್ತದೆ. ಮತ್ತು ಅಲ್ಲಿ ಬಿಳಿದ್ರಾಕ್ಷಿಗಳೂ ಉಂಟು. ನಗರದಲ್ಲಿರುವ ನೀರೆಲ್ಲ ಪ್ರಥಮ ಸುತ್ತಿನ ಗೋಡೆಯ ಹೊರಗೆ ಇರುವ ನಾನು ಹೇಳಿದ ಎರಡು ಕೆರೆಗಳಿಂದ ಬರುತ್ತದೆ.

ಚರ್ಚಿಸಲಾಗುತ್ತಿರುವ ತಳವಾರಘಟ್ಟದ ಶಾಸನವು ಮಹತ್ವದ ಸಂಗತಿಯನ್ನು ಐದನೆಯ ಸಾಲಿನಲ್ಲಿ ದಾಖಲಿಸಿದೆ. ಶಾಸನವು ನಾಗಬೋವನ ಮಗ ಹೊಂನೆ ಬೋವ ಎಂಬ ವ್ಯಕ್ತಿಯು ಮರಳಕೋಡಿಯ ಮೈಲಾರದೇವರ ವೆಚ್ಚಕ್ಕಾಗಿ 600 ಪ್ರತಾಪಗದ್ಯಾಣವನ್ನು ನೀಡಿರುವನು ಎನ್ನುತ್ತದೆ. ಇಲ್ಲಿ ಉಲ್ಲೇಖಿತವಾಗಿರುವ ಮೈಲಾರ (ಮುಲಾರ) ದೇವರು ಬಹುಶಃ ಶಾಸನದ ಸಮೀಪದಲ್ಲಿ ಇದ್ದಿರಬಹುದಾದ ಮೈಲಾರ ದೇವಾಲಯವನ್ನು ಕುರಿತಾಗಿರಬಹುದು. ಆದರೆ ಇಂದು ಶಾಸನದ ಸಮೀಪದಲ್ಲಿ ಮೈಲಾರ ದೇವಸ್ಥಾನ ಕಂಡುಬರುವುದಿಲ್ಲ. ಅಂದು ಇಲ್ಲಿ ದೇವಾಲಯ ಇದ್ದಿರಬಹುದು. ಕಾಲನ ತುಳಿತಕ್ಕೆ ಒಳಗಾಗಿ ಇಲ್ಲಿದ್ದಿರಬಹುದಾದ ದೇವಾಲಯವು ನಾಶವಾಗಿರುವ ಸಾಧ್ಯತೆಗಳಿವೆ. ಶಾಸನವಿರುವ ಸ್ಥಳದ ಸಮೀಪದ ಪರಿಸರದಲ್ಲಿ ಮಂಟಪದಂತೆ ಇರುವ ವಾಸ್ತು ನಿರ್ಮಿತಿಗಳು ಇವೆ. ಆದರೆ ಅದರಲ್ಲಿ ಯಾವ ದೇವತೆಯ ಮೂರ್ತಿಶಿಲ್ಪಗಳಿಲ್ಲ. ಆದ ಕಾರಣ ಈ ವಾಸ್ತು ನಿರ್ಮಿತಿಗಳಲ್ಲಿ ಒಂದು ಮೈಲಾರ ದೇವಾಲಯವಾಗಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಮೈಲಾರ ದೇವರು ಕರ್ನಾಟಕದ ಪ್ರಸಿದ್ಧವಾದ ಜನಪದ ದೈವವಾಗಿದೆ. ಕರ್ನಾಟಕದೊಂದಿಗೆ ನೆರೆಯ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿಯೂ ಜನಪ್ರಿಯ ದೈವವಾಗಿದೆ. ಮೈಲಾರ ದೇವರ ಪರಂಪರೆಯು ಪ್ರಾಚೀನವಾಗಿದ್ದು ಜನಪದ ದೈವದಿಂದ ಶಿಷ್ಟ ದೇವತೆಯಾಗಿ ಬೆಳೆಯಿತು. ಮೈಲಾರ ದೇವರನ್ನು ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ. ಮೈಲಾರ, ಲಿಂಗಣ್ಣ, ಮಲ್ಲಯ್ಯ, ಮಲ್ಲುಖಾನ, ಮಲ್ಲಿಕಾರ್ಜುನ, ಮಲ್ಲೇಶ್ವರ, ಮಲುದೇವ, ಮಲ್ಲಾರ, ಅಜಮತಖಾನ, ಕರಿಯಾಲ, ಮಾರ್ತಂಡ, ಮಾರ್ತಂಡ-ಭೈರವ, ಮಲ್ಲಾರಿ, ಹುಲ್ಲಪ್ಪ, ಚಂದಪ್ಪ, ಕನ್ನಡ ಜಂಗಮ, ಇತ್ಯಾದಿ. ಕನ್ನಡ ಪದ 'ಮಲೆ' ಯಿಂದ (ಪರ್ವತ) ಮೈಲಾರ ಬಂದಿದೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.[12] ಮೈಲಾರ ದೇವರನ್ನು ಶಿವನೆಂದು ಗುರುತಿಸಿ ಪೂಜಿಸಲಾಗುತ್ತದೆ. ಭೈರವನಾಗಿ ಲಿಂಗರೂಪದಲ್ಲಿಯೂ ಪೂಜಿಸಲಾಗುತ್ತಿತ್ತು ಎಂದು ಶಾಸನಗಳಿಂದ ತಿಳಿಯಬಹುದು.

ಶಾಸನಗಳಲ್ಲಿ ಮೈಲಾರ ಎಂಬ ಪದವನ್ನು ಹೊಂದಿದ ಸ್ಥಳನಾಮ ಮತ್ತು ವ್ಯಕ್ತಿನಾಮಗಳು ಕ್ರಿ.ಶ. ಸುಮಾರು 10ನೆಯ ಶತಮಾನದಿಂದ ದೊರಕುತ್ತವೆ. ಶಾಸನಗಳಲ್ಲಿ ಮುಲ, ಮುಲಹಳ್ಳಿ, ಮುಲಾರ, ಮಯ್ಲಾರ, ಮೈಲಾರ ಎಂಬ ಸ್ಥಳನಾಮಗಳು ಸಿಗುತ್ತವೆ. ವ್ಯಕ್ತಿನಾಮಗಳಲ್ಲಿ ಮುಲಸೆಟ್ಟಿ, ಮುಲೆನಾಯಕ, ಮುಲಪ್ಪ, ಮೈಲರಸ, ಮೈಲಾರಭಟ್ಟ, ಮೈಲಾರಭಟ್ಟೋಪಾಧ್ಯಾಯ, ಮೈಲಾರಯ್ಯ, ಮೈಲಾರಾಧ್ಯ, ಮುಂತಾದವುಗಳು ಲಭ್ಯವಿದೆ. ಮೈಲಾರ ಶಬ್ದವು ಮೊದಲ ಬಾರಿಗೆ ಕ್ರಿ.ಶ. 1018ರ ಶಾಸನದಲ್ಲಿ ಕಂಡುಬರುತ್ತದೆ.[13]

ಹಂಪಿ ಪರಿಸರದಲ್ಲಿ ಮೈಲಾರದ ಉಲ್ಲೇಖಗಳನ್ನು ಸ್ಥಳನಾಮ, ವ್ಯಕ್ತಿನಾಮ ಮತ್ತು ದೈವವಾಗಿಯೂ ಕಾಣಬಹುದು. ಕ್ರಿ.ಶ. 14ನೇ ಶತಮಾನಕ್ಕೆ ಸೇರಿದ ದಖ್ಖನಿ ಶೈಲಿಯಲ್ಲಿರುವ ಮೈಲಾರ ದೇವಾಲಯವು ವಿಜಯನಗರಪಟ್ಟಣದ ಪೂರ್ವ ಭಾಗದಲ್ಲಿರುವ ಮಹಾದ್ವಾರದ ಬಳಿಯಲ್ಲಿನ ಮಾಲ್ಯವಂತ ರಘುನಾಥ ದೇವಾಲಯದ ಆಗ್ನೇಯಕ್ಕಿರುವ ಕಣಿವೆ ಪ್ರದೇಶದಲ್ಲಿದೆ. ಇದು ಹಂಪಿ ಪರಿಸಿರದ ತೇದಿಯುಳ್ಳ ಪ್ರಾಚೀನ ದೇವಾಲಯಗಳಲ್ಲಿ ಒಂದಾಗಿದೆ. ಇದರ ಬಳಿಯಿರುವ ಬಂಡೆಯ ಮೇಲಿನ ಶಾಸನವು ಈ ದೇವಾಲಯವನ್ನು ನಿರ್ಮಿಸಿದ ವರ್ಷವನ್ನು ಕ್ರಿ.ಶ. 1380 ಎಂದು ದಾಖಲಿಸುವುದರೊಂದಿಗೆ ಅದರ ನಿರ್ಮಾತೃವನ್ನು ಕುರಿತು ಉಲ್ಲೇಖಿಸುತ್ತದೆ. ಇಮ್ಮಡಿ ಹರಿಹರನ ಬಳಿಯಲ್ಲಿ ಬೇಟೆಗಾರನಾಗಿ ಕಾರ್ಯನಿರ್ವಹಿಸುತ್ತಿದ್ದ ಬತ್ತ್ಯೆಯ ನಾಯಕನು ಈ ಮೈಲಾರ ದೇವಾಲಯವನ್ನು ನಿರ್ಮಿಸಿದನೆಂದು

ಶಾಸನವು ದಾಖಲಿಸಿದೆ.[14] ಗರ್ಭಗೃಹ ಮತ್ತು ಚಿಕ್ಕ ಮುಖಮಂಟಪವನ್ನು ಹೊಂದಿರುವ ಈ ಕಿರು ದೇವಾಲಯವು ಸಾಕಷ್ಟು ನಶಿಸಿದೆ.

ರತ್ನಕೂಟ ಬೆಟ್ಟದಲ್ಲಿರುವ ಮಲಗು ಬಸವಣ್ಣ ದೇವಾಲಯದ ಉತ್ತರಕ್ಕೆ ಬಂಡೆಯ ಮೇಲಿರುವ ಶಾಸನವು[15] 'ಶ್ರೀ ಮೈಲಾರ ದೇವರ ತೀರ್ಥ' ಎಂದು ದಾಖಲಿಸಿದೆ. ಅಲ್ಲೇ ಇರುವ ಮತ್ತೊಂದು ಶಾಸನವು[16] 'ಶ್ರೀ ಮಾಲ್ಯವಂತ ಪರ್ವತದ ಶ್ರೀ ಮೈಲಾರದೇವರು' ಎಂದು ದಾಖಲಿಸಿದೆ. ಹೊಸಪೇಟೆ ತಾಲೂಕಿನ ಮಲಪನಗುಡಿಯ ಶಾಸನದಲ್ಲಿ ಬಾವಿಯನ್ನು ತೋಡಿಸಿದವನು ತನ್ನ ತಂದೆ ಬುಳ್ಳಪ್ಪ ಮತ್ತು ತಾಯಿ ತಿಮ್ಮಾಂಬಿಕಾ ಎಂದು ಕುಲದೈವ, ಕುಲಸ್ವಾಮಿ ಮುಲಾರ ಶಂಕರ ಎಂದು ಹೇಳಿಕೊಂಡಿದ್ದಾನೆ.[17] ಮತಂಗ ಪರ್ವತದ ವೀರಭದ್ರ ದೇವಾಲಯ ಸಮೀಪದ ಬಂಡೆಯಲ್ಲಿನ ಶಾಸನವು ಮುಲಪ್ಪ ಎಂಬ ವ್ಯಕ್ತಿನಾಮವನ್ನು ಉಲ್ಲೇಖಿಸಿದೆ.[18] ಇದೇ ಶಾಸನದ ಪಕ್ಕದಲ್ಲಿರುವ ಮತ್ತೊಂದು ಶಾಸನವು ಮುಲಣ ಎಂಬ ವ್ಯಕ್ತಿನಾಮವನ್ನು ದಾಖಲಿಸಿದೆ.[19] ಕೋಟಿಲಿಂಗದ ಬಳಿಯ ರಘುನಂದನತೀರ್ಥರ ಬೃಂದಾವನದ ಬಳಿಯ ಕಲ್ಲಿನ ಮೇಲಿನ ಶಾಸನವು 'ಮುಲಾಪುರಿ ಶ್ರೀ ಹಗರಿದೇವರ ಪಾದ' ಎಂದು ದಾಖಲಿಸಿದೆ.[20]

ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಹಂಪಿ ಪರಿಸರದಲ್ಲಿ ಒಂದಕ್ಕಿಂತ ಅಧಿಕ ಸಂಖ್ಯೆಯಲ್ಲಿ ಮೈಲಾರ ದೇವಾಲಯಗಳು ಇತ್ತೆಂಬುದನ್ನು ಈ ಶಾಸನ ದೃಢಪಡಿಸುತ್ತದೆ. ಶಾಸನವು ಮರಳಕೋಡಿ ಮುಲಾರ ದೇವರು ಎಂದು ಉಲ್ಲೇಖಿಸುವುದರಿಂದ ಹಂಪಿ ಪರಿಸರದ ವಿವಿದೆಡೆಗಳಲ್ಲಿ ಸಾಕಷ್ಟು ಮೈಲಾರ ದೇವಾಲಯಗಳು ಇದ್ದಿದ್ದು, ಅವುಗಳನ್ನು ನಿದಿಷ್ಟವಾಗಿ ಗುರುತಿಸಲು ಅವುಗಳು ಇರುವ ನಿರ್ದಿಷ್ಟ ಸ್ಥಳಗಳನ್ನು ದೇವಾಲಯದೊಂದಿಗೆ ಜೋಡಿಸಿ ಗುರುತಿಸುತ್ತಿದ್ದರು. ಪ್ರಸ್ತುತ ನಿದರ್ಶನದಲ್ಲಿ ಮೈಲಾರ ದೇವಾಲಯವು ಮರಳ ಕೋಡಿ ಬಳಿ ಇದ್ದ ಕಾರಣ ಅದನ್ನು ಮರಳಕೋಡಿ ಮೈಲಾರ ಎಂದು ಕರೆಯಲಾಗಿದೆ. ಬಹುಶಃ ಗುಡ್ಡದ ಮೇಲೆ ಮೈಲಾರ ದೇವಾಲಯ ಇದ್ದರೆ ಅದನ್ನು ಗುಡ್ಡದ ಮೈಲಾರ ಎಂದು ಕರೆಯುತ್ತಿದ್ದರು. ಸಾಮಾನ್ಯವಾಗಿ ದೇವಾಲಯ ಮತ್ತು ದೇವರುಗಳನ್ನು ನಿರ್ದಿಷ್ಟ ಗುಣ ವಾಚಕವನ್ನು ಸೇರಿಸಿ ಹೆಸರಿಸುವ ಕ್ರಮವು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಉದಾಹರಣೆಗೆ, ಗುಡ್ಡದ ತಿಮ್ಮಪ್ಪ, ಕೋಡಿ ಬಸವ, ಅಗಸಿ ಆಂಜನೇಯ, ಕಣಿವೆ ನರಸಿಂಹ, ಕಣಿವೆ ವೀರಭದ್ರ, ಬೆಟ್ಟದ ಮಾರಮ್ಮ, ಕೋಟೆ ಆಂಜನೇಯ, ಇತ್ಯಾದಿ. ಉಲ್ಲೇಖಿತ ಉದಾಹರಣೆಗಳಲ್ಲಿ ಕೋಟೆ, ಅಗಸಿ, ಬೆಟ್ಟ, ಕಣಿವೆ ಎಲ್ಲವೂ ಪೂರ್ವಪದ (prefix) ಸ್ಥಳಗಳನ್ನು ಗುರುತಿಸುವ ಗುಣವಾಚಕಗಳಾಗಿವೆ. ಈ ಕ್ರಮದಂತೆ ಮರಳಕೋಡಿ ಬಳಿಯ ದೇವಾಲಯವನ್ನು 'ಮರಳಕೋಡಿ' ಎಂಬ ಪೂರ್ವಪದವನ್ನು ಬಳಸಿ ಗುರುತಿಸಲಾಗಿದೆ.

ಶಾಸನ ದೊರೆತ ಸ್ಥಳವು ತುಂಗಭದ್ರಾ ನದಿಯ ಬಲದಂಡೆಯ ಮೇಲೆ ಸುಮಾರು 200 ಮೀಟರ್ ದೂರದಲ್ಲಿದೆ. ತುಂಗಭದ್ರಾ ನದಿಯು ಪಶ್ಚಿಮದಿಂದ ಪೂರ್ವ ಭಾಗಕ್ಕೆ ಹರಿಯುತ್ತಾ ಎಡಭಾಗಕ್ಕೆ ತಿರುವನ್ನು ಪಡೆಯುತ್ತದೆ. ಶಾಸನವಿರುವ ಭಾಗದಲ್ಲಿ ನೈಸರ್ಗಿಕ ಬಂಡೆಗಲ್ಲುಗಳಿರುವ ಬೆಟ್ಟಗಳಿವೆ. ಇದರ ಉತ್ತರ ಭಾಗದಲ್ಲಿ ನದಿಯ ಎಡಭಾಗದಲ್ಲಿಯೂ ಇಂತಹ ಬೆಟ್ಟಗಳ ಸಾಲುಗಳು ಇವೆ ಹಾಗೂ ಆನೆಗೊಂದಿ ಗ್ರಾಮವಿದೆ. ತಳವಾರಘಟ್ಟದಿಂದ ಆನೆಗೊಂದಿಗೆ ಈ ಸ್ಥಳದಿಂದಲೇ ನದಿಯನ್ನು ದಾಟಬೇಕು. ಇಲ್ಲಿಂದ ಪೂರ್ವಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿ ಪಶ್ಚಿಮ ಭಾಗದಲ್ಲಿ ವಿಠ್ಠಲ ದೇವಾಲಯವಿದೆ. ಈ ದೇವಾಲಯದ ಹಿಂಬದಿಯಲ್ಲಿ ನದಿಯು ಉತ್ತರಾಭಿಮುಖವಾಗಿ ಹರಿದು ನಂತರ ಅನೇಕ ತಿರುವುಗಳನ್ನು ಪಡೆದುಕೊಂಡು ತಳವಾರಘಟ್ಟದ ಭಾಗಕ್ಕೆ ಬಂದು ಅಲ್ಲಿಯೂ ಕಡಿದಾದ ತಿರುವನ್ನು ಪಡೆಯುತ್ತದೆ. ಸಾಮಾನ್ಯವಾಗಿ ನದಿಯು ತಿರುವನ್ನು ಪಡೆದಾಗ ವೇಗವನ್ನು ಪಡೆಯುತ್ತದೆ. ತುಂಗಭದ್ರಾ ನದಿಯಲ್ಲಿ ಪ್ರವಾಹ ಬಂದಾಗ ನದಿಯು ವೇಗವಾಗಿ ಹರಿದು ದಡದ ಭಾಗಗಳನ್ನು ಆವರಿಸುತ್ತದೆ. ಆ ಭಾಗಗಳನ್ನು ಪ್ರವಾಹ ಬಯಲು (flood plain) ಎಂದು ಗುರುತಿಸಲಾಗುತ್ತದೆ. ಪ್ರವಾಹದ ನಂತರ ಅಂದರೆ ನೀರು ಇಳಿಮುಖವಾದಾಗ, ಪ್ರವಾಹದ ನೀರಿನಲ್ಲಿ ಬಂದಂತಹ ಮರಳು, ಮಣ್ಣು ಇತರೆ ವಸ್ತುಗಳು ಈ flood plainಗಳಲ್ಲಿ

ಸಂಗ್ರಹಗೊಳ್ಳುತ್ತದೆ. ಭಾರವಾದ ಮಣ್ಣು ಮತ್ತು ಮರಳು ಶೇಖರಗೊಳ್ಳುವುದು ಸಾಮಾನ್ಯ. ಇಂತಹ ಭಾಗಗಳನ್ನು ಜನಸಾಮಾನ್ಯರು ಮರಳಕೋಡಿ ಎಂದು ಕರೆಯುತ್ತಾರೆ. ತಳವಾರಘಟ್ಟದ ಬಳಿಯ ತುಂಗಭದ್ರಾ ನದಿಯ ತೀರದಲ್ಲಿ ಇಂದಿಗೂ ಮರಳಕೋಡಿ ಅಥವಾ ಮರಳ ಸಂಗ್ರಹವನ್ನು ಕಾಣಬಹುದು. ಈ ಭಾಗವು ಸಮತಟ್ಟಾಗಿದ್ದು ಪ್ರವಾಹ ಬಂದಾಗ ಹೆಚ್ಚುವರಿ ನೀರು ಈ ಭಾಗದಲ್ಲಿ ಹರಿಯುತ್ತದೆ. ಪ್ರವಾಹ ನಂತರ ಇಲ್ಲಿ ಸಾಕಷ್ಟು ಮರಳು ಸಂಗ್ರಹವಾಗುತ್ತದೆ. ಈ ಮರಳಕೋಡಿಯು ಸುಮಾರು ಒಂದು ಕಿ.ಮೀ. ದೂರದವರೆಗೆ ಪೂರ್ವಾಭಿಮುಖವಾಗಿ ವ್ಯಾಪಿಸಿರುವುದನ್ನು ಕಾಣಬಹುದು. ಇಂದಿಗೂ ತಳವಾರಘಟ್ಟದಿಂದ ವೆಂಕಟಾಪುರದವರೆಗೆ ನದಿಯಲ್ಲಿ ಮತ್ತು ಅದರ ದಡದ ಭಾಗದಲ್ಲಿ ಮರಳನ್ನು ಜನರು ಸಂಗ್ರಹಿಸಿ ವಿವಿಧ ಉದ್ದೇಶಗಳಿಗೆ ಬಳಸಿಕೊಳ್ಳುತ್ತಾರೆ.

ಪ್ರಸ್ತುತ ಶಾಸನವು ಹಂಪಿ ಪರಿಸರದ ಸಸ್ಯವರ್ಗದ ಬಗೆಗೆ ಮಾಹಿತಿಯನ್ನು ನೀಡುವುದರೊಂದಿಗೆ ನಿರ್ದಿಷ್ಟ ಸ್ಥಳ ನಿರ್ದೇಶನವನ್ನು ನೀಡುತ್ತದೆ. ನದಿಯ ಹರಿವಿನ ಬಗೆಗೆ ಮತ್ತು ಭೂಮೇಲ್ಮೈ ಲಕ್ಷಣಗಳನ್ನು ದಾಖಲಿಸಿದೆ. ಪ್ರಾಕ್ತನ ಶಾಸ್ತ್ರದ ಅಧ್ಯಯನದಿಂದ ಸಹ ಈ ಶಾಸನವು ಮಹತ್ವದ್ದಾಗಿದೆ.

ಅಡಿಟಿಪ್ಪಣಿಗಳು

1. ಮಂಜುನಾಥಯ್ಯ ಟಿ.ಎಂ., 'ಹಂಪೆಯ ಪರಿಸರದಲ್ಲಿ ನವಶೋಧಿತ ಶಾಸನಗಳು', *ವಿಜಯನಗರ ಅಧ್ಯಯನ*, ಸಂ. 6, ಪು. 126–141, 2001; ಡಿ.ವಿ. ಪರಮಶಿವಮೂರ್ತಿ (ಸಂ.), *ಕೃಷ್ಣದೇವರಾಯನ ಶಾಸನಗಳು*, ಸಂ. 1 (ಕನ್ನಡ–ಸಂಸ್ಕೃತ ಶಾಸನಗಳು), ಸಂ. 21.
2. ವಾಸುದೇವನ್ ಸಿ.ಎಸ್, 'ಹಸಿರುವಾಣಿ: ಹಂಪಿ ಪರಿಸರದ ಒಂದು ವಿಶಿಷ್ಟ ತೆರಿಗೆ', *ವಿಜಯನಗರ ಅಧ್ಯಯನ*, ಸಂ. 10, ಪು. 242–250, 2005.
3. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* 3 (ಹಂಪಿ ಶಾಸನ) (ಇನ್ನು ಮುಂದೆ ಕವಿಶಾ) ಸಂ. 74; ಎಆರ್ 1889, ಸಂ. 26, *ಸೌಥ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್* (ಇನ್ನು ಮುಂದೆ ಎಸ್‌ಐಐ) ಸಂ. IV ಸಂ. 255 ಮತ್ತು *ವಿಜಯನಗರ ಶಾಸನಗಳು* (ಇನ್ನು ಮುಂದೆ ವಿಶಾ) ಸಂ. 228.
4. *ಕವಿಶಾ* 3, ಸಂ. 132; ಎಆರ್ 1904; ಸಂ. 16; *ಎಸ್‌ಐಐ;* ಸಂ. XVII, ಸಂ. 17 ಮತ್ತು ವಿಶಾ ಸಂ. 257.
5. ಸಂ. 324; ಎಆರ್ 1922, ಸಂ. 695; ಎಸ್‌ಐಐ, ಸಂ. IX ಭಾಗ II , ಸಂ. 595 ಮತ್ತು ವಿಶಾ ಸಂ. 465.
6. ಅದೇ, ಸಂ. 183; ಎಆರ್ 1889, ಸಂ. 46; *ಎಸ್‌ಐಐ* ಸಂ.IV ಸಂ. 275 ಮತ್ತು ವಿಶಾ ಸಂ. 177; ಅದೇ ಸಂ. 185; ಎಆರ್ 1904, ಸಂ. 11; *ಎಸ್‌ಐಐ* ಸಂ. IX, ಭಾಗ II, ಸಂ. 678; ಸಂ. XVII ಸಂ. 12 ಮತ್ತು *ವಿಶಾ* 183.
7. ಅದೇ ಸಂ. 187; ಎಆರ್ 1904, ಸಂ. 13; *ಎಸ್‌ಐಐ* ಸಂ. IX, ಭಾಗ II, ಸಂ. 654; ಸಂ. XVII, ಸಂ. 15 ಮತ್ತು *ವಿಶಾ* 185
8. ಅದೇ, ಸಂ. 183; ಎಆರ್ 1889, ಸಂ. 46; *ಎಸ್‌ಐಐ* ಸಂ. IV, ಸಂ. 275; ಮತ್ತು *ವಿಶಾ* ಸಂ. 177.
9. ಸದಾನಂದ ಕನವಳ್ಳಿ (ಅನು) ರಾಬರ್ಟ್ ಸಿವೆಲ್ (ಮೂಲ), *ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ*, ಪು. 263–264, ಮತ್ತು 266; ಪ್ರಕಾಶ್ ಎಂ.ಪಿ., *ಡೊಮಿಂಗೊ ಪಯಾಸ್ ಕಂಡ ವಿಜಯನಗರ*, ಮಂಟಪಮಾಲೆ, ಸಂ. 59, ಪು. 5 ಸೂರ್ಯನಾರಾಯಣರಾವ್, ಬಿ., *ಎ ಹಿಸ್ಟರಿ ಆಫ್ ವಿಜಯನಗರ, ದಿ ನೆವರ್ ಟು ಬಿ ಫರ್‌ಗಾಟನ್ ಎಂಪೈರ್*, ಪು. 240.
10. ಸದಾನಂದ ಕನವಳ್ಳಿ (ಅನು), *ಪೂರ್ವೋಕ್ತ*, ಪು. 401.
11. ಅದೇ, ಪು. 275; ಸೂರ್ಯನಾರಾಯಣರಾವ್, ಬಿ. *ಪೂರ್ವೋಕ್ತ*, ಪು. 13.
12. ಮಂಜುನಾಥ ಬೇವಿನಕಟ್ಟಿ, 'ಮೌಖಿಕ ಸಾಹಿತ್ಯ ಹಾಗು ಸಾಂಸ್ಕೃತಿಕ ನೆಲೆಗಳು', ಮೈಲಾರ. ಮಹದೇವ ಸಿ. (ಸಂ.), ಪು. 5–6, 2012.
13. ದೇವರಕೊಂಡಾರೆಡ್ಡಿ, 'ಶಾಸನಗಳು', ಮೈಲಾರ. ಮಹದೇವ ಸಿ. (ಸಂ.), ಪು. 28–32, 2012.

14. ದೇವರಾಜ್ ಡಿ.ವಿ. ಮತ್ತು ಪಾಟೀಲ್ ಸಿ.ಎಸ್. (ಸಂ.) *ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್* 1984–87, ಸಂ. 105, ಪು. 49–50.
15. ಕವಿಶಾ 3, ಸಂ. 88.
16. ಅದೇ, ಸಂ. 89.
17. ಕವಿಶಾ, I, ಹೊಸಪೇಟೆ ಸಂ. 32; ದೇವರಕೊಂಡಾರೆಡ್ಡಿ, 'ಶಾಸನಗಳು', ಮೈಲಾರ, ಮಹದೇವ ಸಿ. (ಸಂ.), ಪು. 28–32, 2012.
18 ಅದೇ, ಸಂ. 116.
19. ಅದೇ, ಸಂ. 118.
20. ಅದೇ, ಸಂ. 157.

ಶಾಸನ ಪಾಠ

1. ಶುಭಮಸ್ತು ಅಂಗಿರಸ ಸಂವತ್ಸರದ
2. ಪಾಲುಗುಣ ಬ 7 ಶ ಲು ಕೃಷ್ಣರಾಯ
3. ರಯನ ಪಟದಲಿ ತಿಂಮಪಯ್ಯನ ಪದಾನಿಕೆ
4. ಯಲಿ ನಾಗಬೋವನ ಮಗ ಹೊಂನೆ ಬೋ
5. ವನು ಮರಳಕೋಡಿ ಮುಲಾರದೇಉರಿಗೆ
6. ವೆಚ್ಚ ಹಿರಿಯರ ಪ್ರಕಾರ ಕೋಟೆಯಿಂದ ಸಸಿ
7. ವಮು ಪ್ರ ಗ 600 ಅಕ್ಷರದಲು ಆಱು
8. ನೂರು ಹೊಂನು ಸಸಿಯ ಬೆಳೆಸಿದವರಿಗೆ
9. ಕಾಲುವೆಂ ಸೆವಸಿ ಹೊಂನಯಗೆ ಸಾ
10. ಲು 1 ಪಾಲು ಅದೇ ಸಸಿಯ ಬೆಳಸು
11. ವಗೆ 200 ಸೋಚಣ್ಣನ ಉದಯ ಬಿ
12. ರೂಪಲು ಚೆಂನಬಸಮು
13. ಅರಮನೆ
14. ಯ ಅರ್ಪಿಸಲಾ
15. ಯಿ ಪೆಂಮಲು ಅಡಿ
16. ಗುಳಲುಳದರು ಬೆಜು
17. ದ್ದಿಲಿನ ಮೆದರೆಣವಾರಿಸಿದವರೂ

34

ಹಂಪಿ ವಿಠಲ ದೇವಾಲಯದಲ್ಲಿ ಅಳತೆ ಪಟ್ಟಿ

ಡಾ॥ ಜಗದೀಶ

ದೇವಾಲಯದ ವಿನ್ಯಾಸವನ್ನು ರೂಪಿಸುವ ವಾಸ್ತುಶಿಲ್ಪಿಯು ನಿರ್ದಿಷ್ಠವಾದ ಅಳತೆಯನ್ನು ಅನುಸರಿಸಬೇಕು. ಮೂಲ ಅಳತೆಯನ್ನು ಮಾನಾಂಗುಲ ಅಥವಾ ಅಂಗುಲ ಎಂದು ಕರೆಯುತ್ತಾರೆ. ಈ ಅಳತೆಯು ಸಾಮಾನ್ಯವಾಗಿ ಮಧ್ಯದ ಬೆರಳಿನ ಮಧ್ಯದ ಭಾಗ ಆಗಿರುತ್ತದೆ. 24 ಅಂಗುಲ ಅಳತೆಯ ಪಟ್ಟಿಯನ್ನು ಸಾಮಾನ್ಯವಾಗಿ ಗಜ ಎಂದು ಹೇಳುತ್ತಾರೆ. 24 ಅಂಗುಲ ಅಳತೆ ಪಟ್ಟಿಯನ್ನು ಹಸ್ತ, ಕಿಷ್ಕು ಹಸ್ತ, ದಂಡ ಅಥವಾ ಅರತ್ನಿ ಎಂದೂ ಕರೆಯುತ್ತಾರೆ. 25, 26 ಮತ್ತು 27 ಅಂಗುಲಗಳ ಅಳತೆಯನ್ನು ಕ್ರಮವಾಗಿ ಧನುರ್ ಮುಷ್ಠಿ, ಪ್ರಜಾಪತಿಯ ಹಸ್ತ ಮತ್ತು ಧನುರ್ಗಾಹಕ ಎಂದು ಹೇಳುತ್ತಾರೆ. ಪ್ರತಿಯೊಂದು ಅಳತೆ ಪಟ್ಟಿಯನ್ನು ಬೇರೆ ಬೇರೆ ರೀತಿಯ ಕಾರ್ಯಗಳಿಗೆ ಬಳಸಲಾಗುತ್ತದೆ. ಅಂಗುಲದಿಂದ ಪಡೆಯುವ ವಿವಿಧ ಅಳತೆಗಳ ಪರಿವರ್ತನಾ ಪಟ್ಟಿ ಹೀಗಿದೆ;

2 ಅಂಗುಲ	=	1 ಗೋಲಕ/ಕಲಾ
3 ಅಂಗುಲ	=	1 ಅಧ್ಯರ್ಧಕಾ/ಪರ್ವ
4 ಅಂಗುಲ	=	1 ಭಾಗ
3 ಭಾಗ	=	1 ವಿತಸ್ಥಿ
2 ವಿತಸ್ಥಿ	=	1 ಅರತ್ನಿ/ಹಸ್ತ/ಗಜ

ಕರ್ನಾಟಕದಲ್ಲಿ 24 ಅಂಗುಲಗಳ ಅಳತೆ ಪಟ್ಟಿಯ ಬಳಕೆಯನ್ನು ಸರಿಸುಮಾರು 1000 ವರ್ಷಗಳ ಹಿಂದಿನಿಂದ ಗುರುತಿಸಬಹುದು. ಶ್ರವಣಬೆಳಗೊಳದ ಗೊಮ್ಮಟ ಮೂರ್ತಿಯನ್ನು ಕ್ರಿ.ಶ. 981ರಲ್ಲಿ ಕಡೆಯಲಾಗಿದೆ. ಈ ವಿಗ್ರಹದ ಪಾದದ ಹತ್ತಿರ 24 ಅಂಗುಲ ಅಳತೆ ಪಟ್ಟಿಯಿದೆ. ಕ್ರಿ.ಶ. 1117ರಲ್ಲಿ ನಿರ್ಮಿಸಲಾದ ಬೇಲೂರಿನ ಚನ್ನಕೇಶವ ದೇವಾಲಯದ ಅಧಿಷ್ಠಾನ ಪಟ್ಟಿಕೆಯಲ್ಲಿ ಅಳತೆ ಪಟ್ಟಿಯಿದೆ. ಇಲ್ಲಿರುವ 24 ಅಂಗುಲ ಅಳತೆ ಪಟ್ಟಿಯನ್ನು 'ದೇವಹಸ್ತದ ಖಂಡೇಯ' ಎಂಬ ನಾಗರಿ ಅಕ್ಷರಗಳ ಕೆಳಗೆ ನಮೂದಿಸಿದೆ. ಕೆಳದಿ ರಾಮೇಶ್ವರ ದೇವಾಲಯ ಸಂಕೀರ್ಣದ ವೀರಭದ್ರ ದೇವಾಲಯದ ಹಿಂಭಾಗದ ಭಿತ್ತಿಯಲ್ಲಿ 24 ಅಂಗುಲ ಅಳತೆ ಪಟ್ಟಿಯಿದೆ. ಈ ದೇವಾಲಯವನ್ನು ಕ್ರಿ.ಶ. 1672–1697ರ ಅವಧಿಯಲ್ಲಿ ರಾಣಿ ಚನ್ನಮ್ಮಾಜಿಯ ಕಾಲದಲ್ಲಿ ನಿರ್ಮಾಣವಾಗಿರಬೇಕೆಂದು ತಿಳಿಯಲಾಗಿದೆ. ಅಳತೆ ಪಟ್ಟಿಯ ಜೊತೆಗೆ ತೂಕದ ಗುಂಡು ಮತ್ತು ಮೂಲೆ ಮಟ್ಟವನ್ನು ಸಹ ಚಿತ್ರಿಸಲಾಗಿದೆ. ಭಾಗಮಂಡಲದ ಶ್ರೀ ಭಗಂಡೇಶ್ವರ

ದೇವಾಲಯದ ಹಿಂಭಾಗದ ಅದಿಷ್ಠಾನ ಭಾಗದಲ್ಲಿ 24 ಅಂಗುಲ ಅಳತೆ ಪಟ್ಟಿಯಿದೆ. ಈ ದೇವಾಲಯ ನಿರ್ಮಾಣದ ಕಾಲ ಕ್ರಿ.ಶ. 1806 ಎಂದು ತಿಳಿಯಲಾಗಿದೆ. ಮೇಲಿನ ಉದಾಹರಣೆಗಳಿಂದ 24 ಅಂಗುಲ ಅಳತೆ ಪಟ್ಟಿಯನ್ನು ದೇವಾಲಯ ನಿರ್ಮಾಣ, ವಿಗ್ರಹಗಳ ಕೆತ್ತನೆಗೆ ಬಳಸಲಾಗಿತ್ತೆಂದು ತಿಳಿಯಬಹುದು. ಅಳತೆ ಪಟ್ಟಿಯ ಬಳಕೆ ಕುರಿತು 1000 ವರ್ಷಗಳ ಪ್ರಮಾಣೀಕೃತ ದಾಖಲೆಗಳಿವೆ.

ಹಂಪಿಯ ವಿಠಲ ದೇವಾಲಯ ಸಂಕೀರ್ಣದ ಮುಖ್ಯ ದೇವಾಲಯದ ತೆರದ ಮಹಾಮಂಟಪದ ಅಧಿಷ್ಠಾನದ ಈಶಾನ್ಯ ಭಾಗದಲ್ಲಿ ಅಳತೆಯ ಪಟ್ಟಿಯನ್ನು ಕೆತ್ತಲಾಗಿದೆ. ಇಲ್ಲಿ ಬಳಸಲಾಗಿರುವ ಅಳತೆ ಪಟ್ಟಿಯ ಒಂದು ಪ್ರಮಾಣದ (ಅಂಗುಲದ) ಅಳತೆಯು 7.00 ಸೆಂ.ಮೀ ಇದೆ. ಈ ಗುರುತುಗಳು ಕ್ರಮವಾಗಿ ಎಡದಿಂದ ಬಲಕ್ಕೆ 7.00, 14.00, 52.00, 59.00, 66.50, 95.00, 102.00, 109.00 ಮತ್ತು 140.00 ಸೆಂ.ಮೀ ದೂರದಲ್ಲಿವೆ. ಇವು ಕ್ರಮವಾಗಿ 1, 2, 7.5, 8.5, 9.5, 13.5, 14.5, 15.5 ಮತ್ತು 20 ಅಂಗುಲ ಅಳತೆಯದಾಗಿರುತ್ತದೆ.

ಕ್ರಿ.ಶ 1427–28ರ ಅವಧಿಯಲ್ಲಿ ನಾರಾಯಣ ನಂಬೂದರಿಗಳು ರಚಿಸಿರುವ ತಂತ್ರ ಸಮುಚ್ಚಯ ಗ್ರಂಥದಲ್ಲಿ ದೇವಾಲಯ ಶಾಸ್ತ್ರವನ್ನು ಕುರಿತು ವಿವರವಿದೆ. ಅವರು ಆಕರ ಸಾಮಗ್ರಿಯಾಗಿ *ಕಾರ್ಶಯಪೀಯಂ, ಮಾಯಾಮತ, ಪ್ರಪಂಚಸಾರ, ಪ್ರಯೋಗಮಂಜರಿ, ಈಶಾನಶಿವಗುರುದೇವ ಪದ್ಧತಿ, ಕ್ರಿಯಾಸಾರ, ವಿಷ್ಣುಸಂಹಿತಾ, ಮುರಾರಿಬಂಧನ, ಸ್ಕಂದಸದ್ಭಾವ, ಪಾಶುಪತ* ಮೊದಲಾದ ಗ್ರಂಥಗಳನ್ನು ಬಳಸಿಕೊಂಡಿದ್ದಾರೆ. ಅವರು ಅಧಿಷ್ಠಾನ ರಚನಾ ಕ್ರಮದಲ್ಲಿ ಇಷ್ಟವಾದ (ಕಲ್ಪಿತವಾದ) ಅಧಿಷ್ಠಾನದ ಎತ್ತರವನ್ನು ಆಯ್ದುಕೊಂಡು, ನಾಲ್ಕರಿಂದ ಆರಂಭಿಸಿ ಒಂಭತ್ತು ಭಾಗಗಳಾಗಿ ವಿಂಗಡಿಸಿಕೊಂಡು ವಿವಿಧ ಅಂಗಗಳನ್ನು ಮಾಡಬೇಕೆಂದು ಸೂಚಿಸುತ್ತಾರೆ.

ವಿಠಲ ದೇವಾಲಯದಲ್ಲಿರುವ ಅಳತೆ ಪಟ್ಟಿಯಲ್ಲಿ ಸೂಚಿತವಾಗಿರುವ ಅಂಗುಲಗಳ ಅಳತೆಯನ್ನು ಗರ್ಭಗೃಹ ಹಾಗೂ ಮಂಟಪದ ಅಧಿಷ್ಠಾನದ ಅಳತೆಗೆ ಹೋಲಿಸಿ ನೋಡಬಹುದು. ಗರ್ಭಗೃಹದ ಅಧಿಷ್ಠಾನವು ಐದು ಅಂಗಗಳನ್ನು ಹೊಂದಿದ್ದು ತಳದಿಂದ ಮೇಲಕ್ಕೆ ನೋಡಿದಾಗ ಕ್ರಮವಾಗಿ 5, 3, 3, 5, 5 ಅಂಗುಲಗಳ ಅಂಗಗಳಿವೆ. ಅಧಿಷ್ಠಾನದ ಒಟ್ಟು ಎತ್ತರ 21 ಅಂಗುಲ ಆಗುತ್ತದೆ. ಇದೇ ಮಾದರಿಯಲ್ಲಿ ಮಂಟಪದ ಅಧಿಷ್ಠಾನವು ಮೂರು ಅಂಗಗಳನ್ನು ಹೊಂದಿದ್ದು ಪ್ರತಿ ಅಂಗವು 6 ಅಂಗುಲ ಎತ್ತರವಿದೆ. ಮಂಟಪದ ಅಧಿಷ್ಠಾನದ ಒಟ್ಟು ಎತ್ತರವು 18 ಅಂಗುಲ ಆಗುತ್ತದೆ. ಪ್ರತಿ ಅಂಗಲವೂ 7 ಸೆಂ.ಮೀ. ಅಳತೆಯದ್ದೆಂದು ಗಣನೆಗೆ ತೆಗೆದುಕೊಂಡಲ್ಲಿ ಗರ್ಭಗೃಹ ಹಾಗೂ ಮಂಟಪದ ಅಧಿಷ್ಠಾನದ ಎತ್ತರಗಳು 148.00 ಮತ್ತು 126.00 ಸೆಂ.ಮೀ. ಆಗಿರಬೇಕಾಗುತ್ತದೆ. ಪ್ರಸ್ತುತ ಗರ್ಭಗೃಹ ಮತ್ತು ಮಂಟಪದ ಅಧಿಷ್ಠಾನದ ಅಳತೆಯು 148.00ಕ್ಕೆ ಬದಲಾಗಿ 150.00 ಹಾಗೂ 120.00 ಕ್ಕೆ ಬದಲಾಗಿ 122.00 ಸೆಂ.ಮೀ. ಎತ್ತರವಿದೆ. ಒಟ್ಟು ಅಧಿಷ್ಠಾನದ ಎತ್ತರದಲ್ಲಿ ಎರಡು ಸೆಂ.ಮೀ. ವ್ಯತ್ಯಾಸ ಕಂಡುಬಂದಿದ್ದು ಇದು ಕಲ್ಲನ್ನು ನಯ ಮಾಡುವಾಗ ಆಗಿರಬಹುದಾದ ವ್ಯತ್ಯಾಸಗಳು ಎಂದು ಭಾವಿಸಬೇಕಾಗುತ್ತದೆ.

35

ವಿಜಯನಗರ ಸಾಮ್ರಾಜ್ಯ ಕುರಿತು ಕನ್ನಡ ಇತಿಹಾಸ ಲೇಖನ ಕಲೆಗೆ ಪಾಂಡುರಂಗದೇಸಾಯಿಯವರ ಕೊಡುಗೆ (ಭಾಗ–2)

ಡಾ. ಬಿ.ಸಿ. ರಾಕೇಶ್

ವಿಜಯನಗರ ಸಮ್ರಾಜ್ಯವು ಸ್ಥಾಪಿತವಾಗಿ ಆರು ನೂರು ವರ್ಷಗಳ ನೆನಪಿಗೆ ವಿಜಯನಗರ ಸ್ಮಾರಕೋತ್ಸವ ಮಂಡಳ: ಧಾರವಾಡದಿಂದ ತನ್ನ ಕಾರ್ಯವನ್ನು ಪ್ರಾರಂಭಿಸಿತು. ಈ ಪ್ರಯತ್ನದ ಪಲವಾಗಿ ಕನ್ನಡ ಲೇಖನಗಳನ್ನು ಒಟ್ಟುಗೂಡಿಸುವ ಕಾರ್ಯವನ್ನು ಇತಿಹಾಸ ಮಂಡಳಿಯವರು ಕ್ರೋಡೀಕರಿಸಿದರು. ಹಾಗಾಗಿ ಹಲವಾರು ಲೇಖನಗಳು ಮತ್ತು ಕೃತಿಗಳು ಕ್ರಿ.ಶ. 1936ರಲ್ಲಿ ಹೊರಬಂದವು. ಈ ಸಂಶೋಧನೆಗಳಿಂದ ವಿಜಯನಗರ ಬಗೆಗೆ ಇದ್ದಂತಹ ಹಲವಾರು ಸಂಶಯಗಳ ನಿವಾರಣೆಗಾಗಿ ಪ್ರಬಂಧಗಳನ್ನು ಪ್ರಕಟಿಸಿದರು. ಈ ವಿಷಯಗಳು ವಿಜಯನಗರದ ಬಗ್ಗೆ ಇರುವ ಹಲವಾರು ವಿಷಯಗಳನ್ನು ತಿಳಿಗೊಳಿಸಿತು. ವಿಜಯನಗರ ಸಾಮ್ರಾಜ್ಯದ ಇತಿಹಾಸ ಸಾಮಗ್ರಿಗಳು ಕಾವ್ಯ ಪುರಾಣ, ಶಿಲಾಶಾಸನ ತಾಮ್ರಪಟ, ವೀರಗಲ್ಲು, ವಿದೇಶಿಯರ ವೃತ್ತಾಂತ ಮತ್ತು ಅಧಿಕಾರಿಗಳು ನಡೆಸಿದ ಪತ್ರವ್ಯವಹಾರಗಳು ಹೇರಳವಾಗಿದ್ದರೂ ಜನರು ಓದಲು ಅನುಕೂಲವಾದ ಇತಿಹಾಸವು ಕ್ರಿ.ಶ. 1936ರವರೆಗೆ ಇದ್ದಿಲ್ಲ. ಈ ಕಾರ್ಯವನ್ನು ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಳದವರು ಮಾಡಿದರು. ಈ ಕಾಲಘಟ್ಟಕ್ಕೆ ಹೊಂದಿಕೊಳ್ಳುವಂತೆ ಕರ್ನಾಟಕದ ಏಕೀಕರಣ ಚಳವಳಿಯ ಅಂಶಗಳನ್ನು ಸ್ಮಾರಕೋತ್ಸವದ ಪ್ರಕಟಣೆಯಲ್ಲಿ ಕಾಣಬಹುದು. ಕರ್ನಾಟಕದ ಇತಿಹಾಸಕ್ಕೆ ಮತ್ತು ಕರ್ನಾಟಕದ ಘತ್ಯ ವೈಭವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಂತಹ ಮತ್ತು ಕರ್ನಾಟಕದ ಹೆಸರಿನಲ್ಲಿ ಒಗ್ಗೂಡುವಂತೆ ಮಾಡುವ ಪ್ರಯತ್ನಗಳು ನಡೆಯುತ್ತ ಇದ್ದಂತಹ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯ ಕುರಿತು ಪಾಂಡುರಂಗ ದೇಸಾಯಿಯವರು ಪ್ರಕಟಿಸಿದ ಲೇಖನಗಳು ಹಲವು ಗೊಂದಲಗಳ ನಿವಾರಣೆ ಮಾಡಿ, ಐತಿಹಾಸಿಕ ದಾಖಲೆಗಳ ಅನಾವರಣಮಾಡಿ, ವಸ್ತುನಿಷ್ಟ ಅಧ್ಯಯನವನ್ನು ಆರಂಭಿಸಿದರು. ವಿಜಯನಗರ ಇತಿಹಾಸ ಲೇಖನ ಕಲೆಗೆ ಸಂಬಂಧಿಸಿದಂತೆ ಈ ಕಾಲ ಘಟ್ಟದಲ್ಲಿ ಹಲವಾರು ವಿಷಯಗಳ ಮೇಲೆ ಬೆಳಕನ್ನು ಚೆಲ್ಲಿದ್ದರಿಂದ ಇತಿಹಾಸ ರಚನೆಗೆ ತೊಡಕಾಗಿದ್ದ ಹಲವಾರು ಅಂಶಗಳ ನಿವಾರಣೆಗೆ ಪ್ರಯತ್ನಿಸಿದ್ದಾರೆ.

ದೇಸಾಯಿ ಪಿ.ಬಿ. ಯವರ ಜೀವನ ಸಾಧನೆಗಳು (ಕ್ರಿ.ಶ. 1910–1974)

ಕರ್ನಾಟಕ ಇತಿಹಾಸ ಸಾಹಿತ್ಯ ಸಂಸ್ಕೃತಿಗಳ ಖ್ಯಾತ ಸಂಶೋಧಕರಾಗಿ ಶಾಸನತಜ್ಞರು, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾರತೀಯ ಇತಿಹಾಸ ಸಂಸ್ಕೃತಿಗಳ ಪ್ರಾಧ್ಯಾಪಕರು ಆಗಿದ್ದರು. ಪಾಂಡುರಂಗ ಭೀಮರಾವ ದೇಸಾಯಿಯವರು ರಾಯಚೂರು ಜಿಲ್ಲೆಯ ಕೊಪ್ಪಳದ ಬಳಿಯ ಕಿನ್ಹಾಲದವರಾದ ಭೀಮರಾವ್ ಮತ್ತು ಭಾಗೀರಥಿಬಾಯಿ ದಂಪತಿಗಳ

ಐದನೆಯ ಪುತ್ರರು. ಕ್ರಿ.ಶ. 1910ರ ಡಿಸೆಂಬರ್ 24ರಂದು ಹೈದರಾಬಾದ್ ಕರ್ನಾಟಕದ ಭಾಗವಾಗಿದ್ದ ರಾಯಚೂರು ಜಿಲ್ಲೆಯಲ್ಲಿ ಜನಿಸಿದರು. ಆಗ ಮರಾಠಿ ಮತ್ತು ಉರ್ದು ಭಾಷೆಗಳು ಪ್ರಬಲವಾಗಿದ್ದವು. ಇವರ ಪ್ರಾಥಮಿಕ ಶಿಕ್ಷಣ ಸೇಡಂನಲ್ಲೂ, ಸೆಕೆಂಡರಿ ಶಿಕ್ಷಣ ಗುಲ್ಬರ್ಗದಲ್ಲಿ ನಡೆಯಿತು. ಮುಂಬಾಯಿ ವಿಶ್ವವಿದ್ಯಾಲಯದ ಎಂಟ್ರೆನ್ಸ್ ಪರೀಕ್ಷೆಯ ಆನಂತರ ಅನಾರೋಗ್ಯದಿಂದಾಗಿ ಆರು ವರ್ಷಗಳ ಕಾಲ ವಿದ್ಯಾಭ್ಯಾಸವನ್ನು ಮುಂದುವರಿಸಲಾಗಲಿಲ್ಲ. 1935ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತದಲ್ಲಿ ಆನರ್ಸ್ ಶ್ರೇಣಿಯ ಪದವಿ ಪಡೆದರು. 1937ರಲ್ಲಿ ಇವರಿಗೆ ಸಂಸ್ಕೃತ ಹಾಗೂ ಕನ್ನಡದಲ್ಲಿ ಎಂ.ಎ. ಪದವಿ ಲಭಿಸಿತು. ಇವರು ಸುಮಾರು 60 ಗ್ರಾಮಗಳಲ್ಲಿ ತಿರುಗಾಡಿ 200ಕ್ಕೂ ಹೆಚ್ಚಿನ ಶಾಸನಗಳನ್ನು ಪ್ರತಿ ಮಾಡಿಕೊಂಡರು. ಎಂ.ಎ. ಪರೀಕ್ಷೆಯಲ್ಲಿ ಇವರ ಅಧ್ಯಯನ ವಿಷಯಗಳಲ್ಲಿ ಲಿಪಿಶಾಸ್ತ್ರವು ಒಂದಾಗಿತ್ತು. 1936ರಲ್ಲಿ ವಿಜಯನಗರದ 6ನೆಯ ಶತಮಾನೋತ್ಸವದ ಸಂದರ್ಭದಲ್ಲಿ ಇವರು ವಿಜಯನಗರ ಸಾಮ್ರಾಜ್ಯ ಎಂಬ ಗ್ರಂಥವೊಂದನ್ನು ಕನ್ನಡದಲ್ಲಿ ಬರೆದರು. 1939ರಲ್ಲಿ ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯ ಶಾಸನ ಶಾಖೆಯಲ್ಲಿ ಸಹಾಯಕ ಸಂಶೋಧಕರಾಗಿ ಕೆಲಸಕ್ಕೆ ಸೇರಿದ ಇವರು 17 ವರ್ಷಗಳ ಕಾಲ ಉದಕಮಂಡಲದಲ್ಲಿದ್ದು ಶಾಸನಶಾಸ್ತ್ರವನ್ನು ಆಳವಾಗಿ ಅಭ್ಯಸಿಸಿ ಅದರಲ್ಲಿ ಸಂಪೂರ್ಣ ಪಾಂಡಿತ್ಯವನ್ನು ಪಡೆದರು. ದಕ್ಷಿಣ ಭಾರತದ ಶಾಸನ ಸಂಪುಟಗಳ ಪೈಕಿ 11ನೆಯ ಸಂಪುಟದ ಮೊದಲನೆಯ ಭಾಗವನ್ನು ಎಸ್. ಲಕ್ಷ್ಮೀನಾರಾಯಣರಾಯರೊಂದಿಗೆ ಹಾಗೂ 15ನೆಯ ಸಂಪುಟವನ್ನು ತಾವೇ ಸಂಪಾದಿಸಿದರು. 1947ರಲ್ಲಿ ಚಂದ್ರವಳ್ಳಿಯಲ್ಲಿ ನಡೆಸಲಾದ ಉತ್ಖನನದಲ್ಲಿ ಇವರು ಭಾಗವಹಿಸಿದರು. ಶಾಸನಗಳಿಗೆ ಸಂಬಂಧಿಸಿದಂತೆ 1956ರಲ್ಲಿ ಇವರ 'ಶಾಸನ ಪರಿಚಯ' ಎಂಬ ಗ್ರಂಥ ಪ್ರಕಟವಾಯಿತು. ಇದಕ್ಕೆ 1959ರಲ್ಲಿ ಆಗಿನ ಮೈಸೂರು ಸರ್ಕಾರದ ಪುರಸ್ಕಾರ ದೊರಕಿತು. ಅಂದಿನ ಹೈದರಾಬಾದ್ ಸರ್ಕಾರಕ್ಕಾಗಿ 'ಎ ಕಾರ್ಪಸ್ ಆಫ್ ಕನ್ನಡ ಇನ್‌ಸ್ಕ್ರಿಪ್ಷನ್ ಇನ್ ಹೈದರಾಬಾದ್' ಎಂಬ ಗ್ರಂಥವನ್ನು ಸಂಪಾದಿಸಿದರು. ಇವರ 'ಜೈನಿಸಂ ಇನ್ ಸೌತ್ ಇಂಡಿಯಾ ಅಂಡ್ ಸಮ್ ಜೈನ ಎಪಿಗ್ರಾಫ್ಸ್' ಎಂಬ ಗ್ರಂಥಕ್ಕೆ 1961ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಡಿ.ಲಿಟ್ ಪದವಿ ನೀಡಿತು. **1957ರಲ್ಲಿ ಅದೇ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿ 1962ರಲ್ಲಿ ಆಯ್ಕೆಯಾದರು.** 1967ರಲ್ಲಿ ಇವರಿಗೆ ಪ್ರಾಧ್ಯಾಪಕ ಹುದ್ದೆ ದೊರಕಿತು. ಶಾಸನಶಾಸ್ತ್ರವನ್ನು ವೈಜ್ಞಾನಿಕವಾಗಿ ವಿದ್ಯಾರ್ಥಿಗಳಿಗೆ ಕಲ್ಪಿಸಿಕೊಡಲು ಶಾಸನಶಾಸ್ತ್ರದ ಡಿಪ್ಲೋಮಾ ಶಿಕ್ಷಣವನ್ನು ಮೊದಲಬಾರಿಗೆ ರೂಪಿಸಿದವರು ಇವರು.

ಇವರ ಸಂಶೋಧನ ಗ್ರಂಥಗಳಲ್ಲಿ ಪ್ರಮುಖವಾದದ್ದು 'ಬಸವೇಶ್ವರ ಅಂಡ್ ಹಿಸ್ ಟೈಮ್ಸ್' ಎಂಬುದು. ಕರ್ನಾಟಕದ ಇತಿಹಾಸವನ್ನು ಹತ್ತು ಸಂಪುಟಗಳಲ್ಲಿ ಪ್ರಕಟಿಸಬೇಕೆಂದು ಯೋಜನೆಗೆ ಅನುಗುಣವಾಗಿ ಇವರು ತಮ್ಮ ಇಬ್ಬರು ಸಹೋದ್ಯೋಗಿಗಳೊಡನೆ 'ಎ ಹಿಸ್ಟರಿ ಆಫ್ ಕರ್ನಾಟಕ' ಎಂಬ ಗ್ರಂಥವನ್ನು ಪ್ರಕಟಿಸಿದರು. ಮಿಂಚಿದ ಮಹಿಳೆಯರು, ಕುಂತಲೇಶ್ವರ, ಮುದಗಜಮಲ್ಲ ಕರ್ನಾಟಕದ ಕಲಚೂರಿಗಳು, ಕನ್ನಡ ನಾಡಿನ ಶಾಸನಗಳು – ಇವು ದೇಸಾಯಿಯವರ ಕನ್ನಡ ಗ್ರಂಥಗಳ ಪೈಕಿ ಹಲವು. ಶಿವಾಜಿಯ ಜೀವನಕ್ಕೆ ಸಂಬಂಧಿಸಿದ ಮೂಲ ಸಾಮಗ್ರಿಗಳನ್ನೊಳಗೊಂಡ ಶಿವಚರಿತ್ರ ವೃತ್ತ ಸಂಗ್ರಹ ಎಂಬ ಮರಾಠಿ ಗ್ರಂಥವನ್ನು ಇವರು ಬರೆದಿದ್ದಾರೆ. ಇವರು ಬರೆದು ಪ್ರಕಟಿಸಿದ ಇಂಗ್ಲೀಷ್ ಲೇಖನಗಳ ಸಂಖ್ಯೆ 105, ಕನ್ನಡದವು 230, ಮರಾಠಿಯವು 40 – ಒಟ್ಟಾರೆಯಾಗಿ ಕರ್ನಾಟಕದ ಇತಿಹಾಸ ಸಾಹಿತ್ಯ ಸಂಸ್ಕೃತಿಗಳನ್ನು ಕುರಿತು ಆಳವಾಗಿ ಅಭ್ಯಾಸ ಮಾಡಿ ಸಂಶೋಧನೆಯಲ್ಲಿ ನಿರತರಾಗಿದ್ದ ದೇಸಾಯಿಯವರು 1971ರಲ್ಲಿ ನಿವೃತ್ತರಾದ ಮೇಲೆ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಪ್ರಾಧ್ಯಾಪಕರಾಗಿದ್ದರು. 1973ರಲ್ಲಿ ನಡೆದ ಅಖಿಲ ಭಾರತ ಇತಿಹಾಸ ಸಮ್ಮೇಳನದಲ್ಲಿ ಶಾಸನಶಾಸ್ತ್ರ ವಿಭಾಗದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಇವರು 1975ರ ಮಾರ್ಚ್ 5ರಂದು ನಿಧನ ಹೊಂದಿದರು.

ಈ ಮೊದಲಿನ ಲೇಖನದಲ್ಲಿ ಆರಂಭದಿಂದ 10ನೇಯ ವಿಲಾಸದಲ್ಲಿ ಬಂದಂಥ ವಿಷಯಗಳನ್ನು ಕುರಿತು ನೋಡಲಾಗಿದೆ. ಈ ಮಾಲಿಕೆಯಲ್ಲಿ ಹನ್ನೊಂದನೆಯ ವಿಲಾಸದಿಂದ ಮುಂದುವರಿಸಲಾಗಿದೆ. ತುಳುವ ಆಳ್ವಿಕೆಯಿಂದ ಈ ವಿಲಾಸವು ಪ್ರಾರಂಭವಾಗುತ್ತದೆ. ಈ ಅಧ್ಯಯನದಲ್ಲಿ ನರಸನಾಯಕನು ಸಾಮ್ರಾಜ್ಯವನ್ನು ಆಕ್ರಮಿಸಿದ್ದನ್ನು ಕುರಿತು

ವಿವರಿಸಿದ್ದಾರೆ. ಸಾಮ್ರಾಜ್ಯದ ಒಡೆಯನಲ್ಲಿ ದೌರ್ಬಲ್ಯವೂ ಅಪಾತ್ರವೂ ಕಂಡುಬಂದರೆ ಅವನನ್ನು ಆಚೆಗೆ ನೂಕಿ ಸೇವಕನಾದವನು ಸ್ವಾಮಿತ್ವವನ್ನು ಸಂಪಾದಿಸಬಹುದು ಎಂಬ ಈ ಮೇಲ್ಪಂಕ್ತಿಯು ಮಹತ್ವಾಕಾಂಕ್ಷಿಗಳಿಗೆ ಸ್ಫೂರ್ತಿಯನ್ನೀಯುವ ಆದರ್ಶ ನೀತಿಗಾಗಿ ಪರಿಣಮಿಸಿತು. ಸಾಳುವ ನರಸಿಂಹನ ಕಡುಗಲಿ ದಂಡನಾಯಕನಾದ ಈಶ್ವರ ನಾಯಕನು, ಇವನ ತಂದೆಯಾದ ತಿಮ್ಮನಾಯಕನೆ ಈ ಮನೆತನದ ಮೂಲಪುರುಷರು. ಈ ರೀತಿಯಾಗಿ ನರಸನಾಯಕನ ಅಧಿಕಾರ ಗ್ರಹಣ ಮತ್ತು ಆತನ ಪೂರ್ವಜರ ಬಗ್ಗೆ ವಿವರಣೆಯನ್ನು ನೀಡಲಾಗಿದೆ. ನರಸನಾಯಕನು ಸ್ವತಂತ್ರವಾಗಿ ದಂಡಯಾತ್ರೆಯನ್ನು ಮಾಡಿ ಅನೇಕ ಪ್ರದೇಶಗಳನ್ನು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡನು. ಈತನ ಆಸ್ಥಾನದಲ್ಲಿ ಅನೇಕ ಕವಿಗಳು ಆಶ್ರಯವನ್ನು ಪಡೆದಿದ್ದರು. ಗಜಪತಿರಾಯೇಭಗಂಡ ಭೇರುಂಡ ದುಷ್ಟರಾಣ್ ಮೃಗಶಾರ್ದೂಲ ಎಂಬ ಬಿರುದನ್ನು ಧರಿಸಿದ್ದನು. ಈತನ ಹೆಂಡತಿಯರು ಮತ್ತು ಮಕ್ಕಳ ವಿವರಣೆಯನ್ನು ನೀಡಲಾಗಿದೆ. ನಂತರದಲ್ಲಿ ವೀರನರಸಿಂಹ 1506ರಲ್ಲಿ ಸಿಂಹಾಸನ ಗ್ರಹಣವನ್ನು ಮಾಡಿರುವ ವಿವರಣೆಯನ್ನು ನೀಡಲಾಗಿದೆ. ತಂದೆಯಂತೆ ವೀರನರಸಿಂಹನು ಸಮರ್ಥನಾಗಿರಲಿಲ್ಲ. ಆದರೂ ಭುಜಬಲರಾಯನೆಂಬ ಬಿರುದು ಧರಿಸಿ ಸಾಮ್ರಾಜ್ಯದ ಅಧಿಪತಿಯಾಗಿ ರಾಜ್ಯವಾಳಲಿಕ್ಕೆ ಪ್ರಾರಂಭಿಸಿದನು. ಇದರಿಂದ ರಾಜ್ಯದಲ್ಲಿ ಅಜಾಗರೂಕತೆ ತಾಂಡವವಾಡತೊಡಗಿತು. ಅದನ್ನು ಸರಿಪಡಿಸುವಲ್ಲಿ ತನ್ನ ಸಮಯವನ್ನೆಲ್ಲಾ ಅದಕ್ಕಾಗಿಯೇ ಮೀಸಲು ಇಡಬೇಕಾಯಿತು. ಇಂತಹ ಸ್ಥಿತಿಯಲ್ಲಿ ತನ್ನ ಎಂಟು ವರ್ಷದ ಬಾಲಕನಿಗೆ ಪಟ್ಟ ದೊರೆಯಬೇಕು ಎಂಬ ಉದ್ದೇಶವನ್ನು ಮಂತ್ರಿಯಾದ ಸಾಳುತಿಮ್ಮನಲ್ಲಿಯ ಸಮಾಲೋಚನೆಯ ವಿಚಾರವನ್ನು ಕುರಿತು ವಿವರಣೆಯನ್ನು ನೀಡಲಾಗಿದೆ.

ಹನ್ನೆರಡನೆಯ ವಿಲಾಸದಲ್ಲಿ ಮಹಾರಾಜ ಶ್ರೀ ಕೃಷ್ಣ ದೇವರಾಯನ ಕ್ರಿ.ಶ. 1509 ರಿಂದ ಕ್ರಿ.ಶ. 1530ರವರೆಗಿನ ವಿಷಯಗಳನ್ನು ಚರ್ಚಿಸಲಾಗಿದೆ. ಕೃಷ್ಣದೇವರಾಯನ ಹಿರಿಮೆ ಮತ್ತು ಕರ್ನಾಟಕದ ವೈಭವವನ್ನು ವಿವರಿಸುತ್ತಾ ಕೃಷ್ಣದೇವರಾಯ ಮತ್ತು ಮಹಾಮಂತ್ರಿಯ ಹೊಂದಾಣಿಕೆ, ರಾಜ್ಯದ ಪರಿಸ್ಥಿತಿ, ಸೈನ್ಯದ ಸಂವರ್ಧನೆ, ಲಗ್ನದ ಕರ ಮತ್ತು ತಪ್ಪುದಂಡರದ್ದು ಮಾಡಿದ ವಿಷಯವನ್ನು ವಿವರಿಸಿದ್ದಾರೆ. ಸಾಮ್ರಾಜ್ಯದ ವಿಸ್ತಾರಕ್ಕೆ ತೆಗೆದುಕೊಂಡ ಕ್ರಮಗಳು, ಪೋರ್ಚುಗೀಸರೊಂದಿಗಿನ ಸಂಬಂಧ, ಗೋವೆಯೊಂದಿಗೆ ವಿಜಯನಗರ ಸಂಬಂಧ, ಕುದುರೆಯ ಸಂಗ್ರಹ, ಒಡಂಬಡಿಕೆಯ ವಿಚಾರಗಳನ್ನು ನೋಡಲಾಗಿದೆ. ಮುಂದುವರೆದು ಉಮ್ಮತ್ತೂರಿನ ಮಲ್ಲರಾಯ ಒಡೆಯನನ್ನು ಸೋಲಿಸಿದ ಎಂಬುದಾಗಿ ಹೇಳಿದ್ದಾರೆ (ಪು.ಸಂ. 105). ಮೈಸೂರು, ಪೆನುಗೊಂಡ, ಒರಿಸ್ಸಾ ಮತ್ತು ಮಹಮ್ಮದೀಯ ಪ್ರದೇಶಗಳ ವಿವರಣೆ, ರಾಮಲಿಂಗನ ನಾಯಕಪ್ಪ ರಾಯನ ಮುಖ್ಯಸ್ಥಿಕೆಯಲ್ಲಿ ನಡೆದ ದಾಳಿ. ಉದಯಗಿರಿ ಕಂದಕೂರು, ಕೊಂಡವೀಡ, ಕೊಂಡಪಲ್ಲಿ, ಒರಿಸ್ಸಾ, ಅಹಮ್ಮದನಗರದ ಮುತ್ತಿಗೆ, ಸಿಂಹಾಚಲ, ಪೊಟ್ನೂರು ಮತ್ತು ಕಳಿಂಗಗಳನ್ನು ಜಯಿಸಿ ಗಜಪತಿ ಸಪ್ತಾಂಗ ಹರಣ ಎಂಬ ಬಿರುದು ಕೊರೆಸಿದ ವಿವರಣೆಯನ್ನು ನೀಡಲಾಗಿದೆ. ಮುಂದುವರೆದು ಕಟಕಪುರಿಗೆ ಮುತ್ತಿಗೆ, ಜಗನ್ಮೋಹಿನಿಯ ಜೊತೆಗೆ ಮದುವೆ, ದಂಡಯಾತ್ರೆಯ ಮೂರು ಹಂತಗಳು ತುಳುನಾಡಿನ ದಂಡಯಾತ್ರೆ, ಗೋವಳಕೊಂಡದ ಶಹನು ಮತ್ತು ಮಂಗಳೂರಿನ ಮುತ್ತಿಗೆ ಮುಂತಾದ ವಿವರಣೆಯನ್ನು ಈ ವಿಲಾಸದಲ್ಲಿ ಚರ್ಚಿಸಲಾಗಿದೆ.

ಹದಿಮೂರನೆಯ ವಿಲಾಸದಲ್ಲಿ ರಾಯಚೂರಿನ ದಿಗ್ವಿಜಯ ಮುದಗಲ್ ಕೋಟೆಯವರ ಸಾಳುವ ನರಸಿಂಹನ ಮರಣಕಾಲದ ಆಕಾಂಕ್ಷೆ, ಸಿದ್ಧಿಮರ್ಕಾರನೆಂಬುವವನು. ಪೋರ್ಚುಗೀಸರೊಡನೆ ಮಾಡಿಕೊಂಡ ಒಪ್ಪಂದ ಮತ್ತು ಮೋಸದ ವಿವರಣೆ ನಂತರ ಮುಸ್ಲಿಂ ದೊರೆಗಳ ಸಹಕಾರ, ಸೈನ್ಯವು ಹತ್ತು ಲಕ್ಷ ಇದನ್ನು 11 ದಳಗಳಲ್ಲಿ ವಿಭಾಗಿಸಿದ್ದು ರಾಯಚೂರು ದುರ್ಗಾ, ಕೃಷ್ಣ-ತುಂಗಭದ್ರ ನಡುವಣ ಬಯಲು, ರಾಯನ ಸಂರಕ್ಷಣೆ, ಸೈನ್ಯದ ಬಿಡಾರದಲ್ಲಿ ಊರಿನ ರೀತಿಯ ಮಾರುಕಟ್ಟೆ, ಇತ್ತು. ಇಸ್ಮಾಯಿಲ್ ಆದಿಲ್‌ಶಹ, ಫಿರಂಗಿಗಳು ಅಗ್ನಿಪ್ರಳಯವನ್ನು ಕೃಷ್ಣದೇವರಾಯನು ಸೈನಿಕರನ್ನು ಕುರಿತು ಮಾಡಿದ ಭಾಷಣ. ರಾಯಚೂರಿನ ದಾಳಿ ಆಡಳಿತ ವ್ಯವಸ್ಥೆ. ಆದಿಲ್‌ಶಹ ಮತ್ತು ಕೃಷ್ಣದೇವರಾಯರ ಸಂಭಾಷಣೆ, ಕಲಬುರ್ಗಿ, ಬಹುಮನಿ ಅರಸೊತ್ತಿಗೆಯ ಪುನರುಜ್ಜೀವನ, ಯವನ ರಾಜ್ಯ ಸ್ಥಾಪನಾಚಾರ್ಯ ಬಿರುದು ಧರಿಸಿದ ನಂತರ ದಿನಗಳಲ್ಲಿ ತೀರ್ಥಕ್ಷೇತ್ರ ಸಂದರ್ಶನ. ಲಂಕೆಯಲ್ಲಿನ ರಾಜಕೀಯ ಬೆಳವಣಿಗೆ, ಕೃಷ್ಣದೇವರಾಯರು ತನ್ನ ಮಗನಿಗೆ ರಾಜ್ಯಭಾರ ಸಿಗಬೇಕೆಂದು ನಂತರದಲ್ಲಿ ತಿರುಮಲ ದೇವರಾಯನನ್ನು ಪಟ್ಟಾಧಿಕಾರಿಯಾಗಿ ಯುವರಾಜನಾಗಿ

ವಿಷಪ್ರಯೋಗದಿಂದ ಸಾಳುವ ತಿಮ್ಮನ ಮಗ ತಿಮ್ಮದಣ್ಣಾನಾಯಕ ಮತ್ತು ಅವರಿಗೆ ನೀಡಿದ ಶಿಕ್ಷೆ ನಂತರ ರಾಯಚೂರಿನ ಕೊನೆಯ ದಾಳಿ, 1526ರಲ್ಲಿ ಕೊನೆಗೆ ರೋಗಪೀಡಿತನಾಗಿ 1530ರಲ್ಲಿ ಮರಣವನ್ನು ಹೊಂದಿದ ವಿಚಾರಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಹದಿನಾಲ್ಕನೆಯ ವಿಲಾಸದಲ್ಲಿ ಮಹಾರಾಜ ಶ್ರೀ ಕೃಷ್ಣದೇವರಾಯ ವಿಭೂತೀಮತ್ವ ಎಂಬ ಶೀರ್ಷಿಕೆಯಲ್ಲಿ ರಾಯನದೇಹದ ಅಂಗಾಂಗಗಳ ವರ್ಣನೆ. ಅಂಗಸಾಧನೆ ಅಧ್ಯಯನ, ರಾಯನ ಹೆಂಡತಿಯರು, ಮಕ್ಕಳು ತಿರುಮಲಾಂಬೆಯನ್ನು ಅಳಿಯ ರಾಜರಾಜನಿಗೆ ಮದುವೆ ಮಾಡಿದ ವಿವರಣೆ, ವಿಜಯ ವಿಠ್ಠಲದೇವಾಲಯದ ಚಿತ್ರಣ. ಎರಡನೆಯವಳಾದ ವೆಂಗಲಾಂಬೆಯನ್ನು ರಾಮರಾಯನ ತಮ್ಮ ತಿರುಮಲನಿಗೆ ಕೊಟ್ಟಿದ್ದು. ಉದಾತ್ತ ರಾಜಗುಣಗಳಿಂದ ಆದರ್ಶ ನರಪತಿ ಇವನ ಆಳ್ವಿಕೆಯ ಸಿಂಹಾವಲೋಕನ ಸಂಘಟನೆಯಿಂದಲೂ ಪ್ರವರ್ಧಮಾನವಾಗಿದೆ. ಪೂರ್ವಜರ ಆಸೆಗಳನ್ನು ಈಡೇರಿಸಿದನು. ಇಸ್ಮಾಯಿಲ ಆದಿಲ್‌ಶಾ ದಕ್ಷಿಣದಲ್ಲಿ ರಾಜ್ಯ ವಿಸ್ತರಿಸುವ ನೀತಿಯನ್ನು ಅನುಸರಿಸಿದ. ಆದರೆ ಅದಕ್ಕೆ ತಡೆಯನ್ನು ರಾಯನು ಒಡ್ಡಿದನು. ರಾಯನು ತೆರಿಗೆಯಿಲ್ಲದಂತೆ ಭೂಮಿಗಳನ್ನು ಕೊಟ್ಟು ಸಾಗುವಳಿ ಮಾಡಲು ಪ್ರೋತ್ಸಾಹ ನೀಡಿದನು. ಹೊರನಾಡಿನ ವ್ಯವಹಾರದ ಅಭಿವೃದ್ಧಿ, ಕಡಲ ತೀರ ಮತ್ತು ಬಂದರುಗಳನ್ನು ಕುರಿತು ವಿವರಿಸಲಾಗಿದೆ. ಕಾರ್ಯದಕ್ಷರಾದ ಅಧಿಕಾರಿಗಳ ನಿಯೋಜನೆ, ಪ್ರಾಂತ್ಯಾಧಿಕಾರಿಗಳು, ದಸರೆಯ ನಿಧಿಯನ್ನು ಒಪ್ಪಿಸುತ್ತಿದ್ದ ಬಗ್ಗೆ ವಿಜಯನಗರದ ಸಂಪತ್ತು ಖರ್ಚುವೆಚ್ಚ ಆಪದ್ಧನ ಸಂಗ್ರಹಣೆಯನ್ನು ಕುರಿತಾಗಿ ಹೇಳಲಾಗಿದೆ. ರಾಯನು ನ್ಯಾಯದಾನದಲ್ಲಿ ಅತಿ ಜಾಗರೂಕನಾಗಿದ್ದನು. ದೂರುಗಳನ್ನು ತತ್ಕಾಲದಲ್ಲಿ ವಿಚಾರಿಸಿ ಶಿಕ್ಷೆ ವಿಧಿಸುತ್ತಿದ್ದನು. ಪೋಲಿಸ್ ವ್ಯವಸ್ಥೆ, ಗೋಹತ್ಯೆಯನ್ನು ಮಾಡುತ್ತಿರಲಿಲ್ಲ ಎನ್ನುವಂತಹ ವಿಚಾರಗಳನ್ನು, ರಾಯನ ಸೇನಾಬಲ ಅದರಲ್ಲಿ ಕಾಲಾಳು, ಕುದುರೆಯದಳ, ಫಿರಂಗಿದಳ, ರಾಯನ ಸೈನ್ಯ, ಊಳಿಗ ಪದ್ಧತಿ, ದಂಡುಗಳು ಹೀಗೆ ದಸರೆಯ ವಾರ್ಷಿಕ ಮಹಾ ಸಮ್ಮೇಳನ ಕಾಲದಲ್ಲಿ ರಾಜಧಾನಿಯಲ್ಲಿ ನೆರೆಯುತ್ತಿದ್ದ ಸೈನ್ಯ ಮತ್ತು ಕವಚಧಾರಿಗಳಾದ ರಾವುತ ದಳಗಳು ಮುಂದುವರಿದು ರಾಯನು ನೀಡಿದ ದಾನ, ಕಂಚಿ ತಿರುಪತಿ, ಶ್ರೀ ಶೈಲ ಅಹೋಬಲಗಳಿಗೆ ಭೇಟಿ ನೀಡಿದ ವಿವರ. ಅನೇಕ ಜೀರ್ಣೋದ್ಧಾರ ಮತ್ತು ನಿತ್ಯಪೂರ್ವಾದಿ ಕ್ರಮಗಳು, ಉತ್ಸವ, ವಿದ್ಯಾದಾನ ಮತ್ತು ಅನ್ನದಾನ ನಡೆಯಬೇಕೆಂದು ಹೇರಳವಾಗಿ ಹಣವನ್ನು ನೀಡಿದನು. ಶಿಲ್ಪ, ಕಾವ್ಯ, ಸಾಪಿತ್ಯ, ಸಂಗೀತ ವಿದ್ಯೆಗಳಿಗೆ ಆಶ್ರಯ ನೀಡಿ ಅವುಗಳ ಅಭಿವೃದ್ಧಿಗೆ ಶ್ರಮಿಸಿದನು. ಕೃಷ್ಣಸ್ವಾಮಿ, ರಾಮಸ್ವಾಮಿ ಮತ್ತು ವಿಜಯವಿಠ್ಠಲ ದೇವಾಲಯಗಳನ್ನು ನಿರ್ಮಿಸಿದನು ಎಂಬುದಾಗಿ ತಿಳಿಸಿದ್ದಾರೆ. ಒರಿಸ್ಸಾ ದಿಗ್ವಿಜಯದ ನೆನಪಿಗಾಗಿ ಗೆಲುವಿನ ಮನೆಯೆಂಬ ಭವ್ಯವೂ, ದಿವ್ಯವೂ ಆದ ಸಭಾಮಂದಿರವನ್ನು ಕಟ್ಟಿಸಿದನು. ಪ್ರಾಚೀನ ಮೆಸೋಪೋಟೋಮಿಯದ ಹೋಲಿಕೆಯನ್ನು, ತನ್ನ ತಾಯಿಯ ನೆನಪಿಗಾಗಿ ನಾಗಲಾಪುರ ಹೊಸ ಪಟ್ಟಣವನ್ನು ನಿರ್ಮಿಸಿದ ವಿವರಣೆ, ವ್ಯಾಸಯೋಗಿಗಳು ರಾಜಗುರುಗಳು ಆಗಿದ್ದರು. ಇವರಿಗೆ ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ ಪದವಿಯ ವಿವರಣೆಯನ್ನು, ಅದರೊಟ್ಟಿಗೆ ಅವರು ಕುಹುಯೋಗಕಾಲದಲ್ಲಿ ಸಿಂಹಾಸನದಲ್ಲಿ ಕುಳಿತು ರಾಯನ ವಿಪತ್ತು ಪರಿಹಾರ ಮಾಡಿದರು ಎನ್ನುವಂತಹ ವಿವರಣೆ, ಶ್ರೀವ್ಯಾಸಯೋಗಿಗಳು, ರಾಜರುಗಳಿಗೆ ಆಧ್ಯಾತ್ಮಿಕ ಬೆಂಬಲವನ್ನು ನೀಡಿದರು. ನ್ಯೂನಿಝುನ ವಿವರಣೆಯನ್ನು ನೀಡಿದ ಮತ್ತು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ ಎನ್ನುವಂತಹ ವಿಚಾರವನ್ನು ಚರ್ಚಿಸಿದ್ದಾರೆ. ವೆಂಕಟತಾತಾರ್ಯರು, ವಲ್ಲಭಾಚಾರ್ಯರು ಕನಕಾಭಿಷೇಕ ಸತ್ಕಾರವನ್ನು ಪಡೆದ ವಿವರಣೆಯನ್ನು ಕಾಣಬಹುದು. ರಾಯನು ಸ್ವತಃ ವಿದ್ವಾಂಸನು ಗ್ರಂಥಕಾರನು ಸಂಸ್ಕೃತ ಕನ್ನಡ ತೆಲುಗು ಸಾಹಿತ್ಯ ರಚನೆಯಲ್ಲಿ ಪರಿಣಿತನಾಗಿದ್ದನು. ಅಲ್ಲಸಾನಿಪೆದ್ದನ್ನ, ನಂದಿತಿಮ್ಮಯ್ಯ ಮೊದಲಾದ ಎಂಟು ಜನ ಕವಿಗಳು ಅಷ್ಟದಿಗ್ಗಜಗಳೆನಿಸಿ ರಾಯನ ಆಸ್ಥಾನವನ್ನು ಅಲಂಕರಿಸಿದ್ದರು. ರಾಯನ ಕೃತಿಗಳು, ರಾಯನಕಾಲದ ಕನ್ನಡ ಕೃತಿಗಳು, ದಾಸಕೂಟದವರ ಭಕ್ತಿಮಾರ್ಗದ ಜೊತೆ ಅನೇಕ ಐತಿಹಾಸಿಕ ವಿಷಯಗಳ ವಿವರಣೆಯನ್ನು ನೀಡಿದ್ದಾರೆ. ರಾಯನ ಕನ್ನಡಾಭಿಮಾನವನ್ನು ಕವಿಗಳಿಗೆ ನೀಡಿದ ಆಶ್ರಯವನ್ನು ವಿವರಿಸಲಾಗಿದೆ. ನಾಗರಿಕತೆಯನ್ನು ಕುರಿತು ಜನಜೀವನ, ವೇಷಭೂಷಣ, ಕಾವ್ಯಸಂಗೀತ, ನೃತ್ಯ ವಾದನ, ಮಲ್ಲವಿದ್ಯೆ, ರಕ್ಷಾವಿಧಾನ, ಲೇಖನಕಲೆ, ನ್ಯಾಯಪದ್ಧತಿ, ಗಣಿತ ಮೊದಲಾದ ವಿಷಯಗಳಲ್ಲಿ ಅನೇಕ ಮಹಿಳೆಯರು

ಪರಿಣಿತರಾಗಿದ್ದರು. ಬೇಟೆಯು ಹಲವು ಜನರ ವಿನೋದ ಸಾಧನವಾಗಿತ್ತು. ನವರಾತ್ರಿ ರಾಷ್ಟ್ರೀಯ ಹಬ್ಬ ಎಲ್ಲರು ಒಂದೆಡೆ ಸೇರುತ್ತಿದ್ದಂತಹ ಹಬ್ಬ. ಪರದೇಶದ ಅನೇಕ ವರ್ತಕರು ಪ್ರವಾಸಿಗಳು ನೀಡಿದ ವಿವರಣೆ, ಅರಮನೆಗಳ ವರ್ಣನೆಯನ್ನು ನೀಡಿದ್ದಾರೆ.

ಅಚ್ಯುತದೇವರಾಯ ಕ್ರಿ.ಶ. 1530ರಿಂದ 1542ರವರೆಗೆ ಕೃಷ್ಣದೇವರಾಯನ ನಂತರದಲ್ಲಿ ಪಟ್ಟಾಧಿಕಾರಿಯಾದನು, ಸಕಲ ಮನೆತನದ ಪೆದ್ದ ತಿರುಮಲರಾಯ ಮತ್ತು ಚಿನ್ನ ತಿರುಮಲರಾಯರು ಸಹಾಯಕರಾಗಿದ್ದರು. ರಾಮರಾಯನು ಕೂಡ ಸಿಂಹಾಸನದ ಆಕಾಂಕ್ಷಿಯಾಗಿದ್ದನು. ಆದಿಲ್‌ಶಾನು ಹಂಪಿಗೆ ಬಂದಿದ್ದು ಅಚ್ಯುತರಾಯನು ಯಾವುದೇ ಪ್ರತಿಕ್ರಿಯೆಯನ್ನು ನೀಡಲಿಲ್ಲ. ಹುಚ್ಚತಿರುಮಲನು ಪ್ರಬಲನಾದುದನ್ನು ಕಂಡು ರಾಮರಾಯನು ಅಚ್ಯುತ ದೇವಾರಾಯನ ಪಕ್ಷವನ್ನು ಸೇರಿಕೊಂಡನು. ಈ ಸಮಯದಲ್ಲಿ ಅದಿಲ್‌ಶಾಹ ರಾಯಚೂರು ಮತ್ತು ಮುದಗಲ್ ಕೋಟೆಗಳನ್ನು ಪಡೆದನು. ರಾಮರಾಯನು ದಂಗೆಯನ್ನು ಅಡಗಿಸಲು ಹೋದಾಗ ಸಕಲ ತಿಮ್ಮನನ್ನು ರಾಜಧಾನಿಯ ರಕ್ಷಣೆಗೆ ಬಿಟ್ಟು ಹೋದನು. ಆದರೆ ಇವನು ರಾಮರಾಯನಿಗೆ ಸಹಾಯ ಮಾಡಲಿಲ್ಲ. ಇಂತಹ ಸಂದರ್ಭದಲ್ಲಿ ಹುಚ್ಚತಿರುಮಲನ ಪಕ್ಷವನ್ನು ಸೇರಿದನು. ಈ ಸಂದರ್ಭದಲ್ಲಿ ನಡೆದ ಘಟನೆಗಳನ್ನು ನಾವು ಗಮನಿಸಬಹುದಾಗಿದೆ. ಹುಚ್ಚತಿರುಮಲನು ಬಾಲರಾಜನನ್ನು ಕೊಂದು ಕ್ರೂರಿ ಆಡಳಿತ ಮಾಡಿದನು. ಇಂತಹ ಸಂದರ್ಭದಲ್ಲಿ ರಾಮರಾಯನ ಸಹಾಯವನ್ನು ಕೇಳಿದರು. ಇಂತಹ ಸಂದರ್ಭದಲ್ಲಿ ಆದಿಲ್‌ಶಹನ ದಂಡು ವಿಜಯನಗರಕ್ಕೆ ಬಂದು ಇವನಿಗೆ ಸಹಾಯವನ್ನು ಮಾಡಿತು. ರಾಮರಾಯನು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು ರಾಜಧಾನಿಯಲ್ಲಿ ನಡೆಯುವ ಎಲ್ಲಾ ಗಲಭೆಗಳನ್ನು ಹತ್ತಿಕ್ಕಿಕೊಂಡು ಅಚ್ಯುತರಾಯನಿಗೆ ಪಟ್ಟವು ಸ್ಥಿರವಾಗುವಂತೆ ಮಾಡಿದನು. ಪ್ರತಾಪರುದ್ರ ಮತ್ತು ಕುತುಬ್‌ಶಹನು ವಿಜಯನಗರದಲ್ಲಿ ಮುನ್ನುಗ್ಗಿದರು. ರಾಮರಾಯನು ಇವರನ್ನು ಎದುರಿಸಲು ಹೊರಟನು. ಕಂಚಿನಾಡಿನ ಚಲ್ಲಪ್ಪವೀರ ನರಸಿಂಹ ನಾಯಕ ಮತ್ತು ಚೇರ ರಾಜರು ಪಾಂಡ್ಯರ ಮೇಲೆ ದಾಳಿಮಾಡಿದರು. ಸಕಲ ತಿರುಮಲನು ಯುದ್ಧವನ್ನು ಮಾಡಿದನು. ಇದನ್ನು ತಾಮ್ರಪರ್ಣಿ ಯುದ್ಧ ಎಂದು ಕರೆಯಲಾಯಿತು. ಪಾಂಡ್ಯರಾಜನು ತನ್ನ ಮಗಳನ್ನು ಅಚ್ಯುತರಾಯನಿಗೆ ಮದುವೆ ಮಾಡಿಕೊಟ್ಟನು. ಮಧುರೆಯ ವಿಶ್ವನಾಥ ನಾಯಕನು ಈ ಯುದ್ಧದಲ್ಲಿ ಭಾಗವಹಿಸಿದ್ದನು. ಅಚ್ಯುತರಾಯನು ಸ್ನೇಹಪರವಾದ ನೀತಿಯನ್ನು ಅನುಸರಿಸಿದನು. ಅಸದ್‌ಖಾನನೊಡನೆ ಸಂಧಾನವನ್ನು ನಡೆಸಿದರು. ರಾಯನೊಡನೆ ಒಪ್ಪಂದವನ್ನು ಅದಿಲಶಹನು ಮಾಡಿಕೊಂಡು, ಅದವಾನಿ ಕೋಟೆಯ ಸಲುವಾಗಿ ಅಸದ್‌ಖಾನ್ ಮತ್ತು ರಾಮರಾಯನ ತಮ್ಮನ ನಡುವೆ ಕಿತ್ತಾಟ ನಡೆಯಿತು. ಅಚ್ಯುತರಾಯನು ಸಮರ್ಥನಾಗಿರಲಿಲ್ಲ. ಆಳ್ವಿಕೆಯ ಆರಂಭದಲ್ಲಿ ಅಂತಃಕಲಹಗಳಲ್ಲಿ ಮುಳುಗಿ ಸಾಮ್ರಾಜ್ಯವು ಶಿಥಿಲವಾಯಿತು. ಸಾಮ್ರಾಜ್ಯದ ಪ್ರಭಾವವು ಗೌರವವು ಕಳೆಗುಂದಿತು. ಈತನ ಆಳ್ವಿಕೆಯು ಪ್ರಜಾಜನರಿಗೆ ಅಪ್ರಿಯವಾಯಿತು. ರಾಯನು ತನ್ನ ಬಂಧುಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಿದನು. ಈ ಸಂದರ್ಭದಲ್ಲಿ ಅನೇಕ ಅನ್ಯಾಯಗಳು ಜರುಗಿದವು. ಅಚ್ಚುತರಾಯನು ನ್ಯಾಯ ಪರನಾಗಿರಲಿಲ್ಲ. ರಾಯನಿಗೆ ನವಕೋಟಿ ನಾರಾಯಣ ಎನ್ನುತ್ತಿದ್ದರು. ರಾಯನು ಸಾಮಂತರಿಂದ ಕಪ್ಪವನ್ನು ವಸೂಲಿ ಮಾಡಿದನು. ಇವರು ಜನರ ಮೇಲೆ ತೆರಿಗೆಯನ್ನು ಹೇರಿದರು. ರಾಯನು ಧನಸಂಗ್ರಹದಲ್ಲಿ ದಕ್ಷತೆಯನ್ನು ತೋರಿದಂತೆ ಧರ್ಮಕಾರ್ಯಗಳಲ್ಲಿ ಔದಾರ್ಯವನ್ನು ಬೀರಿದನು. ಈತನು ಮಹಾದಾನಗಳನ್ನು ಮಾಡಿದನು. ಕವಿಗಳನ್ನು ಸಾಹಿತ್ಯವನ್ನು ಪ್ರೋತ್ಸಾಹಿಸಿದನು. ಆಸ್ಥಾನದಲ್ಲಿರುವ ಕವಿಗಳು ಅವರು ರಚಿಸಿದ ಕಾವ್ಯಗಳು ದಾಸಸಾಹಿತ್ಯ ವೈಯಕ್ತಿಕ ಜೀವನ ಸಂಬಂಧಿಕರು ಮುಂತಾದ ವಿಷಯಗಳನ್ನು ಈ ವಿಲಾಸದಲ್ಲಿ ಚರ್ಚಿಸಲಾಗಿದೆ.

ಸದಾಶಿವರಾಯ ಕ್ರಿ.ಶ. 1542–1570 ಮತ್ತು ಅಳಿಯ ರಾಮರಾಯ ಕ್ರಿ.ಶ. 1542–1565, ರಾಮರಾಯನ ಸರ್ವಾಧಿಕಾರ ಈ ಅವಧಿಯಲ್ಲಿ ಮೂರು ಪಕ್ಷದವರು ಸೇರಿಕೊಂಡು ವರದಾಂಬಿಕೆ ತನ್ನ ಮಗನಿಗೆ ಪಟ್ಟವಾಗಬೇಕು ಎಂದು ಸಕಲ ತಿಮ್ಮನಿಗೆ ಸಹಕರಿಸಿದಳು. ಆದರೆ ಅವನು ಸ್ವಾರ್ಥನಾಗಿದ್ದನು. ಇದನ್ನು ಮನಗಂಡ ರಾಜಮಾತೆ ಕೃಷ್ಣದೇವರಾಯನ ತಮ್ಮನಾದ ರಂಗರಾಯನಿಗೆ ಸದಾಶಿವರಾಯನೆಂಬ ಮಗನಿದ್ದನು. ಇವನನ್ನು ರಾಜಮಾತೆ ಮತ್ತು ರಾಮರಾಯನು ಸೇರಿಕೊಂಡರು. ರಾಜಮಾತೆ ಇಬ್ರಾಹಿಂ ಅದಿಲ್‌ಶಹನ ಸಹಾಯವನ್ನು ಕೇಳಿದಳು. ಸಕಲತಿಮ್ಮನು

ಅವನಿಗೆ ಹೇರಳವಾಗಿ ಹಣವನ್ನು ನೀಡಿ ಆತನನ್ನು ತಿರುಗಿ ಕಳುಹಿಸಿದನು. ಈ ಸಮಯದಲ್ಲಿ ರಾಮರಾಯನ ಮೇಲೆ ದಾಳಿ ನಡೆದು ರಾಮರಾಯ ತಪ್ಪಿಸಿಕೊಂಡು ಕೊಂಡವೀಡು ಕೋಟೆಯಲ್ಲಿ ಆಶ್ರಯವನ್ನು ಪಡೆದನು. ಇವನೊಂದಿಗೆ ಸದಾಶಿವರಾಯನು ಜೀವಕ್ಕೆ ಹೆದರಿ ಅಲ್ಲಿಗೆ ಹೋದನು. ಸಕಲ ತಿಮ್ಮನು ರಾಜಕುಮಾರನನ್ನು ಆತನ ಅನುಯಾಯಿಗಳನ್ನು ಬಲಿಯಾಗಿ ಅರ್ಪಿಸಿ ಸಿಂಹಾಸನವನ್ನು ಆಕ್ರಮಿಸಲು ಅಣಿಯಾದನು. ಇಂತಹ ಸಂದರ್ಭದಲ್ಲಿ ನಾಯಕರುಗಳ ಒಲವು ಸದಾಶಿವರಾಯ ಮತ್ತು ರಾಮರಾಯರ ಕಡೆ ತಿರುಗಿತು. ರಾಮರಾಯ, ಪೆನುಗೊಂಡ, ಗುತ್ತಿ, ಗಂಡಿಕೋಟೆ, ಕರ್ನೂಲ ಮೊದಲಾದ ಕೋಟೆಗಳನ್ನು ಜಯಿಸಿದನು. ರಾಮರಾಯನು ಬಲಿಷ್ಠನಾಗಿ ರಾಜಧಾನಿಯತ್ತ ಸಾಗಿದನು. ಸಕಲ ತಿಮ್ಮನು ಹೆಚ್ಚಿನ ಆಶೆಯನ್ನು ತೋರಿಸಿ ಅದಿಲಶಹನನ್ನು ತನ್ನ ಸಹಾಯಕ್ಕೆ ಕೋರಿದನು. ತುಂಗಭದ್ರೆಯ ದಂಡೆಯ ಮೇಲೆ ಯುದ್ಧ ಸನ್ನದ್ಧನಾಗಿ, ರಾಮರಾಯನು ಶಹನ ಸೈನ್ಯದ ಮೇಲೆ ದಾಳಿ ಮಾಡಿ ಶಹನ ಸೈನ್ಯವು ಓಡಲಾರಂಭಿಸಿತು. ರಾಮರಾಯನು ಸಕಲ ತಿಮ್ಮನನ್ನು ನೆಲಕ್ಕುರುಳಿಸಿ ರಾಜಧಾನಿಗೆ ಬಂದು ಸದಾಶಿವರಾಯನನ್ನು ಬರಮಾಡಿಕೊಂಡನು, ಜೊತೆಗೆ ಪಟ್ಟಾಭಿಷೇಕ ಸಮಾರಂಭವು ಸಡಗರದಿಂದ ನೆರವೇರಿತು. ರಾಮರಾಯನು ಸಾಮ್ರಾಜ್ಯವನ್ನು ಸ್ಥಿರಗೊಳಿಸಿದನು. ಈತನಿಗೆ 'ಪ್ರಾಚ್ಯ ಕರ್ನಾಟಕ ರಾಜ್ಯ ಸ್ಥಾಪನಾಚಾರ್ಯ'ನೆಂಬ ಬಿರುದು ಪ್ರಾಪ್ತವಾಯಿತು. ಸದಾಶಿವರಾಯನು ಅಸಮರ್ಥನಾಗಿದ್ದರಿಂದ ರಾಮರಾಯನು ಎಲ್ಲಾ ಅಧಿಕಾರವನ್ನು ಸಂಪೂರ್ಣವಾಗಿ ಬಳಸಿಕೊಂಡನು. ಮೊದಲ ಅವಧಿಯಲ್ಲಿ ರಾಜಕುಮಾರನ ಪಾಲಕನಾಗಿಯೂ ಅಧಿಕಾರ ನಡೆಸಿದನು. ಎರಡನೆಯ ಅವಧಿಯಲ್ಲಿ ಸದಾಶಿವರಾಯನು ಅಧಿಕಾರದಲ್ಲಿ ಹಸ್ತಕ್ಷೇಪ ಮಾಡಿದ್ದರಿಂದ ಆತನನ್ನು ಭದ್ರವಾದ ಸ್ಥಳದಲ್ಲಿ ಇರಿಸಿ ಸಾಮ್ರಾಜ್ಯವನ್ನು ಆಳತೊಡಗಿದನು. ಅರಸನನ್ನು ಮೂಲೆಗುಂಪು ಮಾಡಿದ್ದು ಅನೇಕರಿಗೆ ರುಚಿಸಲಿಲ್ಲ. ಸೋದರರು ಇದನ್ನು ಸಹಿಸಲಿಲ್ಲ. ಮುಂದುವರಿದು ಎಲ್ಲಾ ಅಧಿಕಾರ ಬಿರುದುಗಳನ್ನು ಧರಿಸಿ ತನ್ನ ಹೆಸರಿನಿಂದಲೇ ರಾಜ್ಯಕಾರ್ಯಗಳನ್ನು ನಡೆಸಲು ಪ್ರಾರಂಭಿಸಿದನು. ನೇರವಾಗಿ ಇವನ ಆಳ್ವಿಕೆ ಮುಂದುವರಿಯಿತು. ಸದಾಶಿವರಾಯ ಹೆಸರಿಗೆ ಮಾತ್ರ ರಾಜನಾಗಿದ್ದನು. ಇಷ್ಟಾದರೂ ತನಗೆ ಪಟ್ಟಾಭಿಷೇಕವನ್ನು ಮಾಡಿಕೊಳ್ಳುವ ಸಾಹಸವು ರಾಮರಾಯನಿಗೆ ಆಗಲಿಲ್ಲ. ತಿರುಮಲ ಮತ್ತು ವೆಂಕಟಾದ್ರಿ ರಾಜಕಾರ್ಯದಲ್ಲಿ ರಾಮರಾಯನಿಗೆ ನೆರವಾದರು. ರಾಮರಾಯನು ಅರವೀಡು ಮನೆತನದವನು. ಕೃಷ್ಣದೇವರಾಯನ ಅಳಿಯ ಎಂದು ಪ್ರಸಿದ್ಧಿಯನ್ನು ಪಡೆದಿದ್ದನು. ಅನೇಕ ಪ್ರಾಂತ್ಯಗಳ ಅಧಿಕಾರವನ್ನು ನಡೆಸಿ ಅನುಭವವನ್ನು ಪಡೆದಿದ್ದನು. ದಂಗೆಗಳನ್ನು ಹತ್ತಿಕ್ಕಿ ಶಾಂತತೆಯನ್ನು ಸ್ಥಾಪಿಸಿ ಸಾಮ್ರಾಜ್ಯದ ಪ್ರಭಾವವನ್ನು ಹೆಚ್ಚಿಸಿದನು. ಆರಂಭದಲ್ಲಿ ತೀರುವಂಕೂರ ಪ್ರಾಂತ್ಯದಲ್ಲಿ ಅಶಾಂತಿಯುಂಟಾಯಿತು. ಇದನ್ನು ಸರಿಪಡಿಸಲು ರಾಮರಾಯನ ಅಣ್ಣನ ಮಗ ವಿಠ್ಠಲನು ಹೊರಟನು. ಇವನಿಗೆ ಮದುರೆಯ ನಾಯಕ ಮತ್ತು ಕೆಳದಿಯ ಸದಾಶಿವ ನಾಯಕ ನೆರವು ನೀಡಿದರು. ಆದರೆ ಯಾವುದೇ ರಕ್ತಪಾತವಾಗದೆ ಯಾತ್ರೆ ಕೊನೆಗೊಂಡಿತು. ಇದು ಸೆಂಟ್ ಫ್ರಾನ್ಸಿಸ್ ಝೇವಿಯರ್ ಇವನ ಮಧ್ಯಸ್ಥಿಕೆಯಲ್ಲಿ ಆಯಿತು. ಇದಾದನಂತರ ಅರಗನಾಡು ಚಂದ್ರಗುತ್ತಿಯ ನಾಯಕನು ಸ್ವತಂತ್ರವಾಗಿ ವರ್ತಿಸಲು ಸದಾಶಿವ ನಾಯಕನು ಅವನನ್ನು ದಂಡಿಸಿದನು. ಪೋರ್ಚುಗೀಸರನ್ನು ಅಂಕೆಯಲ್ಲಿಟ್ಟುಕೊಂಡಿದ್ದನು. ಮುಂದೆ ಇವರ ಮಧ್ಯೆ ಸ್ನೇಹ ಸಂಧಾನಗಳು ನಡೆದವು. ಕುದುರೆಗಳು ವಿಜಯನಗರಕ್ಕೆ ಮತ್ತು ಸರಕುಗಳನ್ನು ಹೊನ್ನಾವರ ಬಸರೂರು ಬಂದರಿನ ಮೂಲಕ ಸಾಗಿಸಲಾಗುತ್ತಿತ್ತು. ಆದರೆ ಪೋರ್ಚುಗೀಸರು ಅದಿಲ್‌ಶಾನೊಡನೆ ಮೈತ್ರಿಯ ಸಂಬಂಧವನ್ನು ಬೆಳೆಸಿದ್ದರಿಂದ ಇದು ಮುರಿದುಬಿತ್ತು. ಪೋರ್ಚುಗೀಸರು ಭಟ್ಕಳದ ಮೇಲೆ ದಾಳಿ ಮಾಡಿದರು. ಅಲ್ಲಿಯ ರಾಣಿ ಅವರನ್ನು ಪ್ರತಿಭಟಿಸಿದಳು. ಮುಂದೆ ಉಲ್ಲಾಳದ ರಾಣಿಯು ಪ್ರತಿಭಟಿಸಿದಳು. ಮಂಗಳೂರನ್ನು ಸುಲಿದರು, ಹಿಂದೂ ದೇವಾಲಯವನ್ನು ಹಾಳುಮಾಡಿದರು. ಅಲ್ಲಿ ಕೋಟೆಯನ್ನು ಕಟ್ಟಿದರು. ಮುಂದೆ ಮದ್ರಾಸ್ ಪ್ರಾಂತ್ಯದ ಬೆಳವಣಿಗೆಯನ್ನು ನಾವು ನೋಡಬಹುದಾಗಿದೆ. ಇಲ್ಲಿಂದ ಮುಂದೆ ದ್ವೀಪಾಂತರ ವ್ಯಾಪಾರದ ಕೇಂದ್ರವಾಗಿ ಘನತೆಯನ್ನು ಪಡೆಯಿತು. ಹೆಚ್ಚು ಹೆಚ್ಚು ಶ್ರೀಮಂತರಾಗಲು ಇದು ಸಹಕಾರಿಯಾಯಿತು. ಪೂರ್ವದಲ್ಲಿಯೂ ಪೋರ್ಚುಗೀಸರು ಹೆಚ್ಚು ಪ್ರಬಲರಾಗುತ್ತಿದ್ದರು ಈ ಸಮಯದಲ್ಲಿ ವಿಠ್ಠಲನು ದಂಡಯಾತ್ರೆಯನ್ನು ಮಾಡಿ ಅವರನ್ನು ನಿಯಂತ್ರಿಸಿದನು. ಮುಂದೆ ರಾಮರಾಯನು ಕನ್ಯಾಕುಮಾರಿ ವಿಜಯಸ್ತಂಭ ಸ್ಥಾಪನಾಚಾರ್ಯ ಎಂಬ ಬಿರುದನ್ನು ಧರಿಸಿದನು. ಲಂಕೆಯೊಂದಿಗೆ ಸಹಕರಿಸಿ ವಿಠ್ಠಲನು

ಅಲ್ಲಿಂದ ಕಪ್ಪವನ್ನು ಪಡೆದನು. ಮುಂದೆ ಕೃಷ್ಣಪ್ಪ ನಾಯಕನು ದಂಡಯಾತ್ರೆಯನ್ನು ಕೈಗೊಂಡು ಮತ್ತೊಮ್ಮೆ ಅದನ್ನು ವಿಜಯನಗರದಲ್ಲಿ ಸೇರಿಸಿದನು.

ಹದಿನೇಳನೆಯ ವಿಲಾಸದಲ್ಲಿ ಮಹಮ್ಮದೀಯರೊಡನೆ ಪ್ರಸಂಗಗಳು ಕುರಿತ ವಿಚಾರಗಳನ್ನು ತಿಳಿಸಲಾಗಿದೆ. ಉತ್ತರದಲ್ಲಿ ಮಹಮ್ಮದೀಯ ರಾಜ್ಯಗಳೊಡನೆ ಕೆಲವು ಅಪೂರ್ವವಾದ ಸನ್ನಿವೇಶಗಳು ಉಂಟಾದವು. ಸುಲ್ತಾನರ ಸ್ಥಿತಿ ಸಮಾಧಾನಕಾರವಾಗಿರಲಿಲ್ಲ. ಪರಸ್ಪರ ಮತ್ಸರ ದ್ವೇಷಗಳೂ ಬೆಳೆದಿದ್ದವು. ಅವರಲ್ಲಿಯ ಅಂತಃಕಲಹಗಳು ಮೇಲಿಂದ ಮೇಲೆ ವಿಕೋಪಕ್ಕೆ ಹೋಗಿ ಅವರು ರಾಮರಾಯನ ಸಹಾಯವನ್ನು ಬೇಡುತ್ತಿದ್ದರು. ಅಸದಖಾನ್ ಮತ್ತು ವೆಂಕಟಾದ್ರಿಯ ಮಧ್ಯೆಯಲ್ಲಿ ನಡೆದ ಯುದ್ಧ. ಗೋವಳಕೊಂಡ, ಬೀದರ್ ಮತ್ತು ಅಹಮ್ಮದ್‌ನಗರಗಳನ್ನು ಸೂರೆಗೊಳ್ಳಲು ಯೋಜನೆಯನ್ನು ತಯಾರಿಸಿದನು. ರಾಮರಾಯನು ಕಲ್ಯಾಣ ನಗರವನ್ನು ಗೆದ್ದು ಕಲ್ಯಾಣನಗರ ಸಾಧಕ, ಕಲ್ಯಾಣ ಪುರವರಾಧೀಶ್ವರ ಎಂಬ ಬಿರುದನ್ನು ದರಿಸಿದನು.

ರಾಮರಾಯನು ಅಲಿ ಅದಿಲ್‌ಶನನ್ನು ಪಟ್ಟದಲ್ಲಿ ಕೂರಿಸಿ ಮಗನಂತೆ ಆತನನ್ನು ನೋಡಿಕೊಂಡ ವಿಚಾರವನ್ನು ತಿಳಿಸಲಾಗಿದೆ. ಕೊಂಡುಪಲ್ಲಿಯನ್ನು ಪಡೆದು ಅಹಮ್ಮದ್‌ನಗರ ಮುತ್ತಿಗೆಯನ್ನು ಕಿತ್ತು ಹಿಂದಿರುಗಿದನು. ರಾಮರಾಯನು ಸದಾಶಿವರಾಯನ ಹೆಸರಿನಲ್ಲಿ 25 ವರ್ಷಗಳ ಆಳ್ವಿಕೆಯನ್ನು ಮಾಡಿದರು. ಈ ಅವಧಿಯಲ್ಲಿ ರಾಮರಾಯನ ಕೈಗೊಂಬೆಗಳಾಗಿ ಕುಣಿಯುತ್ತಿದ್ದರು. ವಿಜಾಪುರ, ಅಹಮ್ಮದ್‌ನಗರ, ಗೋವಳಕೊಂಡ ಮತ್ತು ಬೀದರ್ ಇವರುಗಳು ಹೊಟ್ಟೆಕಿಚ್ಚು ಪಡುತ್ತಿದ್ದರು. ರಾಮರಾಯನ ಕಾಲದಲ್ಲಿ ಅತ್ಯಂತ ವಿಸ್ತಾರವಾದ ಭೂಭಾಗವನ್ನು ವಿಜಯನಗರ ಹೊಂದಿತ್ತು. ಈ ವಿಜಯವು ಕೃಷ್ಣದೇವರಾಯನ ವೈಭವಕ್ಕಿಂತ ಮಿಗಿಲಾಗಿದೆ ಎಂದು ಹೇಳಿದ್ದಾರೆ. ಲಂಕೆಯಿಂದ ನರ್ಮದಾ ನದಿಯವರೆಗಿನ ಪ್ರದೇಶವು ರಾಮರಾಯನ ಅಧೀನಕ್ಕೆ ಬಂತು. ದ್ವೀಪಾಂತರದ ಸಂಬಂಧಗಳು ಬೆಳೆದವು. ಪೋರ್ತುಗಾಲ, ಅರಬ್, ತುರ್ಕಿ, ಚೀನ ಮೊದಲಾದ ದೇಶಗಳೊಂದಿಗೆ ಒಂಟೆ, ಕುದುರೆ, ಮೊದಲಾದ ಸರಕುಗಳ ವ್ಯಾಪಾರವು ಸಮೃದ್ಧವಾಗಿ ನಡೆಯುತ್ತಿತ್ತು. ಹಂಪೆಯು ಭೂಮಂಡಲದ ಮೇಲಿನ ಅದ್ವಿತೀಯ ಪಟ್ಟಣವಾಗಿ ಪ್ರಸಿದ್ಧಿಯನ್ನು ಪಡೆಯಿತು.

ಹದಿನೆಂಟನೆಯ ವಿಲಾಸದಲ್ಲಿ ರಾಕ್ಷಸ ತಂಗಡಿಯ ಮಹಾಯುದ್ಧ ಕುರಿತು ವಿವರಿಸಲಾಗಿದೆ. ವಿರೋಧಿಗಳು ವಿಜಯನಗರದ ವಿರುದ್ಧವಾಗಿ ಒಂದುಗೂಡಿದರು. ರಾಮರಾಯನ ರಾಜನೀತಿ ಯಾವಾಗಲೂ ಅಂತಹ ಗೌರವಪೂರ್ಣವೂ ಆಗಿರಲಿಲ್ಲ. ರಾಮರಾಯನು ಹಲವು ಬಾರಿ ಒಬ್ಬೊಬ್ಬರಿಗೆ ಶತ್ರುವೂ ಮಿತ್ರನೂ ಆಗಿ ಅಪಕಾರ-ಉಪಕಾರವನ್ನು ಮಾಡಿದ ಸನ್ನಿವೇಶಗಳು ಒದಗಿದ್ದವು. ಈ ಸಂಗತಿಗಳಲ್ಲಿ ಒಂದೊಂದಾಗಿ ಅವರ ಮನಸ್ಸಿಗೆ ಹೊಳೆ-ಹೊಳೆದು, ಸುಳಿದಾಡ ತೊಡಗಿದವು. ರಾಮರಾಯನ ಉಪಕಾರ ಮರೆತುಹೋಗಿ ಆತನ ಕೆಲವು ಅಪಕಾರಗಳು ಮಾತ್ರ ಎದ್ದು ಕಾಣಿಸಲಾರಂಭಿಸಿದವು. ರಾಮರಾಯನು ಅದಿಲ್‌ಶಹನಿಗೆ ಪ್ರಾಣ, ಧನ, ಮಾನಗಳನ್ನು ನೀಡಿದನು. ಕೊನೆಗೆ ವಿಜಯನಗರದ ವಿನಾಶಕವಾದ ಈ ಸಂಕಲ್ಪದ ಸೂತ್ರಧಾರನಾದನು.

ಅದಿಲ್‌ಶಹನು ರಾಯಚೂರು ಮತ್ತು ಮುದಗಲ್ ಕೋಟೆಯನ್ನು ತನಗೆ ನೀಡಬೇಕೆಂದು ರಾಮರಾಯನ ಬಳಿಗೆ ರಾಯಭಾರಿಯನ್ನು ಕಳುಹಿಸಿದನು. ರಾಮರಾಯನು ಇದನ್ನು ತಿರಸ್ಕರಿಸಿದನು. ಇದರಿಂದ ಅಲಿ ಅದಿಲ್‌ಶಹನು ಮಿತ್ರಕೂಟವನ್ನು ಸೇರಿ ಯುದ್ಧವನ್ನು ಸಾರಿದರು. ಇದರಲ್ಲಿ ಮರಾಠ ಸರದಾರರು ಭಾಗಿಯಾಗಿದ್ದರು. ರಾಮರಾಯನು ತಿರುಮಲ ಮತ್ತು ವೆಂಕಟಾದ್ರಿಯೊಂದಿಗೆ ಕೂಡಿ ಯುದ್ಧ ಸಿದ್ಧತೆಯನ್ನು ಮಾಡಿಕೊಂಡನು. ಮುಂದೆ ಎರಡು ದಳಗಳು ವೀರಾವೇಶದಿಂದ ಕಾದಾಡಿ ಫಿರಂಗಿಯ ಸದ್ದು ವಿಜಯನಗರ ಸೈನ್ಯವನ್ನು ಛಿದ್ರಗೊಳಿಸಿತು. ಮುಸ್ಲಿಂ ಒಕ್ಕೂಟ ಸೈನ್ಯವು ಮುನ್ನುಗುತ್ತಾ ರಾಮರಾಯನನ್ನು ರೋಮಿಖಾನನು ಸೆರೆಹಿಡಿದು ನಿಜಾಂ ಶಹನ ಬಳಿ ತರಲು ಅವನ ಶಿರಚ್ಛೇದನ ಮಾಡಿದನು. ಇಲ್ಲಿಗೆ ರಕ್ಕತಂಗಡಗಿ ಯುದ್ಧವು ಅಂತ್ಯಗೊಂಡು ವಿಜಯನಗರ ಸಂಪೂರ್ಣವಾಗಿ ಹಾಳಾಯಿತು.

ಸದಾಶಿವರಾಯಯ ಕ್ರಿ.ಶ. 1542ರಿಂದ 70ರವರೆಗಿನ ಗತಿಗಳನ್ನು ಕುರಿತು ವಿವರಿಸಲಾಗಿದೆ. ಯುದ್ಧದ ಮುಂದಿನ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲಾಗಿದೆ. ವೆಂಕಟಾದ್ರಿಯು ಮೊದಲು ಚಂದ್ರಗಿರಿಗೆ ಹೋಗಬೇಕು. ತಿರುಮಲನು ಕೂಡಲೆ ವಿಜಯನಗರಕ್ಕೆ ಹೋಗಿ ಅರಮನೆಯವರನನ್ನು ಮತ್ತು ಸಂಪತ್ತನ್ನು ತೆಗೆದುಕೊಂಡು ತಿರುಪತಿಯಲ್ಲಿ ಕೊಡಬೇಕು. ಇದರೊಟ್ಟಿಗೆ ಸದಾಶಿವರಾಯ ಮತ್ತು ಅರಮನೆಯ ಸ್ತ್ರೀಯರನ್ನು ಕರೆದುಕೊಂಡು 1550 ಆನೆಗಳ ಮೇಲೆ ಸಂಪತ್ತನ್ನು ಹೇರಿಕೊಂಡು ಇವನ ಜೊತೆಗೆ ಮಂತ್ರಿ ನಾಯಕ ಮೊದಲಾದ ಪರಿವಾರವು ಆತನ ಮಾರ್ಗವನ್ನು ಅನುಸರಿಸಿತು.

ಸುಲ್ತಾನರು ಆನೆಗೊಂದಿಗೆ ಬಂದು ತಲುಪಿದರು. ನಂತರ ಹಂಪಿಯನ್ನು ಪ್ರವೇಶಿಸಿ ನಾಶಪಡಿಸಿದರು. ಅದರೊಟ್ಟಿಗೆ ಬೇಡರ-ಪುಂಡರ ಕಳ್ಳರ ತಂಡಗಳು ಕೈಸಾಧಿಸಿ ಕೊಲೆ ಸುಲಿಗೆ ಹಾವಳಿಯನ್ನು ಎಬ್ಬಿಸಿದರು. ವಿಜಯನಗರಕ್ಕೆ ಬೆಂಕಿ ಇಟ್ಟರು. ವೆಂಕಟಾದ್ರಿಯ ಸುಲ್ತಾನರಿಗೆ ಶಾಂತಿ ಒಪ್ಪಂದಕ್ಕೆ ಆಹ್ವಾನಿಸಿದನು. ಇದಕ್ಕೆ ಒಪ್ಪಿ ವಿಜಯನಗರದಿಂದ ಹೊರಟರು. ತಿರುಮಲನು ಅವರು ಹೋದ ನಂತರ ರಾಜಧಾನಿಯನ್ನು ಮಾಡಿಕೊಂಡು ವೈಭವವನ್ನು ಮತ್ತೆ ಬೆಳಗಿಸಬೇಕೆಂದು ಪ್ರಯತ್ನಿಸಿದನು. ಆದರೆ ಆನಂತರದಲ್ಲಿ ವಿಜಯನಗರದ ಮೇಲೆ ಪದೇ ಪದೇ ದಾಳಿಗಳು ನಡೆದು ರಾಜ್ಯ ಅಸ್ಥಿರವಾಯಿತು. ಕೊನೆಗೆ 1567ರಲ್ಲಿ ಹಂಪೆಯಿಂದ ಪೆನುಗೊಂಡೆಗೆ ರಾಜಧಾನಿಯನ್ನು ಸ್ಥಳಾಂತರಿಸಿದನು. ನಾಯಕರು ಸ್ವತಂತ್ರರಾಗಬಯಸಿದರು. ಆದರೆ ಅವರನ್ನು ತನ್ನ ಹತೋಟಿಯಲ್ಲಿಟ್ಟನು. ಸದಾಶಿವರಾಯನು ಅದೇ ಜೀವನವನ್ನು ನಡೆಸಿದನು. ರಾಮರಾಯನ ಜಾಗದಲ್ಲಿ ತಿರುಮಲನು ಬಂದಿದ್ದನು. 1570ರಲ್ಲಿ ತಿರುಮಲನು ಇವನನ್ನು ಕೊಲ್ಲಿಸಿದನು. ಇಂತು ರಾಜನೆನಿಸಿಯೂ ರಾಜ್ಯವಾಳದ ಸದಾಶಿವರಾಯನ ಮರಣದೊಂದಿಗೆ ವಿಜಯನಗರದ ಮೂರನೆಯ ಅರಸು ಮನೆತನ ತುಳು ವಂಶದ ಆಳ್ವಿಕೆ ಕೊನೆಗೊಂಡಿತು. ಸದಾಶಿವರಾಯನ ಕಾಲದಲ್ಲಿ ತೆರಿಗೆಗಳನ್ನು ರದ್ದುಪಡಿಸಿದನು. ಶ್ರೀವೈಷ್ಣವ ಮತಕ್ಕೆ ವಿಶೇಷವಾದ ಪ್ರೋತ್ಸಾಹ ದೊರೆಯಿತು. ದಾನಗಳನ್ನು ನೀಡಿದನು. ಸಾಹಿತ್ಯ ಕಲೆ ಸಂಗೀತ ಅಭಿವೃದ್ಧಿಯನ್ನು ಪಡೆದವು. ಸಂಸ್ಕೃತದಲ್ಲಿ ಅನೇಕ ಕಾವ್ಯಗಳು ರಚನೆಯಾದವು. ದಾಸ ಸಾಹಿತ್ಯ ಅಭಿವೃದ್ಧಿಯನ್ನು ಹೊಂದಿತು. ನಂತರದಲ್ಲಿ ರಾಕ್ಷಸತಂಗಡಗಿ ಕಾಳಗದಿಂದ ಆದಂತಹ ಪರಿಣಾಮಗಳನ್ನು ನೋಡಬಹುದು. ರಾಕ್ಷಸತಂಗಡಿಯ ಮೀಮಾಂಸೆಯಲ್ಲಿ ಕನ್ನಡಿಗರ ಪ್ರಭಾವವು ಬಹಳ ಕಡಿಮೆಯಾಗಿ ಇತರರ ಪ್ರಾಬಲ್ಯವು ಬೆಳೆಯಿತು. ಕನ್ನಡ ಜನಾಂಗದಲ್ಲಿ ಪರಿಪಾಕಗೊಂಡು ಶೌರ್ಯ ಪರಾಕ್ರಮ, ಸಾಹಸ ಐಕ್ಯ ಸಂಘಟನೆ, ಸ್ವಾಭಿಮಾನ ದೀರ್ಘೋದ್ಯೋಗ, ಕಾರ್ಯನಿಷ್ಠೆ, ಸ್ವಾರ್ಥತ್ಯಾಗ, ಪ್ರಗತಿ ಪ್ರೇಮ ಕರ್ತೃತ್ವ ಮೊದಲಾದ ಉಜ್ವಲವಾದ ಅನೇಕ ಸದ್ಗುಣಗಳು ಬರಬರುತ್ತಾ ಲುಪ್ತವಾಗಿ ಕನ್ನಡ ರಾಷ್ಟ್ರವು ಅಧೋಗತಿಗೆ ಇಳಿಯಿತು. 11ನೇ ಶತಮಾನದಿಂದ ಪರಕೀಯರ ದಾಳಿಗೆ ತುತ್ತಾಗಿದ್ದ ಭಾರತದಲ್ಲಿ ದಕ್ಷಿಣ ಭಾರತದಲ್ಲಿ ಹಿಂದೂ ಸಾಮ್ರಾಜ್ಯ ಸುಮಾರು 200 ವರ್ಷಗಳ ಕಾಲ ಹಿಂದೂ ಧರ್ಮ ಸಂಸ್ಕೃತಿಯನ್ನು ಕಾಪಾಡಿತು. ಭಾರತೀಯ ಸಂಸ್ಕೃತಿಗೆ ವಿಜಯನಗರ ಮಾಡಿದ ಅಪಾರವಾದ ಉಪಕಾರವನ್ನು ರಾಕ್ಷಸತಂಗಡಿಯಿಂದ ಉಂಟಾದ ಅಪರಿಮಿತವಾದ ಹಾನಿಯನ್ನು ಎಂದೂ ಅಲಕ್ಷಿಸಲಾಗದು. ವಿಜಯನಗರ ಸೋಲದೆ ಸುಲ್ತಾನರು ಸೋತಿದ್ದರೆ ಅದರ ಗತಿಯೇ ಬೇರೆ ಆಗುತ್ತಿತ್ತು ಎನ್ನುವಂತಹ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ಯುದ್ಧದಲ್ಲಿ ಸೋಲಲು ರಾಮರಾಯನಲ್ಲಿನ ದೂರದೃಷ್ಟಿಯ ಅಭಾವವು. ಅಹಂಕಾರ ಉದ್ಧಟತನ, ವಿಜಯನಗರದವರು ಶತ್ರುರಾಜ್ಯಗಳಲ್ಲಿ ಮಾಡಿದ ಅತಿಕ್ರಮಗಳು, ಇವುಗಳು ಮುಖ್ಯವಾದವೆಂದು ಹೇಳಿದ್ದಾರೆ. ರಾಮರಾಯನು ತಾನು ಯುದ್ಧದಲ್ಲಿ ಭಾಗಿಯಾಗದೆ ಹಿಂದಿನಿಂದ ಸಹಕರಿಸಿದ್ದರೆ, ವಿಜಯ ಇವರದಾಗುತ್ತಿತ್ತು. ಶತ್ರುಗಳ ಕೈಗೆ ಸಿಕ್ಕನಂತರ ಯುದ್ಧದ ಗತಿಯ ಬದಲಾಯಿತು. ಮುಸ್ಲಿಂ ಸೇನಾನಾಯಕರ ಮೋಸ ರಾಮರಾಯನಲ್ಲಿಯ ಕೆಲವು ದೋಷಗಳು ರಾಜನೀತಿಯ ಮೈಗುಣವು ಬುದ್ಧಿಪೂರ್ವಕವಾದ ಪ್ರಮಾದಗಳೂ ದೈವ ಎಲ್ಲವೂ ಒಂದುಗೂಡಿ ವಿಜಯನಗರದ ಪರಾಭವದ ಮಾರ್ಗವನ್ನು ಸುಲಭ ಮಾಡಿದವು. ಸದಾಶಿವರಾಯನೊಂದಿಗೆ ಅನುಸರಿಸಿದ ನೀತಿಯು ಕೂಡ ಸರಿ ಇರಲಿಲ್ಲ. ತುಳು ಮನೆತನವು 70 ವರ್ಷಗಳ ಕಾಲ ರಾಜ್ಯವಾಳಿತು. ಈ ಮನೆತನವು ರಾಜಕೀಯ ಸಾಮಾಜಿಕ ಧಾರ್ಮಿಕ ಮುಂತಾದ ಅನೇಕ ಮಾರ್ಗಗಳಲ್ಲಿ ಸಾಮ್ರಾಜ್ಯದ ಪೂರ್ವದ ಮರ್ಯಾದೆ ಪರಂಪರೆಗಳನ್ನು ಯೋಗ್ಯವಾದ ಉಪಾಯಗಳಿಂದ ರಕ್ಷಿಸಿ ಅಭಿವೃದ್ಧಿಗೊಳಿಸಿತು.

ಪ್ರಸ್ತುತ ಪ್ರಬಂಧದಲ್ಲಿ ತುಳುಮನೆತನದ ಆಳ್ವಿಕೆಗೆ ಸಂಬಂಧಿಸಿದ ಘಟನೆಗಳನ್ನು ಅಭಿವೃದ್ಧಿಯನ್ನು ನರಸನಾಯಕ, ವೀರನರಸಿಂಹ, ಕೃಷ್ಣ ದೇವರಾಯ, ಅಚ್ಯುತದೇವರಾಯ, ಸದಾಶಿವರಾಯ ಮತ್ತು ರಾಮರಾಯರನ್ನು ಕುರಿತು ವಿವರಿಸಲಾಗಿದೆ ಮುಖ್ಯವಾಗಿ ಪಿ.ಬಿ. ದೇಸಾಯಿಯವರು ಕಾವ್ಯಾತ್ಮಕ ಶೈಲಿಗೆ ಪ್ರಾಶಸ್ತ್ಯವನ್ನು ನೀಡಿದ್ದಾರೆ.

ಗ್ರಂಥಸೂಚಿ

1. ಡಾ॥ ಅಂಬಳಿಕೆ ಹಿರಿಯಣ್ಣ, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು 2009 (ಸುವರ್ಣ ಕರ್ನಾಟಕದ ವರ್ಷದ ನೆನಹು).

2. ಪಿ.ಬಿ. ದೇಸಾಯಿ, ವಿಜಯನಗರ ಸಾಮ್ರಾಜ್ಯ, ವಿಜಯನಗರ ಸ್ಮಾರಕೋತ್ಸವ ಮಂಡಳದ ಸ್ಮರಣ ಸಂಚಿಕೆ, ಧಾರವಾಡ-1936.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿಯಲ್ಲಿ ಸ್ಮಾರಕಗಳ ಪುನರುತ್ಥಾನದ ಯೋಜನೆಯಡಿಯಲ್ಲಿ ಇಲಾಖೆಯು ಹಂಪಿಯಲ್ಲಿ ಕೈಗೊಂಡ ನಿವೇಶನಾನ್ವೇಷಣೆ, ಉತ್ಖನನ, ಶಾಸನಗಳ ಸರ್ವೇಕ್ಷಣೆ, ಸ್ಮಾರಕಗಳ ಸಂರಕ್ಷಣೆ ಮುಂತಾದ ಕ್ಷೇತ್ರಗಳಲ್ಲಿ ಕೈಗೊಂಡ ಯೋಜನೆಗಳಲ್ಲಿ ಸಾಧಿಸಿದ ಪ್ರಗತಿಯ ವರದಿಯನ್ನು ಆಂಗ್ಲಭಾಷೆಯಲ್ಲಿ "ಪ್ರೊಗ್ರೆಸ್ ಆಫ್ ವಿಜಯನಗರ ರೀಸರ್ಚ್" ಮಾಲಿಕೆಯಲ್ಲಿ ಪ್ರಕಟಿಸಲು ಇಲಾಖೆಯು ಪ್ರಾರಂಭಿಸಿತು. ಈ ಸಂಶೋಧನಾ ವರದಿಯು ಇಲಾಖೆಯ ಸಂಶೋಧನೆಗಳಿಗೆ ಸೀಮಿತವಾಗಿದ್ದು ರಾಜ್ಯದ ಹೊರಗೆ ಇತರ ವಿದ್ವಾಂಸರಿಂದ ನಡೆಯುತ್ತಿದ್ದ ಸಂಶೋಧನೆಗೆ ಮುಕ್ತವಾಗಿರಲಿಲ್ಲ.

ಈ ಲೋಪವನ್ನು ನಿವಾರಿಸಿ, ರಾಜ್ಯದ ಆಡಳಿತ ಭಾಷೆಯಲ್ಲಿ ವಿಜಯನಗರ ಸಾಮ್ರಾಜ್ಯದ ಸಂಶೋಧನೆಗಳ ಬಗೆಗೆ ವಿಚಾರ ಸಂಕಿರಣಗಳನ್ನು ಆಯೋಜಿಸಿ ಅವುಗಳ ಫಲಿತಗಳನ್ನು ಪ್ರಕಟಿಸುವ ನಿರ್ಧಾರವನ್ನು 1995ರಲ್ಲಿ ಇಲಾಖೆ ಕೈಗೊಂಡಿತು. ಈ ನಿರ್ಧಾರ "ವಿಜಯನಗರ ಅಧ್ಯಯನ" ಮಾಲಿಕೆ ಪ್ರಾರಂಭವಾಗಲು ಕಾರಣವಾಯಿತು. ಈ ಮಾಲಿಕೆ ಇಂದು ಹದಿನೇಳು ವಸಂತಗಳನ್ನು ತುಂಬಿ ಒಂದು ಸಶಕ್ತ ಅಧ್ಯಯನ ಮಾಲಿಕೆಯಾಗಿ ಬೆಳೆದು ಆಸಕ್ತರ, ಸಂಶೋಧಕರ, ಕಣ್ಮಣಿಯಾಗಿದೆ.

ಇಂತಹ ಸಾರ್ಥಕ ಮಾಲಿಕೆಯ 17ನೇ ಸಂಪುಟ ವೈವಿಧ್ಯಮಯವಾದ ಸಂಶೋಧನಾ ಸಾಧ್ಯತೆಯನ್ನು ತೆರೆದಿಡುತ್ತಾ ಮುಂದುವರೆಸಿಕೊಂಡು ಬಂದಿರುವುದು ಸಂಶೋಧಕರ ಆಸಕ್ತಿ, ಸರ್ಕಾರದ ಪ್ರೋತ್ಸಾಹ ಹಾಗೂ ಇಲಾಖೆಯ ಪ್ರಗತಿಯನ್ನು ಪ್ರತಿನಿಧಿಸುತ್ತದೆ. ಇದು ನಮ್ಮನಿಮ್ಮೆಲ್ಲರ ಹೆಮ್ಮೆಯ ಮಾಲಿಕೆಯಾಗಲಿ ಎಂದು ಆಶಿಸಲಾಗಿದೆ.



ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು